ಅಮೋಘಸಿದ್ಧ ಪರಂಪರೆ : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧಕ

ಚನ್ನಪ್ಪ ಕಟ್ಟಿ

ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ. ಸಾಲಿಮಠ

ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

ಮಾರ್ಗದರ್ಶಕರು

ಡಾ. ಎಂ.ಎಂ.ಪಡಶೆಟ್ಟಿ

ನಿವೃತ್ತ ಪ್ರಾಧ್ಯಾಪಕರು

ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ. ಸಾಲಿಮಠ

ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಾಪುರ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೦

ಅಮೋಘಸಿದ್ಧ ಪರಂಪರೆ : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ ಮಹಾಪ್ರಬಂಧ)

ಸಂಶೋಧಕ

ಚನ್ನಪ್ಪ ಕಟ್ಟಿ

ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ. ಸಾಲಿಮಠ
ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

ಮಾರ್ಗದರ್ಶಕರು

ಡಾ. ಎಂ.ಎಂ.ಪಡಶೆಟ್ಟಿ

ನಿವೃತ್ತ ಪ್ರಾಧ್ಯಾಪಕರು
ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ. ಸಾಲಿಮಠ
ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ವಿಜಾಪುರ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೦

ದೃಢೀಕರಣ ಪತ್ರ

ಶ್ರೀ ಚನ್ನಪ್ಪ ಕಟ್ಟಿ ಇವರು ಅಮೋಘಸಿದ್ಧ ಪರಂಪರೆ : ಒಂದು ಅಧ್ಯಯನ ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾ ನಿಕಾಯ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಎಂ.ಎಂ. ಪಡಶೆಟ್ಟಿ

ಸ್ಥಳ : ವಿದ್ಯಾರಣ್ಯ

ದಿನಾಂಕ : ೧೬ ಆಗಸ್ಟ್ ೨೦೧೦

(ಡಾ. ಎಂ.ಎಂ.ಪಡಶೆಟ್ಟಿ)
ನಿವೃತ್ತ ಪ್ರಾಧ್ಯಾಪಕರು
ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ. ಸಾಲಿಮಠ
ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

ಪ್ರಮಾಣ ಪತ್ರ

ಅಮೋಘಸಿದ್ಧ ಪರಂಪರೆ : ಒಂದು ಅಧ್ಯಯನ ಎಂಬ ಶೀರ್ಷಿಕೆಯ ಪ್ರೌಢ ಪ್ರಬಂಧವನ್ನು ಡಾ. ಎಂ.ಎಂ.ಪಡಶೆಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಭಾಷಾ ನಿಕಾಯ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ಆಗಸ್ಟ್ ೨೦೧೦

(ಚನ್ನಪ್ಪ ಕಟ್ಟಿ)
ಜೆ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ. ಸಾಲಿಮಠ
ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ

ಅರಿಕೆ

'ಅಮೋಘಸಿದ್ಧ ಪರಂಪರೆ : ಒಂದು ಅಧ್ಯಯನ' ಸಂಶೋಧನಾ ಮಹಾಪ್ರಬಂಧವನ್ನು ವಿಜಾಪುರದ ಬಿ.ಎಲ್.ಡಿ.ಈ. ಸಂಸ್ಥೆಯ ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಮೂಲಕ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸುತ್ತಿರುವ ಈ ಸಂದರ್ಭದಲ್ಲಿ ನನ್ನ ಅಧ್ಯಯನ ಸರಿಯಾದ ದಾರಿಯಲ್ಲಿ ನಡೆಯುವಂತೆ ಹಾಗೂ ಸುರಕ್ಷಿತವಾಗಿ ಚಲಿಸುವಂತೆ ಮಾಡಿದ ಹಲವಾರು ಮಹನೀಯರನ್ನು ನೆನೆಯುವುದು ನನ್ನ ಆದ್ಯ ಕರ್ತವ್ಯವಾಗಿದೆ.

ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಳ್ಳುವುದಕ್ಕೆ ಕಾರಣವಾದ ಒಂದೆರಡು ಅಂಶಗಳನ್ನು ಪ್ರಾರಂಭದಲ್ಲಿ ಪ್ರಸ್ತಾಪಿಸಬೇಕು. ಸೃಜನಶೀಲ ಬರವಣಿಗೆಯಲ್ಲಿ ತೊಡಗಿಕೊಂಡು ಆಗಷ್ಟು ಈಗಷ್ಟು ವಿಮರ್ಶಾ ಬರವಣಿಗೆಯಲ್ಲಿ ತೊಡಗಿಕೊಂಡಿದ್ದವನು ನಾನು. ೧೯೯೭ನೆಯ ಸಾಲಿನಲ್ಲಿ ಸಿಂದಗಿಯಲ್ಲಿ ಕನಕ ಜಯಂತ್ಯುತ್ಸವವನ್ನು ಹಮ್ಮಿಕೊಂಡ ಸಂದರ್ಭದಲ್ಲಿ ಸ್ಮರಣ ಗ್ರಂಥವೊಂದನ್ನು ಸಂಪಾದಿಸಿ ಕೊಡಲು ಜಯಂತ್ಯುತ್ಸವ ಸಮಿತಿಯವರು ನನಗೆ ತಿಳಿಸಿದರು. ಕುರುಬ ಸಮುದಾಯದ ಸಾಂಸ್ಕೃತಿಕ ಮುಖಗಳನ್ನು ಪರಿಚಯಿಸುವ ಹಲವಾರು ಸಂಶೋಧನಾ ಲೇಖನಗಳನ್ನು ನಾಡಿನ ವಿದ್ವಾಂಸರುಗಳಿಂದ ಬರೆಯಿಸಿ 'ಕುರುಬ ಜನಪದ'ವೆಂಬ ಗ್ರಂಥವನ್ನು ಸಂಪಾದಿಸಿಕೊಟ್ಟೆ. ಆ ಸಂಪಾದನೆಯ ಕೆಲಸದಲ್ಲಿ ನನ್ನೊಂದಿಗೆ ಸಹಭಾಗಿಯಾದವರು ಪ್ರೊ. ರಾ.ಶಿ. ವಾಡೇದವರು. ಪ್ರಸ್ತುತ ಗ್ರಂಥದಲ್ಲಿ ಜೇವರಗಿ ತಾಲೂಕಿನ ಕಲ್ಲೂರ ಹಾಗೂ ಬಸವನಬಾಗೇವಾಡಿ ತಾಲೂಕಿನ ಚಬನೂರಿನ ಒಡೆಯರ ಹೇಳಿಕೆಗಳನ್ನು ಗಮನದಲ್ಲಿಟ್ಟುಕೊಂಡು ಬರೆದ 'ಒಡೆಯರ ಹೇಳಿಕೆಗಳು' ಎಂಬ ಲೇಖನವಿತ್ತು. ಡಾ. ಎಂ.ಎಂ.ಪಡಶೆಟ್ಟಿ ಅವರು ಬರೆದ ಆ ಲೇಖನದಲ್ಲಿ ಕುರುಬರ ಗುರುಗಳಾದ ಒಡೆಯರುಗಳ ರೈತಾಪಿ ಜನರ ಕಾಳಜಿ ನನ್ನನ್ನು ವಿಶೇಷವಾಗಿ ಸೆಳೆದಿತ್ತು. ೨೦೦೨ನೆಯ ಸಾಲಿನಲ್ಲಿ ವಿಜಾಪುರದ ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ ಬೆಳ್ಳಿಹಬ್ಬ ಆಚರಿಸುವ ಸಂಭ್ರಮದಲ್ಲಿತ್ತು. ಆ ಸಂದರ್ಭದಲ್ಲಿ ನಾಡಿನ ಜಾನಪದ ವಿದ್ವಾಂಸರಾದ ಡಾ. ಶ್ರೀರಾಮ ಇಟ್ಟಣ್ಣವರ ಹಾಗೂ ಪ್ರೊ. ವ್ಹಿ.ಡಿ.ವಸ್ತ್ರದ ಅವರೊಂದಿಗೆ ಸೇರಿಕೊಂಡು 'ಹಾಲಕೆನೆ' ಎನ್ನುವ ಗ್ರಂಥವನ್ನು ಸಂಪಾದಿಸಿಕೊಡಲಾಯಿತು. ಪ್ರಸ್ತುತ ಜನಾಂಗೀಯ ಅಧ್ಯಯನ ಗ್ರಂಥದಲ್ಲಿ ಅಮ್ಮೋಗಿ ಒಡೆಯರ ಮೂಲಪುರುಷನ ಕುರಿತು 'ಸಿದ್ಧ ಪರಂಪರೆಯಲ್ಲಿ ಅಮೋಘಸಿದ್ಧ' ಎನ್ನುವ ಲೇಖನವನ್ನು ಡಾ. ಎಂ.ಎಂ.ಪಡಶೆಟ್ಟಿ ಅವರು ಬರೆದಿದ್ದರು. ೨೦೦೫ನೆಯ ಸಾಲಿನಲ್ಲಿ

ಶ್ರೀ ಸಿದ್ಧರ ಅಧ್ಯಯನ ಪೀಠ ಹಾಗೂ ಒಡೆಯರ ಸಂಘಗಳ ಸಂಯುಕ್ತ ಆಶ್ರಯದಲ್ಲಿ 'ಕುರುಬರ ಗುರು ಒಡೆಯರು' ಎನ್ನುವ ವಿಷಯದ ಮೇಲೆ ಶ್ರೀ ಚಂದ್ರಕಾಂತ ಬಿಜ್ಜರಗಿ ಹಾಗೂ ಗುರುಸ್ವಾಮಿ ಒಡೆಯರ ಅವರ ಸಹಕಾರದೊಂದಿಗೆ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಆ ವಿಚಾರ ಸಂಕಿರಣದಲ್ಲಿ 'ಕುರುಬರ ಗುರು ಒಡೆಯರ ಶಾಖೆಗಳು' ಎನ್ನುವ ಪ್ರಬಂಧವನ್ನು ಮಂಡಿಸಿದೆ. ಇದೇ ಸಂದರ್ಭದಲ್ಲಿ ಡಾ. ಬಿ.ಜಿ.ಬಿರಾದಾರ ಅವರು 'ಕುರುಬರ ಗುರು ಒಡೆಯರು : ಸಾಂಸ್ಕೃತಿಕ ಅಧ್ಯಯನ' ಎನ್ನುವ ಮಹಾ ಪ್ರಬಂಧದ ರಚನೆಯಲ್ಲಿ ತೊಡಗಿದ್ದರು.

ಇಂಥದೊಂದು ಸಂದರ್ಭದಲ್ಲಿಯೇ ಒಡೆಯರ ಮೂರು ಶಾಖೆಗಳಲ್ಲಿ ಒಂದಾದ ಅಮ್ಮೋಗಿ ಪಂಗಡದವರ ಕುರಿತು ಸ್ವತಂತ್ರ ಅಧ್ಯಯನ ನಡೆಸಬಹುದೆಂದು ಸೂಚಿಸಿ ಹೊಸ ಗುಂಗನ್ನು ತಲೆಯಲ್ಲಿ ಹೊಗಿಸಿದವರು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಹಾಲುಮತ ಅಧ್ಯಯನ ಪೀಠದ ಸಂಚಾಲಕರಾದ ಡಾ. ಎಫ್.ಟಿ. ಹಳ್ಳಿಕೇರಿ ಅವರು. ಅದೇ ಕಾಲಕ್ಕೆ ಕನ್ನಡ ವಿಶ್ವವಿದ್ಯಾಲಯ ಹಂಪಿ ಅವರು ವಿಜಾಪುರದ ಬಿ.ಎಲ್.ಡಿ.ಈ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ನೀಡಿ ಸಂಶೋಧನಾ ಚಟುವಟಿಕೆ ನಡೆಯಿಸಲು ಅನುವು ಮಾಡಿಕೊಟ್ಟರು. ಅಮೋಘಸಿದ್ಧನ ಕುರಿತು ಸಂಶೋಧನೆ ನಡೆಯಿಸುವ ಉದ್ದೇಶದಿಂದ ಡಾ. ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದಲ್ಲಿ ನೋಂದಾಯಿಸಿಕೊಂಡೆ. ಈ ಸಂಶೋಧನಾ ಚಟುವಟಿಕೆಗೆ ನನಗೆ ಮಾರ್ಗದರ್ಶಕರಾಗಿ ದೊರೆತವರು ಈಗಾಗಲೇ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ ಡಾ. ಎಂ.ಎಂ. ಪಡಶೆಟ್ಟಿ ಅವರು. ನನ್ನ ಸಂಶೋಧನ ಬರವಣಿಗೆಯ ಪ್ರತಿ ಹಂತದಲ್ಲೂ ಹೊಸ ಹೊಸ ಹೊಳಹುಗಳೊಂದಿಗೆ ಅವರು ನೀಡಿದ ಮಾರ್ಗದರ್ಶನಕ್ಕೆ ನಾನು ಚಿರಋಣಿ.

ಮೂರುವರೆ ವರ್ಷದ ನನ್ನ ಸಂಶೋಧನಾ ಕಾರ್ಯದಲ್ಲಿ ಹಲವಾರು ರೀತಿಯಿಂದ ಪ್ರೋತ್ಸಾಹ ನೀಡಿದ ಹಲವಾರು ಮಹನೀಯರಿದ್ದಾರೆ. ಪ್ರಥಮದಲ್ಲಿ ಡಾ. ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಅಧ್ಯಕ್ಷರಾದ ಸಹೃದಯ ಸಂಪನ್ನರಾದ ವಿದ್ವತ್ ಪ್ರೇಮಿಗಳಾದ ಶ್ರೀ ಶಿವಯೋಗಿ ಸಿ.ತಂಬಾಕೆ ಅಣ್ಣಾ ಅವರನ್ನು ನೆನೆಯಲೇಬೇಕು. ನಮ್ಮೆಲ್ಲರ ಸಂಶೋಧನಾ ಚಟುವಟಿಕೆಗೆ ಪೂರಕವಾದ ವಿಪುಲ ಪ್ರಮಾಣದ ಪರಾಮರ್ಶನ ಗ್ರಂಥಗಳಿಂದೊಡಗೂಡಿದ ಗ್ರಂಥ ಭಂಡಾರವನ್ನು ಅಲ್ಪಕಾಲದಲ್ಲಿಯೇ ನಿರ್ಮಿಸಿಕೊಟ್ಟರು. ಸಂಶೋಧನಾ ವಿದ್ಯಾರ್ಥಿಗಳಾದ ನಮಗೆಲ್ಲ ಹಿರಿಯ ಅಣ್ಣನ ಹಾಗೆ ನಡೆದುಕೊಂಡು ಬಂದ ಡಾ. ಎಂ.ಎಸ್.ಮದಭಾವಿ ಅವರ ಕಾಳಜಿ ಅವಿಸ್ಮರಣೀಯವಾದುದು. ಸಂಶೋಧನೆಯ ಹಾದಿಯಲ್ಲಿ ಮಿಂಚಿನಂತೆ ಪ್ರಶ್ನೆಗಳನ್ನು ಕೇಳಿ ಮಿಂಚಿನಂತೆ ಹಾದಿ ತೋರಿದವರು ನಾಡಿನ ಹಿರಿಯ ಸಂಶೋಧಕರಾದ ಡಾ. ಎಂ.ಎಂ.ಕಲಬುರ್ಗಿ ಗುರುಗಳು. ದಿಗಿಲು ಹುಟ್ಟಿಸುತ್ತಲೆ ಹೊಸ ಹಾದಿ ತೋರಿಸಿದ ಪೂಜ್ಯ ಗುರುಗಳನ್ನು ಈ ಸಂದರ್ಭದಲ್ಲಿ ಸ್ಮರಿಸುವೆ.

ನಾವೆಲ್ಲಾ ಪ್ರಗತಿ ವರದಿಯನ್ನು ಪ್ರಸ್ತುತಪಡಿಸುವಾಗ ಅಧ್ಯಾಪಕರ ಅಧ್ಯಾಪಕರೆಂದು ಹೆಸರು ಪಡೆದವರೂ ಅಧ್ಯಯನ ಮಂಡಳಿಯ ಅಧ್ಯಕ್ಷರೂ ಆದ ಪ್ರೊ. ಎ.ಎಸ್.ಹಿಪ್ಪರಗಿ ಗುರುಗಳು ನೀಡಿದ ಮಾರ್ಗದರ್ಶನದ

ಮೌಲ್ಯ ಮಾತಿನ ಅಳತೆಗೆ ಮೀರಿದುದು. ಅದೇ ಕಾಲಕ್ಕೆ ನಮ್ಮ ಸಂಶೋಧನಾ ಬರವಣಿಗೆಯ ನಿಲುವುಗಳ ಬಗೆಗೆ ತಮ್ಮ ಚಿಕಿತ್ಸಕ ನೋಟದ ನಿರ್ಣಯ ನೀಡುತ್ತ ಬಂದ ಅಧ್ಯಯನ ಮಂಡಳಿಯ ಸದಸ್ಯರುಗಳಾದ ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ, ಡಾ. ಎಫ್.ಟಿ.ಹಳ್ಳಿಕೇರಿ ಅವರನ್ನೆಲ್ಲ ಈ ಸಂದರ್ಭದಲ್ಲಿ ಹೃದಯತುಂಬಿ ನೆನೆಯುವೆ.

ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಸಂಶೋಧನೆ ಮಾಡಲು ಅನುವು ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ. ಬಿ.ಎ.ವಿವೇಕ ರೈ ಹಾಗೂ ಇಂದಿನ ಕುಲಪತಿಗಳಾದ ಡಾ. ಎ.ಮುರಿಗೆಪ್ಪ ಅವರಿಗೆ ಕೃತಜ್ಞನಾಗಿರುವೆ. ಅಲ್ಲದೇ ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶ ಬಡಿಗೇರ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುವೆ. ಅಧ್ಯಯನದಲ್ಲಿ ತೊಡಕುಗಳು ಬಂದಾಗಲೆಲ್ಲ ಬೇಸರವಿಲ್ಲದೇ ಪರಿಹಾರ ಸೂಚಿಸಿದ ಡಾ.ಶ್ರೀರಾಮ ಇಟ್ಟಣ್ಣವರ ಅವರಿಗೆ ಕೃತಜ್ಞತೆಗಳು.

ಕ್ಷೇತ್ರಕಾರ್ಯದ ಮೂಲಕವೇ ಅಮೋಘಸಿದ್ಧನ ಪರಂಪರೆಯನ್ನು ಗ್ರಹಿಸಲು ಸಾಧ್ಯವಿತ್ತು. ಈ ಅವಧಿಯಲ್ಲಿ ನಾನು ಹಲವಾರು ಸುತ್ತಿನ ಕ್ಷೇತ್ರಕಾರ್ಯ ಕೈಕೊಂಡಿದ್ದೇನೆ. ಆ ಸಂದರ್ಭದಲ್ಲೆಲ್ಲ ನನ್ನ ಜೊತೆಗೆ ಸುತ್ತಾಡಿದವರು ಪ್ರೊ. ಎಂ.ಎಸ್.ಹೈಯಾಳಕರ, ಡಾ. ಎಸ್.ಕೆ.ಕೊಪ್ಪಾ, ಪ್ರೊ. ಬಿ.ಬಿ.ಬಿರಾದಾರ, ಪ್ರೊ. ತಂಬದ, ಶ್ರೀ ಶಿವರಾಯ ಮಲ್ಲಪ್ಪ ದೊಡಮನಿ, ಶ್ರೀ ರಾಮನಗೌಡ ಪಾಟೀಲ, ಶ್ರೀ ವ್ಹಿ.ಟಿ.ಪೂಜಾರ, ಶ್ರೀ ಎಂ.ಕೆ.ಗಾವರವಾಡ, ಪ್ರೊ. ಆರ್.ಎಸ್.ಭೂಶೆಟ್ಟಿ, ಕುಮಾರ ಶಿವಾನಂದ ತಾರಾಪುರ ಹಾಗೂ ಕುಂಚನೂರಿನ ಅಮೋಗೆಪ್ಪ ಮಾದೇವಪ್ಪ ಒಡೆಯರ ಅವರು. ಅವರನ್ನೆಲ್ಲ ಈ ಸಂದರ್ಭದಲ್ಲಿ ನೆನೆಯುವೆ.

ಕ್ಷೇತ್ರಕಾರ್ಯಕ್ಕೆ ಹೋದಾಗ ತಮ್ಮ ಬಳಿಯಿದ್ದ ಮೌಲಿಕವಾದ ಮಾಹಿತಿಯನ್ನು ನೀಡಿದ ಅನೇಕ ವಕ್ತೃ ಮಹನೀಯರಿದ್ದಾರೆ. ಅವರು ನೀಡಿದ ಮಾಹಿತಿ ನನ್ನ ಅಧ್ಯಯನದ ಗತಿಯನ್ನು ನಿರ್ಣಯಿಸಿದೆ. ದಕ್ಷಿಣ ಸೋಲಾಪುರ ಜಿಲ್ಲೆಯ ಹತ್ತೂರಿನ ಶ್ರೀ ಅವಧೂ ಬನಸಿದ್ಧ ಹಿರಕೂರ ಅವರಲ್ಲಿ ಈ ಪರಂಪರೆಯ ಕುರಿತು ಅಪಾರವಾದ ಹಾಡಿನ ಕಣಜವೇ ಇತ್ತು. ಅವರನ್ನು ಪರಿಚಯಿಸಿದವರು ಹತ್ತೂರಿನ ಓಗೆಣ್ಣ ಮುತ್ಯಾನ ಗುಡಿಯ ಶ್ರೀ ಶೀಲಿಸಿದ್ಧ ಮಾರಾಯರು. ನನ್ನ ಅಧ್ಯಯನದ ಕೊನೆ ಗಳಿಗೆಯಲ್ಲಿ ಭೆಟ್ಟಿಯಾದವರು ದಕ್ಷಿಣ ಸೋಲಾಪುರ ಜಿಲ್ಲೆಯ ಅಚೇಗಾವಿಯ ಶೀಲಿಸಿದ್ದನ ಗುಡಿಯ ಪೂಜಾರಿಗಳಾದ ಶ್ರೀ ಶಾವರಸಿದ್ಧ ಜಳಗೌಡರ ಗುರುಗಳು.

ದೊರೆಯುವುದು ಅಸಾಧ್ಯವೆಂದೇ ಭಾವಿಸಿದ್ದ ಸಂದರ್ಭದಲ್ಲಿ ಈ ಪರಂಪರೆಯವರ ಕುರಿತ ಮೋಡಿಲಿಪಿಯ ದಾಖಲೆಯನ್ನು ಗುರುಮನೆ ಭೀವರಗಿಯ ಒಡೆಯರ ಮನೆಯಿಂದ ದೊರಕಿಸಿ ಕೊಟ್ಟವರು ದಕ್ಷಿಣ ಸೋಲಾಪುರ ಜಿಲ್ಲೆಯ ಮಂದ್ರೂಪ ಗ್ರಾಮದ ಶ್ರೀ ಸಿದಗೊಂಡ ಹಕ್ಕೆ ಹಾಗೂ ಜಮಖಂಡಿ ತಾಲೂಕಿನ ಕುಂಚನೂರಿನ ಮಾದಣ್ಣನ ಗುಡಿಯ ಅಮೋಗೆಪ್ಪ ಮಾದೇವಪ್ಪ ಒಡೆಯರ ಅವರು. ಅದೂ ಅಲ್ಲದೇ ನನ್ನ ಅಧ್ಯಯನಕ್ಕೆ

ಪೂರಕವಾದ ಮೋಡಿ ಹಾಗೂ ಪರ್ಶಿಯನ್ ಲಿಪಿಯಲ್ಲಿನ ಕಾಗದದ ಸುರಳಿಗಳನ್ನು ನೀಡಿದ ಪ್ರಜ್ಞಾವಂತರಾದ ಕಲಘುಟಗಿಯ ಶ್ರೀ ಸಿದ್ಧಯ್ಯ ಗುರುಮಠ ಅವರು. ಆ ಲಿಪಿಗಳನ್ನು ಅನುವಾದಿಸಿಕೊಟ್ಟ ಧಾರವಾಡದ ಪ್ರೊ. ಎಂ.ವಾಯ್.ಸಾವಂತ ಹಾಗೂ ವಿಜಾಪುರ ಮಹಿಳಾ ವಿಶ್ವವಿದ್ಯಾಲಯದ ಡಾ. ಎಸ್.ಎಸ್.ಫೀರ್ಜಾದೆ ಇವರನ್ನೆಲ್ಲಾ ಸ್ಮರಿಸುವೆ.

ನನ್ನ ಎಲ್ಲ ರೀತಿಯ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ನಮ್ಮ ಸಂಸ್ಥೆಯವರು ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ನಮ್ಮ 'ಶ್ರೀ ಪದ್ಮರಾಜ ವಿದ್ಯಾವರ್ಧಕ ಸಂಸ್ಥೆ'ಯ ಚೇರಮನ್ನರಾದ ಪರಮ ಪೂಜ್ಯ ಶ್ರೀ ಪ್ರಭು ಸಾರಂಗದೇವ ಶಿವಾಚಾರ್ಯರನ್ನು ಈ ಸಂದರ್ಭದಲ್ಲಿ ಭಕ್ತಿಪೂರ್ವಕವಾಗಿ ನೆನೆಯುತ್ತೇನೆ. ಅದೇ ತೆರನಾಗಿ ನಮ್ಮ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಜಿ.ಆರ್.ವಾರದ ಅಣ್ಣಾ ಅವರನ್ನು ಹಾಗೂ ಇನ್ನುಳಿದ ಆಡಳಿತ ಮಂಡಳಿಯ ಸದಸ್ಯರನ್ನು ನೆನೆಯದೆ ಇರಲಾರೆ. ನಾನು ಸೇವೆ ಸಲ್ಲಿಸುತ್ತಿರುವ ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವ್ಹಿ.ವ್ಹಿ.ಸಾಲಿಮಠ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರುಗಳಾದ ಡಾ. ಎಂ.ಎಸ್.ಚಾಂದಕವಟೆ ಹಾಗೂ ಪ್ರೊ. ಎಸ್.ಸಿ.ಅವಟಿ ಅವರು ನಾನು ಸಂಶೋಧನೆ ನಡೆಯಿಸುವಲ್ಲಿ ಸರ್ವ ರೀತಿಯ ಅನುಕೂಲಗಳನ್ನು ಒದಗಿಸಿದ್ದಾರೆ. ಸಹೋದ್ಯೋಗಿ ಮಿತ್ರರೂ ಕೂಡಾ ಸಹಕಾರ ನೀಡಿದ್ದಾರೆ. ಅವರನ್ನೆಲ್ಲ ಈ ಸಂದರ್ಭದಲ್ಲಿ ಸ್ಮರಿಸುವೆ. ವಕೀಲರಾದ ಶ್ರೀ ಯಮನಪ್ಪ ತಳಗೇರಿ ಅವರು ಸಿಂದಗಿ ತಾಲೂಕಿನ ಢವಳಾರ ಗ್ರಾಮದ ಶ್ರೀ ನಾಗಪ್ಪ ಪೂಜಾರಿ ಅವರ ಬಳಿಯಿದ್ದ ಹೇಳಿಕೆಗಳನ್ನು ಒದಗಿಸಿದ್ದಾರೆ. ಅವರ ಸಹಾಯಕ್ಕೆ ಕೃತಜ್ಞನಾಗಿರುವೆ. ಸಂಶೋಧನೆಯ ಕೆಲಸದಲ್ಲಿ ತೊಡಗಿದ ನನಗೆ ಸಂಸಾರದ ಯಾವುದೇ ಜಂಜಡಗಳು ಸುತ್ತಿಕೊಳ್ಳದ ಹಾಗೆ ನೋಡಿಕೊಂಡ ಮಡದಿ ಸರೋಜಾ, ಮಕ್ಕಳಾದ ಸಚಿನ್ ಮತ್ತು ಸುಮಾ ಅವರನ್ನು ಈ ಸಂದರ್ಭದಲ್ಲಿ ನೆನೆಯುವೆ. ಈ ಸಂಶೋಧನಾ ಪ್ರಬಂಧದ ಸುಂದರ ಅಕ್ಷರ ಜೋಡಣೆ ಮತ್ತು ವಿನ್ಯಾಸ ಮಾಡಿದ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಶ್ರೀಮತಿ ಸವಿತಾ ಯಾಜಿ ಮತ್ತು ಗಣೇಶ ಯಾಜಿ ಹಾಗೂ ಈ ಪ್ರಬಂಧವನ್ನು ಅಚ್ಚುಕಟ್ಟಾಗಿ ಬೈಂಡ್ ಮಾಡಿದ ಧಾರವಾಡದ ಮೃತ್ಯುಂಜಯ ಬೈಂಡರ್ಸ್‌ನ ಶ್ರೀ ಕುಂಬಾರ ಇವರನ್ನೆಲ್ಲ ತುಂಬು ಹೃದಯದಿಂದ ನೆನೆಯುವೆ.

ಚನ್ನಪ್ಪ ಕಟ್ಟಿ

ಸಿಂದಗಿ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಆಕರ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಆಕರ

೧.೧. ಪೀಠಿಕೆ

ಕರ್ನಾಟಕದ ಉತ್ತರ ಹಾಗೂ ಮಹಾರಾಷ್ಟ್ರದ ದಕ್ಷಿಣ ಗಡಿ ಪ್ರದೇಶವು ತನ್ನ ಭೌಗೋಳಿಕ ಲಕ್ಷಣ ಹಾಗೂ ವಾಯುಗುಣದ ಕಾರಣದಿಂದ ಕುರಿಪಾಲನೆ ಹಾಗೂ ಕಿಲಾರಿ ಪಾಲನೆ ಮಾಡುವ ಜನ ಸಮುದಾಯಕ್ಕೆ ಅತ್ಯಂತ ಪ್ರಶಸ್ತವಾದ ಭೂ ಪ್ರದೇಶವಾಗಿದೆ. ವಿಸ್ತಾರವಾದ ಬಯಲು ಪ್ರದೇಶದಲ್ಲಿ ಕಂಡು ಬರುವ ನೈಸರ್ಗಿಕ ಗೋಮಾಳದಂಥ ಭೂಮಿ, ನದಿತೊರೆಗಳು, ಹಿತಮಿತವಾದ ಮಳೆಗಾಲ -ಇವೆಲ್ಲ ಪಶುಪಾಲಕರಿಗೆ ಹೇಳಿ ಮಾಡಿಸಿದ ತಾಣಗಳು. ಇಂಥ ಭೂ ಪ್ರದೇಶದಲ್ಲಿ ಕುರುಬ ಪಶುಪಾಲಕರು ತಮ್ಮ ಬದುಕನ್ನು ಶತ ಶತಮಾನ ಗಳಿಂದ ರೂಪಿಸಿಕೊಂಡು ಬಂದಿದ್ದಾರೆ.

ವನಗಳಲ್ಲಿ, ಮರಗಳಲ್ಲಿ ವಾಸಿಸುತ್ತಿದ್ದ ಇಲ್ಲಿನ ಜನ ಮರವರು ಎನ್ನಿಸಿಕೊಂಡರು.[೧] ಪಶುಗಳನ್ನು-ದನಗಳನ್ನು ಪಾಲನೆ-ಪೋಷಣೆ ಮಾಡಿ ದನಗರರೆನ್ನಿಸಿಕೊಂಡರು.[೨] ದನಗಳೊಂದಿಗೆ ಹಟ್ಟಿಗಳಲ್ಲಿ ವಾಸಮಾಡಿದ ಕಾರಣದಿಂದ ಹಟ್ಟಿಕಾರರು ಅನ್ನಿಸಿಕೊಂಡರು.[೩] ತಮ್ಮ ಪಶುಸಂಪತ್ತಿನಿಂದ ಬಂದ ಹಾಲನ್ನು ಪೂಜಿಸುವ ಜನಾಂಗದವರಾಗಿ ಹಾಲುಮತದವರೆನ್ನಿಸಿಕೊಂಡರು.[೪]

ಹೀಗೆ ಬೆಳೆದು ಬಂದ ಜನಸಮುದಾಯ ಬೇರೆ ಬೇರೆ ಕಾಲಘಟ್ಟದಲ್ಲಿ ಬೇರೆ ಬೇರೆ ಪಂಥ ಸಿದ್ಧಾಂತ ಗಳೊಂದಿಗೆ ಮುಖಾಮುಖಿ ಮಾಡಿಕೊಂಡು ಬೇರೆ ಬೇರೆ ಚಹರೆಯನ್ನು ಪಡೆಯುತ್ತ ಬಂದಿತು.

ಕಾಪಾಲಿಕ ಪಂಥದಿಂದ ಈ ಭಾಗದ ಜನ ಸಮುದಾಯ ಪೂರ್ವದಿಂದಲೇ ಪ್ರಭಾವಿತಗೊಳ್ಳುತ್ತಾ ಬಂದಿದೆ. ಕಾಪಾಲಿಕರು ಈ ಜನಸಮುದಾಯ ವಾಸಿಸುವ ಭೂಪ್ರದೇಶದಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿರುವುದು ತಿಳಿದುಬರುತ್ತದೆ. ಈ ಭಾಗದಲ್ಲಿ ಕಾಪಾಲಿಕ ಯತಿಗಳಿಗೆ ಸಂಬಂಧಿಸಿದ ಎರಡು ತಾಮ್ರಶಾಸನಗಳು ದೊರೆಯುತ್ತವೆ ಎನ್ನುವುದನ್ನು ಗಮನಿಸಿದರೆ ಮೇಲಿನ ಮಾತಿಗೆ ಪುಷ್ಟಿ ದೊರೆಯುತ್ತದೆ. ಒಂದು ಶಾಸನವು ನಾಸಿಕ ಜಿಲ್ಲೆಯ ಇಗತಪುರಿ ಬಳಿಯಲ್ಲಿರುವ ನಿರ್ಪಣ ಗ್ರಾಮದ ನಿವಾಸಿಯವರಲ್ಲಿ ದೊರೆತಿದೆ. ಈ ತಾಮ್ರ ಶಾಸನವನ್ನು ಏಳನೆಯ ಶತಮಾನದ ಮಧ್ಯ ಭಾಗದಲ್ಲಿ ಬರೆಯಿಸಿದವನು ಇಮ್ಮಡಿ ಪುಲಿಕೇಶಿಯ ಸೋದರಳಿಯ ನಾಗವರ್ಧನನು.[೫]

ಈ ಶಾಸನದಲ್ಲಿ ಬಲೆಗ್ರಾಮ ಎಂಬ ಹಳ್ಳಿಯನ್ನು ಕಪಾಲೇಶ್ವರ ಗುಗ್ಗಳ ಪೂಜೆ ನೆರವೇರಿಸಲು ಅನುಕೂಲವಾಗುವಂತೆ ದತ್ತಿ ಬಿಟ್ಟ ವಿಷಯವಿದೆ.

“ನಿಮಗಿದು ತಿಳಿದಿರಲಿ, ಏನೆಂದರೆ.... ಬಾಲಮ್ಮ ಠಕ್ಕೂರರ ಕೋರಿಕೆಯ ಮೇರೆಗೆ ಗೋಪರಾಷ್ಟ್ರ ಜಿಲ್ಲೆಯಲ್ಲಿರುವ ಬಲೆಗ್ರಾಮವನ್ನು ....ದೇವಾಲಯದ ದೇವನಾದ ಕಪಾಲೇಶ್ವರನ ಗುಗ್ಗಳ ಪೂಜೆ ಮತ್ತು ... ಅಲ್ಲಿ (ದೇವಾಲಯದಲ್ಲಿ) ವಾಸಿಸುವ ಮಹಾನ್ ಯತಿಗಳಿಗೆಂದು (ಮಹಾವ್ರತಿನ್) ನಮ್ಮಿಂದ ನೀಡಲಾಗಿದೆ.”[೬]

ಇಲ್ಲಿ ಉಲ್ಲೇಖಿಸಲಾಗಿರುವ ಬಲೆಗ್ರಾಮವನ್ನುಇಂದಿನ ಬೆಲಗಮ್‌ತರಾಳ್ಹಾ ಗ್ರಾಮವೆಂದು ಫ್ಲೀಟ್ ಗುರುತಿಸುತ್ತಾರೆ. ಈ ಗ್ರಾಮವು ಇಗತಪುರಿಯಿಂದ ಹನ್ನೆರಡು ಮೈಲು ದೂರದಲ್ಲಿದೆ.[೭] ಎರಡನೆಯ ತಾಮ್ರ ಶಾಸನ ಪರಾಮರ ಅರಸನಾದ ಭೋಜ ಎನ್ನುವವನ ಮಾಂಡಲೀಕನು ೧೦೪೭ರಲ್ಲಿ ನೀಡಿದ ದತ್ತಿಯನ್ನು ಕುರಿತಾದುದಾಗಿದೆ. ಈ ಶಾಸನ ದೊರೆತುದು ಬಡೋದಾ ಜಿಲ್ಲೆಯ ತಿಲಕವಾಡ ಸಮೀಪದ ನರ್ಮದಾ ನದಿಯ ಪಾತ್ರದಲ್ಲಿ. ಮಣಾ ಹಾಗೂ ನರ್ಮದಾ ನದಿಗಳ ಸಂಗಮದಲ್ಲಿ ನಿರ್ಮಿಸಲಾದ ಮಣೇಶ್ವರ ದೇವರ ಪೂಜೆ ಮಾಡುವ ಕಾಪಾಲಿಕ ಮುನಿಗೆ ಬಿಟ್ಟ ದತ್ತಿ ಶಾಸನ ಇದಾಗಿದೆ.[೮]

ಒಂಬತ್ತು ಹಾಗೂ ಹತ್ತನೆಯ ಶತಮಾನದಲ್ಲಿ ಗೋರಖನಾಥ ಈ ಭಾಗದಲ್ಲಿ ತನ್ನ ಪಂಥದ ಮೂಲಕ ಇಲ್ಲಿನ ಕೆಳಸಮುದಾಯವನ್ನು ಪ್ರಭಾವಿಸಿದ್ದಾನೆ. ಇವನ ಜನ್ಮಸ್ಥಳ ಬಾದಾಮಿ ತಾಲೂಕು ಪಟ್ಟದಕಲ್ಲು (ಡಾ ಫ.ಗು.ಹಳಕಟ್ಟಿ ಅವರು ಹೇಳುವಂತೆ) ಗ್ರಾಮವೇ ಆಗಿರಲಿ[೯], ಗೋದಾವರಿ ತೀರದ ಚಂದ್ರಗಿರಿ (ಮ.ಸು. ಕೃಷ್ಣಮೂರ್ತಿ ಹೇಳುವಂತೆ) ಗ್ರಾಮವೇ ಆಗಿರಲಿ[೧೦] ಇವೆರಡೂ ಸ್ಥಳಗಳೂ ಈ ಅಧ್ಯಯನದ ಭೌಗೋಳಿಕ ವ್ಯಾಪ್ತಿಯಲ್ಲಿಯೇ ಬರುತ್ತವೆ. ಈ ಭೌಗೋಳಿಕ ವ್ಯಾಪ್ತಿಯಲ್ಲಿ ಬರುವ ಕೋಲಾಪುರ ಸಿದ್ಧರ ಪ್ರಮುಖ ಪೀಠವಾಗಿತ್ತು. ರೇವಣಸಿದ್ಧ ಹಾಗೂ ಗೋರಖನಾಥ ಭೆಟ್ಟಿಯಾದರೆಂಧು ಹೇಳುವ ಸಿದ್ಧಗ್ಗಿರಿ ಕೋಲಾಪುರದ ಸಮೀಪದಲ್ಲಿಯೇ ಇದೆ.

ರೇವಣಸಿದ್ಧನಂತೂ ಕುರುಬ ಸಮುದಾಯವನ್ನು ನೇರವಾಗಿಯೇ ಪ್ರಭಾವಿಸಿದ್ದಾನೆ. ಅವನು ಸಂಚರಿಸಿದನೆಂದು ಹೇಳಲಾಗುವ ಹಲವಾರು ಸ್ಥಳಗಳು ಈ ಭೌಗೋಳಿಕ ವ್ಯಾಪ್ತಿಯಲ್ಲಿಯೇ ಬರುತ್ತವೆ. ಬಸವಕಲ್ಯಾಣ, ಸೋಲಾಪುರ, ಮಂಗಳವೇಡ, ಪಂಢರಪುರ ತಾಲೂಕಿನ ಮಾಸನೂರ, ಇಂಡಿ ತಾಲೂಕಿನ ಹಾವಿನಾಳ ಇವೆಲ್ಲ ರೇವಣಸಿದ್ಧ ಸಂಚರಿಸಿದ ಈ ಭಾಗದ ಪ್ರಮುಖ ಸ್ಥಳಗಳು.

ಹನ್ನೆರಡನೆಯ ಶತಮಾನದ ಸಂದರ್ಭದಲ್ಲಂತೂ ಈ ಭಾಗದ ಕುರುಬ ಸಮುದಾಯ ವಿಶೇಷವಾದ ತಲ್ಲಣವನ್ನು ಅನುಭವಿಸಿದೆ. ಜಡಗೊಂಡ ಹಿಂದೂ ಸಾಮಾಜಿಕ ಸಂರಚನೆಯಲ್ಲಿ ಬಹುದೊಡ್ಡ ಸಂಚಲನವನ್ನುಂಟು ಮಾಡಿದ ಬಸವಾದಿ ಶರಣರು ಈ ಭಾಗದಲ್ಲಿ ವಿನೂತನ ಪ್ರಯೋಗ ನಡೆಯಿಸಿದ್ದರು.

ಈ ವಿನೂತನ ಪ್ರಯೋಗಕ್ಕೆ ಹಿಂದೂ ಸಮಾಜದ ಕೆಳ ಸಮುದಾಯಗಳು ವಿಶೇಷವಾಗಿ ಆಕರ್ಷಿತರಾಗಿದ್ದವು. ಇಂಥ ಸಂದರ್ಭದಲ್ಲಿ ರೇವಣಸಿದ್ಧ ಹಾಗೂ ಸೊನ್ನಲಿಗೆ ಸಿದ್ಧರಾಮ ಲಿಂಗಾಯತ ಹಾಗೂ ಕುರುಬರ ಮಧ್ಯದಲ್ಲಿ ಕೊಂಡಿಯಾಗಿ ಕೆಲಸ ಮಾಡಿದರು.

ಹದಿನೈದು-ಹದಿನಾರನೆಯ ಶತಮಾನದಷ್ಟೊತ್ತಿಗೆ ಲಿಂಗಾಯತವು ಜಡಗೊಂಡು ಸಾಂಸ್ಥೀಕರಣ ಗೊಳಿಸಿಕೊಳ್ಳುತ್ತ, ಮತೀಯವಾಗುತ್ತ ಹೊರಟ ಸಂದರ್ಭದಲ್ಲಿ ಅರಕೇರಿ ಸಮೀಪದ ಮುಮ್ಮೆಟ ಗುಡ್ಡದಲ್ಲಿ ಸಾಧನೆಯಲ್ಲಿ ತೊಡಗಿದ್ದ ಅಮೋಘಸಿದ್ಧ ತನ್ನ ಗುರು ಗೌರಿಸೋಮಲಿಂಗನ ಮಾರ್ಗದರ್ಶನದಲ್ಲಿ ಲಿಂಗಾಯತಕ್ಕೆ ಮುಖಾಮುಖಿ ಮಾಡಿಕೊಂಡು ಹೊಸ ಪಂಥವನ್ನು ಆವಿಷ್ಕಾರಗೊಳಿಸಿದ. ಇದೇ ಕಾಲಘಟ್ಟದಲ್ಲಿಯೇ ಅರಕೇರಿಗೆ ಸಮೀಪದ ವಿಜಾಪುರವು ಸೂಫೀಸಂತರ ಬಹುದೊಡ್ಡ ಕೇಂದ್ರವಾಗಿ ರೂಪುಗೊಳ್ಳುತ್ತಲಿತ್ತು. ವಿಜಾಪುರ ದೊರೆ ಎರಡನೆಯ ಇಬ್ರಾಹಿಂನ ಕಾಲದಲ್ಲಿ ಜಗತ್ತಿನ ಮೂಲೆ ಮೂಲೆಯಿಂದ ಸೂಫಿಸಂತರು ವಿಜಾಪುರದ ಕಡೆಗೆ ವಲಸೆ ಬಂದುದು ಚಾರಿತ್ರಿಕ ಸತ್ಯ. ಅಂಥ ಸೂಫಿಗಳೊಂದಿಗೆ ಅಮೋಘಸಿದ್ಧನ ಪರಿವಾರದವರು ಮುಖಾಮುಖಿ ಮಾಡಿಕೊಂಡು ವೈರ-ಸಖ್ಯ ಸಂಬಂಧವನ್ನು ಬೆಳೆಯಿಸಿ ಕೊಂಡಿದ್ದಾರೆ.

ಇಂಥೆಲ್ಲ ಚಾರಿತ್ರಿಕ ಹಾಗೂ ಸಾಮಾಜಿಕ ಒತ್ತಡದಲ್ಲಿ ರೂಪಗೊಂಡ ಅಮ್ಮೋಗಿ ಒಡೆಯರ ಪಂಗಡದ ದೀರ್ಘಪರಂಪರೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲು ಉದ್ದೇಶಿಸಲಾಗಿದೆ.

೧.೨ ಅಧ್ಯಯನದ ಉದ್ದೇಶ

ಹನ್ನೆರಡನೆಯ ಶತಮಾನದ ಶರಣ ಚಳವಳಿಯ ಕಾಲಘಟ್ಟದಲ್ಲಿ ರೇವಣಸಿದ್ಧ ಹಾಗೂ ಸಿದ್ಧರಾಮರ ನೇತೃತ್ವದಲ್ಲಿ ಕುರುಬ ಸಮುದಾಯಕ್ಕೆಂದೇ ಗುರುಪರಂಪರೆಯ ಒಡೆಯರ ಎರಡು ಪಂಗಡಗಳನ್ನು ರೂಪಿಸಿಕೊಳ್ಳಲಾಗಿದೆ. ರೇವಣಸಿದ್ಧನ ನೇತೃತ್ವದಲ್ಲಿ ರೂಪುಗೊಂಡ ಒಡೆಯರ ಶಾಖೆಗೆ ಶಾಂತ ಒಡೆಯರ ಪಂಗಡವೆಂದು ಕರೆಯುತ್ತಾರೆ. ಸಿದ್ಧರಾಮನ ನೇತೃತ್ವದಲ್ಲಿ ರೂಪುಗೊಂಡ ಒಡೆಯರ ಶಾಖೆಗೆ ಮಂಕ ಒಡೆಯರ ಪಂಗಡವೆನ್ನುತ್ತಾರೆ. ಅದೇ ತೆರನಾಗಿ ಹದಿನಾರನೆಯ ಶತಮಾನದಲ್ಲಿ ಸೋಮಲಿಂಗನೆನ್ನುವ ಗುರುವಿನ ಮಾರ್ಗದರ್ಶನದಲ್ಲಿ ಅಮೋಘಸಿದ್ಧನು ರೂಪಿಸಿದ ಒಡೆಯರ ಶಾಖೆಗೆ ಅಮ್ಮೋಗಿ ಒಡೆಯರ ಪಂಗಡವೆಂದು ಕರೆಯುತ್ತಾರೆ. ಈ ಒಡೆಯರ ಕುರಿತು ಸಣ್ಣಪುಟ್ಟ ಚರ್ಚೆಯನ್ನು ಹೊರತುಪಡಿಸಿದರೆ ವ್ಯಾಪಕವಾದ ಸಂಶೋಧನೆ ನಡೆದದ್ದು ಕಳೆದ ಐದಾರು ವರ್ಷಗಳಲ್ಲಿ ಮಾತ್ರ. ಈ ಸಂಶೋಧನೆಗೆ ಚಾಲನೆ ದೊರೆತದ್ದು ಡಾ. ಎಂ.ಎಂ. ಕಲಬುರ್ಗಿ ಹಾಗೂ ಡಾ. ವೈ.ಸಿ.ಭಾನುಮತಿ ಅವರು ಸಂಪಾದಿಸಿದ 'ಸಿದ್ಧಮಂಕ ಚರಿತೆ' ಹಾಗೂ ಡಾ. ಎಂ. ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ ಹಾಗೂ ಡಾ. ಎಫ್.ಟಿ.ಹಳ್ಳಿಕೇರಿ ಅವರು ಸಂಪಾದಿಸಿದ 'ತಗರಪವಾಡ' ಕೃತಿಗಳ ಪ್ರಕಟೆಯೊಂದಿಗೇನೆ. ಕುರುಬರ ಗುರುಗಳಾದ ಶಾಂತ ಒಡೆಯರು, ಮಂಕ ಒಡೆಯರು ಹಾಗೂ ಅಮ್ಮೋಗಿ ಒಡೆಯರನ್ನು ಗಮನದಲ್ಲಿಟ್ಟುಕೊಂಡು ಡಾ. ಬಿ.ಜಿ.ಬಿರಾದಾರ ಅವರು "ಕುರುಬರ

ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ" ಎಂಬ ಹೆಸರಿನಲ್ಲಿ ೨೦೦೭ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಂಶೋಧನ ಪ್ರಬಂಧ ಸಿದ್ಧಪಡಿಸಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿದ್ದಾರೆ.

ಒಡೆಯರ ಪಂಗಡಗಳನ್ನು ಇಡಿಯಾಗಿ ನೋಡಿದ ಡಾ. ಬಿ.ಜಿ.ಬಿರಾದಾರ ಅವರ ಮಹಾಪ್ರಬಂಧ ಈ ನಿಟ್ಟಿನಲ್ಲಿ ನಡೆದ ಮಹತ್ವದ ಸಂಶೋಧನಾ ಚಟುವಟಿಕೆಯೆಂದೇ ಭಾವಿಸಬೇಕು. ಇಡಿಯಾಗಿ ನೋಡುವುದೇ ಇದರ ಉದ್ದೇಶವಾಗಿರುವ ಕಾರಣದಿಂದ ಅದು ಸಹಜವಾಗಿಯೇ ವಿಸ್ತಾರದ ಕಡೆಗೆ ಗಮನಹರಿಸಬೇಕಾಗುತ್ತದೆ. ವಿಸ್ತಾರವನ್ನು ಗಮನಿಸುವ ಸಂದರ್ಭದಲ್ಲಿ ಅದರ ಆಳವನ್ನು ಅದೇ ಕಾಲಕ್ಕೆ ಗಮನಿಸಲು ಸಾಧ್ಯವಾಗದೇ ಹೋಗುತ್ತದೆ. ಹೀಗಾಗಿ ಒಡೆಯರ ಮೂರು ಪಂಗಡಗಳಲ್ಲಿ ಒಂದೊಂದನ್ನೇ ಆಯ್ದುಕೊಂಡು ಒಂದೊಂದರ ಕುರಿತು ಆಳವಾದ ಅಧ್ಯಯನ ಮಾಡುವುದನ್ನು ನಂತರದ ಸಂಶೋಧನಾಲೋಕ ಕೈಗೆತ್ತಿಕೊಳ್ಳಬೇಕಾಗುತ್ತದೆ.

ಹೀಗಾಗಿ ಈ ಮೂರು ಪಂಗಡದಗಳಲ್ಲಿ ಒಂದಾದ ಅಮ್ಮೋಗಿ ಒಡೆಯರ ಪಂಗಡದ ಕುರಿತು ಸಂಶೋಧನೆ ನಡೆಯಿಸಲು ನಿರ್ಧರಿಸಲಾಯಿತು. ಡಾ. ಬಿ.ಜಿ.ಬಿರಾದಾರ ಅವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಶಾಂತ ಒಡೆಯರ ಪಂಗಡ ಹಾಗೂ ಮಂಕ ಒಡೆಯರ ಪಂಗಡದ ಕುರಿತು ಒತ್ತು ಕೊಟ್ಟಷ್ಟು ಅಮ್ಮೋಗಿ ಒಡೆಯರ ಕುರಿತು ಒತ್ತು ಕೊಡದೇ ಹೋಗಿದ್ದಾರೆ. ಇದಕ್ಕೆ ಒಂದು ಕಾರಣವೂ ಇದೆ. ಶಾಂತ ಒಡೆಯರು ಹಾಗೂ ಮಂಕ ಒಡೆಯರ ಕುರಿತು ಲಿಖಿತ ಆಕರ ಸಾಮಗ್ರಿ ದೊರೆತಂತೆ ಅಮ್ಮೋಗಿ ಒಡೆಯರ ಕುರಿತು ವಿಪುಲ ಲಿಖಿತ ಆಕರ ಸಾಮಗ್ರಿ ದೊರೆಯಲಿಲ್ಲ. ನಿಗದಿತ ಕಾಲಾವಧಿಯಲ್ಲಿ ಮಹಾಪ್ರಬಂಧ ಸಿದ್ಧಗೊಳ್ಳಬೇಕಾದ ಕಾರಣದಿಂದ ಮೌಖಿಕ ಆಕರಗಳ ವಿಸ್ತಾರವಾದ ಶೋಧ ಮಾಡುತ್ತ ಹೋಗಲು ಸಾಧ್ಯವಾಗುವುದಿಲ್ಲ.

ಅಮ್ಮೋಗಿ ಒಡೆಯರ ಕುರಿತು ಲಭ್ಯವಿರುವ ಒಂದೇ ಒಂದು ಲಿಖಿತ ಆಕರ ಮದಗೊಂಡ ಮಾರಾಯರು ಬರೆದ 'ಸಿದ್ಧಸಿರಿ' ಎಂಬ ಗ್ರಂಥ. ಪ್ರಸ್ತುತ ಗ್ರಂಥವು ಭಕ್ತಿ ಭಾವುಕತೆಯ ಪಾರಮ್ಯದಲ್ಲಿ ನಿರ್ಮಾಣವಾದುದರಿಂದ ಇಡೀ ಆಕರವು ಪುರಾಣೀಕೃತಗೊಂಡಿವೆ. ಪುರಾಣದ ಹುತ್ತದಲ್ಲಿ ಚಾರಿತ್ರಿಕ ಅಮೋಘಸಿದ್ಧ ಮರೆಯಾಗಿ ಹೋಗಿದ್ದಾನೆ.

ಹೀಗಾಗಿ ಒಡೆಯರ ಪಂಗಡಗಳ ಒಟ್ಟು ಮೊತ್ತದಿಂದ ಅಮ್ಮೋಗಿ ಒಡೆಯ ಪಂಗಡವನ್ನು ಎತ್ತಿಕೊಂಡು ಸಂಶೋಧನೆಗೆ ಒಳಪಡಿಸುವುದು ಪಸ್ತುತ ಅಧ್ಯಯನದ ಪ್ರಮುಖ ಉದ್ದೇಶ. ಅದೇ ಕಾಲಕ್ಕೆ ಪುರಾಣಗಳ ಹುತ್ತದಲ್ಲಿ ಕಳೆದುಹೋಗಿರುವ ಅಮೋಘಸಿದ್ಧನನ್ನು ಚರಿತ್ರೆಯ ಬೆಳಕಿನಲ್ಲಿ ಕಾಣಿಸುವುದು ಈ ಅಧ್ಯಯನದ ಇನ್ನೊಂದು ಉದ್ದೇಶ. ಸುಮಾರು ಐದುನೂರು ವರ್ಷಗಳ ಚರಿತ್ರೆ ಹೊಂದಿರುವ ಈ ಪಂಗಡ ಕಾಲದ ಕುಲುಮೆಯಲ್ಲಿ ಹಾಯ್ದು ವರ್ತಮಾನದಲ್ಲಿ ಅದು ಎಂಥ ಸ್ಥಿತಿಯನ್ನು ತಲುಪಿದೆ ಎಂದು ಶೋಧಿಸಿಕೊಳ್ಳುವುದು ಈ ಅಧ್ಯಯನದ ಇನ್ನೂ ಒಂದು ಉದ್ದೇಶ. ಅದೂ ಅಲ್ಲದೆ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಅಮ್ಮೋಗಿ ಒಡೆಯರ ದೇಸಿ ಸಂಸ್ಕೃತಿಯ ಮಾದರಿ ಏನಾದರೂ ಪರಿಹಾರದ ದಾರಿ ತೋರಬಹುದೇ ಎಂದು ಶೋಧಿಸಿಕೊಳ್ಳುವ ಉದ್ದೇಶವೂ ಈ ಅಧ್ಯಯನದ ಹಿಂದೆ ಇದೆ.

[illegible]

[illegible]

೧.೩ ಅಧ್ಯಯನದ ವ್ಯಾಪ್ತಿ

ಭಾವುಳ್ಳ ಭಕ್ತಿಯ ಮನಸ್ಸು ತನ್ನ ಸಾಂಸ್ಕೃತಿಕ ನಾಯಕನನ್ನು 'ಯೋನಿಜ' ಅನ್ನುವುದನ್ನು ಒಪ್ಪಿಕೊಳ್ಳುವುದಿಲ್ಲ. ಅವನು ಪಾಪವಿಲ್ಲದ ಪಿಂಡ ಎಂದು ಭಾವಿಸುತ್ತದೆ. ತತ್ಪರಿಣಾಮವಾಗಿ ಕೈಲಾಸ ಅವನ ಉಗಮ ಸ್ಥಾನವಾಗುತ್ತದೆ. ಅಂತೆಯೇ ಅಮೋಘಸಿದ್ಧನನ್ನೂ ಕೈಲಾಸ ಸಂಜಾತವನ್ನಾಗಿಯೇ ಕಲ್ಪಿಸಿ ಕೊಳ್ಳಲಾಗಿದೆ. ಕೈಲಾಸದಲ್ಲಿ ಏಳು ಯುಗಗಳವರೆಗೆ ಬೇರೆ ಬೇರೆ ಹೆಸರಿನಲ್ಲಿ ಶಿವನನ್ನು ಆರಾಧಿಸುತ್ತಿದ್ದ ಎಂದು ಹೇಳುತ್ತದೆ. ತಾಯ ಗರ್ಭದೊಳಗಿನ ಶಿಶು ನವಮಾಸ ತುಂಬಿ ಹೊರಬರುವಂತೆ ಯಾವುದೇ ಪುಣ್ಯ ಪುರುಷ ಕೈಲಾಸ ತೊರೆದು ಭೂಲೋಕಕ್ಕೆ ಬರಲೇಬೇಕು. ಅಮೋಘಸಿದ್ಧ ಭೂಲೋಕಕ್ಕೆ ಬಂದದ್ದು ಅಂದರೆ ಜನಿಸಿದ್ದು ಹದಿನೈದನೆಯ ಶತಮಾನದ ಕೊನೆಯ ದಶಕದಲ್ಲಿ. ವಿಜಾಪುರದ ಸಮೀಪದಲ್ಲಿರುವ ಮುಮ್ಮೆಟಗುಡ್ಡವನ್ನು ತನ್ನ ಸಾಧನೆಯ ಕ್ಷೇತ್ರವನ್ನಾಗಿಸಿಕೊಂಡು ಸೋಮಲಿಂಗನೆನ್ನುವವನನ್ನು ತನ್ನ ಗುರುವಾಗಿ ಸ್ವೀಕರಿಸಿ, ಇಳಿವಯಸ್ಸಿನಲ್ಲಿ, ಪದ್ಮಾವತಿ ಎಂಬುವವಳನ್ನು ಮದುವೆಯಾಗಿ, ಮೂವರು ಪುಣ್ಯದ ಮಕ್ಕಳು (ಶಿಶು ಮಕ್ಕಳು) ಹಾಗೂ ನಾಲ್ವರು ವರವಿನ (ಸ್ವಂತ) ಮಕ್ಕಳು ಮತ್ತು ಒಬ್ಬಳು ಮಗಳನ್ನು ಪಡೆಯುತ್ತಾನೆ. ಹದಿನಾರನೆಯ ಶತಮಾನದಲ್ಲಿ ಕುರುಬ ಸಮುದಾಯಕ್ಕೆ ಗುರುಪರಂಪರೆಯನ್ನು ಅಂದಿನ ಜಡಗೊಂಡ ಲಿಂಗಾರುತದ ಮುಖಾಮುಖಿಯಲ್ಲಿ ಆವಿಷ್ಕಾರ ಗೊಳಿಸಿಕೊಳ್ಳುತ್ತಾನೆ. ಅವನ ಪಂಥ ಪುಣ್ಯದ ಮಕ್ಕಳು ಹಾಗೂ ವರವಿನ ಮಕ್ಕಳು ಎಂಬ ಎರಡು ಕವಲುಗಳಲ್ಲಿ ಕುಡಿಯೊಡೆದು ಬೆಳೆಯುತ್ತದೆ. ಕವಲುಗಳು ಮತ್ತೆ ಶಾಖೆ ಉಪಶಾಖೆಗಳಾಗಿ ಬೆಳೆಯುತ್ತವೆ. ನಾಲ್ವರು ವರವಿನ ಮಕ್ಕಳಿಗೆ (ಧರ್ಮರಿಗೆ) ಇಪ್ಪತ್ತೊಂದು ಜನ, ಈ ಇಪ್ಪತ್ತೊಂದು ಜನಕ್ಕೆ ನೂರಾ ಒಂದು ಜನ, ಅವರಿಗೆ ಸಾವಿರದ ಏಳುನೂರು ಸಿದ್ಧರು, ಅವರಿಗೆ ನವಕೋಟಿ ಶರಣರು -ಹೀಗೆ ಅವರ ವಂಶವೃಕ್ಷ ಬೆಳೆದಿದೆ ಎಂದು ಹೇಳಿಕೊಳ್ಳುತ್ತಾರೆ. ಕೋಳಿ ಕೂಗಿದ ಜಾಗೆಯಲ್ಲೆಲ್ಲಾ ನಮ್ಮ ಅಮ್ಮೋಗಿಸಿದ್ಧನ ಗುಡಿಗಳಿವೆ ಎಂದು ಹೇಳುತ್ತಾರೆ. ಗುರುವಿನ ಜಾಗೆಯಾದ ಮಕಣಾಪುರ(ವಿಜಾಪುರ ತಾಲೂಕ)ವನ್ನು ಶಿವನ ಸ್ಥಾನವೆಂದು ಭಾವಿಸಿ ಅರಕೇರಿಯನ್ನು ಅರಿವಿನ ಸ್ಥಾನವನ್ನಾಗಿಸಿಕೊಂಡು, ಭೀವರಗಿ(ಜತ್ತ ತಾಲೂಕು)ಯಲ್ಲಿ ಗುರುಮನೆಯನ್ನು ಸ್ಥಾಪಿಸಿ, ಕಲ್ಲೂರಿ(ಜೇವರಗಿ ತಾಲೂಕು)ನಲ್ಲಿ ಕಡೆಮಠವನ್ನಾಗಿಸಿಕೊಂಡೆವು ಎಂದು ಹೇಳುತ್ತಾರೆ. ಹೀಗೆ ಹಬ್ಬಿರುವ ಇವರ ವಂಶವ್ಯಾಪ್ತಿ ಹಾಗೂ ಇವರೆಲ್ಲ ಸಾಧಿಸಿಕೊಂಡ ಭೌಗೋಳಿಕ ವ್ಯಾಪ್ತಿಯನ್ನು ಗಮನದಲ್ಲಿರಿಸಿಕೊಂಡು ಅಧ್ಯಯನವನ್ನು ಕೈಕೊಳ್ಳಲಾಗಿದೆ. ಈವೊತ್ತಿನವರೆಗೂ ತಾವು ಅಮೋಘಸಿದ್ಧನ ವಂಶಸ್ಥರು ಎಂದು ಹೇಳಿಕೊಳ್ಳುವ ಲಕ್ಷಾಂತರ ಜನ ಈ ಭಾಗದಲ್ಲಿ ಇದ್ದಾರೆ. ಅವರನ್ನು ಕೂಡಾ ಈ ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಅಮೋಘಸಿದ್ಧನ ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ತಮ್ಮ ಸಿದ್ಧಾಟಿಕೆಯ ಮೂಲಕ ಜೀವಪರ ನಿಲುವಿನ ಮೂಲಕ ದೈವಗಳಾಗಿ ಪೂಜೆಗೊಳ್ಳುತ್ತಲಿದ್ದಾರೆ. ಅವರ ಕುರಿತಾದ ಜಾತ್ರೆ-ಉತ್ಸವಗಳು ನಡೆಯುತ್ತವೆ. ಹಲವಾರು ದಂಗುಬಡಿಸುವ ನಂಬಿಕೆ ಆಚರಣೆಗಳಿವೆ. ಅವನ್ನೆಲ್ಲಾ ಈ ಅಧ್ಯಯನದ ವ್ಯಾಪ್ತಿಯೊಳಗೆ

ತರಲಾಗಿದೆ. ಅಮೋಘಸಿದ್ಧನ ಪರಂಪರೆ ಲಿಖಿತರೂಪದಲ್ಲಿ ಅಲ್ಪ ಪ್ರಮಾಣದಲ್ಲಿದ್ದರೆ, ಮೌಖಿಕ ಪರಂಪರೆಯಲ್ಲಿ ಮೊಗೆದಷ್ಟು ಬರುವ ಅಕ್ಷಯ ಆಕರವಿದೆ. ಅವರು ತಮ್ಮ ದೈವದ ಕುರಿತಾಗಿ ಹಾಡುಗಳನ್ನು ರಚಿಸಿಕೊಂಡಿರುವಂತೆ ತಮ್ಮ ಭಕ್ತರ ಮೇಲೆ ಅಂತಃಕರಣ ಸೂಚಿಸುವ ಸಾಹಿತ್ಯವನ್ನೂ ರಚಿಸಿಕೊಂಡಿದ್ದಾರೆ. ಅಂಥ ಸಾಹಿತ್ಯದ ಚರ್ಚೆಯನ್ನು, ವಿಶ್ಲೇಷಣೆಯನ್ನು ಈ ಅಧ್ಯಯನದ ವ್ಯಾಪ್ತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

ವಿಜಾಪುರ ಜಿಲ್ಲೆಯಲ್ಲಿಯೇ ಮೂರೂ ಒಡೆಯರ ಪಂಗಡಗಳು ವಿಕಸನಗೊಂಡುದು ಜನಾಂಗೀಯ, ಸಮಾಜ ಶಾಸ್ತ್ರೀಯ ಅಧ್ಯಯನ ಮಾಡುವವರಿಗೆ ಕೂತೂಹಲದ ಸಂಗತಿಯಾಗಿದೆ. ಆ ಮೂರು ಪಂಗಡಗಳ ವಿಕಸನಕ್ಕೆ ಕಾರಣವಾದ ಸಾಂಸ್ಕೃತಿಕ ಒತ್ತಡಗಳನ್ನು ಗುರುತಿಸುವಿಕೆ ಹಾಗೂ ಮೂರು ಪಂಗಡಗಳ ತಾತ್ವಿಕ ಅನನ್ಯತೆಯ ಕುರಿತ ಚರ್ಚೆಯನ್ನು ಈ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅದೇ ತೆರನಾಗಿ ಅಮ್ಮೋಗಿ ಒಡೆಯರ ಪಂಗಡದವರು ವಿಭಿನ್ನ ಕಾಲಘಟ್ಟದಲ್ಲಿ ಲಿಂಗಾಯತದೊಂದಿಗೆ, ರಾವಳ ಜೋಗಿಗಳೊಂದಿಗೆ, ಸೂಫಿ ಸಂತರೊಂದಿಗೆ ನಡೆಯಿಸಿದ ಅನುಸಂಧಾನದ ಕುರಿತೂ ಇಲ್ಲಿ ಚರ್ಚಿಸಲಾಗಿದೆ.

೧.೪ ಅಧ್ಯಯನದ ಸ್ವರೂಪ

ಅಮೋಘಸಿದ್ಧ ಹಾಗೂ ಅವನ ಪರಿವಾರ ಇಂದಿಗೂ ಜೀವಂತ ಧಾರೆಯಾಗಿ ಹರಿದು ಬಂದಿರುವುದು ಭಾವುಳ್ಳ ಭಕ್ತರ ನಾಲಗೆಯ ಮೇಲೆ, ಅವರ ಅಖಂಡವಾದ ಸ್ಮೃತಿಯೊಳಗೆ. ಚರಿತ್ರೆಯ ಹಂಗು ಹರಿದು ಬದುಕಲು ಬಯಸುವ ಇಂಥ ಜನರಿಗೆ ಶಿಲಾಶಾಸನ, ತಾಮ್ರಶಾಸನ, ತಾಳೆಗರಿ, ಕಾಗದ ಸುರುಳಿಗಳೆಂದರೆ ಒಂದು ರೀತಿಯ ಅಲರ್ಜಿ. ಅವರದೇನಿದ್ದರೂ ಜನರ ನಾಲಗೆಯ ಮೇಲೆ ನಲಿದಾಡುವ ಲೀಲಾಮಯ ಬದುಕು. ಈ ಪರಂಪರೆಯ ಕುರಿತು ಯೋಚಿಸುವ ಯಾರಾದರೂ ಜನರ ಬಳಿಗೆ ಹೋಗದೆ ಏನನ್ನೂ ಮಾಡಲು ಸಾಧ್ಯವಿಲ್ಲ. ಹೀಗಾಗಿ ಅಧ್ಯಯನ ಮಾಡುವವನಿಗೆ ವ್ಯಾಪಕ ಕ್ಷೇತ್ರಕಾರ್ಯದ ಹೊರತು ಅನ್ಯ ಮಾರ್ಗವೇ ಇರಲಿಲ್ಲ. ಈ ಪರಂಪರೆಯ ಸಿದ್ಧರು ಭಕ್ತರನ್ನು ಒಲಿಸಿಕೊಳ್ಳಲು ನಾಡಸಾಧುನಿ ಮಾಡಲು, ನಾಡಗೌಡಿಕೆ ಗಳಿಸಿಕೊಳ್ಳಲು ಅರಿವಿನ ಮನೆ ಮುಮ್ಮಟಗುಡ್ಡ ಹಾಗೂ ಗುರುಮನೆ ಭೀವರಗಿಯನ್ನು ಕೇಂದ್ರದಲ್ಲಿಟ್ಟು ಕೊಂಡು ತುಂಬಾ ವ್ಯವಸ್ಥಿತವಾದ networkನ್ನು ರಚಿಸಿಕೊಂಡಿದ್ದರು. ಅವರು ಕೋಲಾಪುರ, ಸಾಂಗಲಿ, ಸೋಲಾಪುರ, ವಿಜಾಪುರ, ಬೆಳಗಾವ, ಬಾಗಲಕೋಟ, ಗುಲಬರ್ಗಾ, ಯಾದಗಿರಿ ಜಿಲ್ಲೆಗಳಲ್ಲಿ ಸಂಚರಿಸಿ ಅಲ್ಲೆಲ್ಲ ತಮ್ಮ ಸಿದ್ಧಾಟಿಕೆಯ ಮೂಲಕ ಜನಪರ ಕೆಲಸಗಳನ್ನು ಮಾಡುತ್ತ, ರೈತಾಪಿ ಜನರ ಬಗೆಗೆ ಕಾಳಜಿಯನ್ನು ಸೂಚಿಸುತ್ತ ದೈವಗಳಾಗಿ ರೂಪಗೊಂಡಿದ್ದಾರೆ. ಈ ಎಲ್ಲ ಜಿಲ್ಲೆಗಳಲ್ಲಿ ವ್ಯಾಪಕವಾದ ಕ್ಷೇತ್ರ ಕಾರ್ಯವನ್ನು ಮಾಡಿಯೇ ಈ ಅಧ್ಯಯನವನ್ನು ಮುನ್ನೆಡೆಸಬೇಕಾಗಿತ್ತು. ಹೀಗಾಗಿ ಅವರೆಲ್ಲರ ಚರಿತ್ರೆಯ ಮೇಲೆ ಬೆಳಕು ಚೆಲ್ಲುವಂಥ ಅವರ ಕುರಿತಾಗಿ ನಡೆಯುವ ಜಾತ್ರೆ ಉತ್ಸವಗಳ ಕುರಿತು ಮಾಹಿತಿ ದೊರೆಯುವಂಥ, ನಂಬಿಕೆ-ಆಚರಣೆಗಳ ಕುರಿತು ವಿವರಣೆ ದೊರೆಯುವಂಥ ಪ್ರಶ್ನಾವಳಿಯನ್ನು ರೂಪಿಸಿಕೊಂಡು ಸಾಂದರ್ಭಿಕವಾಗಿ ದೊರೆಯುವ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸಿಕೊಳ್ಳಲಾಯಿತು.

ಅಮೋಘಸಿದ್ಧನ ಕುರಿತು ಚಾರಿತ್ರಿಕವಾಗಿ ಯಾರಾದರೂ ಯೋಚಿಸಲು, ಬರೆಯಲು ಪ್ರಾರಂಭಿಸಿದರೆ ಅವರ ವಂಶ ನಾಶವಾಗುತ್ತದೆ ಎಂದು ಅಂಜಿಸುವ ಇವರಲ್ಲಿ, ಖಂಡಿತವಾಗಿ ಏನಾದರೂ ಲಿಖಿತ ಆಕಾರಗಳು ದೊರೆಯಬಹುದು ಎಂದು ಈ ಅಧ್ಯಯನಕಾರ ನಂಬಿದ್ದ. ನಂಬಿಕೆ ಹುಸಿಯಾಗಲಿಲ್ಲ. ಮೋಡಿ ಲಿಪಿಯಲ್ಲಿರುವ ಮಜಹರ ಪತ್ರ, ಕೌಲನಾಮ(ಗೇಣಿಪತ್ರ), ಮೌಖಿಕ ಹೇಳಿಕೆಯ ದಾಖಲೆ, ನಿವಡ ಪತ್ರ, ಥಳಪತ್ರ(a letter of grant given to the landed proprieter), ವಾಟನಿ ಪತ್ರಗಳು ದೊರೆತವು. ಅದೂ ಅಲ್ಲದೆ ಪರ್ಶಿಯನ್ ಭಾಷೆಯಲ್ಲಿರುವ ಕಾಗದವೊಂದು ದೊರೆಯಿತು.

ಅದೇ ಕಾಲಕ್ಕೆ ಮೂಲ ವಸ್ತುವಿಗೆ ಸಂಬಂಧಿಸಿದಂತೆ ಸಾಂದರ್ಭಿಕ ಆಕರಗಳ ಶೋಧವನ್ನು ಮಾಡಲಾಯಿತು. ತತ್ಸಂಬಂಧೀ ಪರಾಮರ್ಶನ ಗ್ರಂಥಗಳನ್ನು ಗುರುತಿಸಿಕೊಳ್ಳಲಾಯಿತು.

ಹೀಗೆ ಸಂಗ್ರಹವಾದ ವಸ್ತುವಿನ ಸಹಾಯದಿಂದ ಚರಿತ್ರೆಯ ಹಂಗು ಹರಿದುಹೋದವರನ್ನು ಚರಿತ್ರೆಯ ಚೌಕಟ್ಟಿನಲ್ಲಿ ಗುರುತಿಸಿಕೊಳ್ಳುವ ಕೆಲಸ ಮಾಡಲಾಯಿತು. mythಗಳನ್ನು ಕೆಲಸಕ್ಕೆ ಬಾರದ ಆಕರವೆಂದು ಭಾವಿಸದೇ ಅದೊಂದು metaphor (ರೂಪಕ) ಎಂದು ಭಾವಿಸಿ ವಿಶ್ಲೇಷಿಸುವ ಕೆಲಸ ನಡೆಯಿತು. ಚರಿತ್ರೆಯನ್ನು ಒಂದು ಸ್ತಬ್ಧ ಚಿತ್ರವೆಂದು ಭಾವಿಸದೇ ಅದರೊಳಗಿನ dyanamics(ಗತಿಶೀಲತೆ)ಯನ್ನು ಗುರುತಿಸಿ ಚರಿತ್ರೆಯಲ್ಲಿ ಪರಂಪರೆಯೊಂದು ಹಾಗೆ ತೋರುವುದಕ್ಕೆ ಕಾರಣಗಳೇನಿರಬಹುದು ಎಂಬುದನ್ನು ಶೋಧಿಸುವ ಕೆಲಸ ಇಲ್ಲಿ ನಡೆದಿದೆ. ನಾನು ಸಂದರ್ಶಿಸಿದ ವಕ್ತೃಗಳಲ್ಲಿ ಬಹುಪಾಲು ಜನ ಈ ಪರಂಪರೆಯ ವಾರಸುದಾರರಾದ ಒಡೆಯರು/ ಮಾರಾಯರು ಆಗಿದ್ದಾರೆ. ಅವರು ಈ ಅಧ್ಯಯನಕ್ಕೆ ಆಕರವನ್ನು ಒದಗಿಸುವರಷ್ಟೇ ಆಗಿರಲಿಲ್ಲ, ಅವರು ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ವಸ್ತು ಕೂಡಾ ಆಗಿದ್ದರು. ವಂಶದ ಮೂಲಬೇರಿನಿಂದ ವರ್ತಮಾನದ ಈ ಜನ ಎಷ್ಟು ನಿಕಟವಾಗಿದ್ದಾರೆ/ದೂರವಾಗಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳಲು ತೌಲನಿಕ ಚರ್ಚೆ ಮಾಡಲಾಗಿದೆ. ಐದು ಶತಮಾನಗಳುದ್ದಕ್ಕೂ ಅಖಂಡವಾಗಿ ಹರಿದು ಬರುವಲ್ಲಿ ಅವರು ಪಡೆದುಕೊಂಡಿದ್ದೆಷ್ಟು ಹಾಗೂ ಕಳೆದು ಕೊಂಡದ್ದೆಷ್ಟು ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ. ಅದೂ ಅಲ್ಲದೇ ಈ ಪರಂಪರೆಯ ಮುಂದಿನ ನಡೆ ಏನು ಇರಬೇಕು ಹಾಗೂ ಇರಬಹುದು ಎಂದು ಚರ್ಚಿಸಲಾಗಿದೆ.

೧.೫ ಅಧ್ಯಯನದ ಆಕರಗಳು

ಈಗಾಗಲೇ ಚರ್ಚಿಸಿರುವಂತೆ ಅಮೋಘಸಿದ್ಧ ಪರಂಪರೆಯ ಕುರಿತು ವಿಪುಲವಾದ ಮೌಖಿಕ ಸಾಮಗ್ರಿ ಹಾಗೂ ವಿರಳವಾದ ಲಿಖಿತ ಸಾಮಗ್ರಿ ದೊರೆಯುತ್ತದೆ. ಮೌಖಿಕವಾಗಿ ಇವರ ಕುರಿತು ಬೀಸುವ ಪದ, ಹಂತಿಪದ, ಡೊಳ್ಳಿನ ಹಾಡುಗಳು, ಕಥನ ಗೀತೆಗಳು ದೊರೆಯುತ್ತವೆ. ಅವುಗಳನ್ನು ಇಡೀ ಅಧ್ಯಯನದ ಉದ್ದಕ್ಕೂ ಸಾಂದರ್ಭಿಕವಾಗಿ ಬಳಸಿಕೊಳ್ಳುತ್ತ ಹೋಗಲಾಗಿದೆ. ಇವರ ಕುರಿತು ಲಿಖಿತ ಸಾಮಾಗ್ರಿ ಇಲ್ಲವೇ ಇಲ್ಲವೆನ್ನಬಹುದಾದರೂ ಲಿಖಿತರೂಪದ ಹಾಲುಮತ ಪುರಾಣ ಕಥನಗಳಲ್ಲಿ ಅಲ್ಪ ಪ್ರಮಾಣದ ಸಾಂದರ್ಭಿಕ ಉಲ್ಲೇಖಗಳಿವೆ. ಬಹುಪಾಲು ಹಾಲುಮತ ಕೇಂದ್ರಿತ ಪುರಾಣಗಳು ಬೀರಪ್ಪ, ಮಾಳಪ್ಪ, ರೇವಣಸಿದ್ಧ,

ಸೊನ್ನಲಿಗೆ ಸಿದ್ಧರಾಮ, ಶಾಂತಮುತ್ಯಾ ಮಂಕವಡೆಯರ ಕುರಿತು ವಿವರವಾಗಿ ಬರೆದುಕೊಳ್ಳುತ್ತವೆ. ಆದರೆ ಅಮೋಘಸಿದ್ಧನನ್ನು ಕುರಿತು ಬರೆಯುವಾಗ ಅಂಚಿಗೆ ತಳ್ಳಲ್ಪಟ್ಟ ಘಟನೆಗಳೆಂಬಂತೆ ವರ್ಣಿಸುತ್ತವೆ. ಹಾಲುಮತ ಕಾವ್ಯಗಳು epic of growth ಮಾದರಿಯವಾದುದರಿಂದ ತೀರ ಇತ್ತೀಚಿನವನಾದ ಅಮೋಘಸಿದ್ಧನನ್ನು ಮೂಲ ಪಠ್ಯದ textureದಲ್ಲಿ absorb ಮಾಡಿಕೊಳ್ಳಲು ಇನ್ನೂ ಸಾಧ್ಯವಾಗದ ಕಾರಣ ಹೀಗಾಗಿರಬಹುದು ಅನ್ನಿಸುತ್ತದೆ. ಆ ಕಾರಣವಗಿಯೇ ಅಮೋಘಸಿದ್ಧನ ಕಥನ ಈ ಕಾವ್ಯಗಳಲ್ಲಿ appendageನ ಹಾಗೆ ತೋರುತ್ತದೆ.

ಮೌಖಿಕವಾಗಿ ದೊರೆಯುವ ಅಮೋಘಸಿದ್ಧನ ಪರಿವಾರ ಸಂಬಂಧಿ ಗೀತೆಗಳನ್ನು ಬಿ.ಜಿ.ಖಾಡೆ ಅವರು ಸಂಪಾದಿಸಿದ 'ಕಾಡು ಹೂಗಳು' ಅನ್ನುವ ಗೀತ ಸಂಕಲನದಲ್ಲಿ ಕಾಣುತ್ತೇವೆ. ಅದೂ ಅಲ್ಲದೆ ಹಲಸಂಗಿ ಗೆಳೆಯರ ಬಳಗದವರು ಸಂಗ್ರಹಿಸಿದ 'ಹಲಸಂಗಿ ಹಾಡು' ಕೃತಿಯಲ್ಲೂ ನಾಲ್ಕಾರು ಹಾಡುಗಳು ದೊರೆಯುತ್ತವೆ.

೧.೫.೧ ಕಾಡುಹೂಗಳು

ಬಿ.ಜಿ.ಖಾಡೆ ಅವರು ಸಂಪಾದಿಸಿದ ಈ ಕೃತಿಯಲ್ಲಿ ಸಂಗ್ರಹಿಸಿದ ಡೊಳ್ಳಿನ ಹಾಡು, ಹಂತಿಯ ಪದ, ಬೀಸುವ ಕಲ್ಲಿನ ಪದಗಳು, ಕಥನ ಗೀತೆಗಳು ಇವೆ. ಅವುಗಳಲ್ಲಿ ಕೆಲವೊಂದು ಅಮೋಘಸಿದ್ಧ ಪರಂಪರೆಯವರ ಕುರಿತಾಗಿ ಇವೆ. ಇಲ್ಲಿನ ಹಾಡುಗಳನ್ನು ಅಮೋಘಸಿದ್ಧನನ್ನು ಅಮಕಸಿದ್ಧ, ಅಮಗೊಂಡ, ಯೋಗಿ ಎಂದು ಕರೆದಿವೆ.

ಮುಮ್ಮೆಟಗುಡ್ಡದ ಮ್ಯಾಲ ಮಾರ ಚಂದರ ಹೂವ
ಬಿಳಿಹೂಲಿಕಂಟಿ ಮದರಂಗಿ ಬನದಾಗ
ಮೋರತ ಆಗ್ಯಾನೋ ಅಮಗೊಂಡ[೧೧]

ಅಮೋಘಸಿದ್ಧನ ಬಲಗೈ ಭಂಟನಾದ ಭೂತಾಳಸಿದ್ಧನ ಬಗೆಗೂ ಇಲ್ಲಿ ಕೆಲ ಹಾಡುಗಳಿವೆ. ಜನರಿಗೆ ಅಮೋಘಸಿದ್ಧನಲ್ಲಿ ಇದ್ದಷ್ಟೇ ಭಕ್ತಿ ಭೂತಾಳಸಿದ್ಧನ ಬಗೆಗೂ ಇದೆ. ಅವನನ್ನು 'ಹಿಂಡದೆವ್ವಿನ ಗಂಡ ಪುಂಡ ಭೂತಾಳಸಿದ್ಧ'[೧೨] ಎಂದು ವರ್ಣಿಸುತ್ತವೆ. ಅಮೋಘಸಿದ್ಧನ ಪುಣ್ಯದ ಮಗನಾದ ಮಾಸಿದ್ಧಪ್ಪನ ಬಗೆಗೆ, ಮೊಮ್ಮಗನಾದ ಮಲಕಾರಿಸಿದ್ಧ ಹಾಗೂ ಕುಂಚನೂರ ಮಾದಣ್ಣ -ಇವರ ಬಗೆಗೂ ಇಲ್ಲಿ ಹಾಡುಗಳಿವೆ.

ಅಮೋಘಸಿದ್ಧನ ದಿಮ್ಮೆಲ್ಲಿ ನುಡದಾವ
ಹೊನ್ನ ಪಡಸಲಗಿ ಹೊಳಿಮ್ಯಾಲ ಮಲಕಾರಿ
ಸಿದ್ಧ ಅಣ್ಣನ ಭೇಟಿಗಿ ಬರತಾನ[೧೩]

ಅಮೋಘಸಿದ್ಧ ಪರಂಪರೆಯ ಕುರಿತು ಕರ್ನಾಟಕ ಮಹಾರಾಷ್ಟ್ರ ಗಡಿಭಾಗದ ಭಕ್ತರಲ್ಲಿ ಇರುವ ಅಪರೂಪದ ಶ್ರದ್ಧಾ-ಭಕ್ತಿಯನ್ನು ಇಲ್ಲಿಯ ಕೆಲ ಹಾಡುಗಳು ದಾಖಲಿಸುತ್ತವೆ. ೧೯೫೭ರಿಂದ ೧೯೬೦ರ ಅವಧಿಯಲ್ಲಿ ಈ ಗಡಿ ಪ್ರದೇಶದಲ್ಲಿ ಸಂಚರಿಸಿ ಬಿ.ಜಿ.ಖಾಡೆ ಅವರು ಈ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವರ ಜನಪದ ಸಾಹಿತ್ಯ ಪ್ರೇಮ ಸರಿಸಾಟಿಯಿಲ್ಲದ್ದು ಅನ್ನಿಸುತ್ತದೆ.

೧.೫.೨ ಜನಪದ ಹಾಲುಮತ ಮಹಾಕಾವ್ಯ

ಕಲಬುರ್ಗಿ ಜಿಲ್ಲೆಯ ಶಹಪುರ ತಾಲೂಕಿನ ಸೈದಾಪುರ ಗ್ರಾಮದ ಸಿದ್ಧಪ್ಪ ಮೇಟಿ ಎಂಬ ಜನಪದ ಹಾಡುಗಾರ ಹಾಲುಮತದ ಕುರಿತು ಸುದೀರ್ಘವಾದ ಕಥನವನ್ನು ಹಾಡಿದ್ದಾನೆ. ಅದನ್ನು ಜಾನಪದ ವಿದ್ವಾಂಸರಾದ ಡಾ. ವೀರಣ್ಣ ದಂಡೆ ಅವರು ತುಂಬಾ ಶ್ರದ್ಧೆ ಹಾಗೂ ಪರಿಶ್ರಮದಿಂದ ೬೪೯ ಪುಟಗಳ ವಿಸ್ತಾರದಲ್ಲಿ ಸಂಗ್ರಹಿಸಿ 'ಜನಪದ ಹಾಲುಮತ ಮಹಾಕಾವ್ಯ' ಎನ್ನುವ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಅಲ್ಲಿನ ಒಟ್ಟು ವಿಷಯವನ್ನು ಹದಿನಾಲ್ಕು ಅಧ್ಯಾಯನಗಳಲ್ಲಿ ವಿಭಾಗೀಕರಿಸಿಕೊಂಡು ಅಧ್ಯಯನ ಪೂರ್ಣ ಪ್ರಸ್ತಾವನೆಯನ್ನು ಬರೆದಿದ್ದಾರೆ. ಈಮಹಾಕಾವ್ಯದ ಹನ್ನೆರಡನೆಯ ಅಧ್ಯಾಯದ ಹೆಸರು 'ಅಮೋಘಸಿದ್ಧನ ವೃತ್ತಾಂತ'ವು. ಈಗಾಗಲೇ ಹೇಳಿದಂತೆ ಇದೊಂದು ರೀತಿಯ appendage. ಮುದ್ದಪ್ಪ, ಮುದ್ದವ್ವ, ಪದಮಗೊಂಡ, ಬೀರಪ್ಪ, ಚಿಂಚಲಿಮಾಯವ್ವ, ಮಾಳಿಂಗರಾಯ, ಜಕ್ಕಪ್ಪ, ತುಕ್ಕಪ್ಪ, ರೇವಣಸಿದ್ಧ, ಸಿದ್ಧರಾಮ ಅವರ ಕಥನಗಳು ಮೂಲ ಮಹಾಕಾವ್ಯದ ಪಠ್ಯ(texture)ದಲ್ಲಿ ಲೀನವಾಗಿರುವಂತೆ ಅಮೋಘಸಿದ್ಧನ ವೃತ್ತಾಂತ ಬೆರೆತುಕೊಂಡಿಲ್ಲ. ಅದಕ್ಕೆ ಪ್ರಮುಖ ಕಾರಣ ಅದು ತೀರ ಇತ್ತೀಚಿನ ಸೇರ್ಪಡೆಯಾಗಿರುವುದು.

ಇಲ್ಲಿ ಅಮೋಘಸಿದ್ಧನ ವೃತ್ತಾಂತವನ್ನು ಮೂಲ ಕಾವ್ಯದೊಂದಿಗೆ ಬೆಸೆಯುವ ಸಂಗತಿಯೆಂದರೆ ಅಮೋಘಸಿದ್ಧ ಹಾಗೂ ಮಾಳಿಂಗರಾಯನ ನಡುವೆ ನಡೆಯುವ ಮೇಲಾಟದ ಸ್ಪರ್ಧೆ.

ಪ್ರಸ್ತುತ ಅಧ್ಯಾಯದಲ್ಲಿ ಅಮೋಘಸಿದ್ಧನ ಕುರಿತು ಹಲವಾರು ಅಂಶಗಳು ದೊರೆಯುತ್ತವೆ. ಕೈಲಾಸದಿಂದ ಮೃತ್ಯಲೋಕಕ್ಕೆ ಅಮೋಘಸಿದ್ಧನ ಆಗಮನ, ತನ್ನಂಥ ಶಿಷ್ಯ ಶಿವನಂಥ ಗುರು ಮೂರು ಲೋಕದಲ್ಲಿ ಇಲ್ಲ ಎಂಬ ಅಹಂಕಾರ, ಮಾಳಿಂಗರಾಯನ ಮುಖಾಮುಖಿಯಲ್ಲಿ ಆ ಅಹಂಕಾರದ ಮರ್ದನ, ಮಳೆಬರಿಸುವ ಹಲವಾರು ಪವಾಡಗಳು, ನಡುವಟ್ಟಿ ನಾಗರಾಯನ ಮಗಳಾದ ಪದ್ಮಾವತಿಯೊಂದಿಗೆ ವಿವಾಹ, ಅಮೋಘಸಿದ್ಧನ ಪುಣ್ಯದ ಮಕ್ಕಳು ಹಾಗೂ ವರವಿನ ಮಕ್ಕಳ ಕುರಿತ ಘಟನೆಗಳು, ಪುಣ್ಯದ ಮಕ್ಕಳು ಹಾಗೂ ವರವಿನ ಮಕ್ಕಳ ನಡುವಿನ ಸಂಘರ್ಷ, ಪುಣ್ಯದ ಮಗ ಮಾಸಿದ್ಧಪ್ಪ ಹಾಗೂ ಸೊನ್ನಲಿಗೆ ಸಿದ್ಧರಾಮರ ಭೆಟ್ಟಿ ಇಂಥೆಲ್ಲ ವಿವರಗಳೊಂದಿಗೆ ಅಮೋಘಸಿದ್ಧನ ವೃತ್ತಾಂತವು ಮಹಾಕಾವ್ಯದೊಳಗಿನ ಒಂದು ಕಿರು ಮಹಾಕಾವ್ಯದ ಹಾಗೆ ತೋರುತ್ತದೆ.

೧.೫.೩ ತೇಜೋಮಯ ಹಾಲುಮತ ಪುರಾಣ

ಈ ಗದ್ಯ ಕೃತಿಯು ಎನ್.ಬಿ.ತೋಂಟಾಪುರ ಅವರಿಂದ ರಚಿತವಾಗಿದೆ. ರಸ್ತಾಪುರ ಭೀಮಕವಿಯು ವಾರ್ಧಕ ಷಟ್ಪದಿಯಲ್ಲಿ ಬರೆದ ಹಾಲ್ಮತೋತ್ತೇಜಕ ಪುರಾಣ ಕೃತಿಯನ್ನು ಅನುಸರಿಸಿ ಬರೆದ ಗದ್ಯರೂಪದ ಪುರಾಣ ಕಥನವಿದು. ಮೂಲಕೃತಿಯಲ್ಲಿ ಅಮೋಘಸಿದ್ಧನ ಕುರಿತಾದ ಯಾವುದೇ ರೀತಿಯ ಪ್ರಸ್ತಾಪವಿಲ್ಲ. ಮೂಲಕೃತಿ ಗುರುವಾದ ಬೀರಪ್ಪನು ಶಿಷ್ಯ ಮಾಳಿಂಗರಾಯನೊಂದಿಗೆ ಕೈಲಾಸಕ್ಕೆ ಹೋಗುವ ಪ್ರಸಂಗದೊಂದಿಗೆ ಮುಕ್ತಾಯವಾಗುತ್ತದೆ. ಆದರೆ ಎನ್.ಬಿ.ತೊಂಟಾಪುರ ಅವರು ಮೂಲಕೃತಿಯ ಕಥೆಯನ್ನೆಲ್ಲ ಹೇಳಿ, 'ಕ್ಷೀರದಲ್ಲಿ ಅಮೋಘಸಿದ್ಧನು ಪ್ರಕಟಗೊಂಡುದು' ಎಂಬ ಹೊಸ ಅಧ್ಯಾಯವನ್ನು ಸೇರಿಸಿದ್ದಾರೆ. ಈ ಘಟನೆಯನ್ನು ಯಾವ ಮೂಲದಿಂದ ಪಡೆದದ್ದು ಎಂಬುದನ್ನು ಅವರು ವಿವರಿಸಿಲ್ಲ. ಅದೇನೇ ಇದ್ದರೂ ಈ ಅಧ್ಯಾಯ ಅಮೋಘಸಿದ್ಧನ ಕುರಿತು ಹಲವಾರು ಹೊಸ ಅಂಶಗಳನ್ನು ಹೇಳುತ್ತದೆ. ಅಮೋಘಸಿದ್ಧನ ಜನನದ ಕುರಿತು ಜನಪದ ಹಾಲುಮತ ಮಹಾಕಾವ್ಯಕ್ಕಿಂತ ಭಿನ್ನವಾದ ಕತೆಯನ್ನು ಹೇಳುತ್ತದೆ. ಕೈಲಾಸದೊಳಗಿನ ಶಂಕರನು ಒಂದು ಸಲ ಭೂಲೋಕಕ್ಕೆ ಬರುತ್ತಾನೆ. ಹಾಗೆ ಬಂದಾಗ ಕುರಿ ಹಟ್ಟಿಯಲ್ಲಿ ದೊಡ್ಡದಾದ ಹಾಲಗುಂಡಿಯಲ್ಲಿ ಒಂದು ಲಿಂಗವನ್ನ ಬಿಟ್ಟು ಹೋಗುತ್ತಾನೆ. ಹಾಲಗುಂಡಿಯಲ್ಲಿ ಲಿಂಗವು ಶಿಶುವಾಗಿ ಬೆಳೆಯುತ್ತದೆ. ಇಂಥ ಕಥನಗಳು ಅಮೋಘಸಿದ್ಧನಿಗೆ ಅಯೋನಿಜ ಪಟ್ಟಗಟ್ಟಲು ಪ್ರಯತ್ನಿಸಿದರೂ 'ಹಾಲಗುಂಡಿ' ಹಾಗೂ 'ಲಿಂಗ'ದಂಥ ರೂಪಕಗಳು ಅವನು 'ಯೋನಿಜ'ನೆನ್ನುವುದನ್ನು ಸಾರಿ ಹೇಳುತ್ತವೆ.

ಹಾಗೆ ಬೆಳೆದ ಲಿಂಗವನ್ನು ಶಿವಸಿದ್ಧಬೀರೇಶನು ಪೋಷಿಸುತ್ತಾನೆ. ಕೈಲಾಸಕ್ಕೆ ಹೋಗಿ ಅಲ್ಲಿ ಪರಶಿವನ ಕುರಿತು ತಪಸ್ಸನ್ನು ಆಚರಿಸಿ ಅವನಿಂದ ಆಶೀರ್ವಾದ ಪಡೆದು ಬರಲು ಬೀರೇಶ ಅಮೋಘಸಿದ್ಧನನ್ನು ಕಳುಹಿಸಿಕೊಡುತ್ತಾನೆ. ಅದರಂತೆ ಕೈಲಾಸಕ್ಕೆ ಹೋಗಿ ತಪಸ್ಸನ್ನು ಆಚರಿಸಿ ಶಿವನಿಂದ ಆಶೀರ್ವಾದ ರೂಪದಲ್ಲಿ ಹೋಮದ ಕಂಬಳಿ ಹಾಗೂ ನೇಮದ ಬೆತ್ತವನ್ನು ಪಡೆದು ಬರುತ್ತಾನೆ.

ಭೂಲೋಕಕ್ಕೆ ಮರಳಿ ಬಂದ ನಂತರ ಅಮೋಘಸಿದ್ಧನು ಕಲ್ಯಾಣಕ್ಕೆ ಹೋಗಿ ಅಲ್ಲಿದ್ದ ರೇವಣಸಿದ್ಧನನ್ನು ಭೆಟ್ಟಿಯಾಗುತ್ತಾನೆ. ರೇವಣಸಿದ್ಧ ಅವನಿಗೆ ಲಿಂಗದೀಕ್ಷೆ ನೀಡುತ್ತಾನಲ್ಲದೆ ಪಂಚಾಕ್ಷರಿ ಬೋಧಿಸುತ್ತಾನೆ. ಹಾಗೂ ನಾಡಿಗೆ ನೀನು ನಾಡಗೌಡನಾಗಿ ಮೆರೆ ಎಂದು ಆಶೀರ್ವದಿಸುತ್ತಾನೆ.

ಅದಾದ ನಂತರ ಅಮೋಘಸಿದ್ಧನ ಪ್ರಭಾವಕ್ಕೆ ಒಲಿದು ಕನ್ನಗೊಂಡ, ಹೊನ್ನಗೊಂಡ, ಕರ್ಣಗೊಂಡ, ಕಾಳಿಗೊಂಡ, ವೀರಗೊಂಡ, ಬೀರಗೊಂಡರೆಂಬುವವರು ಅವನ ಶಿಷ್ಯರಾಗುತ್ತಾರೆ. ಅಲ್ಲಿಯೇ ರೇವಣಸಿದ್ಧೇಶ್ವರ ಮಠದಲ್ಲಿ ಗುರುಸಿದ್ಧನೆಂಬ ಇನ್ನೊಬ್ಬ ಶಿಷ್ಯನಿದ್ದನು. ಅವನು ಅಜ್ಜಗೊಂಡನೆಂಬುವವನ ಮಕ್ಕಳಾದ ಆಚಗೊಂಡ, ಮಾಚಗೊಂಡ, ಅಂದಗೊಂಡ, ಚಂದಗೊಂಡ, ಅಮರಗೊಂಡ, ತುಮರಗೊಂಡರಿಗೆ ಗುರುವಾಗುತ್ತಾನೆ.

ಈ ರೀತಿಯಾಗಿ ಗುರುಸಿದ್ಧನು ಹಾಲುಮತದವರಿಗೆ ಶಿಕ್ಷೆಯ ಗುರುವಾಗುತ್ತಾನೆ ಹಾಗೂ ಅಮೋಘಸಿದ್ಧನು ಮೋಕ್ಷದ ಗುರುವಾಗುತ್ತಾನೆ. ಅದಾದ ನಂತರ ರೇವಣಸಿದ್ಧ ಅಮೋಘಸಿದ್ಧನನ್ನು ಕರೆದು ಇನ್ನು ನಂತರ ನಿನ್ನ ಸೇವೆ ಮಕಲಾ(ಣಾ)ಪುರದಲ್ಲಿ ಗುರುಗೌರಿ ಸೋಮಲಿಂಗನಿಗೆ ಸಲ್ಲಬೇಕಾಗಿದೆ. ಕಾರಣ ನೀನು ಅಲ್ಲಿಗೆ ಹೋಗು ಎಂದು ಕಲ್ಯಾಣದಿಂದ ಅಮೋಘಸಿದ್ಧನನ್ನು ಮಕಳಾ(ಣಾ)ಪುರಕ್ಕೆ ಕಳುಹಿಸಿಕೊಡುತ್ತಾನೆ. ಗುರುವಿನ ಆಜ್ಞೆಯಂತೆ ಅವನು ಮಕಳಾ(ಣಾ)ಪುರಕ್ಕೆ ಬರುತ್ತಾನೆ. ಒಂದು ಸಲ ಈ ಭಾಗದಲ್ಲಿ ಮಳೆಬರದೆ ಜನರು ದನಕರುಗಳು ಕಂಗಾಲಾಗುತ್ತಾರೆ. ಆಗ ಅಮೋಘಸಿದ್ಧನು ಗುರುನಾಮಸ್ಮರಣೆ ಮಾಡಿ ಶಿವನು ನೀಡಿದ ಹೋಮದ ಕಂಬಳಿಯನ್ನು ಬೀಸಿ ಮಳೆ ತರಿಸುತ್ತಾನೆ.

ಡಾ. ದಂಡೆ ಅವರು ಸಂಪಾದಿಸಿದ 'ಜನಪದ ಹಾಲುಮತ ಮಹಾಕಾವ್ಯ'ದಲ್ಲಿ 'ಅಮೋಘಸಿದ್ಧನ ವೃತ್ತಾಂತ'ದಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳದ ಶಿವಸಿದ್ಧ ಬೀರೇಶ್ವರ ಹಾಗೂ ರೇವಣಸಿದ್ಧ ವಿಶೇಷವಾಗಿ ಕಾಣಿಸಿಕೊಂಡಿದ್ದಾರಲ್ಲದೆ ಅವನಿಗೆ ಗುರುಸ್ಥಾನದಲ್ಲಿ ನಿಂತಿದ್ದಾರೆ. ಅಮೋಘಸಿದ್ಧನ ಕುರಿತಾದ ಯಾವುದೇ ಕಥನದಲ್ಲಿ ಕಾಣಿಸಿಕೊಳ್ಳದ ಕನ್ನಗೊಂಡ, ಹೊನ್ನಗೊಂಡ ಇತ್ಯಾದಿ ಶಿಷ್ಯರು ಇಲ್ಲಿ ಕಾಣಿಸಿಕೊಂಡಿದ್ದಾರೆ. ಅದೂ ಅಲ್ಲದೆ 'ಜನಪದ ಹಾಲುಮತ ಮಹಾಕಾವ್ಯ' ಉಲ್ಲೇಖಿಸುವ ಅಮೋಘಸಿದ್ಧ ಮಾಳಿಂಗರಾಯರ ನಡುವೆ ನಡೆದ ಮೇಲುಗಾರಿಕೆಯ ಸಂಘರ್ಷದ ಕಥನ ಇಲ್ಲಿ ಗೈರು ಹಾಜರಾಗಿದೆ.

೧.೫.೪ ಸುಕ್ಷೇತ್ರ ಹುಲಜಂತಿ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣ

ಈ ಗದ್ಯ ಕೃತಿಯನ್ನು ರಚಿಸಿದವರು ಹುಲಜಂತಿ ಮಾಳಿಂಗರಾಯನ ಪೂಜಾರಿಗಳಾದ ಅಡಿವೆಪ್ಪ ಮಾಳಪ್ಪ ಸೋಮುತ್ತೇ ಅವರು. ಮಾಳಿಂಗರಾಯನನ್ನು ಹಾಲುಮತ ಪುರಾಣ ಕಥೆಗಳ ಕೇಂದ್ರದಲ್ಲಿ ತಂದು ನಿಲ್ಲಿಸುವುದು ಇದರ ಉದ್ದೇಶ. ಈ ಕೃತಿಯಲ್ಲಿ ಅಮೋಘಸಿದ್ಧನ ಕುರಿತು ಒಂದೆರಡು ಹೊಸ ಅಂಶಗಳು ದಾಖಲಾಗಿವೆ. ಅಮೋಘಸಿದ್ಧನನ್ನು ಇಲ್ಲಿ ನವಸಿದ್ಧರಲ್ಲಿ ಒಬ್ಬನಾದ ಅಮೂಲಸಿದ್ಧನೊಂದಿಗೆ ಸಮೀಕರಿಸಲಾಗಿದೆ. ಈ ಅಮೂಲಸಿದ್ಧನ ಜನನದ ಕುರಿತು ಒಂದು ಪುರಾಣ ಕಥನ ಇಲ್ಲಿದೆ.

ಒಂದು ಸಲ ಕೈಲಾಸದಲ್ಲಿ ಶಿವ-ಪಾರ್ವತಿಯರು ಲೆತ್ತದಾಟ ಆಡುತ್ತ ಕುಳಿತಿರುತ್ತಾರೆ. ಆಗ ದೇವಲೋಕದ ನರ್ತಕಿಯರಾದ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆಯರು ನರ್ತನ ಮಾಡುತ್ತ ಅಲ್ಲಿಗೆ ಬರುತ್ತಾರೆ. ಉದ್ರೇಕಿತನಾದ ಶಿವನಿಗೆ ವೀರ್ಯ ಪತನವಾಗುತ್ತದೆ. ಅದನ್ನು ಗಮನಿಸಿದ ಪಾರ್ವತಿ ಆ ವೀರ್ಯವನ್ನು ಪಂಚಭೂತದ ಪಾತ್ರೆಯಲ್ಲಿ ಸಂಗ್ರಹಿಸಿ ಇಡುತ್ತಾಳೆ. ಕಾಲಾಂತರದಲ್ಲಿ ಪಾತ್ರೆ ತೆಗೆದು ನೋಡಿದರೆ ಅದರಲ್ಲಿ ಒಂಬತ್ತು ಶಿಶುಗಳು ಆಡುತ್ತಿರುತ್ತವೆ. ಅವುಗಳನ್ನೆಲ್ಲಾ ಹೊರತೆಗೆದು ಪಾರ್ವತಿಯ ಉಡಿಯಲ್ಲಿ ಹಾಕಿ ನೀನು ಇವುಗಳನ್ನೆಲ್ಲ ಸಲಹು ಎಂದು ಹೇಳುತ್ತಾನೆ. ಹನ್ನೆರಡನೆಯ ದಿವಸಕ್ಕೆ ಅವಕ್ಕೆಲ್ಲ ಹೆಸರಿಸಲಾಗುತ್ತದೆ. ಮೊದಲನೆಯವನ ಹೆಸರೆ ಅಮೂಲಸಿದ್ಧ. ನಂತರದವರನ್ನು ಶಿವಗಿನಿಸಿದ್ಧ, ಮಣಿಸಿದ್ಧ, ಗುಗ್ಗರಿಸಿದ್ಧ, ಕೊಳಲಸಿದ್ಧ, ಗರೆಸಿದ್ಧ, ಏಕಸಿದ್ಧ, ಜೋಗಸಿದ್ಧ ಹಾಗೂ ರೇವೂಸಿದ್ಧ ಎಂದು ಕರೆಯುತ್ತಾರೆ.

ನವಸಿದ್ಧರಲ್ಲಿ ಹಿರಿಯವನಾದ ಅಮೂಲಸಿದ್ಧನನ್ನು ಶಿವನು ತನ್ನ ಸೇವೆಗೆಂದು ಇಟ್ಟುಕೊಳ್ಳುತ್ತಾನೆ. ಅದಾದ ನಂತರದ ಕತೆಯು ಅಮೋಘಸಿದ್ಧನಲ್ಲಿ ಮೂಡಿದ ಅಹಂಕಾರ, ಮಾಳಿಂಗರಾಯನಿಂದ ಆ ಅಹಂಕಾರದ ನಿರಸನದ ಘಟನೆಗಳನ್ನು ಹೇಳುತ್ತದೆ.

ಇಲ್ಲಿನ ಕಥನದ ವಸ್ತು ಜನಪದ 'ಹಾಲುಮತ ಮಹಾಕಾವ್ಯ'ದ ವಸ್ತುವಿಗಿಂತ ಸ್ವಲ್ಪ ಭಿನ್ನವಾಗಿದ್ದರೂ ಎರಡೂ ಕಥನಗಳ ಧೋರಣೆ ಒಂದೇ ಆಗಿದೆ. ಮಾಳಿಂಗರಾಯನ ಎದುರಿಗೆ ಅಮೋಗಸಿದ್ಧನ ಸೋಲು ಎರಡರಲ್ಲೂ ಇರುವ ಸಮಾನ ಅಂಶವಾಗಿದೆ.

೧.೫.೫ ಹಾಲುಮತದ ಪುರಾಣವು

ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಬರೆದ ಪದ್ಯರೂಪದ ಕಥಾನಕವಿದು. ಈ ಕೃತಿಗೆ ಹುಲ್ಲೂರಿನ ಅಮೋಗಿಮಠದ ವೇದಮೂರ್ತಿ ಲಿಂಗಯ್ಯಸ್ವಾಮಿ ಬಸಲಿಂಗಯ್ಯಸ್ವಾಮಿ ಅವರು ಮುನ್ನುಡಿ ಬರೆದು ಹರಸಿದ್ದಾರೆ. ಇದು ಸರವೂರಿನ ಮಂಕ ಒಡೆಯರ ಪರಂಪರೆಗೆ ಬದ್ಧಗೊಳಿಸಿಕೊಂಡ ಬರೆದ ಕಾವ್ಯವಾಗಿದೆ.

ಮೂಲಕಾವ್ಯ ಅಮೋಸಿದ್ಧನ ಕುರಿತು ಏನೂ ಹೇಳುವುದಿಲ್ಲ. ಆದರೆ ಕಾವ್ಯ ಮುಕ್ತಾಯದ ಭಾಗದಲ್ಲಿ ಥಟ್ಟನೆ ಮೂರು ಗದ್ಯ ರೂಪದ ಸಾಲುಗಳು ಸೇರಿಕೊಂಡಿವೆ.

"ಶಾಂತಯ್ಯ ಸಂತತಿ ಸರವೂರವೆಂತಲೂ ಚಿಕ್ಕಯ್ಯನ ಸಂತತಿ ಅಮೋಗಿಯವರೆಂತಲೂ ಎರಡೂ ಶಾಖಾ ಗುರುಮಠಗಳೆಂದು ಜಗತ್ತಿನಲ್ಲಿ ಗುರುಮಠಗಳಾಗಿ ಮೆರೆಯುತ್ತಿರುವವು"[೧೪]

ಈ ಸಾಲುಗಳಲ್ಲಿ ಕಂಡು ಬರುವ 'ಶಾಂತಯ್ಯ' ಯಾರು ಎಂಬ ಬಗ್ಗೆ ಈಗಾಗಲೇ ಹಲವಾರು ಚರ್ಚೆಗಳು ನಡೆದಿವೆ. ಇಲ್ಲಿ ಉಲ್ಲೇಖಿತನಾಗಿರುವ 'ಶಾಂತಯ್ಯ' ಹಾಗೂ 'ಚಿಕ್ಕಯ್ಯ'ನ ಕುರಿತು ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ.ಹಳ್ಳಿಕೇರಿ ಅವರು ಸಂಪಾದಿಸಿದ 'ತಗರಪವಾಡ' ಹಾಗೂ ಡಾ. ಎಂ.ಎ.ಕಲಬುರ್ಗಿ, ಡಾ. ವೈ.ಸಿ.ಭಾನುಮತಿ ಸಂಪಾದಿಸಿದ 'ಸಿದ್ಧಮಂಕ ಚರಿತ್ರೆ'ಗಳಲ್ಲಿ ಈ ತೆರನಾದ ಮಾಹಿತಿಯಿದೆ: ಆದಿಗೊಂಡನೆಂಬುವವನ ಏಳುಜನ ಮಕ್ಕಳಲ್ಲಿ ಪದುಮಣ್ಣ ಕೊನೆಯ ಮಗ. ಅವನಿಗೆ ಇಬ್ಬರು ಹೆಂಡಿರು ಲಿಂಗಮ್ಮ ಹಾಗೂ ಸಿರಿವಂತೆ ಎಂದು. ಲಿಂಗಮ್ಮನಿಗೆ ಪದುಮಗೊಂಡನಲ್ಲಿ ಹುಟ್ಟಿದ ಹದಿಮೂರು ಮಕ್ಕಳಲ್ಲಿ ಶಾಂತಯ್ಯ ಒಬ್ಬನು. ತಂದೆ ಪದುಮಗೊಂಡ ರಕ್ಕಸಿ ಸಿರಿವಂತೆಯೊಂದಿಗೆ ಬಾಳುವೆ ಮಾಡುವುದನ್ನು ನೋಡಿ ಸಹಿಸಲಾಗದೆ ಶಾಂತಯ್ಯ ತಂದೆಯಿಂದ ಬೇರ್ಪಡುತ್ತಾನೆ. ನಂತರದ ದಿನಗಳಲ್ಲಿ ಶಿವನಿಂದ ದೀಕ್ಷೆ ಪಡೆಯುತ್ತಾನೆ. ದೀಕ್ಷೆಯ ಸಮಯದಲ್ಲಿ ಶಿವ ಕರಿಮಲ್ಲಿಗೆಯನ್ನು ಸುರಿಸಿದ. ಆ ಸ್ಥಳವೇ ಸರವೂರ (ಮುದ್ದೇಬಿಹಾಳ ತಾಲೂಕ) ಆಯಿತು. ಮುಂದೆ ಜರುಗಲಿರುವ ತಗರ ಪವಾಡದಲ್ಲಿ ಜಯಶಾಲಿ ಆಗು ಎಂದು ಹರಿಸಿದ್ದಲ್ಲದೆ ಪದುವಣ್ಣನಿಗೆ ಸಿರಿವಂತೆಯಲ್ಲಿ ಹುಟ್ಟಿದವರು ಉಣ್ಣೆಕಂಕಣದವರೆನ್ನಿಸಲಿ ಹಾಗೂ ನಿನ್ನ ಸಂತತಿ ಹತ್ತಿಕಂಕಣದವರೆನ್ನಿಸಲಿ ಎಂದು ಆಶೀರ್ವದಿಸುತ್ತಾನೆ.[೧೫]

ಸೊನ್ನಲಿಗೆ ಸಿದ್ಧರಾಮ ತನ್ನಲ್ಲಿಗೆ ಬಂದು ಆಶೀರ್ವದಿಸಲಿ ಎಂದು ಸಂಕಲ್ಪ ಮಾಡಿ, ಮಂಕಸಿದ್ಧನು ಸರವೂರ ಸಮೀಪದ ತೂಗುಡ್ಡದಲ್ಲಿ ಉಗ್ರ ತಪಸ್ಸನ್ನು ಆಚರಿಸುತ್ತಾನೆ. ಅವನ ರಕ್ಷಣೆಗೆಂದು ಹೆಗ್ಗಗೌಡನೆಂಬುವವನು ಇರುತ್ತಾನೆ. ವಿಷಯ ತಿಳಿದ ಸಿದ್ಧರಾಮ ತೂಗುಡ್ಡಕ್ಕೆ ಬರುತ್ತಾನೆ. ಆಗ ಅಲ್ಲಿ ಮಕ್ಕಳೆಂಬ ಭಾವದಿಂದ ಚಿಕ್ಕಯ್ಯ-ಶಾಂತಯ್ಯರೆಂಬ ಕುಮಾರರಿದ್ದರು. ನಿನ್ನ ಮನದ ಬಯಕೆ ಏನು? ಎಂದು ಸಿದ್ಧರಾಮ ಕೇಳಲು 'ಕುರುಬಗೌಡರು ಕಲ್ಯಾಣದಿಂದ ಬಹಿಷ್ಕೃತರಾಗಿದ್ದಾರೆ. ಅವರಿಗೆ ಕಲ್ಯಾಣದಲ್ಲಿ ಪ್ರವೇಶ ದೊರೆಯುವಂತೆ ಮಾಡು' ಎಂದು ವಿನಂತಿಸಿಕೊಳ್ಳುತ್ತಾನೆ. ನಂತರ ಹಾಗೆಯೇ ಆಗುತ್ತದೆ.[೨೬]

ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿಯವರು 'ಹಾಲುಮತದ ಪುರಾಣವು' ಕೃತಿಯ ಕೊನೆಯಲ್ಲಿ ಪ್ರಸ್ತಾಪಿಸುವ ಶಾಂತಯ್ಯ, 'ತಗರಪವಾಡ' ಹೇಳುವ ಪದುಮಗೊಂಡನ ಮಗ ಶಾಂತಯ್ಯನೋ ಅಥವಾ 'ಸಿದ್ಧಮಂಕ ಚರಿತೆ' ಹೇಳುವ ಸಿದ್ಧಮಂಕನಿಗೆ ಮಕ್ಕಳೆಂಬ ಭಾವದಲ್ಲಿರುವ ಶಾಂತಯ್ಯನೋ ಸ್ಪಷ್ಟವಾಗುವುದಿಲ್ಲ ಹಾಗೂ ಹಳವಳ್ಳಿಯವರ 'ಹಾಲುಮತದ ಪುರಾಣ'ವು ಉಲ್ಲೇಖಿಸುವ ಚಿಕ್ಕಯ್ಯನು ಸಿದ್ಧಮಂಕನ ಮಗನೆಂಬ ಭಾವದಲ್ಲಿ ಇರುವವನು ಎನ್ನುವುದನ್ನು ಒಪ್ಪಿಕೊಂಡರೂ ಚಿಕ್ಕಯ್ಯನ ಮೂಲ ಯಾವುದು ಎಂದು ಸ್ಪಷ್ಟವಾಗುವುದಿಲ್ಲ. ಹೀಗಾಗಿ ಈ ಶಾಂತಯ್ಯ ಹಾಗೂ ಚಿಕ್ಕಯ್ಯರು ಹೊಸ ಸೇರ್ಪಡೆಯೊ ಅಥವಾ ವಾಸ್ತವಿಕವೋ ಎಂಬುದು ಸ್ಪಷ್ಟವಾಗುವುದಿಲ್ಲ. ಒಂದು ವೇಳೆ ಇದು ವಾಸ್ತವಿಕವೆಂದು ತಿಳಿದುಬರುವ ಏನಾದರೂ ಪುಷ್ಟಿಗಳು ದೊರೆತರೆ ಅಮೋಘಸಿದ್ಧನ ಮೂಲವನ್ನು ಹೊಸ ರೀತಿಯಿಂದ ಶೋಧಿಸಿಕೊಳ್ಳಲು ಸಾಧ್ಯ.

೧.೫.೬ ರೇವಣಾರಾಧ್ಯ ಲೀಲಾಸಂಯುಕ್ತ ಹಾಲ್ಮತೋತ್ತೇಜಕ ಪುರಾಣ

ರಸ್ತಾಪುರ ಭೀಮಕವಿಗಳು ವಾರ್ಧಕ ಷಟ್ಪದಿಯಲ್ಲಿ ರಚಿಸಿದ ಹಾಲುಮತ ಪುರಾಣ ಇದಾಗಿದೆ. ರೇವಣಸಿದ್ಧನನ್ನು ಕೇಂದ್ರದಲ್ಲಿಟ್ಟುಕೊಂಡು ರಚಿತವಾದ ಪುರಾಣವಿದು. ಹಾಲುಮತದ ಮೂಲಪುರುಷರೆಂದು ಗುರುತಿಸಲ್ಪಡುವ ಮುದ್ದಪ್ಪ-ಮುದ್ದವ್ವ, ಆದಿಗೊಂಡ, ಪದಮಗೊಂಡ, ಶಿವಸಿದ್ಧ ಬೀರಪ್ಪ, ಮಾಳಿಂಗರಾಯ, ರೇವಣಸಿದ್ಧರು ಮೆರೆದ ಪವಾಡಗಳ ಸಂಕೀರ್ಣ ಪ್ರಸಂಗಗಳ ಗುಚ್ಛವಿದೆ. ಹಾಲುಮತ ಸಂಬಂಧಿ ಕಥನಗಳಲ್ಲಿ ಅತ್ಯಂತ ಜನಪ್ರಿಯವಾದ ಕುರುಬ-ಲಿಂಗಾಯತ ಮುಖಾಮುಖಿಯ ಕಥನ ಇಲ್ಲಿಯೂ ಇದೆ. ಆದರೆ ಸತ್ತ ಕುರಿಯನ್ನು ಬದುಕಿಸುವವ ಮಾಳಿಂಗರಾಯನಾಗಿದ್ದಾನೆ. ಸತ್ತ ಕುರಿ ಹಾಗೂ ಸತ್ತ ಗೂಳಿ ಬದುಕಿಸುವ ಪಂಥದ ಕಥೆ ಕುರುಬರನ್ನು ಬಹುವಾಗಿ ಆಕರ್ಷಿಸಿದ ರೂಪಕವೆನ್ನವುದಂತೂ ಸುಳ್ಳಲ್ಲ.

ಅದೇನೇ ಇರಲಿ, ರಸ್ತಾಪುರ ಭೀಮಕವಿಯ ಈ ಪುರಾಣದಲ್ಲಿ ಅಮೋಘಸಿದ್ಧನ ಉಲ್ಲೇಖವಿಲ್ಲ. ಆದರೆ ಅವನ ಶಿಷ್ಯನಾದ ಭೂತಾಳಸಿದ್ಧನನ್ನು ನೆನಪಿಸುವಂಥ ಪಾತ್ರವೊಂದಿದೆ. ಇಲ್ಲಿ ಇವನನ್ನು ಭೂತಾಳ ಸಿದ್ಧೇಂದ್ರ ಎಂದು ಕರೆಯಲಾಗಿದೆ. ಅವನು ಕೊಲ್ಲಿಪಾಕಿಯ ನಿವಾಸಿಯಾಗಿದ್ದು, ಕುರುಬರಿಗೆ ಒಡೆಯನಾಗಿದ್ದ ಅವನಿಗೆ ಒಬ್ಬ ಮಗನಿದ್ದ. ಅವನು ಆಕಸ್ಮಿಕವಾಗಿ ಮಡಿಯುತ್ತಾನೆ. ಅದೇ ವೇಳೆಗೆ ಶಿವಸಿದ್ಧ ಬೀರೇಶ್ವರನು ಮಾಳಿಂಗರಾಯನೊಂದಿಗೆ ಕೊಲ್ಲಿಪಾಕಿಗೆ ಬಂದಿರುತ್ತಾನೆ. ಸತ್ತ ಮಗನನ್ನು ಬದುಕಿಸಿ ಎಂದು ಭೂತಾಳಸಿದ್ಧೇಂದ್ರ ಬೀರಪ್ಪನನ್ನು ಕೇಳಿಕೊಳ್ಳುತ್ತಾನೆ. ಬೀರಪ್ಪ ಕೂಸನ್ನು ಬದುಕಿಸುತ್ತಾನೆ.[೨೭]

ಭೂತಾಳಸಿದ್ಧನಿಗೆ ಸಂಬಂಧಿಸಿದಂತೆ ಇಷ್ಟು ಘಟನೆ ಇಲ್ಲಿ ಬರುತ್ತದೆ. ಇಲ್ಲಿ ಕಾಣಿಸಿಕೊಳ್ಳುವ ಭೂತಾಳಸಿದ್ಧೇಂದ್ರ ಹಾಗೂ ಅಮೋಘಸಿದ್ಧನ ಶಿಷ್ಯ, ಸೇವಕ, ಪ್ರಧಾನಿಯಾದ ಭೂತಾಳಸಿದ್ಧ ಇಬ್ಬರೂ ಅಭಿನ್ನರಾಗಿರುವ ಸಾಧ್ಯತೆ ಕಡಿಮೆ. ಯಾಕೆಂದರೆ ಇಡೀ ಅಮೋಘಸಿದ್ಧ ಕಥನದಲ್ಲಿ ಕೊಲ್ಲಿಪಾಕಿಯ ಉಲ್ಲೇಖ ಅಪ್ಪಿತಪ್ಪಿಯೂ ಬರುವುದಿಲ್ಲ ಹಾಗೂ ಭೂತಾಳಸಿದ್ಧನಿಗೆ ವಿವಾಹವಾದಂತೆ ಎಲ್ಲಿಯೂ ತಿಳಿದು ಬರುವುದಿಲ್ಲ.

೧.೫.೭ ಹಾಲುಮತದ ಚರಿತ್ರೆ

ಯಲ್ಲನಗೌಡ ಎಫ್. ಅತ್ತಿಕೊಳ್ಳ ಅವರು ಈ ಗದ್ಯ ಕೃತಿಯ ಕರ್ತೃ. ೧೯೪೮ರಷ್ಟು ಹಿಂದೆಯೇ ರಚಿತವಾದ ಈ ಕೃತಿಯನ್ನು ಅಲ್ಪಸ್ವಲ್ಪ ಪರಿಷ್ಕರಿಸಿ ಸದ್ಯದ ರೂಪದಲ್ಲಿ ಡಾ. ವಾಯ್.ಕೆ.ಗುಂಡಕರ್ಜಗಿ ಸಂಪಾದಿಸಿಕೊಟ್ಟಿದ್ದಾರೆ. ಇಲ್ಲಿನ ಬಹುತೇಕ ವಿವರಗಳು ಹಾಲುಮತದ ಸರ್ವಸಾಮಾನ್ಯ ಸಂಗತಿಗಳನ್ನು ಆಧರಿಸಿಯೇ ರಚಿತವಾಗಿದೆ. ಆದರೆ ಕೊನೆಯ ಎರಡು ಅಧ್ಯಾಯನಗಳಲ್ಲಿ ಹಾಲುಮತದ ದೇವತೆ ಹಾಗೂ ಹಾಲುಮತದ ಗುರುವು ಎನ್ನುವ ವಿಷಯದ ಕುರಿತು ಬರೆದಿದ್ದಾರೆ. ಬೀರಪ್ಪನನ್ನು ಹಾಲುಮತದ ದೇವರೆಂದು ಗುರುತಿಸುವ ಇವರು ಮರುಳಸಿದ್ಧೇಶ್ವರರನ್ನು ಹಾಲುಮತದವರ 'ಗುರು' ಎಂದು ಹೇಳಿದ್ದಾರೆ. ಸರೂರ ಸಂಪ್ರದಾಯದ ಪ್ರಭಾವದಲ್ಲಿ ರಚಿತವಾದ ಈ ಕೃತಿ ಅಮೋಘಸಿದ್ಧನ ಕುರಿತು ಮೌನವಹಿಸಿದೆ. ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಹಾಲುಮತದ ಪುರಾಣವು ಕೃತಿಯಲ್ಲಿ ಹೇಳುವ ಪದ್ಮಗೊಂಡನ ಮಕ್ಕಳ ಯಾದಿಯನ್ನೇ ಇವರು ಕೊಡುತ್ತಾರೆ. ಪದ್ಮಗೊಂಡನ ಮಕ್ಕಳ ಯಾದಿಯಲ್ಲಿ ನಡಹಟ್ಟಿ ನಗರಾಯ ಎನ್ನುವ ಹೆಸರೊಂದಿದೆ. ಅಮೋಘಸಿದ್ಧನ ಕಥನದಲ್ಲೂ ಒಬ್ಬ ನಡಹಟ್ಟಿ ನಗರಾಯ ಎಂಬ ಹೆಸರಿನವನಿದ್ದಾನೆ. ಅವನು ಅಮೋಘಸಿದ್ಧನ ಹೆಂಡತಿ ಪದ್ಮಾವತಿಯ ತಂದೆ. ಇಲ್ಲಿ ಉಲ್ಲೇಖಗೊಂಡಿರುವ ಇಬ್ಬರೂ ಅಭಿನ್ನರೆ ಭಿನ್ನರೆ ಎಂದು ಸ್ಪಷ್ಟಪಡಿಸಿಕೊಳ್ಳುವ ಯಾವುದೇ ಆಧಾರಗಳು ದೊರೆತಿಲ್ಲ.

೧.೫.೮ ಸಿದ್ಧಸಿರಿ (ಅಮೋಘಸಿದ್ಧೇಶ್ವರ ಚರಿತಾಮೃತ ಸಂಪುಟ-೧)

ಅಮೋಘಸಿದ್ಧ ಪರಂಪರೆಯ ಕುರಿತು ದೊಡ್ಡ ಪ್ರಮಾಣದ ಮಾಹಿತಿ ಒದಗಿಸುವ ಪ್ರಪ್ರಥಮ ಗದ್ಯ ಕೃತಿಯಿದು. ನಿರಕ್ಷರಿಯಾದ ಮದಗೊಂಡ ಧೋಂಡಪ್ಪ ಒಡೆಯರ ಅವರು ಬಹುವ್ಯಾಪಕವಾದ ಕ್ಷೇತ್ರಕಾರ್ಯ ಮಾಡಿ ತುಂಬಾ ಪರಿಶ್ರಮ ಹಾಗೂ ಶ್ರದ್ಧೆಯಿಂದ ಈ ಪುರಾಣ ಕಥನವನ್ನು ತಯಾರಿಸಿದ್ದಾರೆ. ಇಪ್ಪತ್ತೇಳು ವರ್ಷಗಳ ನಿರಂತರ ಓಡಾಟದ ನಂತರ ಸಿಕ್ಕ ಮಾಹಿತಿಯನ್ನು ಒಂದೆಡೆ ಕಲೆಹಾಕಿ ವ್ಯವಸ್ಥಿತವಾಗಿ ಈ ಗ್ರಂಥ ರೂಪಿಸಿದ್ದಾರೆ. ಇವರೊಂದಿಗೆ ಸಹಲೇಖಕರಾಗಿ ಕೆಲಸ ಮಾಡಿದವರು ಸಿದ್ಧಗೊಂಡ ಹಕ್ಕೆ ಅವರು. ರೇವಣಸಿದ್ಧ ಬಸವಣ್ಣಪ್ಪ ದೊಡಮನಿ ಗುರೂಜಿ ಅವರು ಈ ಕೃತಿಯ ಸಂಪಾದಕರಾಗಿದ್ದಾರೆ. ಬಹುವಿಸ್ತಾರವಾದ ಭೌಗೋಳಿಕ ವ್ಯಾಪ್ತಿಯಲ್ಲಿ ನೆಲೆಸಿರುವ ಅಮೋಘಸಿದ್ಧನ ಭಕ್ತರ ಹೃದಯದಲ್ಲಿ ಅಡಗಿ ಕುಳಿತಿದ್ದ ಹಾಡುಗಳನ್ನು ಮೌಖಿಕ ಕಥನಗಳನ್ನು, ಬೇರೆ ಬೇರೆ ಸ್ಥಳಗಳಲ್ಲಿ ದೊರೆತ ಐತಿಹ್ಯಗಳನ್ನು, ಇಂದಿಗೂ ಚಲಾವಣೆಯಲ್ಲಿರುವ ಜಾತ್ರೆ-ಉತ್ಸವ-ನಂಬಿಕೆ-ಆಚರಣೆಗಳನ್ನು ಕಲೆ ಹಾಕುವುದು ನಿಜವಾಗಿಯೂ ಶ್ರಮದ ಕೆಲಸ. ಇಂಥದೊಂದು ಕೃತಿ

[illegible]

[illegible]

[illegible]

ಲಭ್ಯವಾಗಿರದಿದ್ದರೆ ಈ ಅಧ್ಯಯನಕಾರನಿಗೆ ಈ ಕುರಿತು ಸಂಶೋಧನೆ ನಡೆಯಿಸುವ ಯೋಚನೆ ಇಷ್ಟು ಬೇಗನೆ ಹೊಳೆಯುತ್ತಿತ್ತೆನ್ನುವುದು ಸಂಶಯದ ಮಾತು. ಅಮೋಘಸಿದ್ಧ ಪರಂಪರೆಯ ದಟ್ಟಕಾಡಿನಲ್ಲಿ ಈ ಕೃತಿ ಪುಟ್ಟ ಕಾಲುದಾರಿಯನ್ನು ನಿರ್ಮಿಸಿ ಹೆಚ್ಚಿನ ಸಂಶೋಧನೆ ಮಾಡುವವರನ್ನು ಸ್ವಾಗತಿಸುತ್ತದೆ.

ಅಮೋಘಸಿದ್ಧನ ಕುರಿತಾದ ಚದುರಿಹೋಗಿರುವ ಘಟನಾವಳಿಗಳನ್ನು ಈ ಕೃತಿ ಒಂದು ಸೂತ್ರದಲ್ಲಿ ಹಿಡಿದಿಡಲು ಪ್ರಯತ್ನಿಸಿದೆ. ಒಟ್ಟೂ ಘಟನೆಗಳನ್ನು ಒಂದುನೂರ ಮೂವತ್ತೈದು ಶೀರ್ಷಿಕೆಗಳಲ್ಲಿ ವ್ಯವಸ್ಥಿತವಾಗಿ ವಿಭಾಗೀಕರಿಸಿಕೊಂಡಿದ್ದಾರೆ. ಕಾಲಬದ್ಧತೆಯನ್ನು ಈ ಕೃತಿ ಅನುಸರಿಸಿಕೊಂಡು ಬಂದುದನ್ನು ನೋಡಿದರೆ ಅಷ್ಟೇನು ಶಿಕ್ಷಣ ಪಡೆಯದ ಈ ಜನರ ಶಿಸ್ತುಬದ್ಧ ಬರವಣಿಗೆ ಓದುಗನನ್ನು ದಂಗುಬಡಿಸದೇ ಇರದು. ಮೊದಲ ಹದಿನೈದು ಅಧ್ಯಾಯಗಳು ಅಮೋಘಸಿದ್ಧ ಕೈಲಾಸದಲ್ಲಿ ಏಳು ಯುಗಗಳಲ್ಲಿ ಬೇರೆ ಬೇರೆ ಹೆಸರಿನಿಂದ ಶಿವನ ಸೇವೆ ಮಾಡಿ ಶಿವ-ಪಾರ್ವತಿಯರ ಪ್ರೀತಿಗೆ ಪಾತ್ರನಾಗುತ್ತ ಬರುವ ಕತೆಯನ್ನು ಹೇಳುತ್ತವೆ. ಹದಿನಾರರಿಂದ ಮೂವತ್ತನೆಯ ಅಧ್ಯಾಯಕ್ಕೆ ಬರುವಷ್ಟರಲ್ಲಿ ಅಮೋಘಸಿದ್ಧ ಶಿವನಿಂದ ಹೋಮದ ಕಂಬಳಿ, ನೇಮದ ಬೆತ್ತ, ಭಂಡಾರ ಭರಣಿ ಹಾಗೂ ಹುಟ್ಟು ಬಂಜೆಯರಿಗೆ ತೊಟ್ಟಿಲ ಭಾಗ್ಯದ ವರಗಳನ್ನು ಪಡೆದು ಭೂಲೋಕಕ್ಕೆ ಬಂದು ಮುಮ್ಮೆಟಗುಡ್ಡದಲ್ಲಿ ನೆಲೆಸುತ್ತಾನೆ. ಗುರುಗೌರಿ ಸೋಮಲಿಂಗನ ಸೇವೆ ಮಾಡುತ್ತಲೇ ಮಕಣಾಪುರದ ನಡಹಟ್ಟಿ ನಗರಾಯನ ಮಗಳಾದ ಪದ್ಮಾವತಿಯನ್ನು ವಿವಾಹವಾಗುತ್ತಾನೆ. ಮೂವತ್ತೊಂದನೆಯ ಅಧ್ಯಾಯದಿಂದ ಅರವತ್ತಾರನೆಯ ಅಧ್ಯಾಯಕ್ಕೆ ಬರುವಷ್ಟರಲ್ಲಿ ಅಮೋಘಸಿದ್ಧ ಮೂವರು ಪುಣ್ಯದ ಮಕ್ಕಳು, ನಾಲ್ವರು ವರವಿನ ಮಕ್ಕಳು, ಒಬ್ಬ ಹೆಣ್ಣು ಮಗಳನ್ನು ಪಡೆಯುತ್ತಾನೆ. ಬೆಳೆದು ದೊಡ್ಡವರಾದ ಮಕ್ಕಳಿಗೆ ತನ್ನ ಆಸ್ತಿಯ ಪಾಲವಾಟನಿ ಮಾಡಿಕೊಡುತ್ತಾನೆ ಹಾಗೂ ಆ ಕಾರಣವಾಗಿ ಪುಣ್ಯದ ಮಕ್ಕಳು ಹಾಗೂ ವರವಿನ ಮಕ್ಕಳಲ್ಲಿ ಮನಸ್ತಾಪವುಂಟಾಗುತ್ತದೆ. ಮಗಳು ರೆಬಕವ್ವಳ ಮದುವೆ ಮಾಡಿಕೊಡಲಾಗುತ್ತದೆ. ಭೀವರಗಿಯಲ್ಲಿ ವರವಿನ ಮಕ್ಕಳು ಗುರುಮನೆಯನ್ನು ಸ್ಥಾಪಿಸಿಕೊಳ್ಳುತ್ತಾರೆ ಹಾಗೂ ಪುಣ್ಯದ ಮಕ್ಕಳು ಮುಮ್ಮೆಟಗುಡ್ಡವನ್ನು ತೊರೆದು ಬೇರೆ ಬೇರೆ ಕಡೆಗೆ ಚದುರಿ ಹೋಗುತ್ತಾರೆ. ಅರವತ್ನಾಲ್ಕನೆಯ ಅಧ್ಯಾಯದಿಂದ ಎಂಬತ್ನಾಲ್ಕನೆಯ ಅಧ್ಯಾಯಗಳಲ್ಲಿ ನಾಲ್ವರು ವರವಿನ ಮಕ್ಕಳಿಗೆ ಇಪ್ಪತ್ತೊಂದು ಜನ ಧರ್ಮರು ಜನಿಸುತ್ತಾರೆ. ಇಪ್ಪತ್ತೊಂದು ಮಂದಿಯಲ್ಲಿ ಹದಿನೆಂಟು ಜನರ ವಿವಾಹ ನಡೆಯುತ್ತದೆ ಹಾಗೂ ಮೂರು ಜನರು ಸನ್ಯಾಸ ಸ್ವೀಕರಿಸುತ್ತಾರೆ. ಇಪ್ಪತ್ತೊಂದು ಮಂದಿಗೆ ಒಂದನೂರ ಒಂದು ಜನ ಧರ್ಮರು ಜನಿಸುತ್ತಾರೆ. ಎಂಭತ್ತೈದನೆಯ ಅಧ್ಯಾಯದಿಂದ ಕೊನೆಯ ಅಧ್ಯಾಯಕ್ಕೆ ಬರುವಷ್ಟರಲ್ಲಿ ನೂರಾ ಒಂದು ಜನ ಧರ್ಮರು ಬೆಳೆದು ದೊಡ್ಡವರಾಗುತ್ತಾರೆ. ಅವರನ್ನೆಲ್ಲ ನಾಡಿನ ವಿವಿಧ ಭಾಗಗಳಿಗೆ ಒಡೆತನ/ನಾಡಗೌಡಕಿ ಮಾಡಲು ನೇಮಿಸಲಾಗುತ್ತದೆ. ಬೇರೆ ಬೇರೆ ಭಾಗಗಳಿಗೆ ಹೋದ ನೂರಾ ಒಂದು ಧರ್ಮರು ಭಕ್ತರ ಮನಸ್ಸನ್ನು ಗೆಲ್ಲುತ್ತ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತ ಹೋಗುವುದನ್ನು ಕಾಣುತ್ತೇವೆ.

ಇದನ್ನು ಲೇಖಕರು ಸಂಪುಟ-ಒಂದು ಎಂದು ಕರೆದಿದ್ದಾರೆ. ಯಾಕೆಂದರೆ ಈ ಪರಂಪರೆಯಲ್ಲಿ ಸಾವಿರದಾ ಏಳುನೂರ ಶರಣರು ಇದ್ದಾರೆ ಎಂದು ಹೇಳಲಾಗುತ್ತದೆ. ಅವರ ಕುರಿತು ಸಂಪುಟ-ಎರಡರಲ್ಲಿ ಬರೆಯುವ ಯೋಚನೆ/ಯೋಜನೆ ಇದ್ದಂತೆ ತೋರುತ್ತದೆ. ರೇವಣಸಿದ್ಧಪ್ಪ ಬಸವಣ್ಣಪ್ಪ ದೊಡ್ಡಮನಿ ಗುರೂಜಿ ಹಾಗೂ ಮದಗೊಂಡ ಧೋಂಡಪ್ಪ ಒಡೆಯರ ಅವರ ನಿಧನದಿಂದಾಗಿ ಆ ಕಾರ್ಯ ಸಧ್ಯಕ್ಕೆ ಕೈಗೂಡುವ ಯಾವುದೇ ಲಕ್ಷಣಗಳಿಲ್ಲ.

ಒಟ್ಟು ಈ ಕಥಾನಕವನ್ನು ಗಮನಿಸಿದರೆ ಪಾರಂಪರಿಕ ಹಾಲುಮತ ಪುರಾಣ ಕಥನಗಳಿಗಿಂತ ಭಿನ್ನವಾದ ಧಾರೆಯೊಂದನ್ನು ರೂಪಿಸಿಕೊಳ್ಳಲು ಈ ಗ್ರಂಥ ಪ್ರಯತ್ನಿಸುತ್ತಿರುವುದು ಗೋಚರಿಸುತ್ತದೆ. ಮುದ್ದವ್ವ-ಮುದ್ದಗೊಂಡ, ಆದಿಗೊಂಡ, ಪದುಮಗೊಂಡ, ಬೀರಪ್ಪ ಮಾಳಪ್ಪ, ರೇವಣಸಿದ್ಧ, ಮಂಕಸಿದ್ಧ, ಶಾಂತಮುತ್ತ್ಯ ಯಾರೂ ಈ ಕಥನದಲ್ಲಿ ಸುಳಿಯುವುದಿಲ್ಲ.

ಈ ಕೃತಿಯ ರಚನೆಯ ಹಿಂದೆ ಅಮೋಘಸಿದ್ಧನನ್ನು ಹಾಲುಮತದ ನೆಲೆಯಿಂದ ಎತ್ತಿ ಸರ್ವ ಸಮುದಾಯದ ನೆಲೆಗೆ ತಂದು ನಿಲ್ಲಿಸುವ ಪ್ರಯತ್ನ ನಡೆದಿರುವುದು ಗೋಚರಿಸುತ್ತದೆ. ವಿಶಿಷ್ಟ ಸಮುದಾಯದ ನಾಯಕನೊಬ್ಬ ಕಾಲಾಂತರದಲ್ಲಿ ಸರ್ವಸಮುದಾಯದವರಿಂದ ಪೂಜೆಗೊಳ್ಳುವುದು ಸಾಮಾನ್ಯ ಸಂಗತಿ. ಸಧ್ಯದ ಸ್ಥಿತಿಯಲ್ಲಿ ಅಮೋಘಸಿದ್ಧನಿಗೆ ಸರ್ವ ಸಮುದಾಯದಲ್ಲಿ ಭಕ್ತರಿದ್ದಾರೆ. ಸಧ್ಯದ ಸ್ಥಿತಿಗೆ ಅಮೋಘಸಿದ್ಧನನ್ನು ಸಮಕಾಲೀನಗೊಳಿಸುವ ಕೆಲಸ ಇಲ್ಲಿ ನಡೆದಿದೆ.

ಹಾಲುಮತ ಸಂಬಂಧಿ ಅನೇಕ ಪುರಾಣ ಕಥನಗಳು ಉಲ್ಲೇಖಿಸುವ ಮಾಳಿಂಗರಾಯ ಹಾಗೂ ಅಮೋಘಸಿದ್ಧನ ನಡುವೆ ನಡೆಯಿತೆನ್ನಲಾದ ಘಟನೆಯನ್ನು ಪ್ರಸ್ತುತ ಕೃತಿ ಉಲ್ಲೇಖಿಸದೇ ಹೋಗಿದೆ. ಹಾಗಾಗುವುದಕ್ಕೆ ಎರಡು ಕಾರಣಗಳಿರಬಹುದು. ಒಂದು- ಅವರು ಕ್ಷೇತ್ರಕಾರ್ಯ ಮಾಡುವಾಗ ಈ ಘಟನೆಯ ವಿವರ ಅವರ ಗಮನಕ್ಕೆ ಬರದೇ ಹೋಗಿರಬಹುದು. ಎರಡು- ಈ ಘಟನೆಯ ವಿವರ ಅವರ ಗಮನಕ್ಕೆ ಬಂದರೂ ಅದನ್ನು ತನ್ನ ನಾಯಕನ ಸೋಲಿನ ಕಥನವೆಂದು ಭಾವಿಸಿ ಇಲ್ಲಿ ಉಲ್ಲೇಖಿಸದೇ ಹೋಗಿರಬಹುದು. ಎರಡನೆಯ ಕಾರಣವೇ ಇಲ್ಲಿ ಕೆಲಸ ಮಾಡಿರುವ ಸಾಧ್ಯತೆ ಬಹಳವಿದೆ.

೧.೫.೯ ಐತಿಹ್ಯಗಳು

ಪುರಾಣ ಕಥನಗಳು (myths) ಕೇಳುಗನ ಮೇಲೆ ಪ್ರಭಾವ ಬೀರುವುದನ್ನು ಯಾವ ಹಂತದಲ್ಲಿ ನಿಲ್ಲಿಸುತ್ತವೆಯೋ ಆ ಬಿಂದುವಿನಿಂದ ಐತಿಹ್ಯಗಳು (legends) ಪ್ರಭಾವ ಬೀರಲು ಪ್ರಾರಂಭಿಸುತ್ತವೆ. ಅಮೋಘಸಿದ್ಧ ಏಳು ಯುಗಗಳವರೆಗೆ ಕೈಲಾಸದಲ್ಲಿ ತಪಸ್ಸನ್ನು ಆಚರಿಸಿ, ಶಿವನಿಂದ ವರ ಪಡೆದು ಭೂಮಿಗೆ ಬರುವವರೆಗಿನ ಘಟನೆಗಳು ಪೂರ್ಣಪ್ರಮಾಣದ ಪುರಾಣ ಕತೆಗಳಾಗಿವೆ. ಅರಕೇರಿ ಸಮೀಪದ ಮುಮ್ಮಟಗುಡ್ಡದಲ್ಲಿ ನೆಲೆನಿಂತು ಮರ್ತ್ಯದ ಸ್ಪರ್ಶ ಮಾಡಿದ ಕೂಡಲೇ ಐತಿಹ್ಯಗಳು ಪ್ರಾರಂಭವಾಗುತ್ತವೆ. Timothy R. Tangherilini ಅವರು ಐತಿಹ್ಯವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ.

[illegible]

"Legend, typically, is short, episodic, traditional, highly ecotypified, historicised narrative perofrmed in a conversational mode reflecting on a psychological level a symbolic representation of folk belief and collective experiences and serving as a reaffirming of commonly held values of the group to whose tradition it belongs."[೧೮]

ಅಮೋಘಸಿದ್ಧನ ಪರಿವಾರದವರ ಕುರಿತು ಹಲವಾರು ಐತಿಹ್ಯಗಳು ನಮಗೆ ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಅಮೋಘಸಿದ್ಧ ಶ್ರೀಶೈಲಕ್ಕೆ ಹೋಗಿ ಅಲ್ಲಿ ಕಂಬಳಿ ಗದ್ದುಗೆ ಹಾಕಿ ತಪಸ್ಸು ಮಾಡಿದ ಕಾರಣದಿಂದ ಅಲ್ಲಿ ಕಂಬಳಿ(ಕಮರಿ)ಮಠ ಸಿದ್ಧವಾಯಿತು. ಅಮೋಘಸಿದ್ಧನ ಮಗ ಉಂಬಳ್ಯಾನ ಹಟ್ಟಿ (ಉಮರಜ) ಸಮೀಪದಲ್ಲಿ ಕಿಲಾರಿಗಳನ್ನು ಕಾಯುತ್ತಿದ್ದಾಗ ಅಲ್ಲಿನ ಜನರನ್ನು ಕಾಡುತ್ತಿದ್ದ ಮಹಾಸರ್ಪವನ್ನು ಕೊಂದು ಎತ್ತಿ ಒಗೆದಾಗ 'ನಾಗಮಡು' ನಿರ್ಮಾಣವಾಯಿತು. ಅಮೋಘಸಿದ್ಧನ ವರವಿನ ಮಗ ಅವಧುಸಿದ್ಧ ಈ ವರ್ಷ ಮಳೆ ಬರುವುದೇ ಇಲ್ಲ ಎಂದು ಹೇಳಿದಾಗ ಅವನ ತಮ್ಮನ ಮಗನಾದ ಓಗೆಣ್ಣಮುತ್ತ್ಯಾ ಕ್ಷಣಾರ್ಧದಲ್ಲಿಯೇ ಮಳೆ ಬರಿಸುತ್ತಾನೆ. ಅವಧುಸಿದ್ಧ ಓಗೆಣ್ಣ ಮುತ್ತ್ಯಾನಿಗೆ ಬೆನ್ನಲ್ಲಿ ಬೇತಾಳ ಹುಣ್ಣುಹುಟ್ಟುವಂತೆ ಮಾಡುತ್ತಾನೆ. ಬೇತಾಳ ಹುಣ್ಣನ್ನು ಮಾಯಿಸಿಕೊಳ್ಳುವಲ್ಲಿ ಸಹಕರಿಸಿದ ಹಡಪದ ನಿಂಬೆಣ್ಣನ ಕಳೆದುಹೋದ ಎಮ್ಮೆಗಳು ದೊರೆಯುವಂತೆ ಮಾಡುತ್ತಾನೆ. ಈ ವಿಷಯ ಯಾರಿಗೂ ಹೇಳಬಾರದು ಎಂದು ನಿಂಬೆಣ್ಣನಿಗೆ ಹೇಳಿದ್ದರೂ ಅವನು ಕುತೂಹಲ ತಡೆಯದೆ ಜನರಿಗೆ ಹೇಳಿಬಿಡುತ್ತಾನೆ. ಆಗ ಅವನ ಎಮ್ಮೆಗಳು ಕಲ್ಲಾಗಿ ಹೋಗುವಂತೆ ಓಗೆಣ್ಣ ಮುತ್ತ್ಯಾ ಮಾಡುತ್ತಾನೆ. ಅದರ ದ್ಯೋತಕವೆನ್ನುವಂತೆ ಹತ್ತೂರಿನ ಸಮೀಪದ ಅಡವಿಯಲ್ಲಿ ಬೇರೆ ಬೇರೆ ಗಾತ್ರದ ಕಲ್ಲುಗಳು ಒಂದೆಡೆ ಇಂದಿಗೂ ಬಿದ್ದಿರುವುದನ್ನು ತೋರಿಸುತ್ತಾರೆ.

ಅಮೋಘಸಿದ್ಧನ ಕೊನೆಯ ಮಗ ಕನ್ನಮುತ್ತ್ಯಾ. ಅವನ ಐದನೆಯ ಮಗ ಜ್ಯೋತಿ ಲಕ್ಕಪ್ಪ ಒಡೆಯ. ಉಮದಿಯಲ್ಲಿದ್ದ ಅವನಿಗೆ ಸ್ಥಳೀಯ ರಾವಳಸಿದ್ಧನೆಂಬುವ ಪುಢಾರಿ ಕಿರುಕುಳ ಕೊಡಲು ಪ್ರಾರಂಭಿಸುತ್ತಾನೆ. ವಿಷಯ ತಿಳಿದ ವೀರಮಲಕಾರಿಸಿದ್ಧ ಸಹೋದರನ ಸಹಾಯಕ್ಕೆ ಉಮದಿಗೆ ಬರುತ್ತಾನೆ. ಮಲಕಾರಿಸಿದ್ಧನಿಗೆ ಅಂಜಿ ಊರ ಗುಡಿಯಲ್ಲಿ ಅಡಗಿಕುಳಿತ ರಾವಳಸಿದ್ಧ ಗುಡಿಯ ಗೋಪುರ ಹಾರೊಡೆದು ಪರಾರಿಯಾಗುತ್ತಾನೆ. ಉಮದಿಯಲ್ಲಿ ಕಿಂಡಿಯುಳ್ಳ ಗೋಪುರದ ಗುಡಿ ಇಂದಿಗೂ ನೋಡಲು ಸಿಗುತ್ತದೆ.

ಕನ್ನಮುತ್ತ್ಯಾನ ಕೊನೆಯ ಮಗನ ಹೆಸರು ಬ್ರಹ್ಮಒಡೆಯ. ಅವನ ಮನಗ ಹೆಸರು ಮಲ್ಲಾ ಒಡೆಯ. ಈ ಮಲ್ಲಾ ಒಡೆಯ ಸರಕೊಳೂರಗಿ ಗ್ರಾಮದ ಗೌಡನಿಗೆ ಸಂತಾನ ಫಲ ನೀಡುತ್ತಾನೆ. ಗೌಡನಿಗೆ ಹುಟ್ಟುವ ಮಗಳನ್ನು ತನಗೇ ಕೊಟ್ಟು ಮದುವೆ ಮಾಡಿಸಬೇಕೆಂದು ಕರಾರು ಹಾಕುತ್ತಾನೆ. ಗೌಡ ಕರಾರನ್ನು ಮರೆಯುತ್ತಾನೆ. ಮಲ್ಲಾ ಒಡೆಯ ಗೌಪ್ಯವಾಗಿ ಅವಳನ್ನು ಮದುವೆಯಾಗುತ್ತಾನೆ. ಅವಳು ಗರ್ಭಧರಿಸಿ ಒಂದು ವಿಭೂತಿ ಉಂಡೆಯನ್ನು ಹೆರುತ್ತಾಳಂತೆ. ಆ ವಿಭೂತಿ ಉಂಡಿ ಇಂದಿಗೂ ಕಲ್ಲೂರಿನ ಕುರುಬರ ಮನೆಯಲ್ಲಿ ನೋಡಲು ದೊರೆಯುತ್ತದೆ.

೧.೬ ಈವರೆಗಿನ ಅಧ್ಯಯನ

ರೇವಣ'ಸಿದ್ಧ', 'ಸಿದ್ಧ'ರಾಮರಿಗೆ ಹೋಲಿಸಿದರೆ ಅಮೋಘ'ಸಿದ್ಧ'ನ ಕುರಿತು ನಡೆದ ಅಧ್ಯಯನ ಅತ್ಯಂತ ಕಡಿಮೆ ಪ್ರಮಾಣದ್ದು ಎನ್ನದೇ ವಿಧಿಯಿಲ್ಲ. ಈತ ಶಿಷ್ಟ ಕವಿಗಳಿಂದ ಅವಗಣನೆಗೆ ಒಳಗಾಗಿರುವುದು, ಶಾಸನಗಳಲ್ಲೆಲ್ಲಾ ಉಲ್ಲೇಖಿತನಾಗದೇ ಇರುವುದು, ಈ ಪರಂಪರೆಯ ಕುರಿತು ಇದ್ದಿರುವ ಮೌಖಿಕ ಪರಂಪರೆಯ ಆಕರಗಳ ಸಂಗ್ರಹ ಹಾಗೂ ಪ್ರಕಟಣೆ ಕಾಯಕ ನಡೆಯದೇ ಇರುವುದು ಇದಕ್ಕೆ ಕಾರಣಗಳಾಗಿರಬಹುದು. ಸಂಶೋಧನೆಯ ಮಾರ್ಗೀಯ ಪರಂಪರೆಯಲಿ subaltern ವರ್ಗಕ್ಕೆ ಸೇರಿದ ಇಂಥ ಧಾರೆಗಳು ಸಂಶೋಧಕರಿಗೆ ಗೋಚರಿಸದೇ ಹೋದುದು ವಿಷಾದದ ಸಂಗತಿಯೂ ಹೌದು, ಸಂಶೋಧನಾ ಜಗತ್ತಿನ ವಾಸ್ತವವೂ ಹೌದು.

ಈಪರಂಪರೆಯ ಕುರಿತು ಅಲ್ಲಲ್ಲಿ ನಡೆದ ಸಣ್ಣ ಸಣ್ಣ ಪ್ರಯತ್ನಗಳನ್ನು ಇಲ್ಲಿ ಚರ್ಚಿಸಲಾಗಿದೆ.

೧.೬.೧ ಕುರುಬರ ಚರಿತ್ರೆ

ವಿ.ಆರ್.ಹನುಮಂತಯ್ಯ ಅವರು ರಚಿಸಿದ ಸಂಶೋಧನಾತ್ಮಕ ಗ್ರಂಥವಿದು. ಈ ಗ್ರಂಥದಲ್ಲಿ ಅವರು ವಚನಕಾರ ಅಮುಗಿದೇವನನ್ನು ಅಮೋಘಸಿದ್ಧನೊಂದಿಗೆ ಸಮೀಕರಿಸಿ ಎರಡು ಕಡೆಗೆ ಉಲ್ಲೇಖಿಸಿದ್ದಾರೆ. ದೇವಗಿರಿಯ ಯಾದವರ ಬಗೆಗೆ ಬರೆಯುತ್ತ, ಅವರು ಮೂಲತಃ ಕನ್ನಡಿಗರು ಎಂದು ಹೇಳುತ್ತ ಅವರ ಶಾಸನವೊಂದರಲ್ಲಿ ಅಮುಗಿದೇವನ ಹೆಸರು ಬಳಕೆಯಾಗಿದೆ ಎಂದಿದ್ದಾರೆ.[೧೯]

ಇದೇ ಗ್ರಂಥದ ಇನ್ನೊಂದು ಕಡೆಯಲ್ಲಿ ಹೀಗೆ ಹೇಳಿದ್ದಾರೆ:

> "ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಅಮುಗಿದೇವಯ್ಯನೂ ಒಬ್ಬ. ಕುರುಬ ಜನಾಂಗದವನು. ಇವನಿಗೆ ಅಮೋಘಸಿದ್ಧ, ಅಮಾಕಸಿದ್ಧ, ಅಮುಗಿದೇವರಸ, ಅಮ್ಮಿದೇವ ಎಂಬೆಲ್ಲ ಹೆಸರುಗಳುಂಟು., ಇವನ ಹೆಂಡತಿಯ ಹೆಸರು ರಾಯಮ್ಮ, ಈಕೆಯೂ ಒಬ್ಬ ವಚನಕಾರ್ತಿ. ಇವನು ದೇವಗಿರಿಯಾದವ ಸಿಂಘಣನಿಂದ ರಾಜಪೂಜಿತನಾದವನು. ಪುಳುಜೆಯಲ್ಲಿ (ಮಹಾರಾಷ್ಟ್ರದ ಫಂಡರಪುರಕ್ಕೆ ೧೮ ಮೈಲಿಗಳ ದೂರ) ಇವನನ್ನು ಕುರಿತ ಶಾಸನವೊಂದಿದೆ. ಅದರಲ್ಲಿ ಸಿದ್ಧ ಕುಲಾನ್ವಯಾರ್ಣವ ಪ್ರವರ್ಧನ ಸುಧಾಕರ (ಸಿದ್ಧ ಕುಲವೆಂಬ ಸಮುದ್ರವನ್ನು ಉಕ್ಕಿಸುವ ಚಂದ್ರ) ಎಂದು ಹೇಳಲಾಗಿದೆ. ಇಷ್ಟೇ ಅಲ್ಲದೆ ದೂರಶ್ರವಣ, ದೂರದರ್ಶನ, ಜ್ಞಾನಸಂಪನ್ನ ಅಣಿಮಾದ್ಯಷ್ಟ ಗುಣಪರಿಪೂರ್ಣ ಎಂದು ಗುಣಗಾನ ಮಾಡಲಾಗಿದೆ."[೨೦]

ಇದೇ ಗ್ರಂಥದ ಮುಂದಿನ ಭಾಗದಲ್ಲಿ ಕರ್ನಾಟಕದಲ್ಲಿರುವ ಅಮುಗಿದೇವ/ಅಮೋಘಸಿದ್ಧನ ಭೌಗೋಳಿಕ ವ್ಯಾಪ್ತಿಯ ಪರಿಚಯ ನೀಡುತ್ತಾರೆ. ಅವನ ಹೆಸರಿನಲ್ಲಿ ಶಿರಹಟ್ಟಿ ಸಮೀಪದ ಹುಲ್ಲೂರಿನಲ್ಲಿ ಅಮೋಗಿದೇವರ

[illegible]

[illegible]

[illegible]

[illegible]

[illegible]

ಹೆಸರಿನಲ್ಲಿ ಶಾಖಾ ಮಠವೊಂದು ಇರುವುದಾಗಿ ತಿಳಿಸುತ್ತಾರೆ. “ವಿಜಾಪುರ ಜಿಲ್ಲೆಯಲ್ಲಿ ಅಮೋಘಸಿದ್ಧರು ಅಥವಾ ಅಮಾಕ್ ಸಿದ್ಧರು ಅಧಿಕವಾಗಿರುವಂತೆಯೇ ದೇವಸ್ಥಾನಗಳೂ ಇವೆ. ಅರಕೇರಿ, ಮದಭಾವಿ, ಮುಧೋಳಗಳಲ್ಲಿ ಇವನ ಹೆಸರಿನ ದೇವಾಲಯಗಳಿರುವುದಾಗಿ ತಿಳಿದು ಬರುತ್ತದೆ”[೨೧] ಎಂದು ಬರೆದಿದ್ದಾರೆ.

ಇದೇ ಭಾಗದಲ್ಲಿ ಶಿವಲಿಂಗ ಕವಿ ರಚಿಸಿರುವ “ಅಮುಗಿದೇವಯ್ಯಗಳ ಸಾಂಗತ್ಯ”ದಲ್ಲಿ ಸೊನ್ನಲಿಗೆ ಸಿದ್ಧರಾಮ ಹಾಗೂ ಅಮುಗಿದೇವರ ಪ್ರಸಂಗವನ್ನು ಉಲ್ಲೇಖಿಸುತ್ತಾರೆ. ಅದಾದ ನಂತರ ಕಲ್ಯಾಣದಲ್ಲಿದ್ದ ಅಮುಗಿದೇವ ಕಲ್ಯಾಣ ತೊರೆದು ಪುಳುಜೆಗೆ ಬರಲು ಕಲ್ಯಾಣದಲ್ಲಿ ನಡೆದ ವಿಪ್ಲವದಲ್ಲಿ ಬಿಜ್ಜಳನ ವಧೆಯಾದುದೇ ಕಾರಣವೆಂದೂ ಅಮುಗಿದೇವ ಇಲ್ಲಿಯೇ ಶಿವೈಕ್ಯವಾಗಿರಬಹುದೆಂದು ಬರೆಯುತ್ತಾರೆ. ಪುಳುಜೆಯಲ್ಲಿ ಸಿದ್ಧಸೋಮನಾಥನ ದೇವಾಲಯಕ್ಕೂ ಅವನ ವಚನಾಂಕಿತ ಸಿದ್ಧಸೋಮನಾಥಕ್ಕೂ ಸಂಬಂಧ ಕಲ್ಪಿಸಿ ಬರೆಯುತ್ತಾರೆ.

೧.೬.೨ ಅಮುಗಿದೇವಯ್ಯಗಳ ಸಾಂಗತ್ಯ-ಪ್ರಸ್ತಾವನೆ

ಡಾ. ಹೆಚ್.ತಿಪ್ಪೇರುದ್ರಸ್ವಾಮಿ ಅವರು ಶಿವಲಿಂಗಕವಿಯ ‘ಅಮುಗಿದೇವಯ್ಯಗಳ ಸಾಂಗತ್ಯ’ವನ್ನು ಅಚ್ಚುಕಟ್ಟಾಗಿ ಸಂಪಾದಿಸಿ, ಐವತ್ತೆಂಟು ಪುಟದ ಪ್ರಸ್ತಾವನೆ ಬರೆದಿದ್ದಾರೆ. ಈ ಪ್ರಸ್ತಾವನೆಯ ‘ಐತಿಹಾಸಿಕ ಅಮುಗಿದೇವ’ ಎನ್ನುವ ಭಾಗದಲ್ಲಿ ಅಮುಗಿದೇವನ ಚಾರಿತ್ರಿಕ ಅಂಶಗಳ ಬಗೆಗೆ ಚರ್ಚಿಸಿದ್ದಾರೆ. ‘ಶಿವದಾಸ ಗೀತಾಂಜಲಿ’ ಕೃತಿಯ ಪೀಠಿಕೆಯಲ್ಲಿ ಡಾ. ಎಲ್.ಬಸವರಾಜ ಅವರು ಮೂವರು ಅಮುಗಿದೇವಯ್ಯಗಳ ಕುರಿತು ಬರೆದುದನ್ನು ಅಲ್ಲಗಳೆದು ಇಬ್ಬರೇ ಅಮುಗಿದೇವರು ಎಂದು ಹೇಳುತ್ತಾರೆ. ಕಮಳೇಶ್ವರ ಲಿಂಗ ವಚನಾಂಕಿತದವನು ಕನ್ನಡಿ ಕಾಯಕದ ಅಮುಗಿದೇವ. ಸಿದ್ಧಸೋಮನಾಥ ಅಂಕಿತದ ನೇಯ್ಗೆ ಕಾಯಕದ ಅಮುಗಿದೇವ ಹಾಗೂ ಅಮುಗೇಶ್ವರಲಿಂಗ ವಚನಾಂಕಿತದವನು ಅಮುಗಿದೇವನಲ್ಲ ಅವನ ಹೆಂಡತಿ ರಾಯಮ್ಮನದು ಎಂದು ವಾದಿಸಿದ್ದಾರೆ. ನೇಯ್ಗೆ ಕಾಯಕದ ಅಮುಗಿದೇವನೇ ಪುಳುಜೆ ಶಾಸನದಲ್ಲಿ ಉಲ್ಲೇಖಿತನಾದವನು. ಹಾಲುಮತದವರ ಮೇಲೆ ಪ್ರಭಾವ ಬೀರಿ ಅವರನ್ನು ಲಿಂಗವಂತರನ್ನಾಗಿ ಮಾಡಿದ ಎಂದು ಹೇಳಿದ್ದಾರೆ.

ಇಲ್ಲಿ ಅಮುಗಿದೇವನೇ ಅಮೋಘಸಿದ್ಧ ಎಂದು ಎಲ್ಲೂ ನೇರವಾಗಿ ಪ್ರಸ್ತಾಪ ಮಾಡಿಲ್ಲವಾದರೂ ವಿಜಾಪುರದ ಸುತ್ತಮುತ್ತ (ಅಂದರೆ ಅರಕೇರಿ, ಮಕಣಪುರ ಇತ್ಯಾದಿ) ಜತ್ತ (ಅಂದರೆ ಭೀವರಗಿ, ಬಬಲಾದ, ಸುಸಲಾದ, ಉಮದಿ ಇತ್ಯಾದಿ) ಮುಧೋಳ (ಮಳಲಿ, ಜನಖಂಡಿ, ಕುಂಚನೂರ) ಇತ್ಯಾದಿಗಳಲ್ಲಿ ಅಮುಗಿದೇವನ ಹೆಸರಿನಲ್ಲಿ ಗುಡಿಗಳಿವೆ ಎಂದಿದ್ದಾರೆ. ಆ ಮೂಲಕ ಅಮುಗಿದೇವ ಹಾಗೂ ಅಮೋಘಸಿದ್ಧ ಇಬ್ಬರೂ ಒಬ್ಬರೆ ಎಂಬುದನ್ನು ಸ್ವೀಕರಿಸಿದ್ದಾರೆ.

ಆದರೆ ಇಲ್ಲಿರುವ ಗುಡಿಗಳು ಅಮುಗಿದೇವನ ಹೆಸರಿನಲ್ಲಿ ಇಲ್ಲ. ಅಮ್ಮೋಗಿಸಿದ್ಧನ/ಅಮ್ಮೋಘಸಿದ್ಧನ ಹೆಸರಿನಲ್ಲಿ, ಅವನ ಮಕ್ಕಳ ಹೆಸರಿನಲ್ಲಿ, ಸೊಸೆಯ ಹೆಸರಿನಲ್ಲಿ ಗುಡಿಗಳಿವೆ. ಹೀಗಾಗಿ ಅವು ಅಮುಗಿದೇವರ ಗುಡಿಗಳಲ್ಲ ಅಮ್ಮೋಗಿಸಿದ್ಧನ ಗುಡಿಗಳಾಗಿವೆ.

೧.೬.೩ ಕುರುಬರ ಹೆಜ್ಜೆಗಳು: ಒಂದು ಅಧ್ಯಯನ

ಈ ಕೃತಿಯ ಕರ್ತೃ ಚಂದ್ರಕಾಂತ ಬಿಜ್ಜರಗಿ ಅವರು. ನಾಲ್ಕುನೂರಾ ಎಂಟು ಪುಟಗಳ ವಿಸ್ತಾರದಲ್ಲಿ ಕುರುಬರ ಚಾರಿತ್ರಿಕ ನಡೆ, ಅವರ ಆದಿದೇವತೆಗಳು, ಕುಲಗೋತ್ರ ಬೆಡಗುಗಳು, ಕುರುಬರ ಕವಲೊಡೆದ ಜಾತಿಗಳು ಇತ್ಯಾದಿ ವಿಷಯಗಳ ಬಗೆಗೆ ಚರ್ಚಿಸಿದ್ದಾರೆ. ಈ ಕೃತಿಯ ಏಳನೆಯ ಅಧ್ಯಾಯವನ್ನು 'ಪ್ರಸಿದ್ಧ ಕುರುಬ ಕುಲಪುರುಷರು' ಎಂದು ಹೆಸರಿಸಿದ್ದಾರೆ. ಅದರಲ್ಲಿ ಬಸವಣ್ಣ, ಶಿವಾಜಿ, ರೇವಣಸಿದ್ಧ, ಸಿದ್ಧರಾಮ, ಅಮೋಘಸಿದ್ಧರ ಕುರಿತು ವಾದ-ವಿವಾದಗಳನ್ನು ಆಹ್ವಾನಿಸುವ ಚರ್ಚೆಯನ್ನು ಮಾಡಿದ್ದಾರೆ.

ಡಾ. ಎಲ್.ಬಸವರಾಜ, ಡಾ. ಹೆಚ್.ತಿಪ್ಪೇರುದ್ರಸ್ವಾಮಿ ಅವರು ಅಮುಗಿದೇವ ಹಾಗೂ ಅಮೋಘಸಿದ್ಧ ಇಬ್ಬರೂ ಅಭಿನ್ನರು ಎಂದು ಸಾಧಿಸಲು ನಡೆಯಿಸಿದ ಪ್ರಯತ್ನದ ಮುಂದುವರಿಕೆಯಾಗಿ ಚಂದ್ರಕಾಂತ ಬಿಜ್ಜರಗಿ ಅವರು ಈ ಅಧ್ಯಾಯದ ಶ್ರೀ ಅಮೋಘಸಿದ್ಧರು ಎನ್ನುವ ಭಾಗದಲ್ಲಿ ಚರ್ಚೆಯನ್ನು ಬೆಳೆಯಿಸಿದ್ದಾರೆ. ಅವರ ವಾದದ ಸರಣಿಯನ್ನು ಹೀಗೆ ಗುರುತಿಸಬಹುದು.

ಪುಳಂಜದ ಸಿದ್ಧಸೋಮನಾಥನನ್ನು ತನ್ನ ಇಷ್ಟದೇವತೆಯನ್ನಾಗಿಸಿಕೊಂಡಿರುವ ಕಾರಣದಿಂದ ಅವನು 'ಸಿದ್ಧ' ಪಂಥದ ಅನುಯಾಯಿ. ಹೀಗಾಗಿ ಅವನ ಹೆಸರು ಪ್ರಾರಂಭದಲ್ಲಿ ಅಮೋಘಸಿದ್ಧನೆಂದಿರಬೇಕು. ಅವನು ನಂತರದಲ್ಲಿ ವೀರಶೈವಧರ್ಮ ಪ್ರಚಾರದಲ್ಲಿ ತೊಡಗಿದನಾದ್ದರಿಂದ, ವಚನಗಳನ್ನು ರಚಿಸಿದನಾದ್ದರಿಂದ ಅವನು ತನ್ನ ಹೆಸರನ್ನು ಅಮುಗಿದೇವಯ್ಯ ಅಥವಾ ಅಮುಗಿದೇವ ಎಂದು ಬದಲಾಯಿಸಿಕೊಂಡಿರಬಹುದು ಎನ್ನುತ್ತಾರೆ.

ಅಮೋಘಸಿದ್ಧನ ಗುರು ಮಕಣಾಪುರದ ಸೋಮಲಿಂಗ. ಅಮುಗಿ ದೇವನ ಇಷ್ಟದೈವ ಸಿದ್ಧ ಸೋಮನಾಥ ದೇವ. ಅಮೋಘಸಿದ್ಧನಿಗೆ ಸೋಮಲಿಂಗ ಗುರುವೂ ತಂದೆಯೂ ಹೌದು ಎಂದು ಹೇಳುತ್ತಾ ಅವರಿಬ್ಬರೂ ಅಭಿನ್ನರು ಎನ್ನುತ್ತಾರೆ. ಅವನ ತಂದೆ ಸೋಮಲಿಂಗ ಹಾಗೂ ತಾಯಿ ಗೌರಾದೇವಿ ಎನ್ನುವುದಕ್ಕೆ ತಮ್ಮಲ್ಲಿ ಲಕ್ಷ್ಮಣ ಮಲ್ಲಪ್ಪ ಹೆಳವರ (ಪರಮಾನಂದವಾಡಿ ತಾ. ರಾಯಬಾಗ) ಅವರಿಂದ ಪಡೆದ ದಾಖಲೆಗಳಿವೆ ಎಂದು ಹೇಳಿದ್ದಾರೆ.[೨೩]

ಪುಳುಂಜೆ ಶಾಸನದಲ್ಲಿ ಅಮುಗಿದೇವನನ್ನು ಸಿದ್ಧ ಕುಲಾರ್ಣವ ಎಂದು ಕರೆದಿರುವುದರಿಂದಲೂ, ಇವನ ಇಷ್ಟದೇವ ಸಿದ್ಧ ಸೋಮನಾಥ ಎಂದಿರುವುದರಿಂದಲೂ ಅಮುಗಿದೇವನು ಸಿದ್ಧ ಅಮುಗಿದೇವ> ಅಮುಗಿದೇವಸಿದ್ಧ>ಅಮುಗಿಸಿದ್ಧ ಎಂದಾಗಿದೆ ಎಂದು ತರ್ಕಿಸಿದ್ದಾರೆ.[೨೪]

ಪುಳಂಜೆಯಲ್ಲಿರುವ ಸಿದ್ಧಸೋಮನಾಥ ದೇವನ ಕುರಿತು ಆರಾಧನೆ, ಪೂಜಾರಿಕೆ, ಪ್ರಸಾದ (ಎಡೆ) ಜನರ ನಂಬಿಕೆಗಳ ಆಧಾರದ ಮೇಲೆ ಅವರು ತಮ್ಮ ನಾಲ್ಕನೆಯ ವಾದವನ್ನು ಬೆಳೆಯಿಸಿದ್ದಾರೆ. ಇಲ್ಲಿರುವ ಸೋಮನಾಥನ ಗುಡಿಯ ಪೂಜಾರಿಗಳು ಪಂಚಮಸಾಲಿ ಜಾತಿಗೆ ಸೇರಿದವರು. ಅವರ ಮನೆತನದ ಹೆಸರು

ಮಾಮಾನೆ. ಅಲ್ಲಿಯೇ ಸಮೀಪದಲ್ಲಿ ಇನ್ನೊಂದು ಗುಡಿಯಿದೆ. ಅದು ಸೋಮರಾಯನದು. ಅದರ ಪೂಜಾರಿಗಳು ಕುರುಬರು. ಸೋಮನಾಥನ ಗುಡಿಯ ಪೂಜಾರಿಗಳು ಮಾಮಾನೆ ಅವರು ಅನ್ನುವ ಎಳೆಯನ್ನು ಹಿಡಿದು ಹೀಗೆ ಚರ್ಚೆ ಬೆಳೆಯಿಸುತ್ತಾರೆ. 'ಮಾಮಾನೆ' ಅಂದರೆ ಮಹಾಮಾನೆ ಎಂದರ್ಥ. 'ಮಾನೆ' ಎನ್ನುವ ಬೆಡಗು ಕುರುಬರಲ್ಲಿದೆ. ಆದ್ದರಿಂದ ಮಾಮಾನೆ ಅಂದರೆ ಹಿರೇ ಕುರುಬರು. 'ಸೋಮನಾಥನ' ಗುಡಿಯ ಪೂಜಾರಿ ಮಾಮಾನೆ ಹಿರೇ ಕುರುಬರಾದರೆ, 'ಸೋಮರಾಯನ' ಗುಡಿಯ ಪೂಜಾರಿ ಕುರುಬರು. ಅದೂ ಅಲ್ಲದೆ ಮಕಣಾಪುರದಲ್ಲಿರುವ ಸೋಮಲಿಂಗನ ಗುಡಿಯ ಪೂಜಾರಿಗಳು ಒಡೆಯರು (ಕುರುಬರ ಗುರುಗಳು) ಹೀಗಾಗಿ ಸೋಮನಾಥನನ್ನು ಇಷ್ಟ ದೈವವನ್ನಾಗಿಸಿಕೊಂಡ ಅಮುಗಿದೇವ ಹಾಗೂ ಸೋಮಲಿಂಗನ ಶಿಷ್ಯನಾದ ಅಮೋಘಸಿದ್ಧ ಇಬ್ಬರೂ ಅಭಿನ್ನರು ಎಂದು ವಾದಿಸುತ್ತಾರೆ.

ಚಂದ್ರಕಾಂತ ಬಿಜ್ಜರಗಿ ಅವರ ಸಂಶೋಧನಾ ಪರಿಶ್ರಮವನ್ನು ಲಭ್ಯ ಆಕರಗಳ ಸಹಾಯದಿಂದ ನಿರ್ಣಯವೊಂದರ ಕಡೆಗೆ ಚಲಿಸುವ ಅವರ ಕ್ರಮವನ್ನು ಮೆಚ್ಚಲೇಬೇಕು. ಆದರೆ ಇಲ್ಲಿ ಹಲವಾರು ಮೂಲಭೂತವಾದ ಪ್ರಶ್ನೆಗಳು ಉತ್ತರ ಕಾಣದೆ ಹಾಗೇ ಉಳಿದುಬಿಟ್ಟಿವೆ.

ಗುರುವಿನ ಹೆಸರಿನ ಸಾಮ್ಯ('ಸೋಮ'ನಾಥ 'ಸೋಮ'ಲಿಂಗ)ದ ಆಧಾರದ ಮೇಲೆ ಅಮುಗಿದೇವ ಹಾಗೂ ಅಮೋಘಸಿದ್ಧ ಇಬ್ಬರೂ ಅಭಿನ್ನರು ಎನ್ನುವ ನಿಲುವಿಗೆ ಬರಲಾಯಿತು, ಸರಿ. ಆದರೆ ಅಮುಗಿದೇವನ ಹೆಂಡತಿ ರಾಯಮ್ಮ ಪ್ರಸಿದ್ಧ ವಚನಕಾರ್ತಿ. ಅಮೋಘಸಿದ್ಧನ ಹೆಂಡತಿ ಪದ್ಮಾವತಿ. ಗಂಡ ಕಳುಹಿಸಿದ ನೇಮದ ಬೆತ್ತದ ಎಡಬದಿಗೆ ಸುಮ್ಮನೆ ಕುಳಿತು ತಾಳಿಕಟ್ಟಿಸಿಕೊಂಡವಳು. ಇವರಿಬ್ಬರನ್ನು ಸಮೀಕರಿಸುವುದು ಹೇಗೆ? ಅಮುಗಿದೇವ/ಅಮೋಘಸಿದ್ಧನಿಗೆ ಇಬ್ಬರು ಹೆಂಡತಿಯರೇ? ಒಬ್ಬಳು ವಚನ ಬರೆದವಳು, ಇನ್ನೊಬ್ಬಳು ಬೆತ್ತದ ಜೊತೆಗೆ ಮದುವೆಯಾಗಿ ಖಾರೀಕ ಭಂಡಾರ ಸೇವಿಸಿ ಐವರು ಮಕ್ಕಳನ್ನು ಹೆತ್ತವಳು.

ಅದೂ ಅಲ್ಲಧೆ ನೇಯ್ಗೆ ಕಾಯಕದ ಅಮುಗಿದೇವನನ್ನು ಪಶುಪಾಲನೆ ಮಾಡುವ ಅಮೋಘಸಿದ್ಧನೊಂದಿಗೆ ಸಮೀಕರಿಸುವುದು ಹೇಗೆ?

ಅಮೋಘಸಿದ್ಧನಿಗೆ ಮೂವರು ಪುಣ್ಯದ ಮಕ್ಕಳು, ನಾಲ್ವರು ವರವಿನ ಮಕ್ಕಳು, ಒಬ್ಬಳು ಹೆಣ್ಣುಮಗಳು. ಅವನಿಗೆ ಇಪ್ಪತ್ತೊಂದು ಮಂದಿ ಮೊಮ್ಮಕ್ಕಳು, ನೂರಾ ಒಂದು ಮಂದಿ ಮರಿಮಕ್ಕಳು. ಅಮುಗಿದೇವನಿಗೆ ಅಂಥ ಯಾವ ಸಂತತಿಯಿದೆ?

ಎಲ್ಲಕ್ಕೂ ಮಿಗಿಲಾಗಿ ಅಮುಗಿದೇವನ ಕಾಲ ಹನ್ನರಡನೆಯ ಶತಮಾನ. ಅಮೋಘಸಿದ್ಧನ ಕಾಲ ಹದಿನಾರನೆಯ ಶತಮಾನ. ನಾಲ್ಕು ನೂರು ವರ್ಷಗಳ ಅಂತರವನ್ನು ತುಂಬುವುದು ಹೇಗೆ?

ಹೀಗಾಗಿ ಇಂಥದೊಂದು ನಿರ್ಣಯಕ್ಕೆ ಬರಬೇಕು: ಅಮುಗಿದೇವನ ಇಷ್ಟದೈವ ಸೋಮ'ನಾಥ' ಅಮೋಘಸಿದ್ಧನ ಗುರು ಸೋಮ'ಲಿಂಗ.' ಸೋಮನಾಥ 'ಸಿದ್ಧ' ಸೋಮನಾಥನೆಂದಾಗಿದ್ದರೆ ಸೋಮಲಿಂಗ

ಕಾಪಾಲಿಕ ಶೈವನಾಗಿದ್ದಾನೆ. (ಈ ಕುರಿತು ಮೂರನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ ನೋಡಿ) ಗುರು ಬೇರೆ ಬೇರೆ, ಕಾಲ ಬೇರೆ ಬೇರೆ, ಹೆಂಡಂದಿರು ಬೇರೆ ಬೇರೆ ಆದ್ದರಿಂದ ಅಮುಗಿದೇವ ಹಾಗೂ ಅಮೋಘಸಿದ್ಧ ಬೇರೆ ಬೇರೆ ಅನ್ನದೇ ವಿಧಿಯಿಲ್ಲ.

೧.೬.೪ ಹೇಳಕೀ ಮಾಡ್ಯಾರ ಒಡೆಯರು-ಪ್ರಸ್ತಾವನೆ

ಇದು ಡಾ. ಎಂ.ಎಂ.ಪಡಶೆಟ್ಟಿ ಅವರು ಸಂಪಾದಿಸಿದ ಹೇಳಿಕೆಗಳ ಸಂಗ್ರಹ. ಬರಗಾಲವನ್ನು ನಿತ್ಯದ ಸಹಜ ಸಂಗತಿ ಎಂಬಂತೆ ಬದುಕನ್ನು ಎದುರಿಸುವ ವಿಜಾಪುರ-ಗುಲಬರ್ಗಾ ಜಿಲ್ಲೆಗಳಲ್ಲಿ ಕಂಡುಬರುವ ಮಳೆ-ಬೆಳೆ ಕುರಿತ ಹೇಳಿಕೆಗಳನ್ನು ಇಲ್ಲಿ ಸಂಗ್ರಹಿಸಿ ಅದಕ್ಕೊಂದು ಸುವ್ಯವಸ್ಥಿತವಾದ ಪ್ರಸ್ತಾವನೆ ಬರೆದಿದ್ದಾರೆ. ಜಾನಪದ ಅಧ್ಯಯನದಲ್ಲಿ ನಡೆದ ಇಂಥದ್ದೊಂದು ಪ್ರಯತ್ನ ಪ್ರಥಮದ್ದು ಎಂದು ಡಾ. ಹಾ.ಮಾ.ನಾಯಕ ಅಭಿಪ್ರಾಯಪಟ್ಟಿದ್ದಾರೆ. ಡಾ. ಎಂ.ಎಂ.ಪಡಶೆಟ್ಟಿ ಅವರು ಜನಪದರಲ್ಲಿ ಮಳೆಯನ್ನು ಹಂಬಲಿಸಿ ನಡೆಯುವ ಹಲವಾರು ಆಚರಣೆಗಳ ಕುರಿತು ವಿವೇಚಿಸುತ್ತ ಗುರ್ಜಿಪೂಜೆ, ದೇವರನ್ನು ಬೀದಿಗೆ ಎಸೆಯುವುದು - ಮುಂತಾದವುಗಳನ್ನು ಉಲ್ಲೇಖಿಸುತ್ತಾರೆ. 'ಹೇಳಿಕೆ' ಮಾಡುವುದು ಕೂಡಾ ಇಂಥ ಒಂದು ಆಚರಣೆ ಎಂದು ಹೇಳುತ್ತಾರೆ. ಹಾಗೂ ಈ ಹೇಳಿಕೆಗಳನ್ನು ಮಾಡುವವರು ಸಾಮಾನ್ಯವಾಗಿ ಕುರುಬರು ಎಂದು ಗುರುತಿಸುತ್ತಾರೆ. ಕುರುಬರು ಆರಾಧಿಸುವ ದೇವರುಗಳ ಜಾತ್ರೆ-ಉತ್ಸವಗಳಲ್ಲಿ ಹೇಳಿಕೆಗಳು ನಡೆಯುತ್ತವೆ ಎಂಬುದನ್ನು ಗುರುತಿಸುತ್ತಾರೆ. ಕುರುಬರು ಆರಾಧಿಸುವ ದೈವಗಳನ್ನು ಹೆಸರಿಸುವ ಸಂದರ್ಭ ಅಮೋಘಸಿದ್ಧನ ಹೆಸರಿನಲ್ಲಿ ನಡೆಯುವ ಜಾತ್ರೆಗಳು ಹಾಗೂ ಆ ಸಂದರ್ಭದ ಹೇಳಿಕೆಗಳನ್ನು ಪ್ರಧಾನವಾಗಿ ಸಂಗ್ರಹಿಸಿ ಪ್ರಸ್ತುತ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಇಂಥ ಹೇಳಿಕೆಗಳು ಹೇಗೆ ರೈತರ ಬದುಕಿನಲ್ಲಿ ಧನಾತ್ಮಕವಾದ ಪರಿಣಾಮ ಬೀರುತ್ತವೆ ಹಾಗೂ ಅಮೋಘಸಿದ್ಧನ ಮಾನವ ಕಾಳಜಿಯನ್ನು ಬಿಂಬಿಸುತ್ತವೆ ಎಂದು ಹೇಳಿದ್ದಾರೆ.

೧.೬.೫ ಸಿದ್ಧ ಪರಂಪರೆಯಲ್ಲಿ ಅಮೋಘಸಿದ್ಧ

ಇದು ಡಾ. ಎಂ.ಎಂ. ಪಡಶೆಟ್ಟಿ ಅವರು ಬರೆದ ಸಂಶೋಧನಾ ಲೇಖನ, 'ಹಾಲಕೆನೆ' (ಸಂ. ಡಾ. ಶ್ರೀರಾಮ ಇಟ್ಟಣ್ಣವರ, ವ್ಹಿಡಿ.ವಸ್ತ್ರದ, ಚನ್ನಪ್ಪ ಕಟ್ಟಿ) ಎನ್ನುವ ಸಂಸ್ಕೃತಿ ಅಧ್ಯಯನ ಕೃತಿಯಲ್ಲಿ ಇದು ಪ್ರಕಟಗೊಂಡಿದೆ. ಪ್ರಸ್ತುತ ಲೇಖನದಲ್ಲಿ ಅಮೋಘಸಿದ್ಧನ ಪ್ರಮುಖ ನೆಲೆ ಅರಕೇರಿಯ ಸುತ್ತ ಇರುವ ಪುರಾಣ ಕತೆಗಳು, ಅಮೋಘಸಿದ್ಧನ ಪುಣ್ಯದ ಮಕ್ಕಳು, ಧರ್ಮದ (ವರವಿನ) ಮಕ್ಕಳು ನಂಬಿಕೆ-ಆಚರಣೆಗಳು, ಅವನ ಪರಂಪರೆಯ ಮೇಲಾದ ಲಿಂಗಾಯತದ ಪ್ರಭಾವ -ಹಲವಾರು ಮಹತ್ವದ ವಿಷಯಗಳ ಕುರಿತು ಕ್ಷೇತ್ರ ಕಾರ್ಯಾಧಾರಿತ ವಿವರಣೆಗಳನ್ನು ನೀಡಿದ್ದಾರೆ.

ಈ ಲೇಖನದ ಮುಂದಿನ ಭಾಗದಲ್ಲಿ ಅಮೋಘಸಿದ್ಧ ಪರಂಪರೆಯು ನಾಥಸಿದ್ಧ, ಬೌದ್ಧಸಿದ್ಧ, ತಮಿಳು ಸಿದ್ಧರಿಗೆ ಋಣಿಯಾಗಿರುವ ಸಾಧ್ಯತೆಯ ಕಡೆಗೆ ಬೆರಳು ತೋರಿಸಿದ್ದಾರೆ. ಲೇಖನದ ಕೊನೆಯ ಭಾಗದಲ್ಲಿ ಈ ಪರಂಪರೆಯು ಸಿದ್ಧಪರಂಪರೆ ಹಾಗೂ ಶರಣಪರಂಪರೆ ಎರಡನ್ನು ತನ್ನಲ್ಲಿ ಗರ್ಭೀಕರಿಸಿಕೊಂಡು ಬೆಳೆದಿದೆ ಎನ್ನುವ ನಿಲುವಿಗೆ ಬಂದಿದ್ದಾರೆ.

ಈ ಲೇಖನದ ಒಂದು ಮಹತ್ವದ ಗುಣವೆಂದರೆ ಪ್ರಧಾನ ಸಂಸ್ಕೃತಿಯ ನೆಲೆಯಲ್ಲಿ ನಿಂತು ಸಿದ್ಧ ಪರಂಪರೆಯ ಅಮೋಘಸಿದ್ಧನನ್ನು ಶರಣ ಪರಂಪರೆಯ ಅಮುಗಿದೇವನೊಂದಿಗೆ ಸಂಬಂಧ ಕಲ್ಪಿಸುವ ಗೋಜಿಗೆ ಹೋಗದೆ ಇರುವುದು. ಈ ಪರಂಪರೆಯಲ್ಲಿರುವ 'ಸಿದ್ಧಿ' ಸಾಮರ್ಥ್ಯದ ಹಿನ್ನೆಲೆಯಲ್ಲಿ ಅವರನ್ನು ಸಿದ್ಧ ಪರಂಪರೆಯಲ್ಲಿಯೇ ಗುರುತಿಸುವ, ವರ್ತಮಾನದ ಅವರ ನಂಬಿಕೆ-ಆಚರಣೆಗಳ ಹಿನ್ನೆಲೆಯಲ್ಲಿ ಶರಣಪರಂಪರೆಯ ಕಡೆಗೆ ವಾಲಿರುವುದನ್ನು ಅವರು ವಿಶ್ಲೇಷಿಸಿದ್ದಾರೆ. ಇಂಥ ವಿಶ್ಲೇಷಣೆಯ ಹಿಂದೆ ಯಾವುದೇ ಒಂದು ಪಂಥ ಕಾಲದ ಒತ್ತಡದಲ್ಲಿ ತನ್ನನ್ನು ಒಡ್ಡಿಕೊಳ್ಳುತ್ತಾ ಚಲನಶೀಲಗೊಳ್ಳುತ್ತಲೇ ಇರುತ್ತದೆ ಎಂಬ ನಂಬಿಕೆ ಇರುತ್ತದೆ.

೧.೬.೬ ಅಮೋಘಸಿದ್ಧ ಪರಂಪರೆಯ ಹಾಲುಮತ ಮಠಗಳು

ಇದು ಡಾ. ಎಫ್.ಟಿ.ಹಳ್ಳಿಕೇರಿ ಅವರು ಬರೆದ ಸಂಪ್ರಬಂಧ. ಇತಿಹಾಸ ದರ್ಶನ-೨೦/೨೦೦೭ರಲ್ಲಿ ಪ್ರಕಟವಾದ ಈ ಲೇಖನ ಅಮೋಘಸಿದ್ಧ ಪರಂಪರೆಯ ಕುರಿತು ಹಲವಾರು ಮಹತ್ವದ ಅಂಶಗಳನ್ನು ಒಂದೇ ಬೀಸಿನಲ್ಲಿ ದಾಖಲಿಸುತ್ತದೆ.

ಹಾಲುಮತ ಗುರುಪರಂಪರೆಯಲ್ಲಿರುವ ಮೂರು ಸಂಪ್ರದಾಯಗಳಲ್ಲಿ ಅಮೋಘಸಿದ್ಧ ಸಂಪ್ರದಾಯವೂ ಒಂದೆಂದು ಹೇಳುತ್ತ ಅಮೋಘಸಿದ್ಧನ ಇತಿವೃತ್ತ, ಅಮೋಘಸಿದ್ಧನ ಸಂತತಿ, ಈ ಪರಂಪರೆಯ ಮಠಗಳ ಭೌಗೋಳಿಕ ವ್ಯಾಪ್ತಿ, ಮಠಾಧಿಪತಿಗಳ ಆಚರಣೆ ಮತ್ತು ನಂಬಿಕೆಗಳು, ಈ ಪರಂಪರೆಯ ಮಠಾಧಿಪತಿಗಳು ಸಲ್ಲಿಸಿದ ಸಾಮಾಜಿಕ ಸೇವೆ, ರೇವಣಸಿದ್ಧ ಪರಂಪರೆ ಹಾಗೂ ಅಮೋಘಸಿದ್ಧ ಪರಂಪರೆಯ ತೌಲನಿಕ ಅಧ್ಯಯನ ಮತ್ತು ಒಡೆಯರ ಇಂದಿನ ಸ್ಥಿತಿಗಳ ಕುರಿತು ವ್ಯಾಪಕವಾಗಿ ಚರ್ಚಿಸಿದ್ದಾರೆ.

ತಮ್ಮ ಈ ಸಂಶೋಧನಾ ಲೇಖನ ಬರವಣಿಗೆಗೆ ಡೊಳ್ಳಿನ ಹಾಡುಗಳನ್ನು, ಮೌಖಿಕ ಪರಂಪರೆಯ ಕಥನಗಳನ್ನು, ಒಡೆಯರಲ್ಲಿ ದೊರೆತ ಸುರಳಿಕಾಗದಗಳನ್ನು ಹಾಗೂ ಈಗಾಗಲೇ ಈ ಪರಂಪರೆಯ ಕುರಿತು ನಡೆದ ಅಧ್ಯಯನಗಳನ್ನು ಒಂದ್ದೇ ತೆಕ್ಕೆಯಲ್ಲಿ ತೆಗೆದುಕೊಂಡು ಈ ಸಂಪ್ರಬಂಧ ರಚಿಸಿದ್ದಾರೆ.

೧.೬.೭ ಕುರುಬರ ಗುರು ಒಡೆಯರು : ಸಾಂಸ್ಕೃತಿಕ ಅಧ್ಯಯನ

ಇದು ಡಾ. ಬಿ.ಜಿ.ಬಿರಾದಾರ ಅವರು ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಾದರಪಡಿಸಿದ ಮಹಾಪ್ರಬಂಧ. ಕುರುಬರ ಗುರು ಒಡೆಯರ ಸಂಪ್ರದಾಯದಲ್ಲಿ ಅಮೋಘಸಿದ್ಧ ಸಂಪ್ರದಾಯವೂ ಒಂದಾಗಿರುವುದರಿಂದ ಇಡೀ ಮಹಾಪ್ರಬಂಧದ ಉದ್ದಕ್ಕೂ ಅಮೋಘಸಿದ್ಧ ಪರಂಪರೆಯ ಕುರಿತು ಅನೇಕ ಮಹತ್ವದ ಅಂಶಗಳ ಮೇಲೆ ಬೆಳಕು ಚೆಲ್ಲಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಮೂರನೆಯ ಅಧ್ಯಾಯದಲ್ಲಿ ಅಮೋಘಸಿದ್ಧ ಸಂಪ್ರದಾಯ, ನಾಲ್ಕನೆಯ ಅಧ್ಯಾಯದಲ್ಲಿ ಅಮೋಘಸಿದ್ಧ ಸಂಪ್ರದಾಯದ ಒಡೆಯರ ಭೌಗೋಳಿಕ ಪ್ರಸಾರ ಹಾಗೂ ಆರನೆಯ ಅಧ್ಯಾಯದಲ್ಲಿ ಗುರುಪರಂಪರೆಯ ಮಹಾಪುರುಷರದಲ್ಲಿ ಒಬ್ಬನಾಗಿ 'ಅಮೋಘಸಿದ್ಧ' ಎನ್ನುವ ಭಾಗಗಳಲ್ಲಿ

[illegible]

ನೇರವಾಗಿ ಅಮೋಘಸಿದ್ಧ ಹಾಗೂ ಅವನ ಪರಂಪರೆಯ ಕುರಿತಾಗಿ ಸಿಗುವ ಲಿಖಿತ ಆಕರ, ಮೌಖಿಕ ಆಕರ ಹಾಗೂ ಕ್ಷೇತ್ರಕಾರ್ಯದಲ್ಲಿ ಮಾಡಿಕೊಂಡ ಟಿಪ್ಪಣಿಗಳ ಆಧಾರದಲ್ಲಿ ಈ ಪರಂಪರೆಯ ಮೂಲ ಪುರುಷ ಹಾಗೂ ಅವನ ಪರಂಪರೆಯ ವೈಶಿಷ್ಟ್ಯಗಳ ಕುರಿತು ಹೊಸ ಹೊಸ ಒಳನೋಟಗಳ ಚರ್ಚೆಯನ್ನು ನಡೆಯಿಸಿದ್ದಾರೆ.

ಅಮೋಘಸಿದ್ಧ ಹಾಗೂ ಅಮುಗಿದೇವರ ಭಿನ್ನಾಭಿನ್ನತೆ ಇವರನ್ನೂ ಕಾಡಿದೆ. ಇಬ್ಬರೂ ಅಭಿನ್ನರು ಎಂಬ ವಿದ್ವಾಂಸರ ಅಭಿಪ್ರಾಯವನ್ನು ಒಪ್ಪಬಹುದು ಎಂದು ಹೇಳುತ್ತಲೇ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸದ ವಿಷಯಗಳು ನೆನಪಾಗಿ "ಅಮೋಘಸಿದ್ಧನನ್ನು ಕುರಿತು ಮೌಖಿಕ ಪರಂಪರೆಯಲ್ಲಿ ದೊರೆಯುವ ವಿವರಗಳಿಗೂ ಅಮುಗಿದೇವಯ್ಯನನ್ನು ಕುರಿತು ಲಿಖಿತ ಸಾಹಿತ್ಯದಲ್ಲಿ ದೊರೆಯುವ ಆಕರಗಳಲ್ಲಿಯೂ ಸಾಕಷ್ಟು ಭಿನ್ನತೆಗಳಿರುವುದನ್ನು ಗುರುತಿಸಬಹುದಾಗಿದೆ"[೨೫] ಎಂದು ಬರೆದಿದ್ದಾರೆ. ಹೀಗಾಗಿ ಅಮೋಘಸಿದ್ಧ ಹಾಗೂ ಅಮುಗಿದೇವ ಇಬ್ಬರೂ ಭಿನ್ನರೆ, ಅಭಿನ್ನರೆ ಎನ್ನುವ ಕುರಿತು ಖಚಿತ ನಿರ್ಣಯಕ್ಕೆ ಬರದೇ ಹೋಗಿದ್ದಾರೆ. ಬಹುವಿಸ್ತಾರವಾದ ವಿಷಯವನ್ನು ಅಧ್ಯಯನದ ವಸ್ತುವನ್ನಾಗಿಸಿಕೊಂಡಾಗ ಎಲ್ಲಾ ವಿಷಯಗಳ ಕುರಿತು ಖಚಿತ ನಿರ್ಣಯಕ್ಕೆ ಬರುವುದು ಕಷ್ಟದ ಕೆಲಸವೇ ಸರಿ.

ಆದರೆ ಕ್ಷೇತ್ರಕಾರ್ಯಾಧಾರಿತ ಸಂಗ್ರಹಿಸಿದ ವಿವರಗಳ ಆಧಾರದ ಮೇಲೆ ಮೂರು ಒಡೆಯರ ಸಂಪ್ರದಾಯಗಳ ನಂಬಿಕೆ-ಆಚರಣೆಗಳ ಸಾಮ್ಯತೆ ಭಿನ್ನತೆಯನ್ನು ಕುರಿತಾದ ಅವರು ಚರ್ಚೆ ಅವರು ಕೈಕೊಂಡ ಕ್ಷೇತ್ರಕಾರ್ಯದ ವ್ಯಾಪಕತೆ ಹಾಗೂ ಪರಿಶ್ರಮವನ್ನು ಬಿಂಬಿಸುವಂಥದ್ದಾಗಿದೆ.

ಅವರ ಕ್ಷೇತ್ರ ಕಾರ್ಯದ ವ್ಯಾಪಕತೆಯನ್ನು ಇನ್ನೂ ಆಳವಾಗಿ ಬಿಂಬಿಸುವಂಥದ್ದು ನಾಲ್ಕನೆಯ ಅಧ್ಯಾಯ. ಅಲ್ಲಿ ಮೂರು ಸಂಪ್ರದಾಯದವರ ಭೌಗೋಳಿಕ ವ್ಯಾಪ್ತಿಯ ಬಗೆಗೆ ವಿವರಿಸುತ್ತ ಆಯಾ ಪ್ರದೇಶದಲ್ಲಿ ಆಯಾ ಸಂಪ್ರದಾಯದವರ ನಂಬಿಕೆ ಆಚರಣೆಗಳ ಕುರಿತು ಬಹುವಿಸ್ತಾರವಾಗಿ ಬರೆದಿದ್ದಾರೆ.

ಮೇಲೆ ಉಲ್ಲೇಖಿಸಿದ ಆಕರ ಗ್ರಂಥಗಳು ಅಮೋಘಸಿದ್ಧನ ಕುರಿತಾಗಿ ಅಧ್ಯಯನ ಕುತೂಹಲವನ್ನು ಮೂಡಿಸಿದ್ದಲ್ಲದೆ ಅಧ್ಯಯನಕಾರ ಸಾಗಬೇಕಾದ ಮಾರ್ಗದ ಕಡೆಗೆ ಬೆರಳು ತೋರಿಸಿವೆ. ಈ ಎಲ್ಲಾ ಆಕರಗಳನ್ನು ಬೆನ್ನಿಗೆ ಕಟ್ಟಿಕೊಂಡು ವ್ಯಾಪಕವಾದ ಕ್ಷೇತ್ರಕಾರ್ಯದ ಸಹಾಯದಿಂದ ಅಧ್ಯಯನ ಮಾಡಲು ಸಾಧ್ಯವೆನ್ನಿಸಿ ಈ ಅಧ್ಯಾಯನಕಾರ ಮುನ್ನಡೆದಿದ್ದಾನೆ.

ಕೊನೆಟಿಪ್ಪಣಿಗಳು

೧. ನೋಡಿ: ಶಂಬಾ ಜೋಶಿ ಅವರ ಲೇಖನ: 'ಮರವರು ಕಳವರು' ಗ್ರಂಥ: ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆ

೨. ನೋಡಿ: ಶಂಬಾಜೋಶಿ ಅವರ ಲೇಖನ: 'ವೀರಹಟ್ಟಿಕಾರರು ದನಗಾರರು.' ಗ್ರಂಥ: ಹಾಲುಮತ ದರ್ಶನ

೩. ನೋಡಿ: ಅದೇ

೪. ನೋಡಿ: ಅದೇ

೫. ಕಾಪಾಲಿಕರು ಮತ್ತು ಕಾಳಾಮುಖರು: ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು: ಇಂಗ್ಲಿಷ್ ಮೂಲ: ಡೆವಿಡ್ ಎನ್. ಲಾರೆಂಜನ್, ಕನ್ನಡ ಅನುವಾದ: ವಿರುಪಾಕ್ಷ ಕುಲಕರ್ಣಿ, ಪುಟ ೩೭

೬. ಪೂರ್ವೋಕ್ತ: ಅದೇ, ಪುಟ ೩೭

೭. ಅದೇ

೮. ಕಾಪಾಲಿಕರು ಮತ್ತು ಕಾಳಾಮುಖರು: ಕಣ್ಮರೆಯಾದ ಎರಡು ಶೈವಸಂಪ್ರದಾಯಗಳು: ಇಂಗ್ಲಿಷ್ ಮೂಲ: ಡೆವಿಡ್ ಎನ್.ಲಾರೆಂಜನ್, ಕನ್ನಡ ಅನುವಾದ: ವಿರುಪಾಕ್ಷ ಕುಲಕರ್ಣಿ, ಪುಟ ೨೮

೯. ಶರಣ ಚರಿತ್ರೆ: ಡಾ. ಫ.ಗು.ಹಳಕಟ್ಟಿ, ಸಂಪುಟ ೧೦, ಸಂ. ಡಾ. ಎಸ್.ಕೆ.ಕೊಪ್ಪ, ಡಾ. ಎಂ.ಎಂ.ಪಡಶೆಟ್ಟಿ

೧೦. ಸಿದ್ಧ ಸಾಹಿತ್ಯ: ಮ.ಸು.ಕೃಷ್ಣಮೂರ್ತಿ, ಪುಟ

೧೧. ಕಾಡುಹೂಗಳು: (ಸಂ) ಬಿ.ಜಿ. ಖಾಡೆ, ಪುಟ ೫೭

೧೨. ಅದೇ, ಪುಟ ೮೩, ೮೪

೧೩. ಅದೇ, ಪುಟ ೨೮

೧೪. ಹಾಲುಮತದ ಪುರಾಣವು: ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ಪುಟ ೯೮

೧೫. ಗಮನಿಸಿ: ತಗರ ಪವಾಡ, ಸಂಧಿ ಎರಡು ಹಾಗೂ ಮೂರು

೧೬. ಗಮನಿಸಿ: ಸಿದ್ಧಮಂಕ ಚರಿತೆ, ಸಂಧಿ ಎರಡು ಹಾಗೂ ಮೂರು

೧೭. ರೇವಣಾರಾಧ್ಯ ಲೀಲಾಸಂಯುಕ್ತ ಹಾಲ್ಮತೋತ್ತೇಜಕ ಪುರಾಣ: ಸಂಧಿ ೯

೧೮. Google Searchನಲ್ಲಿ wiki pediaದಲ್ಲಿ 'legend' ಕುರಿತು ದೊರೆತ ಮಾಹಿತಿ

೧೯. ಕುರುಬರ ಚರಿತ್ರೆ: ವಿ.ಆರ್.ಹನುಮಂತಯ್ಯ, ಸಂ. ಸುಧಾಕರ, ಪುಟ ೭೦

೨೦. ಅದೇ, ಪುಟ ೧೨೧

೨೧. ಅದೇ, ಪುಟ ೧೨೧

೨೨. ನೋಡಿ: ಕುರುಬರ ಹೆಜ್ಜೆಗಳು: ಒಂದು ಅಧ್ಯಯನ, ಚಂದ್ರಕಾಂತ ಬಿಜ್ಜರಗಿ, ಪುಟ ೩೦೬

೨೩. ನೋಡಿ: ಅದೇ, ಪುಟ ೩೧೫

೨೫. ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ, ಡಾ. ಬಿ.ಜಿ.ಬಿರಾದಾರ, ಪುಟ ೯೩

ಅಧ್ಯಾಯ : ಎರಡು

ಕಾಲ-ದೇಶ-ಪಂಥ-ಪ್ರಭಾವ

ಅಧ್ಯಾಯ : ಎರಡು

ಕಾಲ-ದೇಶ-ಪಂಥ-ಪ್ರಭಾವ

೨.೧ ಅಮೋಘಸಿದ್ಧನ ಕಾಲನಿರ್ಣಯ

ಮೊದಲ ಅಧ್ಯಾಯದಲ್ಲಿ ಬರುವ ಆಕರಗಳ ಅವಲೋಕನ ಮಾಡುವಾಗ ಈ ಅಧ್ಯಯನಕಾರನಿಗೆ ಗೋಚರಿಸಿದ ಸತ್ಯ ಇದು: ಪುರಾಣಕಥನಗಳು ಸಮುದಾಯದ ನಾಯಕನಾಗಿ ಬೆಳೆದವನನ್ನು ಮಣ್ಣಿನ ವಾಸನೆಯಿಂದ, ಮರ್ತ್ಯದ ನೆರಳಿನಿಂದ ದೂರವಿರಿಸಿ ದೇವಲೋಕದ ಪಾರಿಜಾತ ಪುಷ್ಪವನ್ನಾಗಿಸುವ ಪ್ರಯತ್ನ ಮಾಡುತ್ತವೆ ಎಂಬುದು. ಅಮೋಘಸಿದ್ಧ ಪರಂಪರೆಯನ್ನು ಗಮನಿಸಿದರೆ ಆಕಾಶದಲ್ಲಿ ಬೇರುಬಿಟ್ಟುಕೊಂಡ ವೃಕ್ಷವೊಂದು ಭೂಮಿಯ ಕಡೆಗೆ ಟೊಂಗೆ ಚಾಚಿಕೊಂಡು ನಿಂತಂತೆ ತೋರುತ್ತದೆ. ಅದೇ ಕಾಲಕ್ಕೆ ಈ ಪರಂಪರೆಯ ಕುರಿತು ಸೃಷ್ಟಿಯಾಗಿರುವ ಐತಿಹ್ಯಗಳನ್ನು ಗಮನಿಸಿದರೆ ಗೋಚರಿಸುವ ಸತ್ಯ ಇದು: ಆಕಾಶದಲ್ಲಿ ತೇಲಾಡುವ ಈ ಪರಂಪರೆಯ ಬೇರುಗಳನ್ನು ಅವು ಮಣ್ಣಿನ ಕಡೆಗೆ, ಮರ್ತ್ಯದ ಕಡೆಗೆ ಎಳೆದು ತರಲು ಪ್ರಯತ್ನಿಸುತ್ತವೆ ಎಂಬುದು. ಪುರಾಣ-ಐತಿಹ್ಯಗಳ ಮಧ್ಯ ಘರ್ಷಣೆ ನಡೆದು ಕಥನಗಳಿಗೆ ಮುಖಾಮುಖಿ ಮಾಡಿಕೊಂಡವರು ಗೊಂದಲದಲ್ಲಿ ಸಿಲುಕಿಕೊಳ್ಳುವಂತಾಗುತ್ತದೆ. ಈ ಗೊಂದಲ ಪರಿಹರಿಸಿಕೊಳ್ಳುವಲ್ಲಿ ಈ ಅಧ್ಯಯನಕಾರನಿಗೆ ಇದ್ದ ಒಂದೇ ಒಂದು ದಾರಿಯೆಂದರೆ ಈ ಪರಂಪರೆಯ ಕಾಲ ಸಂಬಂಧಿ ಆಕರಗಳ ಶೋಧ. ಅಮೋಘಸಿದ್ಧನ ವಂಶದವರು ತಾವು ಎಂದು ಹೇಳಿಕೊಳ್ಳುವ ಜನರು ಕರ್ನಾಟಕ, ಮಹಾರಾಷ್ಟ್ರಗಳ ಗಡಿ ಭಾಗದಲ್ಲಿ ಇನ್ನೂ ಇದ್ದಾರೆ. ಇವರ ಮನೆಯಲ್ಲಿ ಏನಾದರೂ ದಾಖಲೆಗಳು ದೊರೆಯಬಹುದೆ ಎಂದು ಹುಡುಕಾಟ ಪ್ರಾರಂಭಿಸಿದೆ. ಮೌಖಿಕ ಪರಂಪರೆಯ ಕಥನಗಳ ಮೂಲಕ ಈ ಪರಂಪರೆಯನ್ನು ಪುರಾಣೀಕರಿಸಿದವರೂ ಇವರೆ. ಇವರನ್ನು ಮಾರಾಯರು/ಒಡೆಯರು ಎಂದು ಜನ ಕರೆಯುತ್ತಾರೆ. ಅವರಲ್ಲಿ ವಿಶೇಷವಾಗಿ ಗುರುಮನೆಯವರೆಂದು ಕರೆಯಿಸಿಕೊಳ್ಳುವ ಭೀವರಗಿಯ ಮಾರಾಯರನ್ನು ಹಲವಾರು ಸಾರಿ ಸಂದರ್ಶಿಸಿದೆ. ಅಮೋಘಸಿದ್ಧನ ಚರಿತ್ರೆಯನ್ನು ಕೆದಕಲು ಯಾರಾದರೂ ಪ್ರಯತ್ನಿಸಿದರೆ ಅವರ ವಂಶ ನಟೌಂಶ (ನಿರ್ವಂಶ)ವಾಗುತ್ತದೆ ಎಂದು ಬೆದರಿಕೆ ಹಾಕಿದರೇ ಹೊರತು ಮಾಹಿತಿ ಒದಗಿಸಲಿಲ್ಲ. ನಿಮಗೆ ಹೆಳವರು ಇರಬಹುದಲ್ಲ ಎಂದು ಕೇಳಿದರೆ ಇಲ್ಲ ಎಂದು ಹೇಳಿದರು.

[illegible]

[illegible]

[illegible]

[illegible]

ಆದರೆ ನನಗೆ ಖಚಿತವಾಗಿ ಗೊತ್ತಿತ್ತು. ಆಸ್ತಿ ಪಾಲವಾಟಣಿ ವಿಷಯದಲ್ಲಿ, ಮುಮ್ಮಟಗುಡ್ಡದಲ್ಲಿರುವ ಅಮೋಘಸಿದ್ಧನ ಗುಡಿಯ ಪೂಜಾರಿಕೆ ವಿಷಯದಲ್ಲಿ ಇದೇ ಮಾರಾಯರು ಕೋರ್ಟಿನ ಕಟ್ಟೆ ಹತ್ತಿ ಅಲ್ಲಿ ತಮ್ಮ ವಾದ ಸಮರ್ಥನೆಗೆ ಭೀವರಗಿಯಲ್ಲಿನ ಕಾಗದ ಪತ್ರಗಳನ್ನು ಬಳಸಿಕೊಂಡಿದ್ದರು ಎಂಬುದು. ಹೀಗಾಗಿ ಏನೇನೋ ಕಷ್ಟಪಟ್ಟು ಗುರುಮನೆ ಭೀವರಗಿಯಲ್ಲಿರುವ ಕಾಗದ ಪತ್ರಗಳನ್ನು ಪಡೆದುಕೊಂಡೆ.[೧]

ಸುಮಾರು ಮೂವತ್ತು ಪುಟಗಳಷ್ಟಿದ್ದ ಈ ದಾಖಲೆಗಳು ಮೋಡಿ ಲಿಪಿಯಲ್ಲಿ ಇದ್ದವು. ೧೫೨೫ ರಲ್ಲಿ ಬರೆದ ಕೌಲನಾಮ (ಗೇಣಿಪತ್ರ), ೧೫೯೯ರ ಮಹಜರಪತ್ರ, ೧೭೨೫ರ ಮೌಖಿಕ ಹೇಳಿಕೆ. ೧೭೫೪ರ ಥಳಪತ್ರ (a letter of grant given to the landed proprieter) ಹಾಗೂ ೧೮೨೭ರ ವಾಟಣಿ ಪತ್ರಗಳು ಅವು ಆಗಿದ್ದವು. ೧೫೯೯ರಲ್ಲಿ ಬರೆಯಿಸಿದ ಮಹಜರ ಪತ್ರ[೨] ಇಲ್ಲಿ ಬಹು ಮುಖ್ಯವಾದುದಾಗಿದೆ. ಯಾಕೆಂದರೆ ಈ ಪತ್ರಕ್ಕೆ ಅಮೋಘಸಿದ್ಧನ ನಾಲ್ಕೂ ಜನ ವರವಿನ ಮಕ್ಕಳು ಸಾಕ್ಷಿ ಹಾಕಿದ್ದಾರೆ. ಅದರ ಕನ್ನಡ ಅನುವಾದ ಈ ಕೆಳಗಿನಂತಿದೆ.

"ಸರಕಾರ ಬಿಜಾಪುರ ೧೫೯೯. ಶಾಹ ಅಲಿ ಬಾದಶಹಾ ಇವರು ಕೋತವಾಲ ೧೯ ಸರಕಾರ, ೩೨ ಮಹಾಲು, ೩೬೦ ಠಾಣೆ, ೨೮ ಪರಗಣೆ, ದೇಶಮುಖ ಮತ್ತು ದೇಶಪಾಂಡೆ ಇವರಿಗೆ ಮಂಜೂರು ಮಾಡಿಕೊಡಲಾಯಿತು.

ಮೌಜೆ (ಗ್ರಾಮ) ಭೀವರಗಿ ಪರಗಣ ಕರ್ಜಗಿ ಇದನ್ನು ಸೋಮನಗೌಡ ಮೊಕಾದಮಕಿ ಮತ್ತು ಗೌಡಕಿ ಮಾಡುತ್ತಿದ್ದನು.

ಇದರ ಬಾಕಿ ಹೊನ್ನು ೨೫೦ ಎರಡು ನೂರಾ ಐವತ್ತು ಬಾಕಿ ಇಟ್ಟು ಓಡಿಹೋದನು. ಇದರಿಂದ ಊರಿನಲ್ಲಿಯ ಜಮೀನು ಸಾಗುವಳಿ ಮಾಡಲಿಲ್ಲ. ಕಾರಣ ಸರಕಾರ ಅದನ್ನು ಬೇರೆಯವರಿಗೆ ಜಮೀನನ್ನು ಬಾಡಿಗೆ ನೀಡಿ ಬಾಕಿಯನ್ನು ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಯಿತು. ಕಳಸಗೌಡ ಮತ್ತು ಸಿದ್ದಗೌಡ ಇವರಿಗೆ ಮುಂದಿನ ದಿನಗಳಲ್ಲಿ ಭೂಮಿಯನ್ನು ಸಾಗುವಳಿ ಮಾಡಲು ಹಕ್ಕನ್ನು ಬಾದಶಹ ಇವರು ನೀಡಿದರು. ಕಳಸಗೌಡ ವ ಸಿದ್ದಗೌಡ ಅವಧೂತಸಿದ್ಧ ಸೋಮನಗೌಡ ಬಾಕಿ ತೊಕೊಂಡು ಓಡಿಹೋದರು. ಕಳಸಗೌಡ ವಲದ ಸೋಮನ ಮುತ್ಯಾ ಇವರಿಬ್ಬರು ಅವಧೂತ ಸಿದ್ಧ ಇವನ ಪರವಾಗಿ ಸರಕಾರಕ್ಕೆ ನೀಡುವ ೨೫೦ ಹೊನ್ನು ಬಾಕಿ ಇಟ್ಟು ನೀಡಲಾಗಿ ಕಳಸಗೌಡ ಇವನ ಹೆಸರಿನಲ್ಲಿ ಮಹಜರ ಪತ್ರ ಹೊರಡಿಸಲಾಯಿತು. ಹಜರತ್ ಬಾಶಾ ಇವರು ಹೊರಡಿಸಿದರು. ಆದ ಕಾರಣ ಕಳಸಗೌಡ ಇವರು ಹಜರತ್ ಬಾದಶಹಾನಿಗೆ ಅಮೋಘಸಿದ್ಧನ ಪರವಾಗಿ ಹಣ ನೀಡಿ ಎಲ್ಲ ವತನ-ಮಿರಾಸ-ಮೊಕಾದಮ ಮತ್ತು ಪೂಜೆ ಮಾಡುವ ಹಕ್ಕುಗಳನ್ನು ಪ್ರತಿವರ್ಷ ಮಾನ್ಯ ಮಾಡಿ ಸರಿಯಾಗಿ ಅನುಭವಿಸಿ ಇರುವುದು. ಇದರ ಬಗ್ಗೆ ಏನು ಹೆಚ್ಚಿನದನ್ನು ಬಯಸದೆ ಸರಿಯಾಗಿ ನಡೆಸಬೇಕು.

ಇದಕ್ಕೆ ಶ್ರೀ ಧರ್ಮದ ಸಾಕ್ಷಿ ಇರುತ್ತದೆ.

[illegible]

ನಿಶಾನೆ

ಅವದೂತ ಸಿದ್ದ ಅಮೋಘಸಿದ್ಧ	ಬಿಳೀ ಆನಿಸಿದ್ದ ವ ಅಮೋಘಸಿದ್ದ
ಸೋ(ಮ)ನ ಮುತ್ಯಾ ಅಮೋಘಸಿದ್ಧ	ಕನ್ನಮುತ್ಯಾ ವ ಅಮೋಘಸಿದ್ಧ

ಊರಿನ ದೇಶಮುಖ ದೇಶಪಾಂಡೆ ನಾಡಗೌಡ ಇವರು ಇತರ ಸಾಕ್ಷಿ

ತಿಮಾಜಿ ಗಿರಿಧರ ಪಂಡಿತ್ ಠಾಣೆಯ ಹವಾಲ್ದಾರ್	ಶೇಖ ಹಜರತ್ ಮಿಯಾ ಸಾಹೇಬ ಖಾಜಿ
ಗಂಗಾಧರ ತಿಮಾಜಿ ಮುಜಮದಾರ	ಕಮಾಲಖಾನ ಸೊನೆಲ ಖಾನ್ ಸರಕಾರಿ ಕಮಾವಿಸದಾರ
ರಾಮಾಜಿ ಗೋವಿಂದ ಖಾಸನೀಸ್	ಮೋಹದ್ದಿನ್ ಖಾನ್ ಉಮರಾವ
ಜಗದೇವಣ್ಣ ದೇಶಮುಖ ಯಳಮೇಲಿ	ಹಜರತ್ ಉಮರಾವ
ಶೇಷಣ್ಣ ಬಾಳಾಜಿ ದೇಶಮುಖ ಹಿಪ್ಪರಗಿ	ಸಿವಲಿಂಗಪ್ಪ ಸೇಟಿ
ಸಾಬಾಜಿ ಮಲಹರ ದೇಶಮುಖ ಹಿಪ್ಪರಗಿ	
ಕೃಷ್ಣಾಜಿ ದೇಶಮುಖ ತಾಳಿಕೋಟೆ	ನಾಗೋಜಿ ನಾಯಕವಾಡಿ
ನರಸೋ ತಿಮ್ಮಾಜಿ ಕ(ಕು)ಬೇರ ತಾಂಬೆ	ಸಿವಾಜಿ ನಾಯಿಕವಾಡಿ
ಜೀವಾಜಿ ನರಸೋ ದೇಶಮುಖ ಕ(ಕು)ಬೇರ ಹರ್ತಿ	ಸಂತಾಜಿ ಜಮದಖಾನ್ ಹವೇಲಿ ಶಹರ
ಶೇಖ ಮಜಲಿಸ ಸಾಹೇಬ ಮೊಕಾದಮ ಕರ್ಜಗಿ	ಲಖಗೌಡ ಮೊಕಾದಮ ಮೌಜೆ ಹರಗಿ
ಜೀವಾಜಿ ಕುಲಕರ್ಣಿ	ಕಪಗೌಡ ಮೊಕಾದಮ ಮಾಜೆ ಬಳೋಂಡಗಿ ನಗರ
	ರಾಯಗೌಡಾ ಮೊಕಾದಮ ಮೌಜೆ ಹುಂಜಗಿ ನಗರ
ಲಿಂಗಗೌಡ ಮೊಕಾದಮ ಉಮಲಿ (ದಿ) ನಗರ	ಸರಗೌಡಾ ಮೊಕಾದಮ
ಲಖಗೌಡ ಮೊಕಾದಮ ಮೌಜೆ ಬಬಲಾದ ನಗರ	ಮೀರನಗೌಡ ಮೊಕಾದಮ ಕಸಬಾ ಹವೇಲಿ ನಗರ
ಮುದಗೌಡ ಮೌಜೆ ತಿಕೋಟಿ ನಗರ	

ಈ ಪ್ರಕಾರ ಹಾಜರ ಇದ್ದವರು ಬೇರೆ ಊರಿನವರು ದೇಶಮುಖ ದೇಶಪಾಂಡೆ ನಾಡಗೌಡಾ."

ಈ ಮಹಜರ ಪತ್ರದ ವಾಕ್ಯ ರಚನೆಗಳು ಅಷ್ಟೇನು ಸರಿಯಾಗಿ ಇರದ ಕಾರಣ ಸಂಪೂರ್ಣ ಹಾಗೂ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವುದು ಕಷ್ಟದ ಕೆಲಸವಾಗುತ್ತದೆ. ಆದರೆ ಅಮೋಘಸಿದ್ಧನ ಹಿರಿಯ ಮಗನಾದ ಅವಧೂತ ಸಿದ್ಧನು ಸರಕಾರಕ್ಕೆ ನೀಡಬೇಕಾದ ೨೫೦ ಹೊನ್ನುಗಳನ್ನು ಬಾಕಿ ಉಳಿಸಿಕೊಂಡ ಕಾರಣ ವತನ-ಮಿರಾಸ-ಮೊಕಾದಮಕಿ ಹಾಗೂ ಪೂಜೆ ಮಾಡುವ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಹಾಗೂ ಕಳಸಗೌಡ ಎಂಬುವವನು ಅಮೋಘಸಿದ್ಧ/ಅವಧೂತಸಿದ್ಧನ ಪರವಾಗಿ ಸರಕಾರಕ್ಕೆ ಆ ಬಾಕಿಯನ್ನು ತುಂಬಿ ವತನ-

ಮಿರಾಸ ಮೊಕಾದಮಕಿ ಹಾಗೂ ಪೂಜಾ ಹಕ್ಕನ್ನು ಪಡೆಯುತ್ತಾನೆ. ಇದಕ್ಕೆ ಅಮೋಘಸಿದ್ಧನ ನಾಲ್ವರೂ ವರವಿನ ಮಕ್ಕಳು ಸಾಕ್ಷಿ ಹಾಕಿದ್ದಾರೆ. ಹಾಗೂ ದೇಶಪಾಂಡೆ, ದೇಶಮುಖ ನಾಡಗೌಡರೂ ಸಹ ಸಾಕ್ಷಿ ಹಾಕಿದ್ದಾರೆ.

ಇಲ್ಲಿ ನಮಗೆ ಸಧ್ಯಕ್ಕೆ ಮುಖ್ಯವಾದ ಸಂಗತಿ ಎಂದರೆ ಚರಿತ್ರೆಯ ಹಂಗು ಹರಿದು ಬದುಕುತ್ತಿರುವ ಅಮೋಘಸಿದ್ಧನ ಪರಿವಾರವನ್ನು ಚರಿತ್ರೆಯ ಚೌಕಟ್ಟಿನೊಳಗಿಟ್ಟು ನೋಡಲು ಸಾಧ್ಯವಾಗುತ್ತಿರುವುದು. ಈ ಮಹಜರ ಪತ್ರದ ಕಾಲ ೧೫೯೯ ಎಂದಿದೆ. ಅವಧೂತ ಸಿದ್ಧನು ಬಾದಶಹಾನಿಗೆ ೨೫೦ ಹೊನ್ನು ನೀಡಲು ಆಗದಿದ್ದುದನ್ನು ಈ ಪತ್ರ ಉಲ್ಲೇಖಿಸುತ್ತದೆ. ಈ ಪತ್ರಕ್ಕೆ ಅಮೋಘಸಿದ್ಧನ ಸಾಕ್ಷಿ ಇಲ್ಲ. ಇವೆಲ್ಲವನ್ನು ಗಮನಿಸಿ ಹೀಗೆ ಹೇಳಿಕೊಳ್ಳಬಹುದು. ಈ ವ್ಯವಹಾರ ನಡೆದಾಗ ನಾಡಗೌಡ ಅಮೋಘಸಿದ್ಧನು ತನ್ನ ಆಸ್ತಿ ವಹಿವಾಟನ್ನು ಮಕ್ಕಳಿಗೆ ವಹಿಸಿ ಮೃತನಾಗಿರುವ ಸಾಧ್ಯತೆಯೇ ಹೆಚ್ಚು. ಈ ವ್ಯವಹಾರದಲ್ಲಿ ಅವಧೂತ ಸಿದ್ಧ ಸಿಲುಕಿಕೊಂಡ ಸಂದರ್ಭದಲ್ಲಿ ಅವನಿಗೆ ಐವತ್ತು ವಯಸ್ಸು ದಾಟಿರುವ ಸಾಧ್ಯತೆಯಿದೆ. ಅಂದರೆ ಅವಧೂತ ಸಿದ್ಧನು ೧೫೪೦ ರ ಸುಮಾರಿಗೆ ಜನಿಸಿರುವ ಸಾಧ್ಯತೆಯಿದೆ. ಇದೇ ಸಮಯದಲ್ಲಿ ಇನ್ನೂ ಒಂದು ವಿಷಯವನ್ನು ಗಮನಿಸಬಹುದು. ಅಮೋಘಸಿದ್ಧನು ಕನ್ಯೆ ಪದ್ಮಾವತಿಯನ್ನು ನೋಡಲು ಹೋದದ್ದು ತನ್ನ ಇಳಿವಯಸ್ಸಿನಲ್ಲಿ ಎನ್ನುವುದು. ಇಳಿವಯಸ್ಸಿನಲ್ಲಿ ಮದುವೆಯಾದ ಅಮೋಘಸಿದ್ಧ ಹೆಂಡತಿ ಪದ್ಮಾವತಿಯೊಂದಿಗೆ ಸುಗಮವಾಗಿ ಸಂಸಾರವನ್ನು ಮಾಡಿಲ್ಲವೆಂದು ಅವನ ಕುರಿತಾದ ಕತೆಗಳು ಹೇಳುತ್ತವೆ. ತಾನು ಮುಮ್ಮೆಟಗುಡ್ಡದಲ್ಲಿ ಯೋಗ ಸಾಧನೆಯಲ್ಲಿ ತೊಡಗಿಕೊಂಡು ಸಮೀಪದ ಅರಕೇರಿಯಲ್ಲಿ ಪದ್ಮಾವತಿ ಇರುವಂತೆ ಮಾಡಿರುತ್ತಾನೆ. ಅವನಿಗೆ ಊಟದ ವ್ಯವಸ್ಥೆಯನ್ನು ಪುಣ್ಯದ ಮಗನಾದ ಮಾಸಿದ್ಧನ ಮಧ್ಯಸ್ಥಿಕೆಯಲ್ಲಿ ಮಾಡಿಸಲಾಗುತ್ತಿರುತ್ತದೆ. ಹೀಗೆ ಹಲವಾರು ವರ್ಷಗಳು ಕಳೆದ ನಂತರ ಅಂದರೆ ಮಾಸಿದ್ಧನು ಹರೆಯಕ್ಕೆ ಬರುವವರೆಗೆ ಪದ್ಮಾವತಿ ಅಮೋಘಸಿದ್ಧರ ಮಿಲನವಾದಂತೆ ತೋರುವುದಿಲ್ಲ. ಮಾಸಿದ್ಧನ ಬೇಡಿಕೆಯ ಮೇರೆಗೆ ಅಮೋಘಸಿದ್ಧ ಪದ್ಮಾವತಿಯಲ್ಲಿ ಮಕ್ಕಳನ್ನು ಪಡೆಯುತ್ತಾನೆ. ಅಂದರೆ ಅಮೋಘಸಿದ್ಧ ತನ್ನ ಇಳಿವಯಸ್ಸಿನಲ್ಲಿ ಸರಿಸುಮಾರು ಐವತ್ತನೆಯ ವಯಸ್ಸಿನಲ್ಲಿ ಮೊದಲ ಮಗ ಅವಧೂತಸಿದ್ಧನಿಗೆ ಜನ್ಮ ನೀಡುತ್ತಾನೆ. ಅಂದರೆ ೧೫೪೦ರ ಸುಮಾರಿಗೆ ಅಮೋಘಸಿದ್ಧ ಐವತ್ತು ವರ್ಷದವನಿದ್ದನೆಂದು ಒಪ್ಪಿಕೊಳ್ಳುವುದಾದರೆ ಆತ ೧೪೯೦ರ ಸುಮಾರಿಗೆ ಜನಿಸಿರಬೇಕು ಎಂದು ನಿರ್ಣಯಿಸಬಹುದು. ಇಂಥ ನಿರ್ಣಯದ ಮೂಲಕ ಕೈಲಾಸ ಮೂಲದ ಅಮೋಘಸಿದ್ಧ ಮರ್ತ್ಯಲೋಕದ ಮಾನವನಾಗಿ ನಮ್ಮೆದಿರು ನಿಲ್ಲುತ್ತಾನೆ. ಹದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿ ಜನಿಸಿದ ಅಮೋಘಸಿದ್ಧ ಹದಿನಾರನೇಯ ಶತಮಾನದ ಕೊನೆವರೆಗೆ ಜೀವಿಸಿರುವ ಸಾಧ್ಯತೆಯಿದೆ.

ಇಂಥದೊಂದು ನಿರ್ಣಯವನ್ನು ಪುಷ್ಟೀಕರಿಸುವ ಇನ್ನೊಂದು ಘಟನೆಯನ್ನು ನೋಡಬಹುದು. ಅಮೋಘಸಿದ್ಧನ ಮಕ್ಕಳಾದ ಅವಧೂತಸಿದ್ಧ ಹಾಗೂ ಬಿಳಿಯಾನಿಸಿದ್ಧ ಇಬ್ಬರೂ ಹರಯಕ್ಕೆ ಬಂದ ಕೂಡಲೆ ನಾಡನ್ನು ಶೋಧಿಸಿ ಬರಲು ತಂದೆ ಅಮೋಘಸಿದ್ಧನಲ್ಲಿ ಒಪ್ಪಿಗೆ ಕೇಳುತ್ತಾರೆ. ತಂದೆ ಒಪ್ಪಿಗೆ ಕೊಡುತ್ತ ಬಿಜಾಪುರದ ಕಡೆಗೆ ಹೋಗಬೇಡಿರಿ ಎಂದು ಎಚ್ಚರಿಕೆ ನೀಡುತ್ತಾನೆ. ಬಿಸಿರಕ್ತದ ಯುವಕರು ತಂದೆ ಬೇಡವೆಂದ

[illegible]

ದಿಕ್ಕಿನ ಕಡೆಗೇ ಸಂಚಾರ ಹೊರಡುತ್ತಾರೆ. ಬಿಜಾಪುರದ ಭದ್ರವಾದ ಮುಳ್ಳ ಅಗಸಿಯ ಬಾಗಿಲನ್ನು ಭೇದಿಸಿ ವಿಜಾಪುರ ಪ್ರವೇಶಿಸುತ್ತಾರೆ. ವಿಜಾಪುರದಲ್ಲಿದ್ದ ಸೂಫಿ ಸಂತರೊಂದಿಗೆ ಸಂಘರ್ಷಕ್ಕಿಳಿಯುತ್ತಾರೆ. ಸೂಫಿಸಂತರಾದ ಮುರ್ತುಜಾ ಖಾದಿರಿ, ಅಬ್ಬುಲ್ ರಜಾಕ್ ಖಾದಿರಿ ಮುಂತಾದವರು ಒಡ್ಡುವ ಹಲವಾರು ಪಂಥಗಳನ್ನು ಗೆಲ್ಲುತ್ತಾರೆ. ಬಂಧಿಸಲು ಬಳಸಿದ ಉಕ್ಕಿನ ಸಂಕೋಲೆಯನ್ನು ಮುರಿದು ಹಾಕುವುದು, ತಾಸಬಾವಡಿಯ ನೀರಿನ ಮೇಲೆ ಏಳು ಅಡಕೆಗಳನ್ನು ಒಂದರ ಮೇಲೆ ಒಂದನ್ನು ನಿಲ್ಲಿಸಿ ಅದರ ಮೇಲೆ ಒಂದು ಸೂಜಿಯನ್ನು ನಿಲ್ಲಿಸಿ, ಆ ಸೂಜಿಯ ಮೇಲೆ ಒಂಟಿಗಾಲಿನಿಂದ ನಿಂತು ತಪಸ್ಸು ಮಾಡಿ ತೋರಿಸುವುದು, ಬಂಜೆ ಕುದುರೆಯ ಹೊಟ್ಟೆಯಲ್ಲಿ ಪಂಚಕಲ್ಯಾಣಿ ಗಂಡು ಕುದುರೆ ಮರಿ ಬರಿಸುವುದು ಮುಂತಾದ ಕೌತುಕಗಳ ಮೂಲಕ ಸೂಫಿಗಳನ್ನು ಸೋಲಿಸಿದ ಕಥನ ಅತ್ಯಂತ ರೋಚಕವಾಗಿ ವರ್ಣಿತವಾಗಿದೆ.

ಪ್ರಸ್ತುತ ಕಥನದಲ್ಲಿ ಕಾಣಿಸಿಕೊಳ್ಳುವ ಮುರ್ತುಜಾ ಖಾದಿರಿ ಹಾಗೂ ಅಬ್ಬುಲ್ ರಜಾಕ್ ಖಾದಿರಿ ಅವರ ಕುರಿತು Sufis of Bijapur ಎಂಬ ಗ್ರಂಥದಲ್ಲಿ[೩] ಅನೇಕ ಚಾರಿತ್ರಿಕವಾದ ಮಾಹಿತಿಗಳು ಲಭ್ಯವಿವೆ. ವಿಜಾಪುರವನ್ನು ಆಳಿದ ಎರಡನೆಯ ಇಬ್ರಾಹಿಂ ದೊರೆಯ ಆಳ್ವಿಕೆಯ ಕಾಲದಲ್ಲಿ ಈ ಇಬ್ಬರು ಸೂಫಿ ಸಂತರು ವಿಜಾಪುರದಲ್ಲಿ ಇದ್ದುದಾಗಿ ಲೇಖಕ ಈಟನ್ ಹೇಳುತ್ತಾನೆ.[೪] ಬಗದಾದ ಮೂಲದ ಅಬ್ದುಲ್ ರಜಾಕ್ ಖಾದಿರಿಯು ವಜೀರನಾದ ಖಾನ ಮುಹಮ್ಮದನಿಗೆ ಪೀರನಾಗಿದ್ದನೆಂದು ತಿಳಿಸುತ್ತಾನೆ. ಮೊಗಲ ದೊರೆ ಔರಂಗಜೇಬನ ಪರವಾಗಿ ಯುದ್ಧದಲ್ಲಿ ಕಾದಿ ಮಡಿದ ಖಾನ ಮುಹಮ್ಮದನಿಗೆ ಗೌರವ ಸೂಚಿಸುವ ಸಲುವಾಗಿ ವಿಜಾಪುರದಲ್ಲಿ ಔರಂಗಜೇಬ ಒಂದು ಸುಂದರವಾದ ಸಮಾಧಿಯನ್ನು ನಿರ್ಮಿಸುತ್ತಾನೆ. ಖಾನ ಮುಹಮ್ಮದನ ಪೀರನಾದ ಅಬ್ಬಲ್ ರಜಾಕ್ ಖಾದಿರಿ ೧೬೪೦ ರಲ್ಲಿ ಮಡಿಯುತ್ತಾನೆ. ಅವನಿಗೂ ಸಹ ಔರಂಗಜೇಬನು ಖಾನ ಮುಹಮ್ಮದನ ಗೋರಿಯ ಪಕ್ಕದಲ್ಲಿಯೇ ಇನ್ನೊಂದು ಗೋರಿ ಕಟ್ಟಿಸುತ್ತಾನೆ.[೫] ಅದೂ ಅಲ್ಲದೆ ಇದೇ ಗ್ರಂಥದಲ್ಲಿ ಮುರ್ತುಜಾ ಖಾದಿರಿ ಕೂಡಾ ೧೬೧೩ರಲ್ಲಿ ಮಡಿದುದಾಗಿ ಹೇಳಿದ್ದಾನೆ[೬]. ಇಷ್ಟೆಲ್ಲಾ ವಿವರ ನೀಡಿದ ಉದ್ದೇಶವೆಂದರೆ ಅವಧೂತ ಸಿದ್ಧನ ಕಾಲದ ಕುರಿತು ಈ ಮೊದಲು ನಿರ್ಣಯಿಸಿದ್ದಕ್ಕೆ ಪುಷ್ಟಿಯನ್ನು ಪಡೆಯುವುದಕ್ಕಾಗಿ.

ಈಗಾಗಲೇ ನಿರ್ಣಯಿಸಿದಂತೆ ಅವಧೂತ ಸಿದ್ಧನು ೧೫೪೦ರ ಸುಮಾರಿಗೆ ಜನಿಸಿದ್ದರೆ ಅವನ ಹರೆಯದ ವಯಸ್ಸಿನಲ್ಲಿ ಮೇಲೆ ವಿವರಿಸಿದ ಘಟನೆ ಜರುಗಿರುವುದರಿಂದ ಅವನು ೧೫೬೦ರಿಂದ ೧೫೭೦ರ ಅವಧಿಯಲ್ಲಿ ಸೂಫಿಸಂತರಾದ ಮುರ್ತುಜಾ ಖಾದಿರಿ ಹಾಗೂ ಅಬ್ಬುಲ್ ರಜಾಕ್ ಖಾದಿರಿ ಅವರನ್ನು ಭೆಟ್ಟಿಯಾಗಿರಬಹುದು. ಅದಾದ ನಂತರದ ಅವಧಿಯಲ್ಲಿ ಅಂದರೆ ೧೬೧೩ (ಮುರ್ತುಜಾ ಖಾದಿರಿ) ಹಾಗೂ ೧೬೪೦ (ಅಬ್ದುಲ್ ರಜಾಕ್ ಖಾದಿರಿ) ಮಡಿದಿರುವುದರಾದ್ದರಿಂದ ಮೇಲೆ ನಿರ್ಣಯಿಸಿದ ಕಾಲ ಸರ್ವ ರೀತಿಯಿಂದಲೂ ಹೊಂದಾಣಿಕೆಯಾಗುತ್ತದೆ.

ಅಮೋಘಸಿದ್ಧನ ಜೀವಿತಾವಧಿ ಹದಿನೈದನೆಯ ಶತಮಾನದ ಕೊನೆಯಿಂದ (೧೪೯೦) ಹದಿನಾರನೆಯ ಶತಮಾನದ ಕೊನೆಯವರೆಗಿನ (೧೪೯೦-೧೬೦೦) ಕಾಲದ ಮಧ್ಯದಲ್ಲಿಯದು ಎಂದು ನಿರ್ಣಯಿಸಿಕೊಳ್ಳುವ

[illegible]

[illegible]

[illegible]

[illegible]

ಮೂಲಕ ಇಡೀ ಪರಂಪರೆಯು ಹದಿನಾರನೆಯ ಶತಮಾನದ ಪ್ರಾರಂಭದೊಂದಿಗೆ ರೂಪ ಪಡೆಯಿತು ಎಂದು ಒಪ್ಪಿಕೊಳ್ಳಬಹುದು.

೨.೨ ಅಮೋಘಸಿದ್ಧನ ನೆಲೆ

ಅಮೋಘಸಿದ್ಧನ ಜನನ ೧೪೯೦ರ ಸುಮಾರಿಗೆ ಆಯಿತು ಎಂದು ನಿರ್ಣಯಿಸಿದೆವಾದರೂ ಆತನ ಹುಟ್ಟೂರು ಯಾವುದು ಹಾಗೂ ಆತನ ನಿಜವಾದ ತಂದೆತಾಯಿ ಯಾರು ಎಂಬ ಪ್ರಶ್ನೆಗೆ ಉತ್ತರ ಹುಡುಕಿಕೊಳ್ಳಲು ಸಾಧ್ಯವಾಗದೇ ಹೋಗಿದೆ. ಆ ಕುರಿತಾದ ಯಾವುದೇ ಸುಳುಹುಗಳು ದೊರೆಯುವುದಿಲ್ಲ. ಏನಾದರೂ ಸುಳುಹುಗಳು ದೊರೆತರೆ ಅವೆಲ್ಲಾ ಪುರಾಣೀಕೃತಗೊಂಡು ಸವಾಲನ್ನು ಒಡ್ಡುತ್ತವೆ. ಕೈಲಾಸದಲ್ಲಿ ರಂಭೆ, ಊರ್ವಶಿ, ಮೇನಕೆಯರ ನರ್ತನ ನೋಡಿದ ಶಿವನಿಗೆ ಉದ್ರೇಕದಲ್ಲಿ ಉಂಟಾದ ವೀರ್ಯಪತನವನ್ನು ಪಂಚಭೂತದ ಪಾತ್ರೆಯಲ್ಲಿ ಸಂಗ್ರಹಿಸಿ ಬೆಳೆಯಸಿದ ನವಸಿದ್ಧರಲ್ಲಿ ಮೊದಲನೆಯವನೇ ಅಮೋಘಸಿದ್ಧನೆಂದು ಒಂದು ಪುರಾಣ ಕಥನ ಹೇಳಿದರೆ[೭], ಕೈಲಾಸದಿಂದ ಒಂದು ಸಲ ಭೂಲೋಕಕ್ಕೆ ಸಂಚಾರಿಯಾಗಿ ಬಂದ ಶಿವನು ಕುರಿಯ ಹಟ್ಟಿಯೊಂದರ ಹಾಲಗುಂಡಿಯಲ್ಲಿ ಒಂದು ಲಿಂಗವನ್ನು ಬಿಟ್ಟು ಹೋಗುತ್ತಾನೆ. ಆ ಲಿಂಗವೇ ನಂತರದಲ್ಲಿ ಶಿಶುವಾಗಿ ಬೆಳೆಯುತ್ತದೆ. ಕೂಸನ್ನು ಶಿವಸಿದ್ಧ ಬೀರೇಶನು ಆಶೀರ್ವದಿಸಿ ಕೈಲಾಸಕ್ಕೆ ಹೋಗಿ ಪರಶಿವನ ಕುರಿತು ತಪಸ್ಸು ಮಾಡಿ ನೇಮದ ಬೆತ್ತವನ್ನು ಪಡೆದುಕೊಂಡು ಮರಳಿ ಭೂಲೋಕಕ್ಕೆ ಬಾ ಎಂದು ಕಳುಸಿದನೆಂದು ಇನ್ನೊಂದು ಪುರಾಣ ಕಥನ ಹೇಳುತ್ತದೆ.[೮] ಕೈಲಾಸಕ್ಕೆ ಅಮೋಘಸಿದ್ಧನನ್ನು ಥಳಕು ಹಾಕುವ ಆರತಿ ಪದವೊಂದಿದೆ.

> ಸ್ವಾದಿಷ್ಟಾದಲಿ ಜನಸ್ಯಾನೋ ಸಿದ್ಧಯೋಗೀಂದ್ರ
> ಮುದ್ದಾಲಿಸಿ ಮಲಿಕುಡಿಸ್ಯಾಳೋ ಆದಿ ಶಕ್ತಿ ಗೌರಾ
> ಕಂದಾ ಹಮ್ಮೇಶಾ ಎಷ್ಟೋ ದಿನ ಅಮಸಿದ್ದಂತ್ಹೆಸರಾ
> ಜಯ ಜಯ ಸೋಮಲಿಂಗನಿಗ[೯]

ಒಂದು ಕಥನ ಕೈಲಾಸದಿಂದ ಭೂಲೋಕದ ಕಡೆಗೆ ಚಲನೆಯನ್ನು ತೋರಿಸಿದರೆ ಇನ್ನೊಂದು ಭೂಲೋಕ ದಿಂದ ಕೈಲಾಸದ ಕಡೆಗೆ ಮತ್ತೆ ಭೂಲೋಕದ ಕಡೆಗಿನ ಚಲನೆಯನ್ನು ಸೂಚಿಸುತ್ತದೆ. ಈ ಎರಡೂ ಕಥನಗಳು ಅಮೋಘಸಿದ್ಧನ ತಂದೆ-ತಾಯಿ ಹಾಗೂ ಹುಟ್ಟೂರಿನ ಬಗೆಗೆ ಏನನ್ನೂ ಸೂಚಿಸದಿದ್ದರೂ ಈ ಕಥನಗಳನ್ನು ರೂಪಕ(metaphor)ದ ಹಾಗೆ ಗ್ರಹಿಸಿದರೆ ಅವು ಬಿಟ್ಟುಕೊಡುವ ಅರ್ಥ ಬೆರಗುಗೊಳಿಸುವಂಥದಾಗಿದೆ. ಮೊದಲ ಕಥನವು ಅಮೋಘಸಿದ್ಧನನ್ನು 'ಸಿದ್ಧ' ಪಂಥದಲ್ಲಿ ಇಟ್ಟು ತೋರಿಸಿದರೆ, ಎರಡನೆಯ ಕಥನವು ಅವನ ಕುರುಬ ಜಾತಿಯ ಕಡೆಗೆ ಬೆರಳು ಮಾಡುತ್ತಿದೆ. ಆರತಿ ಪದ್ಯವೂ ಕೈಲಾಸದ ಕಡೆಗೆ ಕೈ ಮಾಡುತ್ತದೆ ಯಾದರೂ ಆತನನ್ನು ಸಿದ್ಧ ಪಂಥದಲ್ಲಿಟ್ಟು ಪರಿಚಯಿಸುತ್ತದೆ.

ಕೈಲಾಸದಿಂದ ಬರುವಾಗ ಶಿವನಿಂದ ಹಲವಾರು ರೀತಿಯ ಕಾಣಿಕೆಯನ್ನು ಪಡೆದುಕೊಂಡು ವಿಜಾಪುರಕ್ಕೆ ಸಮೀಪದ ಮುಮ್ಮೆಟಗುಡ್ಡದಲ್ಲಿ ಬಂದು ನೆಲೆ ನಿಲ್ಲುತ್ತಾನೆ. ಅಲ್ಲಿಗೆ ಬರುವ ಪೂರ್ವದಲ್ಲಿ ಆತನು ಮಂದಲಗಿರಿಯಲ್ಲಿ, ದ್ರೋಣಗಿರಿಯಲ್ಲಿ ಹಾಗೂ ಶ್ರೀಶೈಲದಲ್ಲಿ ತಂಗಿ ಸಾಧನೆ ಮಾಡಿ ಬಂದಂತೆ ಚಿತ್ರಿಸಲಾಗಿದೆ. ನಿಜವಾಗಿ ಅಮೋಘಸಿದ್ಧ ಎಲ್ಲಿಂದ ಬಂದ ಎಂಬುದು ಸ್ಪಷ್ಟವಾಗಿ ತಿಳಿದು ಬರುವುದಿಲ್ಲವಾದರೂ ಮುಮ್ಮೆಟಗಿರಿಯನ್ನು ಆತ ತನ್ನ ಕರ್ಮಭೂಮಿಯನ್ನಾಗಿ ಮಾಡಿಕೊಂಡಿದ್ದಂತೂ ಸತ್ಯ.

ಅಮೋಘಸಿದ್ಧನನ್ನು ಮುಮ್ಮೆಟಗುಡ್ಡಕ್ಕೆ ಎಳೆದುತಂದ ಶಕ್ತಿಯೆಂದರೆ ಮಕಣಾಪುರದಲ್ಲಿದ್ದ ಸೋಮಲಿಂಗನೆಂಬ ಗುರು. ಗುರು ಶಿಷ್ಯರ ಸಂಬಂಧವನ್ನು ಸೂಚಿಸುವ ಡೊಳ್ಳಿನ ಹಾಡೊಂದಿದೆ.

ಕೈಲಾಸದಿಂದ ಧರೆಗಿಳಿದ ಬಂದಾ
ಅಮಸಿದ್ಧ ಮಮ್ಮೆಟಕ
ಗುರುವಾಗ ಇರತಿದ್ದ್ರೋ ಮಕಣಾಪುರಕ
ಜಂಬು ಬೆಟ್ಟಹೋಗಿ ಮಕರಂದ ಹೂ ಕಾಯಿ
ತರತಾನ ಗುರುವಿನ ಸೇವಾಕ

ಜಂಬು ಬೆಟ್ಟಕ ಅಮಸಿದ್ಧ ಹೊಂಟಾನೋ
ಸಾಗಿ ಹೂವಿನ ವssನಕ
ಮತ್ತೆ ರಾತ್ರಿ ಬರತಿ ಬಾರಕಾss
ಅಂದ ಚಂದದ ಹೂವಾ ಕೊಯ್ದು ಅಮ್ಮೋಗಿಸಿದ್ಧ
ಹೊಂದಿಸಿ ದುರಡಿ ತುಂಬೂದಕ

ಶಿವ ಶಿವ ಅಂದಾನೋ ಸೀತಾಳಕ ಹೊಂಟಾನೊ
ಬನ್ನಿಮಕಾಳಿ ಗಿಡಕss
ಇಬ್ಬನಿ ಬೀಳೊದು ಚಳಿಗಾಲಕss
ಗಿಡದ ಎಲಿಗೆ ಒಂದು ಸೀತಾಳ ಉದುರಿ
ಸೀತಾಳ ಬಿಂದಗಿ ತುಂಬೂದಕ

ಹೂವ ಸೀತಾಳ ತಂದು ಜಳಜಳ
ಶಿವಾ ಇದ್ದೊ ಶಿವಪೂರಕ
ಮೂಡಲ ಹರದ ಸೂರ್ಯನ ಉದಿಯಕss
ಅಂಗಳ ಪಾವಡ ಮಾಡಿ
ತಂಗಳ ಪೂಜೆ ತಗದಾನೋ ಕಡಿಯಾಕss

ಎರದ ಸೀತಾಳ ಏರ್ರಿ ಹೂಗಳ
ಸೋಮಲಿಂಗನ ದೇಹಕ
ಅಮಸಿದ್ಧ ನೆಂಬಿ ಗುರುವಿನ ಪಾದಕ
ಹೊರಗ ಹ್ವಾಮ ಹೂಡಿ
ನೇಮ ನಡಿಸ್ಯಾನೋ ಹೊಗಿ ಹೊಯ್ತೋ ಕೈಲಾಸಕ [೧೦]

ಈ ಸೋಮಲಿಂಗ ಯಾರು ಏನು ಎಂಬುದರ ಕುರಿತು ತುಂಬಾ ಕನಿಷ್ಠವಾದ ಮಾಹಿತಿಯಿದೆ. ಕೈಲಾಸದಿಂದ ಬರುವಾಗ ಅಮೋಘಸಿದ್ಧನೊಂದಿಗೆ ಶಿವನು ಸೋಮಲಿಂಗನ ಅವತಾರದಲ್ಲಿ ಬಂದನೆಂದು ನಂಬಲಾಗಿದೆ. ಇವನೊಬ್ಬ 'ಸೋಮಸಿದ್ಧಾಂತಿ' ಆಗಿರಬಹುದೆ ಎಂಬ ಸಂಶಯವೂ ಬಂದು ಹೋಗುತ್ತದೆ. ಸ+ಉಮಾವನ್ನು ನೆನಪಿಗೆ ತರುವಂತೆ ಇವನ ಹೆಸರನ್ನು ಹೇಳುವಾಗಲೆಲ್ಲಾ ಗುರುಗೌರಿ ಸೋಮಲಿಂಗ ಎಂದು ಹೇಳಲಾಗುತ್ತದೆ. ಆದರೆ ಒಂದು ಮಾತಂತೂ ಸತ್ಯ. ಗುರು ಶಿಷ್ಯರ ಮಧ್ಯೆ ಒಂದು ರೀತಿಯ ಅವಿನಾಭಾವ ಸಂಬಂಧವಿದೆ. 'ಹಾಲಿನಂಥ' ದೇವರಿಗೆ (ಗುರುವಿಗೆ) 'ಸೀತಾಳದಂಥ' ಪೂಜಾರಿ (ಅಮೋಘಸಿದ್ಧ) ಎಂಬುದು ಈ ಪಂಥದ ಅಚಲ ನಂಬಿಕೆಯಾಗಿದೆ.

೨.೩ ಪಂಥ

೨.೩.೧ ಸಿದ್ಧಯೋಗೀಂದ್ರ

ಅಮೋಘಸಿದ್ಧನು ಒಬ್ಬ ಮಹಾಯೋಗಿಯಾಗಿ ಅವನ ಪಂಥದ ಅನುಯಾಯಿಗಳಿಗೆ ಗೋಚರಿಸಿದ್ದಾನೆ. ಡೊಳ್ಳಿನ ಹಾಡಿನಲ್ಲಿ 'ಯೋಗಿ ನನ್ನಮ್ಮೋಗಿ ಸಿದ್ಧ' ಎಂಬ ಶಬ್ದಪುಂಜ ಮೇಲಿಂದ ಮೇಲೆ ಅನುರುಣಿಸುತ್ತದೆ. 'ಸಿದ್ಧಯೋಗಿಂದ್ರ' ಎನ್ನುವುದು ಇನ್ನೊಂದು ಪದಪುಂಜ. ಆತ ಯೋಗ ಸಾಧನೆಯ ಮಾರ್ಗದಲ್ಲಿ ಸಾಧಕರ ಕೇಂದ್ರಗಳಿಗೆ ಅಲೆದಾಡಿ ಬಂದಿರುವುದು ತಿಳಿದುಬರುತ್ತದೆ. ಶ್ರೀಶೈಲ ಕ್ಷೇತ್ರಕ್ಕೆ ಅವನು ಹೋಗಿ ಬಂದದ್ದನ್ನು ಗಮಿನಿಸಿದರೆ ಅವನ ಯೋಗ ಸಾಧನೆಯ ಹಂಬಲದ ತೀವ್ರತೆ ತಿಳಿದು ಬರುತ್ತದೆ. ಮುಮ್ಮೆಟಗುಡ್ಡವಂತೂ ಅವನ ಯೋಗಸಾಧನೆಯ ಗರಡಿ ಮನೆ. ಇಲ್ಲಿ ಅವನು ಮುಳ್ಳಿನ ಹಾಸಿಗೆ ಮಾಡಿಕೊಂಡು ಕಲ್ಲಿನ ಗದ್ದುಗೆ ಮೇಲೆ ಕುಳಿತುಕೊಂಡು ಹಗ್ಗ ಕೋಲುಗಳಿಲ್ಲದೆ ಕಂಬಳಿ ಡೇರೆ ಹೊದೆದುಕೊಂಡು ಯೋಗಸಾಧನೆ ಮಾಡುವ ವರ್ಣನೆ ಡೊಳ್ಳಿನ ಹಾಡುಗಳಲ್ಲಿ ಮೇಲಿಂದ ಮೇಲೆ ಕಂಡು ಬರುತ್ತದೆ. ಯೋಗಿಯಾದವನು ಅಷ್ಟವಿಧ ಅತೀಂದ್ರೀಯ ಶಕ್ತಿಗಳನ್ನು ಹೊಂದಲು ಬಯಸುತ್ತಾನೆ. ಅಣಿಮಾ, ಕರಿಮಾ, ಲಹಿಮಾ, ಮಹಿಮಾ, ಪ್ರಾಪ್ತಿ, ಪ್ರಾಹ ಮಿಯಾರಾ, ಏಸಾತ್ಯುಯಮ್, ವಾಸಿತ್ಯುಯಮ್ ಎಂಬುವೇ ಅಷ್ಟವಿಧ ಅತೀಂದ್ರಿಯ ಶಕ್ತಿಗಳು.

ಅಮೋಘಸಿದ್ಧನ ಚಲನೆಯನ್ನು ಸೂಚಿಸುವ ಡೊಳ್ಳಿನ ಹಾಡಿನ ಸಾಲುಗಳನ್ನು ಗಮನಿಸಿದರೆ ಅವನು ಸಾಧಿಸಿದ ಯೋಗದ ಎತ್ತರ ತಿಳಿದುಬರುತ್ತದೆ. ನರಹಟ್ಟಿ ನಗರಾಯನ ಮಗಳಾದ ಪದ್ಮಾವತಿಯನ್ನು ತನಗೆ ಮದುವೆ ಮಾಡಿಕೊಡು ಎಂದು ಕೇಳಲು ಬಂದ ಅಮೋಘಸಿದ್ಧನಿಗೆ ಮಗಳನ್ನು ಕೊಡಲು ನಿರಾಕರಿಸಿದಾಗ ನಿರಾಶನಾಗಿ ಸಿಟ್ಟಿನಿಂದ ಮರಳಿ ಹೋಗುವ ಚಿತ್ರಣವನ್ನು ಈ ಸಾಲುಗಳು ನೀಡುತ್ತವೆ.

ಲಾಯದ ಪಡಸಾಲಿ ಇಳಿದಾನೆ ರಾಜ ಅಂಗಳದೊಳಗ್ಯಾನ
ರಾಜ ಅಂಗಳದೊಳಗ್ಯಾನೊ ಬಾಗುತ ಬಳಕುತ ನಡೆದಾನೊ
ಬಾಗುತ ಬಳಕುತ ನಡದಾನೋ ರಾಜ ಅಂಗಳದೊಳಗ್ಯಾನೊ
ರಾಜ ಅಂಗಳದೊಳಗ್ಯಾನು ಮಾಯಿನಾಗುತಾನಲ್ಲೊ
ಪರಿಮಳಗಾಳ್ಯಾಗಿ ನಡದಾನೆ ಸುಂಟರಗಾಳ್ಯಾಗಿ ಸುಳಿದಾನೆ
ಗಾಳಿರೂಪೀಲಿ ನೋಡರಿ ಮೇಲಾದ ಗುಡ್ಡಕ ಬಂದಾನೋ[೧೧]

(ಮಾಯಿನಾಗುತಾನಲ್ಲೊ) ಅಣಿಮಾ, (ಪರಿಮಳಗಾಳ್ಯಾಗಿ ನಡದಾನೆ) ಲಹಿಮಾ, (ಸುಂಟರಗಾಳ್ಯಾಗಿ ಸುಳಿದಾನೇ) ಮಹಿಮಾ ಎನ್ನುವಂಥ ಯೋಗ ಶಕ್ತಿಯನ್ನು ಅಮೋಘಸಿದ್ಧ ಪಡೆದಿದ್ದನೆನ್ನುವುದು ತಿಳಿದು ಬರುತ್ತದೆ. ಅಮೋಘಸಿದ್ಧನಿಗೆ 'ಪ್ರಾಪ್ತಿ' ಎಂಬ ಯೋಗಶಕ್ತಿ ಇದ್ದಂತೆ ತೊರುತ್ತದೆ. 'ಪ್ರಾಪ್ತಿ'ಯೆಂದರೆ ಭೂತ ವರ್ತಮಾನ ಭವಿಷ್ಯತ್ತನ್ನು ತಿಳಿದುಕೊಳ್ಳುವ ಹಾಗೂ ಗಗನಯಾನ ಮಾಡುವ ಸಾಮರ್ಥ್ಯವೆಂದು ಅರ್ಥ. ಕಾಲವನ್ನು ಬೇಧಿಸುವ ಅವನ ಸಾಮರ್ಥ್ಯದ ಕುರಿತು ತಿಳಿಸುವ ಡೊಳ್ಳಿನ ಹಾಡಿನ ಸಾಲುಗಳು ಹೀಗಿವೆ:

.... ಅಂಥಾ ಕಂಬಳಿ ನೋಡರಿ ಯಾರ ಪಡದಾರೇನಯ್ಯ
ಹಿಂದಿನ ಅರಹುಂಟ ತಿಳಿದವನೋ ಮುಂದಿನ ಅರಹುಂಟ ತಿಳಿದವನೋ
ನನ್ನಪ್ಪೊ ನನ ಮಾರಾಯ ನನ ತಂದಿ ಅಮ್ಮೋಗಿಸಿದ್ಧಾನೋ
ನನತಂದಿ ಅಮ್ಮೋಗಿಸಿದ್ಧಾನೋ ಅವನೇ ಪಡದಾನೇನಯ್ಯ[೧೨]

ಈ ಹಿಂದಿನ ಹಾಡಿನ ಸಾಲಿನಲ್ಲಿ ಬರುವ 'ಗಾಳಿರೂಪಿಲಿ ನೋಡರಿ ಮೇಲಾದ ಗುಡ್ಡಕ ಬಂದಾನೋ' ಎನ್ನುವ ಸಾಲು ಅಮೋಘಸಿದ್ಧನಲ್ಲಿರುವ ಗಗನಯಾನದ ಸಾಮರ್ಥ್ಯವನ್ನು ಬಿಂಬಿಸುವಂಥದ್ದಾಗಿದೆ.

ಅಮೋಘಸಿದ್ಧನ ಯೋಗಸಾಧನೆ ಕೇವಲ ಆತ್ಮಕಲ್ಯಾಣದ ನಿಲ್ದಾಣದಲ್ಲಿ ಹೋಗಿ ನಿಲ್ಲುವಂಥದ್ದಲ್ಲ. ಅದು ತನ್ನ ಸಾಧನೆಯ ಫಲವನ್ನು ಸಮಾಜಕ್ಕೆ ತಲುಪಿಸಲು ಹಂಬಲಿಸುವಂಥದ್ದು. ಜನರ ಅದರಲ್ಲೂ ವಿಶೇಷವಾಗಿ ರೈತರ ಕಷ್ಟ ಸುಖಗಳಿಗೆ ಅಮೋಘಸಿದ್ಧ ಸದಾ ಸ್ಪಂದಿಸಿದ್ದಾನೆ. ಜನ ಅವನನ್ನ ಇಂದಿಗೂ ಮಳೆ ಸಿದ್ಧ, ಬೆಳೆಸಿದ್ಧ ಎಂದೇ ಪ್ರೀತಿಯಿಂದ ಕರೆಯುತ್ತಾರೆ. ಅವನ ಮಕ್ಕಳನ್ನು ಮಳೆಸಿದ್ಧನ ಮಕ್ಕಳು ಮತ್ತು ಬೆಳೆಸಿದ್ಧನ ಮಕ್ಕಳು ಎಂದು ಕರೆಯುವುದು ವಾಡಿಕೆಯಾಗಿದೆ. ಹತ್ತೂರ ಒಗೆಣ್ಣ ಮುತ್ಯಾನ ಕುರಿತು ಪ್ರಚಲಿತವಿರುವ ಕಥನದ ಭಾಗವೊಂದು ಈ ರೀತಿಯಿದೆ:

ಒಂದಾನೆ ಒಂದು ದಿನದಲ್ಲಿ | ಒಂದಾನೆ ಒಂದು ಕಾಲೀಲಿ
ಇಂದಿನ ಕಾಲದಲ್ಯಾನು | ಹೊನ್ನಭಿವರಗಿದೊಳಗ್ಯಾನು

ಹೊನ್ನಭಿವರಗಿದೊಳಗ್ಯಾನು | ದುಃಷ್ಕಾಳ ಬೀಳುತಾವಲ್ಲೋ
ದುಃಷ್ಕಾಳ ಬೀಳುತಾವಲ್ಲೋ | ರಾಣೆ ರೈತರ ಮಕ್ಕಳು
ರಾಣೆ ರೈತರ ಮಕ್ಕಳು | ಮನದಲ್ಲಿ ವೇಚನೆ ಮಾಡ್ಯಾರ
ಮನದಲ್ಲಿ ವೇಚನೆ ಮಾಡ್ಯಾರ
ಮಳಿಯೆಸಿದ್ಧನ ಮಕ್ಕಳು | ಬೆಳಿಯೆಸಿದ್ಧನ ಮಕ್ಕಳು
ಬೆಳಿಯೇಸಿದ್ಧನ ಮಕ್ಕಳು | ನಾಡಗೌಡನ ಮಕ್ಕಳು
ನಾಡಗೌಡನ ಮಕ್ಕಳು | ಅಮ್ಮೋಗಿಸಿದ್ಧನ ಮಕ್ಕಳು
ಅಮ್ಮೋಗಿಸಿದ್ಧನ ಮಕ್ಕಳು | ಧರ್ಮರ ಕಟ್ಟೀಯ ಮ್ಯಾಲ್ಯಾನು
ಧರ್ಮರ ಕಟ್ಟೀಯ ಮ್ಯಾಲ್ಯಾನು | ಪಗಡಿಯನಾಡೂತ ಕುಂತಾರ
ರಾಣೆ ರೈತರ ಮಕ್ಕಳು | ಅವರಿಗೆ ಕೇಳೂನ ಅಂದಾರ
ಅವರಿಗೆ ಕೇಳೂನ ಅಂದಾರ | ಶಿವ ಶಿವ ಅನುವೂತಾರಲ್ಲ
ಶಿವಶಿವ ಅನುವೂತಾರಲ್ಲ | ತಮ್ಮ ವಾಡೇವ ಬಿಟ್ಟಾರ
ತಮ್ಮ ವಾಡೇವ ಬಿಟ್ಟಾರ | ಧರ್ಮರ ಕಟ್ಟೀಗೆ ಬಂದಾರ
ರಾಣೆ ರೈತರ ಮಕ್ಕಳು | ಧರ್ಮರಿಗೆ ತಾವೇನ ನುಡದಾರ
ಬರ್ರಿ ಬರ್ರೀ ಧರ್ಮರ್‍ಯಾ | ನಮ್ಮ ಗ್ರಾಮದ ಒಳಗ್ಯಾನ
ಮಳಿಯೇ ಇಲ್ಲೇಳ ಅಂದಾರೋ | ಬೆಳಿಯೇ ಇಲ್ಲೇಳಂದಾರೋ
ನಾವ್ಹ್ಯಾಂಗ ಜೋಪಾನ ಅಗೋನ | ಭಾಗ್ಯಾಗಳ್ಯಾಂಗ ಸಲವೂನ
ಮಳೀಯ ಸಿದ್ಧರ ಮಕ್ಕಳಿಗೆ ಕೇಳಲಿ ಬಂದೇವ ಅಂದಾರ [೧೩]

ರೈತಾಪಿ ಜನರಿಗೆ ವಿಪತ್ತು ಒದಗಿ ಬಂದರೆ ಅವರು ನೇರವಾಗಿ ಅಮೋಘಸಿದ್ಧನಲ್ಲಿಗೆ, ಅವನ ಮಕ್ಕಳಲ್ಲಿಗೆ ಹಾಗೂ ಮೊಮ್ಮಕ್ಕಳಲ್ಲಿಗೆ ಬರುತ್ತಿದ್ದರು. ಯಾಕೆಂದರೆ ಅವರಲ್ಲಿ ಕಂಬಳಿಬೀಸಿ ಮಳೆತರಿಸುವ ಸಾಮರ್ಥ್ಯವಿದೆ ಎಂದು ಜನ ಅಚಲವಾಗಿ ನಂಬಿದ್ದರು. ಅಮೋಘಸಿದ್ಧನು ಕೈಲಾಸದಿಂದ ಬರುವಾಗ ಮಳೆಕೀಲು ಬೆಳೆಕೀಲು ಪಡೆದುಕೊಂಡು ಬಂದಿದ್ದಾನೆ ಎಂದು ಸಾರುವ ಡೊಳ್ಳಿನ ಹಾಡೊಂದು ಹೀಗಿದೆ :

ಸ್ವಾಮಿ ನಮ್ಮಯ ದೇವರ ಬಂದಾರು ಬನ್ನೀರೆ
ಗುರುವೆ ನಮ್ಮಯ ದೇವರ ಬಂದಾವ ಬನ್ನೀರೆ
ಕೈಲಾಸದಾಗ ಇದ್ದಾವ ನೀನೆ
ಕೈಲಾಸದಿಂದ ಇಳಿದವ ನೀನೆ
ಅಮ್ಮೋಗಿ ನೀನೆ

ಮಳೆಯ ಕೀಲಿ ಬೇಡಿದವ ನೀನೆ
ಬೆಳೆಯ ಕೀಲಿ ಬೇಡಿದವ ನೀನೆ
ಮತ್ರ್ಯಾಕ ಜೋಪಾನ ಮಾಡಿದವ ನೀನೆ
ಅಮ್ಮೋಗಿ ನೀನೆ [೨೪]

ಇಲ್ಲಿ ಮುಖ್ಯವಾದ ಅಂಶವೆಂದರೆ ಅಮೋಘಸಿದ್ಧನಿಗೆ ರೈತರ ಪರವಾಗಿ ಇರುವ ಕಾಳಜಿ. ಮುಗಿಲನ್ನೇ ನಂಬಿ ಬದುಕುವ ಜನರಲ್ಲಿ ಇಂಥ ನಂಬಿಕೆಗಳು ಆತ್ಮ ವಿಶ್ವಾಸವನ್ನು ಹೆಚ್ಚಿಸುತ್ತವೆ. ಅಮೋಘಸಿದ್ಧ ಹಲವಾರು ಸಂದರ್ಭಗಳಲ್ಲಿ ತನ್ನ ಹೋಮದ ಕಂಬಳಿ (ವ್ಯೋಮದ ಕಂಬಳಿ?) ಬೀಸಿ ಅರಗಳಿಗೆಯಲ್ಲಿ ಮಳೆ ಬರಿಸಿದ ಹಲವಾರು ಕಥನಗಳು ಅವನ ಸುತ್ತಲು ಹುಟ್ಟಿಕೊಂಡಿವೆ. ವಿಜಾಪುರ ತಾಲೂಕಿನ ಇಟ್ಟಂಗಿಹಾಳ ಗ್ರಾಮದಲ್ಲಿ ನಡೆದಿದೆ ಎಂದು ಹೇಳಲಾದ ಪ್ರಸಂಗವೊಂದು ಹೀಗಿದೆ. ಮುಂಗಾರು ಮಳೆ ಕೈಕೊಟ್ಟ ಕಾರಣದಿಂದ ಆ ಭಾಗದ ಕೆರೆಹಳ್ಳಗಳು ಬತ್ತಿಹೋದವು. ದನಗಳಿಗೆ ತಿನ್ನಲು ಮೇವು ಹಾಗೂ ಕುಡಿಯಲು ನೀರು ಇಲ್ಲದಂಥ ದುಃಸ್ಥಿತಿ ಒದಗಿ ಬಂತು. ಅಲ್ಲಿಗೆ ಹೋಗಿದ್ದ ಅಮೋಘಸಿದ್ಧ ಮೂರು ಗಳಿಗೆಯಲ್ಲಿ ಕಂಬಳಿ ಬೀಸಿ ಮಳೆ ತರಿಸಿದನು. ನೀರು ಬದುಕಿನ ಜೀವರಸ. ಅದನ್ನು ನೀಡುವ ಮೂಲಕ ಅಮೋಘಸಿದ್ಧನು ಜೀವಪರ ಯೋಗ ಸಾಧಕನ ಹಾಗೆ ನಮಗೆ ಗೋಚರಿಸುತ್ತಾನೆ. ಅಮೋಘಸಿದ್ಧ 'ಫಲವತ್ತತೆ' ಪರವಾದ ವ್ಯಕ್ತಿ. ಆತ ನೆಲವು ಬಂಜೆ ಆಗುವುದನ್ನು ಎಂದೂ ಸಹಿಸಲಾರ. ಆದರೆ ಅದೇ ಕಾಲಕ್ಕೆ ಜೀವಧಾರೆಯಾದ ನೀರನ್ನು ಸಂಪತ್ತಿನ ಕ್ರೋಢೀಕರಣಕ್ಕೆ ಅವನು ಬಳಸಿಕೊಂಡವನಲ್ಲ. ಇಂದು ನೀರು ಬಹು ದೊಡ್ಡ ಶಕ್ತಿಯಾಗಿ ಜಾಗತಿಕ ಮಟ್ಟದ ಸ್ಥಾನವನ್ನು ಅಲಂಕರಿಸಿಕೊಳ್ಳುತ್ತಿದೆ. ಇಂಥ ಸಂದರ್ಭದಲ್ಲಿ ಅಮೋಘಸಿದ್ಧನ ಜೀವಪರ ನಿಲುವಿನಿಂದ ಆಧುನಿಕ ಜಗತ್ತು ಕಲಿಯಬೇಕಾದದ್ದು ಬಹಳಷ್ಟಿದೆ.

ಅಮೋಘಸಿದ್ಧನನ್ನು ನಾಡಗೌಡ ಎಂದೂ ಕರೆಯಲಾಗುತ್ತದೆ. ನಾಡ ಗೌಡಿಕೆಯ ಅಧಿಕಾರವನ್ನು ಭೋಗದ ಹುದ್ದೆ ಆಗಿ ಬಳಸದೆ ಜನರ ಸೇವೆ ಮಾಡಲು ದೊರೆತ ಅವಕಾಶವೆಂದು ಭಾವಿಸಿದವನು. ಆತ ವಿಪತ್ತಿಗೆ ತುತ್ತಾದವರ, ಅಸಹಾಯಕರ, ದುರ್ಬಲ ಜನರ ಪರವಾಗಿ ನಿಂತು ಎಷ್ಟೋ ಜನಪರ ಕೆಲಸಗಳನ್ನು ಮಾಡಿದ್ದಾನೆ. ಇಂಥದೊಂದು ಅಂಶವನ್ನು ಗೀಜಗನಹಳ್ಳಿ ಪ್ರಸಂಗದಲ್ಲಿ ನೋಡಬಹುದು. ಗೀಜಗನಹಳ್ಳಿ ಅಂದರೆ ಇಂದಿನ ವಿಜಾಪುರ ನಗರ. ಒಂದು ಸಲ ಆ ಊರಿನಲ್ಲಿದ್ದ ಕಲಾವತಿ ಎಂಬ ಸದ್ಗೃಹಿಣಿಗೆ ವಿಪತ್ತು ಒದಗಿ ಬರುತ್ತದೆ. ಇವಳು ನೀರು ತರಲು ಬಾವಿಗೆ ಹೋಗಿ ಮರಳಿ ಬರುವಷ್ಟರಲ್ಲಿ ಇವಳ ಹಾಗೆಯೇ ಇರುವ ಇನ್ನೊಬ್ಬಳು ಮನೆ ಪ್ರವೇಶಿಸಿ ತಾನೇ ಆ ಮನೆಯ ಒಡತಿ ಎಂದು ಹಕ್ಕು ಸ್ಥಾಪಿಸುತ್ತಾಳೆ. ಕಲಾವತಿ ಆಗ ಕಂಗಾಲಾಗುತ್ತಾಳೆ. ಆದರೆ ಅಲ್ಲಿಗೆ ಬಂದ ಅಮೋಘಸಿದ್ಧ ಅವಳ ಪರವಾಗಿ ನಿಂತು ನ್ಯಾಯ ಒದಗಿಸುತ್ತಾನೆ. ನಿಜವಾದ ಕಲಾವತಿ ತಾನೆ ಎಂದು ಸಿದ್ಧಪಡಿಸುವವಳು ಬೆತ್ತಲೆಯಾಗಿ ಬಂದು ಹೂಜಿಯೊಂದರ ಸುತ್ತ ಸುತ್ತಿ ಹೂಜಿಯನ್ನು ಪ್ರವೇಶಿಸಬೇಕು ಎಂಬ ಪಂಥವೊಡ್ಡುತ್ತಾನೆ. ಮಾನ ಕಳೆದುಕೊಳ್ಳುವ ಇಂಥ ಪಂಥವನ್ನು ನಿಜವಾದ ಕಲಾವತಿ

ನಿರಾಕರಿಸುತ್ತಾಳೆ. ಆದರೆ ವಂಚಕಿಯು ಪಂಥ ಒಪ್ಪಿಕೊಂಡು ಪ್ರದಕ್ಷಿಣೆ ಹಾಕಿ ಹೂಜಿಯನ್ನು ಪ್ರವೇಶಿಸಿ ಬಿಡುತ್ತಾಳೆ. ಆಗ ಅಮೋಘಸಿದ್ಧ ಅವಳನ್ನು ಹೂಜಿಯಲ್ಲಿ ಬಂಧಿಸಿಬಿಡುತ್ತಾನೆ. ಅಮೋಘಸಿದ್ಧನ ನ್ಯಾಯ ಚಾತುರ್ಯದ ಕಾರಣವಾಗಿ ವಂಚಕಿ ಜನರೆದುರಿಗೆ ಬೆತ್ತಲಾಗುತ್ತಾಳೆ ಮತ್ತು ಬಂಧಿಯಾಗುತ್ತಾಳೆ.

ನಾಡನ್ನು ಆಳುವ ದೊರೆಗಳಿಗೂ ಸಾಧ್ಯವಾಗದಂಥ ತಕರಾರುಗಳನ್ನು ಅಮೋಘಸಿದ್ಧ ಬಗೆಹರಿಸಿದ ಕಥನವೊಂದಿದೆ. ವಿಜಾಪುರ ತಾಲೂಕಿನ ಶಿವಪುರಹಟ್ಟಿ(ಮಕಣಾಪುರಗ್ರಾಮ)ಯು ತೊರವಿಯ ದೊರೆಯ ಅಧೀನದಲ್ಲಿತ್ತು. ಶಿವಪುರಹಟ್ಟಿಯ ಗೌಡನಿಗೆ ದುರ್ದಿನಗಳು ಬಂದಾಗ ಅದರಿಂದ ಪಾರಾಗಲು ಮೂಢನಂಬಿಕೆಗೆ ಬಲಿಯಾಗಿ ಅದೇ ಊರಿನ ತಮ್ಮಟಗೇರ ಎಂಬ ಮನೆತನದ ಜಡೆಕೂಸನ್ನು ಬಲಿಕೊಡುತ್ತಾನೆ. ಕೂಸಿನ ತಾಯಿ ನ್ಯಾಯ ಒದಗಿಸುವಂತೆ ಕೋರಿ ತೊರವಿಯ ದೊರೆಯ ಮೊರೆ ಹೋಗುತ್ತಾಳೆ. ದೊರೆಯ ಸೇವಕರು ಬಂದು ಹೋಗುತ್ತಾರಾದರೂ ಅವಳಿಗೆ ನ್ಯಾಯ ದೊರೆಯುವುದಿಲ್ಲ. ನ್ಯಾಯ ಯಾವಾಗಲೂ ಉಳ್ಳವರ ಪರವಾಗಿಯೇ ಇರುತ್ತದೆ. ಬಡವರು ಎಂದಿಗೂ ನ್ಯಾಯದಿಂದ ವಂಚಿತರಾಗುತ್ತಲೇ ಬಂದಿರುತ್ತಾರೆ. ಹೀಗಾಗಿ ನ್ಯಾಯ ಶಿವಪುರಹಟ್ಟಿ ಗ್ರಾಮದ ಗೌಡ ನಗರಾಯನ ಪರವಾಗಿಯೇ ಆಗುತ್ತದೆ. ಸಮಾಧಾನವಾಗದ ತಾಯಿ ಅಮೋಘಸಿದ್ಧನಲ್ಲಿಗೆ ನ್ಯಾಯ ತೆಗೆದುಕೊಂಡು ಬರುತ್ತಾಳೆ. ಅಜ್ಞಾನದಿಂದ ಬಲಿಕೊಟ್ಟ ನಗರಾಯನಿಗೂ ಕೂಸನ್ನು ಕಳೆದುಕೊಂಡಿದ್ದ ತಾಯಿಗೂ-ಇಬ್ಬರಿಗೂ ತೊಂದರೆಯಾಗದ ಹಾಗೆ ನ್ಯಾಯವನ್ನು ಅಮೋಘಸಿದ್ಧ ಬಗೆಹರಿಸುತ್ತಾನೆ. ಅಂದರೆ ನಗರಾಯ ಅಪರಾಧಿಯೂ ಆಗದ ಹಾಗೆ, ಕೂಸೂ ಸಾಯದ ಹಾಗೆ ಸಮಸ್ಯೆಯನ್ನು ಬಗೆಹರಿಸುತ್ತಾನೆ.

೨.೩.೨ ನಾಥ ಪಂಥೀಯ

ಅನೇಕ ಪಂಥಗಳ ಹಾಗೂ ತತ್ವಗಳ ಪ್ರಭಾವದಲ್ಲಿ ತನ್ನ ವ್ಯಕ್ತಿತ್ವ ರೂಪಿಸಿಕೊಂಡಿರುವ ಅಮೋಘಸಿದ್ಧ ಸ್ತ್ರೀಯರ ಕುರಿತಾಗಿ ದ್ವಂದ್ವ ನಿಲುವನ್ನು ತಾಳಿದವನಾಗಿದ್ದಾನೆ. ಅವನ ಕುರಿತಾದ ಕಥನಗಳಲ್ಲಿ ನಾವು ಈಗಾಗಲೇ ನೋಡಿರುವಂತೆ ಕೈಲಾಸದಿಂದ ಬರುವಾಗ ಹುಟ್ಟು ಬಂಜೆಯರಿಗೆ ತೊಟ್ಟಿಲ ಭಾಗ್ಯ ಕೇಳಿ ಪಡೆದವನೆಂದು ನಂಬಲಾಗಿದೆ.

ಬಡವಗ ಭಾಗ್ಯಾ ಕೊಟ್ಟವ ನೀನೆ
ಬಂಜೆಗೆ ಸಂತಾನ ಕೊಟ್ಟಾವ ನೀನೆ
ನಡಮನಿ ತೊಟ್ಟಿಲ ಕಟ್ಟಿಸಿದವ ನೀನೆ
ಅಮ್ಮೋಗಿ ನೀನೆ[೨೦]

ಅಮೋಘಸಿದ್ಧನಲ್ಲಿ ನೆಲವಾಗಲೀ, ಹೆಣ್ಣಾಗಲೀ ಬಂಜೆ ಅನ್ನಿಸಿಕೊಳ್ಳಬಾರದೆಂಬ ಕಾಳಜಿ ಇದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ವಂಶದ ಕುಡಿಗಳು ಬೆಳೆಯುವ ಹಾಗೆ ನಡೆದುಕೊಳ್ಳುವ ಸಾಧನ ಮಾತ್ರ. ಇಂಥ ವ್ಯವಸ್ಥೆಯಲ್ಲಿ ಹೆಣ್ಣು ಫಲನೀಡದಿದ್ದರೆ ಅವಳಿಗೆ ಕವಡೆಯ ಕಿಮ್ಮತ್ತೂ ಇಲ್ಲ. ಇಂಥ ಸಂದರ್ಭದಲ್ಲಿ

ಹುಟ್ಟು ಬಂಜೆಯರಿಗೆ ತೊಟ್ಟಿಲ ಭಾಗ್ಯ ನೀಡುವ ಮೂಲಕ ಅಮೋಘಸಿದ್ಧ ಸ್ತ್ರೀಯರ ಪರವಾಗಿ ನಿಲ್ಲುತ್ತಾನೆ. ಬಂಜೆ ಪಟ್ಟ ಕಟ್ಟಿಸಿಕೊಂಡ ಹಲವಾರು ಸ್ತ್ರೀಯರಿಗೆ ಅವನು ಸಂತಾನ ಫಲವನ್ನು ನೀಡಿದ್ದಾನೆನ್ನುವ ಪ್ರಸಂಗಗಳು ಇಡೀ ಕಥನದ ತುಂಬ ಇಡಿಕಿರಿದು ತುಂಬಿವೆ.

ಆದರೆ ಹೆಂಡತಿಯಾದ ಪದ್ಮಾವತಿಯ ಬಗೆಗೆ ಅವನ ನಿಲುವು ತೀರಾ ಭಿನ್ನವಾದುದಾಗಿದೆ. ಅಮೋಸಿದ್ಧನ ಯೋಗ ಸಾಧನೆಯ ಗುರು ಸೋಮಲಿಂಗ ಮುಮ್ಮೆಟಗುಡ್ಡದ ಸಮೀಪದ ಶಿವಪುರಹಟ್ಟಿಯಲ್ಲಿ ಇರುತ್ತಾನೆ. ಬಹುಪಾಲು ಯೋಗಿಗಳು ಕಾಣಿಸಿಕೊಳ್ಳುವ ಜಾಗೆ ತಿಪ್ಪೆ. ಅಂಥ ತಿಪ್ಪೆಯಲ್ಲಿ ಗುರು ಸೋಮಲಿಂಗ ವಾಸಿಸುತ್ತಿರುತ್ತಾನೆ. ನಿತ್ಯ ರಾತ್ರಿ ಗುರುವಿನ ದರ್ಶನಕ್ಕೆಂದು ಅಲ್ಲಿಗೆ ಅಮೋಘಸಿದ್ಧ ಹೋಗಿ ಬರುತ್ತಿರುತ್ತಾನೆ. ಹೀಗೆ ಬರುತ್ತಿದ್ದುದನ್ನು ಒಂದು ಸಲ ಕದ್ದು ನೋಡಿದ ಪದ್ಮಾವತಿ ಅವನಿಗೆ ಮನಸೋಲುತ್ತಾಳೆ ಹಾಗೂ ಅವನನ್ನೇ ಮದುವೆಯಾಗಬೇಕೆಂದು ನಿರ್ಧರಿಸುತ್ತಾಳೆ. ವಿಷಯ ತಿಳಿದ ಅಮೋಘಸಿದ್ಧ ಕನ್ಯೆ ನೋಡಲು ತನ್ನ ಬಲಗೈ ಬಂಟನಾದ ಭೂತಾಳಸಿದ್ಧನೊಂದಿಗೆ ಮುಪ್ಪಾನುಮುದುಕನ ರೂಪದಲ್ಲಿ ಗೂನು ಬೆನ್ನಿನವನಾಗಿ ಊರುಗೋಲಿನವನಾಗಿ ಭಿಕಾರಿಯ ಹಾಗೆ ಬರುತ್ತಾನೆ. ಕನ್ಯೆ ನೋಡಲು ಬಂದದ್ದು ನಿನ್ನ ಮಗನಿಗೋ ಮೊಮ್ಮಗನಿಗೋ ಎಂದು ಪದ್ಮಾವತಿಯ ತಂದೆ ಸಹಜವಾಗಿಯೇ ಕೇಳುತ್ತಾನೆ. ನನ್ನ ಮಗಳನ್ನು ನಿನ್ನಂಥ ಮುದುಕನಿಗೆ ಕೊಡುವುದಕ್ಕಿಂತ ಹಾಳುಬಾವಿಗೆ ನೂಕುವುದೇ ಲೇಸು ಎಂದು ಹೇಳುತ್ತಾನೆ. ಅವಮಾನಿತನಾದ ಅಮೋಘಸಿದ್ಧನು ತನ್ನ ಯೋಗಸಾಧನೆಯ ಮೂಲಕ ನಗರಾಯನಿಗೆ ತೊಂದರೆ ಕೊಡಲು ಪ್ರಾರಂಭಿಸುತ್ತಾನೆ. ಕಷ್ಟ ತಾಳಲಾರದೆ ನಗರಾಯ ಅವನಿಗೆ ಮಗಳನ್ನು ಕೊಡಲು ಒಪ್ಪುತ್ತಾನೆ. ಆದರೆ ಮದುವೆಯ ಸಂದರ್ಭದಲ್ಲಿ ಅವನು ಇನ್ನೂ ವಿಚಿತ್ರವಾಗಿ ನಡೆದುಕೊಳ್ಳುತ್ತಾನೆ. ಮದುಮಗನಾದ ತಾನು ಲಗ್ನಕ್ಕೆ ಹೋಗದೆ ತನ್ನ ಬಳಿಯಲ್ಲಿದ್ದ ನೇಮದ ಬೆತ್ತವನ್ನು ಬಂಟ ಭೂತಾಳಸಿದ್ಧ, ಬಾಳೇದ ಖಂಡ್ರಾಯ ಹಾಗೂ ಮಣೂರ ಎಲ್ಲಮ್ಮನ ಜೊತೆಗೆ ಕಳುಹಿಸಿ ಕೊಡುತ್ತಾನೆ. ಬೆತ್ತದ ಎಡಗಡೆ ಪದ್ಮಾವತಿಯನ್ನು ಕೂಡ್ರಿಸಿ ಅಕ್ಷತೆ ಹಾಕುವಂತೆ ಹೇಳುತ್ತಾನೆ. ಇನ್ನೂ ವಿಚಿತ್ರದ ಸಂಗತಿಯೆಂದರೆ ಮದುವೆಯಾದ ನಂತರ ಯೋಗಸಾಧನೆ ಮಾಡುತ್ತ ಮುಮ್ಮೆಟಗುಡ್ಡದಲ್ಲಿ ಉಳಿಯುತ್ತಾನೆ ಮತ್ತು ಪದ್ಮಾವತಿಗೆ ಅರಕೇರಿಯಲ್ಲಿ ಮನೆಯೊಂದನ್ನು ಮಾಡಿ ಅಲ್ಲಿಯೇ ಇಡುತ್ತಾನೆ. ಅಂದರೆ ಅಮೋಘಸಿದ್ಧ ವಿವಾಹಿತ ಬ್ರಹ್ಮಚಾರಿಯ ಹಾಗೆ ವರ್ತಿಸುತ್ತಾನೆ. ಇದನ್ನೆಲ್ಲಾ ನೋಡಿದರೆ ಪದ್ಮಾವತಿಯನ್ನು ತನ್ನ ಯೋಗ ಸಾಧನೆಯಲ್ಲಿನ ತೊಡಕಿನ ಹಾಗೆ ಭಾವಿಸಿದಂತೆ ತೋರುತ್ತದೆ. ಅದೂ ಅಲ್ಲದೆ ಬೇಡಿದವರಿಗೆ ಸಂತಾನ ಭಾಗ್ಯ ಕೊಡುವ ಈ ಅಮೋಘಸಿದ್ಧ ಎಷ್ಟೋ ವರ್ಷಗಳವರೆಗೆ ತನ್ನ ಹೆಂಡತಿಗೆ ಸಂತಾನ ನೀಡದೇ ಹೋಗುತ್ತಾನೆ. ಒಟ್ಟಾರೆ ಈತ ಪದ್ಮಾವತಿಯ ಬಗೆಗೆ ಒಂದು ರೀತಿಯ ಉಪೇಕ್ಷಾ ಮನೋಭಾವ ತಾಳಿರುವಂತೆ ತೋರುತ್ತದೆ. ಅಮೋಘಸಿದ್ಧ ಈ ತೆರನಾಗಿ ವರ್ತಿಸುತ್ತಿರುವುದಕ್ಕೆ ಬಹುಶಃ ಆತನ ಮೇಲೆ ಆಗಿನ ಸಂದರ್ಭದಲ್ಲಿ ಆಗಿರಬಹುದಾದ ನಾಥ ಸಂಪ್ರದಾಯದ ಪ್ರಭಾವ ಕಾರಣವಾಗಿರಬಹುದು. ನಾಥರು ಪ್ರಾಣ(ಉಸಿರು), ಚಿತ್ (ಮನಸ್ಸು) ಹಾಗೂ ಬಿಂದು (ವೀರ್ಯ) ಈ

ಮೂರೂ ಯಾವಾಗಲೂ ಚಂಚಲವಾದವುಗಳೆಂದು ಭಾವಿಸಿದವರು. ನಾಥರು ಇವುಗಳ ನಿಯಂತ್ರಣಕ್ಕೂ ಯೋಗಸಾಧನೆಗೂ ನೇರವಾದ ಸಂಬಂಧವನ್ನು ಕಲ್ಪಿಸಿಕೊಂಡವರು. ಪ್ರಾಣವನ್ನು ಊರ್ಧ್ವಮುಖಿಯಾಗಿಸಿ, ಚಿತ್ ಅನ್ನು ಸ್ಥಿರಗೊಳಿಸಿದವರು. ಅಲ್ಲದೆ 'ಬಿಂದು' ಪತನವಾಗದ ಹಾಗೆ ಜತನದಿಂದ ಕಾಪಾಡಿಕೊಳ್ಳುವವರು. ಒಂದರ್ಥದಲ್ಲಿ ನಾಥರು ವಿರಕ್ತಿ ಮಾರ್ಗದವರು. ಸ್ತ್ರೀಸಂಗ ಮಾಡಿದರೆ ಮನೆಯಲ್ಲಿ ಹೆಣ್ಣು ಹುಲಿಯನ್ನು ಸಾಕಿದಂತೆ ಎಂದೂ ಭಾವಿಸಿದವರು. ಯೋಗಸಾಧನೆಯಲ್ಲಿನ ಇಂಥ ನಿಲುವುಗಳು ಪುರುಷ ಕೇಂದ್ರಿತ ವ್ಯವಸ್ಥೆಯಲ್ಲಿ ರೂಪು ಪಡೆದಿರುವಂಥವುಗಳು ಎನ್ನುವುದರಲ್ಲಿ ಸಂಶಯವೇ ಇಲ್ಲ. ನಾಥಪಂಥೀಯನಾದ ಮಚ್ಛೇಂದ್ರನಾಥನು ಸ್ತ್ರೀ ರಾಜ್ಯದ ರಾಣಿ ಪಿಂಗಳೆಯ ಮೋಹ ಪಾಶದಲ್ಲಿ ಸಿಲುಕಿ ಯೋಗಸಾಧನೆಯನ್ನು ಮರೆತು ಬಿಡುತ್ತಾನೆ. ಆಗ ಅವನ ಶಿಷ್ಯ ಗೋರಖನಾಥನು ಮದ್ದಳೆ ಬಾರಿಸುವವನ ವೇಷದಲ್ಲಿ ಅಲ್ಲಿಗೆ ಹೋಗಿ ಗುರುವನ್ನು ಬಿಡಿಸಿಕೊಂಡು ಬರುತ್ತಾನೆ. ರಾ.ಚಿಂ.ಡೇರೆ ಅವರು ಈ 'ಸ್ತ್ರೀ' ರಾಜ್ಯವು ಯೋಗಿನಿಯರಿಂದ ಕೂಡಿರುತ್ತಿದ್ದ ಶ್ರೀಶೈಲದ ಕದಳಿವನವೇ ಇರಬಹುದು ಎಂದು ತರ್ಕಿಸಿದ್ದಾರೆ.. ತೆಲುಗಿನ ಕವಿ ಗೋರನ 'ನವನಾಥ ಚರಿತ್ರಮು' ಎಂಬ ಕೃತಿ ರಚಿಸಿದ್ದಾನೆ. ಈ ಕೃತಿಯನ್ನು ಆತ ಶ್ರೀಶೈಲ ಮಲ್ಲಿಕಾರ್ಜುನನಿಗೆ ಅರ್ಪಿಸಿದ್ದಾನೆ. ಈ ಅಂಶಗಳನ್ನೆಲ್ಲ ಗಮನಿಸಿದಾಗ ನಾಥ ಪಂಥಕ್ಕೂ ಶ್ರೀಶೈಲದ ಕದಳಿವನಕ್ಕೂ ನಿಕಟ ಸಂಬಂಧವಿರುವುದು ಗೋಚರಿಸುತ್ತದೆ. ಅಮೋಘಸಿದ್ಧನೂ ಮುಮ್ಮೆಟಗುಡ್ಡದಲ್ಲಿ ನೆಲೆ ನಿಲ್ಲುವ ಮುನ್ನ ಶ್ರೀಶೈಲಕ್ಕೆ ಹೋಗಿ ಅಲ್ಲಿ ಕಂಬಳಿ ಗದ್ದುಗೆ ಹಾಕಿ ಯೋಗಸಾಧನೆ ಮಾಡಿ 'ಕಂಬಳಿಮಠ' (ಕಮರಿಮಠ?) ಸ್ಥಾಪಿಸಿ ಬಂದನು ಎಂದು ಅವನ ಕುರಿತಾದ ಕಥನ ಹೇಳುತ್ತದೆ. ಈ ಕಥನವು ಅಮೋಘಸಿದ್ಧನಿಗೂ ನಾಥಪಂಥಕ್ಕೂ ಇರುವ ನಂಟನ್ನು ಸೂಚಿಸುವಂಥದ್ದಾಗಿದೆ.

ನಾಥ ಸಂಪ್ರದಾಯಕ್ಕೂ ತಿಪ್ಪೆಗಳಿಗೂ ನಿಕಟ ಸಂಬಂಧವಿದೆ. ಮಚ್ಛೇಂದ್ರನಾಥನು ಒಂದು ಸಲ ದೇಶ ಸಂಚಾರ ಮಾಡುವಾಗ ದಾರಿಮಧ್ಯದಲ್ಲಿ ಭೆಟ್ಟಿಯಾದ ಕೆಳಜಾತಿಯ ಹೆಣ್ಣು ಮಗಳೊಬ್ಬಳು ಸಂತಾನ ಫಲ ನೀಡುವಂತೆ ಅವನಲ್ಲಿ ವಿನಂತಿ ಮಾಡಿಕೊಳ್ಳುತ್ತಾಳೆ. ಮಚ್ಛೇಂದ್ರನಾಥನು ಅವಳಿಗೆ ವಿಭೂತಿ ಮಂತ್ರಿಸಿ ಕೊಡುತ್ತಾನೆ. ಆದರೆ ಮಹಿಳೆ ವಿಭೂತಿಯಿಂದ ಮಕ್ಕಳು ಹುಟ್ಟಲು ಹೇಗೆ ಸಾಧ್ಯವೆಂದು ಸಂಶಯಿಸಿ ಅದನ್ನು ತಿಪ್ಪೆಗೆ ಎಸೆಯುತ್ತಾಳೆ. ಹನ್ನೆರಡು ವರ್ಷಗಳ ನಂತರ ತಿಪ್ಪೆಯಲ್ಲಿ ಗೋರಖನಾಥ ಜನಿಸಿ ಬಂದನೆಂಬ ಪ್ರತೀತಿ ಇದೆ. ಅಮೋಘಸಿದ್ಧ ಆರಾಧಿಸುವ ಗುರು ಸೋಮಲಿಂಗನನ್ನೂ ನಾವು ನೋಡುವುದು ತಿಪ್ಪೆಯಲ್ಲಿಯೇ. ಸೋಮಲಿಂಗ ತಿಪ್ಪೆಯಲ್ಲಿ ಇರುವಾಗ ಅವನ ಮೈಗೆ ಮೆತ್ತಿರುತ್ತಿದ್ದ ಗೊಬ್ಬರದ ಕಣಗಳು ಮುತ್ತು ರತ್ನಗಳಾಗಿ ಬಿಡುತ್ತಿದ್ದವೆಂತಲೂ ಅವುಗಳನ್ನು ಸಂಗ್ರಹಿಸಿಕೊಳ್ಳುತ್ತಿದ್ದ ಶಿವಪುರಹಟ್ಟಿ(ಮಕಣಾಪುರ)ಯ ಗೌಡ ನಗರಾಯ ದೊಡ್ಡ ಶ್ರೀಮಂತನಾದನೆಂದೂ ಅಮೋಘಸಿದ್ಧನ ಕಥನದಲ್ಲಿ ಬರುತ್ತದೆ. 'ನಾಥಪಂಥಕ್ಕೆ ಕಾಪಾಲಮತ, ಸಿದ್ಧಮತ, ಸಿದ್ಧಮಾರ್ಗ, ಯೋಗಮಾರ್ಗ, ಅವಧೂತ ಮತ, ಅವಧೂತ ಸಂಪ್ರದಾಯ, ಗೋರಖ ಪಂಥ ಎಂಬೆಲ್ಲ ಹೆಸರುಗಳಿವೆ.[೨೬] ಅಲ್ಲದೆ ನಾಥಪಂಥದಲ್ಲಿ ಗುರುತ್ವವನ್ನು ಒಪ್ಪಿಕೊಂಡ ಶಿಷ್ಯನಿಗೆ 'ಅವಧು'

ಅಥವಾ 'ಯೋಗಿ' ಎಂದು ಕರೆಯುವುದು ವಾಡಿಕೆಯಾಗಿದೆ. ಅಮೋಘಸಿದ್ಧ ತನ್ನ ಪುಣ್ಯದ ಮಗನಾದ ಮಹಾಸಿದ್ಧನ ಒತ್ತಾಯಕ್ಕೆ ಮಣಿದು ಹೆಂಡತಿ ಪದ್ಮಾವತಿಗೆ ಸಂತಾನ ಫಲ ನೀಡುತ್ತಾನೆ. ಅವಳಿಗೆ ನಾಲ್ಕು ಜನ ಗಂಡುಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು ಜನಿಸುತ್ತಾರೆ. ಮೊದಲ ಮಗನಿಗೆ 'ಅವಧೂ ಸಿದ್ಧ' ಎಂದು ಹೆಸರಿಟ್ಟಿದ್ದಾನೆ.

ಕಣ್ಹಪಾದ ಅಥವಾ ಕಣ್ಹಪಾ ಎಂಬ ಹೆಸರಿನ ನಾಥಯೋಗಿಯೊಬ್ಬನಿದ್ದಾನೆ. ಅವನ ಹೆಸರು ನವನಾಥರ ಪಟ್ಟಿಯಲ್ಲಿಯೂ ಚೌರಾಂಸಿಸಿದ್ಧರ ಪಟ್ಟಿಯಲ್ಲಿಯೂ ನಮೂದಿತವಾಗಿದೆ. ಈ ಕಣ್ಹಪಾದನು ಸಹಜಯಾನವನ್ನು ತೊರೆದು ನಾಥಪಂಥ ಸೇರಿದ ಎಂದು ಹೇಳಲಾಗುತ್ತದೆ. ಅಮೋಘಸಿದ್ಧನ ಮೇಲೆ ನಾಥಸಂಪ್ರದಾಯದ ಪ್ರಭಾವವಿರುವ ಕಾರಣವಾಗಿಯೇ ಪದ್ಮಾವತಿಯಲ್ಲಿ ತನಗೆ ಹುಟ್ಟಿದ ನಾಲ್ಕನೆಯ ಮಗನಿಗೆ 'ಜ್ಯೋತಿ ಕನ್ನಪ್ಪ' ಅಥವಾ 'ಕಡಿಹುಟ್ಟ ಕನ್ನ ಮುತ್ಯಾ' ಎಂದು ಕರೆದಿದ್ದಾನೆ. ಈ ಕನ್ನಪ್ಪ ಎನ್ನುವುದು ಕಣ್ಹಪಾದದ ರೂಪಾಂತರವಾಗಿದೆ.

ಅಮೋಘಸಿದ್ಧನ ಮೇಲೆ ನಾಥಸಂಪ್ರದಾಯದ ಪ್ರಭಾವವಾಗಿರುವುದರಿಂದ ಆತನ ನಿಲುವಿನಲ್ಲಿ ಜಾತಿನಿರಸನ ಪ್ರಜ್ಞೆ ಸಹಜವಾಗಿಯೇ ಮೂಡಿ ಬಂದಿದೆ. 'ಗುರು ಪಂಥ'ಗಳು ಸಾಮಾನ್ಯವಾಗಿ ಜ್ಯಾತ್ಯಾತೀತ ನಿಲುವನ್ನು ಹೊಂದಿರುತ್ತವೆ. ಗುರುಪಂಥದಲ್ಲಿ ಹೆತ್ತ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಗುರುವಿಗೆ ಅರ್ಪಿಸುತ್ತಾರೆ. ಅಂದಿನಿಂದ ಅವನ ಪೂರ್ವಾಶ್ರಮ ಕಡಿದು ಹೋಗುತ್ತದೆ. ಅಂದರೆ ಅವನ ಹುಟ್ಟಿನೊಂದಿಗೆ ಬಂದಿದ್ದ ಜಾತಿ ಕಡಿದು ಹೋಗುತ್ತದೆ. ಅವನು ಗುರುವಿನ 'ಸಿಸು'ಮಗನಾಗುತ್ತಾನೆ. ಆ ಮೂಲಕ ಆತ ಹೊಸ ಹುಟ್ಟನ್ನು ಪಡೆಯುತ್ತಾನೆ. ಈ ಹೊಸ ಹುಟ್ಟಿನಲ್ಲಿ ವರ್ಣಾಶ್ರಮದ ಯಾವುದೇ ನೆರಳಿರುವುದಿಲ್ಲ. ಈ ಕ್ರಿಯೆಯಲ್ಲಿ ಎರಡು ತೆರನಾದ ಲಾಭವಾಗುತ್ತದೆ. ಮೇಲ್ಜಾತಿಯಿಂದ ಬಂದ 'ಸಿಸು'ಮಗ ಮೇಲ್ಜಾತಿಯ ಅಹಂಕಾರದಿಂದ ಮುಕ್ತನಾಗುತ್ತಾನೆ. ಕೆಳಜಾತಿಯಿಂದ ಬಂದ 'ಸಿಸು'ಮಗ ಜಾತಿ ಕೀಳರಿಮೆಯಿಂದ ಬಿಡುಗಡೆ ಹೊಂದುತ್ತಾನೆ. ಹೀಗೆ ಗುರುಪಂಥ ತಣ್ಣಗೆ ವರ್ಣಾಶ್ರಮವನ್ನು ಉಲ್ಲಂಘಿಸಿಬಿಡುತ್ತದೆ. ಅಮೋಘಸಿದ್ಧನಿಗೆ ಮೂರು ಜನ ಪುಣ್ಯದ ಮಕ್ಕಳು ('ಸಿಸು'ಮಕ್ಕಳು) ಎಂದು ಹೇಳಲಾಗಿದೆ. ಮೊದಲ ಪುಣ್ಯದ ಮಗ ಸೊಲ್ಲಾಪುರ ಜಿಲ್ಲೆಯ ಮಾಳಸಿರಸ ತಾಲೂಕಿನ ನಾತೆಪುತೆ ಗ್ರಾಮದಲ್ಲಿ ಜಾಬಗೊಂಡ ಕನಾಬಾಯಿಯರಲ್ಲಿ ಜನಿಸಿದವನು. ಇವನ ಜಾತಿ ಯಾವುದೆಂದು ಎಲ್ಲಿಯೂ ಸ್ಪಷ್ಟವಾಗಿ ನಮೂದಾಗಿಲ್ಲ. ಆದರೆ ಅವನ ತಂದೆಯ ಹೆಸರಿಗೆ ಅಂಟಿಕೊಂಡು ಬಂದಿರುವ 'ಗೊಂಡ' ಎನ್ನುವ ಶಬ್ದದ ಬೆನ್ನು ಹತ್ತಿ ಹೋದರೆ ಅವನು ಶ್ರೇಣೀಕೃತ ಹಿಂದೂ ಸಮಾಜದ ಕೆಳವರ್ಗದವನು ಎಂದು ಗ್ರಹಿಸಲು ತೊಂದರೆಪಡಬೇಕಾಗಿಲ್ಲ. ಜಾಬಗೊಂಡ ಗೋವುಗಳನ್ನು ಸಲಹುತ್ತ ನಾತೆಪುತೆಯಿಂದ ಇಂಡಿ ತಾಲೂಕಿನ ಗೊಳಗಿ ಎಂಬ ಗ್ರಾಮಕ್ಕೆ ಬಂದ ಎಂದು ಹೇಳಲಾಗಿರುವುದರಿಂದ ಅವನು ಪಶುಪಾಲಕ ವೃತ್ತಿಯನ್ನು ಮಾಡುತ್ತಿದ್ದ ಕೆಳಜಾತಿಯವನು ಎಂಬುದರ ಬಗೆಗೆ ಇನ್ನಷ್ಟು ಪುಷ್ಟಿ ದೊರೆಯುತ್ತದೆ. ಅದೂ ಅಲ್ಲದೆ ಗೊಳಗಿ ಗ್ರಾಮದ ಅಂಬಿಗೇರ ಲಕ್ಕಗೊಂಡ, ಬಸಗೊಂಡ ಹಾಗೂ

ಲಗಮಗೊಂಡ ಎನ್ನುವವರಿಗೆ ಆಪತ್ಕಾಲದಲ್ಲಿ ಸಹಾಯ ಮಾಡಿ ಆ ಊರಿನಲ್ಲಿ ಅವರಿಗೆ ಅಣ್ಣನ ಹಾಗೆ ಬದುಕು ನಡೆಸುತ್ತಾನೆ. ಇಂಥ ಜಾಬಗೊಂಡನ ಮೊದಲ ಮಗನಾದ ಮಹಾಸಿದ್ಧನನ್ನು ಅಮೋಘಸಿದ್ಧ ತನ್ನ ಪುಣ್ಯದ ಮಗನನ್ನಾಗಿಸಿಕೊಳ್ಳುತ್ತಾನೆ. ಅಮೋಘಸಿದ್ಧನು ತನ್ನ ಎರಡನೆಯ ಪುಣ್ಯದ ಮಗನನ್ನಾಗಿ ಮಹಾರಾಷ್ಟ್ರದ ಅಹಮದನಗರದ ಭೀಮರಾಯನ ಮಗ ಮಂಗರಾಯನನ್ನು ಪಡೆಯುತ್ತಾನೆ. ಮಾಳಿಂಗರಾಯ ಜಟ್ಟಿಂಗರಾಯ, ನಿಂಗರಾಯ ಮುಂತಾದ ಕುರುಬ ಜನಾಂಗದ ಸಾಂಸ್ಕೃತಿಕ ನಾಯಕರ ಹೆಸರನ್ನು ಹೋಲುವ ಭೀಮರಾಯ ಹಾಗೂ ಮಂಗರಾಯ ಹೆಸರುಗಳು ಅವರ ಕೆಳಜಾತಿಯನ್ನು ನಿರ್ದೇಶಿಸುವಂಥವಾಗಿವೆ. ಮೂರನೆಯ ಪುಣ್ಯದ ಮಗ ಕರಣಿ ಮಲಕಾರಿಸಿದ್ಧನ ತಂದೆ ಗುರುಸಿದ್ಧಗೌಡ ಹಾಗೂ ತಾಯಿ ಗುರುಬಾಯಿ ಎಂದಾಗಿರುವುದರಿಂದ ಅವನು ಯಾವ ಜಾತಿ ಶ್ರೇಣಿಯವನು ಎಂದು ತಿಳಿದುಬರುವುದಿಲ್ಲ. ಒಟ್ಟಾರೆ ಬೇರೆ ಬೇರೆ ಪ್ರಾದೇಶಿಕ ನೆಲೆಗಳಿಂದ ಹಾಗೂ ಜಾತಿ ನೆಲೆಗಳಿಂದ ಬಂದ ಜನರನ್ನು ಅಮೋಘಸಿದ್ಧ ತನ್ನ ಶಿಷ್ಯರನ್ನಾಗಿ ಮಾಡಿಕೊಂಡ ಎನ್ನುವುದು ಸ್ಪಷ್ಟ. ಈ ಹಿನ್ನಲೆಯಲ್ಲಿ ಅಮೋಘಸಿದ್ಧ ವರ್ಣಾಶ್ರಮ ವ್ಯವಸ್ಥೆಯನ್ನು ಮೀರಿದ 'ಅತ್ಯಾಶ್ರಮಿ'ಯ ಹಾಗೆ ತೋರುತ್ತಾನೆ.

ಅಮೋಘಸಿದ್ಧನ ಜಾತಿನಿರಸನದ ಅಪರೂಪದ ಇನ್ನೂ ಒಂದು ಕಥನ ದೊರೆಯುತ್ತದೆ. ಅಮೋಘಸಿದ್ಧನಿಗೆ ನಾಲ್ವರು 'ಧರ್ಮರ'ಮಕ್ಕಳು, ಅಂದರೆ ಸ್ವಂತ ಮಕ್ಕಳು. ಅವರಲ್ಲಿ ಮೊದಲ ಇಬ್ಬರು ಮಕ್ಕಳು ದೇಶ ಸಂಚಾರ ಮಾಡಲು ಬಯಸಿ ತಂದೆ ಅಮೋಘಸಿದ್ಧನಲ್ಲಿ ಅಪ್ಪಣೆ ಕೇಳಲು ಬರುತ್ತಾರೆ. ಆಗ ಅಮೋಘಸಿದ್ಧನು ಮಕಣಾಪುರದ ಸಮೀಪವಿರುವ ಹರಣದ ಕೆರೆಯಲ್ಲಿ ಮುಳುಗಿರುವ 'ಪಾಂಡವರ ರಥ'ವನ್ನು ಎಬ್ಬಿಸಿಕೊಂಡು ಹೋಗಿರಿ ಎಂದು ಸಲಹೆ ನೀಡುತ್ತಾನೆ. ಹರಣದ ಕೆರೆಯ ರಥವನ್ನು ಎಬ್ಬಿಸಿಕೊಂಡು ಹೋಗುವಾಗ ದಾರಿಮಧ್ಯದಲ್ಲಿ ಬಲು ಶ್ರದ್ಧೆ ಭಕ್ತಿಯಿಂದ ಕೈ ಮುಗಿದು ನಿಂತಿದ್ದ ಮಾದಿಗ ಜನಾಂಗದ ವ್ಯಕ್ತಿಯ ಬಾಯಿಯ ಮೇಲೆ ಭಂಡಾರವನ್ನು ಹೊಡೆದು ಪ್ರತಿ ವರ್ಷ ಯುಗಾದಿಯಾದ ಐದನೆಯ ದಿವಸ ನೀನು ಏನೇ ನುಡಿದರೂ ಅದು ಸತ್ಯದ ನುಡಿಯಾಗಿ ಪರಿಣಮಿಸುವುದು ಎಂದು ಆಶೀರ್ವಾದ ಮಾಡುತ್ತಾನೆ. ಒಡೆಯರಲ್ಲಿ ಹೇಳಿಕೆ ಮಾಡುವ ಪರಂಪರೆಗೆ ಪ್ರಮುಖ ಸ್ಥಾನವಿದೆ. ಅಂಥ ಪರಂಪರೆಯ ಪ್ರಾರಂಭದಲ್ಲಿ ಒಬ್ಬ ದಲಿತನಿದ್ದಾನೆ ಎನ್ನುವುದು ಅಮೋಘಸಿದ್ಧ ನಂಬಿದ ಜಾತಿ ನಿರಸನ ತತ್ವದ ಮುಂದುವರಿಕೆಯಾಗಿದೆ. ಇಂದಿಗೂ ಮಕಣಾಪುರ, ತೆರೆವಾಡಗಳಲ್ಲಿ ಮಾದಿಗರೇ ಹೇಳಿಕೆ ಮಾಡುತ್ತ ಬರುತ್ತಿರುವುದು ಈ ತತ್ವದ ನಿದರ್ಶನವಾಗಿದೆ.

ಗುರುತ್ವ ಹಾಗೂ ಆಸ್ತಿಗೆ ಸಂಬಂಧಪಟ್ಟಂತೆ ಅಮೋಘಸಿದ್ಧನ ನಿಲುವನ್ನು ಪ್ರಚುರ ಪಡಿಸುವ ಎರಡು ಪ್ರಸಂಗಗಳಿವೆ. ಅಮೋಘಸಿದ್ಧನಿಗೆ ಮೂರು ಪುಣ್ಯದ ಮಕ್ಕಳು ಹಾಗೂ ನಾಲ್ವರು ವರವಿನ ಮಕ್ಕಳು. ಇವರೆಲ್ಲ ಬೆಳೆದು ದೊಡ್ಡವರಾಗುತ್ತ ಹೋದಂತೆ ತನ್ನಲ್ಲಿದ್ದ ಆಸ್ತಿಯನ್ನೆಲ್ಲ ಅವರಿಗೆ ಹಂಚುತ್ತಾ ಹೋಗುತ್ತಾನೆ. ಹಾಗೆ ಹಂಚುವಾಗ ಆಸ್ತಿಯ ಬಹುಪಾಲನ್ನು ಪುಣ್ಯದ ಮಕ್ಕಳಿಗೆ ಅಂದರೆ 'ಸಿಸು'ಮಕ್ಕಳಿಗೆ ಕೊಡುತ್ತ ಹೋಗುತ್ತಾನೆ. (ಆ ಕಾರಣವಾಗಿ ಪುಣ್ಯದ ಮಕ್ಕಳು ಹಾಗೂ ವರವಿನ ಮಕ್ಕಳಲ್ಲಿ ಮೈಮನಸ್ಸು ಹಾಗೂ

[illegible]

[illegible]

ಶಾಪ ಪ್ರತಿ ಶಾಪದ ಸನ್ನಿವೇಶಗಳು ಅಮೋಘಸಿದ್ಧನ ಕಥನದಲ್ಲಿವೆ). ಅಮೋಘಸಿದ್ಧ ಕೈಲಾಸದಿಂದ ಬರುವಾಗ ಶಿವನಿಂದ "ಹೋಮದ ಕಂಬಳಿ, ನೇಮದ ಬೆತ್ತ, ಪ್ರಸಾದಗಂಟು ಮತ್ತು ಹುಟ್ಟು ಬಂಜೆಯರಿಗೆ ತೊಟ್ಟಿಲು" ಇವನ್ನೆಲ್ಲ ವರದ ರೂಪದಲ್ಲಿ ಪಡೆದು ಬಂದಿದ್ದಾನೆಂದು ನಂಬಲಾಗಿದೆ. ಅದು ಸಾಧನೆಯ ಮೂಲಕ ಅವನು ಸಿದ್ಧಿಸಿಕೊಂಡದ್ದು ಎಂದೂ ಭಾವಿಸಬಹುದು. ಇದು ಅವನ ಜೀವಿತಾವಧಿಯ ಗಳಿಕೆ. ಇದನ್ನೆಲ್ಲ ಆತ ತನ್ನ ನಂತರದ ತಲೆಮಾರಿಗೆ ಹಂಚಿಕೊಡಬೇಕು. ಆತ ಹಂಚಿಕೊಟ್ಟ ರೀತಿ ಮಾತ್ರ ಭಿನ್ನವಾಗಿದೆ. ಮೊದಲ ಪುಣ್ಯದ ಮಗನಾದ ಮಹಾಸಿದ್ಧನಿಗೆ 'ಪ್ರಸಾದಗಂಟ'ನ್ನು, ಎರಡನೆಯ ಪುಣ್ಯದ ಮಗ ಮಂಗರಾಯನಿಗೆ 'ಹೋಮದ ಕಂಬಳಿ'ಯನ್ನು, ಅಂತೆಯೇ ಮೂರನೆಯ ಪುಣ್ಯದ ಮಗ ಕರಣಿಮಲಕಾರಿಸಿದ್ಧನಿಗೆ 'ನೇಮದಬೆತ್ತ'ವನ್ನು ಕೊಟ್ಟು ಕಳುಹಿಸುತ್ತಾನೆ. ತನ್ನ ಮಕ್ಕಳಿಗೆ ಬಹುಶಃ 'ತೊಟ್ಟಿಲುಭಾಗ್ಯ ಕರುಣಿಸುವ ವರ' ಕೊಟ್ಟಿರುವಂತೆ ತೋರುತ್ತದೆ. ಕೋಪಗೊಂಡ ವರವಿನ ಮಕ್ಕಳು ಪುಣ್ಯದ ಮಕ್ಕಳನ್ನು ಅಟ್ಟಿಸಿಕೊಂಡು ಹೋಗುತ್ತಾರೆ. ಅಷ್ಟಾದರೂ ಅವು ತಮ್ಮ ವಶವಾಗದಿದ್ದಾಗ ಪುಣ್ಯದ ಮಕ್ಕಳಿಗೆ ಅವರು ಶಾಪ ಹಾಕುತ್ತಾರೆ. ಪ್ರಸಾದ ಗಂಟು ಪಡೆದುಹೋದ ಮಹಾಸಿದ್ಧನಿಗೆ 'ನಿನಗೆ ಏಳು ಮಠಗಳಿಗಿಂತ ಹೆಚ್ಚು ಮಠಗಳಾಗದಿರಲಿ ಹಾಗೂ ಭೀಮಾನದಿ ದಾಟಿ ಈಚೆಗೆ ನೀನು ಒಂದು ವೇಳೆ ಬಂದೆಯಾದರೆ ನಿನ್ನ ರೂಪ ಬೇರೂಪವಾಗಲಿ' ಎಂದು ವರವಿನ ಮಕ್ಕಳು ಶಾಪ ಹಾಕುತ್ತಾರೆ. ಆದರೆ ಅಮೋಘಸಿದ್ಧ ತನ್ನ ನಿಲುವಿಗೆ ಯಾವಾಗಲೂ ಬದ್ಧನಾಗಿರುವಂತೆ ತೋರುತ್ತಾನೆ. ಯಾಕೆಂದರೆ ವರವಿನ ಮಕ್ಕಳು ಭೀವರಗಿಯಲ್ಲಿ ಕಟ್ಟಿಸಿದ ಧರ್ಮದ ಕಟ್ಟೆಯು ಯಾರನ್ನೂ ಮುಟ್ಟಿಸಿಕೊಡದಿದ್ದಾಗ ಗುರು ಸೋಮಲಿಂಗನನ್ನು ಹಾಗೂ ತಂದೆ ಅಮೋಘಸಿದ್ಧನನ್ನು ಶಾಂತಗೊಳಿಸಲು ಆಹ್ವಾನಿಸುತ್ತಾರೆ. ಶಾಂತಗೊಳಿಸಿದ ನಂತರ ಮಕ್ಕಳನ್ನು ಕುರಿತು ಅಮೋಘಸಿದ್ಧ ಹೇಳುವ ಮಾತು ಬಹಳ ಮಹತ್ವದ್ದಾಗಿದೆ: "ಭಕ್ತರನ್ನು ಕಾಪಾಡುತ್ತ ಕಾಲ ಕಳೆಯಬೇಕು. ಪಕ್ಷಪಾತವಿಲ್ಲದೆ ನ್ಯಾಯಾನೀತಿ ಧರ್ಮದಿಂದ ನಡೆದುಕೊಳ್ಳಬೇಕು ಹಾಗೂ ನೀವ್ಯಾರೂ ಆಸ್ತಿಯನ್ನು ಕೂಡಿಹಾಕುವ ಆಸೆ ಮಾಡಬಾರದು." ಈ ಮಾತನ್ನು ನಂತರದ ದಿನಗಳಲ್ಲಿ ಧರ್ಮರ ಮಕ್ಕಳೂ ಪಾಲಿಸಿಕೊಂಡು ಬಂದಿದ್ದಾರೆ. ಇವರಿಗೊಬ್ಬ ರೆಬಕವ್ವ ಹೆಸರಿನ ತಂಗಿಯಿದ್ದಾಳೆ. ಅವಳು ಒಂದು ಸಲ ದೀಪಾವಳಿಯ ಹಬ್ಬದಂದು ಅಣ್ಣಂದಿರಿಗೆ ಆರತಿ ಬೆಳಗಿದಾಗ, 'ನಿನಗೆ ಏನು ಕಾಣಿಕೆ ಬೇಕು' ಎಂದು ಕೇಳುತ್ತಾರೆ. ಆಗ ಅವಳು ತನಗೆ 'ಹರಿಯಲಾರದ ಸೀರೆ' ಬೇಕು ಎಂದು ಕೇಳುತ್ತಾಳೆ. ಅವರು ತಂಗಿಗೆ ಅರಕೇರಿಯಲ್ಲಿರುವ ತಮ್ಮ ಎಲ್ಲ ಆಸ್ತಿಯನ್ನು ಹಾಗೂ ಆ ಊರಿನ ಗೌಡಕಿಯನ್ನು ಬಿಟ್ಟುಕೊಡುತ್ತಾರೆ.

ಏನೆಲ್ಲ ಆಸ್ತಿಯನ್ನು ಅವರು ಕಳಕೊಂಡಿದ್ದರೂ ಹುಟ್ಟು ಬಂಜೆಯರಿಗೆ ತೊಟ್ಟಿಲಭಾಗ್ಯ ಕರುಣಿಸುವ ವರ ಅವರ ಪಾಲಿಗೆ ಉಳಿದಿತ್ತು. ಆ ಶಕ್ತಿಯನ್ನು ಅವರು ಬಳಸಿಕೊಂಡು ಅಪಾರವಾದ ಆಸ್ತಿಯನ್ನು ಗಳಿಸಿಕೊಳ್ಳಬಹುದಾಗಿತ್ತು. ಅಮೋಘಸಿದ್ಧನ ಈ ಉಪದೇಶವನ್ನು ಅವನ ಮಕ್ಕಳು ಮೊಮ್ಮಕ್ಕಳು ಕಟ್ಟು ನಿಟ್ಟಿನಿಂದ ಪಾಲಿಸಿಕೊಂಡು ಬಂದರು. ಹಾಗೆ ಪಾಲಿಸಿಕೊಂಡು ಬಂದ ಹಲವಾರು ನಿದರ್ಶನಗಳು ನಮಗೆ

ದೊರೆಯುತ್ತವೆ. ಅವಧೂತಸಿದ್ಧನ ಎರಡನೆಯ ಮಗ ಮಳೆಗಾಲಸಿದ್ಧ. ಆತ ಮಂದ್ರೂಪದಲ್ಲಿ ಇದ್ದಾಗ ಬೀದರ ಬಾದಶಹಾನ ಭೂಮಿಯನ್ನು ಪಾಲಿನಲ್ಲಿ ಮಾಡುತ್ತಿದ್ದ. ಒಂದೆರಡು ವರ್ಷ ಮಳೆ ಸರಿಯಾಗಿ ಬರಲಾರದ್ದಕ್ಕೆ ಬೆಳೆ ಕೈಗೆ ಹತ್ತಲಿಲ್ಲ. ಬಾದಶಹಾನಿಗೆ ಸಲ್ಲಿಸಬೇಕಾದ ಕಂದಾಯ ತುಂಬಲಾಗಲಿಲ್ಲ. ಮಳೆಗಾಲಸಿದ್ಧನು ಅಹಂಕಾರದಿಂದ ಕಂದಾಯ ತುಂಬುತ್ತಿಲ್ಲವೆಂದು ಭಾವಿಸಿದ ಬಾದಶಹ ಅವನ ಗರ್ವಭಂಗ ಮಾಡಬೇಕೆಂದು ಸೈನ್ಯವನ್ನು ಕಳುಹಿಕೊಡುತ್ತಾನೆ. ಮಳೆಗಾಲಸಿದ್ಧ ಆ ಸೈನ್ಯವನ್ನು ಸೋಲಿಸುತ್ತಾನೆ. ನಂತರವೂ ಬಾದಶಹ ಹಲವಾರು ಪಂಥಗಳನ್ನು ಒಡ್ಡುತ್ತಾನೆ. ಮಳೆಗಾಲಸಿದ್ಧ ಆ ಎಲ್ಲಾ ಪಂಥಗಳನ್ನು ಎದುರಿಸುತ್ತಾನೆ. ಅವನ ಯೋಗಶಕ್ತಿಗೆ ಮಾರುಹೋದ ಬಾದಶಹ ಭೀಮಾ ಹಾಗೂ ಸೀನಾ ನದಿಗಳ ನಡುವಿನ ಭೂ ಪ್ರದೇಶವನ್ನು ಹಾಗೂ ಅಲ್ಲಿ ಬರುವ ಹಳ್ಳಿಗಳ ಗೌಡಕಿಯನ್ನು ಮಳೆಗಾಲಸಿದ್ಧನಿಗೆ ಒಪ್ಪಿಸುತ್ತಾನೆ. ಆದರೆ ಅವನು ಅದನ್ನು ತನ್ನ ಸ್ವಂತಕ್ಕೆ ಇಟ್ಟುಕೊಳ್ಳದೆ ತನ್ನ ಚಿಕ್ಕವ್ವನ ಮಕ್ಕಳಿಗೆ ಬಿಟ್ಟು ಕೊಡುತ್ತಾನೆ. ಹಾಗೇಕೆ ಮಾಡುತ್ತಿರುವಿ ಎಂದು ಕೇಳಿದರೆ "ನಮ್ಮಜ್ಜ ಅಮೋಘಸಿದ್ಧನು ಕೈಲಾಸದಿಂದ ಬರುವಾಗ 'ಭಕ್ತರಿಗೆ ಭಾಗ್ಯವಿರಲಿ. ತನ್ನ ಮಕ್ಕಳಿಗೆ ಬಡತನವಿರಲಿ' ಎಂದು ಬೇಡಿ ಬಂದಿದ್ದಾನೆ" ಎಂದು ಹೇಳುತ್ತಾನೆ.

೨.೩.೩ ಹೋಮದ ಕಂಬಳಿ

ಅಮೋಘಸಿದ್ಧ ಕೈಲಾಸದಿಂದ ಬರುವಾಗ ಶಿವನಿಂದ ಅತೀ ಮಹತ್ವದ ಎರಡು ವಸ್ತುಗಳನ್ನು ಪಡೆದು ಬಂದಿದ್ದಾನೆ. ಅವೆರಡು ಅವನ ನಂಬಿಕೆಯ ಆಧಾರ ಸ್ತಂಭಗಳು. ಅವನನ್ನು ಅನ್ಯರಿಂದ ಬೇರ್ಪಡಿಸುವ ಚಿನ್ನೆಗಳು. ಶಾಂತ ಒಡೆಯರ ಶಾಖೆ, ಮಂಕ ಒಡೆಯರ ಶಾಖೆ ಹಾಗೂ ಅಮೋಘ ಒಡೆಯರ ಶಾಖೆ ಎಂದು ಕುರುಬರ ಕುಲಗುರು ಒಡೆಯರಲ್ಲಿ ಮೂರು ಶಾಖೆಗಳಿವೆ. ಶಾಂತ ಒಡೆಯರಿಗೆ ರೇವಣಸಿದ್ಧ ಗುರುವಾಗಿದ್ದಾನೆ. ತುರುವೆಕೆರೆ ತಾಮ್ರ ಶಾಸನ(೧೪೮೦)ದಲ್ಲಿ 'ನಂಮ ಗುರು ರೇವಣಸಿದ್ಧೇಶ್ವರ ದೇವರ ಸ್ತುತಿಸಿ ಬಂದು ತೀರ್ಥ ಪ್ರಸಾದವನ್ನು ತಳಿದು ಆ ಸತ್ತ ತಗರಿನ ಪ್ರಾಣವನ್ನು ಮತ್ತೆ ಪಡೆದನು' ಎಂದು ಶಾಂತ ಒಡೆಯರು ಹೇಳಿಕೊಂಡಿದ್ದಾರೆ.[೧೨] ಮಂಕ ಒಡೆಯರಿಗೆ ಸೊನ್ನಲಿಗೆ ಸಿದ್ಧರಾಮ ಗುರುವಾಗಿದ್ದಾನೆ. ಅದೇ ಶಾಸನದಲ್ಲಿ ಮಂಕ ಒಡೆಯನಿಗೆ 'ನಿಂನ ಗುರು ಸೊನ್ನಲಾಪುರದ ಸಿದ್ಧರಾಮ ದೇವ...' ಎಂದು ಹೇಳಲಾಗಿದೆ.[೧೩] ಆದರೆ ಅಮೋಘಸಿದ್ಧ ಒಡೆಯರಿಗೆ ಗುರು ಗೌರಿ ಸೋಮಲಿಂಗ ಗುರುವಾಗಿದ್ದಾನೆ. ಮೂರೂ ಶಾಖೆಯ ಒಡೆಯರಿಗೆ ಕಂಬಳಿ ಪೂಜ್ಯ ವಸ್ತುವಾಗಿದೆ. ಆದರೆ ಒಬ್ಬೊಬ್ಬರಿಗೆ ಒಂದೊಂದು ವಿಶಿಷ್ಟವಾದ ಕಂಬಳಿ ಇರುವುದು ಗಮನಾರ್ಹ. ಮಂಕ ಒಡೆಯರು ಹಾಗೂ ಶಾಂತ ಒಡೆಯರು ಬಿಳಿಜಾಡಿ ಧರಿಸುತ್ತಾರೆ. ಆದರೆ ಅಮೋಘ ಒಡೆಯರಿಗೆ ನಾಲ್ಕು ಏಣಿನ ಕರಿ ಕಂಬಳಿ ಪೂಜ್ಯನೀಯವಾಗಿದೆ. ಶಾಂತ ಒಡೆಯರು ಮೂರೇಣಿನ ಕಂಥೆಯನ್ನು ಧರಿಸಿದರೆ ಅಮೋಘ ಒಡೆಯರು ಹೋಮದ ಕಂಬಳಿ (ವ್ಯೋಮದ ಕಂಬಳಿ) ಧರಿಸುತ್ತಾರೆ. 'ತಗರ ಪವಾಡ'[೧೪] ಕೃತಿಯಲ್ಲಿ ಕಥಾನಾಯಕನಾದ ಶಾಂತಮುತ್ತಯ್ಯನಿಗೆ ಸತ್ತ ಟಗರನ್ನು ಬದುಕಿಸುವಲ್ಲಿ ಬಸವಣ್ಣ ನೈತಿಕ ಬೆಂಬಲ ನೀಡುತ್ತಾನೆ. ಪಂಥದಲ್ಲಿ ಶಾಂತಮುತ್ಯಯ್ಯ ಗೆದ್ದ ನಂತರ ಹಾಲುಮತದವರಿಗೆ ನೀನೇ ಗುರುವಾಗೆಂದು

ಬಸವಣ್ಣ ಹೇಳಿ ಗುರುತನದ ಸಂಕೇತವಾಗಿ 'ಮೂರೇಣಿನ ಕಂಥೆ'ಯನ್ನು ನೀಡಿ ಆಶೀರ್ವದಿಸಿದನೆಂದು ಹೇಳಲಾಗಿದೆ. ಇವರ ಗುರುವಾದ ರೇವಣಸಿದ್ಧನನ್ನು ಹರಿಹರ ವರ್ಣಿಸುವಾಗಲೂ ಅವನು ಕಂಥೆಧಾರಿ ಯಾಗಿದ್ದನೆಂದು ಹೇಳುತ್ತಾನೆ.

ಅದೆ ಕಂಥೆಯದೆ ವದನವದೆ ವಜ್ರಕುಂಡಲಂ
ಅದೆ ವಕ್ಷವದೆ ಹಸ್ತವದೆ ಪಿಡಿದ ಲಾಕುಳಂ
ಅದೆ ಕೋವಣಂ ನೋಡನೋಡುತ್ತಿರಲುದಿಸಿದಂ
ಸದಮಳವೆನಿಪ್ಪ ಶಿವಲಿಂಗದಿಂ ಪುಟ್ಟಿದಂ[೨೦]

ಹೀಗಾಗಿ ಶಾಂತೊಡೆಯರಿಗೂ ಕಂಥೆ/ಕಂಬಳಿಗೂ ನಿಕಟವಾದ ಸಂಬಂಧವಿದೆ.

ಆದರೆ ಅಮೋಘ ಒಡೆಯರು ಧರಿಸುವ ಕಂಬಳಿಗೆ ನಾಲ್ಕು ಏಣುಗಳು ಇರುತ್ತದೆ. ನಾಲ್ಕು ಏಣುಗಳು ಏಕೆ ಎಂದು ಕೇಳಿದರೆ ಮೂರು ಏಣುಗಳು ಬ್ರಹ್ಮ-ವಿಷ್ಣು-ಮಹೇಶ್ವರರ ಸಂಕೇತವೆಂತಲೂ ನಾಲ್ಕನೆಯ ಏಣು ಪಾರ್ವತಿಯ ಮುತ್ತಿನ ಸಂಕೇತ ಎಂತಲೂ ಹೇಳುತ್ತಾರೆ. ಸಂಖ್ಯೆಗಳ ಈ ಮೇಲಾಟ ತಮ್ಮ ತಮ್ಮ ಶ್ರೇಷ್ಠತೆಯನ್ನು ಸಾಬೀತುಪಡಿಸುವಲ್ಲಿ ನಡೆಸಿದ ಪೈಪೋಟಿಯ ಕುರುಹಾಗಿರುವ ಸಾಧ್ಯತೆಯಿದೆ. ಅಮೋಘ ಒಡೆಯರ ಹೋಮದ ಕಂಬಳಿಯು ವ್ಯೋಮದ ಕಂಬಳಿ ಆಗಿರುವ ಸಾದ್ಯತೆಯಿದೆ. ಯಾಕೆಂದರೆ ಅಮೋಘಸಿದ್ಧನ ಮಕ್ಕಳು ಮೊಮ್ಮಕ್ಕಳು ಮರಿಮೊಮ್ಮಕ್ಕಳು ಆಕಾಶದಲ್ಲಿ ಮೋಡಗಳೇ ಇಲ್ಲದ ಸಂದರ್ಭದಲ್ಲೂ ತಮ್ಮ ಹೆಗಲ ಮೇಲಿನ ಕಂಬಳಿಬೀಸಿ ಮೂರುಗಳಿಗೆಯಲ್ಲಿ ಮಳೆತರಿಸಿದರು ಎನ್ನುವ ಕಥನಗಳಿವೆ. ಮೇಲಾಗಿ ಇವರನ್ನು ಜನಪದ ಹಾಡುಗಾರರು 'ಮಳೆಸಿದ್ಧ'ರೆಂದೇ ಕರೆದಿದ್ದಾರೆ.

ಮಂಕ ಒಡೆಯರು ಸಾದಕುರುಬರಿಗೆ ಹಾಗೂ ಚಿಕ್ಕ ಕುರುಬರಿಗೆ ಗುರುಗಳಾಗಿದ್ದಾರೆ. ಶಾಂತಒಡೆಯರು ಹತ್ತಿ ಕಂಕಣ ಹಾಗೂ ಉಣ್ಣೆ ಕಂಕಣದವರಿಗೆ ಗುರುಗಳಾಗಿದ್ದಾರೆ.ಅಮೋಘ ಒಡೆಯರು ಕುರುಬರ ಹಲವಾರು ಪಂಗಡಗಳಿಗೆ ಕುಲಗುರು ಆಗಿದ್ದಾರೆ. ಧಾರವಾಡ ಜಿಲ್ಲೆಯ ಕಲಘಟಗಿಯ ಗುರುಮಠದಲ್ಲಿ ಲಭ್ಯವಾದ ಹಕ್ಕು ಪತ್ರವೊಂದು ಈ ಕುರಿತು ಹೀಗೆ ಹೇಳುತ್ತದೆ. 'ನಮ್ಮ ಕುರುಬಯಂಬ ಕುಲದೊಳಗೆ ಯಲ್ಲಾ ಕುರುಬಕುಲಕ್ಕೆ ನಾವೇ ವಡಿಯರು. ತಂದೆ ಅಮ್ಮೋಗಿಸಿದ್ಧನು ಪಟ್ಟದವಡೆಯನು. ಗುರು, ಹತ್ತಿಕಂಕಣ ಮತ್ತೆ ಉಣ್ಣೆಕಂಕಣ ಮತ್ತೆ ಗೌಳಿಗೇರ ಮತ್ತೆ ಕಿಲಾರಿ ಕುರುಬರು ಮತ್ತೆ ಕೊಂಕನೆ ಕುರುಬರು ಮತ್ತೆ ಗೌಲೆತ್ತು ಆಡಿಸುವ ಕುರುಬರು ಮೇಲೆ ಬರಿದ ಯಿ ಎಲ್ಲಾ ಜಾತಿಗೆ ಅಮ್ಮೋಗಿಸಿದ್ಧ ದೇವರ ಮನಿತನದವರ ಅಧಿಕಾರ ವಿರುತ್ತದೆ.[೨೧]

೨.೩.೪ ನೇಮದ ಬೆತ್ತ

ಗುರುಸ್ಥಾನದಲ್ಲಿರುವವರಿಗೆ ಸಾಮಾನ್ಯವಾಗಿ ಕೈಯಲ್ಲಿ ದಂಡವಿರುತ್ತದೆ. ಅದೇ ತೆರನಾಗಿ ಶಾಂತೊಡೆಯರಿಗೆ

ಮಂಕ ಒಡೆಯರಿಗೆ ಹಾಗೂ ಅಮೋಘ ಒಡೆಯರಿಗೆ ಹೀಗೆ ಎಲ್ಲರ ಕೈಯಲ್ಲೂ ದಂಡವಿದೆ. ನಾಥಸಿದ್ಧನಾಗಿದ್ದ ರೇವಣಸಿದ್ಧನು ಶೈವ ಸಿದ್ಧನಾಗಿ ಕೊಲ್ಲಿಪಾಕಿಯಲ್ಲಿ ಪರಿವರ್ತನ ಹೊಂದಿದ್ದನ್ನು ರಸ್ತಾಪುರ ಭೀಮಕವಿ ಈ ರೀತಿ ವರ್ಣಿಸಿದ್ದಾನೆ:

ದೇವಗಣ ಕೊಂಡಾಡುತರಳಮಳೆಗರಿಸಲ್ಕೆ
ಭಾವಜಾಂತಕನ ಪ್ರತಿವೇಷದಿಂ ರೇಣುಕಂ
ರೇವಣಾಚಾರ್ಯನೆಂಬ ಅಭಿದಾನವೆತ್ತು ಭಸಿತವ ತಳೆದು ಸರ್ವಾಂಗಕೆ
ಪಾವನ ಶ್ರೀ ದೇವ ರುದ್ರಾಕ್ಷಿಗಳ ವಾಂತು
ಭೂವಲಯ ಪ್ರಾಣಿಗಳ ಕಾವುದಕ್ಕೆ ತಂದ
ನೇವೆಳ್ಳಚ್ಚರಿಯ ದಂಡಲಾಕುಳ ಪಿಡಿದು ರಾರಾಜಿಸಿದ ಮುದದೊಳು[೨೨]

ಅಂತೆಯೇ ರೇವಣಸಿದ್ಧ ಪರಂಪರೆಯ ಒಡೆಯರಾದ ಶಾಂತ ಒಡೆಯರ ಕೈಯಲ್ಲಿ ಇಂದಿಗೂ (ದಂಡ) ಬೆತ್ತವಿರುತ್ತದೆ. ಮಂಕ ಒಡೆಯರ ಕೈಯಲ್ಲೂ ಬೆತ್ತವಿರುತ್ತದೆ. ಹಾಗೆಯೇ ಅಮೋಘ ಒಡೆಯರ ಕೈಯಲ್ಲೂ ಬೆತ್ತವಿರುತ್ತದೆ. ಆದರೆ ಅಮೋಘ ಒಡೆಯರು ತಮ್ಮ ಕೈಯಲ್ಲಿರುವ ಬೆತ್ತವನ್ನು ನೇಮದ ಬೆತ್ತವೆಂದು ಕರೆಯುತ್ತಾರೆ. ಅಮೋಘಸಿದ್ಧ ಕೈಲಾಸದಿಂದ ಬರುವಾಗ ಹೋಮದ ಕಂಬಳಿಯ ಜೊತೆಗೆ ನೇಮದ ಬೆತ್ತವನ್ನು ಪಡೆದು ಬಂದುದಾಗಿ ನಂಬಲಾಗಿದೆ. ಕಂಬಳಿಗೆ 'ಹೋಮ' ಎನ್ನುವ ವಿಶೇಷಣ ಹಚ್ಚಿಕೊಂಡಿರುವಂತೆ ಬೆತ್ತಕ್ಕೆ 'ನೇಮ' ಎನ್ನುವ ವಿಶೇಷಣ ಹಚ್ಚಲಾಗಿದೆ. ಇಂಥ ವಿಶೇಷಣದ ಮೂಲಕ ಅವರು ತಮ್ಮ ಪರಂಪರೆ ಅನ್ಯ ಪರಂಪರೆಗಿಂತ ಮಿಗಿಲಾದುದು ಎಂದು ತೋರಿಸುವುದಾಗಿದೆ. ಅಮೋಘ ಒಡೆಯರು ತಮ್ಮನ್ನು 'ಮೇಲುಮತ' ದವರೆಂದು ಹೆಮ್ಮೆಯಿಂದ ಕರೆದುಕೊಳ್ಳುತ್ತಾರೆ. ಈ ನೇಮದಬೆತ್ತ ಅದನ್ನು ಹಿಡಿದ ವ್ಯಕ್ತಿಯಷ್ಟೇ ಮಹತ್ವದ್ದು ಎಂದು ಬಿಂಬಿಸುವುದನ್ನು ಅಮೋಘಸಿದ್ಧ ತನ್ನ ಬೆತ್ತದೊಂದಿಗೇನೆ ಹೆಂಡತಿ ಪದ್ಮಾವತಿಯ ವಿವಾಹ ಜರುಗಿಸುವ ಘಟನೆಯಲ್ಲಿ ಕಾಣಬಹುದು. ಶಾಂತ ಒಡೆಯರಲ್ಲಿ ವಿಭೂತಿಗೆ ಇರುವ ಗೌರವದ ಸ್ಥಾನಮಾನ ಈ ನೇಮದ ಬೆತ್ತಕ್ಕೆ ಇದೆ. ಶಾಂತ ಒಡೆಯ ಪರಂಪರೆಯಲ್ಲಿ ಒಡೆಯರ ಅನುಪಸ್ಥಿತಿಯಲ್ಲಿ ವಿಭೂತಿ 'ಕಾಲಿಲ್ಲದ ಐಯ್ಯನೋರ' ಆಗಿ ಉಪಯೋಗಿಸಲ್ಪಡುವಂತೆ ಇಲ್ಲಿ ನೇಮದಬೆತ್ತ ಬಳಕೆಯಾದಂತಿದೆ.

೨.೩.೫ ಭಂಡಾರ ಭರಣಿ

ಅಮೋಘಸಿದ್ಧನ ಹಲವಾರು ಲಾಂಛನಗಳಲ್ಲಿ ಪರುಷಬಟ್ಟಲಿಗೆ ಬಹಳಮಹತ್ವವಿದೆ. ಇದನ್ನೂ ಕೂಡಾ ಆತ ಕೈಲಾಸದಿಂದಲೇ ಶಿವನಿಂದ ಕೇಳಿ ಪಡೆದುತಂದ ಎಂದು ಭಾವಿಸಲಾಗಿದೆ. ಪರುಷಬಟ್ಟಲು ಎಂದರೆ ಅಮೋಘ ಒಡೆಯರು ತಮ್ಮ ಭಕ್ತರ ಹಣೆಗೆ ಹಚ್ಚಲು ಇಟ್ಟುಕೊಂಡ ಭಂಡಾರ ಭರಣಿ. ಅದನ್ನು ಪ್ರಸಾದಗಂಟು ಎಂದೂ ಕರೆಯುತ್ತಾರೆ. ಶಾಂತ ಒಡೆಯ ಮಂಕೊಡೆಯರಲ್ಲಿ ಈ ಪರುಷ ಬಟ್ಟಲಿನ ಪ್ರಸ್ತಾಪ ಬರುವುದಿಲ್ಲ. ಸತ್ತ ತಗರನ್ನು ಮತ್ತೆ ಹುಟ್ಟಿಸುವ ಪ್ರಸ್ತಾಪ ಮೂವರೂ ಒಡೆಯರಲ್ಲಿ ಬರುತ್ತದೆ. ಶಾಂತ ಒಡೆಯ ಹಾಗೂ

ಮಂಕೊಡೆಯ ಇಬ್ಬರೂ ಈ ಸಂದರ್ಭದಲ್ಲಿ ವಿಭೂತಿಯನ್ನು ಸಿಂಪಡಿಸಿ ತಗರನ್ನು ಬದುಕಿಸಿದರೆ, ಅಮೋಘಸಿದ್ಧ ಕಥನದಲ್ಲಿ ಭಂಡಾರ ಹೊಡೆದು ಸತ್ತ ಕುರಿಯನ್ನು ಬದುಕಿಸಲಾಗುತ್ತದೆ. ಅಮೋಘ ಒಡೆಯರಲ್ಲಿ ಭಂಡಾರಕ್ಕೆ ಬಹಳ ಪವಿತ್ರವಾದ ಸ್ಥಾನವಿರುವುದರ ಸಂಕೇತವಿದು. ರೇವಣಸಿದ್ಧ ವಚನ ಚಳವಳಿಯ ಸಂದರ್ಭದಲ್ಲಿ ತನ್ನ ಶಿಶುಮಕ್ಕಳಾದ ಕುರುಬರನ್ನು ಲಿಂಗಾಯತದ ತೆಕ್ಕೆಯೊಳಗೆ ಒಯ್ದಿದ್ದರೆ ಹದಿನಾರನೆಯ ಶತಮಾನದಲ್ಲಿ ಅಮೋಘಸಿದ್ಧ ಹಾಗೆ ಮಾಡಿದಂತೆ ಕಾಣುವುದಿಲ್ಲ. ಇದಕ್ಕೆ ಪೂರಕವೆನ್ನುವಂತೆ ಲಿಂಗ ಪಾರಮ್ಯವನ್ನು ನಿರಾಕರಿಸುವ ಕಥನವೊಂದು ಅಮೋಘಸಿದ್ಧನ ಮಗ ಬಿಳಿಯಾನಿಸಿದ್ಧನಿಗೆ ಸಂಬಂಧಿಸಿದಂತೆ ಇದೆ. ಈ ಕುರಿತು ಇದೇ ಅಧ್ಯಾಯದ ಲಿಂಗಾಯಿತದೊಂದಿಗ ಮುಖಾಮುಖಿ ಎನ್ನುವ ಭಾಗದಲ್ಲಿ ವಿಸ್ತೃತವಾಗಿ ಚರ್ಚಿಸಲಾಗುವುದು. ಅದೂ ಅಲ್ಲದೆ ಇಂದಿನವರೆಗೂ ಅಮೋಘ ಒಡೆಯರ ಪರಂಪರೆಯಲ್ಲಿ ಭಂಡಾರಕ್ಕೆ ಪವಿತ್ರವಾದ ಸ್ಥಾನ ಉಳಿದುಕೊಂಡು ಬಂದಿದೆ. ಛಟ್ಟಿ ಅಮವಾಶ್ಯೆಯಂದು ಜರಗುವ ಅಮೋಘಸಿದ್ಧನ ಜಾತ್ರೆಯಲ್ಲಿ ಇದನ್ನು ಇಂದಿಗೂ ನಾವು ನೋಡಬಹುದು. ಆದಾಗ್ಯೂ ಅಮೋಘ ಪರಂಪರೆಯ ಒಂದೆರಡು ಗುಡಿಗಳಲ್ಲಿ ವಿಭೂತಿ ನಿಧಾನವಾಗಿ ಪ್ರವೇಶಿಸುತ್ತಿರುವುದನ್ನು ಕಾಣಬಹುದಾಗಿದೆ.

೨.೩.೬ ಶೈವಸಿದ್ಧ ಬೌದ್ಧಸಿದ್ಧ

ಅಮೋಘಸಿದ್ಧನ ಮೇಲೆ ನಾಥಪಂಥದ ದಟ್ಟವಾದ ಪ್ರಭಾವವಿದೆಯಾದರೂ ಅಲ್ಲಿ ನಾಥದ ಪ್ರಮುಖ ಸಂಕೇತಗಳಾದ ಶೈಲಿ(ಕುರಿಯ ತುಪ್ಪಳದಿಂದ ಮಾಡಿದ ದಾರ) ಹಾಗೂ ಸಿಂಗನಾದ(ಕೃಷ್ಣ ಮೃಗದ ಕೊಂಬಿನಿಂದ ತಯಾರಿಸಿದ ನಾದ ಹೊರಡಿಸುವ ವಸ್ತು)ಗಳು ಇಲ್ಲಿ ಎಲ್ಲಿಯೂ ಪ್ರಸ್ತಾಪಗೊಳ್ಳುವುದಿಲ್ಲ. ಆದರೆ ಅಮೋಘಸಿದ್ಧ ಶೈವಸಿದ್ಧ ಪರಂಪರೆಯವನು ಎನ್ನುವುದಕ್ಕೆ ಹಲವಾರು ಪುರಾವೆಗಳು ದೊರೆಯುತ್ತವೆ. ಅಮೋಘಸಿದ್ಧನನ್ನು ಕೊಂಡಾಡುವ ಹಲವಾರು ಮೌಖಿಕ ಪರಂಪರೆಯ ಹಾಡುಗಳಲ್ಲಿ ಅವನನ್ನು 'ಶಿವನ ಮನೆಯ ಸಿದ್ಧ'ನೆಂದು ಕರೆಯಲಾಗಿದೆ. ಅವನ ಗುರು 'ಸೋಮಲಿಂಗ' ಎನ್ನುವುದು ಶಿವನ ಇನ್ನೊಂದು ಹೆಸರಾಗಿದೆ. ಸೋಮಲಿಂಗನು ವಾಸವಾಗಿರುವ ಮಕಣಾಪುರವನ್ನು (ಸಿಂಹಾಸನ) ಶಿವಸ್ಥಾನ ಎಂದು ಕರೆ ಯಲಾಗಿದೆ.

ಅಮೋಘಸಿದ್ಧ ನಮಗೆ ಗೋಚರಿಸುವುದು ಶೈವ ಸಿದ್ಧನ ರೂಪದಲ್ಲಿಯೇ ಆದರೂ ಬೌದ್ಧಸಿದ್ಧದ ಛಾಯೆ ಕೂಡ ಇರುವುದನ್ನು ಗಮನಿಸಬೇಕು. ಐದು ತೆರನಾದ ಬುದ್ಧರಲ್ಲಿ 'ಅಮೋಘಸಿದ್ಧಬುದ್ಧ' ಕೊನೆಯವನು. ಅಂಥ ಒಂದು ಅಪರೂಪದ ಹೆಸರು ಅಮೋಘಸಿದ್ಧನಿಗಿರುವುದನ್ನು ನೋಡಿದರೆ ಅವನು ಬೌದ್ಧ ಸಿದ್ಧರ ಸಂಪರ್ಕದಲ್ಲಿ ಬಂದಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

೨.೪ ಸಾಂಸ್ಕೃತಿಕ ಮುಖಾಮುಖಿಗಳು

ಅಮೋಘಸಿದ್ಧ ಹಾಗೂ ಅವನ ಪರಂಪರೆಯವರು ಅನೇಕ ಪಂಥಗಳೊಂದಿಗೆ ಮುಖಾಮುಖಿ ಮಾಡಿಕೊಂಡು ತಾತ್ವಿಕ ಕೊಡುಕೊಳ್ಳುವಿಕೆ ಮಾಡಿಕೊಂಡಿದ್ದಾರೆ. ಸಿದ್ಧ ಎನ್ನುವ ಪಂಥವೇ ತುಂಬಾ

[illegible]

ವ್ಯಾಪಕವಾದುದು. ಅದು ಸದಾ ಬೆಳೆಯುತ್ತಿರುವ ಪಂಥವಾಗಿದೆ. ಅದು ಎಂದೂ ಕಟ್ಟುನಿಟ್ಟಾದ ನಿಯಮಗಳನ್ನು ಹಾಕಿಕೊಂಡು ಕಠೋರವಾಗಿ ಕಾಣಿಸಿಕೊಂಡಿಲ್ಲ. ಸಿದ್ಧರು ಆ ಕಾರಣವಾಗಿಯೇ ಯಾವುದೇ ತಾತ್ವಿಕ ಚೌಕಟ್ಟಿನಲ್ಲಿ ಬಂಧಿತರಾದವರಲ್ಲ. ಅವರು ಯಾವಾಗಲೂ ಜೀವಪರ. ಜೀವವಿರೋಧಿಯಾದುದನ್ನು ಯಾವುದೇ ಮೂಲಾಜಿಲ್ಲದೆ ವಿರೋಧ ಮಾಡುತ್ತ ಬಂದಿದೆ. ಅಮೋಘಸಿದ್ಧ ಹಾಗೂ ಅವನ ಪರಂಪರೆಯವರು ಈ ಮಾತಿಗೆ ಹೊರತಿಲ್ಲ. ಹದಿನಾರನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಈ ಪರಂಪರೆ ಹಲವಾರು ರೀತಿಯ ಸಾಂಸ್ಕೃತಿಕ ಮುಖಾಮುಖಿ ಮಾಡಿಕೊಂಡು ಸದಾ ಜೀವಪರ ಹಾಗೂ ಚಲನಶೀಲವಾಗಿ ಉಳಿದುಕೊಂಡು ಬಂದಿದೆ. ಪ್ರಸ್ತುತ ಭಾಗದಲ್ಲಿ ಅದು ಮುಖಾಮುಖಿ ಮಾಡಿಕೊಂಡುದರ ಕುರಿತು ಚರ್ಚಿಸಲಾಗಿದೆ.

೨.೪.೧ ಲಿಂಗಾಯತದೊಂದಿಗೆ ಮುಖಾಮುಖಿ

ಕುರುಬರ ಕುಲಗುರುಗಳಲ್ಲಿ ಮೂರು ಪಂಗಡಗಳಿರುವುದನ್ನು ಈಗಾಗಲೇ ಸಂಶೋಧನಾ ಕ್ಷೇತ್ರ ಸ್ವೀಕರಿಸಿಯಾಗಿದೆ.[೨೩] ಕುತೂಹಲದ ಸಂಗತಿಯೆಂದರೆ ಈ ಮೂರು ಪಂಗಡಗಳು ವಿಜಾಪುರ ಜಿಲ್ಲೆಯಲ್ಲಿಯೇ ಆವಿಷ್ಕಾರಗೊಂಡಿವೆ. ಎರಡು ಪಂಗಡಗಳು ಮುದ್ದೇಬಿಹಾಳ ತಾಲೂಕಿನ ಸರೂರದಲ್ಲಿ ಬೆಳೆದು ಬಂದರೆ ಒಂದು ಪಂಗಡ ವಿಜಾಪುರ ತಾಲೂಕಿನ ಮುಮ್ಮೆಟಗುಡ್ಡದಲ್ಲಿ ಬೆಳೆದು ಬಂದಿದೆ. ಇನ್ನೂ ಕುತೂಹಲದ ಸಂಗತಿಯೆಂದರೆ ಈ ಮೂರು ಪಂಗಡಗಳಿಗೆ ಪ್ರೇರಕ ಶಕ್ತಿಯಾದವರು 'ಸಿದ್ಧ'ರೆ. 'ರೇವಣಸಿದ್ಧ' ಸೊನ್ನಲಿಗೆ 'ಸಿದ್ಧ' ರಾಮ ಹಾಗೂ ಅರಕೇರಿ ಅಮ್ಮೋಗಿಸಿದ್ಧ ಇವರೇ ಈ ಮೂವರು ಸಿದ್ಧರು. ಈ ಸಿದ್ಧರು ಅನುಕ್ರಮವಾಗಿ ಶಾಂತಮುತ್ತ್ಯಾ ಗುರು ಪರಂಪರೆ. ಮಂಕಸಿದ್ಧ ಗುರುಪರಂಪರೆ ಹಾಗೂ ಅಮ್ಮೋಗಿಸಿದ್ಧ ಗುರು ಪರಂಪರೆಯ ಮೂಲದಲ್ಲಿದ್ದಾರೆ. ಈ ಮೂರು ಪಂಗಡಗಳು ಲಿಂಗಾಯಿತದೊಂದಿಗೆ ಮುಖಾಮುಖಿ ಮಾಡಿಕೊಂಡಿವೆ. ಈ ಮುಖಾಮುಖಿಯಲ್ಲಿ ಮೊದಲಿನ ಎರಡು ಪಂಗಡಗಳು ಲಿಂಗಾಯಿತಕ್ಕೆ ಹೆಚ್ಚು ಪ್ರಮಾಣದಲ್ಲಿ ಒಲಿದಿವೆ. ಅಮ್ಮೋಗಿಸಿದ್ಧ ಪರಂಪರೆ ಮಾತ್ರ ಪ್ರತಿರೋಧ ಒಡ್ಡಿರುವುದು ತಿಳಿದು ಬರುತ್ತದೆ. ಮೊದಲಿನ ಎರಡು ಪಂಗಡಗಳು ತಮ್ಮ ಮೂಲ ಭಂಡಾರವನ್ನು ಬಿಟ್ಟುಕೊಟ್ಟು ಭಸಿತವನ್ನು ಸ್ವೀಕರಿಸಿದರೆ ಅಮ್ಮೋಗಿಸಿದ್ಧ ಪಂಗಡ ಭಂಡಾರವನ್ನು ಇಂದಿಗೂ ಉಳಿಸಿಕೊಂಡು ಬಂದಿದೆ(ಈ ಕುರಿತು ಮೂರನೆಯ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗುವುದು). ಇಂದಿನ ಅಮ್ಮೋಗಿಸಿದ್ಧ ಪಂಗಡದ ಒಡೆಯರು ಲಿಂಗವನ್ನು ಧರಿಸುತ್ತಾರಾದರೂ ಒಂದು ಕಾಲಘಟ್ಟದಲ್ಲಿ ಅಮ್ಮೋಗಿಸಿದ್ಧನ ಮಗ ಬಿಳಿಯಾನಿಸಿದ್ಧ 'ಲಿಂಗ'ವನ್ನು ತಿರಸ್ಕರಿಸಿರುವ ಕಥನಗಳು ದೊರೆಯುತ್ತದೆ. ಲಿಂಗಾಯಿತದೊಂದಿಗಿನ ಈ ಮೂವರ ಮುಖಾಮುಖಿಯನ್ನು ಗಮನಿಸಿದರೆ ಶಾಂತಮುತ್ತ್ಯಾ ಪಂಗಡದವರ ಬೆನ್ನಿಗೆ ರೇವಣಸಿದ್ಧನಿದ್ದಾನೆ[೨೪] ಮಂಕಸಿದ್ಧನಿಗೆ ಸೊನ್ನಲಿಗೆ ಸಿದ್ಧರಾಮನಿದ್ದಾನೆ[೨೫] ಆದರೆ ಅಮ್ಮೋಗಿಸಿದ್ಧ ಪಂಗಡದವರ ಬೆನ್ನಿಗೆ ಅಂಥ ಯಾವುದೇ ಸಿದ್ಧನಾಯಕನಿಲ್ಲ. ಅದೇನೆ ಇರಲಿ, ಲಿಂಗಾಯತದೊಂದಿಗಿನ ಅಮ್ಮೋಗಿಸಿದ್ಧ ಪಂಗಡದ ಮುಖಾಮುಖಿಯ ಪ್ರಮುಖ ಆಶಯವೆಂದರೆ ಭಂಡಾರದ ಪಾರಮ್ಯ ಸಾರುವುದು ಹಾಗೂ ಲಿಂಗದ ಹೆಗ್ಗಳಿಕೆಯನ್ನು ನಿರಾಕರಿಸುವುದು.

[illegible]

೨.೪.೧.೧ ಭಂಡಾರ ಪಾರಮ್ಯದ ಕಥನ: ಕಲ್ಯಾಣ ಪಟ್ಟಣದ ಕುಂಬಾರ ರಾಮಯ್ಯ ಹಾಗೂ ನೀಲಮ್ಮ ಎಂಬ ಸದಾಚಾರಿ ದಂಪತಿಗಳಿಗೆ ಬಹುದಿವಸವಾದರೂ ಸಂತಾನ ಫಲವಿರುವುದಿಲ್ಲ. ಅವನು ಕಲ್ಯಾಣದ ಜಂಗಮರಲ್ಲಿ ಹೋಗಿ ಸಂತಾನ ಫಲ ಕರುಣಿಸಿರಿ ಎಂದು ಬೇಡಿಕೊಂಡಾಗ ಅವರು 'ನಾವು ನಿಮ್ಮಂಥ ಭಕ್ತರನ್ನು ಕಾಡಿಬೇಡಿ ಊಟ ಮಾಡುವವರೇ ಹೊರತು ಸಂತಾನ ಫಲ ಕೊಡುವ ಸಾಮರ್ಥ್ಯವುಳ್ಳವರಲ್ಲವೆಂದು ಹೇಳಿ ಸಂತಾನಫಲ ಬೇಕಿದ್ದರೆ ತಿರಮೂಲ ತಿಮ್ಮಪ್ಪನಲ್ಲಿ ಹೋಗಿರಿ ಎಂದು ತಿಳಿಸುತ್ತಾರೆ. ತಿರಮೂಲಿ ತಿಮ್ಮಪ್ಪನಲ್ಲಿ ಕೇಳಿದರೆ ಅವನು ಎಡೂರ ವೀರಭದ್ರನ ಕಡೆಗೆ ಬೆರಳು ಮಾಡುತ್ತಾನೆ. ಎಡೂರ ವೀರಭದ್ರ ಶ್ರೀ ಶೈಲದ ಮಲ್ಲಯ್ಯನಲ್ಲಿಗೆ ಹೋಗಲು ತಿಳಿಸುತ್ತಾನೆ. ಶ್ರೀಶೈಲ ಮಲ್ಲಯ್ಯ ನಿಮ್ಮ ಹಣೆಬರಹದಲ್ಲಿ ಸಂತಾನ ಭಾಗ್ಯ ಇಲ್ಲವೆಂದು ಹೇಳಿ ಕೈ ಚೆಲ್ಲುತ್ತಾನೆ. ಆಗ ಅಶರೀರವಾಣಿಯೊಂದು ಮುಮ್ಮಟಗುಡ್ಡದಲ್ಲಿರುವ ಅಮ್ಮೋಗಿಸಿದ್ಧನಲ್ಲಿ ಹೋಗಲು ತಿಳಿಸುತ್ತದೆ. ಹುಟ್ಟು ಬಂಜೆಯರಿಗೆ ತೊಟ್ಟಿಲ ಭಾಗ್ಯ ಕೊಡುವ ವರ ಪಡೆದು ಬಂದಿದ್ದ ಅಮ್ಮೋಗಿಸಿದ್ಧ ಸಂತಾನ ಫಲ ನೀಡುತ್ತಾನೆ. ಸಂತಾನಪ್ರಾಪ್ತಿ ಮಾಡಿಕೊಂಡ ಕುಂಬಾರ ರಾಮಯ್ಯ ಐದೆಸಿ ಕಾರ್ಯಕ್ರಮಕ್ಕೆ ಬರಬೇಕೆಂದು ಅಮ್ಮೋಗಿಸಿದ್ಧನಲ್ಲಿ ಬೇಡಿಕೊಳ್ಳುತ್ತಾನೆ. ಆಗ ಅಮ್ಮೋಗಿಸಿದ್ಧ ತನ್ನ ಮಗನಾದ ಬಾಲಕ ಬಿಳಿಯಾನಿ ಸಿದ್ಧನನ್ನು ಕರೆದುಕೊಂಡು ಹೋಗಲು ತಿಳಿಸುತ್ತಾನೆ.

ಬಾಲಕ ಬಿಳಿಯಾನಿಸಿದ್ಧ ಮುಮ್ಮಟಗುಡ್ಡದಿಂದ ಕಲ್ಯಾಣದ ಕಡೆಗೆ ಹೊರಟ ಚಿತ್ರಣವನ್ನು ಗಮನಿಸಿದರೆ ದಿಗ್ವಿಜಯಕ್ಕೆ ಹೊರಟ ಯುವರಾಜನ ಹಾಗೆ ತೋರುತ್ತಾನೆ. ದಾರಿಯಲ್ಲಿ ಬಿದ್ದಿದ್ದ ಏಳುಗಜ ಉದ್ದದ ಬಂಡೆಗಲ್ಲಿಗೆ ಭಂಡಾರ ಹೊಡೆದು ಅದನ್ನು ಜೀವಂತ ಆನೆಯನ್ನಾಗಿಸಿ ಅದರ ಮೇಲೆ ಕುಳಿತು ಕಲ್ಯಾಣದ ಕಡೆಗೆ ಪ್ರಯಾಣ ಬೆಳೆಯಿಸುತ್ತಾನೆ. ಕಲ್ಯಾಣದ ಸೀಮೆ ಸಮೀಪಿಸುತ್ತಿದ್ದಂತೆ ಅವನನ್ನು ಒಡ್ಡಿವಾಲಗದೊಂದಿಗೆ ಸ್ವಾಗತಿಸಲಾಗುತ್ತದೆ. ಮೆರವಣಿಗೆ ನಡೆದ ಸುಮಯದಲ್ಲಿಯೇ ಕುರುಬರ ಕರೆಪ್ಪ ಎಂಬುವವನು ಕಲ್ಯಾಣದಲ್ಲಿ ತನಗಾಗುತ್ತಿರುವ ಅವಮಾನದ ಕುರಿತು ತಿಳಿಸಿ ಪರಿಹಾರ ಸೂಚಿಸಬೇಕೆಂದು ಕೇಳಿಕೊಳ್ಳುತ್ತಾನೆ. ಇದಾದ ನಂತರದ ಕತೆ 'ತರಗ ಪವಾಡದ ಕತೆ'ಯನ್ನು ನೆನಪಿಸುವಂಥದ್ದಾಗಿದೆ. ಆಗ ಬಿಳಿಯಾನಿಸಿದ್ಧ ಕರೆಪ್ಪನಿಗೆ ಹೀಗೆ ಹೇಳುತ್ತಾನೆ. ಕಲ್ಯಾಣದಲ್ಲಿ ಗೂಳಿಯೊಂದು ಸತ್ತಿದೆ. ಸಮಾಧಿಗೊಳಿಸಲು ಅದನ್ನು ಮೆರವಣಿಗೆಯಲ್ಲಿ ತರುತ್ತಿದ್ದಾರೆ. ನೀನು ನಿನ್ನ ಒಂದು ಟಗರಿನ ಮೇಲೆ ನಾನೀಗ ಕೊಡುತ್ತಿರುವ ಭಂಡಾರ ಸಿಂಪಡಿಸು. ನಿನ್ನ ಟಗರು ಮೂರ್ಛೆ ಹೊಂದುತ್ತದೆ. ಅದು ಸತ್ತು ಹೋಯಿತೆಂದು ಹೇಳಿ ನೀನು ಅದನ್ನು ಸಮಾಧಿಗೊಳಿಸಲು ಅದರ ಮೆರವಣಿಗೆಯ ವಿರುದ್ಧ ಹೋಗು ಎಂದು ಹೇಳುತ್ತಾನೆ. ಕರೆಪ್ಪನು ಬಾಲಕ ಬಿಳಿಯಾನಿಸಿದ್ಧ ಹೇಳಿದಂತೆ ಮಾಡುತ್ತಾನೆ. ಆಗ ಕಲ್ಯಾಣದ ಶೀಲವಂತರಿಗೂ ಕರೆಪ್ಪನಿಗೂ ವಾಗ್ವಾದ ನಡೆಯುತ್ತದೆ. ಆಗ ಅಲ್ಲಿಗೆ ಆಗಮಿಸಿದ ಬಾಲಕ 'ನೀವು ನಿಜವಾಗಿಯೂ ಶ್ರೇಷ್ಠರೇ ಆಗಿದ್ದರೆ ಸತ್ತ ನಿಮ್ಮ ಗೂಳಿಯನ್ನು ಜೀವಂತ ಮಾಡಿರಿ, ಕರೆಪ್ಪ ಶ್ರೇಷ್ಠನಾಗಿದ್ದರೆ ಅವನು ಸತ್ತ ಟಗರನ್ನು ಜೀವಂತಗೊಳಿಸುತ್ತಾನೆ' ಎಂದು ಪಂಥವೊಡ್ಡುತ್ತಾನೆ. ಪಂಥದಲ್ಲಿ ಕಲ್ಯಾಣದ ಶೀಲವಂತರು ಸೋಲುತ್ತಾರೆ. ಆಗ ಕರೆಪ್ಪನು ಬಾಲಕ ಬಿಳಿಯಾನಿಸಿದ್ಧ ಕೊಟ್ಟ

ಭಂಡಾರವನ್ನು ಟಗರಿನ ಮೇಲೆ ಸಿಂಪಡಿಸಲು ಅದು ಜೀವಂತವಾಗುತ್ತದೆ. ಆಗ ಕಲ್ಯಾಣದ ಜನರು ಕರೆಪ್ಪನ ಶ್ರೇಷ್ಠತೆಯನ್ನು ಒಪ್ಪಿಕೊಂಡು ಕುರಿಗಳ ವಾಸ್ತವ್ಯಕ್ಕೆ ನಿಶ್ಚಿತವಾದ ಜಾಗೆಯನ್ನು ಕಲ್ಯಾಣ ಪಟ್ಟಣದಲ್ಲಿ ನೀಡುತ್ತಾರೆ. ಭಂಡಾರದ ಪಾರಮ್ಯವನ್ನು ಸಾರುವ ಈ ಕಥನ ಕಲ್ಯಾಣದಲ್ಲಿ ಕುರುಬರು ತಮ್ಮ ಅಸ್ಮಿತತೆಯನ್ನು ಕಾಪಾಡಿಕೊಂಡು ಬಂದುದನ್ನು ಹೇಳುತ್ತದೆ.

೨.೪.೧.೨ ಲಿಂಗ ಹೆಗ್ಗಳಿಕೆ ನಿರಾಕರಣೆ : ಇಂಥದೊಂದು ವಿಜಯದೊಂದಿಗೆ ಬಾಲಕ ಬಿಳಿಯಾನಿಸಿದ್ಧ ಕಲ್ಯಾಣ ಪ್ರವೇಶ ಮಾಡುತ್ತಾನೆ. ಕುಂಬಾರ ರಾಮಯ್ಯನ ಮಗನಿಗೆ ಬಾಲಕ ಬಿಳಿಯಾನಿಸಿದ್ಧ ಐದೆಸಿ ಕಾರ್ಯಕ್ರಮ ನಡೆಸುತ್ತಾನೆ. ಕಾರ್ಯಕ್ರಮದ ನಂತರ ಜಂಗಮರಿಗೆ ಪ್ರಸಾದ ವ್ಯವಸ್ಥೆ ನಡೆಯುತ್ತದೆ. ಪ್ರಸಾದದ ಪಂಕ್ತಿಯಲ್ಲಿ ಬಿಳಿಯಾನಿಸಿದ್ಧನೂ ಕುಳಿತುಕೊಳ್ಳುತ್ತಾನೆ. ಆಗ ಅಲ್ಲಿ ನೆರೆದ ಜಂಗಮರು ಕೊರಳಲ್ಲಿ ಲಿಂಗವಿರುವವರು ಮಾತ್ರ ಈ ಪಂಕ್ತಿಯಲ್ಲಿ ಕುಳಿತುಕೊಳ್ಳಬೇಕು, ಅನ್ಯರು ಇಲ್ಲಿ ಕುಳಿತುಕೊಳ್ಳಬಾರದು ಎಂದು ತಕರಾರು ತೆಗೆಯುತ್ತಾರೆ. ಆಗ ಬಿಳಿಯಾನಿಸಿದ್ಧನು ಆಯಿತು, ಎಲ್ಲರೂ, ಲಿಂಗಪೂಜೆ ಮಾಡಿಕೊಂಡ ನಂತರ ಪ್ರಸಾದ ಸ್ವೀಕರಿಸೋಣ, ಎಲ್ಲರೂ ಲಿಂಗಪೂಜೆ ಪ್ರಾರಂಭಿಸಿರಿ ಎಂದು ಹೇಳುತ್ತಾನೆ. ಆಯಿತು ಎಂದು ಎಲ್ಲ ಜಂಗಮರು ಲಿಂಗವಸ್ತ್ರ ಬಿಚ್ಚುತ್ತಾರೆ. ಆದರೆ ಅವರ ಲಿಂಗವಸ್ತ್ರಗಳಲ್ಲಿದ್ದ ಲಿಂಗಗಳೆಲ್ಲಾ ಮಾಯವಾಗಿರುತ್ತವೆ. ಎಲ್ಲರಿಗೂ ದಿಗಿಲಾಗುತ್ತದೆ. ಆಗ ಅಲ್ಲಿಯೇ ಕುಳಿತಿದ್ದ ಬಿಳಿಯಾನಿಸಿದ್ಧನು ತನ್ನ ಅಂಗೈಯಲ್ಲಿ ಐನೂರು, ಮುಂಗೈಯಲ್ಲಿ ಮುನ್ನೂರು, ರೋಮರೋಮಗಳಲ್ಲಿ ಲಿಂಗಗಳನ್ನು ಹಾಗೂ ಎದೆಯೊಳಗಿರುವ ಆತ್ಮಲಿಂಗವನ್ನು ತೋರಿಸುತ್ತಾನೆ. ಆಗ ಅಲ್ಲಿ ನೆರೆದ ಜಂಗಮರಿಗೆಲ್ಲ ತಮ್ಮ ತಪ್ಪಿನ ಅರಿವಾಗುತ್ತದೆ. ಹೀಗೆ 'ಕಟ್ಟು ಲಿಂಗ'ದವರು 'ಹುಟ್ಟು ಲಿಂಗ'ದವರ ಎದುರಿಗೆ ಸೋಲನ್ನು ಒಪ್ಪಿಕೊಳ್ಳುತ್ತಾರೆ.

ಹೀಗೆ ಲಿಂಗ ಹೆಗ್ಗಳಿಕೆಯಲ್ಲಿ ಬೀಗುತ್ತಿದ್ದ ಕಲ್ಯಾಣದ ಜನರನ್ನು ಬಿಳಿಯಾನಿಸಿದ್ಧ ಸೋಲಿಸುವ ಕಥನ ಹದಿನಾರನೆಯ ಶತಮಾನದ ವೇಳೆಗೆ ಲಿಂಗಾಯತವು ಜಡಗೊಂಡಿತ್ತು ಹಾಗೂ ಜಡಗೊಂಡ ವ್ಯವಸ್ಥೆ ಸಿದ್ಧ ಪಂಥದವರಿಂದ ಹೀಗೆ ವಿಡಂಬನೆಗೆ ತುತ್ತಾಗುತ್ತಿತ್ತು ಎಂಬುದನ್ನು ರೂಪಕಮಾಡಿ ಹೇಳುತ್ತದೆ. ಇಂಥದೇ ವಿಡಂಬನೆಯನ್ನು ಕೆಳಗಿನ ಲಾಗೋಳಿಯಲ್ಲಿಯೂ ಕಾಣಬಹುದು.

ಶಿವನೇ ನಮ್ಮಯ ದೇವರು ಬಂದಾನ ಘೇ
ಸ್ವಾಮಿ ನಮ್ಮಯ ದೇವರು ಬಂದಾನ ಘೇ
ಹೇ ಅಂಗಾ ಮೇಲೋ ಲಿಂಗಾ ಮೇಲೋ
ಲಿಂಗಕ ವಸ್ತರ ತಾ ಮೇಲೋ
ಸ(ಸು)ಣ್ಣಾ ಮೇಲೋ ಬಣ್ಣಾ ಮೇಲೋ
ಬಣ್ಣಕ ಬಿಳೀದು ತಾ ಮೇಲೋ[೨೬]

ಲಿಂಗದ ಮೇಲಿರುವ ವಸ್ತ್ರ ತಾನು ಲಿಂಗಕ್ಕಿಂತಲೂ ಶ್ರೇಷ್ಠ ಎಂದರೆ ಎಂಥ ಚೋದ್ಯದ ಮಾತಾಗುವುದೋ ಅಂಥದೇ ಮಾತು ಅಂಗದ ಮೇಲಿರುವ ಲಿಂಗ ತಾನು ಶ್ರೇಷ್ಠವೆಂದು ಭಾವಿಸಿದರೆ ಎನ್ನುತ್ತದೆ ಈ ಲಾಗೋಳಿಯನ್ನು ರಚಿಸಿದ ಜನಪದ ಮನಸ್ಸು.

೨.೪.೨ ರಾವಳ ಜೋಗಿಯೊಂದಿಗೆ ಮುಖಾಮುಖಿ

ಅಮೋಘಸಿದ್ಧ ಕನ್ಯೆ ಬೇಡಲು ಮಕಣಾಪುರದ ನಡಹಟ್ಟಿ ನಗರಾಯನ ಮನೆಗೆ ಬಂದಾಗ ಗೌಡಕಿಯ ಅಮಲಿನಲ್ಲಿದ್ದ ನಗರಾಯ ವಯಸ್ಸಿನಲ್ಲಿ ಮುಪ್ಪಿನವನ ಹಾಗೆ ಕಂಡ ಅಮೋಘಸಿದ್ಧನನ್ನು ಕಂಡು ಹೀಗೆ ಪ್ರಶ್ನಿಸುತ್ತಾನೆ.

ಏಳಟ್ಟಿ ಗ್ರಾಮದ ಒಳಗ್ಯಾನು ಗೌಡನ ವಾಡೆದ ಒಳಗ್ಯಾನೋ
ಲಾಯದ ಪಡಸಾಲಿ ಒಳಗ್ಯಾನೋ
ಲಾಯದ ಪಡಸಾಲಿ ಒಳಗ್ಯಾನೋ ಶಿವನ ಮನಿಯ ಸಿದ್ಧಾನೇ
ಶಿವನ ಮನಿಯ ಸಿದ್ಧಾನೇ ಜಾಡಿಜಮಖಾನಿ ಮ್ಯಾಲ್ಯಾನ
ಜಾಡಿಜಮಖಾನಿಮ್ಯಾಲಾನ ನಿಜವೊಂದ ಮೂರತ ಗೊಂಡಾನೇ
ಗೌಡನೇ ನಗರಾಯಾನೆ ಆವಾಗ ತಾಯೇನ ನುಡದಾನ
ಬಾರೋ ಬಾರೋ ಏ ಜೋಗಿ ಯಾವ ನಾಡದವನ್ಯಾನು
ಯಾವನಾಡದವನ್ಯಾನು ನೀ ಯಾವ ದೇಶದವನ್ಯಾನು
ಯಾವ ದೇಶದವನ್ಯಾನು ನೀ ಬಂದಿದ ಕಾರಣ ಹೇಳಲ್ಲ[೨೭]

ಇಲ್ಲಿ 'ಯೋಗಿ'ಯೇ 'ಜೋಗಿ'ಯಾಗಿ ಬಳಕೆಯಾಗಿರಬಹುದು ಎನ್ನಿಸಬಹುದು. ಆದರೆ ಇಲ್ಲಿ ಈ ಶಬ್ದವನ್ನು ವಿಶೇಷವಾಗಿ ಬಳಸಿರುವ ಸಾಧ್ಯತೆ ಹೆಚ್ಚಿದೆ. ಉಳಿದೆಲ್ಲ ಕಡೆ 'ಯೋಗಿ' ಶಿವನ ಮನಿಯ ಸಿದ್ಧ, ತಂದಿ ಅಮ್ಮೋಗಿ ಸಿದ್ಧ ಎಂದು ಕರೆಯಿಸಿಕೊಳ್ಳುವ ಈತನ ಕುರಿತು ಇಲ್ಲಿ ವಿಶೇಷವಾಗಿಯೇ ಬಳಸಲಾಗಿದೆ. ಜೋಗಿಗಳಲ್ಲಿ ಎರಡು ತೆರ. ಮೊದಲನೆಯ ವರ್ಗದ ಜೋಗಿಗಳು ಹಿಂದೂ ಧರ್ಮದವರು ಮಾತ್ರ ಆಗಿರುತ್ತಾರೆ. ಅವರು ಗೋರಖನಾಥನ ಅನುಯಾಯಿಗಳು. ಅವರಲ್ಲಿ ಎರಡು ಪ್ರಕಾರ: ಔಘುರ ಜೋಗಿ ಹಾಗೂ ಕಾನಪತ್ ಜೋಗಿ ಎಂದು. ಅಮೋಘಸಿದ್ಧ(ಅಮೋಘಸಿದ್ಧ)ನು ಔಘುರ ಜೋಗಿಯಾಗಿರಬೇಕು. ಇವರು ಸಾಮಾನ್ಯವಾಗಿ ಸನ್ಯಾಸಿಗಳಾಗಿರುತ್ತಾರೆ. ಅಮೋಘಸಿದ್ಧ ತನ್ನ ಇಳಿವಯಸ್ಸಿನವರೆಗೆ ಮದುವೆಯಾಗದೆ ಇದ್ದುದರ ಹಿಂದೆ ಅವನು ಔಘುರ ಜೋಗಿತ್ವದ ನಂಬಿಕೆ ಕಾರಣವಾಗಿರಬೇಕು.

ಗೋರಖನಾಥನ ಅನುಯಾಯಿಗಳಲ್ಲದೆ ಗ್ರಹಸ್ಥಿ ಜೋಗಿಗಳೂ ಇದ್ದಾರೆ. ಇವರನ್ನು ಸಾಮಾನ್ಯವಾಗಿ ರಾವಳ ಜೋಗಿಗಳು ಎಂದು ಕರೆಯುತ್ತಾರೆ. ರಾವಳ ಜೋಗಿಗಳು ಹಾಡು ಹೇಳುತ್ತ, ಭವಿಷ್ಯ ನುಡಿಯುತ್ತಾ ಭಿಕ್ಷಾಟನೆಯ ವೃತ್ತಿ ಮಾಡುತ್ತ ಬದುಕು ಸಾಗಿಸುವವರು. ಗೋರಖನಾಥನ ಅನುಯಾಯಿಗಳಾದ ಔಘುರ

[illegible]

[illegible]

[illegible]

[illegible]

ಜೋಗಿಗಳು (ಇಲ್ಲಿ ಅಮೋಘಸಿದ್ಧ ಹಾಗೂ ಅವನ ಪರಿವಾರದವರು) ಕಿಲಾರಿಗಳನ್ನು ಮೇಯಿಸುತ್ತ, ರೈತಾಪಿ ವರ್ಗದ ಜನರ ಸುಖದುಃಖ ಆಲಿಸುತ್ತಾ ಜೀವಪರ ಬದುಕನ್ನು ನಡೆಯಿಸುವರು.[೨೮] ಹೀಗಾಗಿ ರಾವಳ ಜೋಗಿಗಳೊಂದಿಗೆ ತಾತ್ವಿಕ ಭಿನ್ನಾಭಿಪ್ರಾಯವಿರುವುದು ಸಹಜವಾಗಿದೆ. ಇವರಿಬ್ಬರ ಮಧ್ಯದ ಈ ಭಿನ್ನಾಭಿಪ್ರಾಯವನ್ನು ಬಿಂಬಿಸುವ ಘಟನೆ ಉಮದಿಯಲ್ಲಿ ಜರುಗಿದೆ.

ಮುಮ್ಮೆಟಗುಡ್ಡದಲ್ಲಿ ಯೋಗಸಾಧನೆ ಮಾಡುತ್ತ ನೆಲೆನಿಂತಿದ್ದ ಅಮೋಘಸಿದ್ಧ ಮಕಣಾಪುರದ ನಡಹಟ್ಟಿ ನಾಗರಾಯನ ಮಗಳು ಪದ್ಮಾವತಿಯನ್ನು ಮದುವೆಯಾದ. ಗೃಹಸ್ಥ ಬ್ರಹ್ಮಚಾರಿಯಾಗಿಯೇ ಉಳಿಯಬೇಕೆಂದವ ನಾಲ್ಕು ಗಂಡು ಮಕ್ಕಳ ತಂದೆಯಾದ. ನಾಲ್ಕು ಜನ ಮಕ್ಕಳು ಇಪ್ಪತ್ತೊಂದು ಮೊಮ್ಮಕ್ಕಳನ್ನು ಹೆತ್ತರು. ಅಮೋಘಸಿದ್ಧ ಅರಕೇರಿ(ಮುಮ್ಮೆಟಗುಡ್ಡ)ಯನ್ನು ಅರಮನಿ ಮಾಡಿಕೊಂಡರೆ ಅವನ ವರವಿನ ಮಕ್ಕಳು ಭೀವರಗಿಯನ್ನು (ಜತ್ತ ತಾಲೂಕ) ಗುರುಮನೆ ಮಾಡಿಕೊಂಡರು. ಅವರು ನಾಡಿನ ವಿವಿಧ ಭಾಗಗಳನ್ನು ಸಿದ್ಧಾಟಿಕೆಯ ಮೂಲಕ ತಮ್ಮ ಕೈವಶ ಮಾಡಿಕೊಂಡಿದ್ದರು. ಇಪ್ಪತ್ತೊಂದೂ ಮೊಮ್ಮಕ್ಕಳು ಭೀವರಗಿಯಲ್ಲಿಯೇ ಉಳಿದರೆ ಸರಿಯಲ್ಲವೆಂದು ಭಾವಿಸಿ ಅಧಿಕಾರದ ವಿಕೇಂದ್ರೀಕರಣ ಮಾಡಿದಂತೆ ಅವರನ್ನೆಲ್ಲ ನಾಡಿನ ಬೇರೆ ಬೇರೆ ಭಾಗಗಳಿಗೆ ಕಳುಹಿಸಿಕೊಟ್ಟರು. ಅಮೋಘಸಿದ್ಧನ ನಾಲ್ಕನೆಯ ಮಗ ಕಡಿ ಹುಟ್ಟ ಕನ್ನ ಮುತ್ಯಾ. ಅವನಿಗೆ ಆರು ಜನ ಮಕ್ಕಳು. ಮೊದಲ ಮಗ ಕರಿಯೋಗಸಿದ್ಧನನ್ನು ಕವಲಗುಡ್ಡ(ಅಥಣಿ ತಾಲೂಕ)ಕ್ಕೆ, ಎರಡನೆಯ ಮಗ ಮಲಕಾರಿಸಿದ್ಧನನ್ನು ಗದ್ದನಕೇರಿ(ಬಾಗಲಕೋಟ ತಾಲೂಕು)ಗೆ, ಮೂರನೆಯ ಮಗ ಮಾದಣ್ಣನನ್ನು ಕುಂಚನೂರಿ(ಜಮಖಂಡಿ ತಾಲೂಕು)ಗೆ ನಾಲ್ಕನೆಯ ಮಗ ವೀರ ಮಲಕಾರಿಸಿದ್ಧನನ್ನು ತಂದೆಯ ಸೇವೆಗೆ, ಐದನೆಯ ಮಗ ಜ್ಯೋತಿ ಲಕ್ಕಪ್ಪನನ್ನು ಉಮದಿಗೆ ಹಾಗೂ ಆರನೆಯ ಮಗ ಬ್ರಹ್ಮದೊಡೆಯನನ್ನು ಆರಕೇರಿಯ ಉಸ್ತುವಾರಿ ನೋಡಿಕೊಳ್ಳಲು ನೇಮಿಸಲಾಗುತ್ತದೆ. ಇಂದಿನ ಉಮದಿಯನ್ನು ಈ ಮೊದಲು ನಾರಾಯಣಪುರವೆಂದು ಕರೆಯುತ್ತಿದ್ದರು. ಆ ಊರಿನ ಪ್ರಮುಖ ವ್ಯಕ್ತಿಯ ಹೆಸರು ರಾವಳಸಿದ್ಧ. ಅವನು ಬಹು ದರ್ಪದ ಸ್ವಭಾವದವನಾಗಿದ್ದನು. ಜ್ಯೋತಿ ಲಕ್ಕಪ್ಪ ಬಹು ಶಾಂತ ಸ್ವಭಾವದವನಾಗಿದ್ದನು. ಹೀಗಾಗಿ ರಾವಳಸಿದ್ಧ ಅವನಿಗೆ ಹೇಳತೀರದಷ್ಟು ಉಪಟಳ ನೀಡತೊಡಗಿದ. ಉಪಟಳ ತಾಳಲಾರದೆ ಜ್ಯೋತಿ ಲಕ್ಕಪ್ಪ ಭೀವರಗಿಗೆ ಹೋಗಿ ತನ್ನ ಸಮಸ್ಯೆಯನ್ನು ಹೇಳಿದನು. ಆಗ ಅವನ ರಕ್ಷಣೆಗೆ ಮಲಕಾರಿಸಿದ್ಧನನ್ನು ಕಳುಹಿಸಿಕೊಡುತ್ತಾರೆ. ವೀರ ಸ್ವಭಾವದ ಮಲಕಾರಿಸಿದ್ಧ ಆರ್ಭಟಿಸುತ್ತ ರಾವಳಸಿದ್ಧನ ಮೇಲೆ ಏರಿ ಹೋಗುತ್ತಾನೆ. ಅಂಜಿದ ರಾವಳಸಿದ್ಧ ಗುಡಿಯೊಂದರಲ್ಲಿ ಅಡಗಿಕೊಂಡು ಒಳಚಿಲಕ ಹಾಕಿಕೊಳ್ಳುತ್ತಾನೆ. ವೇಳೆ ಎಷ್ಟೇ ಗತಿಸಿದರೂ ಮಲಕಾರಿಸಿದ್ಧ ಗುಡಿಯ ಮುಂಭಾಗದಿಂದ ಕದಲದೇ ಇದ್ದಾಗ ತನಗೆ ಉಳಿಗಾಲವಿಲ್ಲವೆಂದು ರಾವಳಸಿದ್ಧ ಭಾವಿಸುತ್ತಾನೆ. ಏನೂ ದಾರಿ ತೋಚದಂತಾದಾಗ ಅಡಗಿಕೊಂಡ ಗುಡಿಯ ಗೋಪುರವನ್ನು ಹಾರಿ ಹೊಡೆದು ಕಿಂಡಿಮಾಡಿಕೊಂಡು ತಲೆತಪ್ಪಿಸಿಕೊಳ್ಳುತ್ತಾನೆ. ಮಲಕಾರಿಸಿದ್ಧನ ಎದುರಿಗೆ ಇರುವುದೇ ಬೇಡವೆಂದು ದಕ್ಷಿಣ ಸೋಲಾಪುರ ತಾಲೂಕಿನ ಮದರಿ ಎಂಬ ಗ್ರಾಮದಲ್ಲಿ ಹೋಗಿ ನೆಲೆಸುತ್ತಾನೆ.

[illegible]

೨.೪.೩ ಸೂಫಿ ಸಂತರೊಂದಿಗೆ ಮುಖಾಮುಖಿ

ಈ ಅಧ್ಯಾಯದ ‘ಕಾಲ’ವೆನ್ನುವ ವಿಭಾಗದಲ್ಲಿ ಅವಧೂತಸಿದ್ಧ, ಬಿಳಿಯಾನಿಸಿದ್ಧ ಸಹೋದರರು ವಿಜಾಪುರದಲ್ಲಿದ್ದ ಸೂಫಿ ಸಂತರನ್ನು ಭೆಟ್ಟಿಯಾದ ಸಂಗತಿಯನ್ನು ಒಂದಿಷ್ಟು ಪ್ರಮಾಣದಲ್ಲಿ ಗಮನಿಸಿದ್ದೇವೆ. ಸಧ್ಯ ಅದರ ಕುರಿತು ವಿಸ್ತಾರವಾಗಿ ಚರ್ಚಿಸಬಹುದು.

ಅಮೋಘಸಿದ್ಧನು ತನ್ನ ನಾಲ್ವರು ವರವಿನ ಮಕ್ಕಳು ಹರೆಯಕ್ಕೆ ಬಂದ ನಂತರ ವ್ಯವಸ್ಥಿತವಾಗಿ ಅವರ ಮದುವೆ ಮಾಡಿಕೊಡುತ್ತಾನೆ. ಮದುವೆಯಾದ ನಾಲ್ವರಲ್ಲಿ ಮೊದಲಿನ ಇಬ್ಬರು ಮಕ್ಕಳು ಅವತಾರ ಅವಧೂತ ಸಿದ್ಧ ಹಾಗೂ ದೇವಿಂದ್ರ ಬೀಳಿಯಾನಿಸಿದ್ಧ ನಾಡ ಶೋಧ ಮಾಡಲು ಹೊರಟಿರುವುದಾಗಿ ತಂದೆಗೆ ತಿಳಿಸುತ್ತಾರೆ. ತಂದೆ ಅಮೋಘಸಿದ್ಧನು ವಿಜಾಪುರವೊಂದನ್ನು ಬಿಟ್ಟು ಬೇರೆಲ್ಲಿಗಾದರೂ ಹೋಗಿ ಬನ್ನಿರಿ ಎಂದು ಆಶೀರ್ವದಿಸಿ ಕಳುಹಿಸುತ್ತಾನೆ. ಆದರೆ ಯೌವನದ ಮದದಲ್ಲಿದ್ದ ಇಬ್ಬರೂ ವಿಜಾಪುರದ ಕಡೆಗೆ ಮೊದಲು ಸಂಚಾರ ಮಾಡುತ್ತಾರೆ. ಇಲ್ಲಿಗೆ ಬಂದ ಅವರು ಸೂಫಿ ಸಂತರ ಬಗೀಚನ್ನು ಪ್ರವೇಶಿಸುತ್ತಾರೆ. ಆಗ ಅಮೋಘಸಿದ್ಧನ ಇಬ್ಬರು ಮಕ್ಕಳಿಗೂ ಸೂಫಿಸಂತರಿಗೂ ಭೆಟ್ಟಿಯಾಗುತ್ತದೆ.

ವಿಜಾಪುರವನ್ನು ಸೂಫಿ ಸೇಂಟ್ಸ ಸಿಟಿ ಎಂದು ಕರೆಯುತ್ತಾರೆ. Bijapur has been well known as city of sufisaints.[೨೯] ವಿಜಾಪುರದ ದೊರೆ ಎರಡನೆಯ ಇಬ್ರಾಹಿಂನ ಕಾಲಕ್ಕೆ ವಿಜಾಪುರ ನಗರಕ್ಕೆ ಅತ್ಯಂತ ಹೆಚ್ಚಿನ ಸಂಖ್ಯೆಯ ಸೂಫಿ ಸಂತರು ಉತ್ತರ ಭಾರತ ಹಾಗೂ ಅರಬ ದೇಶಗಳಿಂದ ವಲಸೆ ಬಂದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅವನ ಕಾಲಕ್ಕೆ ಒಟ್ಟು ೨೭ ಜನ ಸೂಫಿಸಂತರು ವಲಸೆ ಬಂದರು.[೩೦]

ಇವರ ಸಮಕಾಲೀನರಾದ ಅವಧೂತಸಿದ್ಧ ಹಾಗೂ ಬಿಳಿಯಾನಿಸಿದ್ಧ ಇದೇ ಸಮಯದಲ್ಲಿ ವಿಜಾಪುರಕ್ಕೆ ಬಂದದ್ದು. ಈ ಸಿದ್ಧರ ಹಾಗೂ ಸಂತರ ಮುಖಾಮುಖಿಯ ಕುರಿತು ಪವಾಡ ಸದೃಶ್ಯ ಘಟನಾವಳಿಗಳ ಕಥನವು ಅತ್ಯಂತ ಜನಪ್ರಿಯವಾಗಿದೆ. ಸೂಫಿಸಂತರ ಬಗೀಚನ್ನು ಅಕ್ರಮವಾಗಿ ಪ್ರವೇಶ ಮಾಡಿದ ಕಾರಣವಾಗಿ ಅವರಿಬ್ಬರ ಮಧ್ಯ ಜಗಳ ಪ್ರಾರಂಭವಾಗುತ್ತದೆ. ಈ ಕಥನದಲ್ಲಿ ಏಳು ಜನ ಸೂಫೀ ಸಂತರ ಉಲ್ಲೇಖ ಬರುತ್ತದೆ. ಅವರ ಹೆಸರುಗಳು ಇಂತಿವೆ. ಮುರ್ತುಜ ಕಾದರಿ, ಅಬ್ದುಲ್ ರಜಾಕ್, ಖವಿಸ್ತಾನ ಬಾಶಾ, ಪಾಟಕ ಬಾಶಾ, ಪೈಲವಾನ ಬಾಶಾ, ಚಕ್ಕರ ಬಾಶಾ ಹಾಗೂ ಜಿನ್ನತ್ ಬಾಶಾ. ಇವರಲ್ಲಿ ಐದು ಜನರ ಕುರಿತು ಮಾಹಿತಿ ದೊರೆಯುತ್ತದೆ. ಪಾಟಕ ಬಾಶಾ ಹಾಗೂ ಜಿನ್ನತ್ ಬಾಶಾ ಯಾರು ಎಂದು ತಿಳಿದು ಬರುವುದಿಲ್ಲ.

ವಿಜಾಪುರಕ್ಕೆ ವಲಸೆ ಬಂದ ಸೂಫಿ ಸಂತರನ್ನು ಮೂರು ಪಂಗಡದಲ್ಲಿ ವಿಂಗಡಿಸಿಕೊಳ್ಳುತ್ತಾರೆ. ಚಿಸ್ತಿ, ಖಾದರಿ ಹಾಗು ಶತ್ತರಿ ಎಂದು ಆ ಮೂರು ಪಂಗಡಗಳ ಹೆಸರುಗಳು. Most of the Sufis of Bijapur who migrated to the city from the mid fourteenth century belonged to the Chisti, the adiri, the Shattari orders[೩೧]

ಅವಧೂತಸಿದ್ಧ ಹಾಗೂ ಬಿಳಿಯಾನಿಸಿದ್ಧರು ಭೆಟ್ಟಿಯಾದ ಅಬ್ದುಲ್ ರಜಾಕ್ ಖಾದ್ರಿಯ ಹೆಸರೆ ಸೂಚಿಸಿದಂತೆ ಖಾದರಿ ಪಂಗಡದ ಸೂಫಿ ಸಂತ. ಈತ ಪೂರ್ವ ಆಫ್ರಿಕಾ ಮಾರ್ಗವಾಗಿ ಬಗದಾದಿನಿಂದ ಇಲ್ಲಿಗೆ ಬಂದವನು. ಇವನು ಹಾಸೀಂ ಪೀರ ಅಳ್ವಿಯ ಸ್ನೇಹಿತನಾದ ಶಹಾ ಮುಸ್ತಾಫಾ ಖಾದ್ರಿಯ ಶಿಷ್ಯ (ಖಲೀಫ) ಆಗಿದ್ದ. ಸುಲ್ತಾನ ಮುಹಮದ್‌ನ ಮಂತ್ರಿಯಾಗಿದ್ದ ಖಾನಮಹಮ್ಮದನನ್ನು ಪೋಷಣೆ ಮಾಡಿ ಬೆಳೆಯಿಸಿದವನು ಇವನೆ. ಔರಂಗಜೇಬ ವಿಜಾಪುರದ ಮೇಲೆ ಪ್ರಥಮ ಬಾರಿಗೆ ದಾಳಿ ಮಾಡಿದಾಗ ಅವನಿಗೆ ತುಂಬಾ ಸಹಕರಿಸಿದ ಈ ಖಾನ್ ಮಹಮ್ಮದ್ ಮಡಿದುದರ ನೆನಪಿಗೆ ಔರಂಗಜೇಬ ಇವನ ಗೋರಿಯ ಮೇಲೆ ಭವ್ಯವಾದ ಗುಮ್ಮಟವನ್ನು ಕಟ್ಟಿಸಿದ. ಖಾನ ಮಹಮ್ಮದನ ಗುರು ಹಾಗೂ ಪೋಷಕನಾಗಿದ್ದ ಅಬ್ದುಲ್ ರಜಾಕ್ ೧೬೪೦ರಲ್ಲಿ ಮಡಿದಾಗಲೂ ಸಹ ಔರಂಗಜೇಬ ಮೊದಲ ಗುಮ್ಮಟದ ಬದಿಯಲ್ಲಿಯೇ ಸಮಾಧಿ ಮಾಡಿಸಿ ಅದರ ಮೇಲೆ ಮತ್ತೊಂದು ಗುಮ್ಮಟವನ್ನು ನಿರ್ಮಿಸಿದ.[೩೨] ಇವೇ ವಿಜಾಪುರದ ಪ್ರಸಿದ್ಧ ಜೋಡ ಗುಮ್ಮಟಗಳು.

ಅಮೋಘಸಿದ್ಧನ ಮಕ್ಕಳಾದ ಅವಧೂತ ಹಾಗೂ ಬಿಳಿಯಾನಿ ಸಿದ್ಧರು ಭೆಟ್ಟಿಯಾದ ಇನ್ನೊಬ್ಬ ಸೂಫಿ ಸಂತನ ಹೆಸರು ಮುರ್ತುಜಾ ಖಾದ್ರಿ. ಈತನ ಹೆಸರಿನಲ್ಲಿ ಖಾದ್ರಿ ಎಂಬ ಉಪಾಧಿ ಇದ್ದರೂ ಈತ ಶತ್ತರಿ ಪಂಗಡಕ್ಕೆ ಸೇರಿದವನು. ಇವನೂ ಕೂಡ ಎರಡನೇ ಇಬ್ರಾಹಿಂ ದೊರೆಯ ಕಾಲಕ್ಕೆ ವಿಜಾಪುರಕ್ಕೆ ಬಂದವನು. ಇವನು ಉತ್ತರ ಭಾರತದ ಅಹಮದಾಬಾದಿನಿಂದ ಬಂದಿದ್ದಾನೆ.[೩೩] ೧೬೨೩ರಲ್ಲಿ ಮಡಿದ ಈತನ ಸಮಾಧಿಯ ಮೇಲೆ ಕಟ್ಟಿಸಿದ ಗುಮ್ಮಟ ವಿಜಾಪುರದ ದಕ್ಷಿಣ ಭಾಗದಲ್ಲಿದೆ.

ಸಿದ್ಧ ಸಹೋದರರು ಭೆಟ್ಟಿಯಾದ ಮೂರನೆಯ ಸೂಫಿ ಸಂತ ಖವಿಸ್ಥಾನ ಬಾಶಾ. ಸೂಫಿ ಸಂತರ ಪಟ್ಟಿಯಲ್ಲಿ ಈ ಹೆಸರು ಕಂಡುಬರುವುದಿಲ್ಲ. ಆದರೆ ಖುಷ್ ದಹಾನ ಎಂಬ ಹೆಸರಿನ ಚಿಸ್ತಿ ಪಂಗಡದ ಸೂಫಿ ಸಂತನೊಬ್ಬನಿದ್ದಾನೆ. ಅವನ ಹೆಸರೇ ಹೀಗೆ ಬದಲಾವಣೆಯಾಗಿರಬಹುದು. ಖುಷ್ ದಹಾನ>ಖೌಷ್ ತಹಾನ> ಖವಿಸ್ತಾನ ಆಗಿರಬಹುದು. ವಿಜಾಪುರದಲ್ಲಿ ಚಿಸ್ತಿ ಪಂಗಡವನ್ನು ಕಟ್ಟಿ ಬೆಳೆಯಿಸಿದವರಲ್ಲಿ ಇವನು ಪ್ರಮುಖನು. ಈತ ಮೂಲತಃ ಬೀದರದವನು ಹಾಗೂ ಖಾದ್ರಿ ಸೂಫಿ ಪಂಗಡಕ್ಕೆ ಸೇರಿದವನು. ಬೀದರದಿಂದ ವಿಜಾಪುರಕ್ಕೆ ಬಂದ ನಂತರ ಶೇಖ್ ಮಹಮ್ಮದ್‌ನೆಂಬ ಚಿಸ್ತಿಸೂಫಿ ಗುರುವಿನ ಆಕರ್ಷಣೆಗೆ ಒಳಗಾಗಿ ಖಾದ್ರಿ ಪಂಗಡ ತೊರೆದು ಚಿಸ್ತಿ ಪಂಗಡವನ್ನು ಸೇರಿದವನು.[೩೪] ಈತ ಮಾರಿಫತ್ ಅಲ್ ಸುಲುಕ್ ಎಂಬ ಗ್ರಂಥವನ್ನು ರಚಿಸಿ ಚಿಸ್ತಿ ಸೂಫಿಯ ಮಾರ್ಗವನ್ನು ಬೋಧಿಸಿದ್ದಾನೆ. ಸೂಫಿಯೊಬ್ಬನ ಆತ್ಮಜ್ಞಾನದ ಹಾದಿಯಲ್ಲಿ ನಾಲ್ಕು ಹಂತಗಳಿರುತ್ತದೆ ಎಂದು ತಿಳಿಸಿದ್ದಾನೆ. ದೇವನನ್ನು ಕಾಣಲು ಹಂಬಲಿಸುವ ಚಿಸ್ತಿ ಸೂಫಿಯನ್ನು ಒಬ್ಬ ಪಯಣಿಗನಿಗೆ (ಸಾಲಿಕ್) ಹೋಲಿಸಿದ್ದಾನೆ. ಅಧ್ಯಾತ್ಮದ ಅವನ ಮಾರ್ಗವನ್ನು ರಾಹ್ ಎಂದು ಕರೆಯುತ್ತಾನೆ. ಅಧ್ಯಾತ್ಮ ಪಯಣದ ಮೊದಲ ಹಂತ ಶರಿಯತ್. ಅಂದರೆ ಇಸ್ಲಾಂ ಧರ್ಮದ

ತತ್ವಗಳನ್ನು ಅಧ್ಯಯನ ಮಾಡುವುದು. ಎರಡನೆಯ ಹಂತ ತಾರೀಖತ್ ಅಂದರೆ ಆಧ್ಯಾತ್ಮದ ರಹಸ್ಯವನ್ನು ಗುರುವಿನಿಂದ ತಿಳಿದುಕೊಳ್ಳುವುದು. ಮೂರನೆಯ ಹಂತ ಹಕೀಖತ್ ಅಂದರೆ ಸತ್ಯದ ದರ್ಶನ. ನಾಲ್ಕನೆಯ ಹಂತ ಮಾರೀಫತ್ ಅಂದರೆ ತನ್ನೊಳಗೇ ದೇವನನ್ನು ಕಾಣುವುದು.[೩೫] ಈತ ೧೬೨೭ರಲ್ಲಿ ಮರಣ ಹೊಂದಿದ.

ಸಿದ್ಧರು ಭೆಟ್ಟಿಯಾದವರಲ್ಲಿ ಪೈಲವಾನ್ ಬಾಶಾ ಎಂಬ ಹೆಸರಿನವರಿದ್ದಾರೆ. ಇವನು ಅವರ ಸಮಕಾಲೀನನಲ್ಲ. ಯಾಕೆಂದರೆ ಪೈಲವಾನ ಅಂದರೆ ಪಹಲವಾನ ಎಂಬ ಸೂಫಿ ಸಂತ sufi-warrior ಎನ್ನುವ ಪ್ರಾರಂಭಿಕ ಹಂತದ ಸೂಫಿ ಪಂಗಡಕ್ಕೆ ಸೇರಿದವನು. ಇವನು ಶೇಖ್‌ಸೂಫಿ ಸರಮಾಸ ಎಂಬ ಉಗ್ರಸೂಫಿ ಪಂಗಡದ ನಾಯಕನ ಸ್ನೇಹಿತ. ಇವರಿಬ್ಬರೂ ಹದಿಮೂರನೆಯ ಶತಮಾನದಲ್ಲಿ ಬಾಳಿ ಬದುಕಿದವರಾದ್ದರಿಂದ ಹದಿನಾರರ ಕೊನೆ ಹಾಗೂ ಹದಿನೇಳನೆಯ ಶತಮಾನದ ಪ್ರಾರಂಭದ ಹಂತದಲ್ಲಿ ನಡೆದ ಸಿದ್ಧ ಸಂತರ ಭೆಟ್ಟಿ ಕಾಲದೊಂದಿಗೆ ಹೊಂದಾಣಿಕೆಯಾಗುವುದಿಲ್ಲ. ಈ ಇಬ್ಬರು ಸಿದ್ಧರು ಭೆಟ್ಟಿಯಾದ ಸೂಫಿಗಳಲ್ಲಿ ಚಕ್ಕರ ಬಾಶಾ ಎಂಬುವವನಿದ್ದಾನೆ. ಸೂಫಿ ಸಂತರಲ್ಲಿ ಯಾರೂ ಈ ಹೆಸರಿನವರಿಲ್ಲ. ಆದರೆ ವಿಜಾಪುರ ಮಾನಗೂಳಿ ರಸ್ತೆಯಲ್ಲಿರುವ ಒಂದು ದರ್ಗಾ ಶಕ್ಕರ್ ಬಾಶಾನ ಹೆಸರಿನಲ್ಲಿದೆ ಎಂದು ತಿಳಿದುಬಂದಿತು. ಈ ಶಕ್ಕರ್ ಬಾಶಾ ಎಂದು ಜನರಿಂದ ಈಗ ಕರೆಯಿಸಿಕೊಳ್ಳುವ ಈತನ ನಿಜವಾದ ಹೆಸರು ಆಯಿನ್ ಅಲದಿನ್ ಎಂದು. ಇವನಿಗೆ ಗಂಜಲ ಇಲ್ಮ ಎಂಬ ಬಿರುದಿತ್ತೆಂದು ತಿಳಿದು ಬರುತ್ತದೆ. ಗಂಜಲ ಇಲ್ಮ ಅಂದರೆ Treasurer of knowledge. ಇವನ ದರ್ಗಾದ ವಾರಸುದಾರನಾದ ಶೇಖ್ ಆಲಿಗೆ ೧೬೪೩ರಲ್ಲಿ ಮುಹಮ್ಮದ್ ಎಂಬ ದಾನಿ ಉಂಬಳಿಕೊಟ್ಟದ್ದು ತಿಳಿದುಬರುತ್ತದೆ. ಹೀಗಾಗಿ ಈತ ಮುರ್ತುಜಾ ಖಾದರಿಯ ಸಮಕಾಲೀನನಿರಬಹುದು ಅನ್ನಿಸುತ್ತದೆ.[೩೬]

ಅದೇನೆ ಇರಲಿ ಆಳರಸರ ಬೆಂಬಲದಲ್ಲಿ ಬೆಳೆದು ನಿಂತ ಈ ಸೂಫಿ ಸಂತರೊಂದಿಗೆ ಸಿದ್ಧರು ತೋರುವ ಧೈರ್ಯವನ್ನು ಮೆಚ್ಚಲೇ ಬೇಕು. ಸೂಫಿ ಸಂತರಿಗೆಂದು ಸಿದ್ಧಪಡಿಸಿದ ಹೂವಿನಹಾರಗಳನ್ನು ತಾವೇ ಧರಿಸುವ ಮೂಲಕ ಅವರೊಂದಿಗೆ ಸಂಘರ್ಷಕ್ಕೆ ಇಳಿಯುತ್ತಾರೆ. ಅವರು ಒಡ್ಡುವ ಪಗಡೆಯಾಟದ ಪಂಥವನ್ನು ಸ್ವೀಕರಿಸಿ ಅವರನ್ನು ಸೋಲಿಸುತ್ತಾರೆ. ಸೂಫಿ ಸಂತರು ತಾಜ ಬಾವಡಿಯ ನೀರಿನಲ್ಲಿ ಏಳುಗಜ ಉದ್ದದ ಕಲ್ಲನ್ನು ತೇಲಲು ಬಿಟ್ಟು ಅದರ ಮೇಲೆ ಕುಳಿತು ನಮಾಜ ಮಾಡಿದರೆ, ಈ ಸಿದ್ಧರು ಅದೇ ತಾಜ ಬಾವಡಿಯ ನೀರಿನಲ್ಲಿ ಅಡಕೆಯನ್ನು ತೇಲಲು ಬಿಟ್ಟು ಒಂದರ ಮಲೆ ಒಂದರಂತೆ ಏಳು ಅಡಕೆಗಳನ್ನು ನಿಲ್ಲಿಸಿ, ಅದರ ಮೇಲೆ ಸೂಜಿಯನ್ನು ನಿಲ್ಲಿಸಿ ಆ ಸೂಜಿಯ ಮೇಲೆ ಒಂಟಿಗಾಲಿನಿಂದ ನಿಂತು ತಪಸ್ಸು ಆಚರಿಸಿ ಅವರನ್ನು ದಿಗಿಲುಗೊಳಿಸುತ್ತಾರೆ. ಸೂಫಿಗಳು ಉಕ್ಕಿನ ಸರಪಳಿಯಿಂದ ಸಿದ್ಧರನ್ನು ಬಂಧಿಸಿದರೆ ಭಂಡಾರ ಹೊಡೆದು ಅದರಿಂದ ಪಾರಾಗುತ್ತಾರೆ. ದಿನ ತುಂಬಿದ ಕುದುರೆಯ ಹೊಟ್ಟೆಯಲ್ಲಿ ಮೇವು ನೀರಿದೆಯೆಂದೂ, ಬಂಜೆ ಕುದುರೆಯ ಹೊಟ್ಟೆಯಲ್ಲಿ ಪಂಚಕಲ್ಯಾಣಿ ಗಂಡು ಕುದುರೆ ಮರಿಯಿದೆ ಎಂದೂ ಸಾಧಿಸಿ ತೋರಿಸುತ್ತಾರೆ. ಊಟಕ್ಕೆಂದು ತಟ್ಟೆ ತುಂಬ ಮಾಂಸದಡಿಗೆ ತಂದು ಬಡಿಸಿದರೆ ಅವನ್ನೆಲ್ಲ ಹೂಹಣ್ಣಾಗಿಸುತ್ತಾರೆ. ಹೀಗೆ

[illegible]

ಪ್ರತಿಯೊಂದು ಹಂತದಲ್ಲಿ ಸೂಫಿ ಸಂತರನ್ನು ಸೋಲಿಸುವ ಮೂಲಕ ಸೂಫಿಗಳ ಮೇಲೆ ಸಿದ್ಧರು ತಮ್ಮ ಪ್ರಾಬಲ್ಯ ಮೆರೆಯುತ್ತಾರೆ. ರಾಜನಿಂದ ಪೋಷಿತವಾದ ಪಂಥವೊಂದಕ್ಕೆ ಪ್ರಜಾಪೋಷಿತ ಪಂಥ ನೀಡಿದ ಉತ್ತರದಂತಿದೆ ಈ ಮುಖಾಮುಖಿ.

ವಿಜಾಪುರದ ಸೂಫಿಗಳೊಂದಿಗೆ ಸಿದ್ಧರದು ಸಂಘರ್ಷದ ಹಾದಿಯಾದರೆ ಕರಜಗಿಯ (ಜತ್ತ ತಾಲೂಕ) ಜಿನ್ನೆ ಸಾಬನೊಂದಿಗೆ ಸಿದ್ಧರದು ಸಖ್ಯದ ಹಾದಿಯಾಗಿದೆ. ಮೊದಲಿನ ಮುಖಾಮುಖಿಯಲ್ಲಿ ಅವಧೂ ಸಿದ್ಧ ಹಾಗೂ ಬಿಳಿಯಾನಿಸಿದ್ಧರಿದ್ದರೆ ಎರಡನೆಯ ಮುಖಾಮುಖಿಯಲ್ಲಿ ಅಮೋಘಸಿದ್ಧನ ಮೊಮ್ಮಕ್ಕಳಲ್ಲಿ ಒಬ್ಬನಾದ ಮಲಕಾರಿಸಿದ್ಧನಿದ್ದಾನೆ. ಅಮೋಘಸಿದ್ಧನ ನಾಲ್ಕನೆಯ ವರವಿನ ಮಗನ ಹೆಸರು ಕನ್ನಮುತ್ತ್ಯಾ. ಅವನ ಮಕ್ಕಳಲ್ಲಿ ಮಲಕಾರಿಸಿದ್ಧ ಬಹು ಪರಾಕ್ರಮಿ ಹಾಗೂ ಉಗ್ರಸ್ವರೂಪದವ. ಉಮದಿಯ ರಾವಳಸಿದ್ಧನನ್ನು ಊರು ಬಿಟ್ಟು ಓಡಿಸಿದವನು ಇವನೇ. ತನ್ನ ಸಹೋದರರೆಲ್ಲ ಮದುವೆಯಾದರೆ ಈತ ಸನ್ಯಾಸಿಯಾಗಿಯೇ ಉಳಿಯುತ್ತಾನೆ. ಎಲ್ಲ ಹೆಣ್ಣುಗಳು ತನಗೆ ತಾಯಿ ಸ್ವರೂಪ ಎಂದು ಭಾವಿಸುವ ಇವನು ಪಕ್ಕದಲ್ಲಿ ಕೂಡಿಸಿದ ವಧುವನ್ನು ಹಂದರದಲ್ಲಿಯೇ ಬಿಟ್ಟು ಹೋಗಿದ್ದಾನೆ. ಹೀಗಾಗಿ ಇವನದು ಯಾವಾಗಲು ಚಾರಣ ವ್ಯಕ್ತಿತ್ವ. ಅವನ ಸ್ವಭಾವಕ್ಕೆ ಪೂರಕವೆನ್ನುವಂತೆ ಕಿಲಾರಿಗಳ ಪಾಲನೆ ಪೋಷಣೆ ಅವನ ಪಾಲಿಗೆ ಬರುತ್ತದೆ.

ಹೀಗೆ ಕಿಲಾರಿಗಳನ್ನು ಮೇಯಿಸುತ್ತ ನಾಡ ಸಂಚರಿಸುತ್ತಿರುವಾಗ ಅವನು ಸುರಪುರ ಸೀಮೆಗೆ ಬರುತ್ತಾನೆ. ಅಲ್ಲಿಗೆ ಬಂದಾಗ ಸುರಪುರದ ದೊರೆಯ ಮಗಳು ಇವನ ರೂಪವನ್ನು ನೋಡಿ ಮೋಹಿತಳಾಗುತ್ತಾಳೆ. ಹಂದರದಲ್ಲಿ ಹೆಣ್ಣು ಬಿಟ್ಟು ಬಂದವನಿಗೆ ಈಗ ಕೆರೆಯ ದಂಡೆಯ ಮೇಲೆ ಇನ್ನೊಬ್ಬಳು ಗಂಟು ಬೀಳುತ್ತಾಳೆ. ಅವಳು ತನ್ನನ್ನು ಮದುವೆಯಾಗಬೇಕೆಂದು ಒತ್ತಾಯಿಸುತ್ತಾಳೆ. ಮಲಕಾರಿಸಿದ್ಧ ಅವಳ ಒತ್ತಾಯಕ್ಕೆ ಮಣಿಯದೇ ಹೋಗುತ್ತಾನೆ. ಆಗ ದೊರೆಯ ಮಗಳು ಇವನ ಮೇಲೆ ಇಲ್ಲ ಸಲ್ಲದ ಅಪಾದನೆ ಹೊರಿಸುತ್ತಾಳೆ. ಸುರಪುರ ದೊರೆ ಮಲಕಾರಿಸಿದ್ಧನ ಮೇಲೆ ಯುದ್ಧ ಸಾರುತ್ತಾನೆ. ಕರಜಗಿ ಸಮೀಪದ ಬೋರಿಹಳ್ಳದ ದಂಡೆಯ ಮೇಲೆ ಯುದ್ಧ ನಡೆಯುತ್ತದೆ. ಸುರಪುರದ ದೊರೆಯ ಸೈನ್ಯವನ್ನು ಚೆಂಡಾಡುತ್ತಾನೆ. ಬೋರಿಹಳ್ಳದ ನೀರೆಲ್ಲ ರಕ್ತಮಯವಾಗುತ್ತದೆ. ಇದನ್ನು ಗಮನಿಸಿದ ಕರಜಗಿಯ ಜಿನ್ನೆಸಾಬ ಎಂಬ ಸೂಫಿ ಸಂತ ಯುದ್ಧ ನಿಲ್ಲಿಸಲು ಕೇಳಿಕೊಳ್ಳುತ್ತಾನೆ. ಹಿಂಸೆ ತರವಲ್ಲವೆಂಬ ಅವನ ಉಪದೇಶ ಮಲಕಾರಿಸಿದ್ಧನಿಗೆ ತುಂಬಾ ಹಿಡಿಸುತ್ತದೆ. ಮಲಕಾರಿಸಿದ್ಧ ತನ್ನ ಕಿರಿ ಬೆರಳನ್ನು ಆಹುತಿಕೊಟ್ಟು ರಕ್ತದ ಕಾಲುವೆಯನ್ನು ನೀರ ಕಾಲುವೆ ಮಾಡುತ್ತಾನೆ. ಅವರಿಬ್ಬರಿಗೂ ಸ್ನೇಹ ಉಂಟಾಗುತ್ತದೆ. ಆಗ ಜಿನ್ನೇಸಾಬ ಗೋವುಗಳನ್ನು ಮೇಯಿಸಲೆಂದು ಮಲಕಾರಿಸಿದ್ಧನಿಗೆ ಅಪಾರವಾದ ಭೂಮಿಯನ್ನು ಕೊಡಲು ಸಿದ್ಧನಾಗುತ್ತಾನೆ. ಅದನ್ನು ನಿರಾಕರಿಸಿದ ಮಲಕಾರಿಸಿದ್ಧ ತನಗೆ ಸ್ನೇಹವೆ ಮುಖ್ಯ, ಭೂಮಿಯಲ್ಲವೆಂದು ಹೇಳಿ ಇಬ್ಬರೂ ಆತ್ಮೀಯ ಗೆಳೆಯರಾಗಿ ಉಳಿಯುತ್ತಾರೆ. ಅವರಿಬ್ಬರ ಸ್ನೇಹದ ಸಂಕೇತವಾಗಿ ಇಂದಿಗೂ ಒಂದು ವಿಶಿಷ್ಟ ಆಚರಣೆ ನಡೆಯುತ್ತದೆ. ಮಲಕಾರಿಸಿದ್ಧನ ಪಾಲಕಿ ಕರಜಗಿ ಸೀಮೆಯಲ್ಲಿ ಹೊರಟರೆ ಜನ್ನಸಾಬನ ದರ್ಗಾಕ್ಕೆ ಬಂದು ಭೆಟ್ಟಿಕೊಟ್ಟು ಹೋಗುವುದು ಕಡ್ಡಾಯ.

[illegible]

೨.೪.೪ ಮಾಳಿಂಗರಾಯನೊಂದಿಗೆ ಮುಖಾಮುಖಿ

ಈ ಮುಖಾಮುಖಿಯಲ್ಲಿ ಹಾಲುಮತದ ಪ್ರತಿನಿಧಿಗಳಾಗಿ ಬೀರಪ್ಪ ಮಾಳಿಂಗರಾಯರು ಕಾಣಿಸಿಕೊಂಡರೆ ಮೇಲಮತದ ಪ್ರತಿನಿಧಿಯಾಗಿ ಅಮೋಘಸಿದ್ಧ ಕಾಣಿಸಿಕೊಳ್ಳುತ್ತಾನೆ. 'ಸಿದ್ಧಸಿರಿಯ' ಕರ್ತೃ ಅಪ್ಪತಪ್ಪಿಯೂ ಅಮೋಘಸಿದ್ಧ ಹಾಗೂ ಮಾಳಪ್ಪ ಬೀರಪ್ಪರ ಭೆಟ್ಟಿಯ ಕುರಿತು ಚರ್ಚಿಸುವುದಿಲ್ಲ. ಈ ಚರ್ಚೆಯನ್ನು ವಿಶೇಷವಾಗಿ ಎತ್ತಿಕೊಂಡವರು ಜನಪದ ಹಾಡುಗಾರ ಸಿದ್ಧಪ್ಪ ಮೇಟಿ. ಅವನ ಹಾಡಿನಲ್ಲಿ ಅಮೋಘಸಿದ್ಧನ ಅಹಂಕಾರ ನಿರಸನ ಮಾಡಿಸುವ ಕಥನಗಳಿವೆ. ಈ ಕುರಿತು ಈಗಾಗಲೇ ಆಕರಗಳ ಅವಲೋಕನವೆನ್ನುವ ಭಾಗದಲ್ಲಿ ಚರ್ಚಿಸಲಾಗಿದೆ.

ಮಾಳಪ್ಪನ ಮನೆಯಲ್ಲಿ ಊಟ ಮುಗಿಸಿದ ಅಮೋಘಸಿದ್ಧ ನೀರು ಕುಡಿಯಲು ಹಿಂದೆ ಮುಂದೆ ನೋಡುತ್ತಾನೆ. ಯಾಕೆ ಎಂದು ಕೇಳಿದರೆ ನಿನ್ನ ಮನೆಯ ನೀರೆಲ್ಲ ಎಂಜಲಾಗಿದೆ ಎಂದು ಹೇಳುತ್ತಾನೆ.

ಕುರಿಯ ಕುಡದ ಎಂಜಲ ಮರಿಯ ಕುಡದ ಎಂಜಲ

ದನಗೋಳ ಕುಡದ ಎಂಜಲ ಕರಗೋಳ ಕುಡದ ಎಂಜಲ

ಮಾನವ ಕುಡದ ಎಂಜಲ ಮಕ್ಕಳ ಕುಡದ ಎಂಜಲ[೩೭]

ಎಂದು ಹೀಯಾಳಿಸುತ್ತಾನೆ. ತನ್ನ ಸಾಮರ್ಥ್ಯ ಪ್ರದರ್ಶಿಸಲು ನೇರವಾಗಿ ಮಳೆರಾಯನನ್ನು ಕರೆಯುತ್ತಾನೆ. ರೈತರು ಮಳೆಯಿಲ್ಲದೆ ಬಳಲಿದಾಗ ಕಂಬಳಿ ಬೀಸಿ ಮೂರುಗಳಿಗೆಯಲ್ಲಿ ಮಳೆಬರಿಸಿದ ಅಮೋಘಸಿದ್ಧ ನೀರನ್ನು ಶೀಲವಂತಿಕೆ ಮೆರೆಯಲು ಪ್ರಯತ್ನಿಸಿದಾಗ ನಿರಾಸೆಗೊಳ್ಳುತ್ತಾನೆ. 'ಕೂಳು ಹೆಚ್ಚಾಗಿ ಕುಲಹುಟ್ಟಿತು. ನೀರು ಹೆಚ್ಚಾಗಿ ಶೀಲ ಹುಟ್ಟಿತು' ಎಂಬ ಗಾದೆ ಮಾತೊಂದಿದೆ. ಈ ಗಾದೆ ಮಾತಿನ ಹಿಂದೆ ಶೀಲವಂತರನ್ನು ತರಾಟೆಗೆ ತೆಗೆದುಕೊಳ್ಳುವ ಉದ್ದೇಶವಿದೆ. ಕೈಲಾಸದಿಂದ ಬರುವಾಗ ಪರಶಿವನಿಂದ 'ಮಳೆಕೀಲು' ಪಡೆದು ಬಂದವನೆಂಬ ಅಹಂಕಾರ ಕರಗಿ ಹೋಗುತ್ತದೆ. ಆದರೆ ಮಾಳಪ್ಪ ಭಕ್ತಿಯಿಂದ ಮೋಡಗಳಿಗೆ ವಿನಂತಿಸಿಕೊಂಡರೆ ಅಂಗೈಯಷ್ಟೇ ಮೋಡವಿದ್ದರೂ ಧಾರಾಕಾರವಾಗಿ ಮಳೆ ಸುರಿಯುತ್ತದೆ.

ಅಮೋಘಸಿದ್ಧ ಹಾಗೂ ಅವನ ಪರಂಪರೆಯಲ್ಲಿ ಮೂವರು ಪುಣ್ಯದ ಮಕ್ಕಳು, ನಾಲ್ವರು ವರವಿನ ಮಕ್ಕಳು, ಇಪ್ಪತ್ತೊಂದು ಜನ ಧರ್ಮರು, ನೂರಾ ಒಂದು ಜನ ಧರ್ಮರು, ಸಾವಿರದ ಏಳು ಶರಣರು ಎಂದು ಹೇಳಿಕೊಳ್ಳುತ್ತಾರಾದ್ದರಿಂದ ಇದೊಂದು ಬಹು ವಿಶಾಲವಾದ ಪರಂಪರೆಯಾಗಿದೆ. ಹದಿನಾರನೆಯ ಶತಮಾನದಿಂದ ಹಿಡಿದು ಇಪ್ಪತ್ತನೆಯ ಶತಮಾನದವರೆಗೆ ಕನಿಷ್ಟ ಪಕ್ಷ ಇಪ್ಪತ್ನಾಲ್ಕು ಇಪ್ಪತ್ತೈದು ತಲೆಮಾರುಗಳು ದಾಟಿ ಹೋಗಿವೆ. ಮೂಲದ ಅಮೋಘಸಿದ್ಧನ ವಂಶದವರೆಂದು ಹೇಳಿಕೊಳ್ಳುವ ಒಡೆಯರು ಈವೊತ್ತಿನವರೆಗೂ ಇದ್ದಾರೆ. ಹೀಗಾಗಿ ಈ ಪರಂಪರೆ ಕನಿಷ್ಟ ಪಕ್ಷ ಐದು ಶತಮಾನಗಳ ಕಾಲಘಟ್ಟದಲ್ಲಿ ಹಾಯ್ದು ಬರುವಾಗ ಅನೇಕ ದಿವ್ಯಗಳನ್ನು ಎದುರಿಸಿ ಬಂದಿದೆ. ಹಾಗೆ ಹೊಸ ಹೊಸ ಪಂಥ ಪಂಗಡಗಳನ್ನು

ಮುಖಾಮುಖಿ ಮಾಡಿಕೊಂಡು ಕಾಲ ಪ್ರವಾಹದಲ್ಲಿ ಹಾಯ್ದು ಬರುವಾಗ ತನ್ನಲ್ಲಿಯದನ್ನು ಅನ್ಯಕ್ಕೆ ಕೊಟ್ಟು ಕೊಂಡಿರುವ ಹಾಗೂ ಅನ್ಯದ ಗುಣಗಳನ್ನು ತಾನು ಸ್ವೀಕರಿಸಿರುವ ಸಾಧ್ಯತೆಯಿದೆ. ಹೀಗಾಗಿ ಈ ಪರಂಪರೆ ಒಂದು ನಿರ್ದಿಷ್ಟ ತಾತ್ವಿಕ ಚೌಕಟ್ಟಿಗೆ ಒಳಪಡಲು ನಿರಾಕರಿಸುತ್ತದೆ. ಏನೇನನ್ನೋ ಕಳೆದುಕೊಂಡು ಮತ್ತೇನನ್ನೋ ಪಡೆಯುತ್ತ ಬಂದ ಈ ಪರಂಪರೆ 'ಸಂಕರ'ದ ಪರಂಪರೆಯಾಗಿ ಇಂದು ಕಾಣಿಸುತ್ತಿರುವುದಕ್ಕೆ ಪ್ರಮುಖ ಕಾರಣವಾಗಿರಬೇಕು.

ಕೊನೆ ಟಿಪ್ಪಣಿಗಳು

೧. ದಾಖಲೆ ಒದಗಿಸಿದವರು: ಅಮೋಗೆಪ್ಪ ಮಾದಪ್ಪ ಒಡೆಯರ, ಕುಂಚನೂರ ತಾ: ಜಮಖಂಡಿ ಹಾಗೂ ಸಿದ್ಧಗೊಂಡನ ಹಕ್ಕೆ, ಮಂದ್ರೂಪ ತಾ: ದ.ಸೋಲಾಪುರ. ಮೋಡಿ ಲಿಪಿ ದಾಖಲೆ ಅನುವಾದಿಸಿದವರು: ಪ್ರೊ. ಎಂ.ವಾಯ್.ಸಾವಂತ, ಧಾರವಾಡ

೨. ಮಹಜರ ಪತ್ರ: ಕನ್ನಡಕ್ಕೆ ಅನುವಾದಿಸಿದವರು: ಪ್ರೊ. ಎಂ.ವಾಯ್.ಸಾವಂತ, ಧಾರವಾಡ

೩. Sufis of Bijapur : Richard Maxwell Eaton

೪. ಅದೇ ಪುಟ ೭೩-೭೪

೫. ಅದೇ ಪುಟ ೨೬೫

೬. ಅದೇ ಪುಟ ೭೪

೭. ಸುಕ್ಷೇತ್ರ ಹುಲಜಂತಿ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣ: ಅಡಿವೆಪ್ಪ ಮಾಳಪ್ಪ ಸೋಮುತ್ತೆ, ಸಾ. ಹುಲಜಂತಿ, ಪುಟ ೩೩, ೩೪

೮. ತೇಜೋಮಯ ಹಾಲುಮತ ಪುರಾಣ (ಗದ್ಯಾನುವಾದ) ಎನ್.ಬಿ.ತೋಂಟಾಪುರ, ಪುಟ ೯೦

೯. ಹಾಡಿದವರು: ಶಾವರಸಿದ್ಧ ಧರ್ಮಣ್ಣ ಜಳಗೌಡರ, ಅಚೇಗಾವಿ ತಾ. ದ.ಸೋಲಾಪುರ

೧೦. ಹಾಡಿದವರು: ಮುತ್ತಪ್ಪ ಸೋಮಣ್ಣ ಪೂಜಾರಿ, ರೇವತಗಾವ ತಾ. ಇಂಡಿ

೧೧. ಹಾಡಿದವರು: ಅವಧೂ ಬನಸಿದ್ಧ ಹಿರಕೂರ, ಹತ್ತೂರ, ಸಾ. ದ.ಸೋಲಾಪುರ

೧೨. ಹಾಡಿದವರು: ಅದೇ

೧೩ ಹಾಡಿದವರು: ಅದೇ

೧೪. ಹಾಡಿದವರು: ಅದೇ

೧೫. ಹಾಡಿದವರು: ಅದೇ

೧೬. ಕರ್ನಾಟಕದ ನಾತಪಂಥ: ರಹಮತ್ ತರೀಕೆರೆ, ಪುಟ ೨೩

೧೭. ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ: ಡಾ. ಬಿ.ಜಿ.ಬಿರಾದಾರ, ಪುಟ ೯೮

೧೮. ಅದೇ, ಪುಟ ೯೯

೧೯. ತಗರ ಪವಾಡ: (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ ಎಫ್.ಟಿ.ಹಳ್ಳಿಕೇರಿ

೨೦. ಹರಿಹರನ ರಗಳೆಗಳು: (ಸಂ) ಡಾ. ಎಂ.ಎಂ.ಕಲಬುರ್ಗಿ, ಪುಟ ೨೮೯

೨೧. ಕುರುಬರ ಗುರು ಒಡೆಯರು: ಡಾ. ಬಿ.ಜಿ.ಬಿರಾದಾರ ಪುಟ ೧೦೧

೨೨. ಹಾಲ್ಮತೋತ್ತೇಜಕ ಪುರಾಣವು : ರಸ್ತಾಪುರ ಭೀಮಕವಿ ಸಂಧಿ ೨, ಪದ್ಯ ೯

೨೩. ಲೇಖನ: ಕುರುಬರ ಗುರು ಒಡೆಯರ ಶಾಖೆಗಳು: ಚನ್ನಪ್ಪ ಕಟ್ಟಿ, ಗ್ರಂಥ, ಕುರುಬರಗುರು ಒಡೆಯರು (ಸಂ) ಡಾ. ಎಫ್.ಟಿ.ಹಳ್ಳಿಕೇರಿ

೨೪. ಗಮನಿಸಿ: ತಗರಪವಾಡ (ಸಂ) ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಡಾ. ಎಫ್.ಟಿ.ಹಳ್ಳಿಕೇರಿ

೨೫. ಗಮನಿಸಿ: ಸಿದ್ಧಮಂಕ ಚರಿತೆ, ಸಂ. ಡಾ. ಎಂ.ಎಂ.ಕಲಬುರ್ಗಿ, ಡಾ. ವೈ.ಸಿ.ಭಾನುಮತಿ

೨೬. ಹಾಡಿದವರು: ಅವಧು ಬನಸಿದ್ಧ ಹಿರಕೂರ, ಹತ್ತೂರ ತಾ: ದಕ್ಷಿಣ ಸೋಲಾಪುರ

೨೭. ಹಾಡಿದವರು ಅದೇ

೨೮. www.shivabhakti.com ನಲ್ಲಿ ದೊರೆತ ಮಾಹಿತಿ

೨೯. http : sufism in Bijapur

೩೦. Sufis of Bijapur: Richard Mauwell Eaton

೩೧. ಅದೇ, ಪುಟ ೪೫

೩೨. ಅದೇ, ಪುಟ ೨೯೫-೯೫

೩೩. ಅದೇ, ಪುಟ ೭೫

೩೪. ಅದೇ, ಪುಟ ೧೪೪-೪೫

೩೫. ಅದೇ, ಪುಟ ೧೪೯

೩೬. ಅದೇ, ಪುಟ ೨೧೨

೩೭. ಜನಪದ ಹಾಲುಮತ ಮಹಾಕಾವ್ಯ: (ಸಂ) ಡಾ. ವೀರಣ್ಣ ದಂಡೆ, ಪುಟ ೫೭೧

ಅಧ್ಯಾಯ : ಮೂರು

ವಿಜಾಪುರ ಪರಿಸರದ ಒಡೆಯರ ಪಂಗಡಗಳು ಹಾಗೂ ಅಮೋಘಸಿದ್ಧನ ಪರಿವಾರ

ಅಧ್ಯಾಯ : ಮೂರು

ವಿಜಾಪುರ ಪರಿಸರದ ಒಡೆಯರ ಪಂಗಡಗಳು ಹಾಗೂ ಅಮೋಘಸಿದ್ಧನ ಪರಿವಾರ

೩.೧ ವಿಜಾಪುರ ಪರಿಸರದ ಒಡೆಯರ ಪಂಗಡಗಳು

ವಿಲಕ್ಷಣವಾದ ಸಾಂಸ್ಕೃತಿಕ ಸನ್ನಿವೇಶದಲ್ಲಿ ವಿಕಸನಗೊಂಡ ಒಡೆಯರು ಎಂಬ ಪುರೋಹಿತರೂಪಿ ಮೂರು ಪಂಗಡಗಳು ವಿಜಾಪುರ ಜಿಲ್ಲೆಯ ಪರಿಸರದಲ್ಲಿ ಕಾಣಿಸಿಕೊಂಡಿರುವುದು ಕುತೂಹಲಕರ ಸಂಗತಿಯಾಗಿದೆ. ವಿಜಾಪುರ ಜಿಲ್ಲೆಯ ಮದ್ದೇಬಿಹಾಳ ತಾಲೂಕಿನ ಸರೂರ (ಸರ್) ಗ್ರಾಮದಲ್ಲಿ ಒಡೆಯರ ಎರಡು ಪಂಗಡಗಳು ವಿಕಸನಗೊಂಡಿದ್ದರೆ, ವಿಜಾಪುರ ಜಿಲ್ಲೆಯ ವಿಜಾಪುರ ತಾಲೂಕಿನ ಅರಕೇರಿ ಗ್ರಾಮದಲ್ಲಿ ಒಂದು ಒಡೆಯರ ಪಂಗಡವು ಕಾಣಿಸಿಕೊಂಡಿದೆ. ಈ ಮೂರು ಪಂಗಡಗಳಲ್ಲಿನ ಒಂದು ಸಮಾನವಾದ ಅಂಶವೆಂದರೆ ಅವೆಲ್ಲಾ ಈ ಭಾಗದ ಕುರುಬ ಸಮುದಾಯದ ಗುರುಗಳು ಎಂದು ಗುರುತಿಸಿಕೊಳ್ಳುತ್ತಿರುವುದು. ಶಿವನ ಆರಾಧಕರಾದ ಕುರುಬರು ಹನ್ನೆರಡನೆಯ ಶತಮಾನದ ಶರಣ ಚಳವಳಿ ಹಾಗೂ ತದನಂತರದ ಸಂದರ್ಭದಲ್ಲಿ ಲಿಂಗಾಯತ ದೊಂದಿಗೆ ಮುಖಾಮುಖಿ ಮಾಡಿಕೊಂಡು ವಿಶೇಷವಾದ ತಲ್ಲಣಗಳನ್ನು ಅನುಭವಿಸಿದ್ದಾರೆ.

ಶೈವ ಪಂಥದ ಉತ್ಕೃಷ್ಟವಾದ ವಿಕಸಿತ ರೂಪವನ್ನು ಶರಣ ಚಳವಳಿ ಹನ್ನೆರಡನೆಯ ಶತಮಾನದಲ್ಲಿ ನೀಡಿತ್ತು. ಎಲ್ಲ ಸಮುದಾಯಗಳನ್ನು ಸಮಾನತೆಯ ಸಿದ್ಧಾಂತದ ಮೇಲೆ ತನ್ನೆಡೆಗೆ ಸೆಳೆದುಕೊಳ್ಳುವ ಆಕರ್ಷಕ ಗುಣ ಆ ಚಳವಳಿಗೆ ಇತ್ತು. ಬಹುಪಾಲು ಜಾತಿ ಸಮುದಾಯಗಳು ಅದರಲ್ಲೂ ವಿಶೇಷವಾಗಿ ವರ್ಣ ವ್ಯವಸ್ಥೆಯಲ್ಲಿನ ತಳಸಮುದಾಯಗಳು ಈ ಧಾರೆಯಲ್ಲಿ ಬೇಷರತ್ತಾಗಿ ವಿಲೀನಗೊಂಡವು. ಶರಣರ ಇಷ್ಟಲಿಂಗ ಪರಿಕಲ್ಪನೆಯು ಸಮಾನತೆಯನ್ನು ಗಳಿಸಿಕೊಳ್ಳುವ ಅತ್ಯಂತ ಸುಲಭ ಮಾರ್ಗವಾಗಿತ್ತು. ಶರಣರು ವ್ಯಕ್ತಿಯೊಬ್ಬನನ್ನು ಜಾತಿ ಮಾನದಂಡದಿಂದ ಅಳೆಯಲಾರದ ಸಂಗತಿ ನಿಜಕ್ಕೂ ಪ್ರಗತಿಪರವಾಗಿತ್ತು. ಆದರೆ 'ಲಿಂಗ'ವು ಲಾಂಛನವಾಗಿ, ಲಾಂಛನವು ಮಿತಿಯನ್ನು ಆಹ್ವಾನಿಸಿಕೊಳ್ಳುವ ಅಪಾಯವಿರುವುದನ್ನು ಶರಣ ಚಳವಳಿಯ ಒಡಲೊಳಗೇ ಇದ್ದ ಹಲವಾರು ಮನಸ್ಸುಗಳು ಗ್ರಹಿಸಿದ್ದವು. ಅಲ್ಲಮಪ್ರಭುದೇವನ ಈ ವಚನದಲ್ಲಿ ಅದರ ಸುಳುಹನ್ನು ಕಾಣಬಹುದು.

[illegible]

[illegible]

[illegible]

[illegible]

[illegible]

[illegible]

[illegible]

ಎನಗೊಂದು ಲಿಂಗ ನಿನಗೊಂದು ಲಿಂಗ ಮನೆಗೊಂದು ಲಿಂಗವಾಯಿತ್ತು

ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ

ಉಳಿಮುಟ್ಟಿದ ಲಿಂಗ ಮನಮುಟ್ಟಬಲ್ಲುದೆ ಗುಹೇಶ್ವರಾ?

ಲಿಂಗವು ಬರೀ ಬಾಹ್ಯಲಾಂಛನವಾಗಿ ಮತ್ತೆ ತರತಮದ ಭಾವವನ್ನು ಹುಟ್ಟಿಸಲು ಪ್ರಾರಂಭಿಸಿದ ಆತಂಕದ ಅರಿವು ಅಲ್ಲಮನಿಗೆ ಇತ್ತು ಅನ್ನಿಸುತ್ತದೆ. ಅಂತಲೇ ಬಯಲು ಆಕಾರ ಪಡೆದುಕೊಂಡ ಅಪಾಯದ ಬಗೆಗೆ ಸೋಜಿಗವೆನ್ನಿಸಿದೆ ಅವನಿಗೆ. ಅವನ ಇನ್ನೊಂದು ವಚನ ಹೀಗಿದೆ.

ಕಾಣಬಾರದ ಲಿಂಗವು ಕರಸ್ಥಲಕೆ ಬಂದಡೆ

ಎನಗಿದು ಸೋಜಿಗ ಎನಗಿದು ಸೋಜಿಗ

ಅಹುದೆನಲಮ್ಮೆನು ಅಲ್ಲೆನಲಮ್ಮೆನು

ಗುಹೇಶ್ವರ ಲಿಂಗವು ನಿರಾಳ ನಿರಾಕಾರಬಯಲು ಆಕಾರವಾಗಿದೆ?

ಹೀಗೆ 'ಲಿಂಗ'ದ ಸ್ವೀಕಾರ ಹಾಗೂ ನಿರಾಕರಣೆಗಳು ಅಂದಿನ ಸಾಂಸ್ಕೃತಿಕ ಸನ್ನಿವೇಶದಲ್ಲಿ ತಾತ್ವಿಕ ದ್ವಂದ್ವವನ್ನು ಸೃಷ್ಟಿಸಿದ್ದವು. ಇಂಥ ತಾತ್ವಿಕ ದ್ವಂದ್ವವನ್ನು ಕುರುಬರ ಶೈವ ಹಾಗೂ ಶರಣರ ಲಿಂಗಾಯತಗಳ ನಡುವಿನ ಹೊಯ್ದಾಟದಲ್ಲೂ ಕಾಣುತ್ತೇವೆ. ಇಂಥ ದ್ವಂದ್ವದಲ್ಲಿಯೇ ಕುರುಬರಲ್ಲಿ ಎರಡು ಪರಿಯ ಪ್ರತಿಕ್ರಿಯೆಗಳು ಕಾಣಿಸಿಕೊಂಡಿವೆ. ತಮ್ಮ ಮೂಲದೈವ ಬೀರಪ್ಪನನ್ನು ಬೀರ'ಲಿಂಗೇಶ್ವರ'ನನ್ನಾಗಿ, ಮಾಳಿಂಗರಾಯನನ್ನು 'ಮಹಾಲಿಂಗ'ನನ್ನಾಗಿ, ಮೈಲಾರನನ್ನು ಮೈಲಾರ'ಲಿಂಗ'ನನ್ನಾಗಿ ರೂಪಾಂತರಿಸಿಕೊಂಡಿರುವುದು ಮೊದಲ ಪರಿ. ಇದೊಂದು ರೀತಿಯ ಚತುರ ನಡೆ. ಹೊಸದಾಗಿ ಆವಿಷ್ಕಾರಗೊಂಡಿದ್ದ ಲಿಂಗಾಯತದಲ್ಲಿ ವಾಸ್ತವಿಕವಾಗಿ ವಿಲೀನಗೊಳ್ಳುವ ಗೋಜಿಗೆ ಹೋಗದೆ ತಮ್ಮ ದೈವವನ್ನೇ 'ಲಿಂಗ'ಮಯ ಗೊಳಿಸಿ ತಮ್ಮ ಮೂಲಧಾರೆಯಲ್ಲಿಯೇ ಉಳಿದುಕೊಳ್ಳುವ ಪರಿಯಿದು. ಮೂಲದೈವಕ್ಕೆ 'ಲಿಂಗ'ವೆಂಬ ಉಪಾಧಿಯನ್ನು ಬಳಸಿ ಅದನ್ನು ಕಾಲದ ಅವಶ್ಯಕತೆಗನುಗುಣವಾಗಿ update ಮಾಡಿಕೊಳ್ಳುವ ಸೋಜಿಗವಿದು.

ಲಿಂಗಾಯತಕ್ಕೆ ತಾತ್ವಿಕವಾಗಿ ಮುಖಾಮುಖಿಯಾಗಿ ಸಂಘರ್ಷಕ್ಕಿಳಿದು ಆ ಸಂಘರ್ಷದಲ್ಲಿ ಹೊಸ ರೂಪವೊಂದನ್ನು ಆವಿಷ್ಕರಿಸಿಕೊಂಡಿದ್ದು ಎರಡನೆಯ ಪರಿ. ಈ ಎರಡನೆಯ ಪರಿಯಲ್ಲಿ ಆವಿಷ್ಕಾರಗೊಂಡುದೇ ಒಡೆಯರು ಎಂಬ ಪರಿಕಲ್ಪನೆ. ಜಾತಿಜಾಗೃತ ಭಾರತೀಯ ಸಂಕೀರ್ಣ ಸಾಮಾಜಿಕ ಸ್ವರೂಪದ ಒಳಗಡೆ ಒಂದು ಜಾತಿ ಇನ್ನೊಂದು ಜಾತಿಯೊಂದಿಗೆ, ಒಂದು ಪಂಥ ಇನ್ನೊಂದು ಪಂಥಕ್ಕೆ ಮುಖಾಮುಖಿಯಾಗಿ ಸದಾ ಚಲನಶೀಲಗೊಳ್ಳುತ್ತಲೇ ಬಂದಿರುವುದು ಸತ್ಯ ಸಂಗತಿ. ಇಂಥ ಮುಖಾಮುಖಿಯಲ್ಲಿ ಗೋಚರಿಸುವ ಕುತೂಹಲಕರ ಅಂಶಗಳನ್ನು ಮೂರು ನೆಲೆಯಲ್ಲಿ ಕಾಣಬಹುದು. ಆಕರ್ಷಣೆಯ ಮೊದಲ ನೆಲೆ, ವಿಕರ್ಷಣೆಯ

[illegible]

[illegible]

[illegible]

[illegible]

[illegible]

ಎರಡನೆಯ ನೆಲೆ ಹಾಗೂ ಒಡಂಬಡಿಕೆಯ ಮೂರನೆಯ ನೆಲೆ. ಕುರುಬರು ಲಿಂಗಾಯತಕ್ಕೆ ಮುಖಾಮುಖಿ ಮಾಡಿಕೊಂಡಾಗಲೂ ಇಂಥ ಪ್ರಕ್ರಿಯೆ ನಡೆದಿರುವ ಸಾಧ್ಯತೆಯನ್ನು ಈ ಕೆಳಗಿನಂತೆ ವಿಶ್ಲೇಷಿಸಿಕೊಳ್ಳಬಹುದು.

೩.೧.೧ ಆಕರ್ಷಣೆಯ ಮೊದಲ ನೆಲೆ

ಕುರುಬರು ಲಿಂಗಾಯತಕ್ಕೆ ಆಕರ್ಷಿತರಾಗಿರುವುದಕ್ಕೆ ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದು ಲಿಂಗಾಯತದ್ದೂ ತನ್ನಂತೆಯೇ ಶಿವೋಪಾಸನೆಯ ಪಂಥ ಎನ್ನುವುದು. ಎರಡನೆಯದು ಜಾತಿಶ್ರೇಣೀಕರಣವನ್ನು ನಿರಾಕರಿಸಿ ಲಿಂಗದ ಮೂಲಕ ಸಮಾನತೆಯನ್ನು ತರಲು ಪ್ರಯತ್ನಿಸಿದ ಲಿಂಗಾಯತದ ಪ್ರಗತಿಪರ ಧೋರಣೆ.

೩.೧.೨ ವಿಕರ್ಷಣೆಯ ಎರಡನೆಯ ನೆಲೆ

ಕುರುಬರು ಲಿಂಗಾಯತದಿಂದ ವಿಕರ್ಷಣೆಗೊಳ್ಳುವುದಕ್ಕೆ ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದು ಲಿಂಗಾಯತಕ್ಕೆ ಸೇರ್ಪಡೆಗೊಳ್ಳುವ ಮೂಲಕ ತನ್ನ ವೈವಿಧ್ಯಮಯ ದೈವಿಕ ಪರಂಪರೆಯನ್ನು ಕಳೆದುಕೊಳ್ಳುವ ಭೀತಿಗೆ ಸಂಬಂಧಿಸಿದುದು. ಎರಡನೆಯದು ತಾವು ಲಿಂಗಾಯತದಲ್ಲಿ ಸೇರಿಕೊಂಡರೆ ಅಲ್ಲಿರುವ ಮೇಲ್ವರ್ಗದವರು ತಮ್ಮನ್ನು ಸಮಾನರಾಗಿ ಕಾಣಬಹುದೇ ಎಂಬ ಗುಮಾನಿಗೆ ಸಂಬಂಧಿಸಿದುದು.

೩.೧.೩ ಒಡಂಬಡಿಕೆಯ ಮೂರನೆಯ ನೆಲೆ

ಕುರುಬ-ಲಿಂಗಾಯತದ ಮಧ್ಯದ ಈ ಆಕರ್ಷಣೆ-ವಿಕರ್ಷಣೆಯ ಕಾರಣವಾಗಿ ಒಂದು ರೀತಿಯ tension ಅಂದರೆ ಕರ್ಷಣವುಂಟಾಯಿತು. ಈ ಕರ್ಷಣದ ಸಂದರ್ಭದಲ್ಲಿ ಕುರುಬರು ತುಂಬಾ ರಕ್ಷಣಾತ್ಮಕವಾಗಿ ವ್ಯವಹರಿಸಿದಂತೆ ತೋರುತ್ತದೆ. ನಾವು ನಿಮ್ಮಲ್ಲಿಗೆ ಬರುತ್ತೇವೆ. ಆದರೆ ಅಲ್ಲಿಗೆ ಬಂದಾಗ ನಮ್ಮಂತೆಯೂ ಇರಲು ಅವಕಾಶವಿರಬೇಕು ಎನ್ನುವ ಒಡಂಬಡಿಕೆಯನ್ನು ಮಾಡಿಕೊಂಡಿರಬಹುದು. ಇಂಥ ಒಡಂಬಡಿಕೆಯಲ್ಲಿ ರೂಪು ತಳೆದುದೇ 'ಒಡೆಯರು' ಎಂಬ ಹೊಸ ಪುರೋಹಿತ ವರ್ಗ.[೩]

ಲಿಂಗಾಯತಕ್ಕೆ ಕುರುಬ ಸಮುದಾಯದ ಮುಖಾಮುಖಿ ಕೇವಲ ಹನ್ನೆರಡನೆಯ ಶತಮಾನದಲ್ಲಷ್ಟೆ ನಡೆದಿಲ್ಲ, ನಂತರದ ದಿನಗಳಲ್ಲೂ ಅದು ತನ್ನನ್ನು ಸದಾ ಮುಖಾಮುಖಿಗೊಳಿಸಿಕೊಳ್ಳುತ್ತಲೆ ಬಂದಿದೆ. ಹೀಗೆ ನಡೆದ ಮುಖಾಮುಖಿಯಲ್ಲಿ ಅದು ಮೂರು ತೆರನಾಗಿ ಸ್ಪಂದಿಸಿದೆ. ಅದರ ಸ್ಪಂದನದ ವಿಶೇಷತೆಯನ್ನು ಗಮನದಲ್ಲಿಟ್ಟುಕೊಂಡು 'ಒಡೆಯರ' ಮೂರು ಪಂಗಡಗಳನ್ನು ಗುರುತಿಸಿಕೊಳ್ಳಬಹುದು. ಈ ಮೂರು ಪಂಗಡಗಳನ್ನು ಅವುಗಳ ಹುಟ್ಟಿಗೆ ಕಾರಣರಾದ ವ್ಯಕ್ತಿಗಳೊಂದಿಗೆ ಹೀಗೆ ಗುರುತಿಸಿಕೊಳ್ಳಬಹುದು.

೧. ಶಾಂತ ಒಡೆಯರ ಪಂಗಡ

೨. ಮಂಕ ಒಡೆಯರ ಪಂಗಡ

೩. ಅಮ್ಮೋಗಿ ಒಡೆಯರ ಪಂಗಡ

ಈಗಾಗಲೇ ಹೇಳಿದಂತೆ ಈ ಮೂರು ಪಂಗಡಗಳಲ್ಲಿನ ಸಮಾನ ಅಂಶವೆಂದರೆ ಅವರೆಲ್ಲ ಕುರುಬರಿಗೆ ಗುರುಗಳಾಗಿರುವುದು. ಅವರಲ್ಲಿರುವ ವ್ಯತ್ಯಾಸವೆಂದರೆ ಅವರಿಗೆ ದೀಕ್ಷೆ ನೀಡಿದವರ/ಗುರುಗಳಾದವರ ತಾತ್ವಿಕತೆ. ಶಾಂತ ಒಡೆಯನಿಗೆ ದೀಕ್ಷೆ ನೀಡಿದಾತ ರೇವಣಸಿದ್ಧ. ಮಂಕ ಒಡೆಯನಿಗೆ ದೀಕ್ಷೆ ನೀಡಿದಾತ ಸಿದ್ಧರಾಮ. ಆದರೆ ಅಮ್ಮೋಗಿ ಒಡೆಯ ಯಾರಿಂದ ದೀಕ್ಷೆ ಪಡೆದ ಎಂಬುದು ಎಲ್ಲಿಯೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿಲ್ಲ. ಆದರೆ ಶಿವನ ಅವತಾರವಾದ ಸೋಮಲಿಂಗನನ್ನು ಗುರುವಾಗಿ ಸ್ವೀಕರಿಸಿದಂತೆ ಕಥೆಗಳಿವೆ. ಈ ಸೋಮಲಿಂಗ ಯಾರು ಎಂದು ನಿಖರವಾಗಿ ಗುರುತಿಸಲಾಗುತ್ತಿಲ್ಲ. ಮೇಲಾಗಿ ರೇವಣಸಿದ್ಧ ಹಾಗೂ ಸಿದ್ಧರಾಮ ಇಬ್ಬರೂ ತಮ್ಮ ಶಿಷ್ಯರಿಗೆ ದೀಕ್ಷೆ ನೀಡಿ ಕುರುಬರಿಗೆ ಕುಲಗುರುವಾಗಿರಿ ಎಂದು ಹೇಳಿದಂತೆ ಸೋಮಲಿಂಗ ಅಮೋಘ ಸಿದ್ಧನಿಗೆ ಎಲ್ಲೂ ಹೇಳಿದಂತಿಲ್ಲ.

ಈ ಮೂರು ಪಂಗಡಗಳ ತಾತ್ವಿಕ ನಿಲುವನ್ನು ಪಂಗಡಗಳ ನಾಯಕರ ಕುರಿತಾಗಿರುವ ಲಿಖಿತ ಕಾವ್ಯ ಹಾಗೂ ಮೌಖಿಕ ಕಥನಗಳ ಆಧಾರದಿಂದ ಗುರುತಿಸಿಕೊಳ್ಳಲು ಸಾಧ್ಯ. 'ಜನಪದ ಹಾಲುಮತ ಮಹಾಕಾವ್ಯ', 'ತೇಜೋಮಯ ಹಾಲುಮತ ಪುರಾಣ(ಗದ್ಯ)', 'ಸುಕ್ಷೇತ್ರ ಹುಲಿಜಂತಿ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣ', 'ಹಾಲುಮತದ ಪುರಾಣವು', 'ರೇವಣಾರಾಧ್ಯ ಲೀಲಾ ಸಂಯುಕ್ತ ಹಾಲ್ಮತೋತ್ತೇಜಕ ಪುರಾಣ', 'ಹಾಲುಮತದ ಚರಿತ್ರೆ', 'ತಗರಪವಾಡ', 'ಸಿದ್ಧಮಂಕ ಚರಿತೆ', 'ಸಿದ್ಧಸಿರಿ' ಮುಂತಾದ ಕೃತಿಗಳು ಈ ನಾಯಕರುಗಳ ತಾತ್ವಿಕ ನಿಲುವನ್ನು ಅರ್ಥೈಸಿಕೊಳ್ಳುವಲ್ಲಿ ಸಹಕಾರಿಯಾಗಿ ನಿಲ್ಲುವ ಆಕರಗಳು.

೩.೧.೩.೧ ಶಾಂತ ಒಡೆಯರ ಪಂಗಡ: ಈ ಪಂಗಡದ ತಾತ್ವಿಕತೆಯನ್ನು ಪ್ರಮುಖವಾಗಿ 'ಹಾಲ್ಮತೋತ್ತೇಜಕ ಪುರಾಣ'[೩] ಹಾಗೂ 'ತಗರಪವಾಡ'[೪] ಕಾವ್ಯಗಳ ಸಹಾಯದಿಂದ ಹೀಗೆ ಗುರುತಿಸಿಕೊಳ್ಳಬಹುದು. ಎರಡೂ ಕಾವ್ಯಗಳು ಗುರುಮುಖೇನ ಶಾಂತಮುತ್ಯಾನಿಗೆ ಲಿಂಗದೀಕ್ಷೆಯಾದ ಬಗೆಗೆ ಸ್ಪಷ್ಟವಾಗಿ ಬರೆದುಕೊಳ್ಳುತ್ತವೆ. 'ಹಾಲ್ಮತೋತ್ತೇಜಕ ಪುರಾಣ'ದ ಪ್ರಕಾರ ಶಾಂತಮುತ್ಯಾ ಎಂಬ ಕುರಿಗಾರನು ಸರೂರ ಮೂಲದವನು. ಆತ ಸರೂರ ಅಡವಿಯಲ್ಲಿ ಕುರಿಗಳನ್ನು ಕಾಯುತ್ತ ಇರುತ್ತಿದ್ದ. ಆ ಸಮಯದಲ್ಲಿ ಕಲ್ಯಾಣದ ಕಡೆಗೆ ಹೊರಟಿದ್ದ ರೇವಣಸಿದ್ಧ ದಾರಿಯಲ್ಲಿ ಭೆಟ್ಟಿಯಾದ ಇವನಿಗೆ 'ಲಿಂಗ'ದೀಕ್ಷೆಯನ್ನು ಕೊಟ್ಟ. ಅಲ್ಲದೇ ಹಾಲುಮತ ಕುಲಕ್ಕೆ ಇವನನ್ನು ಅಧ್ಯಕ್ಷನನ್ನಾಗಿ ನೇಮಿಸಿದ. 'ತಗರಪವಾಡ'ವು ಇದಕ್ಕಿಂತ ಸ್ವಲ್ಪ ಭಿನ್ನವಾದ ಕಥೆಯನ್ನು ಹೇಳುತ್ತದೆ. ಇಲ್ಲಿಯೂ ರೇವಣಸಿದ್ಧನೇ ಶಾಂತಮುತ್ಯಾನಿಗೆ ಲಿಂಗದೀಕ್ಷೆ ನೀಡುತ್ತಾನಾದರೂ ಕುರುಬ ಕುಲಕ್ಕೆ ಅವನನ್ನು ಅಧ್ಯಕ್ಷನನ್ನಾಗಿ ನೇಮಿಸುವ ಕೆಲಸವನ್ನು ಬಸವಣ್ಣ ಮಾಡುತ್ತಾನೆ. ಕುರುಬರು ಕಲ್ಯಾಣದಲ್ಲಿ ಹೀಗೆ ಪ್ರವೇಶ ಪಡೆಯುತ್ತಾರೆ. ನಂತರದಲ್ಲಿ ಕಲ್ಯಾಣದಲ್ಲಿದ್ದ ಕುರುಬರು ಹಾಲುಕಂಬಿಯ ಮೇಲೆ ಸತ್ತ ಕುರಿಯನ್ನು ಮಾರಿದ ಒಂದು ಪ್ರಮಾದಕ್ಕಾಗಿ ಕಲ್ಯಾಣದಿಂದ ಬಹಿಷ್ಕೃತರಾಗುತ್ತಾರೆ. ಮುಚ್ಚಿಕೊಂಡ ಬಾಗಿಲುಗಳ ವರ್ಣಾಶ್ರಮ ವ್ಯವಸ್ಥೆಗೆ ತೀವ್ರ ಪ್ರತಿರೋಧವೊಡ್ಡಿ ಬಂದ ಶರಣ ಚಳವಳಿಯದ್ದು ತೆರೆದ ಬಾಗಿಲಿನ ಸಂಸ್ಕೃತಿಯೇನೋ ನಿಜ. ಆದರೆ ಎಲ್ಲರನ್ನೂ ಒಳಗೆ ಕರೆದುಕೊಳ್ಳುತ್ತಿದ್ದ ಶರಣ ಸಮುದಾಯ ಸತ್ತ ಕುರಿಯನ್ನು ಮಾರಾಟ

ಮಾಡಿದರೆಂಬ ಕಾರಣವೊಡ್ಡಿ ತೆರೆದ ಬಾಗಿಲನಿಂದಲೇ ಕುರುಬರನ್ನು ಕಲ್ಯಾಣದಿಂದ ಹೊರಗೆ ತಳ್ಳಿದ್ದು ಬಹುದೊಡ್ಡ ವಿಪರ್ಯಾಸ. ಕಲ್ಯಾಣವನ್ನು ಮರುಪ್ರವೇಶಿಸಲು ಹನ್ನೆರಡು ವರ್ಷಗಳವರೆಗೆ ಕಲ್ಯಾಣದ ಹೊರವಲಯದಲ್ಲಿ ಕಾಯುತ್ತ ನಿಲ್ಲುತ್ತಾರೆ. ಕಲ್ಯಾಣವನ್ನು ಮುರುಪ್ರವೇಶಿಸಬೇಕೆಂಬ ಹಂಬಲದ ಅವರ ತಾಳ್ಮೆ ಊಹಾತೀವಾದುದು.

ಇಂಥ ಸಂದರ್ಭದಲ್ಲಿ ಕುರುಬರಿಗೆ ಮರುಪ್ರವೇಶ ದೊರಕಿಸಲು ರೇವಣಸಿದ್ಧ ಬರುತ್ತಾನೆ. ಮರುಪ್ರವೇಶ ಮಾಡುವಾಗ ಕುರುಬರು ತಮ್ಮ ಸತ್ವವನ್ನು ಪ್ರಮಾಣೀಕರಿಸಬೇಕಾಗುತ್ತದೆ. ಕಿನ್ನರಿ ಬೊಮ್ಮಯ್ಯನ ಸತ್ತ ಟಗರನ್ನು ಬದುಕಿಸುವ ಪವಾಡದ ಮೂಲಕ ಈ ಪ್ರಮಾಣೀಕರಿಸುವ ಕೆಲಸ ನಡೆಯುತ್ತದೆ. ಆಗ ಬಸವಣ್ಣನು ಬಿಜ್ಜಳ ಮುಂತಾದವರ ಸಮ್ಮುಖದಲ್ಲಿ ಶಾಂತಮುತ್ಯಾನನ್ನು ಕುರುಬರ ಕುಲಗುರುವನ್ನಾಗಿ ಮಾಡುತ್ತಾನೆ ಹಾಗೂ ಗುರುತನದ ಸಂಕೇತವಾಗಿ ಅವನಿಗೆ 'ಮೂರೇಣಿನ ಕಂಬಳಿ'ಯನ್ನು ನೀಡುತ್ತಾನೆ.

ಇಲ್ಲಿಗೆ ಶರಣರ ಲಿಂಗ ಹಾಗೂ ಕುರುಬರ ಕಂಬಳಿ ಸೇರಿಕೊಂಡು ಒಡೆಯರು ಎಂಬ ಹೊಸ ಪುರೋಹಿತ ವರ್ಗ ರೂಪಗೊಳ್ಳುತ್ತದೆ. ಹೀಗಾಗಿ ಶಾಂತ ಒಡೆಯರು ಎಂದರೆ ಲಿಂಗ ಧರಿಸಿದ ಕಂಬಳಿಧಾರಿಗಳು ಎಂದರ್ಥ. ಈ ರೀತಿಯ ಒಡಂಬಡಿಕೆಯಲ್ಲಿ ಶಾಂತ ಒಡೆಯರಿಗೆ ಕಂಬಳಿ ಉಳಿಸಿಕೊಳ್ಳಲು ಸಾಧ್ಯವಾಯಿತಾದರೂ ಭಂಡಾರವನ್ನು ಉಳಿಸಿಕೊಳ್ಳಲಾಗಿಲ್ಲ. ಭಂಡಾರದ ಜಾಗೆಯಲ್ಲಿ ಭಸಿತ ಬಂದಿತು. ಈ ಕುರುಬರ 'ಕಲ್ಯಾಣ' ಮರು ಪ್ರವೇಶದ ಸಮೀಕರಣವನ್ನು ಹೀಗೆ ವಿವರಿಸಬಹುದು. ಬಗಲೊಳಗಿನ ಭಂಡಾರ ಚೀಲ ಬಿಟ್ಟು ಕೊರಳಿಗೆ ಲಿಂಗ, ಹಣೆಗೆ ವಿಭೂತಿ ಸ್ವೀಕರಿಸಿ ಹೆಗಲ ಮೇಲೆ ಕಂಬಳಿ ಉಳಿಸಿಕೊಂಡವರು ಶಾಂತ ಒಡೆಯರ ಪಂಗಡ ದವರೆನ್ನಿಸಿಕೊಂಡರು.

೩.೧.೩.೨ ಮಂಕ ಒಡೆಯರ ಪಂಗಡ: ಈ ಪಂಗಡದ ತಾತ್ವಿಕತೆಯನ್ನು ಬಂಕಾಪುರದ ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಸಂಪಾದಿಸಿದ 'ಹಾಲುಮತದ ಪುರಾಣ'ವು ಹಾಗೂ ಎಂ.ಎಂ.ಕಲಬುರ್ಗಿ ಹಾಗೂ ವೈ.ಸಿ.ಭಾನುಮತಿ ಅವರು ಸಂಪಾದಿಸಿದ 'ಸಿದ್ಧಮಂಕ ಚರಿತೆ' ಕಾವ್ಯಗಳ ಮೂಲಕ ತಿಳಿದುಕೊಳ್ಳಲು ಸಾಧ್ಯ. ಹಳವಳ್ಳಿ ಅವರಿಂದ ಸಂಪಾದಿತವಾದ ಕೃತಿಯ ನಾಯಕ ಮರುಳಮಂಕಸಿದ್ಧನಾಗಿದ್ದಾನೆ. ಈತನನ್ನು ಕೋಡಗಲ್ಲಿನ ವಾಕ್ಯಪುರುಷ ಎಂದು ಈ ಕಾವ್ಯ ಗುರುತಿಸುತ್ತದೆ. ಸರೂರದ ಸಮೀಪದಲ್ಲಿನ ತೂಗುಡ್ಡದಲ್ಲಿ ಈತ ತಪಸ್ಸು ಮಾಡುತ್ತಿದ್ದ. ಅವನ ಉಗ್ರ ತಪದ ರೀತಿಯನ್ನು ಈ ಕಾವ್ಯ ಹೀಗೆ ವರ್ಣಿಸಿದೆ:

> ಧರೆಗೆ ಬೇರಿಳಿದು ಕಿರುಜಡೆ ಹಬ್ಬಿದವಾಗ
> ಉರದೊಳು ಮೊಲವು ಗುಹೆ ಮಾಡಿ
> ಪರಿಪರಿ ಪಕ್ಷಿ ಗಡ್ಡ ಮೀಸೆಯೊಳು
> ಮರಿಗಳನ್ನಿಕ್ಕುವಲ್ಲಿ[೬]

[illegible]

ಇಂಥ ಮಂಕಸಿದ್ಧನ ಗುರುತ್ವವನ್ನು ಬಯಸಿ ನಾಲ್ವತ್ತೆರಡು ಜನ ಕುರುಬ ಸಹೋದರರು ತೂಗುಡ್ಡಕ್ಕೆ ಬರುತ್ತಾರೆ. ಈ ಕುರುಬ ಸಹೋದರರು ಬೇರಾರೂ ಅಲ್ಲ. ಹಾಲುಮತ ಪುರಾಣ ಕಥನಗಳು ಒಪ್ಪಿರುವ ಕುರುಬರ ಮೂಲಪುರುಷ ಮುದ್ದಗೊಂಡ ಹಾಗೂ ಅವನ ಹೆಂಡತಿ ಮುದ್ದಮ್ಮ ಅವರ ಸಂತತಿಯವರು. ಮುದ್ದಗೊಂಡ ಮುದ್ದಮ್ಮರಿಗೆ ಹುಟ್ಟಿದ ಐವರು ಮಕ್ಕಳಲ್ಲಿ ಒಬ್ಬನಾದ ಪದ್ಮಗೊಂಡನಿಗೆ ಅವನ ಇಬ್ಬರು ಹೆಂಡಿರಲ್ಲಿ ಜನಿಸಿದ ನಲ್ವತ್ತೆರಡು ಜನ ಸಹೋದರು. ಇವರೆಲ್ಲ ತೂಗುಡ್ಡದಲ್ಲಿ ತಮ್ಮ ಕುರಿದೊಡ್ಡಿ ಹಾಕಿಕೊಂಡು ಮಂಕಸಿದ್ಧನಲ್ಲಿಗೆ ಬಂದು ತಮಗೆ 'ಲಿಂಗ'ಕಟ್ಟಿ ಉದ್ಧರಿಸಬೇಕೆಂದು ವಿನಂತಿಸಿಕೊಳ್ಳುತ್ತಾರೆ. 'ಇಷ್ಟಲಿಂಗವ ಧರಿಸುವೆವು ನಿಷ್ಠೆಯಿಂದ'[೭] ಎಂದು ವಚನ ನೀಡುತ್ತಾರೆ. ಆಗ ಮಂಕಸಿದ್ಧನು ಅವರಿಗೆ 'ಇಷ್ಟಲಿಂಗ' ಧಾರಣೆ ಮಾಡಿಸುತ್ತಾನೆ. ಈ ವಿಧಿಯಲ್ಲಿ ನಾಡಿನ ನಾಲ್ಕೂ ಮೂಲೆಯಿಂದ ಬಂದಿದ್ದ ಆಚಾರ್ಯರು ಉಪಸ್ಥಿತರಿರುತ್ತಾರೆ.[೮]

ಇಂಥದೊಂದು ಕಥನದ ಮೂಲಕ ಮಂಕಸಿದ್ಧನನ್ನು ಕಲ್ಯಾಣಕ್ಕಿಂತಲೂ ಭಿನ್ನವಾದ ಅನ್ಯ ಗುರು ಪರಂಪರೆಯೊಂದಿಗೆ ತಳಕು ಹಾಕುವ ಪ್ರಯತ್ನ ನಡೆದಂತೆ ತೋರುತ್ತದೆ. ಇಲ್ಲಿ ಕಾಣಿಸಿಕೊಳ್ಳುವ ನಾಲ್ಕೂ ಮೂಲೆಯಿಂದ ಬಂದ ಆಚಾರ್ಯರು ಚತುರಾಚಾರ್ಯರೇ ಆಗಿರುವ ಸಾಧ್ಯತೆ ಹೆಚ್ಚು. ಹೀಗಾಗಿ ಈ ಕಥನದ ಮಂಕಸಿದ್ಧನನ್ನು ಶಿವಯೋಗಿ ಸಂಪ್ರದಾಯವನ್ನಾಗಿಸುವುದಕ್ಕಿಂತ ಶಿವಾಚಾರ್ಯ ಸಂಪ್ರದಾಯದವ ನನ್ನಾಗಿಸುವುದರ ಕಡೆಗೆ ಒಲವು ಇರುವುದು ಗೋಚರಿಸುತ್ತದೆ.

ಹೀಗಾಗಿ ಶಾಂತಮುತ್ತಯ್ಯನಿಗೆ ಕಲ್ಯಾಣದ ಹಂಬಲವಿದಿದ್ದಷ್ಟು ಮಂಕಸಿದ್ಧನ ಅನುಯಾಯಿಗಳಿಗೆ ಇದ್ದಂತೆ ತೋರುವುದಿಲ್ಲ. ನಲವತ್ತೆರಡು ಜನ ಕುರುಬ ಸಹೋದರರು ಕುರಿ ಸಾಕಾಣಿಕೆಯನ್ನು ದೊಡ್ಡ ಉದ್ಯಮದ ಹಾಗೆ ಬೆಳೆಯಿಸಿಕೊಂಡವರಾಗಿದ್ದಾರೆ. ಗಚ್ಚಿನ ಕಣದಲ್ಲಿ ಹಾಲು ಹೆಪ್ಪುಹಾಕಿ ಎತ್ತಿನ ಕಾಲಿನಿಂದ ತುಳಸಿ ಮಜ್ಜಿಗೆ ಕಟೆದು ಬಂದ ಬೆಣ್ಣೆಯನ್ನು ಗೋರೆಯಿಂದ ಬಳಿದು ತುಂಬುವಂಥ ಬೃಹತ್ ಹೈನುಗಾರಿಕೆ ಅವರದು.

ಗಚ್ಚಿನ ಕಣದೊಳು ಹೆಪ್ಪು ಹಾಲಿಗೆ ಕೊಟ್ಟು
ಎತ್ತಿನ ಕಾಲ ತೊಳೆತೊಳೆದು
ಸುತ್ತಲೂ ಹಂತಿಯ ಕಟ್ಟಿ ತುಳಸಿ ಬೆಣ್ಣೆ
ಮತ್ತೆ ಗೋರೆಹಲ್ಲಿಲೆ ಎಳೆಎಳೆದು[೯]

ಇಷ್ಟು ದೊಡ್ಡ ಉದ್ಯಮದಲ್ಲಿ ತೊಡಗಿಸಿಕೊಂಡ ಇವರನ್ನು ಗಮನಿಸಿದ ಬಿಜ್ಜಳ ದೊರೆ ತನ್ನ ಕಲ್ಯಾಣಕ್ಕೆ ಆಮಂತ್ರಿಸುತ್ತಾನೆ. ಉತ್ಸಾಹದಿಂದ ಕುರುಬ ಸಹೋದರರು ಕಲ್ಯಾಣದಲ್ಲಿ ಪ್ರವೇಶ ಪಡೆಯುತ್ತಾರೆ. ಆದರೆ ಕೆಲ ದಿವಸಗಳ ಬಳಿಕ ಕುರುಬ ಸಹೋದರರ ಕುರಿಗಳು ವಿಪರೀತ ಗಾಳಿ ಮಳೆಯ ಕಾರಣದಿಂದ ಸಾಯುತ್ತವೆ. ಆಗ ಅವರು ಸತ್ತ ಕುರಿಗಳನ್ನು ಹೊತ್ತು ಕಲ್ಯಾಣದಲ್ಲಿ ಮಾರಲು ಪ್ರಾರಂಭಿಸುತ್ತಾರೆ. ಮಾರಲಾಗದೆ ಉಳಿದ ಕುರಿಗಳನ್ನು ಬೆಂಕಿ ಹಚ್ಚಿ ಸುಡುತ್ತಾರೆ.

[illegible]

[illegible]

[illegible]

[illegible]

[illegible]

ಸತ್ತ ಕುರಿಯ ಹೊತ್ತು ಮಾರುತ್ತಿದ್ದರಾಗ
ಎತ್ತಿ ಮಿಕ್ಕದನೆಲ್ಲವ ರಾಶಿಯ ಮಾಡಿ
ಮೊತ್ತವ ಮಾಡಿ ಬೆಂಕಿಯ ಹಚ್ಚಿ ಸುಡಲಾಗ
ಹತ್ತಿ ದುರ್ಗಂಧ ವಾಸನೆಯು[10]

ಸುಟ್ಟ ಕುರಿಯ ವಾಸನೆಯನ್ನು ಸಹಿಸದ ಕಲ್ಯಾಣದ ಜನರು ಬಿಜ್ಜಳನಿಗೆ ತಕರಾರು ಸಲ್ಲಿಸುತ್ತಾರೆ. ಕುರುಬ ಸಹೋದರರನ್ನು ದೊರೆ ಕಲ್ಯಾಣದಿಂದ ಬಹಿಷ್ಕರಿಸುತ್ತಾನೆ. ಬಹಿಷ್ಕೃತ ಕುರುಬ ಸಹೋದರರು ದೊರೆಯಲ್ಲಿ ಯಾವುದೇ ರೀತಿಯ ಅಂಗಲಾಚುವಿಕೆಯನ್ನು ಮಾಡದೇ ನೇರವಾಗಿ ಮಂಕಸಿದ್ಧನಿರುವ ತೂಗುಡ್ಡಕ್ಕೆ ಬರುತ್ತಾರೆ. ವಿಷಯ ತಿಳಿದ ಮಂಕಸಿದ್ಧನು ತನ್ನ ಗುರುವಾದ ರೇವಣಸಿದ್ಧನ ಮುಂದಾಳತ್ವದಲ್ಲಿ ಕುರುಬ ಸಹೋದರರೊಂದಿಗೆ ಕಲ್ಯಾಣದ ಕಡೆಗೆ ಬರುತ್ತಾನೆ. ಸತ್ತ ಗೂಳಿಯನ್ನು ಮೆರೆಯಿಸುತ್ತ ಕಲ್ಯಾಣದ ಜನ ಅಲ್ಲಿಗೆ ಬರುತ್ತಾರೆ. ಗೂಳಿ ಸತ್ತರೆ ಮೆರೆಯಿಸುತ್ತ ಬರುವ ಜನ ಕುರಿ ಸತ್ತರೆ ವಾಸನೆ ಎಂದು ತಕರಾರು ತೆಗೆಯುವ ಬಗೆಗೆ ತುಂಬಾ ಸೂಕ್ಷ್ಮವಾದ ವ್ಯಂಗ್ಯ ವ್ಯಕ್ತವಾಗಿದೆ. ಸತ್ತ ಕುರಿಯನ್ನು ಹೊತ್ತು ಮಾರುತ್ತಿದ್ದ ಕುರುಬರನ್ನು ಕಲ್ಯಾಣದಿಂದ ಹೊರಗೆ ಹಾಕಿದ ಘಟನೆ ಮೇಲುಸ್ತರದ ಜನರು ಕೇಳಸ್ತರದವರ ಆಹಾರ ಸಂಸ್ಕೃತಿಯ ಮೇಲೆ ನಡೆಯಿಸಿದ ಸಾಂಸ್ಕೃತಿಕ ಹಲ್ಲೆಯ ಹಾಗೆ ತೋರುತ್ತದೆ. ಸತ್ತಕುರಿಯ ಮಾರಾಟದ ಮೇಲೆ ದೊರೆ ವಿಧಿಸಿದ ನಿರ್ಬಂಧವನ್ನು ಮಾರುಕಟ್ಟೆಯ ಮೇಲಿನ ನಿರ್ಬಂಧದ ಹಾಗೆ ಪರಿಗಣಿಸಿರುವುದರಿಂದ ಕಲ್ಯಾಣದ ಮಾರುಕಟ್ಟೆ ಇಲ್ಲದಿದ್ದರೆ ಇನ್ನೊಂದು ಮಾರುಕಟ್ಟೆ ಎನ್ನುವ ನಿಲುವಿಗೆ ಬಂದ ಕಾರಣದಿಂದಲೇ ಅವರಲ್ಲಿ ಯಾವುದೇ ರೀತಿಯ ಆತಂಕ ಉಂಟಾದಂತೆ ತೋರುವುದಿಲ್ಲ. ಬಹಿಷ್ಕಾರವನ್ನು ಅವರು ಒಂದು ಪಂಥವಾಗಿ ಸ್ವೀಕರಿಸಿದ್ದಾರೆ. ತಮ್ಮ ನಾಯಕನೊಂದಿಗೆ ಕಲ್ಯಾಣಕ್ಕೆ ಬಂದು ವಿಜಯ ಸ್ಥಾಪಿಸಲು ನಡೆಸಿದ ಪ್ರಯತ್ನವನ್ನು ಮುಂದಿನ ಘಟನೆಯಲ್ಲಿ ನೋಡುತ್ತೇವೆ.

ಸತ್ತ ಗೂಳಿಯನ್ನು ಮೆರೆಸುತ್ತ ಬಂದ ಕಲ್ಯಾಣದ ಜನರಿಗೆ ಅದನ್ನು ಬದುಕಿಸುವ ಪಂಥವೊಡ್ಡುತ್ತಾರೆ. ಕಲ್ಯಾಣದ ಜನರಿಗೆ ಗೂಳಿಯನ್ನು ಬದುಕಿಸಲಾಗುವುದಿಲ್ಲ. ಆದರೆ ರೇವಣಸಿದ್ಧನು ಅಲ್ಲಿ ಕಡಿದು ಕತ್ತರಿಸಿ ಹಾಕಿದ್ದ ತಗರನ್ನು ತನ್ನ ಹೆಗಲ ಮೇಲಿನ ಜಾಡಿಯ ಸ್ಪರ್ಶದಿಂದ ಬದುಕಿಸುತ್ತಾನೆ. ಆಗ ಅಲ್ಲಿಗೆ ಬಂದ ಬಸವಣ್ಣ ಹಾಗೂ ಬಿಜ್ಜಳರ ಎದುರಿಗೆ ಇನ್ನು ಮೇಲೆ ಮಂಕಸಿದ್ಧನೇ ಕುರುಬ ಕುಲಕ್ಕೆ ಗುರು ಎಂದು ರೇವಣಸಿದ್ಧ ಘೋಷಿಸುತ್ತಾನೆ.

ಈ ಕಥನದಲ್ಲಿ ಬರುವ ಮಂಕಸಿದ್ಧನು ಸೊನ್ನಲಿಗೆ ಸಿದ್ಧರಾಮನನ್ನು ಬಹುಪಾಲು ಹೋಲುತ್ತಾನೆ. ಇವನ ತಂದೆ-ತಾಯಿಯರ ಹೆಸರೂ ಮುದ್ದಗೊಂಡ ಹಾಗೂ ಸುಗ್ಗಲಾದೇವಿ ಎಂದೇ ಇದೆ. ಅದೂ ಅಲ್ಲದೇ ರೇವಣಸಿದ್ಧನ ಆಶೀರ್ವಾದದಿಂದಲೇ ಜನಿಸಿದವನಾಗಿದ್ದಾನೆ. ಮೇಲಾಗಿ ಸಿದ್ಧರಾಮನ ಹಾಗೆ ಶ್ರೀಶೈಲ ಮಲ್ಲಿಕಾರ್ಜುನನ ದರ್ಶನಕ್ಕೆ ಹಂಬಲಿಸಿ ಕಮರಿಕೊಳ್ಳಕ್ಕೆ ಹಾರಿಕೊಳ್ಳುವ ಮುಗ್ಧ ಭಕ್ತನಾಗಿದ್ದಾನೆ. ಅಲ್ಲದೆ

[illegible]

[illegible]

[illegible]

[illegible]

ಸರೂರ ಮಲ್ಲಿಕಾರ್ಜುನ ದೇವಾಲಯದ ಆವರಣದಲ್ಲಿರುವ ಶಾಸನದಲ್ಲಿ 'ಮಂಕಯ್ಯಗಳಿಗೆ ಮಲ್ಲಿನಾಥ ರಾಮನೆಂಬನ ಸಂನಿದಾನದಲು' ಎಂಬ ಸಾಲಿದೆ. ಇಲ್ಲಿ ಉಲ್ಲೇಖಿತನಾಗಿರುವ ಮಲ್ಲಿನಾಥರಾಮನು ಸಿದ್ಧರಾಮ ಪೂಜಿಸಿದ ಶ್ರೀಶೈಲ ಮಲ್ಲಿಕಾರ್ಜುನನಾಗಿರುವ ಸಾಧ್ಯತೆಯಿದೆ. ಹೀಗಾಗಿ ಈ ಒಡೆಯರ ಪರಂಪರೆಗೆ ಮೂಲ ಪುರುಷ ಸಿದ್ಧರಾಮನೇ ಆಗಿದ್ದಾನೆ. ಅವನೇ ಮಂಕಸಿದ್ಧನಾಗಿ ಪ್ರಸಿದ್ಧಿಪಡೆದಿರಲೂಬಹುದು.

ಈ ಕಥನದಲ್ಲಿ ಬರುವ ಮಂಕ ಒಡೆಯರ ಪಂಗಡದ ತಾತ್ವಿಕತೆಯನ್ನು ಹೀಗೆ ಗ್ರಹಿಸಬಹುದು. ಇವರಿಗೆ ಇಷ್ಟಲಿಂಗಬೇಕು ಆದರೆ ಕಲ್ಯಾಣದಲ್ಲಿ ಹೋಗಿ ನೆಲೆಸಲೇಬೇಕೆಂಬ ಒತ್ತಾಸೆಯಿಲ್ಲ. ದೊರೆ ಬಿಜ್ಜಳ ಆಮಂತ್ರಿಸಿದರೆ ಹೋಗುತ್ತಾರೆ. ಹೊರಹಾಕಿದರೆ ಅದನ್ನು ಪಂಥವೆಂದು ಸ್ವೀಕರಿಸಿ ಪಂಥದಲ್ಲಿ ಗೆದ್ದು ಮರುಪ್ರವೇಶ ಪಡೆಯುತ್ತಾರೆ.

'ಸಿದ್ಧಮಂಕ ಚರಿತೆ'[೧೧]ಯ ಕೇಂದ್ರದಲ್ಲಿ ಕಾಣಿಸಿಕೊಳ್ಳುವವನೂ ಮಂಕ ಒಡೆಯನೆ. ಈ ಮಂಕಸಿದ್ಧನು ಸೊನ್ನಲಿ ಸಿದ್ಧರಾಮನ ದರ್ಶನಕ್ಕಾಗಿ ಹಂಬಲಿಸಿ ತೂಗುಡ್ಡದಲ್ಲಿ ಉಗ್ರತಪಸ್ಸನ್ನು ಆಚರಿಸುವವನಾಗಿದ್ದಾನೆ. ಅವನ ರಕ್ಷಣೆಗೆಂದು ಹೆಗ್ಗಗೌಡನೆಂಬುವವನು ಇಲ್ಲಿ ಇದ್ದಾನೆ. ಪದ್ಮಗೊಂಡನ ನಾಲವತ್ತೆರಡು ಜನ ಮಕ್ಕಳ ಪ್ರಸ್ತಾಪ ಇಲ್ಲಿ ಬರುವುದಿಲ್ಲ. ಹೆಗ್ಗಗೌಡನನ್ನು ಬಿಜ್ಜಳ ಕಲ್ಯಾಣಕ್ಕೆ ಆಹ್ವಾನಿಸುತ್ತಾನಾದರೂ ಅದು ಅವನ ಕುರಿಸಾಕಾಣಿಕೆಯ ಬೃಹತ್ ಉದ್ಯಮದ ಕಾರಣವಾಗಿ ಅಲ್ಲ. ಈ ರಕ್ಷಕನ ಸ್ವಹಿಂಸೆಯ ಉಗ್ರಸ್ವರೂಪದ ಕಾರಣದಿಂದ ಅವನನ್ನು ಕಲ್ಯಾಣಕ್ಕೆ ಕರೆಯಿಸುತ್ತಾನೆ. ಹೆಗ್ಗಗೌಡ ಹಾಗೂ ಅವನ ಸಂಗಡಿಗರು ಮಾಡಿಕೊಳ್ಳುವ ಸ್ವಹಿಂಸೆಯ ಸ್ವರೂಪ ಹೀಗಿದೆ:

ಬಿಡಬೇಡೆನುತ ಕೆಲರು ಕಣಕಾಲನು
ಕಡಿದಾಡುತ ಬರುತಿರಲು
ಮಡದಿಯರೆಲ್ಲ ನಾಲಗೆ ಕಣ್ಣು ಮೊಲೆಮೂಗ
ಕಡಿವುತ ಬರುತಿರ್ದರಾಗ[೧೨]

ಇವರೆಲ್ಲ ಕಲ್ಯಾಣಕ್ಕೆ ಹೋದನಂತರ ಯಥಾಪ್ರಕಾರ ಹಾಲಕಂಬಿಯ ಮೇಲೆ ಸತ್ತ ಕುರಿಯನ್ನು ಹೊತ್ತು ಮಾರಲು ಪ್ರಾರಂಭಿಸುತ್ತಾರೆ. ಆ ಕಾರಣವಾಗಿ ಕಲ್ಯಾಣದಿಂದ ಬಹಿಷ್ಕೃತರಾಗುತ್ತಾರೆ. ಆಗ ಹೆಗ್ಗಗೌಡನ ರಕ್ಷಣೆಗೆ ಮಂಕಸಿದ್ಧನ ವಿನಂತಿಯ ಮೇರೆಗೆ ಸಿದ್ಧರಾಮನು ಕಲ್ಯಾಣಕ್ಕೆ ಬರುತ್ತಾನೆ. ಆ ಸಂದರ್ಭದಲ್ಲಿ ಕಲ್ಯಾಣದಲ್ಲಿದ್ದ ರೇವಣಸಿದ್ಧ, ಬಸವಣ್ಣ ಮುಂತಾದವರ ಎದುರಿಗೆ ಸಿದ್ಧರಾಮ ವಾದಿಸಿ ಗೆಲುವನ್ನು ಸಾಧಿಸುತ್ತಾನೆ. ಹೆಂಡ ಮಾರುವ ಕಾಯಕದ ಹೆಂಡದ ಮಾರಯ್ಯನನ್ನು, ಪ್ರಾಣಿಗಳನ್ನು ಕೊಂದು ಮಾಂಸಮಾರಿದ ತೆಲಗು ಜೊಮ್ಮಯ್ಯ, ಬಾಯಿಯಿಂದ ಮುಕ್ಕಳಿಸಿದ ನೀರಿನಿಂದ ಶಿವನ ಮುಖ ತೊಳೆದ ಕಣ್ಣಪ್ಪ ಇವರೆಲ್ಲ ಶ್ರೇಷ್ಠರೆನ್ನಿಸಿಕೊಂಡಿರುವುದನ್ನು ಒಪ್ಪಿಕೊಂಡ ನೀವು ಸತ್ತ ಕುರಿಯನ್ನು ತಲೆಯ ಮೇಲೆ ಹೊತ್ತು ಮಾರಿದರೆ ಯಾಕೆ ಬಹಿಷ್ಕಾರ ಹಾಕುತ್ತೀರಿ ಎಂದು ವಾದಿಸುತ್ತಾನೆ.

[illegible]

[illegible]

[illegible]

[illegible]

[illegible]

ಹೆಂಡವತಂದೊಬ್ಬನಂಗಡಿಯೊಳು ಮಾರಿ

ಹೆಂಡದ ಮಾರಯ್ಯನೆನಿಸಿ

ಕಂಡಮೃಗವ ಕೊಂದು ಮಾಂಸವ ಮಾರಿದು

ದ್ದಂಡ ತೆಲಗು ಜೊಮ್ಮಯ್ಯ

ಮುಕ್ಕಳಿಸಿಯೇ ತಂದುದಕ ಮಜ್ಜನ ಮಾಡಿ

ಸಖ್ಯವಾದ ನಮ್ಮ ಪಶುಪ

ಮುಕ್ಕಣ್ಣಗರ್ಪಿಸಿ ವರವನು ಪಡೆದನು

ಧಿಕ್ಕನೆ ಕಣ್ಣಪ್ಪನೆಂದು[೧೩]

ಬಸವಣ್ಣನಿಗೆ ಸಿದ್ಧರಾಮನ ವಾದ ಸರಿಯೆನ್ನಿಸುತ್ತದೆ. ಇಲ್ಲಿ ಸತ್ತ ತಗರನ್ನು ಬದುಕಿಸುವ ಪ್ರಸ್ತಾಪ ಬರುವುದೇ ಇಲ್ಲ. ತಾವು ಮಾಡುವ ಕಾಯಕದ ಗೌರವವನ್ನು ವಾಗ್ವಾದದಲ್ಲಿ ಬಳಸಿಕೊಳ್ಳಲಾಗಿದೆ.

ನಂತರ ಅಲ್ಲಿಯೇ ಇದ್ದ ರೇವಣಸಿದ್ಧನು ಸಿದ್ಧರಾಮನಿಗೆ ಹೆಗ್ಗಗೌಡ ಹಾಗೂ ಅವನ ಸಂಗಡಿಗರಿಗೆ ವಿಭೂತಿ ನೀಡಲು ಆದೇಶಿ ಸುತ್ತಾನೆ. ವಿಭೂತಿಯನ್ನು ಅವರಿಗೆ ಕೊಟ್ಟ ನಂತರ ನಿಮಗೆ ಯಾರು ಗುರುವೆಂದು ಸಿದ್ಧರಾಮ ಪ್ರಶ್ನಿಸುತ್ತಾನೆ. ಆಗ ಅವರು ತಮಗೆ ಮಂಕತಂದೆ ಗುರುವೆಂದು ಹೇಳುತ್ತಾರಲ್ಲದೇ ಸಿದ್ಧರಾಮನು ಗುರುವಿನ ಗುರು ಪರಮಗುರು ಎಂದು ಹೇಳುತ್ತಾರೆ.

ಕರೆದು ಹೆಗ್ಗಗೌಡನ ಸಿದ್ಧರಾಮಯ್ಯ

ಗುರು ನಿನಗಾರೆಂದು ಕೇಳೆ

ಪರಮ ಗುರುವು ನೀನೆ ಮಂಕುತಂದೆಯು ವರ

ಗುರುವೆನುತಲಿ ಕೊಂಡಾಡೆ[೧೪]

ರಸ್ತಾಪುರ ಭೀಮಕವಿಯ 'ಹಾಲ್ಮತೋತ್ತೇಜಕ ಪುರಾಣ' ಹಾಗೂ ಡಾ. ಎಂ.ಎಂ.ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ ಹಾಗೂ ಡಾ. ಎಫ್.ಟಿ.ಹಳ್ಳಿಕೇರಿ ಅವರು ಸಂಪಾದಿಸಿದ 'ತಗರ ಪವಾಡ' ಕಾವ್ಯಗಳು ಶಾಂತ ಮುತ್ಯಾನನ್ನು ಕೇಂದ್ರದಲ್ಲಿಟ್ಟುಕೊಂಡು ರೇವಣಸಿದ್ಧ ಮತ್ತು ಬಸವಣ್ಣ ಇವರ ಆದರ್ಶದ ನೆರಳಿನಲ್ಲಿ ರೂಪಗೊಂಡ ಶಾಂತ ಒಡೆಯರ ಕಥನಗಳಾದರೆ, ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ ಅವರು ಸಂಪಾದಿಸಿದ ಹಾಲುಮತ ಪುರಾಣವು ಹಾಗೂ ಡಾ. ಎಂ.ಎಂ.ಕಲಬುರ್ಗಿ ಹಾಗೂ ಡಾ. ವೈ.ಸಿ.ಭಾನುಮತಿ ಅವರು ಸಂಪಾದಿಸಿದ 'ಸಿದ್ಧಮಂಕ ಚರಿತೆ' ಕಾವ್ಯಗಳು ಸಿದ್ಧಮಂಕನನ್ನು ಕೇಂದ್ರದಲ್ಲಿಟ್ಟುಕೊಂಡು ಸಿದ್ಧರಾಮ ಮತ್ತು ರೇವಣಸಿದ್ಧರ ಆದರ್ಶದ ನೆರಳಿನಲ್ಲಿ ರೂಪಗೊಂಡ ಮಂಕ ಒಡೆಯರ ಕಥನಗಳಾಗಿದೆ.

[illegible]

[illegible]

[illegible]

[illegible]

೩.೧.೩.೩ ಅಮ್ಮೋಗಿ ಒಡೆಯರ ಪಂಗಡ: ಹಾಲುಮತ ಸಂಬಂಧಿ ಬಹುಪಾಲು ಕಥನಗಳು ತಗರಪವಾಡ ಸನ್ನಿವೇಶದಿಂದ ಅಮೋಘಸಿದ್ಧನನ್ನು ದೂರವಿರಿಸಿವೆ. ಆದರೆ ಮದಗೊಂಡ ಮಾರಾಯರು ಬರೆದ ಸಿದ್ಧಸಿರಿಯಲ್ಲಿ ಮಾತ್ರ ತಗರ ಪವಾಡದ ಕತೆ ಬರುತ್ತದೆ. ಈ ಪವಾಡವನ್ನು ಮೆರೆಯುವವ ಅಮೋಘಸಿದ್ಧ ನಾಗಿರದೆ, ಅವನ ಎರಡನೆಯ ವರವಿನ ಮಗ ಬಿಳಿಯಾನಿಸಿದ್ಧನಾಗಿದ್ದಾನೆ. ಬಿಳಿಯಾನಿಸಿದ್ಧನ ಸುತ್ತ ಹೆಣೆಯಲಾದ ಈ ಕತೆಯಲ್ಲಿ ತಗರ ಪವಾಡ ಮೆರೆಯುವುದರ ಜೊತೆಜೊತೆಗೆ ಲಿಂಗ ನಿರಾಕರಣೆಯ ಕತೆಯೂ ಸೇರಿಕೊಂಡಿದೆ.

ಕಲ್ಯಾಣ ಪಟ್ಟಣದಲ್ಲಿದ್ದ ಭಕ್ತ ಕುಂಬಾರ ರಾಮಯ್ಯನೆಂಬುವವನಿಗೆ ಅಮೋಘಸಿದ್ಧ ಸಂತಾನ ಫಲ ನೀಡುತ್ತಾನೆ. ಸೀತಾಳದಂಥ ಪೂಜಾರಿಯೆನ್ನಿಸಿಕೊಂಡಿರುವ ಅಮೋಘಸಿದ್ಧನಿಗೆ ಸಮುದರದಂಥ ಭಕ್ತನಾದ ಕುಂಬಾರ ರಾಮಯ್ಯನು ತನ್ನ ಮಗನ ಐದೆಸಿ ಕಾರ್ಯಕ್ರಮಕ್ಕೆ ಬರಬೇಕೆಂದು ಆಮಂತ್ರಿಸುತ್ತಾನೆ. ಅಮೋಘಸಿದ್ಧ ತಾನು ಹೋಗದೆ ತನ್ನ ಮಗನಾದ ಬಾಲಕ ಬಿಳಿಯಾನಿಸಿದ್ಧನನ್ನು ಕಲ್ಯಾಣಕ್ಕೆ ಕಳುಹಿಸಿಕೊಡುತ್ತಾನೆ.

ಬಂಡೆಗಲ್ಲೊಂದನ್ನು ಆನೆಯನ್ನಾಗಿಸಿ ಅದರ ಮೇಲೆ ಬಾಲಕ ಬಿಳಿಯಾನಿಸಿದ್ಧ ಕುಳಿತುಕೊಂಡು ಕಲ್ಯಾಣದ ಕಡೆಗೆ ಪಯಣ ಬೆಳೆಯಿಸುತ್ತಾನೆ. ದಾರಿ ಮಧ್ಯದಲ್ಲಿ ಕುರಿಕಾಯುವ ಕರಿಯಪ್ಪನೆಂಬುವವನು ಅಳುತ್ತ ಕುಳಿತಿರುತ್ತಾನೆ. ಅವನ ದುಃಖಕ್ಕೆ ಕಾರಣ ಏನು ಎಂದು ಕೇಳಿದರೆ ಕಲ್ಯಾಣದಲ್ಲಿ ತನಗಾಗುತ್ತಿರುವ ಅವಮಾನದ ಕತೆಯನ್ನು ಹೇಳುತ್ತಾನೆ. ಆಗ ತಗರ ಪವಾಡದ ಪ್ರಸಂಗ ಜರಗುತ್ತದೆ. ತನ್ನಲ್ಲಿದ್ದ ಭಂಡಾರವನ್ನು ಬಿಳಿಯಾನಿಸಿದ್ಧನು ಕರಿಯಪ್ಪನಿಗೆ ಕೊಟ್ಟು ಅದನ್ನು ಸತ್ತ ಕುರಿಯ ಮೇಲೆ ಸಿಂಪಡಿಲು ಹೇಳುತ್ತಾನೆ. ಕರಿಯಪ್ಪ ಭಂಡಾರ ಹೊಡೆಯುತ್ತಿದ್ದಂತೆ ಸತ್ತ ಕುರಿ ಬದುಕುತ್ತದೆ. ಯಥಾ ಪ್ರಕಾರ ಕಲ್ಯಾಣದ ಜನರಿಗೆ ಸತ್ತ ಗೂಳಿಯನ್ನು ಬದುಕಿಸಲಾಗುವುದಿಲ್ಲ. ಬಿಳಿಯಾನಿಸಿದ್ಧ ಭಂಡಾರ ಹೊಡೆದು ಸತ್ತ ಗೂಳಿಯನ್ನು ಬದುಕಿಸುತ್ತಾನೆ. ಹೀಗೆ ಕಲ್ಯಾಣದವರ ಮೇಲೆ ಅಮೋಗಿ ಪಂಗಡ ಪ್ರಥಮ ವಿಜಯ ಸ್ಥಾಪಿಸುತ್ತದೆ.

ನಂತರ ಕುಂಬಾರ ರಾಮಯ್ಯನ ಮನೆಯಲ್ಲಿ ಅವನ ಮಗನ ಐದೆಸಿ ಕಾರ್ಯಕ್ರಮದಲ್ಲಿ ಕೂಸಿಗೆ ಲಿಂಗಕಟ್ಟಲು ಬಿಳಿಯಾನಿಸಿದ್ಧ ಮುಂದಾದಾಗ ಅಲ್ಲಿದ್ದ ಜಾತಿ ಜಂಗಮರು ತಕರಾರು ತೆಗೆಯುತ್ತಾರೆ. ಕೊರಳಲ್ಲಿ ಲಿಂಗವಿದ್ದವರು ಮಾತ್ರ ಅನ್ಯರಿಗೆ ಲಿಂಗಧಾರಣೆ ಮಾಡಲು ಅರ್ಹರು ಅನ್ನುತ್ತಾರೆ. ಹಾಗಿದ್ದರೆ ಲಿಂಗವುಳ್ಳ ನೀವು ಕಟ್ಟಬನ್ನಿರಿ ಎಂದು ಕರೆಯುತ್ತಾನೆ. ಜಂಗಮರ ಕೊರಳಲ್ಲಿದ್ದ ಲಿಂಗಗಳೆಲ್ಲ ಮಾಯವಾಗಿರುತ್ತವೆ. ನಿನ್ನಲ್ಲಿ ಲಿಂಗವಿದೆಯೇ ಎಂದು ಅವರು ಕೇಳಿದಾಗ ಲಿಂಗಧಾರಿಯೇ ಆಗಿರದ ಬಿಳಿಯಾನಿಸಿದ್ಧನು ತನ್ನ ಅಂಗೈಯಲ್ಲಿ ಐನೂರು, ಮುಂಗೈಯಲ್ಲಿ ಮುನ್ನೂರು ಹಾಗೂ ರೋಮ ರೋಮದಲ್ಲೆಲ್ಲ ಲಿಂಗ ಮತ್ತು ಎದೆಯ ಒಳಗೆ ಆತ್ಮಲಿಂಗ ರೂಪದಲ್ಲಿದ್ದ ಸೋಮಲಿಂಗನನ್ನು ತೋರಿಸುತ್ತಾನೆ. ಹೀಗೆ ಕಲ್ಯಾಣದ ಜನ ಬಿಳಿಯಾನಿಸಿದ್ಧನಿಗೆ ಎರಡನೆಯ ಸಲ ಸೋಲನ್ನು ಅನುಭವಿಸುತ್ತಾರೆ.

ಈ ಕಥನವನ್ನು ಗಮನಿಸಿದಾಗ ಯಾರಿಗಾದರೂ ಅಮೋಘಸಿದ್ಧನು ಶಾಂತಮುತ್ಯಾ ಹಾಗೂ ಮಂಕ ಸಿದ್ಧರಿಗಿಂತ ಭಿನ್ನನಾಗಿರುವುದು ತಿಳಿದುಬರುತ್ತದೆ. ಮೂರು ಜನರು ಕಲ್ಯಾಣದ ಜನರನ್ನು ಮುಖಾ ಮುಖಿಯಾಗಿಸಿಕೊಂಡವರೆ. ಅವರಲ್ಲಿ ಇಬ್ಬರು -ಬಿಳಿಯಾನಿಸಿದ್ಧ ಹಾಗೂ ಶಾಂತಮುತ್ತ್ಯಾ ತಗರನ್ನು ಬದುಕಿಸುವ ಪವಾಡ ಮಾಡುತ್ತಾರೆ. ಶಾಂತಮುತ್ತ್ಯಾನು ತಗರನ್ನು ಬದುಕಿಸಲು 'ಭಸಿತ'ವನ್ನು ಬಳಸಿದರೆ ಅಮೋಘಸಿದ್ಧನ ಮಗನಾದ ಬಿಳಿಯಾನಿಸಿದ್ಧನು ಭಂಡಾರವನ್ನು ಬಳಸುತ್ತಾನೆ. ಅದೂ ಅಲ್ಲದೆ ಈ ಮೂವರಲ್ಲಿ -ಇಬ್ಬರು ಮಂಕಸಿದ್ಧ ಹಾಗೂ ಶಾಂತಮುತ್ತ್ಯಾ ಲಿಂಗಾಪೇಕ್ಷಿಗಳಾಗಿದ್ದಾರೆ. ಬಿಳಿಯಾನಿಸಿದ್ದ ಮಾತ್ರ ಲಿಂಗಧಾರಣೆ ಮಾಡಿಸುವ ಹಕ್ಕಿರುವವನಂತೆ ನಡೆದುಕೊಳ್ಳುತ್ತಲೇ ಲಿಂಗನಿರಾಕರಣೆ ಮಾಡುತ್ತಾನೆ.

ಒಟ್ಟು ಈ ಚರ್ಚೆಯ ಫಲಿತವನ್ನು ಹೀಗೆ ಗ್ರಹಿಸಬಹುದು. ಈ ಮೂರು ಪಂಗಡಗಳನ್ನು ಕಲ್ಯಾಣ ಒಂದಲ್ಲ ಒಂದು ರೀತಿಯಲ್ಲಿ ಕಾಡಿದೆ. 'ಕಲ್ಯಾಣ'ಕ್ಕೆ ಇವರ ಪ್ರತಿಕ್ರಿಯೆಗಳು ಭಿನ್ನವಾಗಿವೆ. ಶಾಂತಮುತ್ತ್ಯಾ ಪಂಗಡವು ಮುಕ್ಕಾಲು ಪಾಲು ಲಿಂಗಾಯತೀಕರಣಗೊಂಡಿದೆ. ಅವರಲ್ಲಿ ಉಳಿದಿರುವ ಕಂಬಳಿ ಅವರ ಕುರುಬ ಮೂಲವನ್ನು ನೆನಪಿಸುತ್ತದೆ. ಕರಿಕಂಬಳಿಯ ಜಾಡಿಯ ಜಾಗೆಯಲ್ಲಿ ಬಿಳಿ ಜಾಡಿಯನ್ನು ತಂದು ಕೊಂಡಿರುವುದನ್ನು ನೋಡಿದರೆ ಅವರು 'ಕುರುಬ'ದಿಂದ ಬಿಡಿಗಡೆಗೊಳಿಸಿಕೊಳ್ಳಲು ನಡೆಸಿದ ಪ್ರಯತ್ನ ಹಾಗೂ ಹಾಗಾಗುವಲ್ಲಿನ ವೈಫಲ್ಯವನ್ನು ಸೂಚಿಸುತ್ತದೆ. ಇವರಲ್ಲಿ ಭಂಡಾರ ಪೂರ್ತಿಯಾಗಿ ಮಾಯವಾಗಿದೆ. ಎಲ್ಲಮ್ಮ (ಭಂಡಾರ ಸಂಸ್ಕೃತಿಯವಳು) ತಮ್ಮ ಮನೆಗೆ ಬರುವುದಿಲ್ಲ ಎಂದು ಹೇಳಿಕೊಳ್ಳುವುದರ ಹಿಂದೆ ಭಂಡಾರದ ನಿರಾಕರಣೆ ಇರುವುದು ಸ್ಪಷ್ಟ.[೧೫] ಮಂಕ ಒಡೆಯರು ಚತುರಾರ್ಯರನ್ನು ಒಪ್ಪಿಕೊಂಡಂತೆ ತೋರುತ್ತಾರೆ. ಆದರೆ ಅಮ್ಮೋಗಿ ಒಡೆಯರು ಕುರುಬ ನೆಲೆಯನ್ನು ಗಟ್ಟಿಯಾಗಿಯೇ ಹಿಡಿದುಕೊಂಡಿದ್ದಾರೆ. ಹೀಗಿರುವುದಕ್ಕೆ ಕಾರಣವೆಂದರೆ -ಮೊದಲ ಎರಡು ಪಂಗಡಗಳು ಶರಣ ಚಳವಳಿಯ ಕಾವಿನಲ್ಲಿ ಕಲ್ಯಾಣವನ್ನು ಮುಖಾಮುಖಿ ಮಾಡಿಕೊಂಡಿರುವುದು ಹಾಗೂ ಮೂರನೆಯ ಪಂಗಡವು ಶರಣ ಚಳವಳಿ ತನ್ನ ಚಲನಶೀಲತೆಯನ್ನು ಕಳೆದುಕೊಂಡು ಸಾಂಸ್ಥೀಕರಣಗೊಳ್ಳಲು ಪ್ರಯತ್ನಿಸುತ್ತಿದ್ದ ಹದಿನೈದು ಹಾಗೂ ಹದಿನಾರನೆಯ ಶತಮಾನದಲ್ಲಿ ಕಲ್ಯಾಣವನ್ನು ಮುಖಾಮುಖಿ ಮಾಡಿಕೊಂಡಿರುವುದು. ಹದಿನೈದು ಹದಿನಾರನೆಯ ಶತಮಾನದಷ್ಟೊತ್ತಿಗೆ ಲಿಂಗಾಯತವನ್ನು ಒಪ್ಪಿಕೊಂಡ ಕೆಳವರ್ಗದ ಜನರ ಕೊರಳಲ್ಲಿ ಲಿಂಗವೇನೋ ಇತ್ತು. ಆದರೆ ಅವರು ನಿರೀಕ್ಷಿಸಿದ ಸಮಾನತೆ ಅವರಿಗೆ ದೊರೆತಿರಲಿಲ್ಲ. ಅವರು ಹೊರ ಲಿಂಗಾಯತರಾಗಿ ಉಳಿದುಕೊಂಡು ಉಡುವಲ್ಲಿ ಉಂಬಲ್ಲಿ ಸಿಕ್ಕ ಸಮಾನತೆ, ಕೊಡುವಲ್ಲಿ ಕೊಂಬಲ್ಲಿ ಅವರಿಗೆ ಇಲ್ಲದಂತಾಗಿತ್ತು. ಈ ಅಪಾಯವನ್ನು ಗಮನಿಸಿದ ಅಮ್ಮೋಗಿ ಒಡೆಯರು ತಮ್ಮ ಮೂಲವನ್ನು ಬಿಟ್ಟುಕೊಡದೇ ಗಟ್ಟಿಯಾಗಿ ಉಳಿದುಕೊಂಡರು. ಆದರೆ ಆಶ್ಚರ್ಯದ ಸಂಗತಿಯೆಂದರೆ ಇಂದಿನ ಅಮ್ಮೋಗಿ ಒಡೆಯರು ಲಿಂಗಧಾರಣೆ ಮಾಡಿಕೊಳ್ಳುತ್ತಿರುವುದು ಮತ್ತು ತಮ್ಮನ್ನು ಮೇಲುಮತದವರೆಂದು ಕರೆದುಕೊಳ್ಳುತ್ತ ಹಾಲುಮತದವರಿಂದ ಪ್ರತ್ಯೇಕಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು.

ಈ ಮೂರು ಪಂಗಡಗಳ ಸಧ್ಯದ ನಂಬಿಕೆ ಆಚರಣೆಗಳನ್ನು ಗಮನದಲ್ಲಿಟ್ಟುಕೊಂಡು ಅವರ ಭಿನ್ನತೆಯನ್ನು ಹೀಗೆ ಗುರುತಿಸಿಕೊಳ್ಳಬಹುದು:

ಅಮ್ಮೋಗಿ ಒಡೆಯರ ಪಂಗಡದವರು ಇಂದಿಗೂ ಕರಿಕಂಬಳಿಯನ್ನು ತಮ್ಮ ಹೆಗಲ ಮೇಲೆ ಹಾಕಿಕೊಳ್ಳುತ್ತಾರೆ. ಇದನ್ನು ಅವರು ಹೋಮದ ಕಂಬಳಿ ಎಂದು ಕರೆಯುತ್ತಾರೆ. ಈ ಕಂಬಳಿಗೆ ನಾಲ್ಕು ಏಣುಗಳಿರುತ್ತವೆ. ಅವುಗಳಲ್ಲಿನ ಮೂರು ಏಣುಗಳನ್ನು ಬ್ರಹ್ಮ, ವಿಷ್ಣು, ಮಹೇಶ್ವರರ ಸಂಕೇತವೆಂದೂ ನಾಲ್ಕನೆಯ ಏಣನ್ನು ಪಾರ್ವತಿಯ ಮುತ್ತಿನ ಎಳೆಯೆಂದು ಹೇಳುತ್ತಾರೆ. ಈ ಪಂಗಡದವರು ತಮ್ಮಲ್ಲಿರುವ ಈ ಕಂಬಳಿ ಸ್ವರ್ಗದಿಂದ ಬಂದದ್ದು ಎಂದು ಅಚಲವಾಗಿ ನಂಬಿದ್ದಾರೆ. ಅಂಥ ಕಂಬಳಿಯ ಕುರಿತು ಅವರಲ್ಲಿ ಒಂದು ಹಾಡು ದೊರೆಯುತ್ತದೆ.

ಶಿವನೆ ನಮ್ಮಯ ದ್ಯಾವರ ಬಂದಾವ ಘೇ
ಸ್ವಾಮಿ ನಮ್ಮಯ ದ್ಯಾವರ ಬಂದಾವ ಘೇ
ಕಂಬಳೆಪ್ಪ ಕಂಬಳಿ ಅರತವಗ ಕರಿಕಂಬಳಿ
ಅರತವಗ ಕರಿಕಂಬಳಿ ಅರಿದವಗ ಜೀವಕ್ಕ ಮುಂಬಳಿ
ಇಟ್ಟಲ್ಲೆ ಇರುವುದು ಕಂಬಳಿ ಕರೆದಲ್ಲಿ ಬರುವುದು ಕಂಬಳಿ
ಹಾವಾಗಿ ಹರಿದ್ಯಾಡೋ ಕಂಬಳಿ ಬೆಂಕ್ಯಾಗಿ ಉರಿವುದು ಕಂಬಳಿ
ಬೆಂಕ್ಯಾಗಿ ಉರಿವುದು ಕಂಬಳಿ ಚೇಳಾಗಿ ಚಿಮ್ಮೊದು ಕಂಬಳಿ
ಅಂಥಾ ಕಂಬಳಿ ನೋಡರಿ ಯಾವಃಃ ಜಾಗದ ಮ್ಯಾಲ್ಯಾದ
ಕೈಲಾಸ ಮಂಡಲದೊಳಗ್ಯಾನ ಕಾಜಿನ ಕಂಬದ ಒಳಗ್ಯಾನ
ಕಾಜಿನ ಕಂಬದ ಒಳಗ್ಯಾನೋ ಬೆಂಕ್ಯಾಗಿ ಉರಿವುತ್ತಿದ್ದಾವೋ
ಅಂಥ ಕಂಬಳಿ ನೋಡರಿ ಯಾವ ಪಡದಾರೇನಯ್ಯ
ನನ್ನಪ್ಪೋ ನನ ಮಾರಾಯ ತಂದಿ ಅಮ್ಮೋಗಿ ಸಿದ್ಧಾನೋ
ತಂದಿ ಅಮ್ಮೋಗಿ ಸಿದ್ಧಾನೋ ಅವರೇ ಪಡದಾರೇನಯ್ಯ[೧೬]

ಇಂಥ ಕರಿಯ ಕಂಬಳಿಯ ಬಗೆಗೆ ಅವರಿಗೆ ಅಪಾರವಾದ ಗೌರವ ಭಕ್ತಿ ಇದೆ. ಹಾಗಂತಲೆ ತಮ್ಮ ಸಾಂಸ್ಕೃತಿಕ ನಾಯಕನನ್ನು ಕುರಿತು ಹೇಳುವಾಗ ಕರಿಕಂಬಳಿ ಒಡೆಯ, ಕಾಲೆ ಕಂಬಳಿವಾಲ ಹಾಗೂ ಕಂಬಳಿಕಂದ ಎಂದು ಅಭಿಮಾನದಿಂದ ಕರೆಯುತ್ತಾರೆ.

ಶಾಂತ ಒಡೆಯ ಪಂಗಡದವರಿಗೆ ಹಾಗೂ ಮಂಕ ಒಡೆಯ ಪಂಗಡದವರಿಗೆ ಮೂರೇಣಿನ ಕಂಬಳಿ ಪವಿತ್ರವಾದುದಾಗಿದೆ. ಆದರೆ ಇವರು ತಮ್ಮದು ಬಿಳಿಜಾಡಿ ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ.

ಈಗಾಗಲೇ ಗಮನಿಸಿರುವಂತೆ ಅಮ್ಮೋಗಿ ಒಡೆಯರದ್ದು ಪಕ್ಕಾ ಭಂಡಾರ ಸಂಸ್ಕೃತಿ. ಅದು ಇಂದಿಗೂ ಹಾಗೆ ಉಳಿದುಕೊಂಡು ಬಂದಿದೆ. ಅಮ್ಮೋಗಿ ಒಡೆಯರ ಬಗಲಲ್ಲಿ ಇಂದಿಗೂ ಭಂಡಾರ ಚೀಲ ಉಳಿದುಕೊಂಡಿದೆ. ಇವರ ಭಂಡಾರ ಮೋಹವನ್ನು ಕಾಣಬೇಕಾದರೆ ಪ್ರತಿ ವರ್ಷ ಅರಕೇರಿ ಸಮೀಪದ ಮುಮ್ಮೆಟಗುಡ್ಡದಲ್ಲಿ ಜರುಗುವ ಅಮೋಘಸಿದ್ಧನ ಜಾತ್ರೆಗೆ ಹೋಗಬೇಕು. ಅಂದು ಅಮೋಘಸಿದ್ಧ ಪರಂಪರೆಯ ನೂರಾರು ಪಲ್ಲಕ್ಕಿಗಳು ಬಂದು ಸೇರಿರುತ್ತವೆ. ಪಲ್ಲಕ್ಕಿಗಳ ಭೆಟ್ಟಿ ಇಲ್ಲಿನ ವಿಶೇಷ ಕಾರ್ಯಕ್ರಮ. ಪಲ್ಲಕ್ಕಿಯೊಳಗಿನ ಒಬ್ಬ ದೇವರು ಇನ್ನೊಬ್ಬನನ್ನು ಭೆಟ್ಟಿಯಾದರೆ ಬಿಟ್ಟು ಹೋಗಲು ಮನಸ್ಸೇ ಇಲ್ಲದವರಂತೆ ಒಂದಕ್ಕೊಂದು ಅಪ್ಪಿಕೊಂಡು ನಿಲ್ಲುವ ಸನ್ನಿವೇಶ ತುಂಬಾ ರೋಚಕವಾದುದು(ಈ ಕುರಿತು ಮುಂದಿನ ಅಧ್ಯಾಯ 'ಜಾತ್ರೆ, ಉತ್ಸವ, ನಂಬಿಕೆ, ಆಚರಣೆ'ಯಲ್ಲಿ ವಿವರವಾದ ಮಾಹಿತಿ ಒದಗಿಸಲಾಗಿದೆ). ಪಲ್ಲಕ್ಕಿಗಳ ಭೆಟ್ಟಿಯನ್ನು ನೋಡಲು ಬಂದ ಭಕ್ತಾದಿಗಳು ಪಲ್ಲಕ್ಕಿಗೆ ಭಕ್ತಿಯಿಂದ ಉಡಿಯಲ್ಲಿ ಕಟ್ಟಿಕೊಂಡು ಬಂದ ಭಂಡಾರ ಹೊಡೆಯುತ್ತಾರೆ. ಮೂರು ನಾಲ್ಕು ತಾಸು ನಡೆಯುವ ಈ ಜಾತ್ರಾ ಆಚರಣೆಯ ಸಂದರ್ಭದಲ್ಲಿ ಭಂಡಾರದ ಧೂಳೂ ನೆಲಮುಗಿಲನ್ನು ಏಕಗೊಳಿಸಿರುತ್ತದೆ. ಮರುದಿವಸ ಈ ಜಾಗೆಗೆ ಬಂದು ನೋಡಿದರೆ ಇಡಿ ನೆಲವೆಲ್ಲ ಭಂಡಾರದಿಂದ ಆವರಿಸಿರುತ್ತದೆ. ಭಂಡಾರ ಸಂಸ್ಕೃತಿಗೂ ಅಮೋಘಸಿದ್ಧ ಪರಂಪರೆಯವರಿಗೂ ಇರುವ ಅವಿನಾಭಾವ ಸಂಬಂಧವನ್ನು ಸೂಚಿಸುವ ಹಾಡೊಂದು ಹೀಗಿದೆ:

ಶಿವನೆ ಸೋಮಯ್ಯನ ಶಿಸುಮಗ ಹರಣದ ಕೆರಿ ನಮ್ಮೊಡಿಯಾನೆ
ಹೂವಿನೊಳಗವ ಹುದುಗ್ಯಾನೆ ಮಾಲ್ಯೊಳಗ ಮಾರಿ ತೋರ್‍ಯಾನೆ
ಮಾಲ್ಯೊಳಗ ಮಾರಿ ತೋರ್‍ಯಾನ ದೇವರ ಭಂಡಾರದೊಳಗವ ಬೆವತಾನೆ[೧೭]

ಅದೂ ಅಲ್ಲದೆ ಭಂಡಾರ ಸಂಸ್ಕೃತಿಯ ದೇವತೆಗಳಾದ ಮಣ್ಣೂರ ಎಲ್ಲಮ್ಮ ಹಾಗೂ ಬಾಳೇದ ಖಂಡರಾಯ ಇವರು ಅಮೋಘಸಿದ್ಧ ಕಥನ ಭಾಗದ ಅವಿಭಾಜ್ಯ ಅಂಗವಾಗಿದ್ದಾರೆ.

ಆದರೆ ಶಾಂತಮುತ್ತ್ಯಾ ಪಂಗಡದವರಲ್ಲಿ ಭಂಡಾರದ ಸುಳಿವೇ ಇಲ್ಲ. ಕರಿಕಂಬಳಿಯ ಜಾಗೆಯಲ್ಲಿ ಬಿಳಿಜಾಡಿ ತಂದುಕೊಂಡಿರುವ ಇವರು ಭಂಡಾರದ ಜಾಗೆಯಲ್ಲಿ ಭಸಿತವನ್ನು ತಂದುಕೊಂಡಿದ್ದಾರೆ. ಅದೂ ಅಲ್ಲದೆ ತಮ್ಮಲ್ಲಿ ಭಂಡಾರ ನಡೆಯುವುದಿಲ್ಲವೆಂದೂ ಹೇಳುತ್ತಾರೆ. ಎಲ್ಲಮ್ಮ ದೇವತೆ ಶಾಂತಮುತ್ತ್ಯಾನ ಮೂಲನೆಲೆ ಸರೂರ(ಮುದ್ದೇಬಿಹಾಳ ತಾಲೂಕ)ನ ಎಲ್ಲ ಮನೆಗಳಿಗೂ ಪಡಲಿಗೆ ಹೊತ್ತುಕೊಂಡು ಹೋಗಬಹುದು. ಆದರೆ ಶಾಂತಮುತ್ತ್ಯಾನ ಪಂಗಡದವರ ಮನೆಗೆ ಅಪ್ಪಿತಪ್ಪಿಯೂ ಹೋಗುವುದಿಲ್ಲ.[೧೮]

ಶಾಂತಒಡೆಯ ಪಂಗಡ ಹಾಗೂ ಅಮ್ಮೋಗಿ ಒಡೆಯ ಪಂಗಡದವರು ಇಬ್ಬರೂ ಲಿಂಗಧರಿಸುತ್ತಾರೆ. ಲಿಂಗನಿರಾಕರಣೆ ಮಾಡಿದ ಅಮ್ಮೋಗಿ ಒಡೆಯರ ಪಂಗಡದವರು ಯಾವ ಕಾಲಘಟ್ಟದಲ್ಲಿ ಲಿಂಗಧಾರಣೆ

ಮಾಡಲು ಪ್ರಾರಂಭಿಸಿದರು ಎನ್ನುವುದಕ್ಕೆ ಸ್ಪಷ್ಟವಾದ ಮಾಹಿತಿ ಇಲ್ಲ. ಆದರೆ ಕಲಘಟಗಿಯ ಸಿದ್ಧಯ್ಯ ಗುರುಮಠ ಅವರಲ್ಲಿ ದೊರೆತ ಕಾಗದದ ಸುರುಳಿಯಲ್ಲಿ ದೊರೆಯುವ ಮಾಹಿತಿಯ ಪ್ರಕಾರ ಅಮೋಘಸಿದ್ಧನ ಮೊಮ್ಮಕ್ಕಳಲ್ಲಿ ಒಬ್ಬನಾದ ಬ್ರಹ್ಮ ಒಡೆಯನಿಗೆ ಈ ಅಧಿಕಾರವನ್ನು ನೀಡಲಾಗಿದೆ ಎಂದು ತಿಳಿದುಬರುತ್ತದೆ.

“ಸೂರ್ಯಚಂದ್ರರು ಇರುವವರೆಗೂ ನಡಿಯಬೇಕು ಇವನ ಹೊರತು ನಮ್ಮ ಹಾಲುಮತಕ್ಕೆ ಶ್ರೀ ಗುರುಸ್ವಾಮಿಗಳು ಇವರೇ. ಇವರ ಹೊರತು ಯಾರು ಇರುವುದಿಲ್ಲಾ. ಹಂಪಿಯ ಸ್ಥಳದಲ್ಲಿ ಆದ ಮಾಂಜರ. ೫೦೦೦ ವರ್ಷದ ಹಿಂದೆ ಆದ ಮಾಂಜರ. ಅಮ್ಮೋಗಿಸಿದ್ಧನು ಹಾಲಿನಲ್ಲಿ ಹುಟ್ಟಿದ್ದರಿಂದ ಹಾಲುಮತವನ್ನು ಉದ್ಧರಿಸಲಿಕ್ಕೆ ಅಮರಲೋಕದಿಂದ ಅರಕೇರಿ ಗ್ರಾಮಕ್ಕೆ ಬಂದಿರುವನು. ಆದಿಗೊಂಡಗೌಡನು ಮತ್ತು ಬೀದಿಗೊಂಡಗೌಡನು ದ್ಯಾಮಗೊಂಡಗೌಡನು ಮತ್ತು ಎಷ್ಟೋ ಮಂದಿ ದೇವತರು ಮತ್ತು ಸಿದ್ಧಯೋಗಿಗಳು ಮತ್ತು ೬೩ ಮಂದಿ ಶಿವಶರಣರು, ತೊಂಬತ್ತೇಳು ನೂರು ಮಂದಿ ಗಣಂಗಳು ಮತ್ತು ಮಾನಾಡದೈವದವರು ಕೂಡಿಕೊಂಡು ಸತ್ಯವಾಕ್ಯವನ್ನು ನುಡಿದು ಹೇಳುತ್ತಾರೆ. ಹಿಂದಕ್ಕೆ ಕಲ್ಯಾಣ ಪಟ್ಟಣದಲ್ಲಿ ಶಿವಾಚಾರ ಧರ್ಮದವರು ಕುರುಬರನ್ನು ಏಳು ಬೇಲಿ ಹೊರತು ಇಟ್ಟಿದ್ದರಿಂದ ಅವಧೂತಸಿದ್ಧನು, ಬಿಳೀನಿಸಿದ್ಧನು ತಮ್ಮ ಶಿದ್ಧಾಟಿಕೆಯಿಂದ ಶಿದ್ಧ ಪವಾಡವನ್ನು ಮಾಡಿ ಏಳು ಬೇಲಿ ಹೊರತು ಇದ್ದ ಕುರುಬರನ್ನು ಶಿವಶರಣರ ಕಡೆಯಿಂದ ಮತ್ತು ತೊಂಬತ್ತೇಳು ನೂರು ಮಂದಿ ಗಣಂಗಳ ಕಡೆಯಿಂದ ಸತ್ಯ ಅಧಿಕಾರವನ್ನ ಕುರುಬರಿಗೆ ಕೊಡಿಸಿದರು. ಮೊದಲು ಕುರುಬರ ಕೂರಿಗೆ ಭೂಮಿಯಲ್ಲಿ ಹೋದರೆ ಆ ವರುಷ ಸುಕಾಲವು. ಮತ್ತು ಯಾವ ಕಾರ್ಯವನ್ನು ಮಾಡಲಿಕ್ಕೆ ಹೋಗುವ ಸಮಯದಲ್ಲಿ ಕುರುಬನು ಇದುರಿಗೆ ಬಂದರೆ ಆ ಕಾರ್ಯವು ಸಿದ್ಧಾಂತವಾಗುವುದು. ಕುರುಬರ ಕುರಿ ದಡ್ಡಿಯು ಊರ ಮೇಲೆ ಇರತಕ್ಕದ್ದು. ಇಷ್ಟು ಅಧಿಕಾರವನ್ನು ಕುರುಬರಿಗೆ ಕೊಡಿಸಿದರು. ಅಂದ ಮೇಲೆ ನಾಲ್ಕು ಮಂದಿ ಧರ್ಮರ ಪೈಕಿ ಸಂಣವನು ಜ್ಯೋತಿ ಕಣ್ಣಪ್ಪ ವಡೆಯನ ಮಗನಾದ ಬ್ರಹ್ಮಯ್ಯ ವಡೆಯನು. ರುದ್ರಾಕ್ಷಿಯನ್ನು ನಂಬಿ ಇಷ್ಟಲಿಂಗದೇವ ಆದಂಥ ಮಂತ್ರ ಜಾತ ವಡೆಯನು ಹಾಲುಮತದವರಿಗೆ ಲಿಂಗವನ್ನು ಕಟ್ಟುವುದಕ್ಕೆ ಅಧಿಕಾರವನ್ನು ನೇಮಿಸಿರುತ್ತದೆ. ಅವನ ಹೊರತು ಮತ್ಯಾವನಿಗೂ ಅಧಿಕಾರವಿಲ್ಲಾ. ಅರಕೇರಿ ಬ್ರಹ್ಮಯ್ಯ ವಡೆಯನ ಮಗನಾದ ಪಟ್ಟದ ಸೋಮಯ್ಯವಡೆಯನು ಹಾಲುಮತಕ್ಕೆ ಶ್ರೀ ಗುರುಸ್ವಾಮಿಗಳು, ಅಮ್ಮೋಗಿಸಿದ್ಧನ ಮಕ್ಕಳು ನಾಲ್ಕು ಮಂದಿ ಮತ್ತು ಮೊಮ್ಮಕ್ಕಳು ಇಪ್ಪತ್ತೊಂದು ಮತ್ತು ಇಪ್ಪತ್ತೊಂದು ಪೈಕಿ ಸಣ್ಣವನಿಗೆ ಅಧಿಕಾರವನ್ನು ನೇಮಿಸಿರುತ್ತದೆ.

ಶ್ರೀ ಸಮಾಪ್ತಿಯು”[೧೯]

ಈ ಸುರುಳಿ ಕಾಗದವು ಹಲವಾರು ಸಂದಿಗ್ಧ ಸಂಗತಿಗಳನ್ನು ಒಳಗೊಂಡು ಅದರ ಅಧಿಕೃತತೆಯ ಬಗೆಗೆ ಸಂಶಯ ಮೂಡುವಂತೆ ಮಾಡುತ್ತದೆ. ಆದರೆ ಒಂದು ಅಂಶ ನಮ್ಮ ಗಮನ ಸೆಳೆಯುವಂಥದಾಗಿದೆ. ಲಿಂಗ ಕಟ್ಟಿಕೊಳ್ಳಲು ಬಯಸಿದ ಕುರುಬರಿಗೆ ಲಿಂಗಧಾರಣೆಯನ್ನು ಮಾಡಿಸುವ ಅಧಿಕಾರವನ್ನು ಅಮ್ಮೋಗಿ ಒಡೆಯರ ಪಂಗಡದವರು ಹೊಂದಿದ್ದರು ಎನ್ನುವುದು ಇಲ್ಲಿನ ಹೊಸ ಸಂಗತಿ.

ಶಾಂತ ಒಡೆಯರ ಪಂಗಡದವರಿಗೆ ನಿಮಗೆ ಲಿಂಗಧಾರಣೆ ಯಾರು ಮಾಡುತ್ತಾರೆ ಎಂದು ಕೇಳಿದರೆ ನಮ್ಮಲ್ಲಿಯೇ ಯಾರಾದರೂ ಹಿರಿಯ ಒಡೆಯರು ಮಾಡಿಸುತ್ತಾರೆ ಎಂದು ಹೇಳಿದರು.[೨೦] ಇದನ್ನೆಲ್ಲ ಗಮನಿಸಿದರೆ ಇವರೆಲ್ಲ ಡಾ. ಎಂ.ಎಂ.ಕಲಬುರ್ಗಿ ಅವರು ವಿಭಾಗೀಕರಿಸಿರುವಂತೆ ಹೊರ ಲಿಂಗಾಯತ ಪಂಗಡಕ್ಕೆ ಸೇರಿದವರು ಅನ್ನಿಸುತ್ತದೆ.[೨೧]

ಅಮ್ಮೋಗಿ ಒಡೆಯರ ಪಂಗಡದವರ ಕೈಯಲ್ಲಿ ನೇಮದ ಬೆತ್ತವಿರುತ್ತದೆ. ಶಾಂತ ಒಡೆಯರ ಪಂಗಡದವರ ಕೈಯಲ್ಲಿ ಅಂಥ ಬೆತ್ತವಿದ್ದಂತೆ ಕಂಡುಬರುವುದಿಲ್ಲ. ನೇಮದ ಬೆತ್ತ ಹೆಸರೇ ಸೂಚಿಸುವಂತೆ ಅಮ್ಮೋಗಿ ಒಡೆಯರ ಪಂಗಡದವರು ಕಟ್ಟು ನಿಟ್ಟಿನ ನಿಯಮಗಳನ್ನು ಪಾಲಿಸುತ್ತಾರೆ(ಇವರು ಪಾಲಿಸುವ ನಿಯಮಗಳ ಕುರಿತು ಜಾತ್ರೆ, ಉತ್ಸವ, ನಂಬಿಕೆ, ಆಚರಣೆ ಅಧ್ಯಾಯದಲ್ಲಿ ವಿವರವಾಗಿ ಬರೆಯಲಾಗುತ್ತದೆ). ಈ ಬೆತ್ತವನ್ನು ಅಮೋಘಸಿದ್ಧನು ಕೈಲಾಸದಿಂದಲೇ ಪಡೆದು ತಂದಿದ್ದಾನೆ ಎಂದು ಅವರು ನಂಬಿದ್ದಾರೆ. ನೇಮದ ಬೆತ್ತ, ಹೋಮದ ಕಂಬಳಿ, ಭಂಡಾರ ಭರಣಿ ಇವು ಅಮ್ಮೋಗಿ ಒಡೆಯರ ಪಂಗಡದವರ ಲಾಂಛನಗಳಾದರೆ ಶಾಂತ ಒಡೆಯರ ಪಂಗಡದವರ ಲಾಂಛನಗಳು ಶಂಖ, ಜಾಗಟಿ ಹಾಗೂ ತ್ರಿಶೂಲ.

ಎರಡೂ ಒಡೆಯರ ಪಂಗಡದವರು ಮಳೆ ಬೆಳೆ ಕುರಿತು ಹೇಳಿಕೆ ಮಾಡುತ್ತಾರೆ. ಅಮ್ಮೋಗಿ ಒಡೆಯರ ಪಂಗಡದವರು 'ಕಲ್ಲೂರ ಅಮೋಘಸಿದ್ಧನ ಹೇಳಿಕೆ ಅಂದರೆ ಕಲ್ಲ ಅರಿಯ ಮೇಲೆ ಮೇಣದ ಗೂಟ ಜಡಿದಂತೆ' ಎಂದು ತಮ್ಮ ಹೇಳಿಕೆಯ ಸಾಮರ್ಥ್ಯದ ಹೆಗ್ಗಳಿಕೆಯನ್ನು ವ್ಯಕ್ತಪಡಿಸುತ್ತಾರೆ. ಇವರು ಹೇಳಿಕೆ ಮಾಡುವಾಗ ಕಡ್ಡಾಯವಾಗಿ ತಮ್ಮ ಮುಖಕ್ಕೆ ದೇವರ ಮುಖ ಕಟ್ಟಿಕೊಂಡು ಹೇಳಿಕೆ ಮಾಡಿದರೆ ಶಾಂತ ಒಡೆಯರ ಪಂಗಡದವರು ಯಾವುದೇ ಮುಖ ಕಟ್ಟದೆ ಹೇಳಿಕೆ ಮಾಡುತ್ತಾರೆ. ಅಮ್ಮೋಗಿ ಒಡೆಯರ ಪಂಗಡದವರು ಡೊಳ್ಳು ಏರಿ ಹೇಳಿಕೆ ಮಾಡಿದರೆ, ಶಾಂತ ಒಡೆಯರ ಪಂಗಡದವರು ಬಂಡೆಗಲ್ಲಿನ ಮೇಲೆ ನಿಂತು ಇಲ್ಲವೆ ಮುಳ್ಳು ಕಂಟಿಯನ್ನು ಏರಿ ಹೇಳಿಕೆ ಮಾಡುತ್ತಾರೆ.

ಅಮ್ಮೋಗಿ ಪಂಗಡದವರಲ್ಲಿ ಪುಣ್ಯದ ಮಕ್ಕಳು, ವರವಿನ ಮಕ್ಕಳು ಎಂಬ ಎರಡು ಕವಲುಗಳಿವೆ. ಶಾಂತ ಒಡೆಯರಲ್ಲಿ ಅಂಥ ಕವಲುಗಳು ಇಲ್ಲ. ಅಮ್ಮೋಗಿ ಒಡೆಯರಲ್ಲಿ ಅರಕೇರಿ ಅರಮನಿ, ಭೀವರಗಿ ಗುರುಮನಿ ಮಾಯಿ ಮಕಣಾಪುರ ಸಿಂಹಾಸನ ಗದ್ದಿಗೆ ಕಲ್ಲೂರ ಕಡಿಮಠವೆಂಬ ಘೋಷ ವಾಕ್ಯವಿದೆ. 'ಹಿರಿತನಕ್ಕ ಹಿರೂರ ಗುರುತನಕ್ಕ ಸರೂರ ದೇಶಕ್ಕ ದೊಡ್ಡದು ಕ್ಯಾಣಿಗನೂರು' ಎಂದು ಶಾಂತ ಒಡೆಯರು ಉಗ್ಗಡಿಸುತ್ತಾರೆ.

ಅಮ್ಮೋಗಿ ಒಡೆಯರಲ್ಲಿ ಭೂತಾಳಿಸಿದ್ಧನೆಂಬ ಸೇವಕನಿದ್ದಾನೆ. ಈ ಸೇವಕ ಅತ್ಯಂತ ಶಕ್ತಿಶಾಲಿ ಯಾಗಿದ್ದಾನೆ. ಈತ ಚಂದ್ರರೂಪಿಯಾಗಿದ್ದಾನೆ. ರಕ್ತ ವರ್ಣದಿಂದ ಅವನ ಗುಂಡುಕಲ್ಲು ಅಲಂಕೃತವಾಗಿರುತ್ತದೆ. ಇದು ಅವನಿಗರ್ಪಿಸುವ ಮಾಂಸದ ಎಡೆಯ ಸಂಕೇತವಾಗಿರಬಹುದು. ಶಾಂತ ಒಡೆಯರಿಗೆ ಅಂಥ ಯಾವುದೇ ಸೇವಕನಿಲ್ಲ. ಅಮ್ಮೋಗಿ ಒಡೆಯರ ಭೂತಾಳಸಿದ್ಧನ ಗುಡಿಗೆ ಛತ್ತು ಇರುವುದಿಲ್ಲ. ಅವನನ್ನು ಬಯಲು ಭೂತಾಳಸಿದ್ಧ ಎಂದು ಕರೆಯುತ್ತಾರೆ. ಇದು ಅಮ್ಮೋಗಿ ಒಡೆಯರ ಫ್ಯೂಡಲ್ ಧೋರಣೆಯ ಸಂಕೇತ

ವಾಗಿರಬಹುದು. ಯಜಮಾನನಾದವನು ಸರ್ವ ತೊಡಕುಗಳಿಂದ ಮುಕ್ತನಾದವನು. ಅಂಥ ಭಾಗ್ಯ ಸೇವಕನಿಗೆ ಇರಬಾರದು ಎನ್ನುವ ಮನೋಭಾವ ಇಲ್ಲಿ ಕೆಲಸ ಮಾಡುತ್ತಿರುತ್ತದೆ. ಭೂತಾಳ ಸಿದ್ಧನನ್ನು ಪ್ರಧಾನಿ ಎಂದು ಕರೆಯುತ್ತಾರಾದರೂ ಅದು ಬಾಯಿಮಾತಿನ ಸಾಂತ್ವನವಾಗಿದೆ.

ಮಂಕ ಒಡೆಯ ಪಂಗಡದವರನ್ನು ಬೇರೆ ಬೇರೆ ಕಾಲಘಟ್ಟದಲ್ಲಿ ಶಾಂತೊಡೆಯ ಪಂಗಡದವರು ಹಾಗೂ ಅವ್ಮೋಗಿ ಒಡೆಯ ಪಂಗಡದವರು ಕುರುಬರ ಗುರುಸ್ಥಾನದಿಂದ ಹೊರಗೆ ತಳ್ಳುವ ಪ್ರಯತ್ನ ನಡೆಯಿಸಿರುವುದನ್ನು ನಾವು ಕಾಣುತ್ತೇವೆ. ಮಂಕ ಒಡೆಯರು ಕುರುಬರಿಗೆ ಗುರುವೆಂಬುದನ್ನು ಬಿಳಿಸುಳ್ಳು ಎಂದು ಹೇಳುತ್ತದೆ ಶಾಂತ ಒಡೆಯ ಪಂಗಡದ ಪರವಾಗಿರುವ ಒಂದು ತುರುವೆಕೆರೆಯ ತಾಮ್ರಶಾಸನ.[೨೨] ಪ್ರಸ್ತುತ ತಾಮ್ರ ಶಾಸನ ಶಾಂತ ಒಡೆಯ ಪಂಗಡ ಹಾಗೂ ಮಂಕ ಒಡೆಯ ಪಂಗಡದ ಮಧ್ಯದಲ್ಲಿ ಗುರುತನದ ಬಗೆಗೆ ನಡೆದ ವ್ಯಾಜ್ಯದ ಬಗೆಗೆ ಹೇಳುತ್ತದೆ. ಆ ತಾಮ್ರ ಶಾಸನದ ಕೆಲ ಸಾಲುಗಳನ್ನು ಗಮನಿಸಿದರೆ ಮೇಲೆ ಹೇಳಿದ ನನ್ನ ಮಾತಿಗೆ ಪುಷ್ಠಿ ದೊರೆಯುತ್ತದೆ.

"........ಸಮಸ್ತ ಸಭೆಗಳು ಸಮ / ಸ್ತರ ಸದಚರದಲ್ಲಿ ಕುಳಿತು ಧರ್ಮಧರ್ಮದಲ್ಲಿ ನ್ಯಾಯವಾಗಿಸಿ ವಿವರ / ಉಬೆಯ ವಾದಿಗಳ ಮಥ (ಮತ) ಕೇಳಿದ ವಿವರ / ಮಂಕನವರು ಆಡಿದ ಮಾತು / ತಮ್ಮ ಗುರು ಸೊಂನಲಾಪುರದ ಸಿದ್ಧರಾಮದೇವರು /.....[೨೩]

* * *

....ಆಮೇಲೆ ಸಭೆ ಸಮಸ್ತರು ಶಾಂತ ಮುತ್ತೈನವರು ಕೇಳಿದ ಮಾತು ನಿಂಮ / ಗುರು ಆರು ಯಂದು ಕೇಳಲಾಗಿ ಶಾಂ / ತಮುತ್ತೈನವರು ಆಡಿದ ಮಾತು / ನಂಮ ಗುರು ರೇವಣಸಿದ್ಧೇಶ್ವರದೇವರು[೨೪]

* * *

ಅಂದು ಮೊದಲು ನಂಮ ಗುರು / ರೇವಣಸಿದ್ದೇಸ್ವರ ದೇವರು ಯಂದು ಶಾಂತಮುತ್ತೈಯ್ಯನವರು ಆಡಿದರು/ ಆಡಲಾಗಿ/ ಸಭೆ ನಿವು ಕುರುಬರಿಗೆ ನಿವು ಗುರುವಾದುದು ಹೆಗೆಯಂದು ನಿಮಗೆ ಮುರುಹು ಮುದ್ರೆ ಮೂರಡಿಯ ಕಂತೆ ಬಂದುದು ಹೆಗೆಯೆಂದು ಸಭೆ ಕೆಳಲಾಗಿ / ....ಬ / ಸವಂಣನು ಮಹಾಮಹಂತು ಸರಣರು ಮೆಚ್ಚಿ ಮುರುಹು ಮುದ್ರೆ ಮೂರಡಿಯ / ಕಂತಿಯನು ಕೊಟ್ಟು ಹೊರ ಹಾ / ಕಿದ ಕುರುಬರನು ಕುಲವನು ವಳಿಯಕೆ ತೆಗೆದುಕೊಂಡು ಕುರುಬರೆಲ್ಲರಿಗೂ / ಗುರುವಾಗಿರುಯೆಂದು / ಆ ಕುರುಬರಿಗೆ ವಿಭೂತಿ ಧರಿಸಿ ಕೊಂಡು ಯಿರಿ ಯಂದರು[೨೫]

* * *

ಮಹಾಮಹಂತು ಮಂಕನವರ ಕ / ರೆದು ನಿಮಗೆ ಮುರು ಹು ಮುದ್ರೆ ಮೂರಡಿ ಕಂತೆ ಬಂದುದು ಹೀಗೆ ಕುರುಬರಿಗೆ ಗುರುವಾದುದು ಹೀಗೆ ಯಂದು ಕೇಳಲಾಗಿ, ಮಂಕನವರು ಆ / ಆಡಿದ ಮಾತು. ಕೋಡುಗಲ್ಲಿನ ಮೇಲೆ ಹಂನೆರಡು ಸೂಜಿ ನಿಲಿಸಿ ಅದರ ಮೇಲೆ / ಹಂನೆರಡು ಬಟ್ಟಲಿರಿಸಿ ಆ ಸೂಜಿ ಬಟ್ಟಲ ಮೇಲೆ

ಹಂನೆರಡು / ವರುಷ ತಪಸ ಮಾಡಲಾಗಿ ಈಶ್ವರನು ಮೆಚ್ಚಿ ಪ್ರಸಂನನಾಗಿ ನಮಗೆ / ಮುರುಹು ಮುದ್ರೆ ಮೂರಡಿಯ ಕಂತೆಯನು ಕೊಟ್ಟು ಕುರ್ರುಬ / ಗುಲಕೆ ಗುರುವಾಗಿರುಯೆಂದು ಮಂಕನವರು ಆಡಲಾಗಿ ಸಭೆ ಸಮಸ್ತರು ....ಮಂಕನವರ / ಮಾತು ಬಿಳಿಸೋಲವೆಂದು ಕಟಿಕಿಯ ಮಾಡಿದರು .....[೨೨]

* * *

.... ನಿನಗೆ (ಮಂಕನವರಿಗೆ) / ಗುರುತನಕೆ ಕೆಲಸವಿಲ್ಲಯಂದು ಸಭೆ ಯನಲಾಗಿ / ಹಾಲುಮತದ ಕುರುಬ ಕುಲಕೆ ಶಾಂತಮುತ್ತೈಯ್ಯನವರೆ ಗುರುಗಳು, ಮಂಕನಾದರೆ / ಗುರುತನಕ್ಕೆ ಕಾರಣವಿಲ್ಲ ಎಂದು ಸಭೆಯಲು / ಕೂಡಿ ಸಮಸ್ತರು ಮಠಮನೆಯ ಹಿರಿಯರುಗಳು ಮಹಾಮಹಂತು ಸಮಸ್ತರೆಲ್ಲರು / ಯಿ ಅರ್ಥಕೆ ವಂದು ವೊಲೆ ಬರಸಿ / .... ಕುರುಬ / ರೆಂಬ ಜಾತಿಗೆ ಮಂಕನವರಿಗೆ ಕಾರಣವಿಲ್ಲ ಶಾಂತಮುತ್ತೈಯ್ಯ ನವರೆ ಗುರುಗಳೆಂದು / ಹೊಯಿಸಿ ಕೊಟ್ಟ ಸ್ಥಿರ ಶಾಸನವು ಯಿದು / ಅಲ್ಲಯೆಂದರಿಗೆ ರವರವ ನರಕ ತಪ್ಪದು. ನ್ಯಾಯದಲ್ಲಿ ಗೆದ್ದ ಶಾಂತಮುತ್ತೈಯ್ಯನವರಿಗೆ / ಉಡುಗೊರೆಯ ಕೊಟ್ಟು ಕಳುಹಿಸಿದರು. ನ್ಯಾಯದ / ಲಿ ಸೋತ ಮಂಕನವರ ಕಟ್ಟಿ ಸೆರೆ ಹಾಕಿ ಅಪರಾಜಿಕೊಂಡಿರು"[೨೩]

ತುರುವೇಕೆರೆ ತಾಮ್ರ ಶಾಸನದಲ್ಲಿ ಶಾಂತವೊಡೆಯರೇ ಕುರುಬರಿಗೆ ಗುರುಗಳು, ಮಂಕ ಒಡೆಯರು ಅಲ್ಲ ಎಂದು ಸ್ಥಾಪಿಸಿದರೆ, ಕಲಘುಟಗಿಯ ಸಿದ್ಧಯ್ಯ ಗುರುಮಠ ಅವರಲ್ಲಿ ದೊರೆತ ಕಾಗದದ ಸುರುಳಿಯಲ್ಲಿ ಅಮೋಗಿ ಒಡೆಯರೇ ಕುರುಬರ ಕುಲಗುರುಗಳೂ, ಮಂಕ ಒಡೆಯರು ಅಲ್ಲ ಎಂದು ಸ್ಥಾಪಿಸುತ್ತದೆ ಅದರ ಪೂರ್ಣಪಾಠ ಹೀಗಿದೆ:

"ಶ್ರೀ

ಸೂರ್ಯಚಂದ್ರರು ಮುಣಗುವವರಿಗೆ

ನಡಿಯಬೇಕು ಯಿವನ ಹೊರ್ತು ಗುರುವಿಲ್ಲಾ :

ಕಲ್ಯಾಣ ಬಸವಾದಿ ಪ್ರಮತಗಣಂಗಳ ಮುಂದೆ ಆದ ಮಾಂಜರ ವಿಕ್ರಮಂಕನ ಶಕೆ ೧೪೯೦ ಸರ್ವ ಚೆತುನಾಮಸವತ್ಸರ ಮಿತಿ ಭಾದ್ರಪದ ಮಾಸ ಶ್ರೀ ಗುರು ಶಿದ್ಧಮತ ತಿರ್ತ ಪ್ರಸಾದ ಮೂರ್ತಿ ಏಕವಾಕ್ಯಾ ಸಂತೃಪ್ತ ಆದಂತ ಶಿವ ಧರ್ಮದಲ್ಲಿ ಮಂದಾಲಗಿರಿ ಶಿವಸ್ತಾನದ ಪತಿ ಅರಕೇರಿ ಮಕಣಾಪುರದ ಅಮ್ಮೋಗಿ ಶಿದ್ದನ ಪಟ್ಟದ ಒಡಿಯರು ಸೋಮಯ ದೇವರು ಕುರುಬಯೆಂಬ ಕುಲಾಚ್ಯಾರಕ್ಕೆ ಕರ್ತರು ಗುರುಸ್ವಾಮಿಗಳು ಹಾಲುಮತ ಕಿಲು ಸಾಗರಕ್ಕೆ ಕರ್ತರು ಸರ್ವಸಾಯ ಮುತ್ಯಾ ಮಾಂಕನು ಕುರುಬಯೆಂಬುವ ಕುಲಾಚ್ಯಾರಕ್ಕೆ ಗುರುತಾನೆ ಯೆಂದು ಆಡಿದನು. ಅರಕೇರಿ ಮಕಣಾಪುರದ ಪಟ್ಟದ ಸೋಮಯ್ಯ ಒಡಿಯರು ಆ ಸರ್ವರ ಮಾಂಕನು ಮಕಣಾಪುರದಿಂದ ಕಲ್ಯಾಣದ ಕುರುಬಗೌಡ ಮಾಳಗೊಂಡನ ಬಳಿಗೆ ಹೋಗಿರಿ ಯಂದು ಕಳುವಿದ್ದರು. ಯಿಬ್ಬರು ಕುಲಾಚ್ಯಾರದ ಮಾತಿಗೆ ನ್ಯಾಯದ ಮುಖದಿಂದ ಕಲ್ಯಾಣಕ

ಬಂದು ಮಾಳಗೊಂಡನ ಬಳಿಯಲ್ಲಿ ವಾಕ್ಯವಾದ ಹಾಕಿದರು. ಆ ಮಹಾ ನಾಡ ದೈವ ಯಿತ್ತಂಡ ಮಾತು ಕೇಳಿದ ಕಲ್ಯಾಣದ ಮಾಳಗೊಂಡ ಗೌಡನು ತಮ್ಮ ಹುಲಜಂತಿ ಮಾಳಿಂಗರಾಯನ ಮಗಾ ಬರಿಗಾಲ ಮಾಳಪ್ಪನ ಕರಿಸಿಕೊಂಡು ನಿರ್ಣಯ ಮಾಡಿರಿ ಯೆಂದು ಕಲ್ಯಾಣದ ಮಾಳಗೊಂಡ ಗೌಡ ವುಜಲಿ ಸೋಮಗೊಂಡಾಗೌಡ ಮಂಠಣದ ಪರಮಗೌಡ ಕಲಬುರ್ಗಿ ಯಿರಗೊಂಡ ಗೌಡ ಅಲ್ದಿ ಮಾಳಗೊಂಡಗೌಡಾ ಅಲ್ಲಾಪುರದ ಹೊನ್ನಹರಿವಣದ ಗೌಡ ದಟ್ಟಿವಾಲದ ವೊನಗೊಂಡ ಗೌಡ ತೋರ್ವಿ ಮುತ್ತಗೊಂಡ ಗೌಡಾ ವಾತಿನ ಮದಗೊಂಡಗೌಡ ಶೋಭಾನದ ಜಕ್ಕಗೊಂಡ ಗೌಡಾ ಕಡತಿನ ಬೀರಗೊಂಡ ಯಿಂಬ್ರಾಪುರದ ಬಿರಗೊಂಡ ಮುರಗೊಂಡ ಯಿಷ್ಟು ಸಮಸ್ತ ಮಹಾನಾಡು ಪ್ರಜೆ ಕುರುಬಗೌಡರು ಕಲ್ಯಾಣದಲ್ಲಿ ಕೂಡಿ ಧರ್ಮವಿಚ್ಯಾರದಿಂದ ಕೇಳಿ ನಿರ್ಣಯ ಮಾಡಿರಿ ಯೆಂದು ಬಸವಾದಿ ಪ್ರಮತ ಗಣದ ಮುಂದ ನುಡಿದ ಉತ್ರವು ಕಲ್ಯಾಣದ ಮಾಳಗೊಂಡನು ಮಾತು ನುಡಿದನು. ನಿಮ್ಮ ಶುಕ್ರತ ಮುಂತಾಗಿ ನುಡಿಯಿರಿಯೆಂದು ಆಡಿದ ವಿವರವು ಮಹಾನಾಡುಗಣಿಗಳು ವಾಕ್ಯದಲ್ಲಿ ನುಡಿದರು ಮಂಕನೆಂಬವ ಗುರು ಅಲ್ಲಾ ನಮ್ಮ ಕುರುಬಯಂಬ ಕುಲದೊಳಗ ಅರಕೇರಿ ಮಕಣಾಪೂರದ ಅಮ್ಮೋಗಿ ಶಿದ್ದನ ವಡಿಯರು ಗುರುಮುಖ್ಯ ಪೂರ್ವತ ಹಾಲುಮತ ಕೀಲಸಾಗರಕ್ಕೆ ತಿರ್ತ ಪ್ರಸಾದ ಮುಖ್ಯಾ ನಾಯಿಕರು ನಮ್ಮ ಕುಲದೊಳು ಸರ್ವಸಾಯಿ ಮುತ್ಯಾ ಜಗಮುತ್ಯಾ ನಮ್ಮ ಹಾಲುಮತಕ್ಕೆ ಸಂಬಂಧ ಅಲ್ಲಾ ಅವರು ರೇವಣಸಿದ್ಧನ ಗುಂಡಗೊಪ್ಪರಾಗಿ ಮತ್ತೆ ಜಾಗಂಟಿ ತಗೊಂಡು ಮನಿಮನಿ ಬೇಡಿಕೊಂಬುವರು ಮತ್ತೆ ನಮ್ಮ ಜ್ಯಾತಿಗೆ ಸಂಮಂದ ಅಲ್ಲಾ ನಮ್ಮ ಹಾಲುಮತ ಆ ಸರ್ವರ ಮಂಕನ ಪೂಜೀ ಮಾಡಿದವ ಶಿವಾಚ್ಯಾರಕ್ಕೆ ಹೊರಗುಯಂದು ಬಸವಾದಿ ಪ್ರಮತಗಣದ ಸ್ಥಳದಲ್ಲಿ ಆದ ವಿವರವು ನಿರ್ಣಯ ಮಾಡಿದರು ಯಿಮಾನಾಡು ಕುರುಬ ಗೌಡರು ಪ್ರಜೆಯೆಂದು ಯೆಲ್ಲಾ ನೋಡಿದ ವಾಕ್ಯವು ಹುಲಿಜಂತಿ ಮಾಳಿಂಗರಾರು ಅಮ್ಮೋಗಿ ವಡಿಯರು ಸದಾ ತಿರ್ತ ಬಲಗೊಂಡು ಗುರುವಾಗಿ ಪೂಜೆಗೊಂಬುವುದು ಯಿಂತಿ ಮಾಂಜರ ಕುಲಗೋತ್ರ ಪೂಜಿಗೊಳ್ಳಬೇಕು ಯಿ ಮೇಲೆ ಯಗ್ಗಳ ಬರಿಯಲಾಗದು ಯಿಂತಿ ಮಾಂಜರವು-

ಮತ್ತು ಯಿ ಮಾಂಜರದಲ್ಲಿ ನಮ್ಮಕುರುಬಯೆಂಬ ಕುಲದೊಳಗೆ ಯಲ್ಲಾ ಕುರುಬ ಕುಲಕ್ಕೆ ನಾವೇ ವಡಿಯರುಯಂದು ಅಮ್ಮೋಗಿ ಶಿದ್ದನು ಪಟ್ಟದ ವಡಿಯನು ಗುರು ಹತ್ತಿ ಕಂಕಣ ಮತ್ತು ಉಣ್ಣೆ ಕಂಕಣ ಮತ್ತೆ ಗೌಳಿಗೇರು ಮತ್ತು ಕಿಲಾರೆರು ಮತ್ತು ಕೊಂಕನೆ ಕುರುಬರು ಮತ್ತೆ ಗೌಲೆತ್ತಿ ಆಡಿಸುವ ಕುರುಬರು ಮೇಲೆ ಬರಿದ ಯಿಯಲ್ಲ ಜಾತಿಗೆ ಅಮ್ಮೋಗಿ ಶಿದ್ದ ದೇವರ ಮನಿತನದವರು ಅಧಿಕಾರವಿರುತ್ತದೆ."[೨೮]

ಅದೂ ಅಲ್ಲದೆ ಕಲಘಟಗಿಯ ಸಿದ್ಧಯ್ಯ ಗುರುಮಠ ಅವರಲ್ಲಿ ನಿವ್ವಡ ಪತ್ರಗಳು (written judgements) ಅವ್ಮೋಗಿಸಿದ್ದ ಹಾಗೂ ಸರೂರ ಮಂಕ ಒಡೆಯರ ನಡುವೆ ಶಿವಾಚಾರ ಹಾಗೂ ಕುಲಾಚಾರದ ಕುರಿತು ನಡೆದ ವಾದ-ವಿವಾದದ ಕುರಿತು ಹೇಳುತ್ತವೆ. ಅಂಥ ಒಂದು ನಿವ್ವಡ ಪತ್ರ ಇಲ್ಲಿದೆ:

ಸಮಸ್ತ ಗ್ರಾಮದವರು ಒಪ್ಪಿಕೊಂಡ ನಿವಡ ಪತ್ರ - (a written judgement)

ಅಮಣ್ಣಾ ಪಟದೇವರು ಅರಕೇರಿ ಮಕಣಾಪುರ ಮತ್ತು ಮಾಕಣ್ಣಾ ಪೂಜಾರಿ ಸರವರ ಈ ಇಬ್ಬರ ನಡುವೆ ಸಿವಾಚಾರ ಮತ್ತು ಕುಲಾಚಾರ ಬಗ್ಗೆ ವಿವಾದ ಏರ್ಪಟ್ಟಿತ್ತು.

ಆಗ ಸಮಸ್ತ ಸಭಾನಾಯಕರು ಒಟ್ಟುಗೂಡಿ ಇಬ್ಬರ ವಾದವನ್ನು ಕೇಳಿ ಚರ್ಚಿಸಿದರು. ಮತ್ತು ತೀರ್ಪು ನೀಡಿದರು. ಪಟದೇವರು ಅರಕೇರ ಮಕಣಾಪುರ ಇವರು ತಮ್ಮ ಪೂಜೆ, ಸಿವಾಚಾರ-ಕುಲಾಚಾರ-ಕುರುಬರ ಜಾತಿಯಲ್ಲಿ ನಡೆಯುವ ಹಾಗೆ ಮಾಡತಕ್ಕದ್ದು. ಹಿಂದಿನಂತೆ ನಡೆದು ಬಂದ ಸೇವೆಯನ್ನು ಮುಂದುವರಿಸಿ ಆ ಜನರು ನೀಡುವ ಮಾನ ಮರ್ಯಾದೆ ಸ್ವೀಕರಿಸಿ ಇರಬೇಕು.

ಮಾಕಣಾ ಸರವರ ಪೂಜಾರಿ ಇವರ ಕಬಾಲಿ ಮುಂದೆ ಸರಿಯಲಿಲ್ಲ. ಆಗ ಮಾಕಣ್ಣಾ ಸರವರ ಪೂಜಾರಿ ಎರಡೂ ಕೈಗಳನ್ನು ಜೋಡಿಸಿ ಎದ್ದು ನಿಂತರು. ಮತ್ತು ಹೇಳಿದರು ಏನೆಂದರೆ ಎಲ್ಲ ಗ್ರಾಮಸ್ಥರು ಸೇರಿ ದೈವಿ ಪರೀಕ್ಷೆಯನ್ನು ಕಣ್ಣಾರೆ ನೋಡಿದಿರಿ. ಮತ್ತು ತೀರ್ಪು ನೀಡಿದ್ದೀರಿ. ಅದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಇನ್ನು ಮುಂದೆ ಪಟದೇವರು ಅರಕೇರಿ ಮಕಣಾಪುರ ಇವರು ಕುರುಬರ ಗುರು ಪಟ್ಟವನ್ನು ಸ್ವೀಕರಿಸಿ ಪೂಜೆ ಮಾಡುತ್ತಾ ಜನರು ನೀಡುವ ಮಾನ-ಮರ್ಯಾದೆ-ಸೌಲಭ್ಯಗಳನ್ನು ಸ್ವೀಕರಿಸಬೇಕು. ಮತ್ತು ಸರವರ ಮಾಕಣ್ಣಾ ಇವರು ಪಟದೇವರು ಹೇಳಿದಂತೆ ಕೇಳಿ ಇರಬೇಕು. ಇದಕ್ಕೆ ಯಾರೂ ಅಡ್ಡಿಯಾಗಬಾರದು. ತಕರಾರು ತೆಗೆಯಬಾರದು. ಯಾರಾದರೂ ತಕರಾರು ಮಾಡಿದರೆ ಅಂಥವರನ್ನು ಸಿವಾಚಾರ-ಕುಲಾಚಾರದಿಂದ ದೂರ ಇಡಲಾಗುವುದು. ಸರಕಾರದ ಅಪರಾಧಿಗಳೆಂದು ಘೋಷಿಸಲಾಗುವುದು: ಶಿಕ್ಷೆಗೆ ಒಳಪಡಿಸಲಾಗುವುದು. ಕಾರಣ ಇದನ್ನು ತಿಳಿದು ಎಲ್ಲರೂ ಸುಖದಿಂದ ಇರಬೇಕು ಎಂದು ಬರೆದುಕೊಟ್ಟ ನಿವಡ ಪತ್ರ

ಸಹಿ — ಮೊಹರಮ್ ತಿಂಗಳು (ಜೂನ್)

ಸಾಕ್ಷಿಗಳು

ಶ್ರೀ ಕೃಷ್ಣಾದೇವಿ — ಶ್ರೀ ಸೀತಾಗಣೆ

ಕಾನಾ ಕಾದ್ರಿ — ಗುಡ್ಡದ ಸಿದಲಿಂಗದೇವರು

ಕಾದರಸ ಕುಲಕರ್ಣಿ ಸಾ. ಬೆಣ್ಣೂರ

ಮೇಲೆ ಉಲ್ಲೇಖಿಸಿದ ಎಲ್ಲ ದಾಖಲೆಗಳನ್ನು ನೋಡಿದರೆ ಮಂಕ ಒಡೆಯರನ್ನು ಕುರುಬರ ಕುಲಗುರು ಸ್ಥಾನದಿಂದ ಉಚ್ಚಾಟಿಸುವ ಪ್ರಯತ್ನ ನಡೆದಿರುವುದು ತಿಳಿದುಬರುತ್ತದೆ. ಕಲಘಟಗಿಯಲ್ಲಿ ದೊರೆತ ಕಾಗದದ

ಸುರುಳಿಯಲ್ಲಿನ ವಿಷಯವಂತೂ ಮಂಕವಡೆಯರನ್ನು ರೇವಣಸಿದ್ಧನ 'ಗುಂಡುಗೊಪ್ಪರಿ ಹೊರುವವರು' ಎಂದು ಜರಿಯುವ ಮೂಲಕ ಮಂಕೊಡೆಯರಲ್ಲಿ ಇರುವ ಕಂಬಳಿ ಹೋಮದ ಕಂಬಳಿಯಾಗಿರದೆ ಅದು ಕೇವಲ ಮಳೆಗಾಲದಲ್ಲಿ ದೇಹರಕ್ಷಣೆಗೆಂದು ಯಾರಾದರೂ ಹಾಕಿಕೊಳ್ಳಬಹುದಾದ 'ಗುಂಡುಗೊಪ್ಪರಿ' ಎಂದು ಹೇಳುವ ಮೂಲಕ ಮಂಕ ಒಡೆಯರನ್ನು ಮೂಲೆಗೆ ತಳ್ಳಲಾಗಿದೆ.

೩.೨ ಅಮೋಘಸಿದ್ಧ ಪರಿವಾರ

ಸಾಂಸ್ಕೃತಿಕನಾಯಕನೊಬ್ಬನನ್ನು ದೇವತೆಯನ್ನಾಗಿಸಿ ಅವನನ್ನು ಪೂಜಿಸುವ ಕ್ರಮವನ್ನು ಎಲ್ಲ ಸಮುದಾಯಗಳಲ್ಲಿ ಕಾಣುತ್ತೇವೆ. ಆದರೆ ಆ ಪೂಜೆ ಆ ಸಾಂಸ್ಕೃತಿಕ ನಾಯಕನಿಗೇ ಸೀಮಿತಗೊಳ್ಳುವುದು ಸರ್ವೇಸಾಮಾನ್ಯ. ಕೆಲವೊಂದು ಸಂದರ್ಭದಲ್ಲಿ ಅವನ ಮಡದಿಯೋ, ಪ್ರೇಯಸಿಯೋ, ಶಿಷ್ಯನೋ, ಗುರುವೋ, ಮಗನೋ ಅವನೊಂದಿಗೆ ಸೇರಿಕೊಂಡು ಪೂಜೆಗೊಳ್ಳುವುದೂ ಇದೆ. ಆದರೆ ಅಮೋಘಸಿದ್ಧನ ವಿಷಯದಲ್ಲಿ ಈ ಎರಡೂ ಮಾದರಿಗಳನ್ನು ಮೀರಿ ಬಹುವಿಸ್ತಾರವಾದ ದೈವ ಪರಿವಾರ ಹಬ್ಬಿಕೊಂಡು ಬಂದಿದೆ. ಈ ಪರಿವಾರವನ್ನು ಕುರಿತು ಹೇಳುವಾಗ ಪುಣ್ಯದ ಮಕ್ಕಳು, ವರವಿನ ಮಕ್ಕಳು, ಇಪ್ಪತ್ತೊಂದು ಧರ್ಮರು, ನೂರಾ ಒಂದು ಧರ್ಮರು, ಸಾವಿರದ ಮೇಲೆ ಸಪ್ತೇಳು ನೂರ ಶರಣರು, ನವಕೋಟಿ ಸಿದ್ಧರು ಎಂದು ಹೇಳುತ್ತಾರೆ. ಐದುನೂರು ವರ್ಷಗಳ ಅವಧಿಯಲ್ಲಿ ಅಮೋಘಸಿದ್ಧನ ಬೇರನ್ನು ಹಿಡಿದುಕೊಂಡು ಬಂದರೂ ಇಷ್ಟು ಸಂಖ್ಯೆಯ ಜನ ಸಿಗುವುದಿಲ್ಲವಾದ್ದರಿಂದ ಈ ಸಂಖ್ಯೆ ಉತ್ಪ್ರೇಕ್ಷೆಯ ಮಾತು ಅನ್ನದೇ ವಿಧಿಯಿಲ್ಲ. ಅದೇನೇ ಇದ್ದರೂ ನೂರಾಒಂದು ಧರ್ಮರು ಇರುವುದಂತೂ ಸತ್ಯ.

ಈ ಎಲ್ಲ ಪರಿವಾರವನ್ನು ವರ್ಗೀಕರಿಸಿಕೊಂಡು ಈ ಭಾಗದಲ್ಲಿ ಚರ್ಚಿಸಲಾಗಿದೆ. ಈ ದೈವದ ಪರಿವಾರದಲ್ಲಿ ಪ್ರಮುಖರನ್ನು ಈ ರೀತಿಯಾಗಿ ವರ್ಗೀಕರಿಸಬಹುದು:

೧. ಗುರುಗೌರಿ ಸೋಮಲಿಂಗ

೨. ವರವಿನ ಮಕ್ಕಳು

೩. ಪುಣ್ಯದಮಕ್ಕಳು

೪. ಬಟ್ಟಲ ಒಡೆಯರು

೫. ಮಹಿಳೆಯರು

೬. ನಡಹಟ್ಟಿಯವರು

೭. ಕೊಟ್ಟ ಕಂಬಳಿಯವರು

೮. ಭೂತಾಳಸಿದ್ಧ

೯. ಶಾವರಸಿದ್ಧ

೧೦. ವರ್ತಮಾನದ ಒಡೆಯರು

[illegible]

೩.೨.೧ ಗುರುಗೌರಿ ಸೋಮಲಿಂಗ

ಅಮೋಘಸಿದ್ಧನು ಗುರುಪರಂಪರೆಯಲ್ಲಿ ತನ್ನ ನೆಲೆಯನ್ನು ಕಂಡುಕೊಂಡವನು. ಆದರೆ ಈ ಸೋಮಲಿಂಗ ಯಾರು ಎಲ್ಲಿಯವ ಎನ್ನುವುದರ ಕುರಿತು ಸ್ಪಷ್ಟವಾದ ಮಾಹಿತಿ ದೊರೆಯುವುದಿಲ್ಲ. ಆದರೆ ಇಡೀ ಪರಿವಾರದ ಮೇಲೆ ಸೋಮಲಿಂಗನ ಪ್ರಭಾವವಿರುವುದು ತಿಳಿದುಬರುತ್ತದೆ. ಕುರುಬ ಸಾಂಸ್ಕೃತಿಕನಾಯಕರಿಗೂ ಸೋಮ ಎನ್ನುವ ಹೆಸರಿಗೂ ಒಂದು ರೀತಿಯ ಸಂಬಂಧವಿದೆ. ರೇವಣಸಿದ್ಧನು ಕೊಲ್ಲಿ ಪಾಕಿಯಲ್ಲಿ ಸೋಮಲಿಂಗದಲ್ಲಿ ಉದ್ಭವಿಸಿದ ಎಂದು ನಂಬಲಾಗಿದೆ.

ಕೊಲ್ಲಿಪಾಕಿಯ ಸೋಮಲಿಂಗದಿಂದುದ್ಭವಿಸಿ
ಸಲ್ಲಲಿತ ರೇವಣಗಸ್ವಾದಿ ಭಕ್ತರಂ
ನುಲ್ಲಾಸದಿಂದ ಪೊರೆದು ಶಾಂತ ಮುತ್ತಯ್ಯಂಗೆ ಲಿಂಗದೀಕ್ಷೆಯನಿತ್ತನು[೩೦]

ಎಂದು ಹಾಲ್ಮತೋತ್ತೇಜಕ ಪುರಾಣವು ಉಲ್ಲೇಖಿಸಿದರೆ

ಆ ಸೋಮನಾಥನ ಶಿವಾಲಯದ ನಡುವೊಮ್ಮೆ
ಭಾಸುರದ ಶಿವಭಕ್ತಕೋಟಿ ಕುಳ್ಳಿರೆ........
....
ಆಗಳೊಗೆದುದು ಮಹಾಲಿಂಗದಿಂ ಘನರವಂ
ರಾಗದಿಂದಿರ್ದ ಸಭೆ ನಡಗುತ್ತ ಮಿರೆ ಕರಂ
ನೆಲಮೊಳಗಿದಂದಿಂ ಮೇಘ ಗರ್ಜನೆಯಂತೆ
ಸಲೆಲಿಂಗದೊಳಗಣಿಂ ಪೊಣ್ಮುತ್ತಲಿರಲಿಂತೆ
ಪುಟ್ಟುತಿರ್ದಂ ಸಿದ್ಧ ರೇಣುಕಯ್ಯಂ ನೋಡ
ನಿಷ್ಠೆಮಿಗೆ ಸಿದ್ಧ ರೇವಣನಾಮದಿಂ ನೋಡ[೩೧]

ಎಂದು ಹರಿಹರ 'ರೇವಣಸಿದ್ಧೇಶ್ವರ ರಗಳೆ'ಯಲ್ಲಿ ಹೇಳುತ್ತಾನೆ. ಆಮುಗಿದೇವನ ಕುರಿತಾಗಿರುವ ಪುಳಚೆ ಶಾಸನದಲ್ಲಿ ಶ್ರೀ ಸ್ವಯಂಭು ಸಿದ್ಧ ಸೋಮನಾಥ ದೇವರ್ಗೆಂದಾಯಿಚ್ಛೆಯವನು ಸರ್ವನಮಸ್ಯವಾಗಿ ಅಮ್ಮಿಗಿ ದೇವರಸರ್ಗೆ ಅಕರಪರಿಹಾರವಾಗಿ ಧಾರಾಪೂರ್ವಕಂ ಮಾಡಿಕೊಟ್ಟರು.[೩೨]

ಅದೇ ತೆರನಾಗಿ ಅಮೋಘಸಿದ್ಧ ಗುರುವಿನ ಕುರಿತು ಹೇಳುವಾಗ ಗುರು ಗೌರಿ ಸೋಮಲಿಂಗ ಎಂದು ಹೇಳುತ್ತಾರೆ. ಈ ಹೆಸರಿನಲ್ಲಿ 'ಗೌರಿ' ಎನ್ನುವ ಪದವು ಈ ಗುರುವನ್ನು ಕೈಲಾಸದಲ್ಲಿರುವ ಶಿವನೊಂದಿಗೆ

ಸಮೀಕರಿಸಲು ಬಳಸಿರುವ ಸಾಧ್ಯತೆಯಿದೆ. ಆದರೆ ಹೆಸರಿನಲ್ಲಿರುವ ಸೋಮ ಎನ್ನುವ ಪದವು ಅವನು ಸ್ವೀಕರಿಸುವ ಸಿದ್ಧಾಂತವನ್ನು ಬಿಂಬಿಸಲು ಬಂದಿರುವಂತಿದೆ. ಗುರುವಾದ ಸೋಮಲಿಂಗನನ್ನು ವರ್ಣಿಸುವ ಡೊಳ್ಳಿನ ಹಾಡೊಂದು ಹೀಗಿದೆ:

ಶಿವನೆ ನಮ್ಮಯ ದೇವರ ಬಂದಾನ ಘೇ
ಸ್ವಾಮಿ ನಮ್ಮಯ ದೇವರ ಬಂದಾನ ಘೇ
ಅರಕೇರಿನಂಬುದು ಅರಮನೆಪ್ಪ ಭೀವರಗಿನಂಬುದು ಗುರುಮನಿ
ಭೀರವಗಿನಂಬುದು ಗುರುಮನಿ ಮಾಯಿಮಕ್ಕಣಪುರದಲ್ಲಿ
ಮಾಯಿಮಕ್ಕಣಪುರದಲ್ಲಿ ಸಿಂಹ (ಶಿವ) ಸ್ಥಾನದ ಗದ್ದಗಿ
ಸಿಂಹ (ಶಿವ) ಸ್ಥಾನದ ಗದ್ದಗಿ ಮ್ಯಾಲ ಶಿವನೇ ಸೋಮಯ್ಯನಂಬವನು
ಶಿವನೆ ಸೋಮಯ್ಯನಂಬವನು ನಿಜವೊಂದು ಮಾರುತಗೊಂಡಾನೊ
ಹರಹರೋನನ ಕೈಲಾಸೋ ಗುರುವಿನ ಗುಡಿಗೊಳ ಹುಟ್ಯಾವ
ಗುರುವಿನ ಗುಡಿಗೊಳ ಹುಟ್ಯಾವ ಹೆಂಥಾ ಗುಡಿಗಳು ಹುಟ್ಯಾವ
ಅಲಕ ಮಲಕದ ಗುಡಿಯ್ಯಾನು ಸುತ್ತೆಲ್ಲ ಹೊನ್ನ ಗುಮಟ್ಯಾನು
ಗುಲಗಂಜಿ ಮಾಟದ ಗುಮಟ್ಯಾನು ಗುರುವೆ ಕಾಂತಿ ವರಣದ ಕಳಸ್ಯಾನು
ಹಂಥಾ ಗುಡಿಯ ಒಳಗ್ಯಾನ ಹೆಂಥಾ ವಿಸ್ತಾರ ಮೂಡ್ಯಾವ
ಹೆಂಥಾ ವಿಸ್ತಾರ ಮೂಡ್ಯಾವ ಉಳಿಯ ಮುಟ್ಟದ ಲಿಂಗಾನೆ
ಉಳಿಯ ಮುಟ್ಟದ ಲಿಂಗಾನೆ ಕಂತಿಯ ಮಾಡದ ಲಿಂಗಾನೆ
ಕಂತಿಯ ಮಾಡದ ಲಿಂಗಾನೆ ಒಡದ ಮೂಡಿದ ಲಿಂಗಾನೆ
ಹಿಂಥಾ ಲಿಂಗಿಗಿ ನೋಡಪ್ಪ ಏನೇನ ಧಾರಣ ಮಾಡ್ಯಾರ
ಈಬತ್ತಿ ಬಸಮಂಗಳು ಹಣೆಯಲ್ಲಿ ಧಾರಣ ಮಾಡ್ಯಾರ
ರುದ್ರಾಕ್ಷಿ ರುಂಡಮಾಲ್ಯಾನು ಕೊರಳಲಿ ಧಾರಣ ಮಾಡ್ಯಾರ
ಹಾಕ್ಯಾರ ಮಕಮಲ್ಲ ಗಲ್ಲಿಪೋ ಏರ್ಯಾವ ಜರತಾರಿ ಟೆಪ್ಪಗಿ[೩೩]

ಇಲ್ಲಿ ಕಾಣಿಸಿಕೊಳ್ಳುವ ಗುರು 'ಶಿವನೆ ಸೋಮಯ್ಯನೆಂಬವನು' ಎಂದು ಹೇಳುವ ಮೂಲಕ ಗುರುವನ್ನು ಶಿವನೊಂದಿಗೆ ಸಮೀಕರಿಸುವಂತೆ ತೋರುತ್ತದೆಯಾದರೂ ಈ ಹಾಡು ನಿಧಾನವಾಗಿ ಅವನನ್ನು ಅವನ ಸಿದ್ಧಾಂತವನ್ನು ಮೆಲ್ಲಗೆ ಬಿಚ್ಚಿ ಹೇಳಿಬಿಡುತ್ತದೆ. ಗುರುವನ್ನು 'ಲಿಂಗ'ರೂಪಕ್ಕೆ ಇಳಿಸಿ ಅದು ಉಳಿ ಮುಟ್ಟದ ಲಿಂಗ, ಒಡಮೂಡಿದ ಲಿಂಗ, ಕಂತಿ ಮಾಡಿಸದ ಲಿಂಗವೆಂದು ಹೇಳುತ್ತಾ ಗುರುವನ್ನು ಅದಿಮ ರೂಪದಲ್ಲಿ ಹಿಡಿದಿಡುವಂತೆ ತೋರಿದರೂ ಅವನ ಕೊರಳಲ್ಲಿ ರುದ್ರಾಕ್ಷಿ ರುಂಡಮಾಲಿ ಇದೆ ಎಂದು ಹೇಳುವ ಮೂಲಕ ಅವನು ಶೈವ ಸಿದ್ಧಾಂತದ ಕಾಪಾಲಿಕ ಪಂಥದವನು ಎಂಬುದನ್ನು ಸ್ಪಷ್ಟಪಡಿಸಿಬಿಡುತ್ತದೆ.

ಕಾಪಾಲಿಕರನ್ನು ಈ ರೀತಿ ವರ್ಣಿಸಲಾಗಿದೆ: "As penence for cutting off one of the heads of Brahma, Lord Bhairava frequents waste places and cremation grounds, wearing nothing but a garland of skulls and ash from the pyre and unable to remove the skull of Brahma fastened to his hand"[೩೪]

ಹಾಡಿನಲ್ಲಿ ವರ್ಣಿತವಾಗಿರುವ ಸೋಮಯ್ಯನ ಕೊರಳಲ್ಲಿರುವ ರುಂಡಮಾಲೆ ಹಾಗೂ ಮೈಗೆ ಲೇಪಿಸಿಕೊಂಡಿರುವ ಭಸ್ಮವನ್ನು ಅವಲೋಕಿಸಿದರೆ ಈತ ಖಂಡಿತವಾಗಿಯೂ ಕಾಪಾಲಿಕನಾಗಿರುವುದು ತಿಳಿದುಬರುತ್ತದೆ.

'ಸೋಮ' ಎನ್ನುವ ಅವನ ಹೆಸರನ್ನು ಗಮನದಲ್ಲಿರಿಸಿಕೊಂಡು ಅವನು 'ಸೋಮ ಸಿದ್ಧಾಂತಿ'ಯಾಗಿರುವುದನ್ನು ಊಹಿಸಲು ಸಾಧ್ಯ. ಗುರುವಿನ ಹೆಸರನ್ನು ಹೇಳುವಾಗಲೆಲ್ಲ 'ಗೌರಿ ಸಮೇತ'ನಾದವನು ಎನ್ನುವುದನ್ನು ತಪ್ಪದೇ ಬಳಸುತ್ತಾರೆ. ಗೌರಿ ಸಮೇತನಾದವನು ಎಂದರೆ ಸ+ಉಮನಾದ 'ಸೋಮ'ನು ಎಂದೇ ಅರ್ಥ. ಮೇಲಾಗಿ ಸೋಮ ಸಿದ್ಧಾಂತಿಗಳು ಬೇರಾರೂ ಅಲ್ಲ. ಅವರು ಕಾಪಾಲಿಕರೆ ಎನ್ನುವುದನ್ನು ಎಮ್.ಆರ್.ಸಾಖರೆ ಹೇಳಿದ್ದಾರೆ. ಸೋಮ ಸಿದ್ಧಾಂತವು ಶೈವದ ಒಂದು ಪ್ರಕಾರವಾಗಿದೆ. ಶಿವಾಗಮವು ಶೈವವನ್ನು ಶೈವ, ಪಾಶುಪತ, ಸೋಮಸಿದ್ಧಾಂತ ಹಾಗೂ ಲಾಕುಳವೆಂದು ವಿಭಾಗೀಕರಿಸುತ್ತದೆ ಎನ್ನುವುದನ್ನು ಅವರು ಚರ್ಚಿಸುತ್ತ "This seems probably the arrangment in order of superiority... we learn from 'Pramoda Chandrodaya of Krishna Mishra that Kapalikas are Soma siddhantins"[೩೫]

ಕಾಪಾಲಿಕ ಪಂಥವು ತಾತ್ವಿಕವಾಗಿ ವೈದಿಕ ವರ್ಣವ್ಯವಸ್ಥೆಯ ವಿರೋಧಿ ನೆಲೆಯಲ್ಲಿ ಹುಟ್ಟಿಕೊಂಡುದಾಗಿದೆ. ಕಾಪಾಲಿಕ ಪ್ರಸಿದ್ಧ ಗ್ರಂಥವಾದ 'ಕುಲಾರ್ಣವ ತಂತ್ರ'ದಲ್ಲಿ ಗುರು ಶಿಷ್ಯನಿಗೆ ನೀಡುವ ದೀಕ್ಷೆಯ ಮಹತ್ವವನ್ನು ಹೀಗೆ ವಿವರಿಸಲಾಗಿದೆ.

"ಶೂದ್ರನ ಶೂದ್ರತ್ವವು ಕಳೆಯಿತು ಹಾಗೂ ಬ್ರಾಹ್ಮಣನ ಬ್ರಾಹ್ಮಣತ್ವವು ಕಳೆಯಿತು. ದೀಕ್ಷೆಯಿಂದ ಪವಿತ್ರನನ್ನಾಗಿ ಮಾಡಿದವನಿಗೆ ಜಾತಿ ಭೇದವಿಲ್ಲ."[೩೬]

ಜಾತಿಯನ್ನು ಅಲ್ಲಗಳೆಯುವ ಸೋಮಸಿದ್ಧಾಂತವು ಹಿಂದೂ ವರ್ಣವ್ಯವಸ್ಥೆಯ ಕೆಳಸಮುದಾಯಗಳನ್ನು ಬಹುವಾಗಿ ಆಕರ್ಷಿಸಿರುವುದನ್ನು ಅಲ್ಲಗಳೆಯಲಾಗದು. ಅಂತೆಯೇ, ಆಕರ್ಷಿತರಾದವರು ರೇವಣಸಿದ್ಧ, ಅಮ್ಮಗಿದೇವ ಹಾಗೂ ಅಮೋಘಸಿದ್ಧ.

ಗುರುವಿನ ಈ ಜಾತಿನಿರಾಕರಣ ತತ್ವ ಅಮೋಘಸಿದ್ಧನಿಗೆ ತುಂಬಾ ಮೆಚ್ಚಿಗೆಯಾಗಿರುವ ಕಾರಣದಿಂದ ಆತನೂ ತನ್ನ ಶಿಷ್ಯರನ್ನು ಆಯ್ದುಕೊಳ್ಳುವಲ್ಲಿ, ಅವರಿಗೆ ಗುರುದೀಕ್ಷೆ ಕೊಡುವಲ್ಲಿ ಅವನು ಕೆಳಸಮುದಾಯ

ದವರನ್ನು ಆಯ್ದುಕೊಂಡಿರುವುದು ತಿಳಿದುಬರುತ್ತದೆ. ಹಾಗೆ ಆಯ್ಕೆ ಆದವರೇ ಅಮೋಘಸಿದ್ಧನ ಪುಣ್ಯದ ಮಕ್ಕಳು. ಈ ಹಾಡಿನ ಕೊನೆಯ ಸಾಲಿನಲ್ಲಿ ಕಾಣಿಸಿಕೊಳ್ಳುವ ಮಕಮಲ್ಲ ಗಲ್ಲೀಪ ಹಾಗೂ ಜರತಾರಿ ಟೊಪ್ಪಿಗೆಗಳು ಸೋಮಲಿಂಗ ಹಾಗೂ ಇಸ್ಲಾಂ ಸಂಸ್ಕೃತಿಗಳ ನಡುವಿನ ಸಂಬಂಧವನ್ನು ಸೂಚಿಸುತ್ತವೆ. ಅದರ ಆಳವಾದ ಶೋಧ ಇನ್ನೂ ನಡೆಯಬೇಕಾಗಿದೆ.

೩.೨.೨ ಪುಣ್ಯದ ಮಕ್ಕಳು

ಅಮೋಘಸಿದ್ಧನು ತನ್ನ ಸಾಧನೆಯ ಪ್ರಾರಂಭದ ಹಂತದಲ್ಲಿ ಗುರುಪಂಥೀಯನಾಗಿದ್ದ. ಅರ್ಹ ಶಿಷ್ಯ ಸಮೂಹದ ಮೂಲಕ ತನ್ನ ತತ್ವವನ್ನು ಪಂಥವನ್ನು ಮುಂದುವರೆಯಿಸುವುದು ಅವನ ಉದ್ದೇಶವಾಗಿತ್ತು. ಆ ಸಂದರ್ಭದಲ್ಲಿ ಅವನು ಮೂವರು ಪ್ರಮುಖ ಶಿಷ್ಯಂದಿರನ್ನು ಪಡೆದಿರುವುದು ತಿಳಿದುಬರುತ್ತದೆ. ಹೀಗೆ ಶಿಷ್ಯತ್ವ ಪಡೆದವರನ್ನು ಪುಣ್ಯದ ಮಕ್ಕಳು ಎಂದು ಕರೆಯುತ್ತಾರೆ.

೩.೨.೨.೧ ಮಾಸಿದ್ಧಪ್ಪ: ಮೊದಲನೆಯ ಪುಣ್ಯದ ಮಗ ಮಹಾಸಿದ್ಧ. ಇವನನ್ನು ಮಾಯದ ಮಗ ಮಾಸಿದ್ದಪ್ಪ ಎಂದೂ ಕರೆಯುತ್ತಾರೆ. ಇವನು ಅಮೋಸಿದ್ಧನ ಅತ್ಯಂತ ಪ್ರೀತಿಯ>ಮೋಹದ>ಮಾಯೆಯ ಮಗನಾಗಿದ್ದಾನೆ. ಇವನ ತಂದೆ-ತಾಯಿ ಸೋಲಾಪುರ ಜಿಲ್ಲೆಯ ಮಾಳಸಿರಸ ತಾಲೂಕಿನ ನಾತೇಪುತೇ ಗ್ರಾಮದವರು. ತಂದೆ ಅಬಗೊಂಡ, ತಾಯಿ ಸುಗದೇವಿ. ಇವರ ವೃತ್ತಿ ಕಿಲಾರಿಗಳ ಪಾಲನೆ ಪೋಷಣೆ. ಅವನ ಬಳಿ ಏಳು ನೂರು ಕಿಲಾರಿಗಳಿದ್ದವು. ಒಂದು ಸಲ ನಾತೇಪುತೇ ಭಾಗದಲ್ಲಿ ಭೀಕರ ಬರಗಾಲ ಬಿದ್ದು, ಕಿಲಾರಿಗಳ ಪಾಲನೆ ಕಷ್ಟದ್ದೆನ್ನಿಸಿ ಹಸಿರು ಹಾಗೂ ಜಲ ಹುಡುಕುತ್ತಾ ಹೆಂಡತಿಯೊಂದಿಗೆ ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಗೊಳಗಿಗೋವಿಂದಪುರಕ್ಕೆ ಬರುತ್ತಾನೆ. ಅಲ್ಲಿನ ಊರಗೌಡರೊಂದಿಗೆ ಒಳ್ಳೆಯ ಸ್ನೇಹ ಸಂಪಾದನೆ ಮಾಡಿಕೊಂಡು ಊರಗೌಡಕಿಯಲ್ಲಿ ಪಾಲು ಪಡೆಯುತ್ತಾನೆ. ಆದರೆ ಅವನಿಗೆ ಸಂತಾನ ಫಲವಿರವುದಿಲ್ಲ. ಹೀಗಾಗಿ ಗಂಡ ಅಬಗೊಂಡ ಹೆಂಡತಿ ಸುಗದೇವಿಯರಿಗೆ ಬದುಕಿನಲ್ಲಿ ನೆಮ್ಮದಿ ಇಲ್ಲ ದಂತಾಗುತ್ತದೆ. ನೆರೆಯವರ ನಿಂದೆಯ ಮಾತಿನಿಂದ ಘಾಸಿಗೊಳ್ಳುತ್ತಾರೆ.

ಸಲ್ಲಹಾದ ಮರದ ಮುಖ ನೋಡಲು ಬಾರದು
ಖಾಲಿಕೊಡದ ಮುಖ ನೋಡಲು ಬಾರದು
ಹುಟ್ಟಿ ಬಂಜೆಯರ ಮುಖ ನೋಡಬಾರದು[೩೭]

ಎಂದು ಊರ ಜನ ಆಡಿಕೊಳ್ಳುತ್ತಾರೆ. ಪರಿಹಾರ ಹುಡುಕಿ ಅಬಗೊಂಡ ಸುಗದೇವಿಯರು ತಿರಮೂಲಿ ತಿಮ್ಮಪ್ಪ, ಎಡೂರ ವೀರಭದ್ರ, ಪರೂತಮಲ್ಲಯ್ಯ, ಸೊನ್ನಲಿಗೆ ಸಿದ್ಧರಾಮ ಮುಂತಾದವರನ್ನು ಭೆಟ್ಟಿಯಾಗಿ ಸಂತಾನಫಲ ನೀಡಬೇಕೆಂದು ಕೇಳಿಕೊಳ್ಳುತ್ತಾರೆ. ಅವರ್ಯಾರೂ ಸಂತಾನ ಫಲ ನೀಡಲು ತಮಗೆ ಸಾಧ್ಯವಿಲ್ಲವೆಂದು ತಿಳಿಸುತ್ತಾರೆ. ಕೊನೆಯದಾಗಿ ಅವರು ಮುಮ್ಮೆಟಗುಡ್ಡದ ಮೇಲೆ ನೆಲೆ ನಿಂತಿದ್ದ ಅಮೋಘಸಿದ್ಧನಲ್ಲಿಗೆ ಬರುತ್ತಾರೆ.

ಅಮೋಘಸಿದ್ದನು ಎರಡು ಫಲಗಳನ್ನು ನೀಡಿ, ಅವುಗಳಲ್ಲಿನ ಮೊದಲನೆಯ ಫಲವನ್ನು ತನಗೆ ಶಿಶುಮಗನನ್ನಾಗಿ ಬಿಡಬೇಕೆಂದು ಕರಾರು ಹಾಕುತ್ತಾನೆ. ಹೀಗೆ ದೊರೆತವನೇ ಮಾಯದ ಮಗ ಮಾಸಿದ್ದಪ್ಪ.

ಬೆಳೆದು ಏಳು ವರ್ಷದವನಾದ ಮೇಲೆ ಅಮೋಘಸಿದ್ಧನ ಗುರುತ್ವವನನ್ನು ಸ್ವೀಕರಿಸುತ್ತಾನೆ. ಗುಡ್ಡದ ಮೇಲೆ ಸಾಧನೆ ಮಾಡುತ್ತಾ ಕುಳಿತ ಪಡದಪ್ಪ ಹಾಗೂ ಅರಕೇರಿಯ ವೃತದ ಮನೆಯಲ್ಲಿ ಉಳಿದ ಗುರುಪತ್ನಿ ಪದ್ಮಾವತಿಯ ಸೇವೆಯಲ್ಲಿ ತೊಡಗುತ್ತಾನೆ.

ಅಮೋಘಸಿದ್ಧ ಪರಂಪರೆಯಲ್ಲಿ ಸಿದ್ಧಾಟಿಕೆಯನ್ನು ಪ್ರಾರಂಭಿಸಿದವನು ಇವನೇ ಎಂಬ ನಂಬಿಕೆಯಿದೆ. ಆ ಕುರಿತು ಒಂದು ಕಥನವೂ ಇದೆ. ಒಂದು ಸಲ ಮಾಸಿದ್ಧಪ್ಪ ಕಿಲ್ಲಾರಿಗಳನ್ನು ಮೇಯಿಸುತ್ತ ಮುಮ್ಮಟ ಗುಡ್ಡದ ಕಡೆಗೆ ಹೋಗಿ ಅಮೋಘಸಿದ್ಧನನ್ನು ಕಂಡು ಅವನಿಗೆ 'ಅಪ್ಪಾ' ಎಂದು ಸಂಭೋಧಿಸುತ್ತಾನೆ. ನಾನು ನಿನ್ನ ಅಪ್ಪ ಎನ್ನುವುದಕ್ಕೆ ಏನು ಸಾಕ್ಷಿ ಎಂದು ಅಮೋಘಸಿದ್ಧ ಅವನನ್ನು ಕೇಳುತ್ತಾನೆ. ಆಗ ಮಾಸಿದ್ದಪ್ಪನು ಅಲ್ಲಿಯೇ ನಿಂತಿದ್ದ ಕಿಲಾರಿಯೊಂದರ ಬಾಯಿಯಲ್ಲಿ ಕೈ ಹಾಕಿ ಹೋಮದ ಕಂಬಳಿ ಹಾಗೂ ನೇಮದ ಬೆತ್ತವನ್ನು ಹೊರ ತೆಗೆಯುತ್ತಾನೆ. ಸಿದ್ಧಾಟಿಕೆಯ ಈ ಪರಿಯನ್ನು ನೋಡಿ ಅಮೋಘಸಿದ್ಧ ಈತನನ್ನು ತನ್ನ ಶಿಶು 'ಮಗ'ನೆಂದು ಒಪ್ಪಿಕೊಂಡನಂತೆ.

ಇಂಥ ಪುಣ್ಯದ ಮಗ ಮಾಸಿದ್ಧಪ್ಪನ ಮೇಲೆ ಅಮೋಘಸಿದ್ಧನಿಗೆ ಅಪಾರವಾದ ಕಕ್ಕುಲಾತಿ. ಹೀಗಾಗಿ ಪಡೆದ ಮಕ್ಕಳೇ ಸಾಕು, ಹಡೆದ ಮಕ್ಕಳು ಬೇಡವೇ ಬೇಡ ಎನ್ನುತ್ತಿದ್ದನಂತೆ ಅಮೋಘಸಿದ್ಧ. ಆದರೆ ಮಾಸಿದ್ಧಪ್ಪನು ತನಗೆ ಬೆನ್ನ ಭುಜದ ಹಾಗೆ ತಮ್ಮಂದಿರು ಬೇಕು ಎಂದು ತಂದೆಯಾದ ಅಮೋಘಸಿದ್ಧನಲ್ಲಿ ಕಾಡಲು ಪ್ರಾರಂಭಿಸುತ್ತಾನೆ. ಅವನ ಒತ್ತಾಯಕ್ಕೆ ಮಣಿದು ಅಮೋಘಸಿದ್ಧ ಪದ್ಮಾವತಿಯಲ್ಲಿ ನಾಲ್ಕು ಗಂಡು ಹಾಗೂ ಒಂದು ಹೆಣ್ಣುಮಗವನ್ನು ಕರುಣಿಸುತ್ತಾನೆ.

ಹಡೆದ ಮಕ್ಕಳು ಹಾಗೂ ಪಡೆದ ಮಕ್ಕಳು ಬೆಳೆದು ದೊಡ್ಡವರಾದ ನಂತರ ಅಮೋಘಸಿದ್ದ ತನ್ನಲ್ಲಿರುವ ಸಂಪತ್ತಿನ ಭೌತಿಕ ಹಾಗೂ ಸಿದ್ಧಾಟಿಕೆ ಶಕ್ತಿಯ ಪಾಲವಾಟನಿ ಮಾಡಿಕೊಡುತ್ತಾನೆ. ಹಾಗೆ ಪಾಲು ಕೊಡುವಾಗ ತನ್ನಲ್ಲಿದ್ದ ಅತ್ಯಂತ ಪ್ರಬಲ ಶಕ್ತಿಯ ಭಂಡಾರ ಭರಣಿ/ಪ್ರಸಾದ ಗಂಟನ್ನು ಮಾಸಿದ್ಧಪ್ಪನಿಗೆ ಬಿಟ್ಟುಕೊಡುತ್ತಾನೆ. ಪಡದಪ್ಪ ಕೊಟ್ಟ ಭಂಡಾರ ಭರಣಿಯನ್ನು ತೆಗೆದುಕೊಂಡು ಭೀಮಾನದಿಯನ್ನು ದಾಟಿ ಹೋಗಿ ಅಲ್ಲಿ ತನ್ನ ಸಿದ್ಧಾಟಿಕೆಯ ಮೂಲಕ ಮಾಸಿದ್ದಪ್ಪ ನೆಲೆಗಳನ್ನು ಸಾಧುಣಿ ಮಾಡಿಕೊಳ್ಳುತ್ತಾನೆ. ಇಟಗೆ, ದೇವಾಂಗ, ಸೋಲಾಪುರ, ಹಂಜಗಿ, ಬಂದಲಗಿ, ಭಂಡಾರಕವಟೆ ಹೀಗೆ ಆರು ಗ್ರಾಮಗಳಲ್ಲಿ ತನ್ನ ನೆಲೆಯನ್ನು ಸ್ಥಾಪಿಸಿಕೊಂಡು ಭೀಮಾ ನದಿಯ ಈಚೆಗೆ ಇರುವ ಡೋಣಜದಲ್ಲಿ ತನ್ನ ನೆಲೆ ವಿಸ್ತರಿಸಿಕೊಳ್ಳಲು ಪ್ರಯತ್ನಿಸುತ್ತಾನೆ.

ಭಂಡಾರ ಭರಣಿಯನ್ನು ಕಳೆದುಕೊಂಡಿದ್ದ ಅಮೋಘಸಿದ್ಧನ ವರವಿನ ಮಕ್ಕಳು ಈಗಾಗಲೇ ಈ ವಿಷಯದಲ್ಲಿ ಹೊಡೆದಾಟ ಮಾಡಿ ಒಂದು ಒಪ್ಪಂದಕ್ಕೆ ಬಂದಿರುತ್ತಾರೆ. ಮಹಾಸಿದ್ದಪ್ಪ ಏನಿದ್ದರೂ

[illegible]

ಭೀಮಾನದಿಯ ಆಚೆಗೇ ತನ್ನ ಸಿದ್ಧಾಟಿಕೆ ನಡೆಯಿಸಬೇಕು, ಮರಳಿ ಭೀಮಾನದಿಯ ಈಚೆಗೆ ಬರಕೂಡದು ಎಂದು. ಆದರೆ ಮಾಸಿದ್ಧಪ್ಪ ಒಪ್ಪಂದವನ್ನು ಮೀರಿ ಬಂದ ಕಾರಣದಿಂದ ಇಬ್ಬರ ಮಧ್ಯದಲ್ಲಿ ತೀವ್ರತರವಾದ ಕಾದಾಟವಾದ ಹಾಗೆ ತೋರುತ್ತದೆ. ಮಹಾಸಿದ್ಧನ ಜೀವಕ್ಕೆ ಈ ಸಂಧರ್ಭದಲ್ಲಿ ಅಪಾಯವೂ ಉಂಟಾಯಿತು ಎಂಬ ಸೂಚನೆಯನ್ನು ನದಿ ದಾಟಿ ಬಂದುದಕ್ಕೆ ಅವನ ರೂಪ ಬೇರೂಪವಾಯಿತೆಂದೂ ಅವನ ಭಂಡಾರದ ಬಣ್ಣ ಚಂದ್ರದ ರೂಪ ತಾಳಿತು ಎನ್ನುವಲ್ಲಿ ಅದು ಸ್ಪಷ್ಟವಾಗಿ ತಿಳಿಯುತ್ತದೆ.

ಅವನ ಅಂತ್ಯ ಹೀಗಾಯಿತಾದರೂ, ಜೀವಿತ ಅವಧಿಯಲ್ಲಿ ಅವನು ಹಲವಾರು ರೈತ ಪರವಾದ ಕಾರ್ಯಗಳನ್ನು ಮಾಡಿದ್ದಾನೆ. ಮುಂಡೇವಾಡಿ ಗ್ರಾಮದಲ್ಲಿನ ಒಬ್ಬ ಬಡ ರೈತ ಬೇಸಾಯಕ್ಕೆ ಒಂದು ಎತ್ತು ಹಾಗೂ ಒಂದು ಕೋಣ ಹೂಡಿದ್ದ. ಅವನ ಒಂಟೆತ್ತಿನ ಒಕ್ಕಲುತನವನ್ನು ಎಂಟೆತ್ತಿನ ಒಕ್ಕಲುತನವನ್ನಾಗಿ ಮಾಡುತ್ತಾನೆ. ಕೃಷಿ ಚಟುವಟಿಕೆಯ ಅಭಿವೃದ್ಧಿ ನೇರವಾಗಿ ವನ್ಯ ಸಂಪತ್ತಿನೊಂದಿಗೆ ಸಂಬಂಧ ಹೊಂದಿರುವುದನ್ನು ಸರಿಯಾಗಿ ಮಾಸಿದ್ಧಪ್ಪ ಗ್ರಹಿಸಿದ್ದನು. ಹೀಗಾಗಿ ಇಟೆ ಗ್ರಾಮದ ಜನರಿಗೆ ಬೇವಿನ ಮರಗಳನ್ನು ಕಡಿಯಬೇಡಿರಿ ಎಂದು ಹೇಳಿದ್ದಾನೆ. ಇಟೇ ಗ್ರಾಮದವರು ಇಂದಿಗೂ ಬೇವಿನ ಮರವನ್ನು ಕಡಿಯದೇ ಇರುವ ವ್ರತದವರಾಗಿದ್ದಾರೆ. ಬಂದಲಗಿ ಗ್ರಾಮದಲ್ಲಿ ಅಶಕ್ತ ರೈತನೊಬ್ಬನು ಭೂಮಿ ಉಳುಮೆ ಮಾಡುತ್ತಿದ್ದುದನ್ನು ಬಿಡಿಸಿ ತಾನೆ ನೂರಾರು ಎಕರೆ ಉಳುಮೆ ಮಾಡಿಕೊಡುತ್ತಾನೆ. ಭಂಡಾರಕವಟೆಯ ಪೀರನು ಇವನ ಸಿದ್ಧಾಟಿಕೆ ಮೆಚ್ಚಿ ಊರ ಗೌಡಕಿ ಜಮೀನನ್ನು ಇವನಿಗೆ ಬಿಟ್ಟು ಕೊಡುತ್ತಾನೆ. ಹಾಗೆ ಬಂದ ಜಮೀನನ್ನು ಮಾಸಿದ್ಧಪ್ಪನು ತನ್ನಲ್ಲಿ ಉಳಿಸಿಕೊಳ್ಳದೆ ಊರ ಜನರಿಗೆ ಹಂಚಿಕೊಡುತ್ತಾನೆ.

ಇಷ್ಟೆಲ್ಲಾ ಜನಕಲ್ಯಾಣ ಕೆಲಸ ಮಾಡಿದ ಮಾಸಿದ್ಧಪ್ಪನು ಬಡವನಾಗಿಯೇ ಉಳಿದಿದ್ದರೆ ಆಶ್ಚರ್ಯವಿಲ್ಲ. ಭಂಡಾರಕವಟೆಯ ತನ್ನ ಜಮೀನಿನ ಕಂದಾಯವನ್ನು ತುಂಬಲಾರದ್ದಕ್ಕೆ ವಸೂಲ ಮಾಡಲು ಬಂದ ಅಧಿಕಾರಿಗಳು ಅವನ ಮಗನಾದ ಅಂಬರಾಯನೆಂಬುವವನ ತಲೆಯ ಮೇಲೆ ಕಲ್ಲಿನ ಪಡಿಯನ್ನು ಹೊರಿಸಿ ನಿಲ್ಲಿಸಿದ ಘಟನೆ ಇದಕ್ಕೆ ಸಾಕ್ಷಿಯಾಗಿದೆ.

ಮಹಾಸಿದ್ಧನು ನಳದೇಗಾಯಿಯ ದೇವಗೊಂಡಗೌಡನ ಮಗಳು ಗೌರಾದೇವಿಯನ್ನು ಮದುವೆಯಾಗಿದ್ದಾನೆ. ಹಾಗೂ ಅಂಬರಾಯ, ಯೋಗಿ, ಅವಧೂತ, ಮಳಿಮಲ್ಲಪ್ಪ ಎಂಬ ನಾಲ್ಕು ಮಕ್ಕಳನ್ನು ಪಡೆದಿದ್ದಾನೆ.

ಅಮೋಘಸಿದ್ಧನು ತನ್ನ ಪುಣ್ಯದ ಮಗನಿಗೆ ಮಹಾಸಿದ್ಧ ಎಂಬ ಹೆಸರನ್ನು ಇಟ್ಟಿರುವುದಕ್ಕೆ ಆತನ ಸಿದ್ಧಾಟಿಕೆ ಶಕ್ತಿಯ ಪ್ರಾಬಲ್ಯ ಕಾರಣವಿರುವಂತೆ ಇನ್ನೂ ಹಲವಾರು ಸಾಧ್ಯತೆಗಳಿವೆ. ಮಹಾಸಿದ್ಧರು ಎನ್ನುವವರು ತಾಂತ್ರಿಕ ಹಿಂದು ಹಾಗೂ ಟಿಬೇಟದ ಬೌದ್ಧದಲ್ಲಿ ಕಾಣಿಸಿಕೊಳ್ಳುವ ಸಾಧಕರು. ಇವರು ೭೫೦ರಿಂದ ೧೧೫೦ರ ಮಧ್ಯದ ಅವಧಿಯಲ್ಲಿ ತಂತ್ರ ಜಗತ್ತಿನಲ್ಲಿ ಪ್ರಸಿದ್ಧಿಯನ್ನು ಪಡೆದವರು. ತಾಂತ್ರಿಕ ಹಿಂದು ಹಾಗೂ ಟಿಬೇಟದ ಬೌದ್ಧರಲ್ಲಿ ೮೪ ಜನ ಮಹಾಸಿದ್ಧರನ್ನು ಹೆಸರಿಸುತ್ತಾರೆ.

Mahasiddhas are type of eccentric yogic or tantriks important in Tantrik Hinduism and Tibetian Buddhism. A Siddha is an individual who through the practices of sadhana attains the realisation of siddhis or psychic and spiritual abilities and powers. It was the Mahasiddha who instituted the practice that birthed the Inner Tantras.[೩೮]

ಅಮೋಘಸಿದ್ಧನಿಗೆ ಇಂಥ ಮಹಾಸಿದ್ಧರ ಸೈದ್ಧಾಂತಿಕತೆಯ ಪರಿಚಯವಿದ್ದುದನ್ನು ನಾವು ಊಹಿಸಲು ಸಾಧ್ಯ. ಮ.ಸು.ಕೃಷ್ಣಮೂರ್ತಿ ಅವರು 'ಸಿದ್ಧ ಸಾಹಿತ್ಯ' ಕೃತಿಯಲ್ಲಿ ನಾಥಪಂಥದ ಬಗೆಗೆ ಬರೆಯುತ್ತ ಗೋರಖನಾಥನನ್ನು ಮಹಾಸಿದ್ಧನೆಂದು ಕರೆಯಲಾಗುತ್ತಿತ್ತು ಎಂದು ಹೇಳಿದ್ದಾರೆ. ಈತನ ಮೂಲ ಸ್ಥಳದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಸಾಮಾನ್ಯವಾದ ನಂಬಿಕೆಯ ಪ್ರಕಾರ ಅವನು ಗೋದಾವರಿಯ ತೀರದ ಚಂದ್ರಗಿರಿಯಲ್ಲಿ ಜನಿಸಿದನೆಂದು ಭಾವಿಸಲಾಗಿದೆ. ಫ.ಗು.ಹಳಕಟ್ಟಿ ಅವರು ಇವನ ಜನ್ಮಸ್ಥಳ ವಿಜಾಪುರ ಜಿಲ್ಲೆಯ ಪಟ್ಟದಕಲ್ಲು ಇದ್ದಿರಬಹುದು ಎಂದು ವಾದಿಸಿದ್ದಾರೆ. ವಾದವಿವಾದ ಏನೇ ಇರಲಿ, ಆತ ಕರ್ನಾಟಕ ಹಾಗೂ ಮಹಾರಾಷ್ಟ್ರ ಗಡಿಭಾಗದ ಆಚೆ ಈಚೆಗಿನ ಪ್ರದೇಶದಲ್ಲಿ ನೆಲೆಸಿರುವುದಂತೂ ಸತ್ಯ. ಇದೇ ಪ್ರದೇಶದಲ್ಲಿ ನೆಲೆಸಿರುವ ಸಾಧನೆಯ ಮಾರ್ಗದಲ್ಲಿರುವ ಅಮೋಘಸಿದ್ಧನಿಗೆ ಗೋರಖನಾಥ/ಮಹಾಸಿದ್ಧ ಪಂಥದ ಪ್ರಭಾವವಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

೩.೨.೨.೨ ಕರಣಿ ಮಲಕಾರಿಸಿದ್ಧ : ಈತನ ಜನನದ ಬಗೆಗೆ ನಿದಿಷ್ಟವಾದ ಮಾಹಿತಿಯಿಲ್ಲ. 'ಸಿದ್ಧಸಿರಿ' ಗ್ರಂಥದ ಲೇಖಕರಾದ ಮದಗೊಂಡ ಮಾರಾಯರು ಅವನು ಗೋಕಾಕ ತಾಲೂಕಿನ ಕೆಮ್ಮನಕೋಲದವನು ಎಂದು ಬರೆದಿದ್ದಾರೆ. ಅವನ ತಂದೆ ಗುರುಸಿದ್ಧಗೌಡ ಹಾಗೂ ತಾಯಿ ಗುರುಬಾಯಿ ಎಂದಿದ್ದಾರೆ. ಅವನು ಕಿಲ್ಲಾರಿಗಳನ್ನು ಮೇಯಿಸುತ್ತ ನಾಡ ಸಂಚರಿಸುತ್ತ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿನ ಬಾವನಲವಗಿ ಗ್ರಾಮದಲ್ಲಿ ಬಂಗಾಲಿ ವಿದ್ಯ ಕಲಿತ ಬಾವಾನೊಬ್ಬನನ್ನು ಸೋಲಿಸಿದ ಎಂದು ಬರೆದಿದ್ದಾರೆ. ಅಲ್ಲದೆ ತಂದೆಯ ಆಜ್ಞೆಯ ಪ್ರಕಾರ ಗೋಕಾಕ ನಾಡಿಗೆ ಬಂದು ನೆಲೆಸುತ್ತಾನೆ. ಗೋಕಾಕದ ಗುಡ್ಡ ಪ್ರದೇಶದಲ್ಲಿ ಸಂಚರಿಸುತ್ತ ತನಗೆ ತಿಳಿದ ಗಿಡಮೂಲಿಕೆಗಳ ಜ್ಞಾನದ ಸಹಾಯದಿಂದ ಜನರ ರೋಗರುಜಿನಗಳನ್ನು ಹೋಗಲಾಡಿಸುತ್ತಿದ್ದ.

ಇಷ್ಟು ಮಾಹಿತಿಯನ್ನು ಬಿಟ್ಟರೆ ಮಲಕಾರಿಸಿದ್ಧನನ್ನು ಕುರಿತು ಯಾವುದೇ ಮಾಹಿತಿ 'ಸಿದ್ಧಸಿರಿ'ಯಲ್ಲಿ ಲಭ್ಯವಿಲ್ಲ. ಇದಕ್ಕಿಂತ ಹೆಚ್ಚಿನ ಮಾಹಿತಿ ಏನಾದರೂ ದೊರೆಯಬಹುದು ಎಂದು ಕೆಮ್ಮನಕೋಲಗೆ ಕ್ಷೇತ್ರಕಾರ್ಯಕ್ಕೆ ಹೋದರೆ ಅಲ್ಲಿಯೂ ಹೆಚ್ಚಿನ ಮಾಹಿತಿ ದೊರೆಯಲಿಲ್ಲ ಕರಣಿಮಲಕಾರಿಸಿದ್ಧನ ಗುಡಿಯ ಪೂಜಾರಿ ಸಿದ್ಧಲಿಂಗಪ್ಪ ಒಡೆಯರ ಮಲಕಾರಿಸಿದ್ಧನ ಬಗೆಗೆ ಒಂದು ಡೊಳ್ಳಿನ ಹಾಡನ್ನು ಹೇಳಿದರು. ಅದರಲ್ಲಿರುವ ವಸ್ತು ಕೂಡಾ ಬೇರೆ ಇರಲಿಲ್ಲ. ಆದರೆ ಇಲ್ಲಿ ತಿಳಿದ ಹೊಸ ವಿಷಯವೆಂದರೆ ಕರಣಿ ಮಲಕಾರಿಸಿದ್ಧನನ್ನು ವಾರಿಸಿದ್ಧ ಹಾಗೂ ಬಸರಿಸಿದ್ಧ ಎಂಬ ಹೆಸರಿನಿಂದಲೂ ಕರೆಯುತ್ತಾರೆ ಎನ್ನುವುದು. ಊರ ಒಳಗೆ ನೆಲೆಸಿರುವವನನ್ನು ವಾರಿಸಿದ್ಧನೆಂತಲೂ, ಊರ ಹೊರಗಿನ ಬಸರಿ ವನದಲ್ಲಿ ನೆಲೆಸಿರುವವನನ್ನು

ಬಸರಿಸಿದ್ಧ ಎಂತಲೂ ಕರೆಯುತ್ತಾರೆ. ಸಿಂಧಿ ಕುರುಬೆಟ್ಟದ ದೇಸಾಯಿಯವರಿಂದ ಕರಣಿ ಮಲಕಾರಿಸಿದ್ಧನಿಗೆ ಉಂಬಳಿಯಾಗಿ ಭೂಮಿ ದೊರೆತಿದೆ ಎಂದು ಇಲ್ಲಿನ ಪೂಜಾರಿ ಹೇಳಿದರಾದರೂ ಆ ಕುರಿತು ಅವರಲ್ಲಿ ಯಾವುದೇ ದಾಖಲೆಗಳಿರಲಿಲ್ಲ. ಭಂಡಾರ ಇಲ್ಲಿಯೂ ಬಳಕೆಯಾಗುತ್ತದೆಯಾದರೂ ಲಿಂಗದ ಮೋಹ ಅತಿಯಾಗಿ ಕಾಣಿಸಿತು. ಪಲ್ಲಕ್ಕಿಯಲ್ಲಿ ಕೂಡ್ರಿಸಿರುವ ದೇವರ ಕೊರಳ ತುಂಬ ಲಿಂಗದಕಾಯಿಗಳನ್ನು ಜೋತು ಬಿಡಲಾಗಿತ್ತು.

ಪ್ರತಿ ವರ್ಷ ಛಟ್ಟಿ ಅಮಾವಾಸ್ಯೆಗೆ ಮಲಕಾರಿಸಿದ್ಧನು ಪಾಲಕಿಯಲ್ಲಿ ಪಡೆದತಂದೆಯ ದರ್ಶನಕ್ಕೆಂದು ಮುಮ್ಮಟಗುಡ್ಡಕ್ಕೆ ಬರುತ್ತಾನೆ. ಪಡದಪ್ಪನ ನಿರ್ದೇಶನದ ಮೇರೆಗೆ ಮುಮ್ಮಟಗುಡ್ಡದಿಂದ ಕೆಮ್ಮನ ಕೋಲಿಗೆ ಹೋಗಿ ನೆಲೆಸುವಾಗ ದಾರಿಮಧ್ಯದಲ್ಲಿ ಅವನು ತಂಗಿದ ಸ್ಥಳಗಳ ಕುರಿತು ಇನ್ನೊಂದು ಡೊಳ್ಳಿನ ಹಾಡು ಈ ರೀತಿ ಮಾಹಿತಿ ನೀಡುತ್ತದೆ.

ಭೇಟಿಕೊಟ್ಟ ಬರವುನ ಮುತ್ತ್ಯಾಗsss ಹೋಗಿ ಛಟ್ಟೀಯ ಜಾತರ್ಯಾಗ
ಅಮೋಘಸಿದ್ಧನ ಮಾಯದ ಮಕ್ಕಳು ಮೂರು ಮಂದೀನsss
ಮಹಾದೇವನವತಾರ ಮಾಸಿದ್ಧಪ್ಪ ಗಂಗಿ ನಾಡೀಗsss
ಅರೆನಾಡದಾಗ ವಿಷ್ಣು ಅವತಾರ ಮಂಗರಾಯಗsss

ಎಂದು ಪ್ರಾರಂಭವಾಗುವ ಈ ಹಾಡು ಕರಣಿಮಲಕಾರಿಸಿದ್ಧನು ಗೋಕಾಕ ನಾಡಿಗೆ ಬಂದು ನೆಲೆಸಿದ ಕುರಿತು ಹೇಳುತ್ತದೆ.

ಭೇಟಿಕೊಟ್ಟ ಬರವುನ ಮುತ್ತ್ಯಾಗsss ಹೋಗಿ ಛಟ್ಟೀಯ ಜಾತರ್ಯಾಗ
ಹೋಮದ ಕಂಬಳಿ ನೇಮದ ಬೆತ್ತ ಮಲಕಾರಿ ಸಿದ್ಧssಗ
ಮುಧೋಳ ತಾಲೂಕ ಬೆಳಗಲಿ ಗ್ರಾಮ ಹೋಗ್ಯಾನಲ್ಲಿssಗ
ವಸ್ತಿ ಮಾಡ್ಯಾನ ಬೆಳಗಲಿ ಗ್ರಾಮಿssಗ ಬಂದಾನ ಸುಣ್ಣದಳ್ಳಿ ಊರಾಗ
ಭೇಟ್ಟಿ ಕೊಟ್ಟ ಬರವುನ ಮುತ್ತ್ಯಾಗsss ಹೋಗಿ ಛಟ್ಟೀಯ ಜಾತರ್ಯಾಗ
ಸುಣದಳ್ಳಿ ಊರಾಗ ವಸ್ತಿ ಮಾಡಿದ ಮಲಕಾರಿಸಿದ್ಧssಗ
ಸುಣದಳ್ಳಿ ಗ್ರಾಮ ಬಿಟ್ಟ ನಡದೋ ಗೋಕಾವಿ ಗುಡದಾಗ
ವಸ್ತಿ ಮಾಡ್ಯಾನಲ್ಲಿಗೆ ಕೇಳರಿ ಗುಡ್ಡದಡಿssssಗೆ
ಭೇಟಿಕೊಟ್ಟ ಬರುವುನು ಮುತ್ತ್ಯಾಗss ಹೋಗಿ ಛಟ್ಟಿಯ ಜಾತರ್ಯಾಗ
ಗೋಕಾಕ ತಾಲೂಕ ಶಿವಾಪುರ ಗುಡ್ಡದ ವಾರ್ಯಾಗ
ಮಲಕಾರಿಸಿದ್ಧ ಬಂದ ನೆನೆದೋ ಗುಡ್ಡದ ವಾರ್ಯಾಗsss

[illegible]

ಕವಿಮಾಡಿದ ಲಕ್ಷ್ಮಣಗ ಹಾಡ ಹೇಳಿದ ಸಭದಾಗ
ಭೇಟಿ ಕೊಟ್ಟ ಬರವುನು ಮುತ್ತ್ಯಾಗsss ಹೋಗಿ ಛಟ್ಟಿಯ ಜಾತರ್ಯಾಗ

ಲಕ್ಷ್ಮಣ ಐದೊಡ್ಡಿ ಅವರ ಈ ಹಾಡಿನ ಮೂಲಕ ನಮಗೆ ತಿಳಿದು ಬರುವ ಇನ್ನೊಂದು ಪ್ರಮುಖ ಸಂಗತಿಯೆಂದರೆ ಪುಣ್ಯದ ಮಕ್ಕಳು ಹಾಗೂ ವರವಿನ ಮಕ್ಕಳಲ್ಲಿ ಆಸ್ತಿ ವಿಷಯದಲ್ಲಿ ವೈಮನಸ್ಸು ಬಂದ ನಂತರ ಪುಣ್ಯದ ಮಕ್ಕಳು ಅರಕೇರಿ ಬಿಟ್ಟು ಯಾವ ಯಾವ ದಿಕ್ಕಿಗೆ ಹೋದರು ಎಂಬುದನ್ನು ತಿಳಿಸುತ್ತದೆ. ಮಾದೇವನ ಅವರಾತವೆನ್ನಿಸಿದ ಮಾಯದ ಮಗನಾದ ಮಾಸಿದ್ಧಪ್ಪನು ಗಂಗೆ ನಾಡಿಗೆ ಹೋಗಿ ನೆಲೆಸುತ್ತಾನೆ. ಅವನನ್ನು ಗಂಗೆನಾಡಿನ ಅರಸ ಎಂದೂ ಕರೆಯುತ್ತಾರೆ. ಗಂಗಿನಾಡು ಎಂದರೆ ಉತ್ತರದಿಕ್ಕು. ಅರಕೇರಿಯಿಂದ ಆತ ಉತ್ತರ ದಿಕ್ಕಿಗೆ ಸಂಚಾರ ಮಾಡುತ್ತ ಹೋದನು. ಎರಡನೆಯ ಮಗನಾದ ಮಂಗರಾಯನು ಆರೆ ನಾಡಿಗೆ ಹೋಗುತ್ತಾನೆ. ಮಹಾರಾಷ್ಟ್ರದ ಗಡಿಭಾಗವಾದ ಸದಲಗಾ ಹಾಗೂ ತೆರೆವಾಡದ ಕಡೆಗೆ ಆತ ಪಯಣ ಬೆಳೆಸುತ್ತಾನೆ. ಅದೇ ರೀತಿ ಮೂರನೆಯ ಮಗನಾದ ಮಲಕಾರಿಸಿದ್ಧನು ಗೋಕಾವಿ ನಾಡಿಗೆ ಬಂದಿದ್ದಾನೆ.

ಪುಣ್ಯದ ಮಕ್ಕಳಲ್ಲಿದ್ದ ಸಂಪತ್ತೆಂದರೆ ಪಡದಪ್ಪ ಕೊಟ್ಟ ಸಿದ್ಧಾಟಿಕೆಯ ಶಕ್ತಿ ಹಾಗೂ ಕಿಲಾರಿಗಳು. ಕಿಲಾರಿಗಳ ಸಂರಕ್ಷಣೆ ಮಾಡಬೇಕಾದದ್ದು ಅವರ ಕೆಲಸವಾಯಿತಾದ್ದರಿಂದ ಭೀವರಗಿಯಲ್ಲಿ ತಳವೂರಿ ನಿಲ್ಲುವ ಅವಶ್ಯಕತೆ ಅವರಿಗೆ ಬೀಳಲಿಲ್ಲ. ಪುಣ್ಯದ ಮಕ್ಕಳು ಇವರಾದ್ದರಿಂದ ನಾಡಗೌಡಕಿಯ ಅಧಿಕಾರ ಇವರಿಗೆ ಬರದೇ ಹೋಯಿತು. ಅದನ್ನೆಲ್ಲ ಅಮೋಘಸಿದ್ಧನ ವರವಿನ ಮಕ್ಕಳು ವಹಿಸಿಕೊಂಡು ಭೀವರಗಿಯನ್ನು ಕೇಂದ್ರ ವಾಗಿಸಿಕೊಂಡರು.

ಆಸ್ತಿ ವಿಷಯದಲ್ಲಿ ವೈಮನಸ್ಸು ಮಾಡಿಕೊಂಡು ಬೇರೆ ಬೇರೆ ಸ್ಥಳಗಳಿಗೆ ಚದುರಿ ಹೋಗುವ ಮೊದಲು ಇವರು ಅರಕೇರಿಯಲ್ಲಿ ಏನೇನು ಕೆಲಸ ಮಾಡಿಕೊಂಡಿದ್ದರು ಎಂಬುದನ್ನು ತಿಳಿಸುವ ಡೊಳ್ಳಿನ ಹಾಡೊಂದು ಹೀಗಿದೆ :

ಒಂದಾನೆ ಒಂದು ದಿನದಲ್ಲಿ ಒಂದಾನೆ ಒಂದು ಕಾಲೀಲಿ
ಇಂದಿನ ಕಾಲದಲ್ಲ್ಯಾನು ತುರುವಿನ ಹಟ್ಟಿಯ ಮ್ಯಾಲ್ಯಾನು
ತೆರವಾಡ ಮಂಗರಾಯನು ಏಳು ನೂರ ಕಿಲ್ಲಾರ
ಏಳುನೂರ ಕಿಲ್ಲಾರ ಅವನು ಕಾವುತಿದ್ದಾನ
ಕರಣಿ ಮಲಕಾರಿಸಿದ್ಧನು ಕರುಗಳ ಕಾವೂತಾನಲ್ಲೋ
ಮಾಯದ ಮಗನ ಮಾದಣ್ಣ ರಥದ ಮನಿಯ ಒಳಗ್ಯಾನು
ರಥದ ಮನಿಯ ಒಳಗ್ಯಾನ ತಾಯಿಯ ಸೇವಾದ ಒಳಗ್ಯಾನು
ಹರಹರ ಅನುವುತಾನಲ್ಲೊ ಶಿವಶಿವ ಅನುವುತಾನಲ್ಲೊ
ಶಿವಶಿವ ಅನುವುತಾನಲ್ಲೊ ಜಾಮಜಳಕಾ ಮಾಡ್ಯಾನೆ

[illegible]

[illegible]

[illegible]

[illegible]

[illegible]

ಜಾಮ ಜಳಕ ಮಾಡ್ಯಾನೆ ನೇಮನಿಷ್ಠೆಯ ಮಾಡ್ಯಾನೆ
ನೇಮನಿಷ್ಠೆಯ ಮಾಡ್ಯಾನೆ ತಾಯಿಯ ದಂಡೀಲಿ ಬಂದಾನೆ
ತಾಯಿಯ ದಂಡೀಲಿ ಬಂದಾನೆ ಪಾದಕ ಎರಗುತಾನಲ್ಲೊ
ಪದಮ ಜಾತದ ಪದಮವ್ವ ಬಲಗೈ ಹಸ್ತವ ಇಟ್ಟ್ಯಾಳೆ
ಹರಹರೋ ನನ ಕೈಲಾಸೋ ಲಾಗಬೇಗವ ಮಾಡ್ಯಾನೆ
ಲಾಗಬೇಗವ ಮಾಡ್ಯಾನೆ ಹಾಲಕವಡಿಯ ಹೊತ್ತಾನೆ[೩೬]

ಅಮೋಘಸಿದ್ಧನಲ್ಲಿ ಸೇವೆ ಮಾಡುತ್ತಿದ್ದಾಗ ಕರಣಿ ಮಲಕಾರಿಸಿದ್ಧ ಕರುಗಳನ್ನು ಕಾಯುವ ಕೆಲಸ ಮಾಡುತ್ತಿದ್ದರೆ, ಮಂಗರಾಯ ಕಿಲ್ಲಾರಿಗಳನ್ನು ಮೇಯಿಸುವ ಕೆಲಸ ಮಾಡುತ್ತಿದ್ದ ಹಾಗೂ ಮಾಸಿದ್ದಪ್ಪ ಹಾಲಕಾವಡಿಯಲ್ಲಿ ಕಿಲ್ಲಾರಿಗಳ ಹಾಲನ್ನು ತುಂಬಿ ಸಾಗಿಸುವ ಕೆಲಸವನ್ನು ಮಾಡುತ್ತಿದ್ದ. ಇದೇ ಸಮಯದಲ್ಲಿ ವರವಿನ ಮಕ್ಕಳು ಗರಡಿಮನೆಯಲ್ಲಿ ತಾಲೀಮು ಮಾಡುತ್ತ, ದೇಶಸುತ್ತುವ ಹಂಬಲವುಳ್ಳವರಾಗಿ ರಥವನ್ನು ಕೈವಶಮಾಡಿಕೊಳ್ಳುವ ಕೆಲಸಗಳಲ್ಲಿ ನಿರತರಾಗಿದ್ದಾರೆ. ಕಿಲ್ಲಾರಿಗಳನ್ನು ಕಾಯುವ ಕೆಲಸದಲ್ಲಿ ತೊಡಗಿದ್ದ ಪುಣ್ಯದ ಮಕ್ಕಳು ಚಲನಶೀಲತೆಯನ್ನು ಪಡೆದುಕೊಂಡು ಭೀವರಗಿ ಕೇಂದ್ರದಿಂದ ದೂರ ದೂರ ಚದುರಿಹೋದರೆ ವರವಿನ ಮಕ್ಕಳು ಪಿತ್ರಾರ್ಜಿತ ಆಸ್ತಿಯ ರಕ್ಷಣೆ ಮಾಡುತ್ತ ಭೀವರಗಿ ಕೇಂದ್ರವನ್ನು ಗಟ್ಟಿಗೊಳಿಸಿಕೊಳ್ಳುತ್ತ ಹೋದರು.

೩.೨.೨.೩. ತೆರೆವಾಡ ಮಂಗರಾಯ

ಈತನು ಅಮೋಘಸಿದ್ಧನ ಮತ್ತೊಬ್ಬ ಪುಣ್ಯದ ಮಗ. ಈತನ ತಂದೆ ತಾಯಿಗಳು ಮಹಾರಾಷ್ಟ್ರದ ಅಹಮ್ಮದ ನಗರದವರು. ಅಹಮದನಗರದಲ್ಲಿ ಗೌಡಕಿ ಮನೆತನಕ್ಕೆ ಸೇರಿದ ಇವರಿಗೆ ಸಂತಾನ ಫಲವಿರಲಿಲ್ಲ. ಅಮೋಘಸಿದ್ಧನಲ್ಲಿ ಮಕ್ಕಳಿಗಾಗಿ ಹರಕೆ ಹೊರುತ್ತಾರೆ. ಹಾಗೆ ಹುಟ್ಟಿದ ಮೊದಲ ಮಗನೇ ಮಂಗರಾಯ. ಸ್ವಲ್ಪ ಬೆಳೆದು ದೊಡ್ಡವನಾದ ನಂತರ ಅಮೋಘಸಿದ್ಧನ ಪುಣ್ಯದ ಮಗನಾಗಿ ಸ್ವೀಕರಿಸಲ್ಪಡುತ್ತಾನೆ. ಕಿಲ್ಲಾರಿಗಳನ್ನು ಮೇಯಿಸುತ್ತಾ ಗುರುವಿನ ಸೇವೆ ಮಾಡಿಕೊಂಡಿದ್ದ ಈತನಿಗೆ ಅಮೋಘಸಿದ್ಧನು ಆಸ್ತಿ ಪಾಲಿವಾಟನಿ ಸಮಯದಲ್ಲಿ 'ಹೋಮದ ಕಂಬಳಿ'ಯನ್ನು ಕೊಟ್ಟು ಕಳುಹಿಸುತ್ತಾನೆ. ಹೋಮದ ಕಂಬಳಿ ಮಂಗರಾಯನ ಪಾಲಾದ ವಿಷಯ ತಿಳಿದ ವರವಿನ ಮಕ್ಕಳಿಗೆ ಅಸಮಾಧಾನವಾಗುತ್ತದೆ. ವರವಿನ ಮಕ್ಕಳಲ್ಲಿ ಹಿರಿಯವನಾದ ಅವಧುಸಿದ್ಧನು ಮಂಗರಾಯನನ್ನು ಬೆನ್ನಟ್ಟಿ ಹೋಗಿ ಸದಲಗಾದ ಸಮೀಪದಲ್ಲಿ ತಡೆದು ನಿಲ್ಲಿಸಿ ಕಂಬಳಿ ಮರಳಿ ಕೊಡಲು ಕೇಳುತ್ತಾನೆ. ವಾದ ವಿವಾದ ಬೆಳೆಯುತ್ತದೆ. ಆಗ ಸದಲಗಾದಲ್ಲಿದ್ದ ಶಮನಮೀರಾ ಎಂಬ ಸಂತ ಇವರ ಜಗಳವನ್ನು ಬಗೆಹರಿಸುತ್ತಾನೆ. ಮಂಗರಾಯನಿಗೇ ನ್ಯಾಯಯುತವಾಗಿ ಹೋಮದ ಕಂಬಳಿ ಸೇರಬೇಕಾದದ್ದು ಎಂದು ತೀರ್ಮಾನಿಸಲಾಗುತ್ತದೆ. ಕಂಬಳಿಯ ಮೇಲಿನ ಹಕ್ಕಿನ

ವಿಷಯದಲ್ಲಿ ಇವರಿಬ್ಬರ ವೈಮನಸ್ಸು ಎಷ್ಟು ದೀರ್ಘಕ್ಕೆ ಹೋಗುತ್ತದೆ ಎಂದರೆ ಅಂದು ಸದಲಗಾದಲ್ಲಿಯೇ ತಂಗಿದ್ದ ಅವಧೂಸಿದ್ಧನಿಗೆ ವಿಷಪ್ರಾಶನ ಮಾಡಿಸಲಾಗುತ್ತದೆ.

ಕಂಬಳಿ ಹಕ್ಕಿನ ವ್ಯಾಜ್ಯದಲ್ಲಿ ತನ್ನ ಪರವಾಗಿ ನಿಂತ ಶಮನಮೀರಾನೊಂದಿಗೆ ಮಂಗರಾಯನಲ್ಲಿ ಸಖ್ಯ ಉಂಟಾಗುತ್ತದೆ. ಅಲ್ಲಿಂದ ಸಂಚಾರ ಹೊರಟ ಮಂಗರಾಯ ಮೂರು ಕಡೆಗಳಲ್ಲಿ ತನ್ನ ಪ್ರಭಾವ ಬೆಳೆಯಿಸುತ್ತಾನೆ. ಕೋಲಾಪುರ ಜಿಲ್ಲೆಯ ಶಿರೋಳ ತಾಲೂಕಿನ ತೆರೆವಾಡ, ಸಾಂಗಲಿ ಜಿಲ್ಲೆಯ ಮೀರಜ ತಾಲೂಕಿನ ಕೋತಳಿ ಹಾಗೂ ಅಲ್ಲಿಯೇ ಸಮೀಪದ ಗುಣಕಿ ಹೀಗೆ ಸಂಚರಿಸುತ್ತ ತನ್ನಲ್ಲಿರುವ ಔಷಧ ಜ್ಞಾನ ಹಾಗೂ ಸಿದ್ಧಾಟಿಕೆಯ ಸಹಾಯದಿಂದ ಪ್ರಭಾವ ಬೆಳೆಯಿಸಿಕೊಳ್ಳುತ್ತಾನೆ.

ಈತ ಪಟ್ಟಣಕೋಡಿಯ ವಿಠಲರಾಯನ ಮಗಳನ್ನು ಮದುವೆಯಾಗಿ ಅಮರನಾಥ, ರುದ್ರನಾಥ ಹಾಗೂ ಹಾಲಸಿದ್ಧ ಎಂಬ ಮೂರು ಮಕ್ಕಳನ್ನು ಪಡೆಯುತ್ತಾನೆ. ಅಮೋಘಸಿದ್ಧನ ಮೂವರು ಪುಣ್ಯದ ಮಕ್ಕಳಲ್ಲಿ ಈ ಮಂಗರಾಯ ನೇರವಾಗಿ ನಾಥ ಪಂಥದ ಪ್ರಭಾವದಲ್ಲಿ ಬಂದಿರುವ ಲಕ್ಷಣಗಳು ಇವೆ. ತೆರೆವಾಡ ಗ್ರಾಮದ ಪೂರ್ವ ದಿಕ್ಕಿನಲ್ಲಿ ಹರಿಯುವ ಪಂಚಗಂಗಾ ನದಿಯ ತಟದಲ್ಲಿ ಮುಕ್ತೇಶ್ವರನ ಮಂದಿರವಿದೆ. ಈ ಮುಕ್ತೇಶ್ವರ ಬೇರೆ ಯಾರೂ ಅಲ್ಲ. ಅವನು 'ಏಕನಾಥ' ಎಂಬ ನಾಥನ ಮೊಮ್ಮಗನಾಗಿದ್ದಾನೆ. ಮಂಗರಾಯ ತೆರೆವಾಡಕ್ಕೆ ಬಂದು ನೆಲೆಸಲು ಏಕನಾಥನ ಆಕರ್ಷಣೆಯೇ ಕಾರಣವಾಗಿರಬಹುದು.

೩.೨.೩ ವರವಿನ ಮಕ್ಕಳು

ಈಗಾಗಲೇ ಹಲವಾರು ಬಾರಿ ಚರ್ಚೆಯಾಗಿರುವಂತೆ ಅಮೋಘಸಿದ್ಧನು ತನ್ನ ಸಾಧನೆಯ ಒಂದು ಹಂತದಲ್ಲಿ 'ಬಿಂದು ನಾಶದ'ಬಗೆಗೆ ಬಹುಜಾಗರೂಕನಾಗಿದ್ದ. ಈ ಜಾಗರೂಕತೆಯ ಕಾರಣವಾಗಿಯೇ ಮದುವೆ ಯಾಗಿದ್ದರೂ ಹೆಂಡತಿಯಿಂದ ದೂರವಿದ್ದು ಮುಮ್ಮೆಟಗುಡ್ಡದಲ್ಲಿ ಸಾಧನೆಗೆ ತೊಡಗಿದ್ದ. ಗುರುವಿನ ಹೆಂಡತಿಯಾದ ಪದ್ಮಾವತಿಯ ಕಷ್ಟವನ್ನು ನೋಡಲಾಗದ ಹಿರಿಯ ಪುಣ್ಯದ ಮಗನಾದ ಮಹಾಸಿದ್ಧನು ಗುರುವಿನಲ್ಲಿಗೆ ಬಂದು ತನಗೆ ಬೆನ್ನು ಭುಜದ ಹಾಗೆ ತಮ್ಮಂದಿರು ಬೇಕು ಎಂದು ಬೇಡಿಕೊಳ್ಳುತ್ತಾನೆ. ಅವರು ಬಂದರೆ ಕಾಡಬಾರದ್ದು ಕಾಡುತ್ತಾರೆ. ಬೇಡಬಾರದ್ದು ಬೇಡುತ್ತಾರೆ. ಆದ್ದರಿಂದ ಅವರು ಬೇಡವೇ ಬೇಡ ಎಂದು ಅಮೋಘಸಿದ್ಧ ಎಚ್ಚರಿಕೆ ನೀಡುತ್ತಾನೆ. ಆ ಎಚ್ಚರಿಕೆಗೆ ಅಂಜದಿದ್ದಾಗ ಅನಿವಾರ್ಯವಾಗಿ ಅಮೋಘಸಿದ್ಧ ಪದ್ಮಾವತಿಯಲ್ಲಿ ನಾಲ್ಕು ಜನ ಗಂಡುಮಕ್ಕಳು ಹಾಗೂ ಒಬ್ಬಳು ಹೆಣ್ಣುಮಗುವನ್ನು ಪಡೆಯುತ್ತಾನೆ. ಹೀಗೆ ಜನಿಸಿದ ನಾಲ್ಕು ಜನ ಗಂಡು ಮಕ್ಕಳನ್ನು ವರವಿನ ಮಕ್ಕಳು ಎಂದು ಕರೆಯುತ್ತಾರೆ. ವರವಿನ ಮಕ್ಕಳ ಆಗಮನದೊಂದಿಗೆ ಈ ಪಂಥದಲ್ಲಿ ಶಿಷ್ಯ ಪರಂಪರೆ ನಿಲುಗಡೆಯಾಗಿ ಪುತ್ರ ಪರಂಪರೆ ಚಲಾವಣೆಗೆ ಬಂದಿತು. ಇವರಲ್ಲಿಯೂ ಹಲವಾರು ಜನ ಬಹುದೊಡ್ಡ ಸಿದ್ಧಾಟಿಕೆಯ ಶಕ್ತಿಯುಳ್ಳವರಿದ್ದಾ

ರಾದರೂ ಅದು ದ್ವಿತೀಯ ಸ್ಥಾನಕ್ಕೆ ತಳ್ಳಲ್ಪಟ್ಟು 'ಹುಟ್ಟು', ತನ್ಮೂಲಕ ಬರುವ ಅಧಿಕಾರ ಪ್ರಥಮ ಸ್ಥಾನ ಸಂಪಾದಿಸಿತು. ವರವಿನ ಮಕ್ಕಳ ಆಗಮನವೆಂದರೆ ಅಮೋಘಸಿದ್ಧನ ಮೂಲ ತಾತ್ವಿಕತೆಯ ಮೇಲೆ ಬಿದ್ದ ಪ್ರಥಮ ಹೊಡೆತ. ವಾರಸುದಾರಿಕೆ ಹುಟ್ಟನ್ನು ಪ್ರಮಾಣೀಕರಿಸಿ ಬರಲು ಪ್ರಾರಂಭಿಸಿದ್ದೆ ತಡ ಪರಂಪರೆಯ ಒಡಲೊಳಗೆ ಅನೇಕ ಸಂಘರ್ಷಗಳು ಹುಟ್ಟಿಕೊಂಡವು. ಅಂಥ ಸಂಘರ್ಷದ ತುಣುಕುಗಳನ್ನು ಪುಣ್ಯದ ಮಕ್ಕಳ ಕುರಿತು ಈ ಹಿಂದೆ ಚರ್ಚಿಸುವಾಗ ಕಂಡುಕೊಂಡಿದ್ದೇವೆ. ಆಸ್ತಿ ಪಾಲವಾಟನಿಯ ಕುರಿತು ಈ ಹಿಂದಿನ ಚರ್ಚೆಯನ್ನು ಗಮನಿಸಿದರೆ ಅಮೋಘಸಿದ್ಧ ತನ್ನ ಚರಾಸ್ತಿಯನ್ನು ಅಂದರೆ ಹೋಮದ ಕಂಬಳಿ, ನೇಮದ ಬೆತ್ತ, ಭಂಡಾರ ಭರಣಿ ಹಾಗೂ ಒಂದಿಷ್ಟು ಕಿಲಾರಿಗಳನ್ನು ಪುಣ್ಯದ ಮಕ್ಕಳಿಗೆ ಕೊಟ್ಟಿದ್ದಾನೆ. ಮತ್ತು ವರವಿನ ಮಕ್ಕಳಿಗೆ ತನ್ನ ಸ್ಥಿರಾಸ್ತಿಯನ್ನು ಕೊಟ್ಟಿದ್ದಾನೆ. ಹೀಗಾಗಿಯೇ ಪುಣ್ಯದ ಮಕ್ಕಳು ಚಲಿಸುವ ಗುಣದವರಾಗಿ ನಾಡು ಸುತ್ತಿದರು. ವರವಿನ ಮಕ್ಕಳು ಸ್ಥಿರ ಗುಣದವರಾಗಿ ಭೀವರಗಿಯ ಕೇಂದ್ರಸ್ಥಾನಕ್ಕೆ ಅಂಟಿಕೊಂಡರು.

ಅವತಾರ ಅವಧುಸಿದ್ಧ, ಬುದ್ನುಳ್ಳ ಬಿಳಿಯಾನಿಸಿದ್ಧ, ಆಚಾರಗೌಡ ಸೋಮಣ್ಣ ಮುತ್ತ್ಯಾ, ಕಡಿಹುಟ್ಟ ಕನ್ನಮುತ್ತ್ಯಾ ಇವರು ನಾಲ್ವರು ವರವಿನ ಮಕ್ಕಳು. ಇವರಿಗೆ ರೆಬಕವ್ವ ಎಂಬ ಒಬ್ಬ ತಂಗಿ ಇದ್ದಾಳೆ. ಬಿಂದು ಪರಂಪರೆಯ ಇವರೆಲ್ಲ ಭೀವರಗಿಯನ್ನು ಗುರುಮನೆಯನ್ನಾಗಿಸಿಕೊಂಡು ಅಮೋಘಸಿದ್ಧನ ಪರಂಪರೆಯನ್ನು ಬೆಳೆಯಿಸಿಕೊಂಡು ಬಂದಿದ್ದಾರೆ. ಈ ನಾಲ್ವರನ್ನು ಬೇರೆ ಬೇರೆ ದೇವರುಗಳ ಅವತಾರವೆಂದು ಭಕ್ತ ವರ್ಗ ನಂಬಿದೆ.

ವೀರಭದ್ರನ ಅವತಾರ ಅವತಾರಿ ಅವಧು ಸಿದ್ಧಾನೆ
ಅವತಾರಿ ಅವಧುಸಿದ್ಧನೆ ನಾಮಕರಣ ಮಾಡ್ಯಾರೆ
ಹರಹರೊ ನನ ಕೈಲಾಸೋ ಆರುಮುಖದ ಅವತಾರೋ
ಆರುಮುಖದ ದೇವರ ಅವತಾರ ಬುದ್ನುಳ್ಳ ಬಿಳಿಯಾನಿಸಿದ್ದಾನೆ
ಬುದ್ನುಳ್ಳ ಬಿಳಿಯಾನಿಸಿದ್ಧಾಂತ ನಾಮಕರಣ ಇಟ್ಟಾರೆ
ಹರಹರೋ ನನ ಕೈಲಾಸೋ ಗಜಮುಖ ಗಣಪತಿ ಅವತಾರೊ
ಗಜಮುಖ ಗಣಪತಿ ಅವತಾರೆಂದರೆ ಆಚಾರಗೌಡ ಸೋಮಯ್ಯೋ
ಆಚಾರಗೌಡ ಸೋಮಣ್ಣ ಮುತ್ತ್ಯಾ ನಾಮಕರಣ ಇಟ್ಟಾರೆ
ಜ್ಯೋತಿ ಒಳಗಿನ ಜುಳು ಜುಳು ಮುತ್ತು ಶೇಷನ ಅವತಾರ ಅಂದಾರೆ
ಶೇಷನ ಅವತಾರ ಅಂದಾರೆ ಜ್ಯೋತಿ ಕನ್ನಪ್ಪ ಒಡಿಯಾನಿ
ಜ್ಯೋತಿ ಕನ್ನಪ್ಪ ಒಡಿಯಾನೆ ನಾಮಕರಣ ಇಟ್ಟಾರೆ

[illegible]

[illegible]

[illegible]

ಹರಹರೋ ನನ ಕೈಲಾಸೋ ತಂಗಿ ರೆಬಕವ್ವನಂದರ

ತಂಗಿ ರೆಬಕವ್ವನಂತ ನಾಮಕರಣ ಇಟ್ಟಾರೆ[೪೧]

೩.೨.೩.೧ ಅವತಾರ ಅವಧುಸಿದ್ಧ : ಈತ ಅಮೋಘಸಿದ್ಧನ ಮೊದಲನೆಯ ವರವಿನ ಮಗ. ಈತನನ್ನು ವೀರಭದ್ರನ ಅವತಾರವೆಂದು ಭಾವಿಸಲಾಗಿದೆ. ಸದಾ ಮುಂಗೋಪಿಯಾದ ಈತ ಹಲವಾರು ಅಪಾಯಗಳನ್ನು ಎದುರಿಸಬೇಕಾಗುತ್ತದೆ. ಪಿತ್ರಾರ್ಜಿತವಾಗಿ ತಮಗೆ ಸೇರಬೇಕಾದದ್ದು ಪುಣ್ಯದ ಮಕ್ಕಳ ಪಾಲಾಗುವುದನ್ನು ಈತ ಸಹಿಸಿಕೊಳ್ಳಲಾರ. ತಂದೆ ಅಮೋಘಸಿದ್ಧ ಮಾಯದ ಮಗ ಮಾದಣ್ಣನಿಗೆ ಭಂಡಾರ ಭರಣಿಯನ್ನು ಕೊಟ್ಟಾಗ ಅದನ್ನು ವಿರೋಧಿಸಿದವನು ಅವಧುಸಿದ್ಧನೆ. ಭಂಡಾರ ಭರಣಿಯನ್ನು ಮರಳಿ ಪಡೆಯಲು ಏನೆಲ್ಲ ಪ್ರಯತ್ನ ಮಾಡುತ್ತಾನೆ. ಸಾಧ್ಯವಾಗದಿದ್ದಾಗ ಹತಾಶನಾಗಿ ಮಾದಣ್ಣನಿಗೆ ಶಾಪ ಹಾಕುತ್ತಾನೆ. "ನಿನ್ನ ಎಲವ ಹೋಗಿ ಕಟಬರ ಓಣೆಯಲ್ಲಿ ಬೀಳಲಿ" ಎಂದು. ಪ್ರತಿಯಾಗಿ ಮಾಸಿದ್ಧಪ್ಪನಿಂದ ಶಾಪ ಹಾಕಿಸಿಕೊಳ್ಳುತ್ತಾನೆ: 'ಹೊನ್ನ ಭೀವರಗಿಯಲ್ಲಿ ಅನ್ನ ಪಾವನವಾಗಲಿ' ಎಂದು. ಈ ಶಾಪ ಪ್ರತಿಶಾಪಗಳ ದ್ಯೋತಕವೆಂಬಂತೆ ಮಾಸಿದ್ಧಪ್ಪನ ಗುಡಿಯೊಂದು ಸೋಲಾಪುರದ ಕಟಬರ ಓಣೆಯಲ್ಲಿದೆ ಹಾಗೂ ಹೊನ್ನ ಭೀವರಗಿಯಲ್ಲಿ ಅಪಾರವಾದ ಆಸ್ತಿಯನ್ನು ಅವಧುಸಿದ್ಧ ಸಂತತಿಯವರು ಹೊಂದಿದ್ದರೂ ಒಂದೊಂದು ಸಂದರ್ಭದಲ್ಲಿ ಅವರಿಗೆ ಬಡತನ ಬಹುವಾಗಿ ಕಾಡಿದೆ. ಭೀವರಗಿಯಲ್ಲಿ ದೊರೆತ ಮೋಡಿಲಿಪಿಯಲ್ಲಿರುವ ಥಳಪತ್ರ(A letter of grant given to the landed proprieter)ದ ಕೆಲಸಾಲುಗಳಲ್ಲಿ ಇದನ್ನು ಗಮನಿಸಬಹುದು.

ರಾಜಶ್ರೀ ಸೋಮಣ್ಣ ಸಿದ್ಧಪ್ಪ ವಡೆರು ಅವಧೂತ ಮುತ್ತ್ಯಾ, ಮಧಪ್ಪ ಸೊಮಣ್ಣ ಜೆಡಿವಡೆರು, ಸೋಮನ ಮುತ್ತ್ಯಾ ಮಾದಪ್ಪ ಮನವಡೆರು, ಕರ್ಣ (ಕನ್ನ) ಮುತ್ತ್ಯಾ ಇವರಿಗೆ ಮೌಜೆ ಭೀವರಗಿ-

ಸುಭಾನಜಿ ಅಮಣ್ಣ ಪಾಟೀಲ ಮತ್ತು ಮದವಣ್ಣ ಕರಿಯಣ್ಣಾ ಸೋಮಲಿಂಗ ವಡೆರು, ಮಧವಣ್ಣ ವಡೆರು ಪೂಜಾರಿ ಮೌಜೆ ಭೀವರಗಿ ಸನ್ ೧೧೬೩ (ಇಸವಿ ೧೭೫೪ ಕ್ರಿ.ಶ.) ಬರೆದುಕೊಟ್ಟ ಥಳಪತ್ರ ಹೀಗಿರುತ್ತದೆ.

ನಮ್ಮ ಮತ್ತು ನಿಮ್ಮ ನಡುವೆ ಪಾಟೀಲಕಿ ಮತ್ತು ಇನಾಮ ಹಕ್ಕಿನ ಬಗ್ಗೆ ಜಗಳ ಆಗಿದೆ ಹಾಗೂ ಶ್ರೀ ದೇವರ ಪೂಜೆಯ ಹಕ್ಕಿನ ಬಗ್ಗೆ ಇತರೆ ಅನೇಕ ಕಾರಣಗಳಿಂದ ಜಗಳ ನಡೆಯಿತು. ಕಾರಣ ನೀವು ಮೌಜೆ ಜಿಗಜೀವಣಗಿ ಪರಗಣಾ ಹ(ಬ)ರಡೋಲ ಸ್ಥಳಕ್ಕೆ ಹೋಗಿದ್ದೀರಿ. ಅಲ್ಲಿ ದೈವದ ಪ್ರಕಾರ ಇರುತ್ತಿದ್ದಿರಿ. ಆದರೆ ಇತ್ತೀಚೆಗೆ ಪೂಜೆಯ ಸಂಬಂಧ ಹಕ್ಕಿನ ಬಗ್ಗೆ ಜಗಳ ಬಂದು ನೀವು ಜಿಗಜೀವಣಿಗೆ ಹೋದಿರಿ. ಊರಿನ ಜಮೀನಿನ ಬಾಡಿಗೆ ಕೊಡದೆ ಇರುವುದರಿಂದ ಹಾನಿ ಆಗಿದೆ[೪೨]

ಅವಧುಸಿದ್ಧನ ಬಗೆಗೆ ಲಭ್ಯವಿರುವ ಮಾಹಿತಿಯನ್ನು ಗಮನಿಸಿದರೆ ಅವನು ಸದಾ ಮಹತ್ವಾಕಾಂಕ್ಷಿಯ ಹಾಗೆ ಕಾಣುತ್ತಾನೆ. ಅವನ ಕಿರಿಯ ಸಹೋದರರಲ್ಲಿ ಈ ಮಹತ್ವಾಕಾಂಕ್ಷೆಯನ್ನು ಇವನೇ ತುಂಬಿದ್ದಾನೆ.

ಹೀಗಾಗಿ ಇವರು ಯಾವಾಗಲೂ ತಮ್ಮ ಅಧಿಕಾರದ ಗಡಿರೇಖೆಗಳನ್ನು ವಿಸ್ತರಿಸಲು ಹಂಬಲಿಸುತ್ತಾರೆ. ಅವರೆಲ್ಲಾ ಸದಾ ನಾಡ ನೋಡಲು, ದೇಶ ಶೋಧಿಸಲು, ಗೌಡಕಿ ಸಾಧಿಸಲು ಭಕ್ತರನ್ನು ಗಳಿಸಲು ಬಯಸುತ್ತಾರೆ. ಇದು ಫ್ಯೂಡಲ್ ಮನೋವೃತ್ತಿಯ ಸಂಕೇತ. ಪುಣ್ಯದ ಮಕ್ಕಳು ಕಿಲ್ಲಾರಿಗಳನ್ನು ಕಾಯುತ್ತ ನಾಡ ಸುತ್ತುವುದಕ್ಕೂ ವರವಿನ ಮಕ್ಕಳು ದೇಶಶೋಧನೆಯ ಕ್ರಿಯೆಗೂ ವ್ಯತ್ಯಾಸವಿದೆ. ಒಂದು ಉತ್ಪಾದಕನ ಮನಸ್ಸು, ಇನ್ನೊಂದು ಉತ್ಪಾದನೆಯ ಮೇಲೆ ಹಕ್ಕು ಚಲಾಯಿಸುವ ಮನಸ್ಸು. ವರವಿನ ಮಕ್ಕಳ ಈ ಸ್ವಭಾವ ತಿಳಿದಿದ್ದ ತಂದೆ ಅಮೋಘಸಿದ್ಧ ಅವರಿಗೆ ಕೆಲವು ಎಚ್ಚರಿಕೆಯ ಮಾತುಗಳನ್ನು ಹೇಳಿದ್ದಾನೆ: 'ಭಕ್ತರಿಗೆ ಭಾಗ್ಯವಿರಲಿ, ನನ್ನ ಮಕ್ಕಳಿಗೆ ಬಡತನವಿರಲಿ.'

ತಂದೆಯ ಎಚ್ಚರಿಕೆಯ ಮಾತು ವರವಿನ ಮಕ್ಕಳ ಮೇಲೆ, ಅದರಲ್ಲೂ ವಿಶೇಷವಾಗಿ ಅವಧುಸಿದ್ಧನ ಮೇಲೆ ಎಳ್ಳಷ್ಟು ಪ್ರಭಾವ ಬೀರಿದಂತಿಲ್ಲ. ಅಧಿಕಾರ ವಿಸ್ತರಣೆಯ ಅವರ ನಿತಾಂತ ಹಂಬಲವನ್ನು ಅವರು ಹರಣದ ಕೆರೆಯಲ್ಲಿರುವ ಪಾಂಡವರ ರಥವನ್ನು ಎಬ್ಬಿಸುವ ಸನ್ನಿವೇಶದಲ್ಲಿ ನೋಡಬಹುದು. ಕೆರೆಯಲ್ಲಿ ಐಕ್ಯವಾಗಿದ್ದ ರಥವನ್ನು ಎಬ್ಬಿಸುವ ಕಥನದ ವಿವರದಲ್ಲಿ ಅವಧುಸಿದ್ಧನ ವ್ಯಗ್ರತೆಯನ್ನು ಕಾಣಬಹುದು. ಬಿಳಿಯಾನಿಸಿದ್ಧನು ಹರಣದ ಕೆರೆಯಲ್ಲಿನ ರಥವನ್ನು ಎಬ್ಬಿಸಲು ಪ್ರಯತ್ನಿಸಿ ಸೋಲುತ್ತಾನೆ. ಆದರೆ ಅವಧು ಸಿದ್ಧ ತನ್ನ ನಾಲಗೆಯನ್ನು ಸೀಳಿಕೊಂಡು ಅಲ್ಲಿ ಸಿದ್ಧಪಡಿಸಿದ್ದ ರಂಗಕುಂಭಕ್ಕೆ ರಕ್ತ ತರ್ಪಣಮಾಡಿ ರಥವನ್ನು ಎಬ್ಬಿಸುತ್ತಾನೆ. ಅವನ ಈ ಸ್ವಹಿಂಸೆಯ ತೀವ್ರತೆ ಅವನ ಮಹತ್ವಾಕಾಂಕ್ಷಿ ಮನಸ್ಸಿಗೆ ಹಿಡಿದ ಕನ್ನಡಿ. ಸಣ್ಣವರಿದ್ದಾಗ ಪುಣ್ಯದ ಮಕ್ಕಳು ಕಿಲಾರಿಗಳ ರಕ್ಷಣೆಯಲ್ಲಿ ಪೋಷಣೆಯಲ್ಲಿ ತೊಡಗಿದ್ದರೆ ವರವಿನ ಮಕ್ಕಳು ತಮ್ಮ ಅಂಗ ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ಕೆಲಸದಲ್ಲಿ ತೊಡಗಿದ್ದರು. ಅವರು ಅಂಗ ಸಾಮರ್ಥ್ಯ ಹೆಚ್ಚಿ ಸಿಕೊಳ್ಳಲೆಂದು ಅವರಿಗಾಗಿಯೇ ಒಂದು ವಿಶೇಷ ಗರಡಿ ಮನೆಯನ್ನು ನಿರ್ಮಿಸಲಾಗುತ್ತದೆ. ಅವರಿಗಾಗಿ ನಿರ್ಮಾಣವಾದ ಗರಡಿಮನೆಯನ್ನು ನೋಡಿದರೆ ಅರಸು ಮಕ್ಕಳ ಅಂಗಸಾಧನೆಯ ಸ್ಥಳಕ್ಕಿಂತ ಕಡಿಮೆಯಿಲ್ಲ ವೆನಿಸುತ್ತದೆ.

ಒಂದ ರಾತರಕಿಯೊಳಗೆಲ್ಲ ಗರಡಿಯ ಮನಿಯ ನೋಡಲ್ಲಿ
ಗರಡಿಯ ಮನಿಯ ನೋಡಪ್ಪ ತಯ್ಯಾರ ಮಾಡಲಿ ಬೇಕಲ್ಲ
ಮಾಯದ ಮಗನ ಮಾದಣ್ಣ ಭೂತಾಳಿಗ ಲಾಲಿಸ ನುಡದಾನ
ಹಿಂಡದೆವ್ವಿನ ಗಂಡನೋ ನನ ಪುಂಡ ಭೂತಾಳ ಸಿದ್ಧಾನೋ
ಪುಂಡಭುತಾಳಸಿದ್ದನೋ ಒಳ್ಳೇದ ಒಳ್ಳೇದ ಅಂದಾನೋ
ಒಳ್ಳೇದ ಒಳ್ಳೇದ ಅಂದಾನೋ ಲಾಗಬೇಗವ ಮಾಡ್ಯಾನೋ
ಲಾಗ ಬೇಗವ ಮಾಡ್ಯಾನೇ ಖೇತ ಭೂತನ ಕರಸ್ಯಾನೇ
....

[illegible]

[illegible]

[illegible]

[illegible]

ಒಂದ ರಾತರಿ ಒಳಗ್ಯಾನ ಪಾಯಾ ಅಗಿವೂತಾರಲ್ಲೋ
ಪಾಯಾ ಅಗಿವೂತಾರಲ್ಲೋ ಅವಾರ ಕಟ್ಟಸೂತಾರಲ್ಲೋ
ಹರ ಹರೋ ನನ ಕೈಲಾಸೋ ಭಂಗಾರ ಜಂತಿಯ ಹಾಕ್ಯಾರ
ಬಂಗಾರ ಜಂತಿಯ ಹಾಕ್ಯಾರ ಬೆಳ್ಳಿಯ ಚಿಲಕಾನಿ ಹಾಕ್ಯಾರ
ಹರಹರೋ ನನ ಕೈಲಾಸೋ ಗರಡಿಯ ಮನಿಯ ನೋಡಪ್ಪ
ಗರಡಿಯ ಮನಿಯ ನೋಡಪ್ಪ ಒಂದರಾತರಿ ಒಳಗ್ಯಾನ
ಒಂದ ರಾತರಿ ಒಳಗ್ಯಾನ ಕಟಸಿ ತಯ್ಯಾರ ಮಾಡ್ಯಾರ[೪೩]

ಹೀಗೆ ಅಂಗ ಸಾಮರ್ಥ್ಯ ಹೆಚ್ಚಿಸಿಕೊಂಡ ವರವಿನ ಮಕ್ಕಳು ದೇಶ ಶೋಧನೆಗೆ ಹೊರಟು ನಿಂತಾಗ ತಂದೆ ಅಮೋಘಸಿದ್ಧ ನೀಡಿದ ನಿರ್ದೇಶನ ಹೀಗಿದೆ: ಮೇಲದಿಕ್ಕಿಗೆ (ಪಶ್ಚಿಮಕ್ಕೆ) ಹೋದರೆ ಗೌಡಕಿ ಸಾಧುನಿಯಾಗುತ್ತದೆ. ಗಂಗಿ ದಿಕ್ಕಿಗೆ (ಉತ್ತರಕ್ಕೆ) ಹೋದರೆ ಭಕ್ತರು ಸಾಧುನಿಯಾಗುತ್ತಾರೆ. ತಳನಾಡಿಗೆ (ಪೂರ್ವಕ್ಕೆ) ಹೋದರೆ ದೇಶ ಸಾಧುನಿಯಾಗುತ್ತದೆ. ರಾಕ್ಷಸದಿಕ್ಕಗೆ (ದಕ್ಷಿಣಕ್ಕೆ) ಹೋದರೆ ಅಲ್ಲಿ ಕಾಲಕುಬಸಿನವರು, ಶೇಖ ಸೈಯದರ ಮಕ್ಕಳು ಇದ್ದಾರೆ. ಅವರು ತುಂಬಾ ಅಪಾಯಕಾರಿಯಾಗಿದ್ದಾರೆ. ಆ ಕಡೆಗೆ ಹೋಗಬೇಡಿರಿ ಎಂದು ಹೇಳುತ್ತಾನೆ.

ತಂದೆಯ ಮಾತನ್ನು ಗಣನೆಗೆ ತೆಗೆದುಕೊಳ್ಳದೆ ಅವಧುಸಿದ್ಧ ದಕ್ಷಿಣದಿಕ್ಕಿಗಿರುವ ವಿಜಾಪುರಕ್ಕೆ ಬರುತ್ತಾನೆ. ಅಲ್ಲಿನ ಸೂಫಿಗಳೊಂದಿಗೆ ಮುಖಾಮುಖಿಯಾಗುತ್ತಾನೆ. ಕಬ್ಬಿಣದ ಸರಪಳಿಯಿಂದ ಅವನನ್ನು ಬಂಧಿಸಲಾಗುತ್ತದೆ. ಬಿಳಿಯಾನಿಸಿದ್ಧನ ಮಧ್ಯಸ್ಥಿಕೆಯಿಂದ ಈತ ಪಾರಾಗಿ ಬರುತ್ತಾನೆ.

ದಕ್ಷಿಣ ದಿಕ್ಕಿಗೆ ಸಂಚರಿಸಿ ಕಷ್ಟ ನಷ್ಟ ಅನುಭವಿಸಿದ ವರವಿನ ಮಕ್ಕಳು ಅವಧುಸಿದ್ಧನ ನಾಯಕತ್ವದಲ್ಲಿ ಪೂರ್ವದಿಕ್ಕಿಗೆ ಹೋಗುತ್ತಾರೆ. ಮೈಲಾರಹಟ್ಟಿ ಎನ್ನುವ ಊರಿಗೆ ಹೋಗಿ ಅಲ್ಲಿನ ಸಿದ್ಧಗೌಡ ಹಾಗೂ ಮುದ್ದಗೌಡ ಎಂಬುವವರಿಂದ ಇಪ್ಪತ್ತೈದು ಚಾವರ ಭೂಮಿಯನ್ನು ಪಡೆಯುತ್ತಾರೆ. ಇಲ್ಲಿಯೇ ಗಟ್ಟಿಯಾಗಿ ತಳವೂರುವ ಪುಣ್ಯದ ಮಕ್ಕಳು ಧರ್ಮದ ಕಟ್ಟೆಯನ್ನು ನಿರ್ಮಿಸುತ್ತಾರೆ. ತಂದೆ ಅಮೋಘಸಿದ್ಧ ನೆಲೆಸಿದ ಅರಕೇರಿ ಅರಮನೆ ಎನ್ನಿಸಿಕೊಂಡರೆ ಭೀವರಗಿ ಗುರುಮನೆ ಎನ್ನಿಸಿಕೊಳ್ಳುತ್ತದೆ. ಭಕ್ತರಿಗೆ ಭಾಗ್ಯವಿರಲಿ ಮಕ್ಕಳಿಗೆ ಬಡತನವಿರಲಿ ಎಂದು ಬಯಸಿದ್ದ ಅಮೊಘಸಿದ್ಧನ ವರವಿನ ಮಕ್ಕಳು ಮಿತಿಮೀರಿದ ಆಸ್ತಿದಾಹಕ್ಕೆ ಬಲಿಯಾದುದು ವಿಪರ್ಯಾಸವೇ ಸರಿ.

ಮೈಲಾರ ಹಟ್ಟಿ ಗ್ರಾಮದಲ್ಲಿ ವರವಿನ ಮಕ್ಕಳು ಬಂದು ನೆಲೆಸಿದ ನಂತರ ಆ ಊರಿನ ಹೆಸರನ್ನು ಮುರಿದು ಭೀವರಗಿ ಎಂದು ನಾಮಕರಣ ಮಾಡುತ್ತಾರೆ. 'ಮೈಲಾರ' ಕುರುಬರ ಆರಾಧ್ಯ ದೈವ. ಕುರುಬರ 'ಮೈಲಾರ' ಭಕ್ತಿಯ ಸಂಕೇತ. ಈ ಮೈಲಾರ ಹಟ್ಟಿಯ ಹೆಸರನ್ನು ಬದಲಿಸುವುದೆಂದರೆ ಈ ಊರಿನ ಮೈಲಾರ ಭಕ್ತರನ್ನು

ಆಪೋಷಣಗೈಯ್ಯುವುದು. ಅದಕ್ಕೆ ಬದಲಾಗಿ ಇಟ್ಟ ಹೆಸರು 'ಭೀವರಗಿ'. ಇದನ್ನು ಬೋರಗಿ ಎಂದೂ ಕರೆಯುತ್ತಾರೆ. ಬೋರಗಿ>ಬೋರ+ಕೆಯಿ. ಬೋರ ಎಂದರೆ ಎತ್ತರವಾದ ಬೆಟ್ಟ+ಕೆಯಿ ಅಂದರೆ ಪ್ರದೇಶ ಎಂಬ ಅರ್ಥವನ್ನು ನೀಡುತ್ತದೆ. ತಂದೆ ಅಮೋಘಸಿದ್ಧನ ಸಾಧನೆಯ ಸ್ಥಳ ಮುಮ್ಮೆಟಗುಡ್ಡ. ಇದನ್ನು ಮೇಲಮಗಿರಿ ಎಂದೂ ಕರೆಯುತ್ತಾರೆ. ಮೇಲಮಗಿರಿಯನ್ನು ನೆನಪಿಸುವಂಥ ಹೆಸರು ಬೋರಗಿ. ತಂದೆಯ ಕರ್ಮಭೂಮಿಯ ಪ್ರತಿರೂಪವನ್ನು ಬೋರಗಿ ಎಂಬ ಹೆಸರಿನ ಮೂಲಕ ಮರುಸ್ಥಾಪಿಸುವ ಕೆಲಸ ನಡೆದಿದೆ ಎಂಬುದನ್ನು ನೋಡಬಹುದು. ಮೈಲಾರನ ಭಕ್ತರನ್ನು ಅಮೋಘಸಿದ್ಧನ ಭಕ್ತರನ್ನಾಗಿ ಪರಿವರ್ತಿಸಿದುದನ್ನು ಬಿಂಬಿಸುವ ಘಟನೆಯಿದು.

ಮೇಲಮಗಿರಿಯನ್ನು ಹೋಲುವಂಥ ಬೋರಗಿಯನ್ನು ಸ್ಥಾಪಿಸಿದರೇನೋ ನಿಜ. ಆದರೆ ತಂದೆಯ ಸಾಧನೆಯ ಎತ್ತರವನ್ನು ಇವರಿಗೆ ಮುಟ್ಟಲಾಗಲಿಲ್ಲ. ಮಳೆಯನ್ನು ಬೇಡಿದಾಗಲೆಲ್ಲ ಭಕ್ತರಿಗೆ ಕರುಣಿಸುವ ಮಳೆಕೀಲು ಪಡೆದವನು ಅಮೋಘಸಿದ್ಧ. ಅವನ ಹಿರಿಯ ಮಗನಾದ ಅವಧುಸಿದ್ಧ ಬೋರಗಿಯಲ್ಲಿ ತನ್ನ ಸಹೋದರರೊಂದಿಗೆ ಬಂದು ನೆಲೆಸಿದ ನಂತರ ಒಂದು ಸಲ ಆ ಭಾಗದಲ್ಲಿ ಭೀಕರ ಬರಗಾಲ ಬೀಳುತ್ತದೆ. ಭೀವರಗಿಯ ರಾಣೆರೈತರ ಮಕ್ಕಳು ಅವಧುಸಿದ್ಧನಲ್ಲಿಗೆ ಬಂದು ತಮ್ಮ ಕಷ್ಟವನ್ನು ಹೇಳಿಕೊಂಡು ಮಳೆ ನೀಡಲು ಕೇಳಿಕೊಳ್ಳುತ್ತಾರೆ. ತಂದೆಯಲ್ಲಿದ್ದ ಅಂತಃಕರಣ ಮಗನಲ್ಲಿ ಉಳಿದಿರಲಿಲ್ಲವೆಂದು ತೋರುತ್ತದೆ. ಈ ವರ್ಷ ನಿಮಗೆ ಮಳೆಯಿಲ್ಲ, ಈ ಊರನ್ನು ತೊರೆದು ಹೋಗಿರಿ ಎಂದು ಹೇಳಿಬಿಡುತ್ತಾನೆ. ಊರ ರಾಣೆರೈತರ ಮಕ್ಕಳು ಕಂಗಾಲಾಗಿ ತಮ್ಮ ದನಕರುಗಳನ್ನು ಕಟ್ಟಿಕೊಂಡು ಗುಳೇ ಹೊರಟು ನಿಲ್ಲುತ್ತಾರೆ. ಆಗ ಆಚಾರಗೌಡ ಸೋಮಣ್ಣ ಮುತ್ಯಾನ ಮಗನಾದ ಓಗೆಣ್ಣ ಮುತ್ಯಾನು ದೊಡ್ಡಪ್ಪನ ಮಾತು ಹುಸಿಯಾಗುವಂತೆ ಕೆಲವೇ ತಾಸುಗಳಲ್ಲಿ ಮಳೆ ಬರಿಸುತ್ತಾರೆ. ಭೀವರಗಿ ಗ್ರಾಮದ ಜನರು ನೆಮ್ಮದಿಯ ನಿಟ್ಟುಸಿರುಬಿಟ್ಟು ಅಲ್ಲಿಯೇ ಉಳಿಯುತ್ತಾರೆ. ಸಿಟ್ಟಿನ ಸ್ವಭಾವದ ಅವಧುಸಿದ್ಧನಿಗೆ ಈ ಘಟನೆಯಿಂದ ಅವಮಾನವಾದಂತಾಗುತ್ತದೆ. ಮುಂಗೋಪಿ ಅವಧುಸಿದ್ಧ ಓಗೆಣ್ಣ ಮುತ್ಯಾನಿಗೆ ಶಾಪಹಾಕಿ, ಬೆನ್ನಲ್ಲಿ ಬೇತಾಳ ಹುಣ್ಣು ಹುಟ್ಟುವಂತೆ ಮಾಡುತ್ತಾನೆ. ದೊಡ್ಡಪ್ಪನ ಉಗ್ರ ಸ್ವಭಾವಕ್ಕೆ ಅಂಜಿ ಓಗೆಣ್ಣ ಮುತ್ಯಾ ಭೀವರಗಿ ಬಿಟ್ಟು ನೆಲೆ ಅಸರಸುತ್ತ ಹೊರಬರುತ್ತಾನೆ. ಕೊನೆಗೆ ಹತ್ತೂರಲ್ಲಿ ನೆಲೆ ನಿಲ್ಲುತ್ತಾನೆ.

೩.೨.೩.೨ ಬಿಳಿಯಾನಿಸಿದ್ಧ : ಅವಧುಸಿದ್ಧನಿಗಿಂತ ಬಿಳಿಯಾನಿಸಿದ್ಧ ಹಲವಾರು ಅಂಶಗಳಲ್ಲಿ ಭಿನ್ನ ಹಾಗೂ ಪ್ರಗತಿಪರ. ಅಣ್ಣ ಅವಧುಸಿದ್ಧನು ವೀರಭದ್ರನ ಅವತಾರವೆನ್ನಿಸಿದರೆ ತಮ್ಮ ಬಿಳಿಯಾನಿಸಿದ್ಧನು ಆರು ಮುಖದ ದೇವರು ಷಣ್ಮುಖನ ಅವತಾರವಾಗಿದ್ದಾನೆ. ಇವನನ್ನು ಬುದ್ನಾಳ ಬಿಳಿಯಾನಿಸಿದ್ಧನೆಂತಲೂ ಕರೆಯುತ್ತಾರೆ. ಐದು ವರ್ಷದ ಬಾಲಕನಿರುವಾಗಲೆ ತಂದೆ ಅಮೋಘಸಿದ್ಧ ಇವನ ಮೇಲೆ ಬಹುದೊಡ್ಡ ಜವಾಬ್ದಾರಿಯನ್ನು ಹೊರಿಸುತ್ತಾನೆ. ಕಲ್ಯಾಣದ ಕುಂಬಾರ ರಾಮಯ್ಯನ ಮಗನಿಗೆ ಲಿಂಗಧಾರಣೆ ಮಾಡಿಸಲು ಕಲ್ಯಾಣಕ್ಕೆ ಹೋದ ಘಟನೆಯನ್ನು ಹಿಂದಿನ ಅಧ್ಯಾಯದ ಲಿಂಗಾಯತರೊಂದಿಗೆ ಮುಖಾಮುಖಿ ವಿಭಾಗದಲ್ಲಿ ವಿವರವಾಗಿ

[illegible]

[illegible]

[illegible]

ಚರ್ಚಿಸಲಾಗಿದೆ. ಸ್ವತಃ ಅಂಗದ ಮೇಲೆ ಲಿಂಗವಿಲ್ಲದ ಇವನು ಲಿಂಗಧಾರಣೆ ಮಾಡಿಸಲು ಹೊರಟದ್ದು ಅಭಾಸದ ಹಾಗೆ ತೋರುತ್ತದೆಯಾದರೂ ಇಲ್ಲಿ ನಮಗೆ ಮುಖ್ಯವಾದುದು ಲಿಂಗಾಯತದ ಅಹಂಕಾರದ/ಶ್ರೇಷ್ಠತೆಯ ಭ್ರಮೆಯ ನಿರಸನ. ಲಿಂಗ ಬಾಹ್ಯಾಡಂಬರದ ಚಿನ್ಹೆಯಾಗಬಾರದು, ಅದು ಅಂತರಂಗದ ಸಾಕ್ಷಿಪ್ರಜ್ಞೆಯಾಗಬೇಕು ಎಂಬುದನ್ನು ಕಲ್ಯಾಣದ ಜನರಿಗೆ ಮನಗಾಣಿಸುತ್ತಾನೆ. ಕಲ್ಯಾಣದ ಮೇಲೆ ಬಿಳಿಯಾನಿಸಿದ್ಧ ಎರಡು ವಿಜಯಗಳನ್ನು ಸಾಧಿಸುತ್ತಾನೆ. ಒಂದು ತಗರ ಪವಾಡದ ಮೂಲಕ, ಇನ್ನೊಂದು ಲಿಂಗಮೋಹ ನಿರಾಕರಣೆಯ ಮೂಲಕ. ಮುಮ್ಮೆಟಗುಡ್ಡದಿಂದ ಬಿಳಿಯಾನಿಸಿದ್ಧ ಕಲ್ಯಾಣದ ಕಡೆಗೆ ಹೊರಟ ಘಟನೆಯ ವರ್ಣನೆ ದಿಗ್ವಿಜಯಕ್ಕೆ ಹೊರಟ ರಾಜಕುಮಾರನ ವರ್ಣನೆಯನ್ನು ಹೋಲುತ್ತದೆ. ದಾರಿ ಮಧ್ಯದಲ್ಲಿ ಬಿದ್ದಿದ್ದ ಏಳು ಗಜ ಉದ್ದದ ಬಂಡೆಗಲ್ಲಿಗೆ ಭಂಡಾರ ಹೊಡೆದು ಅದನ್ನು ಜೀವಂತ ಆನೆಯನ್ನಾಗಿಸಿ ಅದರ ಮೇಲೆ ಕುಳಿತು ಮೆರವಣಿಗೆಯಲ್ಲಿ ಹೊರಟು ನಿಂತ ಬಾಲಕ ಬಿಳಿಯಾನಿಸಿದ್ಧ ದಿಗ್ವಿಜಯದಲ್ಲಿ ಪಾಲ್ಗೊಂಡ ಯುವರಾಜನ ಹಾಗೆ ಗೋಚರಿಸುತ್ತಾನೆ.

ಇವನ ಹೆಸರೇ ಸೂಚಿಸುವಂತೆ ಈತ ಮಹಾ ಬುದ್ಧಿವಂತ. ಅಣ್ಣ ಅವಧುಸಿದ್ಧ ಅವಸರದಲ್ಲಿ ನಿರ್ಣಯ ತೆಗೆದುಕೊಂಡಾಗಲೆಲ್ಲ ಅದು ಸರಿಯಲ್ಲ ಎಂದು ಎಚ್ಚರಿಸುವ ಕೆಲಸವನ್ನು ಮಾಡುತ್ತಲೇ ಬರುತ್ತಾನೆ. ದೇಶಸಾಧುನಿಗೆಂದು ಹೊರಟು ನಿಂತ ಮಕ್ಕಳಿಗೆ ತಂದೆ ಅಮೋಘಸಿದ್ಧ ದಕ್ಷಿಣದಿಕ್ಕಿಗೆ ಹೋಗದಿರಲು ಎಚ್ಚರಿಸುತ್ತಾನೆ. ತಂದೆಯ ಎಚ್ಚರಿಕೆಯನ್ನು ಅಲಕ್ಷಿಸಿ ಅವಧುಸಿದ್ಧ ದಕ್ಷಿಣ ದಿಕ್ಕಿನಲ್ಲಿರುವ ವಿಜಾಪುರದ ಕಡೆಗೆ ಹೊರಡುತ್ತಾನೆ. ಆಗ ಬಿಳಿಯಾನಿಸಿದ್ಧ ಇಂಥ ತಪ್ಪು ನಿರ್ಣಯ ಬೇಡ ಎಂದು ಎಚ್ಚರಿಸುತ್ತಾನೆ. ತಂದೆಯ ಎಚ್ಚರಿಕೆಯನ್ನು ಮೀರಿ ವಿಜಾಪುರಕ್ಕೆ ಹೋಗಿ ಅಲ್ಲಿನ ಸೂಫಿ ಸಂತರ ಕೈಯಲ್ಲಿ ಸಿಕ್ಕು ಫಜೀತಿಯಾಗುತ್ತಾನೆ. ಸೂಫಿಸಂತರು ಅವಧುಸಿದ್ಧನನ್ನು ಉಕ್ಕಿನ ಸರಪಳಿಯಲ್ಲಿ ಬಂಧಿಸಿಡುತ್ತಾರೆ. ಅಣ್ಣನನ್ನು ಉಕ್ಕಿನ ಸರಪಳಿಯ ಬಂಧನದಿಂದ ಬಿಡಿಸುವವನು ಬಿಳಿಯಾನಿಸಿದ್ಧನೇ.

ಬಿಳಿಯಾನಿಸಿದ್ಧನಿಗೆ ಹಠಯೋಗದಲ್ಲಿ ಪರಿಣತಿಯಿದ್ದಂತೆ ತೋರುತ್ತದೆ. ಸೂಫಿಗಳ ಚಮತ್ಕಾರಕ್ಕೆ ವಿರುದ್ಧವಾಗಿ ತನ್ನ ಸಿದ್ಧಾಟಿಕೆಯನ್ನು ತೋರಿಸುತ್ತಾನೆ. ವಿಜಾಪುರದ ತಾಸ ಬಾವಡಿಯಲ್ಲಿ ಏಳುಗಜ ಉದ್ದದ ಕಲ್ಲನ್ನು ತೇಲಿಬಿಟ್ಟು ಅದರ ಮೇಲೆ ಕುಳಿತು ಸೂಫಿಸಂತರು ನಮಾಜು ಮಾಡಿದರೆ, ಅದೇ ತಾಸಬಾವಡಿಯಲ್ಲಿ ಅಡಕೆಯ ಮೇಲೆ ಅಡಕೆ ಏಳು ಅಡಕೆಗಳನ್ನು ಇಟ್ಟು ಅದರ ಮೇಲೆ ಸೂಜಿಯನ್ನು ನಿಲ್ಲಿಸಿ ಆ ಸೂಜಿಯ ಮೇಲೆ ಒಂಟಿಗಾಲಿನಲ್ಲಿ ನಿಂತು ತಪಸ್ಸು ಆಚರಿಸಿ ತೋರಿಸುತ್ತಾನೆ.

ಪುಣ್ಯದ ಮಕ್ಕಳಲ್ಲಿ ಹಿರಿಯವನಾದ ಮಾಸಿದ್ಧಪ್ಪನಿಗೆ ಬಿಳಿಯಾನಿಸಿದ್ಧನ ಸಾಮರ್ಥ್ಯ ಗೊತ್ತಿತ್ತೆಂದು ತೋರುತ್ತದೆ. ಭಂಡಾರ ಭರಣಿಯ ಕುರಿತಾದ ಜಗಳದಲ್ಲಿ ಮಾಸಿದ್ಧಪ್ಪ ಹಾಗೂ ಅವಧುಸಿದ್ಧರ ಮಧ್ಯದ ಶಾಪ ಪ್ರತಿಶಾಪದ ಸನ್ನಿವೇಶದಲ್ಲಿ ಅದು ಬಿಂಬಿತವಾಗಿದೆ. ಅವಧುಸಿದ್ಧನು 'ನಿನಗೆ ಏಳು ಮಠಗಳಿಗಿಂತ ಹೆಚ್ಚಿಗೆ ಮಠಗಳಾಗದಿರಲಿ, ಭೀಮಾನದಿ ದಾಟಿ ನಮ್ಮ ಭೂಮಿಯಲ್ಲಿ ನೀನು ಬಂದೆಯಾದರ ನಿನ್ನ ರೂಪ

ಬೇರೂಪವಾಗಲಿ' ಎಂದು ಮಾಸಿದ್ದಪ್ಪನಿಗೆ ಶಾಪ ಹಾಕುತ್ತಾನೆ. ಅದಕ್ಕೆ ಪ್ರತಿಯಾಗಿ ಮಾಸಿದ್ದಪ್ಪನು 'ಹೊನ್ನ ಭೀವರಗಿಯಲ್ಲಿ ಹಿರಿಯವನಿಗಿಂತ ಕಿರಿಯವನನ್ನು ಮನ್ನಿಸುವಂತಾಗಲಿ' ಎಂದು ಅವಧುಸಿದ್ಧನಿಗೆ ಶಾಪ ಹಾಕುತ್ತಾನೆ.

ಭೀವರಗಿಯನ್ನು ಕೇಂದ್ರ ಮಾಡಿಕೊಂಡು, ಅದನ್ನು ಗುರುಮನೆಯನ್ನಾಗಿಸಿ ನಂತರ ಗೌಡಕಿಯನ್ನು ಪ್ರಾರಂಭಿಸುತ್ತಾರೆ. ಗೌಡಕಿಯನ್ನು ಮಾಡುತ್ತಿರುವಾಗಲೇ ನಾಲ್ವರು ಸಹೋದರರಲ್ಲಿ ನಿಜವಾದ ಗೌಡಕಿ ಯಾರಿಗೆ ಸಲ್ಲಬೇಕು ಎನ್ನುವ ವಿಷಯದಲ್ಲಿ ಊರ ಹಿರಿಯರ ಹಾಗೂ ಊರಜನರ ಒಲವು ಬುದ್ಧಿವಂತನಾದ ಬಿಳಿಯಾನಿಸಿದ್ಧನ ಕಡೆಗೆ ಇದ್ದುದು ಕಂಡುಬರುತ್ತದೆ. ಅದಕ್ಕೆ ಅವರು ಕೊಡುವ ಕಾರಣ ಅವಧುಸಿದ್ಧ ಹಿರಿಯವನಾದರೂ ಮುಂಗೋಪಿಯಾಗಿದ್ದಾನೆ, ಬಿಳಿಯಾನಿಸಿದ್ಧ ಬುದ್ಧಿವಂತನಾಗಿದ್ದಾನೆ ಎನ್ನುವ ಹಿರಿಯರ ಹಾಗೂ ಊರ ಜನರ ಅಭಿಪ್ರಾಯವನ್ನು ಅವಧುಸಿದ್ಧ ಗೌರವಿಸದೇ ತಾನೇ ಗೌಡಕಿಯ ಹಿರಿತನ ಮಾಡುವವನು ಎಂದು ಹಠ ಹಿಡಿಯುತ್ತಾನೆ. ಅದಕ್ಕೊಂದು ಪರಿಹಾರ ಸೂಚಿಸುವವನು ಮೂರನೆಯ ಮಗನಾದ ಆಚಾರಗೌಡ. ಸೋಮಣ್ಣ ಮುತ್ತ್ಯಾ ಅವನ ನ್ಯಾಯದ ಪ್ರಕಾರ ಅವಧುಸಿದ್ಧ ಹಾಗೂ ಬಿಳಿಯಾನಿಸಿದ್ಧ ಇಬ್ಬರೂ ಊರು ಬಿಟ್ಟು ಹೋಗಬೇಕು. ಕಾರಹುಣ್ಣಿಮೆಯ ದಿವಸ ಇಬ್ಬರೂ ಊರನ್ನು ಪ್ರವೇಶಿಸಬೇಕು. ಯಾರು ಊರನ್ನು ಮೊದಲು ಪ್ರವೇಶಿಸುವರೋ ಅವರಿಗೆ ಊರ ಗೌಡಕಿಯ ಪಟ್ಟ ಎಂದು ಹೇಳುತ್ತಾನೆ. ಇಬ್ಬರೂ ಸಹೋದರರು ಭೀವರಗಿ ಬಿಟ್ಟು ಹೊರಹೋಗುತ್ತಾರೆ. ಹಲವಾರು ದಿವಸ ಅಲ್ಲಿ ಇಲ್ಲಿ ಸುತ್ತಾಡಿ ಕಾರಹುಣ್ಣಿಮೆಯ ದಿವಸ ಊರ ಕಡೆಗೆ ಹೊರಡುತ್ತಾರೆ. ಆದರೆ ಅಂದು ಅವಧುಸಿದ್ಧನಿಗೆ ಅನೇಕ ತೊಡಕುಗಳು ಉಂಟಾಗಿ ಊರನ್ನು ಪ್ರವೇಶಿಸಲು ತಡವಾಗುತ್ತದೆ. ಬಿಳಿಯಾನಿಸಿದ್ಧ ಸಕಾಲಕ್ಕೆ ಊರನ್ನು ಪ್ರವೇಶಿಸಿ ಗೌಡಕಿ ಪಟ್ಟವನ್ನು ಪಡೆಯುತ್ತಾನೆ.

ಅಧಿಕಾರ ಎಂಥವರನ್ನೂ ಭ್ರಷ್ಟ ಮಾಡಬಲ್ಲದು ಎಂಬುದಕ್ಕೆ ಬಿಳಿಯಾನಿಸಿದ್ಧ ಒಬ್ಬ ಒಳ್ಳೆಯ ನಿದರ್ಶನ. ಬುದ್ಧಿಉಳ್ಳ ಬಿಳಿಯಾನಿಸಿದ್ಧ ಎಂದು ಹೆಸರಿದ್ದರೂ ಅಧಿಕಾರದ ಮದದಲ್ಲಿ ಬುದ್ಧಿಯ ಸ್ಥಿಮಿತ ಕಳೆದುಕೊಳ್ಳುತ್ತಾನೆ. ಬಿಳಿಯಾನಿಸಿದ್ಧನಿಗೆ ಬಬಲಾದಿಯ ಶಿವಗೊಂಡನ ಮಗಳು ಕೊಂತೆವ್ವನೊಂದಿಗೆ ವಿವಾಹ ವಾಗಿರುತ್ತದೆ. ಹಿರಿಯಣ್ಣನನ್ನು ಕಡೆಗಣಿಸಿ ತನ್ನ ಗಂಡ ಬಿಳಿಯಾನಿಸಿದ್ಧ ಗೌಡಕಿಯನ್ನು ಪಡೆದಾಗ ಇದು ಸರಿಯಲ್ಲವೆಂದು ಕೊಂತೆವ್ವ ವಾದಿಸುತ್ತಾಳೆ. ಹಿರಿಯರು ಇರುವಾಗ ಸಣ್ಣವರು ಅಧಿಕಾರ ವಹಿಸಿಕೊಳ್ಳುವುದು ತಪ್ಪು ಎಂದು ಗಂಡನಿಗೆ ಹೇಳುತ್ತಾಳೆ. ಅಧಿಕಾರ ವಹಿಸಿಕೊಂಡು ಮನೆಗೆ ಬಂದ ಗಂಡನಿಗೆ ಆರತಿ ಬೆಳಗಿ ಸ್ವಾಗತಿಸಲು ನಿರಾಕರಿಸುತ್ತಾಳೆ. ಕೊಂತೆವ್ವನ ಈ ನಿಲುವು ಗಂಡನಾದ ಬಿಳಿಯಾನಿಸಿದ್ಧನಿಗೆ ಎಳ್ಳಷ್ಟೂ ಹಿಡಿಸುವುದಿಲ್ಲ. ತನ್ನ ವಿರುದ್ಧ ಮಾತನಾಡುವ ಹೆಂಡತಿ ತನ್ನ ಮನೆಯಲ್ಲಿ ಇರತಕ್ಕದ್ದಲ್ಲ ಎಂದು ಅವಳನ್ನು ಮನೆಯಿಂದ ಹೊರಗೆ ಅಟ್ಟುತ್ತಾನೆ ಹಾಗೂ ಯಾವುದೇ ಸಂದರ್ಭದಲ್ಲಿ ಭೀವರಗಿಯನ್ನು ಪ್ರವೇಶಿಸದಂತೆ ದಿಗ್ಬಂಧನ ವಿಧಿಸುತ್ತಾನೆ. ಆ ದಿಗ್ಬಂಧನ ಎಷ್ಟು ತೀವ್ರವಾಗಿತ್ತೆಂದರೆ ಬಿಳಿಯಾನಿಸಿದ್ಧನಿರುವ ಸೀಮೆಯ ಯಾವುದೇ ವಸ್ತು ಕೊಂತೆವ್ವನಿರುವ ಸೀಮೆಯಲ್ಲಿ ಹೋಗುವಂತಿಲ್ಲ. ಹಾಗೂ ಕೊಂತೆವ್ವನ ಸೀಮೆಯ ವಸ್ತುಗಳು

[illegible]

ಬಿಳಿಯಾನಿಸಿದ್ಧನ ಸೀಮೆಗೆ ಬರುವಂತಿಲ್ಲ. ಅಂದು ಸಂಭವಿಸಿದ ಆ ಘಟನೆಯನ್ನು ನೆನಪಿಸುವ ಆಚರಣೆ ನಂಬಿಕೆಗಳು ಇಂದಿಗೂ ಉಳಿದುಕೊಂಡು ಬಂದಿವೆ. ಕೊಂತೆವ್ವನ ಸೀಮೆಯಲ್ಲಿ ಯಾರಾದರೂ ಮುಳ್ಳು ತುಳಿದು ಆ ಮುಳ್ಳನ್ನು ಕಾಲಲ್ಲಿಯೇ ಉಳಿಸಿಕೊಂಡು ಬಿಳಿಯಾನಿಸಿದ್ಧನ ಸೀಮೆಯಲ್ಲಿ ಬರಬಾರದು ಎಂಬ ನಿಷೇಧವಿದೆ. ಆ ಸೀಮೆಯಲ್ಲಿ ನಟ್ಟ ಮುಳ್ಳನ್ನು ಆ ಸೀಮೆಯಲ್ಲಿ ತೆಗೆದು ಒಗೆದು ಬರಬೇಕು.

ಬಿಳಿಯಾನಿಸಿದ್ಧನಿಗೆ ಅಧಿಕಾರ ತಲೆಗೇರಿಸಿಕೊಂಡುದರ ದ್ಯೋತಕವಾಗಿ ಇನ್ನೊಂದು ಘಟನೆ ಅವನ ಬದುಕಿನಲ್ಲಿ ನಡೆದಿದೆ. ತನ್ನ ಹಿರಿಯ ಮಗನಾದ ಬುಳ್ಳೋಗಿಸಿದ್ಧ ಹಾಗೂ ಕನ್ನಮುತ್ತ್ಯಾನ ಸಣ್ಣಮಗ ಮಲಕಾರಿಸಿದ್ಧ ಬಾಲಕರಿದ್ದಾಗ ಜಗಳವಾಡುತ್ತಾರೆ. ಒಂದಿಷ್ಟು ಹುಡುಗಾಟಿಕೆಯ ರೀತಿಯಲ್ಲಿ ಪೀಡಿಸುತ್ತಾನೆ. ವಿಷಯ ತಿಳಿದ ಬಿಳಿಯಾನಿಸಿದ್ಧ ತನ್ನ ಮಗನಾದ ಬುಳ್ಳೋಗಿ ಸಿದ್ಧನನ್ನು ಕರೆದು ಬೈದು ಇನ್ನು ಮೇಲೆ ನನಗೆ ನಿನ್ನ ಮುಖ ತೋರಿಸಬೇಡವೆಂದು ಊರಿನಿಂದ ಹೊರ ಅಟ್ಟುತ್ತಾನೆ. ತಂದೆಯ ಕೋಪಕ್ಕೆ ಅಂಜಿಕೊಂಡ ಬುಳ್ಳೋಗಿಸಿದ್ಧ ಕೋಲಾಪುರ ಜಿಲ್ಲೆಯ ಬತ್ತೀಸಶಿರೋಳದ ಕಡೆಗೆ ಹೋಗುತ್ತಾನೆ. ಅಲ್ಲಿ ಕೆಲ ದಿವಸವಿದ್ದು ಸೋಲಾಪುರ ಜಿಲ್ಲೆಯ ಮುಢಾ ತಾಲೂಕಿನ ಶಿಂಗಣಾಪುರಕ್ಕೆ ಬಂದು ನೆಲೆಸುತ್ತಾನೆ.

೩.೨.೩.೩ ಆಚಾರಗೌಡ ಸೋಮಣ್ಣ ಮುತ್ತ್ಯಾ : ಅಮೋಘಸಿದ್ಧನ ಮೂರನೆಯ ವರವಿನ ಮಗನಾದ ಇವನನ್ನು ಗಜಮುಖ ಗಣಪತಿಯ ಅವತಾರವೆಂದು ಭಾವಿಸಲಾಗಿದೆ. ಅಮೋಘಸಿದ್ಧ ತನ್ನ ಗುರುವಾದ ಸೋಮಲಿಂಗನ ಹೆಸರು ಇವನಿಗೆ ಇಟ್ಟಿದ್ದಾನೆ. ಮೊದಲ ಮಗ ಉಗ್ರಸ್ವಾಭಾವದವ, ಎರಡನೆಯ ಮಗ ಬುದ್ಧಿವುಳ್ಳವ, ಮೂರನೆಯ ಮಗ ಆಚಾರವಂತ. ಅಮೋಘಸಿದ್ಧನ ಪಂಥದ ಆಚಾರ-ವಿಚಾರಗಳನ್ನು ಈತ ಆಳವಾಗಿ ತಿಳಿದವನಾದ್ದರಿಂದ ಅವನಿಗೆ ಆಚಾರಗೌಡನೆಂಬ ಬಿರುದು ಬಂದಿದೆ. ಅವನ ಕುರಿತಾಗಿರುವ ಹಲವಾರು ಘಟನೆಗಳು ಈ ಮಾತನ್ನು ಸಾಕ್ಷೀಕರಿಸುತ್ತವೆ.

ಮೂರು ಜನ ಪುಣ್ಯದ ಮಕ್ಕಳು ಒಂದೊಂದು ದಿಕ್ಕಿಗೆ ಹೋದ ನಂತರ ನಾಲ್ವರು ವರವಿನ ಮಕ್ಕಳು ಅರಕೇರಿಯಿಂದ ಭೀವರಗಿಯ ಕಡೆಗೆ ಬರುತ್ತಾರೆ. ಭೀವರಗಿಗೆ ಬಂದ ನಂತರ ಅವರು ಮಾಡಿದ ಮೊದಲ ಕೆಸಲವೆಂದರೆ ಆ ಊರಗೌಡರ ಮನಸ್ಸನ್ನು ಗೆದ್ದು ಅವರಿಂದ ಅಪಾರವಾದ ಭೂಸಂಪತ್ತನ್ನು ತಮ್ಮದಾಗಿಸಿ ಕೊಳ್ಳುವುದು. ಅದಾದ ನಂತರ ತಮ್ಮ ತಂದೆಯ ಗುರುವಿನ ಸ್ಮರಣೆಗೆಂದು ಅಲ್ಲಿ ಒಂದು ಅಷ್ಟಮೂಲೆಯ ಗುಡಿಯನ್ನು ಕಟ್ಟಿಸುತ್ತಾರೆ. ಈ ಗುಡಿಗೆ ವಿಧಿಪೂರ್ವಕ ಕಳಸವಿಡುವ ಕೆಲಸವನ್ನು ಆಚಾರಗೌಡ ಸೋಮಣ್ಣ ಮುತ್ತ್ಯಾ ಮಾಡುತ್ತಾನೆ. ಅದಾದ ನಂತರ ಅವರು ಭೀವರಗಿಯಲ್ಲಿ ನ್ಯಾಯ ನಿರ್ಣಯಕ್ಕಾಗಿ ಧರ್ಮದ ಕಟ್ಟೆಯನ್ನು ನಿರ್ಮಿಸುತ್ತಾರೆ. ಸಿದ್ಧಾಟಿಕೆಯ ಸರ್ವಶಕ್ತಿಯನ್ನು ಧಾರೆಯೆರೆದು ಕಟ್ಟಿಸಿದ ಈ ಧರ್ಮದ ಕಟ್ಟೆ ಕಟ್ಟಿಸಿದವರನ್ನೇ ಮುಟ್ಟಿಸಿಕೊಡುವುದಿಲ್ಲ. ನಾಲ್ವರು ಸಹೋದರರಲ್ಲಿ ಯಾರು ಈ ಧರ್ಮದ ಕಟ್ಟೆಯನ್ನು ಏರಬೇಕು ಎಂಬ ವಿಷಯದಲ್ಲಿ ಹಿಂದು-ಮುಂದು ನೋಡುತ್ತಿರುವಂತೆ ಆಚಾರವಂತರಾದ ಸೋಮಣ್ಣ ಮುತ್ತ್ಯಾ ಧೈರ್ಯ ಮಾಡಿ ಧರ್ಮದ ಕಟ್ಟೆ ಏರಿ ಜಯಘೋಷ ಹಾಕುತ್ತಾನೆ.

ವಯಸ್ಸಿನಲ್ಲಿ ಸಣ್ಣವನಾದರೂ ಆಚಾರ-ವಿಚಾರ ತಿಳಿದವನಾದ್ದರಿಂದ ಹಿರಿಯ ಸಹೋದರರಾದ ಅವಧೂಸಿದ್ಧ ಹಾಗೂ ಬಿಳಿಯಾನಿಸಿದ್ಧರ ಮಧ್ಯ ಗೌಡಿಕೆಯ ವಿಷಯದಲ್ಲಿ ಜಗಳ ಬಂದಾಗ, ಆ ಜಗಳವನ್ನು ಬಗೆಹರಿಸುವ ಕೆಲಸವನ್ನು ಸೋಮಣ್ಣ ಮುತ್ತ್ಯಾನಿಗೆ ವಹಿಸಿಕೊಡಲಾಗುತ್ತದೆ.

ನಾಲ್ವರು ವರವಿನ ಮಕ್ಕಳಿಗೆ ಇಪ್ಪತ್ತೊಂದು ಧರ್ಮರು ಜನಿಸುತ್ತಾರೆ. ಅವರೆಲ್ಲ ಬೆಳೆದು ದೊಡ್ಡವರಾದ ಮೇಲೆ ಅವರಿಗೆ ಮದುವೆ ಮಾಡಿಸಲು ನಿರ್ಧರಿಸುತ್ತಾರೆ. ಅದರಲ್ಲಿ ಇಬ್ಬರು ಸ್ವಯಂಪ್ರೇರಣೆಯಿಂದ ಸನ್ಯಾಸಿಗಳಾಗಲು ನಿರ್ಧರಿಸುತ್ತಾರೆ. ಆ ಇಬ್ಬರಿಗೆ ಸನ್ಯಾಸ ಪಟ್ಟಗಟ್ಟುವ ಕೆಲಸವನ್ನು ಆಚಾರಗೌಡ ಸೋಮಣ್ಣ ಮುತ್ತ್ಯಾನೇ ನೆರವೇರಿಸುತ್ತಾನೆ.

೩.೨.೩.೪ ಕಡಿಹುಟ್ಟ ಕನ್ನಮುತ್ತ್ಯಾ : ಈತನನ್ನು ಶೇಷನ ಅವತಾರವೆಂದು ಭಾವಿಸಲಾಗಿದೆ. ಲಕ್ಷಣವಂತನಾದ್ದರಿಂದ ಇವನಿಗೆ ಜ್ಯೋತಿಯೊಳಗಿನ ಜುಳು ಜುಳು ಮುತ್ತು ಎಂದೂ, ಕಡೆಯ ಮಗನಾಗಿ ಹುಟ್ಟಿದ್ದರಿಂದ ಕಡಿವುಟ್ಟ ಕನ್ನಮುತ್ತ್ಯಾ ಎಂದೂ ಕರೆಯುತ್ತಾರೆ. ನಾಥರಲ್ಲಿ ಪ್ರಸಿದ್ಧನಾದ ಕಾನಿಫನಾಥನ ಹೆಸರಿನ ಹೋಲಿಕೆ ಈ ಹೆಸರಿನಲ್ಲಿರುವುದರಿಂದ ತಂದೆ ಅಮೋಘಸಿದ್ಧನ ನಾಥ ಸಂಪರ್ಕವನ್ನು ನೆನಪಿಸು ವಂಥದ್ದಾಗಿದೆ.

ಪ್ರಭಾವಶಾಲಿ ಅಣ್ಣಂದಿರ ಕಾರಣದಿಂದ ಸಣ್ಣವನಾದ ಕನ್ನಮುತ್ತ್ಯಾನ ಚರಿತ್ರೆ ಮಸುಕಾಗಿ ಹೋಗಿದೆ. ಅವನ ಕುರಿತು ದೊರೆಯುವ ಮಾಹಿತಿ ಇಷ್ಟು. ಕನ್ನಮುತ್ತ್ಯಾ ಅಮೋಘಸಿದ್ಧನ ಕೊನೆಯ ಗಂಡು ಸಂತಾನ. ಅಣ್ಣಂದಿರ ನೆರಳಿನ ಹಾಗೆ ಇವನ ಚಲನವಲನಗಳಿವೆ. ಅಣ್ಣಂದಿರೆಲ್ಲ ಸೇರಿ ಅರಕೇರಿ ತೊರೆದು ಭೀವರಗಿಗೆ ಬಂದರೆ ಇವನೂ ಅವರೊಂದಿಗೆ ಬರುತ್ತಾನೆ. ಅಲ್ಲಿ ಧರ್ಮದ ಕಟ್ಟೆ ಕಟ್ಟಿಸುವಾಗ ಅವರೊಂದಿಗೆ ಕೈ ಜೋಡಿಸುತ್ತಾನೆ. ಉಳಿದ ಅಣ್ಣಂದಿರಿಗೆ ಕನ್ಯೆ ನೋಡುವಾಗ ಇವನಿಗೂ ನೋಡುತ್ತಾರೆ. ಅವರ ಮದುವೆ ಸಂದರ್ಭದಲ್ಲಿ ಇವನ ಮದುವೆಯೂ ಆಗುತ್ತದೆ. ಈತ ಮದುವೆಯಾದದ್ದು ಜತ್ತ ತಾಲೂಕಿನ ಸಂಖ ಗ್ರಾಮದ ರಾಯಣ್ಣ ಗೌಡನ ಮಗಳಾದ ಕನಾಬಾಯಿಯನ್ನು. ಮೂರು ಗಂಡು ಮಕ್ಕಳನ್ನು ಹೆತ್ತ ಮೇಲೆ ತಂದೆ ಅಮೋಘಸಿದ್ಧನ ಪ್ರಸಾದದಿಂದ ನಾಲ್ಕನೆಯ ಮಗ ಮಲಕಾರಿಸಿದ್ಧನನ್ನು ಪಡೆಯುತ್ತಾನೆ. ಅದಾದ ನಂತರ ಅವನಿಗೆ ಇನ್ನೂ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು ಜನಿಸುತ್ತಾರೆ. ಹೆಣ್ಣು ಮಗಳ ಹೆಸರು ಗುಬ್ಬೆವ್ವ. ಉಳಿಗಮಾನ್ಯ ವ್ಯವಸ್ಥೆಯ ಸಂತಾನ ಬಾಹುಳ್ಯ ಪೈಪೋಟಿಯಲ್ಲಿ ಇವನ ನಾಲ್ಕನೆಯ ಮಗ ಮಲಕಾರಿಸಿದ್ಧ ಅಣ್ಣನಾದ ಬಿಳಿಯಾನಿಸಿದ್ಧನ ವಶವಾಗುತ್ತಾನೆ.

೩.೨.೪ ಇಪ್ಪತ್ತೊಂದು ಧರ್ಮರು

ಅಮೋಘಸಿದ್ಧನ ನಾಲ್ವರು ಮಕ್ಕಳಿಗೆ ಒಟ್ಟು ಇಪ್ಪತ್ತೊಂದು ಜನ ಮಕ್ಕಳು ಹುಟ್ಟುತ್ತಾರೆ. ಅವರು ಕೂಡಾ ತಂದೆ ಹಾಗೂ ಅಜ್ಜನ ಹಾಗೆ ಅತ್ಯಂತ ಪ್ರಭಾವಶಾಲಿ ಸಿದ್ಧಾಟಿಕೆಯವರಾಗಿ ಕಾಣಿಸಿಕೊಂಡಿದ್ದಾರೆ. ಅಮೋಘಸಿದ್ಧನೆಂಬ ಮಹಾವೃಕ್ಷದ ಎರಡನೆಯ ತಲೆಮಾರಿನ ಟೊಂಗೆಗಳು ಇವರು. ಈ ಇಪ್ಪತ್ತೊಂದು ಧರ್ಮರ ಹೆಸರುಗಳನ್ನು ಈವೊತ್ತಿನ ಯಾವುದೇ ಮಾರಾಯನನ್ನು ನಿದ್ದೆಗಣ್ಣಲ್ಲಿ ಎಬ್ಬಿಸಿ ಕೇಳಿದರೂ ಕ್ರಮ

ತಪ್ಪದ ಹಾಗೆ ಹೇಳುತ್ತಾರೆ. ನಿತ್ಯ ಪೂಜೆ ಸಲ್ಲಿಸುವಾಗ ಕ್ರಮಬದ್ಧವಾಗಿ ಈ ವಂಶಾವಳಿಯನ್ನು ಮಾರಾಯರು ಉಗ್ಗಳಿಸುತ್ತಾರಾದ್ದರಿಂದ ಅವರ ಹೆಸರುಗಳೆಲ್ಲ ನಾಲಿಗೆ ತುದಿಯ ಮೇಲೆ ಇಂದಿಗೂ ಇವೆ.

ಇಪ್ಪತ್ತೊಂದು ಜನ ಧರ್ಮರು ಬೆಳೆದು ದೊಡ್ಡವರಾದ ಮೇಲೆ ಅಮೋಘಸಿದ್ಧನ ಕೂಡು ಕುಟುಂಬ ಬಹುದೊಡ್ಡದಾಗಿ ಅನಿಯಂತ್ರಿತವೆನ್ನಿಸಿರಬೇಕು. ಹೀಗಾಗಿ ಇಪ್ಪತ್ತೊಂದು ಧರ್ಮರಿಗೆ ಮದುವೆ ಮಾಡಿಸಿ ಅವರಿಗೆ ವಿಶೇಷವಾದ ಭೂ ಪ್ರದೇಶದ ಒಡೆತನವನ್ನು ಹಂಚಿಕೊಡಲಾಗುತ್ತದೆ. ಭೀವರಗಿ ಕೇಂದ್ರದಲ್ಲಿ ಒತ್ತಡ ಜಾಸ್ತಿಯಾದಾಗ ಆ ಒತ್ತಡವನ್ನು ಕಡಿಮೆ ಮಾಡುವ ಸಲುವಾಗಿ ಅವರಿಗೆಲ್ಲ ಬೇರೆ ಬೇರೆ ಪ್ರದೇಶಗಳಿಗೆ ಕಳುಹಿಸಿಕೊಡುವ ಕೆಲಸ ನಡೆಯುತ್ತದೆ. ಎರಡನೆಯ ತಲೆಮಾರಿನ ಹೊತ್ತಿಗೆ ಅಮೋಘಸಿದ್ಧ ಹಾಗೂ ಅವನ ವರವಿನ ಮಕ್ಕಳ ಅಧಿನದಲ್ಲಿದ್ದ ಭೂಪ್ರದೇಶ ಎಷ್ಟು ವಿಸ್ತಾರವಾಗಿತ್ತು ಎಂಬುದನ್ನು ಇಪ್ಪತ್ತೊಂದು ಜನರಿಗೆ ಮಾಡಿದ ನಿರ್ದೇಶನದ ಆಧಾರದ ಮೇಲೆ ತಿಳಿದುಕೊಳ್ಳಬಹುದು. ಅದೂ ಅಲ್ಲದೆ ನಾಡಗೌಡಕಿಯ ವ್ಯವಸ್ಥಿತ ಜಾಲದ ಪರಿಚಯವನ್ನೂ ಇದು ಮಾಡುತ್ತದೆ.

ಅವಧುಸಿದ್ಧನಿಗೆ ಐವರು ಗಂಡುಮಕ್ಕಳು: ಸಾಲಸಿದ್ಧ, ಮಳೆಗಾಳಸಿದ್ಧ, ಓಗೆಪ್ಪೊಡೆಯ, ನಾಗಪ್ಪೊಡೆಯ ಹಾಗೂ ಕೆಂಚಸೋಮಯ್ಯ. ಮೊದಲ ಮಗ ಸಾಲಸಿದ್ಧನನ್ನು ತಂದೆಯ ಸೇವೆಗೆಂದು ಭೀವರಗಿಯಲ್ಲಿಯೇ ಉಳಿಸಿಕೊಳ್ಳಲಾಗುತ್ತದೆ. ಎರಡನೆಯ ಮಗ ಮಳೆಗಾಲಸಿದ್ಧನನ್ನು ಅಥಣಿಗೆ, ಮೂರನೆಯ ಮಗ ಓಗೆಪ್ಪೊಡೆಯನನ್ನು ಮೊರಬಕ್ಕೆ, ನಾಲ್ಕನೆಯ ಮಗ ನಾಗಪ್ಪೊಡೆಯನನ್ನು ಬಡಚಿಗೆ ನೇಮಿಸಲಾಯಿತು. ಕೊನೆಯ ಮಗ ಕೆಂಚ ಸೋಮಣ್ಣನನ್ನು ಅಮೋಘಸಿದ್ಧನ ಗುರುವಾದ ಸೋಮಲಿಂಗನ ಸೇವೆ ಮಾಡಿ ಕೊಂಡಿರಲು ಮಕಣಾಪುರಕ್ಕೆ ಕಳುಹಿಸಿ ಕೊಡಲಾಗುತ್ತದೆ.

ಬಿಳಿಯಾನಿಸಿದ್ಧನಿಗೂ ಐದು ಜನ ಗಂಡು ಮಕ್ಕಳು: ಬುಳ್ಳೋಗಿಸಿದ್ಧ, ಓಗಸಿದ್ಧ, ಪದ್ಮೋಗಿಸಿದ್ಧ, ಪಂಚಪೂಜಾದಗೌಡ ಹಾಗೂ ಶೀಲಸಿದ್ಧ. ಮೊದಲನೆಯ ಮಗನಾದ ಬುಳ್ಳೋಗಿಸಿದ್ಧನನ್ನು ಅಥಣಿ ತಾಲೂಕಿನ ಹೊನ್ನಮೋಳೆಗೆ, ಪದ್ಮೋಗಿಸಿದ್ಧನನ್ನು ಸವದತ್ತಿ ಸಮೀಪದ ಉಗ್ರಗೊಳ್ಳಕ್ಕೆ, ಪಂಚಪೂಜಾದ ಗೌಡನನ್ನು ತಂದೆಯ ಸೇವೆಗೆ, ಕೊನೆಯ ಮಗ ಶೀಲಸಿದ್ಧನನ್ನು ಅಚೇಗಾವಿಗೆ ನೇಮಿಸಲಾಯಿತು.

ಸೋಮಣ್ಣ ಮುತ್ತ್ಯಾನಿಗೆ ಐದು ಜನ ಗಂಡಸುಮಕ್ಕಳು: ಹಿರಿಯ ಮಲ್ಲಪ್ಪೊಡೆಯ, ಚಿಕ್ಕ ಮಲ್ಲಪ್ಪೊಡೆಯ, ಮುತ್ತಪ್ಪೊಡೆಯ, ಮಲಕಾರಿಸಿದ್ಧ ಹಾಗೂ ಓಗಣ್ಣ ಮುತ್ತ್ಯಾ. ಹಿರಿಮಗ ಹಿರಿಮಲ್ಲಪ್ಪೊಡೆ ಯನನ್ನು ಮನೆಯ ಕಾರುಭಾರಕ್ಕೆಂದು ಭೀವರಗಿಯಲ್ಲಿ ಉಳಿಸಿಕೊಳ್ಳಲಾಯಿತು. ಚಿಕ್ಕಮಲ್ಲಪ್ಪೊಡೆಯನನ್ನು ತಂದೆ ತಾಯಿಯ ಸೇವೆಗೆ, ಮುತ್ತಪ್ಪೊಡೆಯನನ್ನು ತಿಕ್ಕುಂಡಿಗೆ, ಮಲಕಾರಿಸಿದ್ಧನನ್ನು ಬೆಳ್ಳುಂಡಿಗಿಗೆ ಹಾಗೂ ಕೊನೆಯ ಮಗ ಓಗಣ್ಣ ಮುತ್ತ್ಯಾನನ್ನು ದಕ್ಷಿಣ ಸೋಲಾಪುರ ತಾಲೂಕಿನ ಹತ್ತೂರಿಗೆ ನೇಮಿಸಲಾಯಿತು.

ಕನ್ನಮುತ್ತ್ಯಾನಿಗೆ ಆರು ಜನ ಗಂಡುಮಕ್ಕಳು ಹಾಗೂ ಒಬ್ಬಳು ಮಗಳು: ಕರಿಯೋಗಿಸಿದ್ಧ, ಮಲಕಾರಿಸಿದ್ಧ, ಮಾದಣ್ಣ, ವೀರಮಲಕಾರಿಸಿದ್ಧ, ಜ್ಯೋತಿಲಕ್ಕಪ್ಪ, ಬ್ರಹ್ಮ ಒಡೆಯ ಹಾಗೂ ಗುಬ್ಬೆವ್ವ. ಮೊದಲ ಮಗ

ಕರಿಯೋಗಿಸಿದ್ಧನನ್ನು ಅಥಣಿ ತಾಲೂಕಿನ ಕವಲಗುಡ್ಡಕ್ಕೆ, ಎರಡನೆಯ ಮಗ ಮಲಕಾರಿಸಿದ್ಧನನ್ನು ಬಾಗಲಕೋಟೆ ತಾಲೂಕಿನ ಗದ್ದನಕೇರಿಗೆ, ಮೂರನೆಯ ಮಗ ಮಾದಣ್ಣನನ್ನು ಜಮಖಂಡಿ ತಾಲೂಕಿನ ಕುಂಚನೂರಿಗೆ, ಐದನೆಯ ಮಗ ಜ್ಯೋತಿಲಕ್ಕಪ್ಪನನ್ನು ಜತ್ತ ತಾಲೂಕಿನ ಉಮದಿಗೆ ಹಾಗೂ ಕೊನೆಯ ಮಗ ಬ್ರಹ್ಮದೊಡೆಯನನ್ನು ಅರಕೇರಿಗೆ ಕಳುಹಿಸಲಾಗುತ್ತದೆ. ನಾಲ್ಕನೆಯ ಮಗ ಮಲಕಾರಿ ಸಿದ್ಧನನ್ನು ತಂದೆಯ ಸೇವೆಗೆಂದು ಭೀವರಗಿಯಲ್ಲೇ ಉಳಿಸಿಕೊಳ್ಳಲಾಗುತ್ತದೆ.

ಇಪ್ಪತ್ತೊಂದು ಮಂದಿ ಗಂಡು ಮಕ್ಕಳ ಮಧ್ಯದಲ್ಲಿ ಒಬ್ಬಳೇ ಒಬ್ಬಳು ಹೆಣ್ಣು ಮಗಳು. ಅವಳ ಹೆಸರು ಗುಬ್ಬೆವ್ವ. ಅವಳನ್ನು ಮಂಗಳವೇಡ ತಾಲೂಕಿನ ಶಿವಣಗಿ ಗ್ರಾಮದ ಮದಗೊಂಡ ಎಂಬುವವನಿಗೆ ಮದುವೆ ಮಾಡಿಕೊಡಲಾಗುತ್ತದೆ.

೩.೨.೫ ಬಟ್ಟಲ ಒಡೆಯರು

ಅಮೋಘಸಿದ್ಧ ಪರಂಪರೆಯಲ್ಲಿ ಸನ್ಯಾಸಿಗಳಾಗಿ ಉಳಿದು ಪಟ್ಟಗಟ್ಟಿಸಿಕೊಂಡವರನ್ನು ಬಟ್ಟಲ ಒಡೆಯರು ಎಂದು ಕರೆಯುತ್ತಾರೆ.[೪೪] ವರವಿನ ಮಕ್ಕಳಲ್ಲಿ ಸಂಗ್ರಹಿತವಾದ ಸಿದ್ಧಾಟಿಕೆಯ ಶಕ್ತಿ, ಕಿಲಾರಿಗಳ ಚರಸಂಪತ್ತು, ಭೂಮಿಯ ಸ್ಥಿರ ಸಂಪತ್ತು ಹಾಗೂ ನಾಡಗೌಡಿಕೆಯ ಅಧಿಕಾರ ಶಕ್ತಿ ಇವೆಲ್ಲವುಗಳ ಕಾರಣದಿಂದ ಶಿಷ್ಯಪರಂಪರೆ ನಿಲುಗಡೆಗೆ ಬಂದು ಪುತ್ರ ಪರಂಪರೆಗೆ ಚಾಲನೆ ದೊರಕಿತು ಎನ್ನುವುದನ್ನು ಈಗಾಗಲೇ ಚರ್ಚಿಸಿದ್ದೇವೆ. ಪುತ್ರ ಪರಂಪರೆಗೆ ಮನ್ನಣೆ ದೊರೆತ ಕಾರಣದಿಂದ ಅಮೋಘಸಿದ್ಧ ಪರಂಪರೆಯಲ್ಲಿ ಮಕ್ಕಳನ್ನು ಹೆರುವಲ್ಲಿ ಪೈಪೋಟಿ ನಡೆದುದು ಕಂಡು ಬರುತ್ತದೆ. ಈ ಪರಂಪರೆಯ ನಾಲ್ಕು-ಐದನೆಯ ತಲೆಮಾರಿನ ವೇಳೆಗೆ ಒಬ್ಬೊಬ್ಬ ವ್ಯಕ್ತಿ ಹದಿನೈದು ಇಪ್ಪತ್ತು ಮಕ್ಕಳನ್ನು ಹೆತ್ತು ಕೊಟ್ಟ ಉದಾಹರಣೆಗಳಿವೆ. ಹೀಗೆ ಸಂತಾನಮೋಹಿಗಳಾದವರ ತಂಡದಲ್ಲಿ ಅಲ್ಲಲ್ಲಿ ಸನ್ಯಾಸಿಗಳಾಗಿ ಪಟ್ಟಗಟ್ಟಿಸಿಕೊಂಡು ಬಟ್ಟಲ ಒಡೆಯರಾಗಿ ಖ್ಯಾತರಾದದು ಸೋಜಿಗದ ಸಂಗತಿಯಾಗಿದೆ.

ಅಮೋಘಸಿದ್ಧನ ನಾಲ್ಕು ಜನ ವರವಿನ ಮಕ್ಕಳಲ್ಲಿ ಯಾರೂ ಸನ್ಯಾಸಿಗಳಾಗಲಿಲ್ಲ. ಆದರೆ ಅವರಿಗೆ ಜನಿಸಿದ ಇಪ್ಪತ್ತೊಂದು ಜನಮಕ್ಕಳಲ್ಲಿ ಮೂರು ಜನ ಸನ್ಯಾಸಿಗಳಾಗಿದ್ದಾರೆ. ಇವರು ಪುತ್ರಮೋಹಿಗಳ ಪರಂಪರೆಯಲ್ಲಿ ಹೊಸನಡೆಯನ್ನು ಪ್ರಾರಂಭಿಸಿದವರು. ಇಪ್ಪತ್ತೊಂದು ಮಕ್ಕಳ ಮದುವೆ ಹೂಡಿದ ಸಂದರ್ಭದಲ್ಲಿ ಕನ್ನಮುತ್ಯಾನ ಇಬ್ಬರು ಮಕ್ಕಳಾದ ವೀರಮಾದಣ್ಣ ಹಾಗೂ ಮಲಕಾರಿಸಿದ್ಧರು ನಾವು ಸನ್ಯಾಸಿಗಳಾಗಿ ಉಳಿಯುತ್ತೇವೆ ಎಂದು ಹೇಳುತ್ತಾರೆ. ಉಳಿದ ಹತ್ತೊಂಬತ್ತು ಜನರಿಗೆ ಹೆಣ್ಣುಗಳನ್ನು ನಿಶ್ಚಯಿಸುತ್ತಾರೆ. ಮದುವೆ ಮಂಟಪದಲ್ಲಿ ಕುಳಿತ ಒಬ್ಬ ಯುವಕ ಸನ್ಯಾಸಿಯಾಗುವ ಬಯಕೆ ವ್ಯಕ್ತಪಡಿಸಿ ಅಲ್ಲಿಂದ ಓಡಿಹೋಗುತ್ತಾನೆ. ಈತನೆ ಆಚಾರಗೌಡ ಸೋಮಣ್ಣ ಮುತ್ಯಾನ ನಾಲ್ಕನೆಯ ಮಗ ಮಲಕಾರಿಸಿದ್ಧ. ವಿಧಿಪೂರ್ವಕವಾಗಿ ಮೊದಲಿನ ಇಬ್ಬರಿಗೆ ಆಚಾರಗೌಡ ಸೋಮಣ್ಣನೇ ಸನ್ಯಾಸಿ ಪಟ್ಟಗಟ್ಟಿಸುತ್ತಾನೆ. ಆದರೆ ಅವನ ಮಗನೇ ಮದುವೆ ಮಂಟಪದಿಂದ ತಪ್ಪಿಸಿಕೊಂಡು ಹೋಗಿ ಸನ್ಯಾಸಿಯಾಗಿಬಿಡುತ್ತಾನೆ. ಇವನು ಸನ್ಯಾಸಿಯಾದ ಸನ್ನಿವೇಶ ಬಹು ಸೋಜಿಗದಿಂದ ಕೂಡಿದುದಾಗಿದೆ. ಈ ಮಲಕಾರಿಸಿದ್ಧನಿಗೆ ಜತ್ತ ತಾಲೂಕಿನ

[illegible]

[illegible]

[illegible]

[illegible]

[illegible]

ಹಳ್ಳಿ ಗ್ರಾಮದ ವಿಠಲಗೌಡನ ಮಗಳಾದ ಸಂಗಾದೇವಿಯನ್ನು ತಂದುಕೊಳ್ಳಬೇಕೆಂದು ನಿರ್ಧರಿಸಲಾಗಿರುತ್ತದೆ. ಅಂತೆಯೇ ಮದುವೆಯ ಸಿದ್ಧತೆ ನಡೆಯುತ್ತದೆ. ಮದುಮಕ್ಕಳನ್ನು ಮದುವೆ ಮಂಟಪದಲ್ಲಿ ತಂದು ಕುಳ್ಳಿರಿಸುತ್ತಾರೆ. ಮಲಕಾರಿಸಿದ್ಧನ ಎಡಬದಿಗೆ ಸಂಗಾದೇವಿ ಕುಳಿತಿದ್ದಾಳೆ. ಆಗ ಮಲಕಾರಿಸಿದ್ಧನು 'ಇಲ್ಲಿ ಏನು ನಡೆದಿದೆ' ಎಂದು ತನ್ನ ತಾಯಿಯನ್ನು ಕೇಳಿದ. 'ನಿನ್ನ ಮದುವೆ ನಡೆದಿದೆ' ಎಂದಳು ತಾಯಿ. ಯಾರೊಂದಿಗೆ ಎಂದ ಮಲಕಾರಿಸಿದ್ಧ. 'ಹೆಣ್ಣಿನೊಂದಿಗೆ' ಎನ್ನುತ್ತಾಳೆ ತಾಯಿ. ಹೆಣ್ಣು ಎಂದರೆ ಹೇಗೆ ಇರುತ್ತಾಳೆ ಎನ್ನುತ್ತಾನೆ. 'ಹೆಣ್ಣುಗಳು ನನ್ನಂತೆ ಇರುತ್ತವೆ' ಎನ್ನುತ್ತಾಳೆ ತಾಯಿ. ಹಾಗಾದರೆ ಅವಳು ನನ್ನ ತಾಯಿ ಸಮಾನ, ನಾನು ಅವಳನ್ನು ಮದುವೆಯಾಗಲಾರೆ ಎಂದು ಮದುವೆ ಮಂಟಪದಿಂದ ಓಡಿಹೋಗುತ್ತಾನೆ. ಈ ಸನ್ನಿವೇಶವನ್ನು ವಿವರಿಸುವ ಡೊಳ್ಳಿನ ಹಾಡೊಂದಿದೆ. ಅದರ ಕೆಲ ಚರಣಗಳನ್ನು ಇಲ್ಲಿ ನೀಡಲಾಗಿದೆ.

ಬಂದಾರೋ ಪ್ರಾಯಕ್ಕ ಮಾಡ್ಯಾರೋ ಕಾರ್ಯಕ್ಕ
ವಯಾ ಬಂತೋ ಅವರೀಗಿ
ಕರದ ಭೂತಾಳಿಗ್ಹೇಳೆರಪ್ಪ
ಇವರಿಗೆ ಕನ್ಯಾ ನೋಡೋ ಎಪ್ಪಾ

ಕುಂಕುಮ ಹಚ್ಚ್ಯಾರ ಮಾತಕತಿ ಮುಗಸ್ಯಾರ
ಲಗ್ನಾ ಇಟ್ಟ್ಯಾರ ವರ್ಷಾರ ತಿಂಗಳಿಗಿ
ಕೂಡ್ಯಾರ ದೈವಕ್ಕಾ ಆನಂದಾಯಿತು ಅವರ ಮನಕ
ಹರುಷಾದ ಎಲ್ಲರಿಗಿ

ಭೀವರಗಿ ಮುಂದ ಕುಂತ ದೇವ ಕಾರ್ಯ ನಡಸ್ಯಾರ
ನಾಲ್ಕು ಮಂದಿ ಕೂತ ಮೂಲಿಗಿ
ಸತಿಪತಿ ಎಡಬಲಕ ಕುಂತಾರೋ ಸಾಲಕ
ಹರಷಾತೋ ಅವರ ಮನಸೀಗಿ
ಮಲಕಾರಿಸಿದ್ಧಂದು ಬದಲಾತೋ ರೂಪ
ಎಲ್ಲಾರ ಮ್ಯಾಲ ಆಗ್ಯಾನೋ ಕ್ಯಾಪ
ಎಣ್ಣೆಟ್ಟ ನೆತ್ತೀಗಿ ಅರಿಷಿಣ ಹಚ್ಚ್ಯಾರ ಮೈಗಿ
ಕಂಕಣ ಕಟ್ಟ್ಯಾರ ಕೈಗಿ
ಸೋಮಣ್ಣ ಮುತ್ಯಾನ ಮಗನ ಮನಸಿಗಿ ಆಗ್ಯಾದ ಖ್ಯಾಲ
ಹೋಗಿ ಕೇಳತಾನ ತನ್ನ ತಾಯೀಗಿ

ಕೂಡ್ಸೀರಿ ದೈವ್ಯಾಕ ತಿಳಿವಲ್ಲೊ ನನ ಮನಕ
ತಿಳ್ಸಿ ಹೇಳವ್ವ ಸರಿಯಾಗಿ
ನನ್ನಂಥ ಕನ್ಯಾ ಮನಿಗೆ ಬರ್‍ತಾಳಪ್ಪ
ಲಗ್ನಾ ಮಾಡೂದಕ ತಿಳೀಬ್ಯಾಡ ತಪ್ಪಾ
ಹೇಳ್ಯಾನ ತಾಯಿಗ ಜಗದಾಗ ಹೆಣ್ಣೀಗಿ
ತಾಯಂತ ತಿಳಿದೀನಿ ಅವಳೀಗಿ
ಹೋಳಿಗಿ ಜನ ಹೊಡಿತಿತ್ತ ಗಪ್ಪಾ
ಮಲಕಾರಿ ಸಿದ್ಧಗ ಸಿಟ್ಟು ಬಂತಪ್ಪ
ಬಂತೀಗ ವೈರಾಗ್ಯ ಅಂಜಿಕಲ್ಲ ಅವನೀಗಿ
ಮಾಡೋರ ತಲ್ಯಾಗೋ ಮದುವೀ
ಅರವುತನ ಬಯಲಾತೋ ತಿಳವಳಿಕೆ ಉಕ್ಕೀತೋ
ಹೋಗಿ ಕೈ ಹಚ್ಚ್ಯಾನ ತಾಯಿ ಕಾಲಿSSಗಿ
ಸಾಗ್ಯಾಳೊ ಮನಿತನಕ ವರವಿಟ್ಟ ಕಡಿತನಕ
ಅವರು ನಂಬ್ಯಾರೊ ಒಡೆಯರಿಗಿSS[೪೫]

ಇಲ್ಲಿ ಕಂಡು ಬರುವ ಮಲಕಾರಿಸಿದ್ಧ ಹೆಣ್ಣುಗಳಿಂದ ಸದಾ ಪಾರಾಗಲು ಹವಣಿಸುವ ಚಾಂಗದೇವನ ಹಾಗೆ ತೋರುತ್ತಾನೆ.

ಇಂಥವರ ಒಂದು ಸಣ್ಣ ಪಡೆ ನಮಗೆ ಅಮೋಘಸಿದ್ಧನ ವಂಶಾವಳಿಯಲ್ಲಿ ಅಲ್ಲಲ್ಲಿ ಕಂಡು ಬರುತ್ತದೆ. ಅವಧುಸಿದ್ಧನ ನಾಲ್ಕನೆಯ ಮಗ ಬಡಚಿಯ ನಾಗಪ್ಪೊಡೆಯ. ಅವನ ಮಗ ಬಬಲಾದಿಯ ಸಿದ್ಧರಾಯ. ಈ ಸಿದ್ಧರಾಯನ ಮಕ್ಕಳಲ್ಲಿ ಒಬ್ಬ ಬಟ್ಟಲೊಡೆಯನಾಗಿದ್ದಾನೆ. ಇದೇ ಬಡಚಿನಾಗಪ್ಪೊಡೆಯನ ಇನ್ನೊಬ್ಬ ಮಗನಾದ ಲವಗಿ ಚೂರಿಸಿದ್ಧನ ಮಕ್ಕಳಲ್ಲಿ ಒಬ್ಬನು ಜಾಲಗೇರಿಯಲ್ಲಿ ಬಟ್ಟಲ ಒಡೆಯನಾಗಿದ್ದಾನೆ. ಅವಧುಸಿದ್ಧನ ಐದನೆಯ ಮಗನ ಹೆಸರು ಕೆಂಚಸೋಮಣ್ಣ ಮುತ್ಯಾ. ಅವನ ಮಕ್ಕಳಲ್ಲಿ ಒಬ್ಬನಾದ ಸಲಗರ ಮಲ್ಲಪ್ಪ ಒಡೆಯ ಎಂಬುವವ ಸಿಂದಗಿ ತಾಲೂಕಿನ ಗೊಲಗೇರಿಗೆ ಬಟ್ಟಲ ಒಡೆಯನಾಗಿ ಬಂದಿದ್ದಾನೆ.

ಆಚಾರಗೌಡ ಸೋಮಣ್ಣ ಮುತ್ಯಾನ ಎರಡನೆಯ ಮಗನ ಹೆಸರು ಚಿಕ್ಕಮಲ್ಲಪ್ಪ ಒಡೆಯ. ಈ ಚಿಕ್ಕಮಲ್ಲಪ್ಪನ ಮೂರನೆಯ ಮಗನ ಹೆಸರು ಹಂಚಿನಾಳದ ಶಾವರಸಿದ್ಧ. ಈ ಶಾವರಸಿದ್ಧನ ಇಪ್ಪತ್ತೇಳು ಜನಮಕ್ಕಳಲ್ಲಿ ಹದಿನಾರನೆಯ ಮಗನು ನಟಲಗೇರಿಯ ಬಟ್ಟಲ ಒಡೆಯನೆಂದು ಹೆಸರು ಪಡೆದಿದ್ದಾನೆ.

ದೇವೇಂದ್ರ ಬಿಳಿಯಾನಿಸಿದ್ಧನ ಕೊನೆಯ ಮಗನ ಹೆಸರು ಅಚೇಗಾಂವಿ ಶೀಲಿಸಿದ್ಧ. ಈ ಶೀಲಿಸಿದ್ಧನ ಎಂಟು ಮಕ್ಕಳಲ್ಲಿ ಹೊಕ್ಕುಂಡಿ ಸಿದ್ಧರಾಯ ಒಬ್ಬ. ಈ ಹೊಕ್ಕೊಂಡಿ ಸಿದ್ಧರಾಯನ ಆರನೆಯ ಮಗ ಹೊಕ್ಕೊಂಡಿ ಬಟ್ಟಲ ಒಡೆಯ ಎಂಬ ಹೆಸರಿನಲ್ಲಿ ಹೊಕ್ಕುಂಡಿಯಲ್ಲಿ ನೆಲೆಸಿದ್ದಾನೆ.

೩.೨.೫.೧ ಮಲಕಾರಿಸಿದ್ಧ

ಅಮೋಘಸಿದ್ಧನ ಮೊಮ್ಮಕ್ಕಳಲ್ಲಿ ಇಬ್ಬರು ಮಲಕಾರಿ ಸಿದ್ಧ ಎಂಬ ಹೆಸರಿನವರಿದ್ದಾರೆ. ಒಬ್ಬ ಆಚಾರಗೌಡ ಸೋಮಣ್ಣ ಮುತ್ಯಾನ ಮಗ. ಇನ್ನೊಬ್ಬ ಕನ್ನಮುತ್ಯಾನ ಮಗ. ಈ ಎರಡನೆಯ ಮಲಕಾರಿಸಿದ್ಧನು ತನ್ನ ಪಾಲಕರು ಮಾಡುತ್ತಿದ್ದ ಮದುವೆಯ ಸಿದ್ಧತೆಯನ್ನು ನೋಡಿ ತಾನು ಸನ್ಯಾಸಿಯಾಗ ಬಯಸಿರುವ ವಿಷಯವನ್ನು ತಿಳಿಸಿಬಿಡುತ್ತಾನೆ. ಆದರೆ ಆಚಾರಗೌಡ ಸೋಮಣ್ಣ ಮುತ್ಯಾನ ಮಗನಾದ ಮಲಕಾರಿಸಿದ್ಧನು ಮದುವೆಯ ಎಲ್ಲ ಸಿದ್ಧತೆಗಳು ಮುಗಿಯುವವರೆಗೆ ಸುಮ್ಮನಿದ್ದು, ಹಸೆಮಣೆಮೇಲೆ ಕುಳಿತವನು ಅಲ್ಲಿಂದ ಮದುವೆ ಒಲ್ಲೆ ಎಂದು ಓಡಿ ಹೋಗುತ್ತಾನೆ. ಅವನ ಈ ನಿರ್ಧಾರದ ಕಾರಣದಿಂದ ಅವನ ಮಡದಿಯಾಗಬೇಕಾಗಿದ್ದ ಸಂಗಾಬಾಯಿ ಆಘಾತಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಕನ್ನಮುತ್ಯಾನ ಮಗನಾದ ಮಲಕಾರಿಸಿದ್ಧನು ಮೂರನೆಯ ತಲೆಮಾರಿನ ಇಪ್ಪತ್ತೊಂದು ಜನ ಮೊಮ್ಮಕ್ಕಳಲ್ಲಿ ಅತ್ಯಂತ ಪ್ರಸಿದ್ಧನಾದವನು. ಮಲಕಾರಿಸಿದ್ಧನನ್ನು ತಮ್ಮ ಮಗನನ್ನಾಗಿ ಪಡೆಯಬೇಕೆನ್ನುವಲ್ಲಿ ಕೊಂತವ್ವ ಹಾಗೂ ಕನಾಬಾಯಿಯರ ಮಧ್ಯ ಬಹುದೊಡ್ಡ ಪೈಪೋಟಿಯೇ ನಡೆದಿದೆ. ಕೊಂತೆವ್ವ ಬಿಳಿಯಾನಿಸಿದ್ಧನ ಹೆಂಡತಿ ಹಾಗೂ ಅಮೋಘಸಿದ್ಧನ ಅತ್ಯಂತ ನೆಚ್ಚಿನ ಸೊಸೆ. ಕನಾಬಾಯಿ ಕನ್ನಮುತ್ಯಾನ ಹೆಂಡತಿ ಹಾಗೂ ಪದ್ಮಾವತಿಯ ನೆಚ್ಚಿನ ಸೊಸೆ. ಕೊಂತೆವ್ವ ಮಾವನಿಂದ ಕೇಳಿ ಪಡೆದ ಸಂತಾನಫಲ ಕನಾಬಾಯಿಯ ಪಾಲಿಗೆ ಬರುವಂತಾಗುತ್ತದೆ ಪದ್ಮಾವತಿಯ ಸಲಹೆಯ ಕಾರಣದಿಂದ. ಆದರೆ ಮಲಕಾರಿಸಿದ್ಧನು ಹದಿಮೂರು ದಿವಸದ ಕೂಸಿರುವಾಗಲೇ ಕೊಂತೆವ್ವಳ ವಶವಾಗುತ್ತಾನೆ.[೪೬]

ಬಾಲ್ಯದಲ್ಲಿಯೇ ಅವನ ವೃಕ್ಷ ಪ್ರೇಮ ಎಲ್ಲರ ಗಮನ ಸೆಳೆಯುತ್ತದೆ. ಸಲ್ಲಹಾದ ಗಿಡಕ್ಕೆ ತನ್ನ ಬಳಿಯಿದ್ದ ಒಡಕು ಗಡಿಗೆಯಿಂದಲೇ ನೀರು ಹನಿಸುವ ಕೆಲಸದಲ್ಲಿ ತೊಡಗುತ್ತಾನೆ. ಭೀವರಗಿ ಸಮೀಪದ ಆಸಂಗಿ ಮಡ್ಡಿಯಲ್ಲಿ ತನ್ನ ಗೆಳೆಯರೊಂದಿಗೆ ಚೆಂಡಾಟ ಆಡುವಲ್ಲಿ ತನ್ನ ಚಾಣಾಕ್ಷತೆಯನ್ನು ಮೆರೆಯುತ್ತಾನೆ.

ಬೆಳೆದು ದೊಡ್ಡವನಾದ ಮೇಲೆ ಪಾಲಕರು ಮದುವೆ ಮಾಡಲು ನಿಶ್ಚಯಿಸಿದಾಗ ತಾನು ಮದುವೆಯಾಗಲಾರೆ, ಸನ್ಯಾಸಿಯಾಗ ಬಯಸಿದ್ದೇನೆ ಎಂದು ಹೇಳಿ ದೊಡ್ಡಪ್ಪನಾದ ಆಚಾರಗೌಡ ಸೋಮಣ್ಣನಿಂದ ಪಟ್ಟಗಟ್ಟಿಸಿ ಕೊಳ್ಳುತ್ತಾನೆ. ಕೂಡು ಕುಟುಂಬದ ಹದಿನೆಂಟು ಜನ ಅಣ್ಣತಮ್ಮಂದಿರು ಮದುವೆಯಾಗುತ್ತಾರೆ. ಭೀವರಗಿಯಲ್ಲಿದ್ದ ಕಿಲಾರಿಗಳನ್ನು ಮೇಯಿಸಲು ಅವರೆಲ್ಲ ನಿರಾಕರಿಸುತ್ತಾರೆ. ಆಸ್ತಿಯ ವ್ಯವಹಾರ ನೋಡಿಕೊಳ್ಳುತ್ತ ಹೆಂಡರೊಂದಿಗೆ ಸುಖವಾಗಿರಬಹುದು ಎಂಬುದು ಅವರ ಹವಣಿಕೆ. ಕಿಲಾರಿಗಳನ್ನು ಕಾಯಲು ಒಪ್ಪಿಕೊಂಡರೆ ಹೆಂಡಿರನ್ನು ಮನೆಯಲ್ಲಿ ಬಿಟ್ಟು ಕಿಲಾರಿಗಳ ಬೆನ್ನು ಹತ್ತಬೇಕಾಗುತ್ತದೆ ಎಂದು ಅವರಿಗೆ ಗೊತ್ತಿತ್ತು. ಹೀಗಾಗಿ ಅವರಾರೂ ಕಿಲಾರಿಗಳ ಜೋಪಾನದ ಜವಾಬ್ದಾರಿ ಹೊತ್ತುಕೊಳ್ಳುವುದಿಲ್ಲ. ಸನ್ಯಾಸಿಯಾಗಿದ್ದ ಮಲಕಾರಿಸಿದ್ಧ ಆ ಕೆಲಸವನ್ನು ಒಪ್ಪಿಕೊಳ್ಳುತ್ತಾನೆ. ಆ ಮೂಲಕ ತನ್ನ ವ್ಯಕ್ತಿತ್ವವನ್ನು ವಿಶಿಷ್ಟವಾಗಿ ರೂಪಿಸಿಕೊಳ್ಳುತ್ತಾನೆ. ತಾನು ಆಯ್ದುಕೊಂಡ ಕೆಲಸದ ಕಾರಣದಿಂದ ಆತ ಸದಾ ಸಂಚಾರಿ ಯಾಗುತ್ತಾನೆ, ಚಾರಣಿಗನಾಗುತ್ತಾನೆ. ಅವನ ಚಾರಣಗುಣ ಹಲವಾರು ವಿಪತ್ತುಗಳನ್ನು ಅವನ ದಾರಿಯಲ್ಲಿ

[illegible]

[illegible]

[illegible]

[illegible]

ತಂದು ಹಾಕುತ್ತದೆ. ಅವುಗಳನ್ನು ಸಮರ್ಥವಾಗಿ ಎದುರಿಸಿ ಅಮೋಘಸಿದ್ಧನ ನಂತರದ ಸ್ಥಾನವನ್ನು ಈ ಪರಂಪರೆಯಲ್ಲಿ ಪಡೆಯುತ್ತಾನೆ. ಅವನು ಸಂಚರಿಸಿದ ಸ್ಥಳಗಳನ್ನು ಗಮನಿಸಿದರೆ ಅವನ ಚಾರಣದ ವಿಸ್ತಾರ ತಿಳಿದುಬರುತ್ತದೆ. ಜತ್ತ ತಾಲೂಕಿನ ಕರಜಗಿ, ಬೋರಗಿ, ಮೊರಬಗಿ, ಸಂಖ ಹಾಗೂ ತಿಕ್ಕುಂಡಿಗಳಲ್ಲಿ ಸಂಚರಿಸುತ್ತಾ ಹುಲಿಗುಡ್ಡ, ಬೆಳ್ಳಿಗುಡ್ಡ, ರಣವಾಡಗುಡ್ಡ ಹಾಗೂ ಅಜೂರಗಳನ್ನು ಸುತ್ತಿ ಹಾಕುತ್ತಾನೆ. ಅಲ್ಲಿಂದ ಕಿಳೇಗಾವದ ಮೂಲಕ ಹಿರಿಗುಡ್ಡ(ಸವದತ್ತಿ ಸಮೀಪ)ಕ್ಕೆ ಬರುತ್ತಾನೆ. ಅಲ್ಲಿಂದ ನರಗುಂದ ಮಾರ್ಗವಾಗಿ ಆನೆಗುಂದಿಯ ಕಡೆಗೆ ಹೊರಡುತ್ತಾನೆ. ಆನೆಗುಂದಿ ಅರಸನು ತನ್ನ ರಾಜ್ಯದಲ್ಲಿ ಕಿಲಾರಿಗಳನ್ನು ಮೇಯಿಸುತ್ತ ಬಂದ ಮಲಕಾರಿಸಿದ್ಧನಿಗೆ ಏಳನೂರು ರೂಪಾಯಿ ದಂಡ ವಿಧಿಸುತ್ತಾನೆ. ಕಂಬಳಿ ಬೀಸಿ ಮಳೆ ಬರಿಸುವ ಸಿದ್ಧರಂತೆ ಈತ ಕಂಬಳಿ ಬೀಸಿ ರೂಪಾಯಿಗಳನ್ನು ಉದುರಿಸುತ್ತಾನೆ.

ಆನೆಗುಂದಿಯಿಂದ ಸಂಚರಿಸುತ್ತ ಮಲಕಾರಿಸಿದ್ಧನು ಸುರಪುರದ ದೊರೆಗಳ ಭೂಪ್ರದೇಶ ಪ್ರವೇಶಿಸುತ್ತಾನೆ. ದೊರೆಯ ಮಗಳು ಮಲಕಾರಿಸಿದ್ಧನಲ್ಲಿ ಮೋಹಿತಳಾಗುತ್ತಾಳೆ. ಸನ್ಯಾಸಿಯಾದ ಮಲಕಾರಿಸಿದ್ಧ ಅವಳನ್ನು ನಿರಾಕರಿಸುತ್ತಾನೆ. ದೊರೆಯ ಮಗಳು ಮಲಕಾರಿಸಿದ್ಧನ ಮೇಲೆ ಆಪಾದನೆ ಹೊರಿಸುತ್ತಾಳೆ. ಮಗಳ ಮಾತು ಕೇಳಿದ ದೊರೆ ತನ್ನ ಸೈನ್ಯ ಸಮೇತ ಮಲಕಾರಿಸಿದ್ಧನ ಮೇಲೆ ದಾಳಿ ಮಾಡುತ್ತಾನೆ. ಭೀವರಗಿಗೆ ಬಂದರೆ ನಾನು ನಿಮ್ಮೊಂದಿಗೆ ಯುದ್ಧ ಮಾಡುವೆನೆಂದು ಹೇಳುತ್ತಾನೆ. ತನ್ನ ಕೌಶಲ್ಯದಿಂದ ಭೀವರಗಿಯಲ್ಲಿ ಚಕ್ರವ್ಯೂಹ ಹುಡೆಯನ್ನು ನಿರ್ಮಿಸಿ, ಅದರ ಮೇಲೆ ನಿಂತು ಸುರಪುರದ ದೊರೆಗಳ ಸೈನ್ಯವನ್ನು ಕೊಂದು ಹಾಕುತ್ತಾನೆ. ಸಮೀಪದ ಕರಜಗಿ ಜಿನ್ನೆಸಾಬ ಎಂಬ ಸೂಫಿಸಂತನ ಸಲಹೆಯ ಮೇರೆಗೆ ಯುದ್ಧ ನಿಲ್ಲಿಸುತ್ತಾನೆ. ಅಲ್ಲಿಂದ ಅವರಿಬ್ಬರ ಮಧ್ಯೆ ನಿಕಟವಾದ ಸ್ನೇಹವೇರ್ಪಡುತ್ತದೆ. ಇಂದಿಗೂ ಆಚರಣೆಯಲ್ಲಿ ಈ ಸಖ್ಯ ಕಂಡು ಬರುತ್ತದೆ.[೪೭]

ಅಮೋಘಸಿದ್ಧನಂತೆ ದಯಾಪರನಾಗಿರುವ ಮಲಕಾರಿಸಿದ್ಧ ತನ್ನ ದೊಡ್ಡಪ್ಪನಾದ ಅವಧುಸಿದ್ಧನಂತೆ ಮುಂಗೋಪಿಯೂ ಆಗಿದ್ದಾನೆ. ಸುರಪುರದ ದೊರೆಯ ಮೇಲೆ ವಿಜಯ ಸಾಧಿಸಿದ ಸುದ್ದಿ ತಿಳಿದ ಅವನ ಸಹೋದರಿ ಗುಬ್ಬೆವ್ವ ಅಣ್ಣನಿಗೆ ಆಹೇರಿ ಮಾಡಲು ಗಂಡನೊಂದಿಗೆ ಬರುತ್ತಾಳೆ. ಅಣ್ಣನ ಸನ್ಮಾನಕ್ಕೆಂದು ಹತ್ತು ಬೆರಳಿಗೆ ಹತ್ತು ಹೊನ್ನುಂಗುರ ತೆಗೆದುಕೊಂಡಿದ್ದ ಗುಬ್ಬೆವ್ವಳ ಸಡಗರ ನೋಡಿ ಅವಳ ಗಂಡ ಅಪಹಾಸ್ಯ ಮಾಡುತ್ತಾನೆ. ಯಾಕೆಂದರೆ ಸುರಪುರ ದೊರೆಯೊಂದಿಗಿನ ಯುದ್ಧದಲ್ಲಿ ಮಲಕಾರಿಸಿದ್ಧನು ಒಂದು ಬೆರಳನ್ನು ಕಳೆದುಕೊಂಡಿರುತ್ತಾನೆ. ಹೀಗೆ ಅಪಹಾಸ್ಯ ಮಾಡಿದ ವಿಷಯ ತಿಳಿದ ಮಲಕಾರಿಸಿದ್ಧ ಭಾವನ ಬೆನ್ನಿನ ಮೇಲೆ ಗುದ್ದಿ ಕೊಂದು ಬಿಡುತ್ತಾನೆ. ಗಂಡನನ್ನು ಬದುಕಿಸಿ ಕೊಡಲು ಗುಬ್ಬೆವ್ವ ವಿನಂತಿಸಿಕೊಂಡರೂ ಮಲಕಾರಿಸಿದ್ಧ ನಿರಾಕರಿಸುತ್ತಾನೆ. ಆವೇಶದ ಭರದಲ್ಲಿ ಅವಳೂ ಅಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ನಂತರದ ದಿನಗಳಲ್ಲಿ ಮಲಕಾರಿಸಿದ್ಧನು ಉಮದಿಯಲ್ಲಿದ್ದ ರಾವಳಜೋಗಿಯನ್ನು ಮುಖಾಮುಖಿ ಮಾಡಿಕೊಂಡು ಅವನನ್ನು ಉಮದಿಯಿಂದ ಓಡಿಸುತ್ತಾನೆ. ಈ ಕುರಿತು ಎರಡನೆಯ ಅಧ್ಯಾಯದ ರಾವಳ ಜೋಗಿಯೊಂದಿಗೆ ಮುಖಾಮುಖಿ ಎಂಬ ವಿಭಾಗದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಅಮೋಘಸಿದ್ಧನ ಪುಣ್ಯದ ಮಕ್ಕಳ ವಂಶಾವಳಿಯಲ್ಲೂ ಸನ್ಯಾಸ ದೀಕ್ಷೆಯ ಝರಿ ಹರಿದು ಬಂದಿರುವುದು ತಿಳಿದುಬರುತ್ತದೆ. ಸಿದ್ಧಸಿರಿ ಗ್ರಂಥದ ಕರ್ತೃ ಈ ಕುರಿತು ಏನನ್ನೂ ಹೇಳುವುದಿಲ್ಲ. ಆದರೆ ನಾನು ಛಟ್ಟಿ ಅಮವಾಸ್ಯೆಯಂದು ಮುಮ್ಮಟಗುಡ್ಡದಲ್ಲಿ ನಡೆಯುವ ಜಾತ್ರೆಯ ಸಮಯದಲ್ಲಿ ಕೈಕೊಂಡ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಹಾದೇವ ವಿಠಲ ಬಡಚಿ ಎನ್ನುವವರು ಈ ಮಾಹಿತಿ ನೀಡಿದರು. ಮಾಯದ ಮಗನಾದ ಮಾಸಿದ್ಧಪ್ಪನಿಗೆ ನಾಲ್ಕು ಜನ ಮಕ್ಕಳು. ಅಮರಾಯ, ಸೋಮರಾಯ, ಭೀಮರಾಯ ಹಾಗೂ ಚಿಕ್ಕಮಳಿಮಲ್ಲಪ್ಪ, ನಾಲ್ಕನೆಯ ಮಗನಾದ ಈ ಚಿಕ್ಕ ಮಳಿಮಲ್ಲಪ್ಪನೇ ಬಟ್ಟಲ ಒಡೆಯನಾದವನು. ಇವನನ್ನು ಪರಮಾನಂದ ಎಂದೂ ಕರೆಯುತ್ತಾರೆ. ಈತ ಸಿಂದಗಿ ತಾಲೂಕಿನ ಚಾಂದಕವಟೆ ಗ್ರಾಮಕ್ಕೆ ಬಂದು ನೆಲೆ ನಿಂತನೆಂತಲೂ ಅವನವೇ ಆದ ೯೬೫ ಗುಡಿಗಳು ಇವೆಯೆಂತಲೂ ಹೇಳಿದರು.

೩.೨.೬ ಸಿದ್ಧ, ನಾಥ, ಒಡೆಯ, ರಾಯ, ಲಿಂಗ, ದೇವ, ಗೊಂಡ

ಅಮೋಘಸಿದ್ಧನ ವಂಶದ ಬಳ್ಳಿ ನಾಲ್ವರು ವರವಿನ ಮಕ್ಕಳು, ಇಪ್ಪತ್ತೊಂದು ಮಂದಿ ಮೊಮ್ಮಕ್ಕಳು, ನೂರಾ ಒಂದು ಮಂದಿ ಮರಿಮೊಮ್ಮಕ್ಕಳು, ಸಾವಿರದ ಏಳನೂರ ಗಿರಿಮೊಮ್ಮಕ್ಕಳು ಹೀಗೆ ವಿಸ್ತಾರವಾಗಿ ಹಬ್ಬಿಕೊಂಡಿದೆ. ಅವರ ಹೆಸರಿನ ಕೊನೆಯಲ್ಲಿ ಬರುವ ಸಿದ್ಧ, ಒಡೆಯ, ರಾಯ, ಲಿಂಗ, ಯೋಗಿ, ದೇವ, ಗೌಡ, ಗೊಂಡ, ಮುನಿ, ನಾಥದಂಥ ಉಪಾದಿಗಳು ಈ ಪರಂಪರೆಯ ಪಂಥ ವೈವಿಧ್ಯತೆಯನ್ನು ಅವರು ಬಯಸುವ ಬಂಧಮುಕ್ತತೆಯನ್ನು ಬಿಂಬಿಸುತ್ತವೆ. ಇವರೆಲ್ಲ ಒಂದೇ ಪರಂಪರೆಗೆ ಸೇರಿದವರಾದರೂ ಅವರೆಲ್ಲರ ಮೂಲದಲ್ಲಿ ಸೋಮಲಿಂಗ, ಅಮೋಘಸಿದ್ಧ ಇದ್ದಾರಾದರೂ ಇವರೆಲ್ಲ ಭಿನ್ನ ಭಿನ್ನ ಕಾಲಘಟ್ಟದಲ್ಲಿ ಅನೇಕ ಸ್ಥಿತ್ಯಂತರಗಳನ್ನು ದಾಟಿ ಬಂದಂತೆ, ಹಲವಾರು ಪಂಥಗಳನ್ನು ಮುಕ್ತವಾಗಿ ಒಪ್ಪಿಕೊಂಡಿರುವಂತೆ ತೋರುತ್ತದೆ.

ಸಿದ್ಧ

ಅಮೋಘಸಿದ್ಧ ವಂಶಾವಳಿಯಲ್ಲಿ ಪ್ರತಿಶತ ಎಂಬತ್ತಕ್ಕೂ ಹೆಚ್ಚು ಜನರು ಸಿದ್ಧರು ಎಂದೇ ಕರೆಯಿಸಿಕೊಂಡಿದ್ದಾರೆ. ಇದು ಅವರ ಮೂಲ ತಾತ್ವಿಕತೆಯ ಮೇಲೆ ಬೆಳಕು ಚೆಲ್ಲುವ ಅಂಶವಾಗಿದೆ. ಕ್ರಿ.ಶ ಆರನೆಯ ಶತಮಾನದಿಂದ ಹತ್ತನೆಯ ಶತಮಾನದ ಅವಧಿಯಲ್ಲಿ ಸಿದ್ಧಪಂಥ ಭಾರತದ ಉದ್ದಗಲಕ್ಕೂ ಪ್ರವರ್ಧಮಾನಕ್ಕೆ ಬಂದಿತು ಎಂದು ರಾ.ಚಿಂ.ಡೇರಿ ಅಭಿಪ್ರಾಯಪಡುತ್ತಾರೆ: "ಕ್ರಿ.ಶ. ೬ರಿಂದ ೧೧ನೆಯ ಶತಮಾನದವರೆಗೆ ಅರಳುತ್ತ ಹೊರಟ ತಂತ್ರ ಸಾಧನೆಯು ವೇದದ ವಿರುದ್ಧ ಜೋರಾಗಿ ಧ್ವನಿಯೆತ್ತಿತ್ತು. ವೈದಿಕ ಪರಂಪರೆಯಲ್ಲಿಯ ತೀರಾ ಸಾಮಾನ್ಯ ಸಂಗತಿಯನ್ನು ಅದು ಪ್ರಖರವಾಗಿ ವಿರೋಧಿಸಿತು. ಪ್ರತಿಕ್ರಿಯೆಗಾಗಿ ಅಧ್ಯಾತ್ಮಿಕ ಸಾಧನೆಯಲ್ಲಿ ಪ್ರತಿಕೂಲ ವಾತಾವರಣವನ್ನು ನಿರ್ಮಿಸಿತು. ಬಾಹ್ಯಾಚಾರ ವಿರೋಧ, ಚಿತ್ತಶುದ್ಧಿಗೆ ಹೆಚ್ಚು ಒತ್ತು, ದೇಹವನ್ನೇ ಸಾಧನೆಗಳ ಆಧಾರವೆಂದು ಒಪ್ಪಿಕೊಳ್ಳುವುದು ಮತ್ತು ಸಮರಸ ಭಾವದಿಂದ ಸ್ವಸಂವೇದನಾನಂದವನ್ನು ಉಪಭೋಗಿಸುವುದು ಇಂಥ ಸಾಧನೆಗಳ ಸಾಮಾನ್ಯ ವೈಶಿಷ್ಟ್ಯಗಳು ಆ ಕಾಲದಲ್ಲಿ ಎಲ್ಲೆಡೆ ಗೋಚರಿಸುತ್ತವೆ.

ಈ ಎಲ್ಲ ವೈಶಿಷ್ಟ್ಯಗಳಿಂದ ಯುಕ್ತಗೊಂಡ ಮತ್ತು ತಂತಮ್ಮ ಪ್ರಣಾಲಿಯ ವ್ಯವಚ್ಛೇದಕತ್ವ ಹೊಂದಿದ ಸಿದ್ಧರ ಒಂದು ತಂಡವು ಈ ಕಾಲದಲ್ಲಿ ಸಿದ್ಧಗೊಂಡಿತ್ತು. ವಜ್ರಯಾನಿಸಿದ್ಧ, ಸಹಜಯಾನಿಸಿದ್ಧ, ಜೈನಸಿದ್ಧ, ಕಾಪಾಲಿಕಸಿದ್ಧ ಮುಂತಾದ ವಿವಿಧ ಸಿದ್ಧರ ಸಮೂಹವೊಂದು ಸಿದ್ಧಗೊಳ್ಳತೊಡಗಿತ್ತು. ರಾಹುಲ ಸಾಂಕೃತ್ಯಾಯನರು ಈ ಯುಗವನ್ನು ರಾಜಕೀಯವಾಗಿ ಸಿದ್ಧಯುಗ ಎಂದೆನ್ನುತ್ತಾರೆ."[೪೮]

ಇಂಥ ಸಿದ್ಧರು ಎಂಟು ತೆರನಾದ ಅತಿಮಾನುಷ ಸಿದ್ಧಿಗಳನ್ನು ಸಾಧಿಸಿದವರು ಎಂದು ನಂಬಲಾಗಿದೆ. ಅಣಿಮಾ(ಕಿರಿದಾಗುವುದು), ಗರಿಮಾ(ಭಾರವಾಗುವುದು), ಲಹಿಮಾ(ಹಗುರವಾಗುವುದು), ಮಹಿಮಾ (ಬೃಹತ್ತಾಗುವುದು), ಪ್ರಾಪ್ತಿ(ತ್ರಿಕಾಲಜ್ಞಾನ ಹಾಗೂ ಆಕಾಶಾಗಮನಶಕ್ತಿ), ಪ್ರಹಾಮಿಯಾರ(ಇಷ್ಟಸಿದ್ಧಿ), ಎಸತುಯಾಮ(ಸಜೀವ ಹಾಗೂ ನಿರ್ಜೀವ ವಸ್ತುಗಳ ಮೇಲೆ ನಿಯಂತ್ರಣ ಶಕ್ತಿ), ವಸಿತುಯಾಮ (ಎಲ್ಲವನ್ನೂ ನಿಯಂತ್ರಣದಲ್ಲಿ ತೆಗೆದುಕೊಳ್ಳುವ ಶಕ್ತಿ) -ಇವೆ ಆ ಎಂಟು ಶಕ್ತಿಗಳು, ಸಿದ್ಧಿಗಳು.

ಅಮೋಘಸಿದ್ಧ ಪರಂಪರೆಯ ಹಲವಾರು ಸಿದ್ಧರು ಮೇಲ್ಕಾಣಿಸಿದ ಹಲವಾರು ಸಿದ್ಧಿಗಳನ್ನು ಸಾಧಿಸಿಕೊಂಡವರಿದ್ದಾರೆ. ಅಮೋಘಸಿದ್ಧನ ಎರಡನೆಯ ಮಗ ಬಿಳಿಯಾನಿಸಿದ್ಧನು ಕಿರದಾಗುವ ಹಾಗೂ ನಿರ್ಜಿವ ವಸ್ತುಗಳ ಮೇಲೆ ನಿಯಂತ್ರಣ ಹೊಂದುವ ಶಕ್ತಿಯನ್ನು ಪಡೆದವನಾಗಿದ್ದನು. ಸದರ ಕಾರ್ತಿಕನೆಂಬ ರಾಜನು ಅಲ್ಲಮಗಿರಿ ಎಂಬ ಪಟ್ಟದಲ್ಲಿದ್ದ. ಮುಪ್ಪಾವಸ್ಥೆ ತಲುಪಿದರೂ ಅವನಿಗೆ ಸಂತಾನ ಫಲ ದೊರೆತಿರಲಿಲ್ಲ. ಸಂತಾನ ಫಲವನ್ನು ಅಪೇಕ್ಷಿಸಿ ಭೀವರಗಿಗೆ ಬರುತ್ತಾನೆ. ಅವನೊಂದಿಗೆ ಬಿಳಿಯಾನಿಸಿದ್ಧನನ್ನು ಕಳುಹಿಸಿ ಕೊಡಲಾಗುತ್ತದೆ. ಬಿಳಿಯಾನಿಸಿದ್ಧ ಒಂದು ಕಡಾಯಿಯಲ್ಲಿ ಎಣ್ಣೆ ಕಾಯಿಸಲು ಹೇಳುತ್ತಾನೆ. ಕಾದ ಎಣ್ಣೆಯಲ್ಲಿ ಸದರ ಕಾರ್ತೀಕ ಹಾಗೂ ಅವನ ಮಡದಿ ಮುಳುಗಿ ಬಂದರೆ ಯೌವನ ಮರುಕಳಿಸಿ ಸಂತಾನ ಫಲ ಪಡೆಯಬಹುದೆಂದು ತಿಳಿಸುತ್ತಾನೆ. ಸಂಶಯಗೊಂಡ ಅಲ್ಲಮಗಿರಿಯ ಪ್ರಧಾನಮಂತ್ರಿ 'ಮೊದಲು ನೀನೇ ಇಳಿದು ತೋರಿಸು' ಎಂದು ಆದೇಶಿಸುತ್ತಾನೆ. ಆಗ ಬಿಳಿಯಾನಿಸಿದ್ಧ ಸುಡುವ ಎಣ್ಣೆಯಲ್ಲಿ ಜಿಗಿದು ಚಿಕ್ಕ ಬೆಳ್ಳಿಯ ಗುಂಡಾಗಿ ಓಡಾಡತೊಡಗುತ್ತಾನೆ. ಇದು ಅವನಲ್ಲಿರುವ ಅಣಿಮಾ ಸಿದ್ಧಿಯ ಸಂಕೇತ.

ಇದೇ ಬಿಳಿಯಾನಿಸಿದ್ಧನಲ್ಲಿ ಎಸತುಯಾಮ ಸಿದ್ಧಿ ಕೂಡ ಇತ್ತು. ಕಲ್ಯಾಣದ ಕುಂಬಾರ ರಾಮಯ್ಯನ ಮಗನಿಗೆ ಐದೆಸಿ ಲಿಂಗವನ್ನು ಕಟ್ಟಲು ಹೊರಟಾಗ ದಾರಿ ಮಧ್ಯದಲ್ಲಿ ಬಿದ್ದಿದ್ದ ಏಳು ಗಜ ಉದ್ದನೆಯ ಬಂಡೆಗಲ್ಲಿಗೆ ಭಂಡಾರ ಹೊಡೆದು ಆನೆಯನ್ನಾಗಿಸಿ ಅದರ ಮೇಲೆ ಸವಾರಿ ಮಾಡುತ್ತಾ ಕಲ್ಯಾಣದ ಕಡೆಗೆ ಹೊರಟನೆಂಬ ಕತೆಯಿದೆ.

ಕನ್ನಮುತ್ತ್ಯಾನ ಮಗನಾದ ಮಲಕಾರಿಸಿದ್ಧ ಸನ್ಯಾಸಿಪಟ್ಟ ಗಟ್ಟಿಸಿಕೊಂಡು, ಕಿಲಾರಿಗಳನ್ನು ಮೇಯಿಸುತ್ತ ದೇಶಸಂಚಾರ ಮಾಡಿದ ವಿಷಯವನ್ನು ಈ ಹಿಂದೆ ಚರ್ಚಿಸಿದ್ದೇವೆ. ಒಂದು ಸಲ ಕಿಲಾರಿಗಳನ್ನು ಮೇಯಿಸುತ್ತ ಅವನು ಹುಲಿಗುಡ್ಡಕ್ಕೆ ಬರುತ್ತಾನೆ. ಅಲ್ಲಿನ ಹುಲಿಯೊಂದು ಕಿಲಾರಿಗಳನ್ನು ತಿನ್ನಲು ಆರ್ಭಟಿಸುತ್ತಾ ಬರುತ್ತದೆ. ಆಗ ವಸಿತುಯಾಮ ಸಿದ್ಧಿಯನ್ನು ಹೊಂದಿದ್ದ ಮಲಕಾರಿಸಿದ್ಧ ಕ್ರೂರ ಮೃಗ ಹುಲಿಯನ್ನು ತನ್ನ ನಿಯಂತ್ರಣಕ್ಕೆ

ತೆಗೆದುಕೊಂಡು ಮುಂದೆ ಸಾಗುತ್ತಾನೆ. ಅಮೋಘಸಿದ್ಧ ಪರಂಪರೆಯ ಬಹುಪಾಲು ಸಿದ್ಧರು ತ್ರಿಕಾಲ ಜ್ಞಾನವನ್ನು ಹೊಂದಿದವರು. ಅವರನ್ನು ಹಿಂದಿನ ಆರಹುಟ್ಟ, ಮುಂದಿನ ಆರಹುಟ್ಟ ತಿಳಿದವರು ಎಂದು ಬಣ್ಣಿಸಲಾಗಿದೆ. ಮಲಕಾರಿಸಿದ್ಧನು ಒಂದು ಸಲ ತಮ್ಮ ದೊಡ್ಡಿಯಲ್ಲಿನ ಒಂದು ಆಕಳು ಚಿಂಚಬಣ್ಣದ ಹೋರಿ ಕರುವನ್ನು ಈಯಲಿದೆ ಎಂದು ಹೇಳುತ್ತಾನೆ. ಈ ಸಿದ್ಧರು ತಮ್ಮ ದೇಹವನ್ನು ಹಗುರ ಮಾಡಿಕೊಂಡು ಹಾರಾಡಬಲ್ಲರು, ಇವರು ಪರಿಮಳಗಾಳ್ಯಾಗಿ ಸುಳಿಯಬಲ್ಲರು, ಸುಂಟರಗಾಳ್ಯಾಗಿ ಹರಿಯ ಬಲ್ಲರು. ಗಗನಸಿದ್ಧ ಎಂಬ ಹೆಸರಿನ ಒಬ್ಬ ಸಿದ್ಧ ಈ ಪರಂಪರೆಯಲ್ಲಿ ಇದ್ದಾನೆ.

ಈ ಪರಂಪರೆಯ ಬಹುಪಾಲು ಜನರು ಸಿದ್ಧ ನಾಮದವರೇ ಆಗಿದ್ದಾರೆ. ಅಮೋಘಸಿದ್ಧ, ಅವಧುಸಿದ್ಧ, ಮಳೆಗಾಲಸಿದ್ಧ, ಓಗಸಿದ್ಧ, ಶೀಲಿಸಿದ್ಧ, ಈರಸಿದ್ಧ, ಶಿವಸಿದ್ಧ, ಜಡಿಸಿದ್ಧ, ಗೇಣ>ಧೇನ>ಧ್ಯಾನಿ>ಜ್ಞಾನಿಸಿದ್ಧ, ಸರ್ವಸಿದ್ಧ, ಆರ್‍ಯಾಣಸಿದ್ಧ, ಕಂಬಳಿಸಿದ್ಧ, ಭೈರಸಿದ್ಧ, ಹಳ್ಳದ ಸಿದ್ಧ, ದೌಲತಸಿದ್ಧ, ದೊಡ್ಡಿಸಿದ್ಧ, ಬಿಸಿಲಸಿದ್ಧ, ಹಾದಿಸಿದ್ಧ, ಶಾಂತಸಿದ್ಧ, ಧರಿಸಿದ್ಧ, ಗವಿಸಿದ್ಧ, ನೂಲಸಿದ್ಧ, ಅರಮನಿ ಸಿದ್ಧ ಇತ್ಯಾದಿ ಹೆಸರುಗಳು ಇಲ್ಲಿ ವಿಪುಲವಾಗಿ ಕಾಣಸಿಗುತ್ತವೆ. 'ಸಿದ್ಧ' ಎನ್ನುವ ಉಪಾದಿಯ ಹಿಂದಿರುವ ವಿಶೇಷಣ ರೂಪಗಳೇ ಒಂದು ಅಧ್ಯಯನವಾಗುವಷ್ಟು ವಿಷಯ ವ್ಯಾಪ್ತಿಯನ್ನು ಹೊಂದಿವೆ.

ನಾಥ

ನಾಥ ಪಂಥವನ್ನು ಸಿದ್ಧ ಪಂಥದ ಒಂದು ಭಾಗವೆಂದು ಅನೇಕ ವಿದ್ವಾಂಸರು ಗುರುತಿಸಿದ್ದಾರೆ. ರಹಮತ್ ತರೀಕೆರೆ ಅವರು ಸಿದ್ಧ ಪರಂಪರೆಯು ಒಂದು ಮರವಾಗಿದ್ದು, ನಾಥವು ಅದರ ಒಂದು ಶಾಖೆ ಎಂದು ಹೇಳುತ್ತಾರೆ. ಹಾಗೆಯೇ ನಾಥವು ಸಿದ್ಧದ ಪರ್ಯಾಯ ಶಬ್ದವಾಗಿದೆ ಎಂದೂ ಹೇಳುತ್ತಾರೆ. ನಾಥದ ಲಕ್ಷಣಗಳನ್ನು ಅವರು ಈ ಕೆಳಗಿನಂತೆ ಗುರುತಿಸುತ್ತಾರೆ.

* ನಾಥವು ಮೂಲತಃ ಗುರುಪಂಥ
* ಯೋನಿಜರಾಗಿ ಹುಟ್ಟಲು ನಿರಾಕರಿಸುವವರು
* ಇಂದ್ರಿಯಗಳ ಮೇಲೆ ನಿಯಂತ್ರಣ ಹೊಂದಲು ಬಯಸುವವರು[೪೯]

ಈ ಅಧ್ಯಾಯದ ಪ್ರಾರಂಭದಲ್ಲಿ ಅಮೋಘಸಿದ್ಧನು ಗುರುಪಂಥವನ್ನು ಸ್ವೀಕರಿಸಿದವನು ಎಂಬುದನ್ನು ನೋಡಿದ್ದೇವೆ. ಗುರುಗೌರಿ ಸೋಮಲಿಂಗನಿಗೆ ಅಮೋಘಸಿದ್ಧ ಶಿಷ್ಯನಾಗಲು ಸಾಧ್ಯವಾದದ್ದು ಗುರುಪಂಥದ ಕಾರಣವಾಗಿಯೇ. ಅತ್ಯಾಶ್ರಮಿಗಳಾದ ಇವರು ತಮ್ಮ ಪರಂಪರೆಯ ಮುಂದುವರಿಕೆಗೆ ಸಂತಾನವನ್ನಾಗಲೀ, ಜಾತಿಯನ್ನಾಗಲೀ ಆಧರಿಸಲಿಲ್ಲ. ಹಾಗಂತಲೇ ಅಮೋಘಸಿದ್ಧನ ಜಾತಿಯವರೂ ಅಲ್ಲದ ಪುತ್ರರೂ ಅಲ್ಲದ ಮೂವರು ಜನ ಶಿಷ್ಯರು ಕಾಣಸಿಗುತ್ತಾರೆ.

ನಾಥದ ವಾಸನೆ ನಂತರದ ತಲೆಮಾರುಗಳಿಗೂ ಹರಿದು ಬಂದಿರುವಂತೆ ತೋರುತ್ತದೆ. ಅವಧುಸಿದ್ಧನ ಮೊದಲ ಮಗನ ಹೆಸರು ಸಾಲದೊಡ್ಡಸಿದ್ಧ ಎಂದು. ಅವನಿಗೆ ಐವರು ಮಕ್ಕಳಿದ್ದಾರೆ. ಅವರಲ್ಲಿ ಶಿವಾಪುರ

ಶಿವಲಿಂಗ ಎನ್ನುವವ ಒಬ್ಬ. ಈ ಶಿವಲಿಂಗ ತನ್ನ ಮಗನ ಹೆಸರನ್ನು ಲೋಕನಾಥ ಎಂದು ಇಟ್ಟಿದ್ದಾನೆ. ಅದೇ ತೆರನಾಗಿ ಬಿಳಿಯಾನಿಸಿದ್ಧನ ಐದು ಜನ ಮಕ್ಕಳಲ್ಲಿ ಮೂರನೆಯ ಮಗನ ಹೆಸರು ಪಂಚಪೂಜಾದ ಗೌಡ. ಇವನಿಗೆ ಎಂಟು ಜನ ಮಕ್ಕಳು. ಅವರಲ್ಲಿ ಮನಸೂಳಿಮಾನ ಒಡೆಯ ಒಬ್ಬ. ಅವನಿಗೆ ಎಂಟನೆಯ ಮಗನಾಗಿ ಜನಿಸಿದವನೇ ರಂಗನಾಥ. ಈತ ನೆರಸೋಬವಾಡಿಯಲ್ಲಿ ಹೋಗಿ ನೆಲೆಸಿದ್ದಾನೆ.

ಅವಧುಸಿದ್ಧನ ಎರಡನೆಯ ಮಗನಾದ ಅಥಣಿ ಮಳೆಗಾಲಸಿದ್ಧನಿಗೆ ಐವರು ಮಕ್ಕಳು. ಅವರಲ್ಲಿ ಸೊಡ್ಡಿಸಿದರಾಯನೆಂಬುವವ ಮೊದಲ ಮಗ. ಈ ಸಿದರಾಯನಿಗೆ ಹತ್ತೊಂಬತ್ತು ಜನ ಮಕ್ಕಳಿದ್ದಾರೆ. ಅವರಲ್ಲಿ ಇಬ್ಬರು 'ನಾಥ' ಎಂಬ ಉಪಾದಿ ಹೊಂದಿದವರಾಗಿದ್ದಾರೆ. ಒಬ್ಬ ಕೋಲಾರದ ರೇವಣನಾಥ, ಇನ್ನೊಬ್ಬ ಯಳ್ಳೀಗುತ್ತಿ ರಂಗನಾಥ. ಅದೇ ರೀತಿಯಾಗಿ ಅವಧುಸಿದ್ಧನ ಇನ್ನೊಬ್ಬ ಮಗನ ಹೆಸರು ಮೊರಬದ ಓಗಸಿದ್ಧ. ಇವನಿಗೆ ಹದಿನೈದು ಜನ ಮಕ್ಕಳು. ಅವರಲ್ಲಿ ತೇರದಾಳದ ಕರಣಸಿದ್ಧ ಒಬ್ಬ. ಈ ಕಾರಣಸಿದ್ಧನ ಹದಿನೈದು ಜನ ಮಕ್ಕಳಲ್ಲಿ ಒಬ್ಬನ ಹೆಸರು ಸಿದ್ಧನಾಥ ಸೋಮಲಿಂಗವೆಂದಿದೆ.

ಒಡೆಯ

ನಾಥದ ಇನ್ನೊಂದು ಅರ್ಥ ಒಡೆಯ ಎಂದು ಇದೆಯಾದರೂ ಅಮೋಘಸಿದ್ಧ ಪರಂಪರೆಯಲ್ಲಿ ಒಡೆಯ ಎನ್ನುವ ಪದಕ್ಕೆ ವಿಶೇಷವಾದ ಅರ್ಥ ವ್ಯಾಪ್ತಿಯಿದೆ ಎನ್ನುವುದುನ್ನು ಈ ಅಧ್ಯಾಯದ ಮೊದಲ ಭಾಗದಲ್ಲಿ ನೋಡಿದ್ದೇವೆ. ಶರಣ ಚಳುವಳಿ ಹಾಗೂ ನಂತರದ ದಿನಗಳಲ್ಲಿ ಕೆಳವರ್ಗದ ಜನರ ಮುಖಾಮುಖಿಯಲ್ಲಿ ಅದರಲ್ಲೂ ವಿಶೇಷವಾಗಿ ಕುರುಬ ಸಮುದಾಯದವರ ಅನುಸಂಧಾನದಲ್ಲಿ 'ಒಡೆಯರು' ಎನ್ನುವ ಪುರೋಹಿತ ವರ್ಗದ ಪರಿಕಲ್ಪನೆ ರೂಪ ತಾಳಿತು ಎನ್ನುವುದನ್ನು ಅಲ್ಲಿ ಗಮನಿಸಿದ್ದೇವೆ. 'ಸಿದ್ಧ' ಎನ್ನುವ ನಾಮಾಂತ್ಯವನ್ನು ಬಿಟ್ಟರೆ ಈ ಪರಂಪರೆಯವರಲ್ಲಿ ಹೇರಳವಾಗಿ ಬಳಕೆಯಾದ ಶಬ್ದವೆಂದರೆ 'ಒಡೆಯರು' ಎನ್ನುವುದು. ಲಕ್ಕಪ್ಪ ಒಡೆಯ, ಬರಮ ಒಡೆಯ, ಪಿಂಡೊಡೆಯ, ಮಾನೊಡೆಯ, ಪದಮ ಒಡೆಯ, ಅಮರ ಒಡೆಯ, ವೀರೊಡೆಯ, ಸೋಮ ಒಡೆಯ, ಸಿದ್ಧ ಒಡೆಯ, ರುದ್ರ ಒಡೆಯ, ಲಿಂಗ ಒಡೆಯ, ಭೂತಪ್ಪ ಒಡೆಯ, ವಾಲಗದ ಒಡೆಯ, ಕಂಬಳಿ ಒಡೆಯ ಮುಂತಾದ ಹೆಸರುಗಳು ಇಲ್ಲಿ ಹೇರಳವಾಗಿ ದೊರೆಯುತ್ತವೆ.

ರಾಯ

ಒಡೆಯದ ಇನ್ನೊಂದು ರೂಪ 'ರಾಯ'. ಈ ಒಡೆಯರನ್ನು ಜನರು ಇಂದಿಗೂ ಮಾರಾಯರು ಎಂದು ಕರೆಯುತ್ತಾರೆ. ಬೀರಪ್ಪ ಸಂಪ್ರದಾಯದ ಮಾಳಿಂಗರಾಯ, ತುಕ್ಕಪ್ಪರಾಯ, ಜಕ್ಕಪ್ಪರಾಯ ಕೇವಲ ರಾಯರಾದರೆ ಇವರು ಮಾರಾಯರೆಂದು ಗುರುತಿಸಿಕೊಳ್ಳುತ್ತಾರೆ. ಮಾರಾಯರೆಂದು ಗುರುತಿಸಿಕೊಳ್ಳುತ್ತಿದ್ದರೂ ಹೆಸರಿನ ಕೊನೆಯಲ್ಲಿ ಬಳಕೆಯಾದ ಕೇವಲ 'ರಾಯ'ವೇ ಉಳಿದಿದೆ ಸಿದರಾಯ, ಮಾದುರಾಯ, ಅಮರಾಯ, ಭೀಮರಾಯ, ಸೋಮರಾಯ ಮುಂತಾದ ಹೆಸರುಗಳು ಈ ಪರಂಪರೆಯಲ್ಲಿ ಕಂಡುಬರುತ್ತವೆ.

ಲಿಂಗ

ಈ ಪರಂಪರೆಯ ಸಿದ್ಧರ ಹೆಸರುಗಳೊಂದಿಗೆ ಬಳಕೆ ಯಾಗುವ ಲಿಂಗ ಉಪಾಧಿಯು ಕುರುಬ ಲಿಂಗಾಯಿತದ ಮುಖಾಮುಖಿಯಲ್ಲಿ ನಿಷ್ಪನ್ನವಾದುದೋ ಅಥವಾ ಕುರುಬಮೂಲದ್ದೋ ಸಂದಿಗ್ಧದ ವಿಷಯವಾಗಿದೆ. ಕೆಲವೊಂದು ಸಲ ಇವರು ಲಿಂಗಾಯಿತ ಮುಖಾಮುಖಿಯಲ್ಲಿ ತಮ್ಮ ದೈವವನ್ನು ಲಿಂಗಮಯಗೊಳಿಸಿದ ಕಾರಣ ಅಂದರೆ ಬೀರಪ್ಪನನ್ನು ಬೀರಲಿಂಗನನ್ನಾಗಿಸಿದ ಕಾರಣ 'ಲಿಂಗ' ಇವರಲ್ಲಿ ಬಳಕೆಗೆ ಬಂದಿರುವುದು ಅನ್ನಿಸುತ್ತದೆ. ಮತ್ತೆ ಕೆಲವೊಂದು ಸಲ ಕುರುಬ ಮೂಲದಿಂದಲೇ ಬಂದಿರುವಂಥದ್ದು ಅನ್ನಿಸುತ್ತದೆ. ಕುರುಬರಲ್ಲಿ ಲಿಂಗಾಯತರನ್ನು ಕುರಿತು ಒಂದು ಮಾತಿದೆ. "ನೀವೆಲ್ಲ (ಉಳಿದವರು) ಕಟ್ಟು ಲಿಂಗದವರಾದರೆ, ನಾವು (ಕುರುಬರು) ಹುಟ್ಟುಲಿಂಗದವರು" ಎಂದು. ಹುಟ್ಟುಲಿಂಗದವರು ಎನ್ನುವುದು ಶಿಶ್ನ ಪೂಜೆಯ ಕಡೆಗೆ ಬೆರಳು ಮಾಡುತ್ತಿದೆಯೇ ಎನ್ನುವುದು ಆಳವಾದ ಜನಾಂಗೀಯ ಅಧ್ಯಯನದ ಮೂಲಕ ನಿರ್ಣಯಿಸಲ್ಪಡ ಬೇಕಾಗಿದೆ.

ಈ ಪರಂಪರೆಯವರಲ್ಲಿ ಸೋಮಲಿಂಗ, ಬೋರಲಿಂಗ, ಜ್ಯೋತಿಲಿಂಗ, ಜಾಡಮಲಿಂಗ, ಮಹಾಲಿಂಗ, ಮಾದುಲಿಂಗ, ಗಿರಿಲಿಂಗ, ಶಂಭೋಲಿಂಗ, ಸಿದ್ಧಲಿಂಗ, ಶಂಕರಲಿಂಗ ಇತ್ಯಾದಿ ಹೆಸರುಗಳು ಇವೆ.

ದೇವ

ಲಿಂಗಾಯತ ಧಾರ್ಮಿಕ ಪರಿಭಾಷೆಯಲ್ಲಿ ಒಂದು ಮಠದ ಪಟ್ಟಕ್ಕೆಂದು ನೇಮಿಸಲ್ಪಟ್ಟವರನ್ನು ಮರಿದೇವರು, ದೇವರು ಎಂದು ಕರೆಯುವ ವಾಡಿಕೆಯಿದೆ. ಪುರೋಹಿತವರ್ಗದ ಈ ಪರಂಪರೆಯವರು ಲಿಂಗಾಯತದ ಮುಖಾಮುಖಿಯಲ್ಲಿ 'ದೇವರು' ಎಂಬ ಪದವನ್ನು ಸ್ವೀಕರಿಸಿರುವ ಸಾಧ್ಯತೆಯಿದೆ. ಸೋಮಯ್ಯ ದೇವರು ಎನ್ನುವ ಈ ಪರಂಪರೆಯ ಸಿದ್ಧನೊಬ್ಬನ ಹೆಸರು ಅಂಥ ಒಂದು ಸಾಧ್ಯತೆಯನ್ನು ನಿಜಗೊಳಿಸಿದೆ.

ಗೊಂಡ

ಹಾಲುಮತ ಪುರಾಣ ಕಥನದಲ್ಲಿ 'ಗೊಂಡ' ಹೆಸರು ಮೇಲಿಂದ ಮೇಲಿಂದ ಕೇಳಿಬರುವಂಥದ್ದಾಗಿದೆ. ಮುದ್ದಗೊಂಡ ಮುದ್ದವ್ವ ಎನ್ನುವವರನ್ನು ಹಾಲುಮತ ತನ್ನ ಮೂಲ ಪುರುಷರೆಂದು ಒಪ್ಪಿಕೊಂಡಿದೆ. ಅವರ ಮಗನ ಹೆಸರು ಆದಿಗೊಂಡ. ಈ ಆದಿಗೊಂಡನಿಗೆ ಐದು ಜನ ಗಂಡುಮಕ್ಕಳು. ಅವರ ಹೆಸರುಗಳು ಅಯೊಂಡ, ಪಾಯ್ಗೊಂಡ, ಅಮರಗೊಂಡ, ಜಾಯಗೊಂಡ ಹಾಗೂ ಪದ್ಮಗೊಂಡ ಎಂದಿವೆ. ಅಂತೆಯೇ ಅಮೋಘಸಿದ್ಧ ಪರಂಪರೆಯ ಸಿದ್ಧರಲ್ಲಿ ದೇವಗೊಂಡ, ಸಾಹೇಬಗೊಂಡ ಹಾಗೂ ಅಮರಗೊಂಡ ಎಂಬ ಹೆಸರುಗಳು ಇವೆ.

ಗೌಡರು

ಒಡೆಯರು ಎನ್ನುವ ಪದ ಅಮೋಘಸಿದ್ಧ ಪರಂಪರೆಯ ಧಾರ್ಮಿಕ ವಲಯಕ್ಕೆ ಸೇರಿದುದಾದರೆ 'ಗೌಡ' ಎನ್ನುವ ಪದ ಅವರ ರಾಜಕೀಯ ವಲಯಕ್ಕೆ ಸೇರಿದುದಾಗಿದೆ. ಸ್ವತಃ ಅಮೋಘಸಿದ್ಧನನ್ನು ನಾಡಗೌಡ

ಅಮೋಘಸಿದ್ಧ ಎಂದು ಕರೆಯುತ್ತಾರೆ ಎನ್ನುವುದುನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಆಚಾರಗೌಡ ಸೋಮಣ್ಣ, ಪಂಚಪೂಜಾದ ಗೌಡ ಹೆಸರುಗಳನ್ನು ಗಮನಿಸಬಹುದು.

೩.೨.೭ ಮಹಿಳೆಯರು

ಅಮೋಘಸಿದ್ಧ ಪರಂಪರೆಯವರು ಮೂಲತಃ ಪಶುಪಾಲಕ ವೃತ್ತಿಯವರು. ಕಿಲಾರಿಗಳು ಅವರ ಪಶುಪಾಲನೆಯ ಪ್ರಮುಖ ಆಸಕ್ತಿ. ಪಶುಪಾಲಕರಲ್ಲಿ ಸಾಮಾನ್ಯವಾಗಿ Antifeonale attitude ಇರುತ್ತದೆ. ಮೇಲಾಗಿ ಈ ಪರಂಪರೆಯ ಜನ ಪುತ್ರಮೋಹಿಗಳಾಗಿ ಬೆಳೆದುದನ್ನು ನೋಡಿದ್ದೇವೆ. ಹೀಗಾಗಿ ಈ ಪರಂಪರೆ ಪುರುಷ ಪ್ರಧಾನವಾಗಿಯೇ ನಮಗೆ ಗೋಚರಿಸುತ್ತದೆ. ಇವರ ಪುರುಷ ಪ್ರಧಾನ ಚರಿತ್ರೆಯ ಪ್ರಖರ ಬೆಳಕಿನಲ್ಲಿ ಮಹಿಳೆ ಮಸುಕಾಗಿ ಹೋಗಿದ್ದಾಳೆ. ಲಭ್ಯವಿರುವ ಮೌಖಿಕ ಹಾಗೂ ಲಿಖಿತ ಆಕರಗಳು ಮಹಿಳೆಯರ ಬಗೆಗೆ ದಿವ್ಯ ನಿರ್ಲಕ್ಷ್ಯ ವಹಿಸಿವೆ. ಅಂಥದ್ದರಲ್ಲಿಯೇ ನಮಗೆ ದೊರೆಯುವ ಸಣ್ಣಪುಟ್ಟ ವಿವರಗಳನ್ನು ಗಣನೆಗೆ ತೆಗೆದುಕೊಂಡು ಅವರ ವ್ಯಕ್ತಿತ್ವವನ್ನು ಗುರುತಿಸಿದರೆ ಅವರ ಅಗಾಧವಾದ ಜೀವಪರತೆ ನಮ್ಮ ಗಮನಕ್ಕೆ ಬರುತ್ತದೆ. ಅವರೆಲ್ಲ ಹೆಂಡತಿಯಾಗಿ, ಸೊಸೆಯಾಗಿ, ಮಗಳಾಗಿ, ತಂಗಿಯಾಗಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿಯೇ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿರುವುದು ತಿಳಿದುಬರುತ್ತದೆ.

೩.೨.೭.೧ ಪದ್ಮಾವತಿ : ಈ ಪರಂಪರೆಯ ಕಥನದಲ್ಲಿ ಪದ್ಮಾವತಿ ಲೌಕಿಕ ನೆಲೆಯ ಪ್ರಮುಖ ಮಹಿಳೆಯಾಗಿ ಗೋಚರಿಸುತ್ತಾಳೆ. ಪದುಮಜಾತದ ಪದುಮವ್ವ ಎಂದು ಕಥನಗೀತೆಗಳಲ್ಲಿ ವರ್ಣಿತಳಾಗಿದ್ದಾಳೆ. ಇವಳು ಏಳುಹಟ್ಟಿ ಗ್ರಾಮದ ನರೋಟೆ ನಗರಾಯನೆಂಬ ಗೌಡನ ಮಗಳು. ಏಳಹಟ್ಟಿ ಗ್ರಾಮ ಇಂದಿನ ಮಕಣಾಪುರ. ಅರಕೇರಿಯಿಂದ ಆರೇಳು ಕಿಲೋಮೀಟರ ದೂರದಲ್ಲಿರುವ ಗ್ರಾಮ. ಅಲ್ಲಿಯೇ ಸಮೀಪದ ಮುಮ್ಮೆಟ ಗುಡ್ಡದಲ್ಲಿ ವಾಸವಾಗಿದ್ದ ಅಮೋಘಸಿದ್ಧ ತನ್ನ ಸಾಧನೆಯಲ್ಲಿ ತೊಡಗಿಕೊಂಡು, ನಿತ್ಯರಾತ್ರಿ ನಗರಾಯನ ಮನೆಯ ಹಿಂದಿನ ತಿಪ್ಪೆಯಲ್ಲಿ ವಾಸವಾಗಿದ್ದ ಗುರು ಸೋಮಲಿಂಗನ ದರ್ಶನಕ್ಕೆ ಬರುತ್ತಿದ್ದ. ಪದ್ಮಾವತಿ ಕೂಡಾ ಸೋಮಲಿಂಗನನ್ನು ಪೂಜಿಸಲು ಬರುತ್ತಿರುತ್ತಾಳೆ. ಹೀಗೆ ರಾತ್ರಿ ಒಬ್ಬರನ್ನೊಬ್ಬರು ನೋಡಿದವರಾಗುತ್ತಾರೆ. ಪದ್ಮಾವತಿ ತನ್ನ ತಂದೆಯ ಎದುರಿಗೆ ತಾನು ಅಮೋಘಸಿದ್ಧನನ್ನು ಮದುವೆಯಾಗಲು ಬಯಸಿರುವುದಾಗಿ ತಿಳಿಸುತ್ತಾಳೆ.

ಅಮೋಘಸಿದ್ಧನಿಗೆ ಈ ವಿಷಯ ತಿಳಿಯುತ್ತಿದ್ದಂತೆ ಪದ್ಮಾವತಿಯ ದಿವ್ಯಗಳೂ ಪ್ರಾರಂಭವಾಗುತ್ತವೆ. ಮಾಯಗಾರನಾದ ಅಮೋಘಸಿದ್ಧನು ಮುಪ್ಪಾನ ಮುದಕನಾಗಿ ಕನ್ಯೆ ನೋಡಲು ಬರುತ್ತಾನೆ. ಹಾಗೆ ಬಂದವನ ವರ್ಣನೆ ಹೀಗಿದೆ:

> ನನ್ನಪ್ಪೊ ನನ ಮಾರಾಯ ಬಹುರೂಪ ತೊಡುವುತಾನಲ್ಲೊ
> ಹಾಗಲಹಣ್ಣನಾದಾನೇ ಮುಪ್ಪಾನ ಮುದುಕನಾದಾನೇ
> ಬಾಯಿಪಟ್ಟಿಗಟ್ಟ್ಯಾವೆ ತಲಿಯೇ ತೂಗಲ ಹಿಡಿದಾವೆ[೨೦]

ಇವನ ಜೋಗಿ ರೂಪವನ್ನು ನೋಡಿ ಬಣ್ಣದ ಡೇರೆಯಲ್ಲಿ ವಾಸಿಸುತ್ತಿದ್ದ ನರೋಟೆ ನಗರಾಯನು ತನ್ನ ಮಗಳನ್ನು ಕೊಡಲು ನಿರಾಕರಿಸುತ್ತಾನೆ. ಆಗ ಅಮೋಘಸಿದ್ಧನು ತನ್ನ ಸೇವಕನಾದ ಭೂತಾಳಸಿದ್ಧನನ್ನು ಕರೆದು ನಗರಾಯನಿಗೆ ತೊಂದರೆ ಕೊಡಿಸುತ್ತಾನೆ. ನಗರಾಯನನ್ನು ವಿಪತ್ತೊಂದರಿಂದ ಪಾರು ಮಾಡಿದ ಭಿಡೆಯಲ್ಲಿ ಪದ್ಮಾವತಿಯನ್ನು ಕೊಟ್ಟು ಮದುವೆ ಮಾಡಿಕೊಡುವಂತೆ ಮಾಡುತ್ತಾನೆ. ಪಂಥದಲ್ಲಿ ಗೆದ್ದನೇನೋ ನಿಜ, ಆದರೆ ಅವಳನ್ನು ಮದುವೆಯಾದ ರೀತಿ ಮಹಿಳೆಯನ್ನು ಅವಮಾನಿಸುವಂಥದ್ದಾಗಿದೆ. ಮದುವೆಯ ಸಂದರ್ಭದಲ್ಲಿ ಅವಳ ಬಲಬದಿಗೆ ಗಂಡನಾದ ತಾನು ಕುಳಿತುಕೊಳ್ಳದೆ ತನ್ನ ನೇಮದ ಬೆತ್ತದೊಂದಿಗೆ ಮದುವೆಯಾಗುವಂತೆ ನೋಡಿಕೊಳ್ಳುತ್ತಾನೆ. ಇದನ್ನೆಲ್ಲ ಸಹಿಸಿಕೊಂಡು ಗಂಡನ ಮನೆಗೆ ನಡೆಯಲು ಹೋದರೆ ಅಲ್ಲಿಯೂ ಅವಳಿಗೆ ಆಘಾತ ಕಾದಿರುತ್ತದೆ. ಹೆಂಡತಿ ಪದ್ಮಾವತಿಯನ್ನು ಅರಕೇರಿಯ ರಥದ (ವೃತದ?) ಮನೆಯಲ್ಲಿ ಇರಿಸಿ, ತಾನು ಮುಮ್ಮೆಟಗುಡ್ಡದಲ್ಲಿ ಸಾಧನೆ ಮಾಡುತ್ತ ಕುಳಿತುಕೊಳ್ಳುತ್ತಾನೆ. ಇದು ಮಹಿಳೆಯ ಕುರಿತಾದ ಉಪೇಕ್ಷೆಯೊ ನಿರಾಸಕ್ತಿಯೋ ತಿಳಿಯುವುದಿಲ್ಲ. ಗಂಡ ಒಂದು ಕಡೆ, ಹೆಂಡತಿ ಇನ್ನೊಂದು ಕಡೆ. ಹೀಗೆ ಅವರ ಸಂಸಾರ ಹಲವಾರು ವರ್ಷ ಸಾಗುತ್ತದೆ. ಇಡೀ ಭಕ್ತ ಸಮುದಾಯಕ್ಕೆ ಸಂತಾನ ಫಲ, ತೊಟ್ಟಿಲ ಭಾಗ್ಯ ಕಲ್ಪಿಸುವ ಅಮೋಘಸಿದ್ಧ ಪದ್ಮಾವತಿಗೆ ಆ ಭಾಗ್ಯ ಕೊಡದೇ ಹೋಗುತ್ತಾನೆ. ಒಂದಾದ ನಂತರ ಒಂದು ಪುಣ್ಯದ ಮಕ್ಕಳನ್ನು ತನ್ನ ಶಿಷ್ಯ ವರ್ಗದಲ್ಲಿ ಸೇರಿಸುತ್ತ ಹೋಗುತ್ತಾನೆಯೇ ಹೊರತು ಸ್ವಂತಕ್ಕೆ ಮಕ್ಕಳನ್ನು ಪಡೆಯುವುದಿಲ್ಲ. ಮಹಾಸಿದ್ಧ, ಮಲಕಾರಿಸಿದ್ಧ, ಮಂಗರಾಯ ಹೀಗೆ ಪುಣ್ಯದ ಮಕ್ಕಳ ಸಂಖ್ಯೆ ಬೆಳೆಯುತ್ತ ಹೊಗುತ್ತದೆಯೇ ಹೊರತು ಸ್ವಂತದ ಮಕ್ಕಳ ಸುಳಿವೇ ಇಲ್ಲ. ಸಿದ್ಧ ಸಾಧಕನೊಬ್ಬನಲ್ಲಿರುವ ಬಿಂದುನಾಶದ ಭೀತಿ ಇದಕ್ಕೆ ಕಾರಣವೆಂದು ಹೇಳಬಹುದಾದರೂ, ಹಾಗೊಂದು ವೇಳೆ ಆ ಭೀತಿ ಇದ್ದರೆ ಪದ್ಮಾವತಿಯನ್ನು ವಿವಾಹವಾಗುವ ಅವಶ್ಯಕತೆ ಏನಾದರೂ ಇತ್ತು ಎಂಬ ಪ್ರಶ್ನೆಗೆ ಉತ್ತರ ದೊರೆಯದೇ ಹೋಗುತ್ತದೆ.

ಮೊದಲ ಪುಣ್ಯದ ಮಗನಾದ ಮಾಸಿದ್ಧನ ಒತ್ತಾಯದ ಮೇರೆಗೆ ಪದ್ಮಾವತಿಗೆ ತೊಟ್ಟಿಲ ಭಾಗ್ಯ ಕಲ್ಪಿಸುತ್ತಾನೆ. ಆ ಕಾರಣವಾಗಿ ಪದ್ಮಾವತಿ ಐದು ಜನ ಮಕ್ಕಳನ್ನು ಪಡೆಯುವಂತಾಗುತ್ತದೆ. ಮಕ್ಕಳಲ್ಲಿ ತಂದೆ-ತಾಯಿಯನ್ನು ಬೆಸೆಯುವ ಶಕ್ತಿ ಇರುತ್ತದೆ ಎನ್ನುವುದು ಸಾಮಾನ್ಯ ಗ್ರಹಿಕೆ. ಆದರೆ ಪದ್ಮಾವತಿ ಅಮೋಘಸಿದ್ಧರ ಮಧ್ಯ ಅಂಥ ಅನ್ಯೋನ್ಯ ಸಂಬಂಧ ಸಂತಾನೋತ್ತರ ಸಂದರ್ಭದಲ್ಲಿ ನಿರ್ಮಾಣವಾದಂತೆ ತೋರುವುದಿಲ್ಲ. ಮಕ್ಕಳೆಲ್ಲ ಅರಕೇರಿಯಲ್ಲಿ ತಾಯಿ ಪದ್ಮಾವತಿಯ ಕಣ್ಣೆದುರಿನಲ್ಲಿ ಬೆಳೆದು ದೊಡ್ಡವರಾಗುತ್ತಾರೆ. ಪುಣ್ಯದ ಮಕ್ಕಳು ಹಾಗೂ ವರವಿನ ಮಕ್ಕಳು ಇಬ್ಬರನ್ನು ಸಂಭಾಳಿಸಿಕೊಂಡು ಹೋಗುವ ಸಂಪೂರ್ಣ ಜವಾಬ್ದಾರಿ ಪದ್ಮಾವತಿಯ ಮೇಲೆಯೇ ಬೀಳುತ್ತದೆ. ಮಕ್ಕಳೆಲ್ಲ ಅಂಗಳದಲ್ಲಿ ಆಡಿ ಬೆಳೆದು ದೊಡ್ಡವರಾಗಿ ಗರಡಿ ಮನೆಯಲ್ಲಿ ಅಂಗಸಾಧನೆ ಮಾಡಿ ದೇಶಸುತ್ತುವ ಹಾಗೇ ಗೌಡಕಿ ಗಳಿಸುವ ಹಂಬಲ ವ್ಯಕ್ತಪಡಿಸುವವರೆಗೆ ಸಕ್ರಿಯವಾಗಿ ಪಾಲ್ಗೊಂಡ ಪದ್ಮಾವತಿ ಮುಂದಿನ ಸಂದರ್ಭದಲ್ಲಿ ನಿಧಾನ ಮಸುಕಾಗುತ್ತ ಹೋಗುತ್ತಾಳೆ.

ಪದ್ಮಾಜಾತದ ಪದಮವ್ವ ಎಂದು ಕರೆಯಿಸಿಕೊಂಡ ಈ ಚೆಲುವೆ ತನ್ನ ಸೌಂದರ್ಯದ ಮೂಲಕ ಅಮೋಘಸಿದ್ಧನನ್ನು ಆಕರ್ಷಿಸದೆ ಹೋಗುತ್ತಾಳೆ. ಹಿಂದನ ಅರವುಟ್ಟ ತಿಳಿದಾಕಿ, ಮುಂದಿನ ಅರವುಟ್ಟ ತಿಳಿದಾಕಿ ಆಗಿದ್ದರೂ ತನ್ನಲ್ಲಿರುವ ಈ ಸಿದ್ಧಿಯ ಶಕ್ತಿಯನ್ನು ಎಲ್ಲಿಯೂ ಬಳಸಿಕೊಂಡಂತೆ ತೋರುವುದಿಲ್ಲ ಅಥವಾ ಹಾಗೆ ಬಳಸಿಕೊಳ್ಳುವ ಅವಕಾಶ ಅವಳಿಗೆ ದೊರೆಯಲೇ ಇಲ್ಲ ಎನಿಸುತ್ತದೆ. ಆದರೆ ಸಿದ್ಧನೊಬ್ಬನ ವಿಲಕ್ಷಣ ಮಾದರಿಯ ಉಪೇಕ್ಷೆ ನಿರಾಸಕ್ತಿಗಳ ಮಧ್ಯದಲ್ಲಿ ಅವಳು ಹತಾಶೆಗೊಳ್ಳದೆ ತನ್ನ ಪಾಲಿನ ತಾಯ್ತನದ ಕರ್ತವ್ಯವನ್ನು ಸಮರ್ಥವಾಗಿ ಪೂರೈಸಿದ್ದಾಳೆ.

೩.೨.೭.೨ ಕೊಂತೆವ್ವ : ಹೆಸರಿನ ಸಾಮ್ಯದ ಕಾರಣದಿಂದಾಗಿಯೋ ಏನೋ ಜಾನಪದ ಮುಗ್ಧ ಭಕ್ತ ಮನಸ್ಸು ಬಬಲಾದಿಯ ಕೊಂತೆವ್ವಳನ್ನು ಪುರಾಣಕತೆಯ ಕುಂತಿಯೊಂದಿಗೆ ತಳಕುಹಾಕಿದೆ. ಅಮೋಘಸಿದ್ಧನು ಏಳು ಯುಗಗಳವರೆಗೆ ಬೇರೆ ಬೇರೆ ಹೆಸರಿನಲ್ಲಿ ಕೈಲಾಸದಲ್ಲಿ ಶಿವನ ಸೇವೆ ಮಾಡಿ ಭೂಲೋಕಕ್ಕೆ ಅಮೋಘಸಿದ್ಧ ಎಂಬ ಹೆಸರಿನಿಂದ ಬಂದನೆಂದು ಕಲ್ಪಿಸಿಕೊಂಡಿರುವ ಮನಸ್ಸು ಅಮೋಘಸಿದ್ಧನು ಭೂಲೋಕದಲ್ಲಿ ಸಂಚಾರಗೈಯುತ್ತ ಮಂದಲಗಿರಿ, ದ್ರೋಣಗಿರಿ, ಶ್ರೀಶೈಲದಲ್ಲೆಲ್ಲಾ ತಿರುಗಾಡಿ ಉತ್ತರದ ಕಡೆಗೆ ಹೊರಟು ಹಸ್ತಿನಾಪುರಕ್ಕೆ ಬರುತ್ತಾನೆ ಎಂದು ಭಾವಿಸಿದೆ. ಅಮೋಘಸಿದ್ಧ ಹಸ್ತಿನಾಪುರಕ್ಕೆ ಬಂದಾಗ ಅಲ್ಲಿ ಪಾಂಡವರು ಯಜ್ಞ ನೆರವೇರಿಸುತ್ತಿದ್ದರು. ಅಮೋಘಸಿದ್ಧ ಬಂದ ವಿಷಯ ತಿಳಿದ ಪಾಂಡವರು ಕೃಷ್ಣ ಸಮೇತ ಅವನಲ್ಲಿಗೆ ಹೋಗಿ ಯಜ್ಞದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತಾರೆ. ಯಜ್ಞ ಮುಗಿದ ನಂತರ ಅಮೋಘಸಿದ್ಧ ಹೊರಟು ನಿಲ್ಲುತ್ತಾನೆ. ಆಗ ಪಾಂಡವರ ತಾಯಿ ಕುಂತಿ ನಿತ್ಯವೂ ಅರಮನೆಗೆ ಬಂದು ದರ್ಶನ ಕೊಡಬೇಕೆಂದು ಕೇಳಿಕೊಳ್ಳುತ್ತಾಳೆ. ಆಗ ತನಗೆ ನಿತ್ಯವೂ ಬರಲಾಗುವುದಿಲ್ಲ, ವಾರಕ್ಕೊಂದು ಸಲ ಬಂದು ಹೋಗುವೆ ಎಂದು ತಿಳಿಸುತ್ತಾನೆ. ಈ ಕಾರಣವಾಗಿ ಅವನನ್ನು ವಾರದ ಒಡೆಯ ಎಂದೂ ಕರೆಯುತ್ತಾರೆ. ಕೆಲ ದಿವಸಗಳ ನಂತರ ವಾರಕ್ಕೆ ಒಂದು ಸಲವೂ ಬರಲಾಗುವುದಿಲ್ಲ. ನಾನು ದಕ್ಷಿಣದ ಕಡೆಗೆ ಹೋಗಬೇಕಾಗಿದೆ ಎಂದಾಗ, ನಿಮ್ಮ ಸೇವೆ ಮಾಡಿ ತಾನಿನ್ನು ತೃಪ್ತಳಾಗಿಲ್ಲವೆಂದು ಕುಂತಿ ಹೇಳಿದಾಗ ನೀನು ಮುಂದಿನ ಜನ್ಮದಲ್ಲಿ ಬಬಲಾದಿಯಲ್ಲಿ ಕೊಂತೆವ್ವ ಎಂಬ ಹೆಸರಿನವಳಾಗಿ ಜನಿಸಲಿರುವೆ. ಆಗ ನಾನು ನಿನ್ನನ್ನು ಸೊಸೆಯನ್ನಾಗಿಸಿ ಕೊಳ್ಳುವೆ. ನನ್ನ ಸೇವೆಯ ಭಾಗ್ಯವನ್ನು ಹೀಗೆ ಕರುಣಿಸುವೆ ಎಂದು ಹೇಳಿದನು. ಅಂತೆಯೇ ಅವಳು ಬಬಲಾದಿಯ ಶಿವಗೊಂಡನ ಮಗಳಾಗಿ ಜನಿಸುತ್ತಾಳೆ. ಅಮೋಘಸಿದ್ಧ ತನ್ನ ಎರಡನೆಯ ಮಗ ಬಿಳಿಯಾನಿಸಿದ್ಧನಿಗೆ ಅವಳನ್ನು ತೆಗೆದುಕೊಂಡು ಸೊಸೆಯನ್ನಾಗಿಸಿಕೊಳ್ಳುತ್ತಾನೆ.

ಪುರಾಣ ಕಥನ ಏನೇ ಹೇಳಲಿ, ಲೌಕಿಕದಲ್ಲಿ ಕೊಂತೆವ್ವ ತುಂಬಾ ಜೀವ ಪರವಾಗಿ ನಡೆದುಕೊಂಡಿರುವುದಂತೂ ಸತ್ಯ. ಅವಳ ವಿಶಿಷ್ಟ ಗುಣವೆಂದರೆ ಅವಳ ನಿಷ್ಠುರ ಸ್ವಭಾವ ಹಾಗೂ ವ್ಯವಹಾರಿಕ ಮನೋಭಾವ. ಈ ಕಾರಣಕ್ಕಾಗಿ ಅವಳು ಅನೇಕ ರೀತಿಯ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಭೀವರಗಿಯಲ್ಲಿ ಅಪಾರ ಭೂಸಂಪತ್ತು ಹಾಗೂ ನಾಡಗೌಡಕಿಯನ್ನು ಗಳಿಸಿಕೊಂಡ ವರವಿನ ಮಕ್ಕಳು ಗೌಡಕಿಯನ್ನು ಯಾರು

ಮಾಡಬೇಕು ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯ ತಳೆಯುತ್ತಾರೆ. ಮನೆತನಕ್ಕೆ ಹಿರಿಯವನಾದ ಅವಧೂಸಿದ್ಧನ ಕೈಗೆ ಗೌಡಕಿ ಹೋಗಬೇಕೆಂದು ಒಂದು ವಾದವಿದ್ದರೆ, ಬಿಳಿಯಾನಿಸಿದ್ಧ ಬುದ್ಧಿವಂತನಾದ್ದರಿಂದ ಅವನ ಪಾಲಿಗೆ ಗೌಡಕಿ ಬರಬೇಕೆಂದು ಇನ್ನೊಂದು ವಾದವಿರುತ್ತದೆ. ಪಂಥವೊಡ್ಡಿ ಅದರಲ್ಲಿ ಯಾರು ಗೆಲ್ಲುತ್ತಾರೋ ಅವರೇ ಗೌಡಕಿ ಮಾಡಬೇಕೆಂದು ನಿರ್ಣಯಿಸಲಾಗುತ್ತದೆ. ಪಂಥದಲ್ಲಿ ಬಿಳಿಯಾನಿಸಿದ್ಧ ಗೆದ್ದು ಗೌಡಕಿ ಪಟ್ಟಕ್ಕೆ ಅರ್ಹನಾಗುತ್ತಾನೆ. ಆದರೆ ಲೌಕಿಕ ಪ್ರಜ್ಞೆಯ ಕೊಂತೆವ್ವ ಗಂಡನ ಈ ನಿಲುವು ಸರಿಯಲ್ಲವೆಂದು ವಾದಿಸುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆಯ ಅಮೋಘಸಿದ್ಧ ಪರಂಪರೆಯಲ್ಲಿ ಮೊಟ್ಟಮೊದಲ ಮಹಿಳಾ ಧ್ವನಿ ಇದು. ಇದನ್ನು ಬಿಳಿಯಾನಿಸಿದ್ಧ ಅರಗಿಸಿಕೊಳ್ಳದೆ ಹೋಗುತ್ತಾನೆ. ತನ್ನ ವಿರುದ್ಧವೇ ಬಂಡಾಯದ ಧ್ವನಿ ಎತ್ತಿದ ಮಡದಿ ಕೊಂತೆವ್ವಳನ್ನು ಗಡಿಪಾರು ಮಾಡುತ್ತಾನೆ. ದಾರಿ ಕಾಣದ ಕೊಂತೆವ್ವ ತವರು ಮನೆಗೆ ಬಂದರೆ ತಂದೆಯಾದ ಶಿವಗೊಂಡನು ಗಂಡ ಹೆಂಡಿರು ಸರಿಯಾಗಿದ್ದರೆ ಮಾತ್ರ ತವರು ಮನೆ, ಇಲ್ಲವಾದರೆ ಇಲ್ಲವೆಂದು ತವರು ಮನೆಯಲ್ಲಿ ಸೇರಿಸಿಕೊಳ್ಳುವುದಿಲ್ಲ. ಅತ್ತ ಗಂಡನ ಆಸರೆಯೂ ಇಲ್ಲದೆ ತವರು ಮನೆಯ ಬೆಂಬಲವೂ ಇಲ್ಲದೆ ಬಬಲಾದಿಯ ಹೊರವಲಯದ ಕಾತರಕಂಟಿಯಲ್ಲಿ ಗುಡಿಸಲು ಹಾಕಿಕೊಂಡು ಬದುಕು ನಡೆಯಿಸುತ್ತಾಳೆ.

ಅಮೋಘಸಿದ್ಧ ಪರಂಪರೆಯ ಮಹಿಳೆಯರಲ್ಲಿಯೇ ಕೊಂತೆವ್ವ ವಿಶೇಷ ಗೌರವಕ್ಕೆ ಪಾತ್ರಳಾದವಳು. ಈ ಪರಂಪರೆಯ ಯಾವ ಮಹಿಳೆಗೂ ದೊರೆಯದೆ ಇರುವ 'ಪಲ್ಲಕ್ಕಿ ಪದವಿ' ಕೊಂತೆವ್ವಳಿಗೆ ಇದೆ. ಪುರುಷ ಪ್ರಧಾನ ವ್ಯವಸ್ಥೆಯನ್ನು ಗಟ್ಟಿಯಾಗಿ ನಂಬಿದ ಅಮೊಘಸಿದ್ಧ ಪರಂಪರೆಯಲ್ಲಿ ಮಹಿಳೆಯೊಬ್ಬಳು ಪುರುಷನಿಗೆ ಸಮಾನವಾಗಿ ಪಲ್ಲಕ್ಕಿ ಪದವಿ ಪಡೆಯುವುದು ಸಾಮಾನ್ಯ ವಿಷಯವಲ್ಲ.

ಬಬಲಾದಿಯ ಹೊರವಲಯದಲ್ಲಿ ಸ್ಥಾಪಿತವಾಗಿರುವ ಅವಳ ಹೆಸರಿನ ಗುಡಿಯಲ್ಲಿ ಕಾಣಸಿಗುವ ಕೊಂತೆವ್ವಳ ಮೂರ್ತಿ ವಿಶಿಷ್ಟವಾದುದಾಗಿವೆ. ಇಲ್ಲಿರುವ ಕೊಂತೆವ್ವಳ ನಿಂತ ವಿಗ್ರಹದ ಕೈಯಲ್ಲಿ ಅಡುಗೆ ಮಾಡುವ ಹುಟ್ಟು ಇದೆ. ವಿಗ್ರಹದ ಈ ಭಂಗಿಗೂ ಅವಳ ಕುರಿತಾಗಿರುವ ಒಂದು ಪುರಾಣ ಕಥನಕ್ಕೂ ಸಂಬಂಧ ಕಲ್ಪಿಸಿ ನೋಡಲು ಸಾಧ್ಯ(ಮೊದಲ ಸಲ ಕ್ಷೇತ್ರಕಾರ್ಯಕ್ಕೆ ಹೋದಾಗ ಕಂಡ ಈ ವಿಗ್ರಹ ಎರಡನೆಯ ಸಲ ಹೋದಾಗ ಕಾಣಿಸಲಿಲ್ಲ).

ಅಮೋಘಸಿದ್ಧನ ಖ್ಯಾತಿ ನಾಡಿನಲ್ಲೆಲ್ಲಾ ಹಬ್ಬಲಾಗಿ ಅವನನ್ನು ಕಂಡುಬರಬೇಕೆಂದು ಸೊನ್ನಲಿಗೆ ಸಿದ್ಧರಾಮ ಮುಮ್ಮೆಟಗುಡ್ಡದ ಕಡೆಗೆ ಹನ್ನೆರಡು ಸಾವಿರ ಶರಣರೊಂದಿಗೆ ಹೊರಡುತ್ತಾನೆ. ದಾರಿ ಮಧ್ಯದಲ್ಲಿ ಬಬಲಾದಿಯ ಸೀಮೆಯ ಮೇಲೆ ಇವರೆಲ್ಲ ಹಾದು ಹೋಗುವುದನ್ನು ನೋಡಿದ ಕೊಂತೆವ್ವ ಅವರನ್ನೆಲ್ಲ ತನ್ನ ಗುಡಿಸಲಿಗೆ ಆಮಂತ್ರಿಸಿ ಬಾಯಾರಿಕೆ ತೀರಿಸಿಕೊಂಡು ಪ್ರಸಾದ ಮಾಡಿಕೊಂಡು ಹೋಗಬೇಕೆಂದು ವಿನಂತಿಸಿ ಕೊಳ್ಳುತ್ತಾಳೆ. ಹಾಳು ಗುಡಿಸಲಲ್ಲಿ ವಾಸ ಮಾಡುವ ನಿನಗೆ ಇಷ್ಟೆಲ್ಲ ಜನ ಶರಣರಿಗೆ ಪ್ರಸಾದ ಮಾಡಿ ಹಾಕುವುದು ಅಸಾಧ್ಯವೆಂದು ಸಿದ್ಧರಾಮ ಅವಳಿಗೆ ಹೇಳುತ್ತಾನೆ. ತನ್ನಲ್ಲಿದ್ದ ಐದು ಹಿಡಿ ಅಕ್ಕಿಯಿಂದ ಪ್ರಸಾದ ತಯಾರಿಸಿ

[illegible]

[illegible]

[illegible]

[illegible]

ಅವರಿಗೆಲ್ಲ ಉಣಬಡಿಸುತ್ತಾಳೆ. ದಿಗಿಲುಗೊಂಡ ಸಿದ್ಧರಾಮ ಯಾರು ನೀನು ಇಂಥ ಸಾಧನೆ ಮಾಡಿದವಳು ಎಂದು ಕೇಳುತ್ತಾನೆ. ನೀವು ಯಾರನ್ನು ನೋಡಲು ಈಗ ಹೊರಟ್ಟಿದ್ದೀರೋ ಆ ವ್ಯಕ್ತಿಯ ಸೊಸೆ ತಾನು ಎಂದು ಹೇಳುತ್ತಾಳೆ.

ಹನ್ನೆರಡನೆಯ ಶತಮಾನದ ಸಿದ್ಧರಾಮ ಹದಿನಾರನೆಯ ಶತಮಾನ ಕೊಂತೆವ್ವನನ್ನು ಭೆಟ್ಟಿಯಾದದ್ದು ಅಸಂಭವನೀಯವೆನ್ನುವುದು ಮೇಲುನೋಟಕ್ಕೆ ಗೋಚರಿಸುವಂಥದದು. ಆದರೆ ಇದನ್ನೊಂದು ರೂಪಕದ ಹಾಗೆ ನೋಡಿದರೆ, ಭೀವರಗಿಯ ಪುರುಷ ಪ್ರಧಾನ ನೆಲೆಯಿಂದ ಹೊರಗೆ ಬಂದು ಕೊಂತೆವ್ವ ಹೆಚ್ಚಿಗೇನನ್ನೂ ಸಂಗ್ರಹಿಸಿಕೊಳ್ಳದೆ ಅಂದಂದಿನದನ್ನು ಅಂದೇ ವಿತರಿಸಿಕೊಳ್ಳುವ ಸ್ವಭಾವದವಳಾಗಿದ್ದಳು ಎನ್ನುವ ಮಹತ್ವದ ಅಂಶ ತಿಳಿದುಬರುತ್ತದೆ. ಅಮೋಘಸಿದ್ಧ ಪರಂಪರೆಯ antifemale ನಿಲುವಿಗೆ ಒಂಟಿ ಧ್ವನಿಯ ಪ್ರತ್ಯುತ್ತರದಂತಿದೆ ಕೊಂತೆವ್ವನ ಬದುಕು.

೩.೨.೭.೩ ರೆಬಕವ್ವ : ರೆಬಕವ್ವಳ ಜನನ ಅಯಾಚಿತವಾದುದು. ಅಮೋಘಸಿದ್ಧನ ಪುಣ್ಯದ ಮಗನಾದ ಮಹಾಸಿದ್ಧನು ತನಗೆ ಬೆನ್ನುಭುಜದ ಹಾಗೆ ತಮ್ಮಂದಿರು ಬೇಕು ಎಂದು ಗುರು ಪಡದಪ್ಪನಲ್ಲಿ ಕೇಳಿಕೊಂಡಾಗ ಪದ್ಮಾವತಿಗೆ ನಾಲ್ಕು ಜನ ಗಂಡಸುಮಕ್ಕಳು ಹಾಗೂ ಒಬ್ಬ ಹೆಣ್ಣುಮಗಳನ್ನು ನೀಡುತ್ತಾನೆ. ಕೇಳಿದ್ದು ತಮ್ಮಂದಿರನ್ನು ಮಾತ್ರ. ಆದರೆ ತಮ್ಮಂದಿರ ಜೊತೆಗೆ ತಂಗಿಯೂ ಬರುತ್ತಾಳೆ. ಈ ಅರ್ಥದಲ್ಲಿ ಇಲ್ಲಿ ಹೆಣ್ಣು ಮಗುವಿನ ಜನನ ಅಯಾಚಿತವಾದುದು. ಹೀಗೆ ಹುಟ್ಟಿದ ನಾಲ್ವರು ಮಕ್ಕಳೇ ವರವಿನಮಕ್ಕಳು ಅನ್ನಿಸಿಕೊಳ್ಳುತ್ತಾರೆ. ಅವರೇ ಅವಧುಸಿದ್ಧ, ಬಿಳಿಯಾನಿಸಿದ್ಧ, ಸೋಮಣ್ಣ ಮುತ್ಯಾ ಹಾಗೂ ಕನ್ಯಮುತ್ಯಾ ಈ ನಾಲ್ಕು ಜನರ ನಂತರ ಜನಿಸಿದವಳೇ ರೆಬಕವ್ವ.

ಹೀಗೆ ಅಯಾಚಿತವಾಗಿ ಜನಿಸಿದ ರೆಬಕವ್ವ ತನ್ನ ಬದುಕಿನಲ್ಲಿ ಹಲವಾರು ಏರುಪೇರುಗಳನ್ನು ಕಾಣುತ್ತಾಳೆ. ಮನೆಯ ಹೆಣ್ಣುಮಗಳ ಮದುವೆ ಮಾಡಿಕೊಟ್ಟ ನಂತರವೇ ಅಣ್ಣ ತಮ್ಮಂದಿರು ಮದುವೆ ಮಾಡಿಕೊಳ್ಳುವುದು ವಾಡಿಕೆ. ಆದರೆ ಇಲ್ಲಿ ಹಾಗಾಗುವುದಿಲ್ಲ. ಮೊದಲ ನಾಲ್ಕು ಜನ ಗಂಡು ಮಕ್ಕಳ ಮದುವೆಯಾದ ನಂತರ ತಂಗಿಯ ಮದುವೆಯ ವಿಷಯ ಪ್ರಸ್ತಾಪಕ್ಕೆ ಬರುತ್ತದೆ. ಪದ್ಮಾವತಿಗೆ ಒಬ್ಬ ಸಹೋದರನಿದ್ದ. ಅವನ ಹೆಸರು ಹೊನ್ನಪ್ಪಗೌಡ. ಸಹೋದರ ಹೊನ್ನಪ್ಪನಿಗೆ ಮಗಳನ್ನು ಕೊಟ್ಟರೆ ತವರು ಮನೆಯ ಸಂಬಂಧ ಉಳಿಯುತ್ತದೆ ಎಂದು ಪದ್ಮಾವತಿ ಯೋಚಿಸಿದಂತಿದೆ. ಗಂಡ ಅಮೋಘಸಿದ್ಧನೂ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾನೆ. ಅಂದರೆ ರೆಬಕವ್ವಳ ಮದುವೆಯಾದದ್ದು ಸೋದರ ಮಾವ ಹೊನ್ನಪ್ಪನೊಂದಿಗೆ. ಮದುವೆಯಾಗಿ ರೆಬಕವ್ವ ಗಂಡನ ಮನೆ ಮಕಣಾಪುರಕ್ಕೆ ಹೋಗುತ್ತಾಳೆ. ಒಂದು ಸಲ ದೀಪಾವಳಿ ಹಬ್ಬಕ್ಕೆಂದು ರೆಬಕವ್ವಳನ್ನು ತವರು ಮನೆಗೆ ಕರೆದುಕೊಂಡು ಬರುತ್ತಾರೆ. ಹಬ್ಬದ ದಿವಸ ಅಣ್ಣಂದಿರಿಗೆ ರೆಬಕವ್ವ ಆರತಿ ಬೆಳಗುತ್ತಾಳೆ. ಹರ್ಷಿತರಾದ ಅಣ್ಣಂದಿರು ಏನು ಬೇಕು ಕೇಳು ಎನ್ನುತ್ತಾರೆ. ಅಷ್ಟೊತ್ತಿಗೆ ಅಣ್ಣಂದಿರು ಅಪಾರವಾದ ಭೂಸಂಪತ್ತನ್ನು ಗಳಿಸಿಕೊಂಡಿದ್ದರು. ನಗರಾಯನ ಶ್ರೀಮಂತಿಕೆ ಮೊದಲಿನಷ್ಟು ಇರಲಿಲ್ಲವೆಂದು ತೋರುತ್ತದೆ. ಹೀಗಾಗಿ

ಅವಳು ತನಗೆ 'ಹರಿಯಲಾರದ ಸೀರೆ' ಬೇಕು ಎಂದು ಹೇಳುತ್ತಾಳೆ. ಆಗ ಅಣ್ಣಂದಿರು ಅರಕೇರಿಯ ಗೌಡಕಿ ಹಾಗೂ ಆಸ್ತಿಯನ್ನು ತಂಗಿಯಾದ ರೆಬಕವ್ವಳಿಗೆ ಬಿಟ್ಟುಕೊಡುತ್ತಾರೆ.

ಇದಾದ ನಂತರ ಎಷ್ಟೋ ವರ್ಷಗಳು ಗತಿಸಿದ ಮೇಲೆ ಆಸ್ತಿ ಹಾಗೂ ಗೌಡಕಿಯ ವಿಷಯದಲ್ಲಿ ಅಮೋಘಸಿದ್ಧನ ಮೊಮ್ಮಕ್ಕಳು ಹಾಗೂ ರೆಬಕವ್ವಳ ನಡುವೆ ಮನಸ್ತಾಪ ಉಂಟಾದಂತೆ ತೋರುತ್ತದೆ. ಅಮೋಘಸಿದ್ಧನ ಕೊನೆಯ ಮಗ ಕನ್ನಮುತ್ತ್ಯಾನ ಮಗನಾದ ಬ್ರಹ್ಮ ಒಡೆಯನನ್ನು ಇನ್ನೂ ಮಕ್ಕಳಾಗಿರದ ರೆಬಕವ್ವಳ ಮನೆಯಲ್ಲಿ ಬಿಟ್ಟಿರುತ್ತಾರೆ. ಅಲ್ಲಿ ಬ್ರಹ್ಮ ಒಡೆಯ ಸೋದರ ಅತ್ತೆಯ ಮನೆಯ ಎಮ್ಮೆಗಳನ್ನು ಕಾಯಬೇಕಾಗುತ್ತದೆ. ಕಿಲಾರಿಗಳನ್ನು ಕಾಯುವ ಬ್ರಹ್ಮ ಒಡೆಯನಿಗೆ ಎಮ್ಮೆ ಕಾಯುವುದು ಕಿರಿಕಿರಿ ಅನ್ನಿಸುತ್ತದೆ. ಹೀಗಾಗಿ ತನ್ನ ಸಹೋದರನಾದ ಮಲಕಾರಿಸಿದ್ಧನಲ್ಲಿ ತನ್ನ ಕಷ್ಟವನ್ನು ಹೇಳಿಕೊಳ್ಳುತ್ತಾನೆ. ಉಗ್ರಸ್ವಭಾವದ ಮಲಕಾರಿಸಿದ್ಧ ತಾವು ಕೊಟ್ಟ ಆಸ್ತಿ ತಮಗೇ ಬರಬೇಕೆಂದು ಸೋದರತ್ತೆಯೊಂದಿಗೆ ಜಗಳ ತೆಗೆಯುತ್ತಾನೆ. ದಿಕ್ಕು ತೋಚದ ರೆಬಕವ್ವ ತೊರವಿಯ ರಾಜನಲ್ಲಿಗೆ ತಕರಾರು ಒಯ್ಯುತ್ತಾಳೆ. ರಾಜನು ಮಲಕಾರಿಸಿದ್ಧನ ವಾದವನ್ನು ಮನ್ನಿಸುತ್ತಾನೆ. ಹೀಗಾಗಿ ಆಸ್ತಿ ರೆಬಕವ್ವಳ ಕೈಯಿಂದ ತಪ್ಪಿಹೋಗುತ್ತದೆ. ನೆಲೆ ತಪ್ಪಿದಂತಾಗಿ ರೆಬಕವ್ವ ಅರಕೇರಿ ಬಿಟ್ಟು ಹೋಗಲು ನಿರ್ಣಯಿಸುತ್ತಾಳೆ. ಈ ಜಗಳವನ್ನು ನಾಡಿಗೇ ಗೌಡನೆಂದು ಪ್ರಸಿದ್ಧನಾದ ಅಮೋಘಸಿದ್ಧ ಮೂಕ ಪ್ರೇಕ್ಷಕನ ಹಾಗೆ ನೋಡಿದಂತಿದೆ. ಊರನ್ನು ತೊರೆದು ಹೊರಟ ಮಗಳಿಗೆ ತನ್ನಲ್ಲಿರುವ ನಾಲ್ಕಾರು ಕಿಲಾರಿಗಳನ್ನು ಕೊಟ್ಟು ಮೇಲ್ನಾಡಿಗೆ ಅಂದರೆ, ಮುಮ್ಮೆಟಗುಡ್ಡದಿಂದ ಪಶ್ಚಿಮ ದಿಕ್ಕಿಗೆ ಹೋಗಲು ತಿಳಿಸುತ್ತಾನೆ. ಗಂಡಹೆಂಡಿರು ಚಿಕ್ಕೋಡಿ ತಾಲೂಕಿನ ಸದಲಗಾ ಮಾರ್ಗವಾಗಿ ಕೆರಪನಹಟ್ಟಿಗೆ (ಕೆರೂರ, ಚಿಕ್ಕೋಡಿ ತಾಲೂಕು) ಬಂದು ನಿಲ್ಲಿತ್ತಾರೆ. ಕೆರಪನ ಹಟ್ಟಿಯಲ್ಲಿದ್ದಾಗಲೇ ಅವರಿಗೆ ಇಬ್ಬರು ಗಂಡು ಮಕ್ಕಳು ಜನಿಸುತ್ತಾರೆ. ಅವರ ಹೆಸರು ಅರ್ಯಾಣಸಿದ್ಧ ಹಾಗೂ ಮಲಕಾರಿಸಿದ್ಧ, ಅರ್ಯಾಣಸಿದ್ಧ ಹಾಗೂ ತಾಯಿ ರೆಬಕವ್ವಳ ಕುರಿತ ವಿಸ್ತೃತವಾದ ಚರ್ಚೆಯನ್ನು 'ಜಾತ್ರೆ, ಉತ್ಸವ, ನಂಬಿಕೆ, ಆಚರಣೆ' ಎನ್ನುವ ಮುಂದಿನ ಅಧ್ಯಾಯದಲ್ಲಿ ಮಾಡಲಾಗಿದೆ.

ರೆಬಕವ್ವಳ ಚರಿತ್ರೆಯನ್ನು ಗಮನಿಸಿದಾಗ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮನೆಯ ಹೆಣ್ಣುಮಗಳಿಗೆ ಒದಗುವ ದುಃಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

೩.೨.೭.೪ ಗುಬ್ಬೆವ್ವ : ರೆಬಕವ್ವ ಅಮೋಘಸಿದ್ಧನ ನಾಲ್ವರು ವರವಿನ ಮಕ್ಕಳಿಗೆ ತಂಗಿಯಾದರೆ ಗುಬ್ಬೆವ್ವ ಅಮೋಘಸಿದ್ಧನ ಇಪ್ಪತ್ತೊಂದು ಮಂದಿ ಮೊಮ್ಮಕ್ಕಳಿಗೆ ಏಕೈಕ ತಂಗಿ. ಇವಳು ಅಮೋಘಸಿದ್ಧನ ನಾಲ್ಕನೆಯ ಮಗ ಕನ್ನಮುತ್ತ್ಯಾನಿಗೆ ಕನಾಬಾಯಿಯಲ್ಲಿ ಜನಸಿದವಳು.

ಬೆಳೆದು ದೊಡ್ಡವಳಾದ ಮೇಲೆ ಗುಬ್ಬೆವ್ವಳನ್ನು ಸೋಲಾಪುರ ಜಿಲ್ಲಾ ಮಂಗಳವೇಡ ತಾಲೂಕಿನ ಶಿವಣಗಿ ಗ್ರಾಮದ ಮದಗೊಂಡ ಎನ್ನುವವನೊಂದಿಗೆ ವಿವಾಹ ಮಾಡಿಕೊಡಲಾಗುತ್ತದೆ. ಗಂಡನೊಂದಿಗೆ ಸುಖದ ಬಾಳನ್ನು ನಡೆಯಿಸುತ್ತಿರುವಂತೆ ಅಣ್ಣನಾದ ಮಲಕಾರಿಸಿದ್ಧ ಸುರಪುರದ ದೊರೆಯನ್ನು ಯದ್ಧದಲ್ಲಿ ಸೋಲಿಸಿದ

ವಿಷಯ ತಿಳಿಯುತ್ತದೆ. ಸಂತೋಷಗೊಂಡ ತಂಗಿ ಅಣ್ಣನಿಗೆ ಆಹೇರಿ ಮಾಡಬೇಕೆಂದು ಹತ್ತು ಬೆರಳಿಗೆ ಹತ್ತು ಹೊನ್ನುಂಗರ ತೆಗೆದುಕೊಂಡು ಗಂಡನೊಂದಿಗೆ ತವರು ಮನೆಗೆ ಬರುತ್ತಾಳೆ. ಯುದ್ಧದಲ್ಲಿ ಮಲಕಾರಿಸಿದ್ಧ ಕಿರುಬೆರಳನ್ನು ಕಳೆದುಕೊಂಡಿರುವ ವಿಷಯ ತಿಳಿದ ಗಂಡ ಮುದಗೊಂಡ ಹತ್ತು ಹೊನ್ನುಂಗುರ ತೆಗೆದುಕೊಂಡು ಹೊರಟ ಹೆಂಡತಿಗೆ ಹುಡುಗಾಟಿಕೆ ಮಾಡುತ್ತಾನೆ.

ಇದನ್ನು ತಿಳಿದ ಮಲಕಾರಿಸಿದ್ಧನು ಮುದಗೊಂಡನನ್ನು ಕಾಣುತ್ತಿದ್ದಂತೆಯೇ ಬೆನ್ನಲ್ಲಿ ಚಪ್ಪರಿಸಿದಂತೆ ಮಾಡಿ ಪ್ರಾಣ ತೆಗೆಯುತ್ತಾನೆ. ಸಡಗರ ಸಂಭ್ರಮದಲ್ಲಿ ಬಂದಿದ್ದ ತಂಗಿ ಗುಬ್ಬೆವ್ವಳಿಗೆ ಗಂಡನ ಸಾವು ಆಘಾತವನ್ನು ನೀಡುತ್ತದೆ. ತನ್ನ ಗಂಡನನ್ನು ಬದುಕಿಸಿ ಕೊಡು ಎಂದು ಅಣ್ಣ ಮಲಕಾರಿಸಿದ್ಧನಲ್ಲಿ ವಿನಂತಿಸುತ್ತಾಳೆ. ಮಲಕಾರಿ ಸಿದ್ಧ ನಿರಾಕರಿಸುತ್ತಾನೆ. ಸಿಟ್ಟಿಗೆದ್ದ ಗುಬ್ಬೆವ್ವ ಗಂಡನ ಶವದೊಂದಿಗೆ ತಾನೂ ಜೀವಂತ ಸಮಾಧಿ ತೆಗೆದುಕೊಳ್ಳುತ್ತಾಳೆ. ತನ್ನ ಹಠಮಾರಿತನದ ಪರಿಣಾಮ ತಿಳಿದ ಮಲಕಾರಿಸಿದ್ಧ ಪಶ್ಚಾತ್ತಾಪ ಪಡುತ್ತಾನೆ. ಆದರೆ ಕಾಲ ಮಿಂಚಿ ಹೋಗಿರುತ್ತದೆ. ಆ ಕಾರಣವಾಗಿಯೇ ತಂಗಿಯ ಮುತ್ತೈದಿತನದ ಸಂಕೇತವಾದ 'ದಂಡೆ'ಯನ್ನು ಹಣೆಗೆ ಕಟ್ಟಿಕೊಂಡು ಕುಣಿಯುತ್ತಾನೆ. ಇಂಥದೊಂದು ಘಟನೆಯ ಸ್ಮರಣೆ ಎನ್ನುವಂತೆ ಮಲಕಾರಿಸಿದ್ಧನ ಪೂಜಾರಿಗಳು ಇಂದಿಗೂ ಹಣೆಗೆ ದಂಡೆ ಕಟ್ಟಿ ಕುಣಿಯುವ ಆಚರಣೆಯನ್ನು ಮಾಡುತ್ತಾರೆ. ಈ ಆಚರಣೆ ಸೂರ್ಯ ಮುಳುಗಿದ ನಂತರ ಪ್ರಾರಂಭವಾಗಿ ಸೂರ್ಯೋದಯದ ಮುನ್ನವೇ ಮುಗಿದು ಹೋಗಬೇಕೆಂಬ ನಿಯಮವಿದೆ. ಹೀಗೆ ರಾತ್ರಿಯ ಕಾವಳದಲ್ಲಿಯೇ ಗೋಪ್ಯವಾಗಿ ಎನ್ನುವಂತೆ ನಡೆಯುವ ಈ ಆಚರಣೆಯನ್ನು ಗಮನಿಸಿದರೆ ತಪ್ಪನ್ನು ಸಾರ್ವಜನಿಕವಾಗಿ ಖುಲ್ಲಂ ಖುಲ್ಲಾ ಒಪ್ಪಿಕೊಳ್ಳಲಾರದ ಮಲಕಾರಿಸಿದ್ಧ ತನ್ನ ಅಹಂಕಾರ ಹಾಗೂ ತಂಗಿಯ ಗಂಡನನ್ನು ಕ್ಷಣಿಕ ಸಿಟ್ಟಿನ ಭರದಲ್ಲಿ ಕೊಂದುಬಿಟ್ಟೆನಲ್ಲ ಎನ್ನುವ ಪಶ್ಚಾತ್ತಾಪಗಳ ದ್ವಂದ್ವದಲ್ಲಿ ಸಿಲುಕಿರುವ ಸತ್ಯ ಗೋಚರಿಸುತ್ತದೆ.

೨.೧.೩.೫ ಸಂಗಾಬಾಯಿ : ಅಮೋಘಸಿದ್ಧ ಪರಂಪರೆಯ ಎರಡನೆಯ ತಲೆಮಾರಿನ ಇಪ್ಪತ್ತೊಂದು ಜನರಲ್ಲಿ ಹತ್ತೊಂಬತ್ತು ಜನರ ವಿವಾಹ ಸಂದರ್ಭದಲ್ಲಿ ಹೃದಯ ವಿದ್ರಾವಕ ಘಟನೆಯೊಂದು ನಡೆದಿದೆ. ಸೋಮಣ್ಣ ಮುತ್ಯಾನ ನಾಲ್ಕನೆಯ ಮಗನ ಹೆಸರು ಮಲಕಾರಿಸಿದ್ಧ ಎಂದಿದೆ. ಈ ಮಲಕಾರಿಸಿದ್ಧನಿಗೆ ಜತ್ತ ತಾಲೂಕಿನ ಹಳ್ಳಿ ಎಂಬ ಗ್ರಾಮದ ವಿಠಲಗೌಡನ ಮಗಳಾದ ಸಂಗಾಬಾಯಿಯನ್ನು ತಂದುಕೊಳ್ಳುವುದು ಎಂದು ನಿಶ್ಚಯವಾಗುತ್ತದೆ. ಮದುವೆಯ ಎಲ್ಲಾ ಸಿದ್ಧತೆಗಳು ಮುಗಿಯುತ್ತವೆ. ಮದುವೆಗೆ ಬಂದ ಜನ ಕೈಯಲ್ಲಿ ಅಕ್ಷತೆ ಹಿಡಿದು ನಿಂತಿದ್ದಾರೆ. ಮಲಕಾರಿಸಿದ್ಧನ ಎಡಬದಿಗೆ ಸಂಗಾಬಾಯಿ ಹಸೆಮಣೆಯ ಮೇಲೆ ಕೂಳಿತಿದ್ದಾಳೆ. ಆಗ ಮಲಕಾರಿಸಿದ್ಧನು ದಿಗಿಲುಗೊಂಡು ಇಲ್ಲಿ ಏನು ನಡೆದಿದೆ ಎಂದು ಕೇಳುತ್ತಾನೆ. ನಿನ್ನ ಮದುವೆ ನಡೆದಿದೆ ಎನ್ನುತ್ತಾಳೆ ತಾಯಿ. ಯಾರೊಂದಿಗೆ ಎಂದು ಕೇಳುತ್ತಾನೆ ಮಗ. ತನ್ನಂಥ ಹೆಣ್ಣಿನೊಂದಿಗೆ ಎಂದು ಹೇಳಿಬಿಡುತ್ತಾಳೆ ತಾಯಿ. ತಾಯಿಯಂಥವಳನ್ನು ನಾನು ಮದುವೆಯಾಗಲಾರೆ ಎಂದು ಹೇಳಿ ಮದುವೆ ಮಂಟಪದಿಂದ ಓಡಿಹೋಗುತ್ತಾನೆ. ಓಡೋಡುತ್ತ ಬಂದು ಸಮೀಪದ ಊರಾದ ಬೆಳ್ಳುಂಡಗಿಯ ಹಳ್ಳದ

ದಂಡೆಯ ಮೇಲೆ ಬಂದು ತಂಗುತ್ತಾನೆ. ಆಘಾತಗೊಂಡ ಸಂಗಾಬಾಯಿ ತನ್ನ ಗತಿ ಏನು ಎಂದು ಪದ್ಮಾವತಿಯನ್ನು ಪ್ರಶ್ನಿಸುತ್ತಾಳೆ. ನಿನ್ನ ತವರೂರಿಗೆ ಹೋಗು ಎಂದು ಪದ್ಮಾವತಿ ಸಲಹೆ ನೀಡುತ್ತಾಳೆ. ಸಂಗಾಬಾಯಿಗೆ ಈ ನಿರ್ಣಯ ಸರಿಯೆನ್ನಿಸುವುದಿಲ್ಲ. ಗಂಡನೆಂದು ನಿಶ್ಚಯಿಸಲ್ಪಟ್ಟ ಮಲಕಾರಿಸಿದ್ಧನನ್ನು ಹುಡುಕುತ್ತ ಹೊರಡುತ್ತಾಳೆ. ಹುಡುಕುತ್ತ ಮಲಕಾರಿಸಿದ್ಧ ನೆಲೆಸಿದ್ದ ಬೆಳ್ಳುಂಡಿಗೆಯ ಹಳ್ಳದ ದಂಡೆಗೆ ಬರುತ್ತಾಳೆ. ಜಗತ್ತಿನ ಹೆಣ್ಣುಗಳು ನನಗೆ ತಾಯಿ ಸಮಾನ, ನಾನು ನಿನ್ನೊಂದಿಗೆ ಸಂಸಾರ ಮಾಡಲಾರೆ ಎಂದು ಹೇಳುತ್ತಾನೆ. ನೀವೆ ಹೀಗೆ ಹೇಳಿದರೆ ನನ್ನ ಗತಿ ಏನು ಎಂದು ಸಂಗಾಬಾಯಿ ಪ್ರಶ್ನಿಸುತ್ತಾಳೆ. ನಾನೇನು ಹೇಳಲಾರೆ, ನಿನ್ನ ಮನಸ್ಸಿಗೆ ಬಂದಂತೆ ಮಾಡು ಎಂದು ಮಲಕಾರಿಸಿದ್ಧ ಹೇಳಿ ಬಿಡುತ್ತಾನೆ. ದಿಕ್ಕುತೋಚದಂತಾಗಿ ಸಂಗಾಬಾಯಿ ಅಲ್ಲಿಯೇ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ.

ಇಷ್ಟನ್ನು ಮಾತ್ರ ವಿವರಿಸುವ ಈ ಕಥನ ಹಲವಾರು ಪ್ರಶ್ನೆಗಳಿಗೆ ಉತ್ತರಿಸದೆ ಮೌನವಹಿಸುತ್ತದೆ. ಸಂಗಾಬಾಯಿಯನ್ನು ಮಲಕಾರಿಸಿದ್ಧನಿಗೆ ತಂದುಕೊಳ್ಳಬೇಕೆಂದು ನಿಶ್ಚಯ ಮಾಡಿದ್ದ ಮಲಕಾರಿಸಿದ್ಧನ ಅಪ್ಪ, ಚಿಕ್ಕಪ್ಪ, ದೊಡ್ಡಪ್ಪಗಳು ಹಾಗೂ ಅಜ್ಜ ಅಮೋಘಸಿದ್ಧ ಇಂಥ ಸಂದರ್ಭದಲ್ಲಿ ಯಾವುದೇ ರೀತಿಯ ಪರಿಹಾರ ಕಂಡುಕೊಳ್ಳಲು ಯಾಕೆ ಪ್ರಯತ್ನಿಸಲಿಲ್ಲ? ಹಸೆಮಣೆಯ ಮೇಲಿಂದ ಸಂಗಾಬಾಯಿಯೇ ವಿವಾಹವನ್ನು ತಿರಸ್ಕರಿಸಿ ಹೊರಟಿದ್ದರೆ ಇವರೆಲ್ಲ ಈಗಿನಂತೆ ಮೌನವಾಗಿರುತ್ತಿದ್ದರೆ? ಗಂಡನಿಂದ ದೂರವಿರುವುದು ಎಂಥ ಯಾನತೆಯ ಕೆಲಸವೆಂದು ಅನುಭವಿಸಿ ತಿಳಿದಿದ್ದ ಪದ್ಮಾವತಿ ಯಾಕೆ ಈ ಸಂದರ್ಭದಲ್ಲಿ ಈ ರೀತಿಯ ಉತ್ತರ ಕೊಟ್ಟಳು? ತನ್ನ ಆತ್ಮ ಸಾಧನೆಯೇ ಮುಖ್ಯವೆಂದು ಭಾವಿಸುವ ಮಲಕಾರಿಸಿದ್ಧ ಅನ್ಯ ಜೀವಿಯ ಆತ್ಮದ ಸಂಕಟ ಎಂಥದ್ದು ಎಂದು ಯಾಕೆ ಯೋಚಿಸಲಿಲ್ಲ? ಈ ಎಲ್ಲ ಪ್ರಶ್ನೆಗಳು antifemale attitudeನ ಅಮೋಘಸಿದ್ಧ ಪರಂಪರೆಯ ಜನರಿಗೆ ಅಪ್ರಸ್ತುತವೆನ್ನಿಸಿರಬೇಕು. ಒಟ್ಟಾರೆ ಸಂಗಾಬಾಯಿಯ ಜೀವ ಪುರುಷ ಅಹಂಕಾರದ, ಆತ್ಮೋದ್ಧಾರದ ಗುಂಗಿನ ಜನರ ಆರ್ಭಟದಲ್ಲಿ ಬಲಿಪಶುವಾಗಿ ಹೋಯಿತು.

೨.೨.೮ ನಡಹಟ್ಟಿಯವರು

ಕುರುಬರಲ್ಲಿ ನಡಹಟ್ಟಿ, ನಡಗೊಟ್ಟಿ, ನಡಗೋಷ್ಠಿ, ನರೊಟಿ. ನರಟ್ಟಿ ಎಂಬ ಹೆಸರಿನ ಬೆಡಗುಗಳು ಇವೆ.[೫೦] ಈ ಹೆಸರುಗಳನ್ನೇ ತಮ್ಮ ಮನೆತನದ ಹೆಸರನ್ನಾಗಿ ಇಟ್ಟುಕೊಳ್ಳುವ ಪದ್ಧತಿ ಕುರುಬರಲ್ಲಿದೆ. ವಿಷಮ ಬೆಡಗುಗಳಲ್ಲಿ ವಿವಾಹ ಸಂಬಂಧ ಬೆಳೆಯಿಸುವ ಕುರುಬರಿಗೆ ಬೆಡಗು ತುಂಬಾ ಮಹತ್ವದ ಸಂಗತಿಯಗಿದೆ. ನಡವಟ್ಟಲ>ನಡಪಟ್ಟಲ>ನಟಹಟ್ಟಿ>ನರಹಟ್ಟಿ>ನರೋಟಿ ಎಂದು ಆಗಿರುವ ಸಾಧ್ಯತೆಯಿದೆ. ಅಮೋಘಸಿದ್ಧ ತನ್ನ ವಿವಾಹ ಸಂಬಂಧ ಏರ್ಪಡಿಸುವುದು ಈ ನರೋಟಿ ಮನೆತನದವರೊಂದಿಗೆ. ಪದ್ಮಾವತಿಯ ತಂದೆಯ ಮನೆತನದ ಹೆಸರು ನರೋಟಿ ಎಂದಿದೆ. ನರೋಟಿಯವರೊಂದಿಗೆ ಅಮೋಘಸಿದ್ಧ ಬೀಗತನ ಮಾಡಿದ್ದರಿಂದ ಅವರನ್ನು ನಡತನದವರು ಎಂದು ಕರೆಯುತ್ತಾರೆ. ಈ ನರೋಟಿ ಅವರೊಂದಿಗೆ ಅಮೋಘಸಿದ್ಧ ಬೀಗತನ/ನಡೆತನ ಮಾಡಿದ್ದರಿಂದ ಇವರು ಅನ್ಯ ಬೆಡಗಿನ ಕುರುಬರಿಗಿಂತ ತಾವು ಶ್ರೇಷ್ಠ

[illegible]

ಎಂದು ನಂಬಿದ್ದಾರೆ. ಅಮೋಘಸಿದ್ಧ ಪರಂಪರೆಯಲ್ಲಿ ಜಾತಿ ಶ್ರೇಷ್ಠತೆಯ ಭ್ರಮೆ ತುಂಬಾ ಕೆಲಸ ಮಾಡುತ್ತಿದೆಯಾದ್ದರಿಂದ ಅವರು ತಮ್ಮ ಬೆಡಗು ಮಿಶ್ರಗೊಳ್ಳದ ಹಾಗೆ ನೋಡಿಕೊಳ್ಳುತ್ತಾರೆ. ಅಂದರೆ ಅಮೋಘಸಿದ್ಧನ ವಂಶದ ಇಂದಿನವರು ತಮ್ಮ ಬೆಡಗು ಕೋಟೆನ್ನವರ ಎಂದು ಹೇಳುತ್ತಾರೆ ಹಾಗೂ ಅವರ ವಂಶ ಎಷ್ಟೇ ಶಾಖೋಪಶಾಖೆಯಲ್ಲಿ ಬೆಳೆದರೂ ಕೋಟೆನ್ನವರ ಹೊರತು ಬೇರಾವ ಬೆಡಗು ತಮಗೆ ಅಂಟಿಕೊಳ್ಳದಹಾಗೆ ನೋಡಿಕೊಳ್ಳುತ್ತಾರೆ. ಎಲ್ಲ ಮಾರಾಯರು ಅಂದರೆ ಅಮೋಘಸಿದ್ಧನ ಇಂದಿನ ವಂಶಸ್ಥರು ಕೋಟೆನ್ನವರ ಎಂಬ ಒಂದೇ ಒಂದು ಬೆಡಗಿಗೆ ಸೇರಿದವರಾಗಿದ್ದಾರೆ. ಕೋಟೆನ್ನವರ ಎನ್ನುವ ಬೆಡಗು exclusively ಅಮ್ಮೋಗಿ ಒಡೆಯರ ಪಂಗಡದವರದ್ದು.

ಈ ಕೋಟೆನ್ನವರ ಬೆಡಗಿನವರು ನರೋಟೆ ಬೆಡಗಿನವರೊಂದಿಗೆ ಹೆಚ್ಚಿನ ವಿವರಣೆ ಕೇಳದೆ ವಿವಾಹ ಸಂಬಂಧ ಏರ್ಪಡಿಸುತ್ತಾರೆ. ಅನ್ಯ ಬೆಡಗಿನ ಕುರುಬರೊಂದಿಗೆ ವಿವಾಹ ಸಂಬಂಧ ಹೊಂದಿಸಿಕೊಳ್ಳಬೇಕೆಂದರೆ ಅವರು ಕಪ್ಪುಕಡಿ (ಮಾಂಸದ ಅಡಿಗಿ) ತಿನ್ನುತ್ತಾರೆಯೇ ಎಂದು ಕೇಳಿ, ತಿನ್ನುವುದಿಲ್ಲವೆಂದು ಖಚಿತಪಡಿಸಿಕೊಂಡ ನಂತರವೇ ಸಂಬಂಧ ಬೆಳೆಯಿಸುತ್ತಾರೆ. ಮಹಾರಾಷ್ಟ್ರದ ಸೋಳಂಕಿ ವಂಶದ ಅಡಿಯಲ್ಲಿ ಸುಮಾರು ನಲವತ್ತು ಬೆಡಗುಗಳನ್ನು ಗುರುತಿಸುತ್ತಾರೆ. ಅವುಗಳಲ್ಲಿ ನರೋಟಿ ಕೂಡ ಒಂದು. ಈ ನರೋಟಿ ಬೆಡಗಿನವರು ಸಾಮಾನ್ಯವಾಗಿ ಮಹಾರಾಷ್ಟ್ರ ಹಾಗೂ ಕರ್ನಾಟಕ ಗಡಿಭಾಗದಲ್ಲಿ ಕಾಣಸಿಗುತ್ತಾರೆ.

ಪದ್ಮಾವತಿಯ ತಂದೆ ನರೋಟಿ ಬೆಡಗಿನವನು. ನರೋಟಿ ನಗರಾಯ/ನಡಹಟ್ಟಿ ನಗರಾಯ ಎಂದು ಅವನನ್ನು ಕರೆಯುತ್ತಾರೆ. ನಗರಾಯ ಹಾಗೂ ಅಮೋಘಸಿದ್ಧನ ಮುಖಾಮುಖಿ ತುಂಬಾ ಕುತೂಹಲಕರ ವಾಗಿದೆ. ನಗರಾಯ ಏಳು ಹಳ್ಳಿಗಳ ಗೌಡಕಿ ಉಳ್ಳವನು. ಅಮೋಘಸಿದ್ಧ ಎಲ್ಲವನ್ನು ತೊರೆದು ಮುಮ್ಮೆಟಗುಡ್ಡದ ಕಲ್ಲುಹಾಸಿನ ಮೇಲೆ ವಾಸ ಮಾಡುವವ. ಹಗ್ಗಕೋಲುಗಳಿಲ್ಲದೆ ಕಂಬಳಿಯನ್ನು ತನ್ನ ನೆತ್ತಿಯ ಮೇಲೆ ನಿಲ್ಲಿಸಿಕೊಂಡಾತ. ಅಂಥವನು ಬಣ್ಣದ ಡೇರಜವಾಡೆಯಲ್ಲಿ ವಾಸಮಾಡುವ ನಗರಾಯ ನೊಂದಿಗೆ ಬೀಗತನ ಬೆಳೆಯಿಸಲು ಬಯಸುತ್ತಾನೆ. ನಗರಾಯನ ವಾಡೆಯಲ್ಲಿ ಮುತ್ತು ರತ್ನಗಳು ಹೇರಳ ವಾಗಿದ್ದವು. ಅವನದೇ ಆದ ಒಂಟೆಪಾಗ, ಆನೆಪಾಗಗಳನ್ನು ಹೊಂದಿದವನು. ಏಳೂನೂರು ಭಾಗ್ಯ (ಕುರಿಗಳ) ಒಡೆಯ ಆತ.[೫೨]

ಮೇಲಾಗಿ ಅಮೋಘಸಿದ್ಧ ಪದ್ಮಾವತಿಯನ್ನು ಮದುವೆಯಾಗಲು ಬಯಸಿದ್ದು, ತನ ಇಳಿವಯಸ್ಸಿನಲ್ಲಿ. ಅಂತಸ್ತಿನ ಅಂತರ ಹಾಗೂ ವಯಸ್ಸಿನ ಅಂತರದ ಕಾರಣದಿಂದ ನಗರಾಯ ತನ್ನ ಮಗಳನ್ನು ಅಮೋಘಸಿದ್ಧನಿಗೆ ಕೊಡಲು ನಿರಾಕರಿಸುತ್ತಾನೆ. ಆಗ ಅಮೋಘಸಿದ್ಧ ಹಲವಾರು ತಂತ್ರಗಳನ್ನು ಬಳಸಿ ನಗರಾಯನನ್ನು ಮಣಿಸುತ್ತಾನೆ. ಅಮೋಘಸಿದ್ಧನ ಸಿದ್ಧಾಟಿಕೆಯ ತಂತ್ರಗಳಿಗೆ ಹಣ್ಣುಗಾಯಿ ನೀರುಗಾಯಿ ಆದ ನಗರಾಯ ತನ್ನ ಜರದ ಸೆಲ್ಲೆಯನ್ನು ಹಾಸಿ ಅಮೋಘಸಿದ್ಧನ ಮುಂದೆ ಅಡ್ಡಬಿದ್ದು ಕಾಲಕಾಲಕ್ಕೆ ಅವನ ಕೈಯೊಳಗಿನ ಆಳಾಗಿ ಇರುವೆ ಹಾಗೂ ಮಗಳನ್ನು ಮದುವೆ ಮಾಡಿಕೊಡುವೆ ಎಂದು ಒಪ್ಪಿಕೊಳ್ಳುತ್ತಾನೆ. ಸಿದ್ಧಾಟಿಕೆಯ

ಜನರೆಂದು ಪ್ರಚಾರಪಡೆದ ಅಮೋಘಸಿದ್ಧನಂಥವರು ಸಮಾಜದ ಉಚ್ಚವರ್ಗದವರನ್ನು ಮಣಿಸುವ ಸಂಘರ್ಷ ಕಥನದ ರೂಪಕದ ಹಾಗೆ ಈ ಘಟನೆ ಬರುತ್ತದೆ. ಬಲ್ಲಿದನಾದ ನಗರಾಯ ಜೀವ ಪರವಾಗಿರಲಿಲ್ಲ ಎನ್ನುವುದಕ್ಕೆ ಒಂದು ಪ್ರಸಂಗ ನಡೆದಿದೆ. ನಗರಾಯನ ದೇಹದ ಸಂದುಸಂದುಗಳಲ್ಲಿ ಬೇನೆ ಆವರಿಸಿಕೊಂಡಿದೆ. ಅದು ಯಾವುದೇ ಮದ್ದಿಗೆ ಮಣಿಯದಿದ್ದಾಗ ಜಡೆಯ ಕಂದನನ್ನು ತನ್ನ ಮನೆದೇವರಿಗೆ ಬಲಿಕೊಡುತ್ತಾನೆ. ಹಳಬರ ಬಾಲಿಯ ಜಡೆಯ ಕಂದನನ್ನು ಕೊಂದ ವಿಷಯ ಬಯಲಿಗೆ ಬಂದು ಸಾಮಾಜಿಕವಾದ ಅವಮಾನವನ್ನು ಅನುಭವಿಸುತ್ತಾನೆ. ಇಂಥ ನಗರಾಯನ ಮೇಲಿನ ಕೋಪದ ಕಾರಣವಾಗಿಯೇ ಅವನ ಮಗಳನ್ನು ಮದುವೆಯಾಗುವ ಸಂದರ್ಭದಲ್ಲಿ ತಾನು ಕೂಡದೆ ತನ್ನ ಬೆತ್ತವನ್ನು ಕಳುಹಿಸಿರಬಹುದು ಎಂದೂ ತರ್ಕ ಮಾಡಲು ಸಾಧ್ಯವಿದೆ.

೩.೨.೯ ಕೊಟ್ಟ ಕಂಬಳಿಯವರು

ಅಮೋಘಸಿದ್ಧ ಪರಂಪರೆಯಲ್ಲಿ ಒಡೆಯರಾದವರ ಗಂಡು ಮಕ್ಕಳಿಗೆ ತಮ್ಮ ಗುಡಿಯ ಧಾರ್ಮಿಕ ಆಚರಣೆ ಹಾಗೂ ಆಸ್ತಿಯ ವಹಿವಾಟಿನ ಹಕ್ಕು ಬರುತ್ತದೆ. ಹೀಗಾಗಿ ಅವರು ಗಂಡು ಸಂತಾನ ಫಲಾಪೇಕ್ಷಿಗಳಾಗಿರುತ್ತಾರೆ. ಗುಡಿಯೊಂದರ ಅಧಿಕಾರ ಹೊಂದಿದ ಒಡೆಯನೊಬ್ಬನಿಗೆ ಆಕಸ್ಮಾತ್ ಗಂಡು ಸಂತಾನವಿಲ್ಲದೆ ಹೋದರೆ ಅದರ ಅಧಿಕಾರ ಯಾರಿಗೆ ಹೋಗುತ್ತದೆ ಎನ್ನುವ ಪ್ರಶ್ನೆ ಕಾಡುವುದು ಸಹಜ. ಅಂಥ ಸಂದರ್ಭದಲ್ಲಿ ಒಡೆಯರ ಸಹೋದರನ ಮಕ್ಕಳಿಗೆ ಆ ಅಧಿಕಾರ ಹೋಗುವುದು ಸಾಮಾನ್ಯ. ಆದರೆ ಆ ಒಡೆಯನಿಗೆ ಸಹೋದರ ಸಂಬಂಧಿಯೂ ಇರದೆ ಕೇವಲ ಹೆಣ್ಣು ಸಂತಾನವಿದ್ದ ಪಕ್ಷದಲ್ಲಿ ಆ ಹೆಣ್ಣುಮಗಳ ಗಂಡುಮಗುವಿಗೆ ಗುಡಿಯ ಅಧಿಕಾರವನ್ನು ನೀಡಲಾಗುತ್ತದೆ.

ಒಡೆಯರ ಮನೆಯ ಹೆಣ್ಣುಮಗಳು ಮದುವೆಯಾಗುವ ಮೂಲಕ ತನ್ನ ತಂದೆಯ ಕೋಟೆನ್ನವರ ಬೆಡಗನ್ನು ಕಳಚಿಕೊಂಡು ಗಂಡನ ಮನೆತನದ ಬೆಡಗನ್ನು ಪಡೆದಿರುತ್ತಾಳೆ. ಇಂಥವಳ ಮಗನಿಗೆ ಅಧಿಕಾರ ಹಸ್ತಾಂತರಿಸುವಾಗ ಅವನಿಗೆ ಒಂದು ಹೋಮದ ಕಂಬಳಿಯನ್ನು ಕೊಡುತ್ತಾರೆ. ಆಗ ಆ ಹುಡುಗ ಒಡೆಯ ಎಂದು ಕರೆಯಿಸಿಕೊಳ್ಳುತ್ತಾನಾದರೂ ಅವನಿಗೆ ಒಡೆಯರ ಕೋಟೆನ್ನವರ ಬೆಡಗು ಬರುವುದಿಲ್ಲ. ಅವನು ಬಾಹ್ಯದಲ್ಲಿ ಒಡೆಯನಾಗಬಹುದೇ ಹೊರತು ಒಡೆಯರ ಬೆಡಗು ಪಡೆಯಲಾರ. ಹೀಗೆ ಒಡೆಯರಾಗಿದ್ದು ಕೊಂಡು ಕೋಟೆನ್ನವರ ಬೆಡಗು ಪಡೆಯಲಾರದವರನ್ನು ಕೊಟ್ಟಕಂಬಳಿಯವರು ಎಂದು ಕರೆಯುತ್ತಾರೆ.

೩.೨.೧೦ ಭೂತಾಳಸಿದ್ಧ

ಅಮೋಘಸಿದ್ಧ ಪರಂಪರೆಯಲ್ಲಿ ಅಮೋಘಸಿದ್ಧನ ನಂತರದ ಸ್ಥಾನ ಭೂತಾಳಸಿದ್ಧನಿಗೆ ಇದೆ. ಅಮೋಘಸಿದ್ಧ ಕೈಲಾಸದಿಂದ ಅವತರಿಸಿ ಬಂದ ಎಂದು ಕಲ್ಪಿಸಿಕೊಂಡಂತೆ ಭೂತಾಳಸಿದ್ಧನೂ ಕೈಲಾಸದಿಂದಲೇ ಇಳಿದು ಬಂದ ಎಂದು ಭಾವಿಸಲಾಗಿದೆ. ಕೈಲಾಸದಲ್ಲಿ ಅಮೋಘಸಿದ್ಧನು ಶಿವನ ಸೇವೆಯಲ್ಲಿ ನಿರತನಾಗಿದ್ದರೆ ಭೂತಾಳಸಿದ್ಧ ಕೈಲಾಸದ ಕಾಮಧೇನು ಕಲ್ಪವೃಕ್ಷಗಳ ಕಾವಲು ಕೆಲಸದಲ್ಲಿ ತೊಡಗಿದ್ದಾನೆ. ಒಂದು ಸಂದರ್ಭದಲ್ಲಿ

[illegible]

ಪಾರ್ವತಿ ಅಮೋಘಸಿದ್ಧನನ್ನು ಸತ್ವ ಪರೀಕ್ಷೆಗೆ ಒಡ್ಡಲು ಭೂತಾಳಸಿದ್ಧನನ್ನು ಬಳಸಿಕೊಂಡಿದ್ದಾಳೆ. ಮಹಾಬಲಶಾಲಿಯಾದ ಭೂತಾಳಸಿದ್ಧ ವಜ್ರಕಾಯದ ಅಮೋಘಸಿದ್ಧನನ್ನು ಪೀಡಿಸಿ ಸೋಲಿಸುವಲ್ಲಿ ವಿಫಲನಾಗುತ್ತಾನೆ. ತನ್ನ ತಪ್ಪಿನ ಅರಿವನ್ನು ಮಾಡಿಕೊಂಡು ಅಮೋಘಸಿದ್ಧನ ಸೇವಕನಾಗಿರಲು ನಿರ್ಧರಿಸುತ್ತಾನೆ.

ಇಂಥ ಪುರಾಣೀಕೃತ ಕಥನವನ್ನು ಪ್ರಾರಂಭಿಕ ಹಂತದಲ್ಲಿ ಯಾತಾಳಿ ವಿದ್ಯೆಯ ಭೂತಾಳಸಿದ್ಧ ಹಾಗೂ ಸಿದ್ಧಾಟಿಕೆಯ ಅಮೋಘಸಿದ್ಧನ ಮಧ್ಯೆ ಸಂಘರ್ಷ ಸಂಭವಿಸಿರಬಹುದಾದುದನ್ನು ಸೂಚಿಸಲು ಹೆಣೆದ ಹಾಗಿದೆ. ಪ್ರಾರಂಭಿಕ ಸಂಘರ್ಷದ ನಂತರ ಭೂತಾಳಸಿದ್ಧ ತನ್ನ ಸೋಲನ್ನು ಒಪ್ಪಿಕೊಂಡು ಅಮೋಘಸಿದ್ಧನ ಸೇವಕನಾಗಿ ಇರಲು ನಿರ್ಧರಿಸಿರುವುದನ್ನು ಇಲ್ಲಿ ಕಾಣಬಹುದು. ಸೇವಕನಾಗಿ ಬಂದ ಭೂತಾಳಸಿದ್ಧ ಅಮೋಘಸಿದ್ಧನ ಎರಡು ಮೂರು ತಲೆಮಾರಿನ ಸಿದ್ಧರ ಯೋಜನೆಗಳನ್ನು ಕಾರ್ಯಗತಗೊಳಿಸುವ ಮೂಲಕ ಪ್ರಧಾನಿ ಭೂತಾಳಸಿದ್ಧ ಎಂದು ಖ್ಯಾತನಾಗಿದ್ದಾನೆ.

ಅಮೋಘಸಿದ್ಧನು ನರೋಟಿ ನಗರಾಯನ ಶ್ರೀಮಂತಿಕೆಯ ದರ್ಪವನ್ನು ಮುರಿಯಲು ಭೂತಾಳಸಿದ್ಧನನ್ನು ಬಳಸಿಕೊಂಡಿದ್ದಾನೆ. ವನವಾಸಿಯಾಗಿ ಸದಾಸಂಚಾರಿಯಾದ ಜೋಗಿಯ ಹಾಗೆ ವ್ಯವರಿಸುವ ಅಮೋಘಸಿದ್ಧನಿಗೆ ನಗರಾಯ ತನ್ನ ಮಗಳನ್ನು ಕೊಡಲು ನಿರಾಕರಿಸಿದಾಗ, ಅವನನ್ನು ದಂಡಿಸಲು ಭೂತಾಳಸಿದ್ಧನನ್ನು ನೇಮಿಸುತ್ತಾನೆ. ಯಜಮಾನನ ಆಜ್ಞೆಯಂತೆ ಭೂತಾಳಸಿದ್ಧ ನಗರಾಯನಿಗೆ ತನ್ನ ಟೊಣಪಿಯಿಂದ ಥಳಿಸಿ, ಹಗ್ಗದಿಂದ ಹೆಡಮುರಿ ಕಟ್ಟಿ ಕೂಡಿಹಾಕಿ ಸಂದು ಸಂದುಗಳಲ್ಲಿ ಬೇನೆ ಉಂಟಾಗುವಂತೆ ಮಾಡುತ್ತಾನೆ.

ದರ್ಪ ಮರ್ದನ ಮಾಡಿಸಿಕೊಂಡ ನಗರಾಯ ತನ್ನ ಮಗಳು ಪದ್ಮಾವತಿಯನ್ನು ಅಮೋಘಸಿದ್ಧನಿಗೆ ಕೊಡಲು ಒಪ್ಪಿಕೊಳ್ಳುತ್ತಾನೆ. ನಗರಾಯನ ಏಳಹಟ್ಟಿ ಗ್ರಾಮ(ಇಂದಿನ ಮಕಣಾಪುರ)ಕ್ಕೆ ಮದುವೆ ದಿಬ್ಬಣದಲ್ಲಿ ಭೂತಾಳಸಿದ್ಧನು ಬಾಳೇದ ಖಂಡರಾಯ ಹಾಗೂ ಮಣೂರ ಎಲ್ಲಮ್ಮ ಇವರೊಂದಿಗೆ ಹೋಗುತ್ತಾನೆ. ಮೂರೇ ಜನ ಬೀಗರು ಬಂದದ್ದನ್ನು ನೋಡಿದ ನಗರಾಯನ ಹೆಂಡತಿ, ಇಷ್ಟೇ ಜನರೇ ಎಂದು ತುಚ್ಛವಾಗಿ ನೋಡುತ್ತಾಳೆ. ಬಾಳೇದಖಂಡರಾಯ ಏಳು ಕೋಟಿ ಏಳು ಕೋಟಿ ಎಂದು ಉಗ್ಗಡಿಸಿದಾಗ ಏಳು ಕೋಟಿ ಜನರ ದಿಬ್ಬಣ ತಯಾರಾಗುತ್ತದೆ. ಮಣೂರ ಎಲ್ಲಮ್ಮ ಉಧೋ ಉಧೋ ಎನ್ನಲು ಆ ಎಲ್ಲ ಜನರನ್ನು ಸಾಗಿಸುವ ಎತ್ತಿನ ಚಕ್ಕಡಿಗಳೂ ಸಿದ್ಧವಾಗುತ್ತವೆ. ಬೀಗತಿ ಇದನ್ನೆಲ್ಲ ನೋಡಿ ದಿಗಿಲುಗೊಳ್ಳುತ್ತಾಳೆ. ತನ್ನ ತಪ್ಪಿನ ಅರಿವು ಅವಳಿಗಾಗುತ್ತದೆ. ಅವರಲ್ಲಿ ಕ್ಷಮೆಯಾಚಿಸುತ್ತಾಳೆ.

ಭೂತಾಳಸಿದ್ಧನ ಪೂರ್ವಾಪರದ ಬಗೆಗೆ ಏನೂ ಮಾಹಿತಿಯಿಲ್ಲ. ಕಥನ ಕಾವ್ಯವೊಂದರಲ್ಲಿ ಅವನನ್ನು ರಾಮಚಂದರ ಭೂತಾಳಿ ಎಂದು ಕರೆಯಲಾಗಿದೆ.

ಶೀವನೇ ನಮ್ಮಯ ದೇವರ ಬಂದಾನ ಘೇ
ಸ್ವಾಮಿ ನಮ್ಮಯ ದೇವರ ಬಂದಾನ ಘೇ

[illegible]

ಹೇ ಭೂತಾಳಿ ಅಂದರ ಹೆಂಥ ಭೂತಾಳಿಸಿದ್ಧಾನೋ
ರಾಣೆರಕ್ಕಸಿ ಮಗನ್ಯಾನೋ ರಾಮಚಂದರ ಭೂತಾಳಿ[೫೩]

ಎನ್ನುವ ಈ ಸಾಲುಗಳು ಭೂತಾಳಸಿದ್ಧನು ನಿಮ್ನ ಸಮುದಾಯಕ್ಕೆ ಸೇರಿದವನು ಎಂಬುದನ್ನು ಸೂಚಿಸುತ್ತವೆ.

ಭೂತಾಳಸಿದ್ಧ ಕೆಳವರ್ಗದ ಜನರ ಅಪಾರ ಹಸಿವಿನ ಹಾಗೂ ನಿರಂತರ ದಾಹದ ಸಂಕೇತವಾಗಿದ್ದಾನೆ. ಯಜಮಾನನ ಮದುವೆಗೆಂದು ಮಕಣಾಪುರಕ್ಕೆ ಹೋದ ಭೂತಾಳಿಸಿದ್ಧ ಮದುವೆಯ ಊಟ ಮಾಡಿದ ವರ್ಣನೆ ಇದೆ. ಏಳು ಖಂಡಗ ಅನಾಜದ ಅಡಿಗೆಯನ್ನು ಏಳು ತುತ್ತಿನಲ್ಲಿ ತಿನ್ನುತ್ತಾನೆ. ಮೂರು ಖಂಡಗ ಅನಾಜದ ಅಡಿಗೆಯನ್ನು ಮೂರೇ ತುತ್ತಿನಲ್ಲಿ ತಿಂದು ಮುಗಿಸುತ್ತಾನೆ. ಏಳು ಬಾವಿಗಳ ನೀರನ್ನು ಏಳೇ ಗುಟುಕಿನಲ್ಲಿ ಕುಡಿದು ಖಾಲಿ ಮಾಡುತ್ತಾನೆ. ಇಂಥ ಪುರಾಣೀಕೃತ ಕಥನ ಭೂತಾಳಸಿದ್ಧ ಪ್ರತಿನಿಧಿಸುವ ಕೆಳವರ್ಗದವರ ಹಸಿವಿನ ಅಪಾರತೆಯನ್ನು ಬಿಂಬಿಸುತ್ತದೆ.

ಭೂತಾಳಸಿದ್ಧ ಅಪರಿಮಿತ ಕತೃತ್ವಶಕ್ತಿಯ ಸಂಕೇತ ಕೂಡಾ ಹೌದು. ತನಗೆ ವಹಿಸಿಕೊಟ್ಟ ಕೆಲಸವನ್ನು ಚಿಟಿಗೆ ಹೊಡೆಯುವಷ್ಟರಲ್ಲಿ ಮುಗಿಸಿಬಿಡಬಲ್ಲ. ನಾಲ್ಕು ಜನ ವರವಿನ ಮಕ್ಕಳಿಗೆ ಅಂಗಳದ ಆಟ ಬೇಸರವೆನ್ನಿಸಿ ಗರಡಿ ಮನೆಯಲ್ಲಿ ಅಂಗಸಾಧನೆ ಮಾಡಲು ಬಯಸಿದಾಗ, ತಮ್ಮಂದಿರ ಜವಾಬ್ದಾರಿಯನ್ನು ಹೊತ್ತಿದ್ದ ಮಾಸಿದ್ದಪ್ಪ ಭೂತಾಳಸಿದ್ಧನನ್ನು ಕರೆದು ಗರಡಿಮನೆ ಸಿದ್ಧಪಡಿಸಿ ಕೊಡಲು ಅದೇಶಿಸುತ್ತಾನೆ. ಒಂದೇ ಒಂದು ರಾತ್ರಿಯಲ್ಲಿ ಭೂತಾಳಸಿದ್ಧ ಗರಡಿಮನೆಯನ್ನು ಸಿದ್ಧಪಡಿಸಿಕೊಡುತ್ತಾನೆ.

ಭೂತಾಳಸಿದ್ಧನನ್ನು ಬಯಲು ಭೂತಾಳಿ ಎಂದೂ ಕರೆಯುತ್ತಾರೆ. ಹೆಸರಿಗೆ ಮಾತ್ರ ಪ್ರಧಾನಿ ಭೂತಾಳಸಿದ್ಧ. ಅವನಿಗೆ ಅವನ ಯಜಮಾನನಿಗೆ ಹಾಗೂ ಯಜಮಾನನ ಮಕ್ಕಳಿಗೆ ಸಲ್ಲುವ ಯಾವುದೇ ಸನ್ಮಾನಗಳಿಲ್ಲ. ಭೂತಾಳಸಿದ್ಧನ ಮೂರ್ತಿ ಮೂಲಗುಡಿಯಿಂದ ಸ್ವಲ್ಪ ದೂರದಲ್ಲಿ ಬಯಲಿನಲ್ಲಿ ನಿರ್ಮಿತವಾಗಿರುತ್ತದೆ. ಸೇವೆಗೆ ಇರಲಿ, ಸನ್ಮಾನಕ್ಕೆ ಬೇಡ ಎನ್ನುವಂತೆ ಅವನನ್ನು ಬಯಲನಲ್ಲಿಯೇ ನಿಲ್ಲಿಸಲಾಗಿರುತ್ತದೆ. ಅಷ್ಟೇ ಅಲ್ಲ ಅವನ ಹೆಸರಿನಲ್ಲಿ ಇಂದಿಗೂ ಒಂದೇ ಒಂದು ಗುಡಿ ನಿರ್ಮಾಣವಾಗಿಲ್ಲ. ಸಣ್ಣದೊಂದು ಗುಡಿಯನ್ನು ನಿರ್ಮಿಸಿದರೂ ಅವನ ಗುಡಿಗೆ ಯಾವುದೇ ಸಂದರ್ಭದಲ್ಲಿ ಛಾವಣಿ ಹಾಕುವುದಿಲ್ಲ.

ಅಮೋಘಸಿದ್ಧನ ಬಲಿಷ್ಠತೆ ಗೌರವವನ್ನು ಉಂಟುಮಾಡುವುದರ ಬದಲು ವಿನೋದವನ್ನು ಉಂಟುಮಾಡುವಂತೆ ಅವನನ್ನು ಬಣ್ಣಿಸಲಾಗಿದೆ.

ಭೂತಾಳಿ ಭೂತಾಳಿ ಅಂದರ ಹೆಂಥಾ ಭೂತಾಳಿ ಸಿದ್ಧನೋ
ರಂಜನಗಿಯಂಥ ತಲಿಯವನೋ ರಾಗೋಲಿನಂಥ ಹಲ್ಲಿನವನೋ
ರಾಗೋಲಿನಂಥ ಹಲ್ಲಿನವನೋ ಸುಪ್ಪಾಲಿಯಂಥ ಕಿವಿಯವನೋ[೫೪]

ಭೂತಾಳಸಿದ್ಧನಿಗೆ ದೈಹಿಕ ಬಲವಿದ್ದಂತೆ ಅಪಾರವಾದ ಮನೋನಿಯಂತ್ರಣಶಕ್ತಿ ಇದ್ದುದು ಕೂಡಾ ಸತ್ಯ.

ರಾಣಿ ರಕ್ಕಸಿಯ ಮಗನ್ಯಾನೋ ರಾಮಚಂದರ ಭೂತಾಳಿ
ಕೊಂಕಣದೇಶದ ವಿಲಾಸಗಿತ್ತಿಗೆ ಒಲಿದು ಮಣಿದವನಲ್ಲೇಳೋ[೫೫]

ಸಿದ್ಧರು ನಾಥರು ಸಾಧನೆಯ ಉತ್ತುಂಗದಲ್ಲಿದ್ದವರು ಕೋಲಾಪುರದ ವಿಲಾಸಗಿತ್ತಿಯ ಮೋಹಕ್ಕೆ ಬಲಿಯಾಗಿ ಹಲವಾರು ವರ್ಷ ನರಳಾಡಿ ನಂತರ ಪಾರಾಗಿ ಬಂದ ಹಲವಾರು ಘಟನೆಗಳನ್ನು ನೆನಪಿಸಿ ಕೊಡುವ ಮೇಲಿನ ಸಾಲುಗಳು, ಭೂತಾಳಸಿದ್ಧನ ನಿಗ್ರಹಶಕ್ತಿಯ ಬಗೆಗೆ ಮೆಚ್ಚುಗೆಯನ್ನು ಸೂಚಿಸುತ್ತವೆ.

ಭೂತಾಳಿಸಿದ್ಧನನ್ನು ವರ್ಣಿಸುವ ಮುಂದಿನ ಸಾಲುಗಳು ಅವನಿಗಿರುವ ಹಸಿವನ್ನು ನೆನಪಿಸುತ್ತವೆ.

ಭೂತಾಳಿ ಭೂತಾಳಿ ಅಂದರ ಹಿಂಡದೆವ್ವಿನ ಗಂಡನೋ
ಹಿಂಡದೆವ್ವಿನ ಗಂಡನೋ ಪುಂಡಭೂತಾಳಿಸಿದ್ಧನೋ
ತೊಟ್ಲಾಗ ಆಡುವ ಜಡೆಯ ಕೂಸಿಗೆ ಚಿಟ್ಟನೆ ಚೀರಿ ಅಂಜಿಸವನೋ
ಚಿಟ್ಟಾನೆ ಚೀರಿ ಅಂಜಿಸವನೋ ಕಾಡಿ ಬೇಳೆಬೆಲ್ಲಾ ಬೇಡವನೋ
ಕಾಡಿ ಬೇಳೆ ಬೆಲ್ಲಾ ಬೇಡವನೋ ಯಾವ ಜಾಗಾದ ಮ್ಯಾಲ್ಯಾನೋ
ಮೇಲಾದ ಗುಡ್ಡದ ಮ್ಯಾಲ್ಯಾನೋ ತಂದಿ ಅಮ್ಮೋಗಿ ಸದರಿಗೋ[೫೫]

ಭೂತಾಳಸಿದ್ಧ ಜನರಿಂದ ಕಾಡಿಬೇಡಿ ಬೇಳೆ ಬೆಲ್ಲ ತಿನ್ನುತ್ತಾನೆ ಎಂದು ಇಲ್ಲಿ ಹೇಳಲಾಗಿದೆಯಾದರೂ ಅವನು ಮೂಲತಃ ಮಾಂಸಾಹಾರಿ ಆಗಿದ್ದಾನೆ. ಇಂದಿಗೂ ಭಕ್ತರಲ್ಲಿ ಕೆಲಜನ ಅಮೋಘಸಿದ್ಧನಿಗೆ ಶುದ್ಧ ಶಾಕಾಹಾರದ ಅಡುಗೆಯ ನೈವೇದ್ಯ ತೆಗೆದುಕೊಂಡು ಬಂದರೆ ಅವನ ಸೇವಕನಾದ ಭೂತಾಳಸಿದ್ಧನ ಕೆಲಭಕ್ತರು ಮಾಂಸದ ಎಡೆ ಹಿಡಿಯುತ್ತಾರೆ. ಯಜಮಾನ ಶುದ್ಧ ಶಾಕಾಹಾರಿ, ಸೇವಕ ಮಾಂಸಾಹಾರಿ. ಸಾಮಾನ್ಯವಾಗಿ ಯಜಮಾನನ ಆಹಾರ ಪದ್ಧತಿ ಸೇವಕನ ಮೇಲೆ ಹೇರಲ್ಪಡುತ್ತದೆ, ಇಲ್ಲವೆ ಸೇವಕನೇ ಯಜಮಾನನ ಆಹಾರ ಪದ್ಧತಿ ಶ್ರೇಷ್ಠವೆಂಬ ಭ್ರಮೆಯಲ್ಲಿ ತನ್ನ ಆಹಾರ ಪದ್ಧತಿಯನ್ನು ಬದಲಿಸಿಕೊಳ್ಳುವುದು ನಡೆದಿರುತ್ತದೆ. ಆದರೆ ಅಮೋಘಸಿದ್ಧ ಪರಂಪರೆಯಲ್ಲಿ ಯಜಮಾನ ತನ್ನ ಆಹಾರ ಪದ್ಧತಿಯನ್ನು ಸೇವಕನ ಮೇಲೆ ಹೇರಿಲ್ಲ. ಸೇವಕನಾದವನು ತನ್ನ ಆಹಾರ ಪದ್ಧತಿಯನ್ನು ಬಿಟ್ಟು ಯಜಮಾನನ ಆಹಾರ ಪದ್ಧತಿಗೆ ಒಲಿದಿಲ್ಲ ಎನ್ನುವುದು ಅತ್ಯಂತ ಆರೋಗ್ಯಕರ ಬೆಳವಣಿಗೆಯಾಗಿದೆ.

ಆದರೆ ಇಂದಿನ ಅಮೋಘಸಿದ್ಧ ಪರಂಪರೆಯ ಒಡೆಯರು ಶೀಲವಂತಿಕೆಯ ಕಾರಣದಿಂದ ಭೂತಾಳಸಿದ್ಧನಿಗೆ ಮಾಂಸದ ಎಡೆಹಿಡಿಯುವುದನ್ನು ನಿಷೇದಿಸುತ್ತಿರುವುದು ಕಂಡುಬಂದಿದೆ.

೩.೨.೧೧ ಶಾವರ ಸಿದ್ಧ

ಅಮೋಘಸಿದ್ಧ ಪರಿವಾರದಲ್ಲಿ ಶಾವರ ಸಿದ್ಧನಿದ್ದಾನೆ. ಅಮೋಘಸಿದ್ಧ ಹಾಗೂ ಶಾವರಸಿದ್ಧ ಇಬ್ಬರ ಮಧ್ಯದ ಸಂಬಂಧ ಯಾವ ತೆರನಾದದ್ದು ಎಂದು ಗ್ರಹಿಸಿಕೊಳ್ಳಲು ತೊಂದರೆಯಾಗುವ ಹಾಗೆ ಅವನ ಕುರಿತಾದ

ಸಂದಿಗ್ಧಮಯ ಸನ್ನಿವೇಶಗಳಿವೆ. ಭೂತಾಳಸಿದ್ಧನ ಹಾಗೆ ಶಾವರಸಿದ್ಧನೂ ಅಮೋಘಸಿದ್ಧನ ವಂಶದ ಮೂರು ನಾಲ್ಕು ತಲೆಮಾರುಗಳ ಸಿದ್ಧರೊಂದಿಗೆ ಸಂಬಂಧವಿಟ್ಟುಕೊಂಡಿದ್ದಾನೆ.

ಶಾವರಸಿದ್ಧನ ಕುರಿತಾದ ಆರತಿ ಪದದ ಸಾಲುಗಳು ಹೀಗಿದೆ:

ಅಚೆಗಾಯಿಶೀಲಿಸಿದ್ಧ ಆಚಾರದಲ್ಲಿ ಶ್ರೇಷ್ಠ

ಪಂಚಾರುತಿ ಪೂಜಾದಗೌಡನಿಗೆ

ಪಂಚ ಪಾಂಡವರ ಒಡೆಯ ಕುಲಸ್ವಾಮಿಶಾವರಪ್ಪಗೊ

ಇಚ್ಚೈಸಿ ಕರಕೊಂಡ ಬಂದಾತಗೆ[೫೭]

ಈ ಸಾಲುಗಳ ಜಾಡು ಹಿಡಿದು ಹೋದರೆ ಅಮೋಘಸಿದ್ಧನನ್ನು ಪುರಾಣ ಕಾಲಕ್ಕೆ ಒಯ್ದು, ಪಾಂಡವರು ಮಾಡುವ ಯಜ್ಞದಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಮನಸ್ಸೆ ಶಾವರಸಿದ್ಧನನ್ನು ಪಾಂಡವರ ಕುಲಸ್ವಾಮಿಯೆನ್ನಾಗಿರಸಿರಬಹುದು ಅನ್ನಿಸುತ್ತದೆ. ಪಾಂಡವರ ಕುಲಸ್ವಾಮಿಯನ್ನಾಗಿಸುವ ಮೂಲಕ ಶಾವರಸಿದ್ಧನನ್ನು ಕೃಷ್ಣನ ಅವತಾರವಾಗಿಸುವ ಪ್ರಯತ್ನ ನಡೆದಿರುವುದು ಗೋಚರಿಸುತ್ತದೆ.

ಶಾವರಸಿದ್ಧ ಹಾಗೂ ಕೃಷ್ಣನನ್ನು ಸಮೀಕರಿಸಿ ನೋಡಲು ಅವಕಾಶವಿರುವ ಇನ್ನೊಂದು ವಿವರ ಹೀಗಿದೆ: ವಿಜಾಪುರದ ಮುಖ್ಯ ಬಸ್ ನಿಲ್ದಾಣದ ಸಮೀಪ ನೃಸಿಂಹದೇವರ ಗುಡಿಯಿದೆ. ಇದು ಮೂಲತಃ ಹಿರೋಡ್ಯಾನ ಗುಡಿಯಾಗಿತ್ತು ಎಂದು ಹಿರಿಯರು ಹೇಳುತ್ತಾರೆ. ಅದೂ ಅಲ್ಲದೆ ವಿಜಾಪುರದ ಕೋಟೆಗೋಡೆಗಳನ್ನು ಉಲ್ಲೇಖಿಸಿಕೊಂಡು ಒಳಕೋಟಿ ಹಿರೋಡ್ಯಾ ಹಾಗೂ ಹೊರಕೋಟಿ ಹಿರೋಡ್ಯಾ ಇದ್ದರು ಎಂದು ಹೇಳುತ್ತಾರೆ. ಒಳಕೋಟಿ ಹಿರೋಡ್ಯಾ ಅಂದರೆ ಶಾವರಸಿದ್ಧನೆಂದೂ ಹೊರಕೋಟಿ ಹಿರೋಡ್ಯಾ ಅಂದರೆ ಅಮೋಘಸಿದ್ಧನೆಂದೂ ಅಚೇಗಾಯಿಯ ಜಳಗೌಡರ ಶಾವರಸಿದ್ಧ ಧರ್ಮಣ್ಣ ಅವರು ಹೇಳುತ್ತಾರೆ.[೫೮] ಈ ಶಾವರಸಿದ್ಧನೇ ನೃಸಿಂಹ ದೇವರಾಗಿ ಇಂದು ಪೂಜೆಗೊಳ್ಳುತ್ತಿದ್ದರೆ ಅಶ್ಚರ್ಯಪಡಬೇಕಾಗಿಲ್ಲ.

'ಸಿದ್ಧಸಿರಿ' ಗ್ರಂಥದ ಕರ್ತೃ ಮುದಗೊಂಡ ಮಾರಾಯರು ಈ ಶಾವರಸಿದ್ಧನನ್ನು ನರಸೋಬಾ ಎಂದು ಕರೆದಿದ್ದಾರೆ. ಪಾಂಡವರು ಭೂಲೋಕದ ತಮ್ಮ ಕೆಲಸವನ್ನು ಮುಗಿಸಿಕೊಂಡು ಕೈಲಾಸಕ್ಕೆ ಹೊರಟು ನಿಂತಾಗ ತಮ್ಮಲ್ಲಿದ್ದ ರಥವನ್ನು ಭೂಲೋಕದಲ್ಲಿದ್ದ ಅಮೋಘಸಿದ್ಧನಿಗೆ ಕೊಟ್ಟು ಕಳುಹಿಸುತ್ತಾರೆ. ರಥವನ್ನು ಹೊಡೆದುಕೊಂಡು ನರಸೋಬಾ>ನೃಸಿಂಹ>ಕೃಷ್ಣ ಕೈಲಾಸದಿಂದ ಅರಕೇರಿಗೆ ಬರುತ್ತಾನೆ. ಆಗ ಅಮೋಘಸಿದ್ಧನು ತಾನು ರಥದ ಮೇಲೆ ಹತ್ತಿ ಮೆರೆಯುವವನಲ್ಲ, ತನಗೆ ರಥದ ಅವಶ್ಯಕತೆಯಿಲ್ಲ, ಆ ರಥವನ್ನು ಇಲ್ಲಿಯೇ ಹರಣದ ಕೆರೆಯಲ್ಲಿ ಐಕ್ಯಮಾಡು ಎಂದು ಹೇಳುತ್ತಾನೆ. ಈ ಕತೆ ಪುರಾಣೀಕೃತವೆನ್ನುವುದುರಲ್ಲಿ ಸಂಶಯವಿಲ್ಲ. ಆದರೆ ಶಾವರಸಿದ್ಧನನ್ನು ಕೃಷ್ಣನ ಅವತಾರವೆಂದು ಬಿಂಬಿಸಲು ನಡೆಸಿದ ಅನೇಕ ಪ್ರಯತ್ನಗಳಲ್ಲಿ ಇದೂ ಒಂದು ಎಂದು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

[illegible]

[illegible]

[illegible]

[illegible]

ಎಲ್ಲೆಲ್ಲಿ ಪಾಂಡವರ ರಥದ ಉಲ್ಲೇಖ ಬರುತ್ತದೆಯೋ ಅಲ್ಲಲ್ಲಿ ಶಾವರಸಿದ್ಧ>ನರಸೋಬಾ ಇದ್ದಾನೆ. ಅಮೋಘಸಿದ್ಧನ ಇಪ್ಪತ್ತೊಂದು ಧರ್ಮರಲ್ಲಿ ಆಸ್ತಿ ಹಂಚಿಕೊಡುವಾಗ ನಡೆಯಿತೆನ್ನಲಾದ ಘಟನೆಯೊಂದು ಹೀಗಿದೆ:

ಒಟ್ಟು ಆಸ್ತಿಯನ್ನು ಇಪ್ಪತ್ತೊಂದು ಪಾಲು ಮಾಡಲಾಯಿತು. ಅವುಗಳಲ್ಲಿ ಎಲ್ಲರೂ ಒಂದೊಂದು ಪಾಲನ್ನು ತೆಗೆದುಕೊಳ್ಳಬೇಕು. ಇಪ್ಪತ್ತು ಜನ ಸಿದ್ಧರು ತಮಗೆ ಯಾವ ಪಾಲು ಬೇಕೋ ಅದನ್ನು ಆರಿಸಿಕೊಳ್ಳುತ್ತಾರೆ. ಅದರಲ್ಲಿ ಒಂದು ಪಾಲನ್ನು ಯಾರೂ ಆರಿಸಿಕೊಳ್ಳುವುದಿಲ್ಲ. ಅದನ್ನೇ ಶೀಲಿಸಿದ್ಧ ಆರಿಸಿಕೊಳ್ಳುತ್ತಾನೆ. ಆ ಪಾಲನ್ನು ಆರಿಸಿಕೊಳ್ಳುವವರಿಗೆ ಇದ್ದ ಶರತ್ತು ಇದಾಗಿತ್ತು: ಈ ಪಾಲನ್ನು ಪಡೆಯುವವರು ಶಾವರಸಿದ್ಧನನ್ನು ಹಾಗೂ ಏಳು ದೇವಕನ್ಯೆಯರಿಗೆ ಮಾನಮಾಡುವ ಜಕ್ಕೇರಿ ಹಂಗೊಂಡಾ ಹಕ್ಕನ್ನು ಪಡೆಯಬೇಕು. ಅಂಥ ಪಾಲನ್ನು ಶೀಲಿಸಿದ್ಧ ಆರಿಸಿಕೊಳ್ಳುತ್ತಾನೆ. ಶರತ್ತಿನಂತೆ ಶೀಲಿಸಿದ್ಧ ಶಾವರಸಿದ್ಧನನ್ನು ತನ್ನ ಪಾಲಿಗೆ ಪಡೆದುಕೊಂಡು ಉತ್ತರ ದಿಕ್ಕಿಗೆ ಹೊರಟು ದಕ್ಷಿಣ ಸೋಲಾಪುರ ತಾಲೂಕಿನ ಅಚೇಗಾವಿ ಗ್ರಾಮಕ್ಕೆ ಬಂದು ನಿಲ್ಲುತ್ತಾನೆ. ಶಾವರಸಿದ್ಧನನ್ನು ಕರೆದುಕೊಂಡು ಬರುವಾಗ ಶೀಲಿಸಿದ್ಧನು ಪಾಂಡವರ ರಥದಲ್ಲಿ ಮೆರೆಸುತ್ತ ತರುತ್ತಾನೆ. ಜಕ್ಕೇರಿ ಹಂಗೋಡದ ಬಗೆಗೆ 'ಜಾತ್ರೆ ಉತ್ಸವ ನಂಬಿಕೆ ಆಚರಣೆಗಳು' ಎನ್ನುವ ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

ಇಷ್ಟನ್ನು ಹೊರತುಪಡಿಸಿದರೆ ಶಾವರಸಿದ್ಧನ ಕುರಿತು ಹೆಚ್ಚಿನ ಮಾಹಿತಿ ಏನೂ ದೊರೆಯುವುದಿಲ್ಲ. ಆದರೆ ಅವನ ಹೆಸರಿನಲ್ಲಿರುವ 'ಶಾವರ' ಶಬ್ದವನ್ನು ಹಿಡಿದು ವಿಶ್ಲೇಷಣೆ ಮಾಡುತ್ತ ಹೋದರೆ ಹಲವಾರು ರೀತಿಯ ಅರ್ಥ ವಿವರಗಳು ನಮಗೆ ದೊರೆಯುತ್ತವೆ. ಶಾರ್ವರಿ ಸಿದ್ಧ>ಶಾರ್ವರ ಸಿದ್ಧ>ಶಾವರಸಿದ್ಧ ಎಂದಾಗಿರಬಹುದು ಎಂದುಕೊಂಡರೆ ಹೊಳೆಯುವ ಅರ್ಥವೇ ಬೇರೆ. ಶರ್ವರ ಸಿದ್ಧ>ಶರವರಸಿದ್ಧ >ಶವರಸಿದ್ಧ>ಶಾವರಸಿದ್ಧ ಎಂದಾಗಿರಬಹುದು ಎಂದುಕೊಂಡರೆ ಹೊಳೆಯುವ ಅರ್ಥ ಇನ್ನೊಂದು ತೆರನಾದದ್ದು. ಶ್ರಾವಕಸಿದ್ಧ> ಶ್ರಾವರಸಿದ್ಧ>ಶಾವರಸಿದ್ಧ ಎಂದಾಗಿರಬಹುದು ಎಂದುಕೊಂಡರೆ ಇನ್ನೂ ಒಂದು ಬೇರೆ ತೆರನಾದ ಅರ್ಥ ಹೊಳೆಯುತ್ತದೆ.

ಶಾರ್ವರಿ ಅಂದರೆ ಇರುಳು, ರಾತ್ರಿ, ಶಕ್ತಿ ದೇವತೆಗಳಲ್ಲಿ ಒಬ್ಬಳು ಎಂದು ಅರ್ಥವಿದೆ. ಶಾರ್ವರಿಸಿದ್ಧ ರೆನ್ನುವ ಇರುಳಿನ ಆರಾಧಕರೇನಾದರೂ ಇದ್ದಾರೆಯೇ? ಕಾಳಮುಖರಿಗೂ ಇವರಿಗೂ ಏನಾದರೂ ಸಂಬಂಧವಿದೆಯೇ? ಅಥವಾ ಸೋಮ>ಚಂದ್ರ>ಇರುಳು ಸಿದ್ಧಾಂತಿಗಳ ಒಂದು ಭಾಗವಾಗಿ ಶಾರ್ವರಿ ಇದೆಯೇ? ಇಂಥ ಹಲವಾರು ಪ್ರಶ್ನೆಗಳು ವಿಶೇಷ ಅಧ್ಯಯನವನ್ನು ನಿರೀಕ್ಷಿಸುತ್ತವೆ.

ಶರ್ವ ಎನ್ನುವುದು ಶಿವನ ಹೆಸರಿನಲ್ಲಿ ಒಂದು. ಹೀಗಾಗಿ ಶರ್ವರಸಿದ್ಧರು ಶೈವಸಿದ್ಧದ ಒಂದು ಪಂಗಡವಾಗಿರಬಹುದೆ ಎನ್ನುವುದು ಇನ್ನೂ ಬಿಡಿಸಿಕೊಳ್ಳಬೇಕಾದ ಅಂಶವಾಗಿದೆ.

ಶ್ರಾವಕ ಎಂದರೆ ಜೈನ ಗೃಹಸ್ಥ. ಶಾವರಸಿದ್ಧರು ಜೈನ ಸಿದ್ಧರ ಒಂದು ಪಂಗಡವಾಗಿರಬಹುದೆ ಎನ್ನುವುದನ್ನು ಅಧ್ಯಯನಕ್ಕೊಳಪಡಿಸಬೇಕಾಗಿದೆ. ಪದ್ಮಾವತಿ ಎನ್ನುವುದು ಜೈನರಲ್ಲಿ ಅತ್ಯಂತ ಜನಪ್ರಿಯವಾದ ಹೆಸರು. ಪದ್ಮಾವತಿ ತನ್ನ ಮಗಳನ್ನು ತನ್ನ ತಮ್ಮನೊಬ್ಬನಿಗೆ ಕೊಟ್ಟ ಸಂಗತಿಯನ್ನು ಈಗಾಗಲೇ ನೋಡಿದ್ದೇವೆ. ಅವನ ಹೆಸರು ಹೊನ್ನಪ್ಪಗೌಡ ಎಂದು 'ಸಿದ್ಧಸಿರಿ'ಯ ಕರ್ತೃ ಬರೆದಿದ್ದಾರೆ. ಆದರೆ ನಾನು ಚಿಕ್ಕೋಡಿ ತಾಲೂಕಿನ ಕೆರಪನಹಟ್ಟಿ(ಇಂದಿನ ಕೆರೂರ)ಗೆ ಅರ್‍ಯಾಣಸಿದ್ಧನ ಕುರಿತು ಮಾಹಿತಿ ಪಡೆಯಲು ಹೋಗಿದ್ದೆ. ಅಲ್ಲಿ ಮಾಹಿತಿ ನೀಡಿದ ವಕ್ತೃ ಹಲವಾರು ಮಹತ್ವ ಸಂಗತಿಗಳನ್ನು ನೀಡಿದ್ದಾನೆ. ಪದ್ಮಾವತಿಯ ಮಗಳ ಹೆಸರು ರೆಬಕವ್ವ ಎನ್ನುವುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಈ ವಕ್ತೃವಿನ ಪ್ರಕಾರ ಅವಳ ಹೆಸರು ಜಿನ್ನವ್ವ ಎಂದು. ಅದೂ ಅಲ್ಲದೆ ಪದ್ಮಾವತಿಯ ಸಹೋದರನ ಹೆಸರು ಬರಿ ಹೊನ್ನಪ್ಪಗೌಡ ಅಲ್ಲ. ಹೊನ್ನಚಾವರ ಮುತ್ತ್ಯಾ.[೫೯] ಈ ಹೊನ್ನಚಾವರ>ಶಾವರ ಮುತ್ತ್ಯಾ ಆಗಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಪದ್ಮಾವತಿ, ಜಿನ್ನವ್ವ, ಹೊನ್ನಚಾವರ ಮುತ್ತ್ಯಾ ಹಾಗೂ ಶಾವರಸಿದ್ಧ ಈ ಹೆಸರುಗಳೆಲ್ಲ ಅಮೋಘಸಿದ್ಧ ಹಾಗೂ ಜೈನರ ಸಂಬಂಧದ ಕಡೆಗೆ ಕುತೂಹಲದ ಬೆರಳನ್ನು ಮಾಡುತ್ತವೆ. ಈ ಕುತೂಹಲ ಇನ್ನೂ ಕೆರಳುವಂಥ ಮಾಹಿತಿಗಳು ಜಮಖಂಡಿ ತಾಲೂಕಿನ ಕುಂಚನೂರಿನಲ್ಲಿ ದೊರೆತಿವೆ. ಕುಂಚನೂರಿನಲ್ಲಿ ಅಮೋಘಸಿದ್ಧನ ಮೊಮ್ಮಗನಾದ ಮಾದಣ್ಣ ನೆಲೆಸಿದ್ದಾನೆ. ಕುಂಚನೂರಿನಲ್ಲಿ ಜೈನರ ಹಲವಾರು ಮನೆತನಗಳಿವೆ. ಮಾದಣ್ಣನ ವಂಶದವರಿಗೂ ಇಲ್ಲಿನ ಜೈನರಿಗೂ ಅನೇಕ ರೀತಿಯ ಸಂಬಂಧಗಳು ಇವೆ. ಈ ಊರಿನ ಚತುರ್ಥ ಜೈನರು ಮೂಲತಃ ಆನೆಗುಂದಿ ಕಡೆಯವರು. ಅಲ್ಲಿ ನಡೆದ ಕದನದ ಕಾರಣದಿಂದ ಅವರು ಕುಂಚನೂರಿಗೆ ವಲಸೆ ಬಂದರು. ಇಲ್ಲಿಗೆ ಬಂದ ನಂತರ ಮಾದಣ್ಣನ ಗುಡಿಯ ರಾಜಂಗಳ ಸೇವೆ ಮಾಡಿಕೊಂಡಿದ್ದರು. ಒಂದು ಸಲ ಕುಂಚನೂರಿಗೆ ಒಬ್ಬ ಫೌಜದಾರ ಬಂದು ಗೌಡಕಿ ಮಾಡುತ್ತಿದ್ದ ಮಾದಣ್ಣನ ಒಡೆಯರೊಂದಿಗೆ ತುಚ್ಛವಾಗಿ ನಡೆದುಕೊಂಡ. ಒಡೆಯರಿಗೆ ತುಂಬಾ ಬೇಸರವಾಯಿತು. ನಿಂತು ಗೌಡಕಿ ಮಾಡುವುದಕ್ಕಿಂತ, ಕುಂತು ಪೂಜಾರಿಕೆ ಮಾಡುವುದೇ ಅವನಿಗೆ ಒಳ್ಳೆಯದೆನ್ನಿಸಿತು. ರಾಜ ಅಂಗಳದ ಸೇವೆ ಮಾಡಿಕೊಂಡಿದ್ದ ಜೈನರಿಗೆ ಅವನು ಗೌಡಕಿಯನ್ನು ಬಿಟ್ಟುಕೊಟ್ಟ ಹಾಗೂ ಗೌಡಕಿಯೊಂದಿಗೆ ಬಂದಿದ್ದ ಇನಾಮೀ ಜಮೀನನ್ನೂ ಕೊಟ್ಟ. ಹೀಗೆ ಪ್ರಾರಂಭವಾದ ಸಂಬಂಧ ಇಂದಿಗೂ ಮುಂದುವರೆದುಕೊಂಡು ಬಂದಿದೆ. ದೀಪಾವಳಿ, ಉಗಾದಿ, ಕಡೆಶ್ರಾವಣದಲ್ಲಿ ನಡೆಯುವ ಉತ್ಸವದಲ್ಲಿ ಕುಂಚನೂರಿನ ಜೈನ ಪಾಟೀಲರದೇ ಪ್ರಥಮ ಎಡೆ ಬರುತ್ತದೆ. ಮಾದಣ್ಣನ ಪಲ್ಲಕ್ಕಿ ಊರಲ್ಲಿ ಮೆರವಣಿಗೆ ಹೊರಟಾಗ ಮೊದಲು ಆರತಿ ಬೆಳಗಿಸಿಕೊಳ್ಳುವುದು ಜೈನ ಪಾಟೀಲರ ಮನೆಯವರಿಂದಲೇ. ಜೈನ ಪಾಟೀಲರ ಜಗಲಿಯ ಮೇಲೆ ಇಂದಿಗೂ ಮಾದಣ್ಣನ ಮೂರ್ತಿ ಪೂಜೆಗೊಳ್ಳುತ್ತದೆ. ಅಷ್ಟೇ ಅಲ್ಲ ಮಾದಣ್ಣನ ಗುಡಿಯ ಒಡೆಯರು ತೀರಿಕೊಂಡರೆ ಜೈನ ಪಾಟೀಲರು ದಾನಧರ್ಮ ಮಾಡುತ್ತಾರೆ. ಹಾಗೂ ಹನ್ನೊಂದು ದಿವಸದ ಸೂತಕವನ್ನು ತಮ್ಮ ಮನೆಯಲ್ಲಿ ಜೈನ ಪಾಟೀಲರು ಆಚರಿಸುತ್ತಾರೆ. ಆ ಹನ್ನೊಂದು ದಿವಸ ಜೈನಗೌಡರು ಹಾಲು ಉಣ್ಣುವುದಿಲ್ಲ.[೬೦]

ಈ ಎಲ್ಲ ವಿವರಗಳನ್ನು ಗಮನಿಸಿದರೆ ಅಮೋಘಸಿದ್ಧನಿಗೂ ಜೈನರಿಗೂ ಎಂಥದೋ ಒಂದು ಸಂಬಂಧವಿರುವುದು ಗೋಚರಿಸುತ್ತದೆ. ಅದನ್ನು ಇನ್ನೂ ಆಳವಾಗಿ ಶೋಧಿಸುವ ಅವಶ್ಯಕತೆಯಿದೆ.

೩.೨.೧೨ ವರ್ತಮಾನದ ಒಡೆಯರು

ಅಮೋಘಸಿದ್ಧನೆಂಬ ಬೇರಿನಿಂದ ಪ್ರಾರಂಭವಾಗಿ ನಾಲ್ವರು ವರವಿನ ಮಕ್ಕಳು, ಇಪ್ಪತ್ತೊಂದು ಮಂದಿ ಧರ್ಮರು, ನೂರಾ ಒಂದು ಮಂದಿ ಧರ್ಮರು, ಸಾವಿರದಾ ಏಳುನೂರು ಧರ್ಮರು -ಹೀಗೆ ತಮ್ಮ ವಂಶದ ಶಾಖೆ ಉಪಶಾಖೆಗಳು ಹಬ್ಬಿವೆ ಎಂದು ಅಮೋಘಸಿದ್ಧನ ಇಂದಿನ ವಂಶದವರು ಅಚಲವಾಗಿ ನಂಬಿದ್ದಾರೆ. ಅಮೋಘಸಿದ್ಧನ ಇಂದಿನ ವಂಶಜರಲ್ಲಿ ಅಂದಿನ ಅಮೋಘಸಿದ್ಧನ ಸಿದ್ಧಾಟಿಕೆಯ ಅಂಶವಿದೆಯೇ ಎಂದು ಹುಡುಕಲು ಹೊರಟರೆ ನಿರಾಸೆ ಖಂಡಿತವಾಗಿ ಕಾದಿದೆ. ಇಂಥದ್ದೊಂದು ಕೊರತೆಯ ಅನುಭವ ಇಂದಿನವರಲ್ಲಿ ಇದೆ ಅನ್ನುವುದಕ್ಕೆ ಅವರೇ ಕಟ್ಟಿಕೊಂಡ ಹಾಡಿನಲ್ಲಿ ದೊರೆಯುತ್ತದೆ. ಅಮೋಘಸಿದ್ಧನಲ್ಲಿ ಅತ್ಯಂತ ಪ್ರಖರವಾಗಿದ್ದ ಸಿದ್ಧಾಟಿಕೆಯ ಶಕ್ತಿ ನಿಧಾನವಾಗಿ ತಿಳಿಯಾಗುತ್ತ ಬಂದಿರುವುದು ಅಮೋಘಸಿದ್ಧ ಪರಂಪರೆಯ ಅಧ್ಯಯನ ಹಾಗೂ ಕ್ಷೇತ್ರಕಾರ್ಯ ಮಾಡುವಾಗಿನ ಅನುಭವದ ಹಿನ್ನೆಲೆಯಲ್ಲಿ ಈ ಅಧ್ಯಯನಕಾರನಿಗೆ ಅನ್ನಿಸಿದೆ. ಅವರು ಕಟ್ಟಿಕೊಂಡ ಹಾಡು ಅವರ ಸಿದ್ಧಾಟಿಕೆಯ ಶಕ್ತಿ ತಲೆಮಾರಿನಿಂದ ತಲೆಮಾರಿಗೆ ಕಡಿಮೆಯಾಗುತ್ತಿರುವುದನ್ನು ಹಾಗೂ ಸಿದ್ಧಾಟಿಕೆ ಶಕ್ತಿಯ ಪ್ರಭಾವದ ಅಧೋಮುಖ ಚಲನೆಯನ್ನು ಸೂಚಿಸುತ್ತದೆ.

ಇವರು ತಮ್ಮಲ್ಲಿರುವ ಕಂಬಳಿಯನ್ನು 'ಹೋಮದ ಕಂಬಳಿ' ಎಂದು ಕರೆಯುತ್ತಾರೆ. ಕಂಬಳಿ ಬೀಸಿ ಅರಗಳಿಗೆಯಲ್ಲಿ ಆಕಾಶದಿಂದ ಮಳೆ ಬರಿಸಿದ ಅನೇಕ ಸಿದ್ಧರ ಕತೆಗಳನ್ನು ಹೇಳುತ್ತಾರೆ. ಈ ಕಂಬಳಿಯನ್ನು ತಮ್ಮ ವಂಶದ ಮೂಲ ಪುರುಷ ಅಮೋಘಸಿದ್ಧ ಕೈಲಾಸದಿಂದ ಬರುವಾಗ ಶಿವನಿಂದ ಆಶೀರ್ವಾದ ರೂಪದಲ್ಲಿ ಪಡೆದುಕೊಂಡು ಬಂದದ್ದು ಎಂದು ಅವರು ನಂಬಿದ್ದಾರೆ. ಅಂಥ ಪವಿತ್ರವಾದ ಕಂಬಳಿ ಹಾಗೂ ವಿಭಿನ್ನ ತಲೆಮಾರಿನ ಒಡೆಯರೊಂದಿಗಿನ ಅದರ ಸಂಬಂಧವನ್ನು ಅವರು ಕಟ್ಟಿಕೊಂಡ ಹಾಡು ಸೂಚಿಸುತ್ತದೆ. ಈ ಹಾಡಿನ ಸನ್ನಿವೇಶವನ್ನು ಸ್ವಲ್ಪ ಇಲ್ಲಿ ವಿವರಿಸಬೇಕು. ಹರಣದ ಕೆರೆಯಲ್ಲಿ ಐಕ್ಯವಾದ ಪಾಂಡವರ ರಥವನ್ನು ನಾಲ್ವರು ವರವಿನ ಮಕ್ಕಳು ತಮ್ಮ ಸಿದ್ಧಾಟಿಕೆಯಿಂದ ಎಬ್ಬಿಸುತ್ತಾರೆ. ಹಾಗೆ ಹೊರಬಂದ ರಥವನ್ನು ಮಕಣಾಪುರಕ್ಕೆ ಒಯ್ದು ಅದರಲ್ಲಿ ನಾಲ್ಕು ಮೂಲೆಗೆ ನಾಲ್ವರು ನಿಂತುಕೊಳ್ಳುತ್ತಾರೆ. ದಾರಿಮಧ್ಯದಲ್ಲಿ ಮಾದಿಗ ಸಮಾಜದ ವ್ಯಕ್ತಿಯೊಬ್ಬ ಅವರನ್ನು ನಿಲ್ಲಿಸಿ, ಅವರ ಮುಂದಿನ ತಲೆಮಾರಿನ ಕಥೆಯನ್ನು ಹೇಳಿದಂತೆ ಹೇಳಿಕೆ ಮಾಡುತ್ತಾನೆ. ಅದು ಹೀಗಿದೆ:

ನಾಲ್ಕೂ ಮೂಲಿಗೆ ನೋಡೀರಿ ಅವರೇ ನಿಂತಾರೇನಯ್ಯ
ಹರಹರೋ ನನ ಕೈಲಾಸೋ ಧರ್ಮರಿಗೆ ಬಿಟ್ಟು ನೋಡರಿss
ಧರ್ಮರಿಗೆ ಬಿಟ್ಟು ಕಂಬಳಿ ಅಂತರಲ್ಯಾವೇಳ ಅಂದಾನ

ಹರಹರೋ ನನ ಕೈಲಾಸೋ ಮತ್ತೇನ ನುಡಿವೂತಾನಲ್ಲ
ಬರ‍್ರಿ ಬರ‍್ರಿ ಗುರುಗೋಳ್ಯಾ ನಾಕಮಂದಿ ಧರ್ಮಾರೋ
ನಾಲ್ವರು ಧರ್ಮರ ಹೊಟ್ಟೇಲಿ ಇಪ್ಪತ್ತೊಂದು ಮಂದಿ ಧರ್ಮರೋ
ಇಪ್ಪತ್ತೊಂದ್ಮಂದಿ ಧರ್ಮರೋ ಆವಾಗ ಬರುವೊತಾರಲ್ಲೋ
ಆವಾಗ ಬರುವೊತಾರಲ್ಲೋ ಧರ್ಮರ ಕಂಬಳಿ ನೋಡರಿss
ಧರ್ಮರ ಕಂಬಳಿ ನೋಡರಿsss ಹೆಗಲಿಗೆ ಬರುವೂತಾವಲ್ಲೋ
ಇಪ್ಪತ್ತೊಂದು ಮಂದಿ ಧರ್ಮರ ಹೊಟ್ಟೀಲಿ ನೂರ ಒದ್ಮಂದಿ ಧರ್ಮರೋ
ನೂರಾ ಒಂದ್ಮಂದಿ ಧರ್ಮರೆ ಹುಟ್ಟಿ ಬರುವೂತಾರಲ್ಲೋ
ಕರಿಯ ಕಂಬಳಿ ನೋಡರಿss ನಡಗಡ್ಡಿಗೆ ಬರುವೂತಾವಲ್ಲೊ
ಹರಹರೋ ನನ ಕೈಲಾಸೋ ಮತ್ತೇನ ನುಡುವೂತಾನೆಲ್ಲೋ
ಬರ‍್ರಿ ಬರಿ ಗುರುಗೋಳ್ಯಾ ನೂರ ಒಂದ್ಮಂದಿ ಧರ್ಮಾರೋ
ನೂರಾ ಒಂದ್ಮರದಿ ಧರ್ಮರ ಹೊಟ್ಟಿಲಿ ಸಾವಿರದೇಳನೂರ ಸಿದ್ಧಾರೆ
ಸಾವಿರದೇಳನೂರ ಕಂಬಳಿ ಆವಾಗ ಹುಟ್ಟೂತಾವಲ್ಲೋ
ಆವಾಗ ಹುಟ್ಟೂತಾವಯ್ಯ ಕೆಳಗ ಹಾಸೂತಾರಲ್ಲೋ
ಮಾಸ್ಯಾಳ ಮಾದಿನೆಂಬವನೋ ಹೀಗೊಂದ ನುಡಿಯ ಮಾಡ್ಯಾನ
ದೇವರ ಪರಮೇಶೂರಾನೆ ಒಳ್ಳೇದ ಒಳ್ಳೇದ ಅಂದಾನೆ[೧]

ನಾಲ್ವರು ಧರ್ಮದಲ್ಲಿ ಸಿದ್ಧಾಟಿಕೆಯ ಶಕ್ತಿ ಇನ್ನೂ ಬಹಳವಿತ್ತು ಎಂಬುದನ್ನು ಸೂಚಿಸುವಂತೆ ಅವರು ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡರೆ ಅದು ಹೆಗಲಿನಿಂದ ಮೇಲೆ ಅಂತರದಲ್ಲಿ ನಿಲ್ಲುತ್ತಿತ್ತಂತೆ. ಇಪ್ಪತ್ತೊಂದು ಮಂದಿ ಧರ್ಮರು ಹಾಕಿಕೊಂಡ ಕಂಬಳಿ ಅಂತರದಲ್ಲಿ ನಿಲ್ಲಲಾರದೆ ಅವರ ಹೆಗಲಮೇಲೆ ಬಂದಿತಂತೆ. ನೂರಾ ಒಂದು ಮಂದಿ ಧರ್ಮರು ಕಂಬಳಿಯನ್ನು ಹೆಗಲಮೇಲೆ ಹಾಕಿಕೊಳ್ಳದೆ ನಡಕ್ಕೆ ಜೋತು ಹಾಕಿಕೊಂಡರಂತೆ. ಸಾವಿರದ ಏಳನೂರ ಧರ್ಮರು ಕಂಬಳಿಯನ್ನು ಹಾಸಿಕೊಳ್ಳಲು ಬಳಸಿಕೊಂಡು ಕುಂಡಿಯ ಬುಡಕ್ಕೆ ಹಾಕಿಕೊಳ್ಳಲು ಪ್ರಾರಂಭಿಸಿದರಂತೆ. ಈ ತೆರನಾದ ಕಂಬಳಿಯ ಇಳಿಮುಖ ಚಲನೆ ಅದನ್ನು ಬಳಸುವ ತಲೆಮಾರಿನವರ ಸಿದ್ಧಾಟಿಕೆ ಶಕ್ತಿಯ ಇಳಿಮುಖ ಚಲನೆಯ ಸಂಕೇತವಾಗಿದೆ. ಹೀಗೆ ಇಳಿಮುಖ ಚಲನೆಯನ್ನು ಕಂಡ ಕಂಬಳಿ ಇಂದಿನ ಒಡೆಯರಲ್ಲಿ ಇನ್ನೂ ಅಧೋಗತಿಯನ್ನು ಕಂಡಿದೆ. ಜಾತ್ರೆ, ಉತ್ಸವ, ಮೆರವಣಿಗೆ, ಆಚರಣೆಯ ಸಂದರ್ಭದಲ್ಲಿ ಅದು ಬಳಕೆಯಾಗಿ ಉಳಿದ ಸಂದರ್ಭದಲ್ಲಿ ಮನೆಯ ಗೂಟಕ್ಕೆ ಜೋತು ಬೀಳತೊಡಗಿದೆ. ನಂಬಿಬಂದ ಭಕ್ತರಿಗೆ ತಾವೇ ಪರಿಹಾರ ಸೂಚಿಸುವ ಶಕ್ತಿ ಇಲ್ಲದ್ದಕ್ಕೆ ಗುಡಿಯೊಳಗಿನ

ದೇವರ ಕಡೆಗೆ ಕೈ ಮಾಡತೊಡಗಿದ್ದಾರೆ. ಅಂದರೆ ಮೂಲಪುರುಷ ಅಮೋಘಸಿದ್ಧನ ಸಿದ್ಧಾಟಿಕೆಯ ಪ್ರಖರತೆಯ ಲವಲೇಶವನ್ನು ಇಂದಿನ ಒಡೆಯರಲ್ಲಿ ಹುಡುಕ ಹೊರಟವನಿಗೆ ಮರಭೂಮಿಯಲ್ಲಿ 'ನೀರು' ಹುಡುಕಿದ ಅನುಭವವಾಗುತ್ತದೆ.

ಇಂದಿನ ಒಡೆಯರಲ್ಲಿ ಸಿದ್ಧಾಟಿಕೆಯ ಶಕ್ತಿ ಕಡಿಮೆ ಆಗಿದೆಯಾದರೂ ಅವರಿಗೆ ಲೌಕಿಕ ಸಂಪತ್ತು ಕಡಿಮೆಯಾಗಿಲ್ಲ. ಕೆಲವೊಂದು ಅಪವಾದ ಹೊರತುಪಡಿಸಿದರೆ ಬಹುಪಾಲು ಒಡೆಯರ ಆರ್ಥಿಕ ಸ್ಥಿತಿ ಚೆನ್ನಾಗಿಯೇ ಇದೆ. ಅವರ ಆರ್ಥಿಕ ಭದ್ರತೆಯ ಎರಡು ಮೂಲಗಳೆಂದರೆ ಅವರಿಗಿರುವ ಜಮೀನು ಹಾಗೂ ಭಕ್ತರ ಶ್ರದ್ಧೆ. ವಂಶದ ಮೂಲವೃತ್ತಿ ಪಶುಸಂಗೋಪನೆ, ಮರೆಯಾಗಿ ಕೃಷಿಯೇ ಬಹುಪಾಲು ಒಡೆಯರ ವೃತ್ತಿಯಾಗಿದೆ. ಪಾಲಕಿಯೊಂದಿಗೆ ಭಕ್ತರ ಊರುಗಳಿಗೆ ತಿರುಗಾಡುವುದು ಅವರ ಇನ್ನೊಂದು ಪ್ರಮುಖ ವೃತ್ತಿಯಾಗಿದೆ.

ಭಕ್ತಿ ಶ್ರದ್ಧೆಯಿಂದ ಪಾಲಕಿಯೊಂದಿಗೆ ಇವರು ತಿರುಗಾಡುವುದರಿಂದ ಎರಡು ರೀತಿಯ ಲುಕ್ಸಾನನ್ನು ಅವರು ಅನುಭವಿಸುವಂತಾಗಿದೆ. ಇಂದು ಈ ಊರು, ನಾಳೆ ಇನ್ನೊಂದು ಊರು, ಮರುದಿವಸ ಮತ್ತೊಂದು ಊರು. ಹೀಗೆ ಊರಿಂದೂರಿಗೆ ಅಲೆಮಾರಿಯಾಗಿ ಸಂಚರಿಸುವ ಇವರು ಸಹಜವಾಗಿ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಶಿಕ್ಷಿತ ಒಡೆಯರ ಪ್ರಮಾಣ ತುಂಬಾ ಕಡಿಮೆಯಾಗಿರುವುದು ಈ ಕಾರಣಕ್ಕಾಗಿಯೇ ಅನ್ನಿಸುತ್ತದೆ. ಸದಾ ಸಂಚಾರಿಯಾಗಿರುವ ಇವರು ತಮ್ಮ ಭೂಮಿಯ ಕಡೆಗೆ ಕನಿಷ್ಟ ಪಕ್ಷದ ಗಮನವನ್ನೂ ಹರಿಸದೇ ಹೋಗುತ್ತಾರೆ. ಗುರುವಿನ ಸೇವೆ ಮಾಡುತ್ತಾ ಹೋದರೆ ಗುರುನಾಥ ಬೇಕುಬೇಕಾದಷ್ಟು ಕೊಡುತ್ತಾನೆ ಎಂದು ಅವರಿಂದು ಗಟ್ಟಿಯಾಗಿ ನಂಬಿದ್ದಾರೆ. ಬಹುಪಾಲು ಜನ ಒಡೆಯರು ಆಧುನಿಕ ಕೃಷಿ ಪದ್ಧತಿ ಬಳಸಿ ವ್ಯವಸಾಯ ಮಾಡುವತ್ತ ಗಮನ ಹರಿಸಿಲ್ಲವೆನ್ನಿಸುತ್ತದೆ.

ದೇವರಗುಡಿಯ ಗದ್ದುಗೆ ಏರಿ ನಿತ್ಯ ಮೂರು ಸಲ ನಿಷ್ಠೆಯಿಂದ ಗುರುವಿಗೆ ಪೂಜೆ ಸಲ್ಲಿಸುವವರ ಸಂಖ್ಯೆ ಕಡಿಮೆಯಾಗಿಲ್ಲವಾದರೂ ನೋವಿನ ಸಂಗತಿಯೊಂದಿಗೆ ಗುರುಸ್ಥಾನದಲ್ಲಿರುವ ಇವರು ಭಕ್ತ ಸಮುದಾಯಕ್ಕೆ ನೀತಿವಂತ ಬದುಕಿನ ಕ್ರಮಗಳನ್ನು ಬೋಧಿಸಬೇಕಾದ ಇವರಲ್ಲಿ ಕೆಲವರು ಹಲವಾರು ವ್ಯಸನಗಳಿಗೆ ತುತ್ತಾಗಿದ್ದಾರೆ. ಭಕ್ತನಿಗೆ ಭಾಗ್ಯವಿರಲಿ ತನ್ನ ಮಕ್ಕಳಿಗೆ ಬಡತನವಿರಲಿ ಎಂದು ಹೇಳುತ್ತಿದ್ದ ಅಮೋಘಸಿದ್ಧನ ವಂಶದವರಾದ ಇವರಲ್ಲಿ ಬಹುಪಾಲು ಜನರಲ್ಲಿ ಸಂಪತ್ತಿನ ದಾಹ ಮಿತಿಮೀರುತ್ತಿರುವುದು ಕಂಡುಬರುತ್ತದೆ. ಕೆಲವೊಂದು ಒಡೆಯರು ಭಕ್ತರ ಮನೆಗೆ ಜಾತ್ರೆ ಉತ್ಸವಗಳಿಗೆ ಬೇಕಾಗುವ ಕಾಣಿಕೆ ಬೇಡಲು ಹೋದಾಗ ಬೇಡುವವನ ಸೌಜನ್ಯವನ್ನು ತೋರುವುದಿಲ್ಲ. ಭಕ್ತರು ವರ್ಷವಿಡಿ ಬೆವರು ಸುರಿಸಿ ದುಡಿದು ರಾಶಿಮಾಡಿ ಇಟ್ಟಿರುವ ದವಸ-ಧಾನ್ಯಗಳ ಚೀಲಗಳಿಗೆ ಭಂಡಾರ ಬಳಿದು ಇದನ್ನು ಗುರುವಿಗೆ ಅರ್ಪಿಸು ಎನ್ನುವ ಸ್ಥಿತಿ ತಲುಪಿದ್ದಾರೆ. ದೊಡ್ಡ ಹಬ್ಬವನ್ನು ಮಾಡಿಸಬೇಕಾದರೆ ಶ್ರೀಮಂತರಾದ ಭಕ್ತನೂ ಎರಡೆರಡು ಸಲ ಯೋಚಿಸುವಷ್ಟು ಹಬ್ಬದ ಖರ್ಚಿನ ಪ್ರಮಾಣ ಏರಿಸಿದ್ದಾರೆ. ಲಕ್ಷಾಂತರ ರೂಪಾಯಿ ಖರ್ಚು ಮಾಡದೆ

ದೊಡ್ಡಹಬ್ಬ ಸಾಧ್ಯವಿಲ್ಲ ಎನ್ನುವ ಸ್ಥಿತಿ ಒದಗಿದೆ. ಅಂದ ಮಾತ್ರಕ್ಕೆ ಎಲ್ಲ ಒಡೆಯರೂ ಹೀಗೆ ಇದ್ದಾರೆಂದಲ್ಲ. ಭಕ್ತರ ಸಂಕಟಕ್ಕೆ ಸ್ಪಂದಿಸುವ ಒಡೆಯರೂ ಇದ್ದಾರೆ ಎನ್ನುವುದು ಸಮಾಧಾನದ ಸಂಗತಿ.

ಇನ್ನೊಂದು ನೋವಿನ ಸಂಗತಿ ಎಂದರೆ ಇಂದಿನ ಒಡೆಯರಿಗೆ ತಮಗಿರುವ ಅಪಾರ ಸಂಖ್ಯೆಯ ಭಕ್ತ ಸಮುದಾಯವನ್ನು ಧನಾತ್ಮಕವಾಗಿ ಬಳಸಿಕೊಳ್ಳಲು ಸಾಧ್ಯವಾಗದೇ ಇರುವುದು. ಸಣ್ಣಪುಟ್ಟ ಸಮುದಾಯದ ಗುರುಸ್ಥಾನದಲ್ಲಿರುವವರು ಆಧುನಿಕ ದೃಷ್ಟಿಕೋನವನ್ನು ಬೆಳೆಸಿಕೊಂಡು ಸಮುದಾಯ ಶಕ್ತಿಯನ್ನು ಸಮುದಾಯದ ವರ್ತಮಾನದ ತುರ್ತುಗಳಿಗೆ ಬಳಸುತ್ತಿದ್ದಾರೆ. ಒಡೆಯರ ಬೆನ್ನ ಹಿಂದಿರುವ ಭಕ್ತ ಸಮುದಾಯ ಬೃಹತ್ ಪ್ರಮಾಣದ್ದಿದೆ. ಅದನ್ನು ಧನಾತ್ಮಕವಾಗಿ ಬಳಸಿಕೊಳ್ಳುವ ಶಕ್ತಿ ಯಾವ ಒಡೆಯರಲ್ಲಿಯೂ ಗೋಚರಿಸುತ್ತಿಲ್ಲ. ಅಂಥ ಒಂದು ಸಣ್ಣ ಪ್ರಯತ್ನವನ್ನು ತಮ್ಮ ಮಿತಿಯಲ್ಲಿಯೇ 'ಸಿದ್ಧಸಿರಿ'ಯ ಕರ್ತೃ ಮದಗೊಂಡ ಮಾರಾಯರು ಮಾಡಲು ಪ್ರಯತ್ನಿಸಿದರು ಎನ್ನುವುದು ಸಮಾಧಾನದ ಸಂಗತಿ. ಜನಮಾನಸದಿಂದ ನಿಧಾನವಾಗಿ ಮಸಕಾಗುತ್ತ ಹೊರಟ್ಟಿದ್ದ ಅಮೋಘಸಿದ್ಧ ಪರಂಪರೆಯ ಬಗೆಗೆ 'ಸಿದ್ಧಸಿರಿ' ಗ್ರಂಥದ ಮೂಲಕ ಜಾಗೃತಿ ಮೂಡಿಸಿದರು. ಓದು ಬಲ್ಲವರಿಗೆ ಈ ಗ್ರಂಥವಾದರೆ, ಓದು ಬಾರದ ಜನರಿಗೆ ತಮ್ಮ ಡೊಳ್ಳಿನ ಹಾಡುಗಳ ಮೂಲಕ ತಲುಪಿಸಿದರು. ಸ್ವಲ್ಪ ಸಮಯದದಲ್ಲಿ ಮುಮ್ಮಟಗುಡ್ಡದಲ್ಲಿ ಅಮೋಘಸಿದ್ಧನ ನೆರಳಿನಲ್ಲಿ ನಿತ್ಯದಾಸೋಹ ನಡೆಯಿಸುವ ಮೂಲಕ ಭಕ್ತರನ್ನು ತಮ್ಮೆಡೆಗೆ ಸೆಳೆದುಕೊಂಡರು. ಕ್ಯಾಸೆಟ್‌ಗಳ ಮೂಲಕ ಅಮೋಘಸಿದ್ಧ ಕಥನವನ್ನು ಜನರ ಮನೆಬಾಗಿಲಿಗೆ ತಲುಪಿಸುವ ಕಾರ್ಯ ಮಾಡಿದರು. ಆದರೆ ದುರ್ದೈವ ವಶಾತ್ ಅವರು ಇದೇ ವರ್ಷದ (೨೦೧೦) ಬಾದಾಮಿ ಅಮವಾಸ್ಯೆಯ ಮುನ್ನಾದಿನ ವಿಧಿ ವಶರಾದರು.

ಇಂದಿನ ಒಡೆಯರು ಹೊಸದಾಗಿ ಯೋಚಿಸಬೇಕಾದ ಅವಶ್ಯಕತೆಯಿದೆ. ಅವರು ಮನಸ್ಸು ಮಾಡಿದರೆ ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳನ್ನು ತೆರೆಯಬಲ್ಲರು. ಉಚಿತ ಪ್ರಸಾದ ನಿಲಯಗಳನ್ನು ನಿರ್ಮಿಸಬಲ್ಲರು. ಸಮುದಾಯದ ಸರ್ವಾಂಗೀಣ ಬೆಳವಣಿಗೆಗೆ ಬೇಕಾದ ಏನೆಲ್ಲ ಯೋಜನೆಗಳನ್ನು ಹಾಕಿಕೊಳ್ಳಬಲ್ಲರು. ಆ ನಿಟ್ಟಿನಲ್ಲಿ ಒಡೆಯರು ಒಂದು ಸಂಘಟನೆಯನ್ನು ಮಾಡಿಕೊಂಡು ಒಂದೇ ವೇದಿಕೆಯ ಅಡಿಯಲ್ಲಿ ಸೇರಿಕೊಳ್ಳುವುದು ಇಂದಿನ ಜರೂರಿಯಾಗಿದೆ.

ಕೊನೆ ಟಿಪ್ಪಣಿಗಳು

೧. ಅಲ್ಲಮಪ್ರಭುದೇವರ ವಚನ ಸಂಪುಟ (ಸಂ) ಡಾ. ಬಿ.ವ್ಹಿ.ಮಲ್ಲಾಪುರ, ವಚನ ಸಂಖ್ಯೆ ೨೦೭

೨. ಅದೇ, ವಚನ ಸಂಖ್ಯೆ ೬೦

೩. ಹೆಚ್ಚಿನ ಮಾಹಿತಿಗೆ ನೋಡಿ: ನನ್ನದೇ ಲೇಖನ. ಕುರುಬರ ಗುರು ಒಡೆಯರ ಶಾಖೆಗಳು ಗ್ರಂಥ, ಕುರುಬರ ಗುರು ಒಡೆಯರು (ಸಂ) ಡಾ. ಎಫ್.ಟಿ.ಹಳ್ಳಿಕೇರಿ

೪. ಹಾಲ್ಮತೋತ್ತೇಜ ಪುರಾಣ, ರಸ್ತಾಪುರ ಭೀಮಕವಿ

೫. ತಗರ ಪವಾಡ (ಸಂ) ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ ಎಫ್.ಟಿ.ಹಳ್ಳಿಕೇರಿ

೬. ಹಾಲುಮತ ಪುರಾಣವು (ಸಂ) ಬಸವಣ್ಣೆಪ್ಪ ನೀಲಪ್ಪ ಹಳ್ಳುವಳ್ಳಿ, ಪುಟ ೫೭

೭. ಅದೇ, ಪುಟ ೬೭

೮. ಅದೇ, ಪುಟ ೬೮

೯. ಅದೇ, ಪುಟ ೪೫

೧೦. ಅದೇ, ಪುಟ ೫೦

೧೧. ಸಿದ್ಧಮಂಕ ಚರಿತ್ರೆ: (ಸಂ) ಡಾ.ಎಂ.ಎಂ.ಕಲಬುರ್ಗಿ, ಡಾ. ವೈ.ಸಿ ಭಾನುಮತಿ

೧೨. ಅದೇ, ಪು ಟ ೮೩

೧೩. ಅದೇ, ಪುಟ ೭೨

೧೪. ಅದೇ, ಪುಟ ೯೬

೧೫. ಹೇಳಿದವರು: ಸಂಗಯ್ಯ ಗುರುವಿನ ಹಾಗೂ ಕಾಡಯ್ಯ ಗುರುವಿನ ಸಾ ಸರೂರ, ತಾ. ಮುದ್ದೇಬಿಹಾಳ

೧೬. ಹಾಡಿದವರು: ಅವಧು ಬಸಸಿದ್ದ ಹಿರಕೂರ, ಸಾ. ಹತ್ತೂರ ತಾ. ದಕ್ಷಿಣ ಸೋಲಾಪುರ

೧೭. ಅದೇ

೧೮. ಈ ಮಾಹಿತಿ ಒದಗಿಸಿದವರು: ಸರೂರಿನ ಸಂಗಯ್ಯ ಗುರುವಿನ, ಕಾಡಯ್ಯ ಗುರುವಿನ, ಸಾ. ಸರೂರ, ತಾ. ಮುದ್ದೇಬಿಹಾಳ

೧೯. ಈ ಕಾಗದದ ಸುರಳಿ ದೊರೆತದ್ದು ಕಲಘುಟಗಿಯ ಸಿದ್ದಯ್ಯ ಗುರುಮಠ ಅವರ ಮನೆಯಲ್ಲಿ

೨೦. ಈ ವಿಷಯ ಹೇಳಿದವರು: ಸರೂರಿನ ಸಂಗಯ್ಯ ಗುರುವಿನ, ಕಾಡಯ್ಯ ಗುರುವಿನ

೨೧. ಗಮನಿಸಿ: ಲಿಂಗಾಯತ: ಒಳಪಂಗಡಗಳ ದಾಖಲೀಕರಣ (ಸಂ) ಡಾ.ಎಂ.ಎಂ. ಕಲಬುರ್ಗಿ

೨೨. ನೋಡಿ: ತಗರ ಪವಾಡ (ಸಂ) ಎಂ.ಎಂ. ಕಲಬುರ್ಗಿ, ಸಿ.ಕೆ.ಪರುಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ ಅನುಬಂಧ ತುರುವೆಕರೆ ತಾಮ್ರಶಾಸನ ೧, ಪುಟ ೧೦೩

೨೩. ಅದೇ, ಪುಟ ೧೦೦

೨೪. ಅದೇ, ಪುಟ ೧೦೦

೨೫. ಅದೇ, ಪುಟ ೧೦೨, ೧೦೩

೨೬. ಅದೇ, ಪುಟ ೧೦೩

೨೭. ಅದೇ, ಪುಟ ೧೦೪

೨೮. ಈ ಕಾಗದ ಸುರಳಿ ದೊರೆತದ್ದು: ಧಾರವಾಡ ಜಿಲ್ಲೆಯ ಕಲಘುಟಗಿ ತಾಲೂಕಿನ ಕಲಘುಟಗಿ ಗ್ರಾಮದ ಸಿದ್ಧಯ್ಯ ಗುರುಮಠ ಅವರ ಮನೆಯಲ್ಲಿ

೨೯. ಮೋಡಿ ಲಿಪಿಯಲ್ಲಿದ್ದ ನಿವಡ ಪತ್ರ ಒದಗಿಸಿದವರು ಸಿದ್ಧಯ್ಯ ಗುರುಮಠ, ಸಾ. ಕಲಘುಟಗಿ

೩೦. ಹಾಲ್ಮತೋತ್ತೇಜಕ ಪುರಾಣವು, ರಸ್ತಾಪುರ ಭೀಮಕವಿ, ಸಂಧಿ ಎರಡು, ಮೊದಲ ಮೂರು ಸಾಲುಗಳು

೩೧. ಹರಿಹರನ ರಗಳೆಗಳು, (ಸಂ) ಎಂ.ಎಂ.ಕಲಬುರ್ಗಿ, ಪುಟ ೨೪೯

೩೨. ಪುಳಜೆ ಶಾಸನ ಮಹಾರಾಷ್ಟ್ರದ ಕನ್ನಡ ಶಾಸನಗಳು ಡಾ. ಎಂ.ಎಂ.ಕಲಬುರ್ಗಿ, ಕನ್ನಡ ಅಧ್ಯಯನ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಪುಟ ೪೭

೩೩. ಹಾಡಿದವರು. ಅವಧು ಬನಸಿದ್ಧ ಹಿರಕೂರ ಸಾ ಹತ್ತೂರ , ತಾ. ದಕ್ಷಿಣ ಸೋಲಾಪುರ.

೩೪. K.G.Palika, Wikipedia, The free Encypedia page

೩೫. History and philosophy of Lingayat Relision: M.R.Sakkare, page 26

೩೬. ಕಪಾಲಿಕರು ಮತ್ತು ಕಾಳಾಮುಖರು, ಕಣ್ಮರೆಯಾದ ಎರಡು ಶೈವಸಂಪ್ರದಾಯಗಳು, ಮೂಲ: ಡೆವಿಡ್ ಎನ್. ಲಾರೆಂಜನ್, ಕನ್ನಡಕ್ಕೆ: ವಿರೂಪಾಕ್ಷ ಕುಲಕರ್ಣಿ, ಪುಟ ೧೦

೩೭. ಹಾಡಿದವರು: ಅವಧು ಬನಸಿದ್ಧ ಹಿರಕೂರ, ಸಾ ಹತ್ತೂರ

೩೮. Mahasiddi wikipedia

೩೯. ಹಾಡಿದವರು: ಲಕ್ಷ್ಮಣ ಐದೊಡ್ಡಿ, ಸಾ. ಬೆಳಗಲಿ, ತಾ. ಮುಧೋಳ, ಜಿ. ಬಾಗಲಕೋಟ

೪೦. ಹಾಡಿದವರು: ಅವಧು ಬನಸಿದ್ಧ ಹಿರಕೂರ, ಸಾ. ಹತ್ತೂರ, ತಾ. ದಕ್ಷಿಣ ಸೋಲಾಪುರ

೪೧. ಹಾಡಿದವರು: ಅದೇ

೪೨. ಮೋಡಿಲಿಪಿಯಲ್ಲಿರುವ ಥಳ ಪತ್ರ ಒದಗಿಸಿದವರು: ಮಾದಣ್ಣ ಒಡೆಯರ, ಸಾ. ಕುಂಚನೂರ ಹಾಗೂ ಸಿದಗೊಂಡ ಹಕ್ಕಿ, ಸಾ. ಮಂದ್ರೂಪ

೪೩. ಹಾಡಿದವರು: ಅವಧು ಬನಸಿದ್ಧ, ಹಿರಕೂರ, ಸಾ. ಹತ್ತೂರ

೪೪. ಈ ಮಾಹಿತಿ ನೀಡಿದವರು: ಮಾದೇವ ವಿಠಲ ಬಡಚಿ, ಸಾ. ಬೆಳಗಲಿ, ತಾ. ಮುಧೋಳ, ಜಿ. ಬಾಗಲಕೋಟೆ

೪೫. ಹಾಡಿದವರು: ಮದಗೊಂಡ ಮಾರಾಯರು, ಮುಮ್ಮಟಗುಡ್ಡ ಅರಕೇರಿ, ತಾ. ವಿಜಾಪುರ

೪೬. ವಿವರಕ್ಕೆ ನೋಡಿ: 'ಸಿದ್ಧಸಿರಿ': ಮದಗೊಂಡ ಮಾರಾಯರು, ಪುಟ ೮೨ರಿಂದ ೯೨ರವರೆಗೆ

೪೭. ವಿವರಣೆಗೆ ನೋಡಿ: 'ಸಿದ್ಧಸಿರಿ': ಮದಗೊಂಡ ಮಾರಾಯರು ಪುಟ ೧೦೪ರಿಂದ ೧೦೭

೪೮. ನಾಥ ಸಂಪ್ರದಾಯದ ಇತಿಹಾಸ: ಮೂಲ: ಡಾ. ರಾಮಚಂದ್ರ ಚಿಂತಾಮಣಿ ಢೇರೆ, ಅನುವಾದ: ಚಂದ್ರಕಾಂತ ಪೋಕಳೆ, ಪುಟ ೪

೪೯. ನೋಡಿ: ಕರ್ನಾಟಕದ ನಾಥ ಪಂಥ, ರಹಮತ್ ತರಿಕೇರಿ, ಪುಟ ೧೬೫

೫೦. ಹಾಡಿದವರು: ಅವಧು ಬನಸಿದ್ಧ, ಹಿರಕೂರ ಸಾ. ಹತ್ತೂರ, ತಾ. ದಕ್ಷಿಣ ಸೋಲಾಪುರ

೫೧. ನೋಡಿ: ಹಾಲಕೆನೆ (ಲೇಖನ) ಕುರುಬರ ಗೋತ್ರಗಳು ಹಾಗೂ ಬೆಡಗುಗಳು, ಬೋ.ನಾ.ಬಸವರಾಜ, ಪುಟ ೧೩೫ರಿಂದ ೧೫೯ ಹಾಗೂ ಕುರುಬರ ಹೆಜ್ಜೆಗಳು ಚಂದ್ರಕಾಂತ ಬಿಜ್ಜರಗಿ ಪುಟ ೧೪೩

೫೨. ಅವಧು ಬನಸಿದ್ಧ ಹಿರಕೂರ ಹಾಡಿದ ಕಥನ ಕಾವ್ಯವನ್ನು ಆಧರಿಸಿ

೫೩. ಹಾಡಿದವರು: ಅವಧು ಬನಸಿದ್ಧ, ಹಿರಕೂರ, ಸಾ. ಹತ್ತೂರ, ತಾ. ದಕ್ಷಿಣ ಸೋಲಾಪುರ

೫೪. ಅದೇ

೫೫. ಅದೇ

೫೬. ಅದೇ

೫೭. ೧೦೧ ಸಿದ್ಧರ ನಾಮಾವಳಿ ಮತ್ತು ೧೧ ಮಂಗಳಾರುತಿಗಳು, ರೇವಣಸಿದ್ಧ ಬ. ದೊಡಮನಿ, ಸಾ. ಅಕ್ಕಲಕೋಟೆ

೫೮. ಈ ಮಾಹಿತಿ ನೀಡಿದವರು: ಅಚೇಗಾವಿಯ ಶಾವರಸಿದ್ಧ ಧರ್ಮಣ್ಣ ಜಳಗೌಡರ ಗುರುಗಳು

೫೯. ಈ ಮಾಹಿತಿ ನೀಡಿದವರು: ಚಿಕ್ಕೋಡಿ ತಾಲೂಕಿನ ಕೆರೂರ ಗ್ರಾಮದ ಅರ್‍ಯಾಣ ಸಿದ್ಧ ಗುಡಿಯ ಪೂಜಾರಿಗಳಾದ ಚಿದಾನಂದ ಸಿದ್ಧಪ್ಪ ಒಡೆಯರ ಹಾಗೂ ಅವರ ಮಗನಾದ ಬಸವಣ್ಣೆಪ್ಪ ಚಿದಾನಂದ ಒಡೆಯರು

೬೦. ಈ ಮಾಹಿತಿ ನೀಡಿದವರು: ಅಮೋಗೆಪ್ಪ ಒಡೆಯರ, ಸಾ. ಕುಂಚನೂರ, ತಾ. ಜಮಖಂಡಿ

೬೧. ಹಾಡಿದವರು: ಅವಧು ಬನಸಿದ್ಧ ಹಿರಕೂರ, ಸಾ. ಹತ್ತೂರ, ತಾ. ದಕ್ಷಿಣ ಸೋಲಾಪುರ

ಅಧ್ಯಾಯ : ನಾಲ್ಕು

ಜಾತ್ರೆ-ಉತ್ಸವಗಳು; ನಂಬಿಕೆ-ಆಚರಣೆಗಳು

ಅಧ್ಯಾಯ : ನಾಲ್ಕು

ಜಾತ್ರೆ-ಉತ್ಸವಗಳು; ನಂಬಿಕೆ-ಆಚರಣೆಗಳು

೪.೧ ಜಾತ್ರೆ-ಉತ್ಸವಗಳು

ಅಮೋಘಸಿದ್ಧ ಪರಂಪರೆಯ ಸಿದ್ಧರ ಮೇಲೆ ಜನ ಸಮುದಾಯದ ನಂಬಿಕೆಯ ವಿಸ್ತಾರವನ್ನು ಸೂಚಿಸುವ ಮಾತೊಂದಿದೆ "ಕೋಳಿ ಕೂಗಿದ ಊರಲ್ಲೆಲ್ಲ ಅಮೋಘಸಿದ್ಧ ಪರಂಪರೆಯ ಸಿದ್ಧರ ಗುಡಿಗಳಿವೆ." ಈ ಮಾತು ಅಕ್ಷರಶಃ ಸತ್ಯವೆನ್ನುವ ವಿಷಯ ಕ್ಷೇತ್ರಕಾರ್ಯಕೈಗೊಂಡ ಈ ಅಧ್ಯಯನಕಾರನಿಗೆ ಮನವರಿಕೆಯಾಗಿದೆ. ವಿಜಾಪುರದಿಂದ ಉತ್ತರಕ್ಕೆ ಹದಿನೈದು ಕಿಲೋಮೀಟರ್ ದೂರದಲ್ಲಿರುವ ಮುಮ್ಮೆಟಗುಡ್ಡವನ್ನು ಕೇಂದ್ರವನ್ನಾಗಿಸಿಕೊಂಡು, ಅಲ್ಲಿಂದ ಉತ್ತರಕ್ಕೆ ಮೂವತ್ತು ಮೂವತ್ತೈದು ಕಿಲೋಮೀಟರ್ ದೂರದಲ್ಲಿರುವ ಜತ್ತ ತಾಲೂಕಿನ ಭೀವರಗಿ ಗ್ರಾಮದಲ್ಲಿ ಗುರುಮನೆಯನ್ನಾಗಿಸಿಕೊಂಡು ಅಮೋಘಸಿದ್ಧನ ಮಕ್ಕಳು ಹಾಗೂ ಮೊಮ್ಮಕ್ಕಳು ನಾಲ್ಕೂ ದಿಕ್ಕಿಗೆ ನಾಡ ಶೋಧಮಾಡಲು ಹಾಗೂ ನಾಡಗೌಡಕಿ ಗಳಿಸಲು ಹೋಗಿರುವುದರಿಂದ ಕರ್ನಾಟಕ ಮಹಾರಾಷ್ಟ್ರದ ಗಡಿಭಾಗದಲ್ಲಿ ವಿಪುಲವಾಗಿ ಇವರ ಗುಡಿಗಳು ಸ್ಥಾಪನಡಗೊಂಡಿವೆ. ಬಾಗಲಕೋಟ, ಬೀಳಗಿ, ಜಮಖಂಡಿ, ಅಥಣಿ, ಸೌದತ್ತಿ, ಗೋಕಾಕ, ಚಿಕ್ಕೋಡಿ, ರಾಯಭಾಗ, ಸಂಕೇಶ್ವರ, ವಿಜಾಪುರ, ಸಿಂದಗಿ, ಜೇವರಗಿ, ಜತ್ತ, ಸಾಂಗ್ಲಿ, ಶೀರೋಳ, ದ.ಸೋಲಾಪುರ, ಮಂಗಳವೇಡ, ಖಾನಾಪುರ ಈ ಎಲ್ಲಾ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅಮೋಘ ಸಿದ್ಧ ಪರಂಪರೆಯ ಸಿದ್ಧರ ಗುಡಿಗಳಿವೆ.

ಗುಡಿಗಳು ಅಂದ ಮೇಲೆ ಅವುಗಳ ಸುತ್ತಲೂ ಜಾತ್ರೆ ಉತ್ಸವ; ನಂಬಿಕೆ ಆಚರಣೆಗಳು ಹುಟ್ಟಿಕೊಳ್ಳುವುದು ಸಹಜ. ಈ ಹಿನ್ನಲೆಯಲ್ಲಿ ನೋಡಿದಾಗ ವರ್ಷದ ಹನ್ನೆರಡೂ ತಿಂಗಳು ಹುಣ್ಣಿಮೆ ಅಮವಾಸ್ಯೆಗಳ ಸಂದರ್ಭದಲ್ಲಿ ಈ ಸಿದ್ಧರ ಹೆಸರಿನಲ್ಲಿ ಜಾತ್ರೆ-ಉತ್ಸವಗಳು ನಡೆದಿರುವ ಸತ್ಯ ಗೋಚರಿಸುತ್ತದೆ.

ಉಗಾದಿಯಂದು ಉಮದಿಯಲ್ಲಿ ಮಲಕಾರಿಸಿದ್ಧ, ಡೋಣಜದ ಮಾಸಿದ್ಧ, ಭೀವರಗಿ ಬಿಳಿಯಾನಿಸಿದ್ಧ ಇವರ ಜಾತ್ರೆ

[illegible]

[illegible]

[illegible]

[illegible]

[illegible]

[illegible]

[illegible]

[illegible]

ಚೈತ್ರಶುದ್ಧ ಏಕಾದಶಿಯಂದು ಶಿಂಗಣಾಪುರದ ಬುಳ್ಳೋಗಿ ಸಿದ್ಧನಜಾತ್ರೆ

ಅಕ್ಷತ್ತದಿಗೆ ಅಮವಾಸ್ಯೆಗೆ ಮೊರಬದ ಓಗಸಿದ್ಧ, ಬೆಳ್ಳುಂಡಗಿ ಹಳ್ಳದ ಸನ್ಯಾಸಿ ಮಲಕಾರಿಸಿದ್ಧನ ಜಾತ್ರೆ

ಬಾದಾಮಿ ಅಮವಾಸ್ಯೆಯಂದು ಕಲ್ಲೂರ ಹಾಗೂ ಚಬನೂರಗಳಲ್ಲಿ ಅಮೋಘಸಿದ್ಧನ ದೊಡ್ಡದೇವರ ಹಾಗೂ ಸಣ್ಣದೇವರ ಜಾತ್ರೆ, ಶ್ರಾವಣಮಾಸದ ಮೊದಲ ಸೋಮವಾರ ಕವಲಗುಡ್ಡ ಕರಿಯೋಗಿಸಿದ್ಧ, ಸಿದ್ದಾಪುರದ ಓಗಸಿದ್ಧನ ಜಾತ್ರೆ

ಶ್ರಾವಣ ಮಾಸದ ಮೂರನೆಯ ಸೋಮವಾರ ಬ್ರಹ್ಮನಾಳ ಜಿತಾಸಿದ್ಧನ ಜಾತ್ರೆ

ಶ್ರಾವಣದ ನಾಲ್ಕನೆಯ ಸೋಮವಾರ ಹೊನ್ನವೋಳದ ಓಗಸಿದ್ಧನ ಜಾತ್ರೆ

ಕಡೇ ಶ್ರಾವಣ ಸೋಮವಾರದಂದು ಅಥಣಿ ಮಳೆಗಾಲಸಿದ್ಧ, ಗೋಕಾಕ ತಾಲೂಕಿನ ರಾಜಪುರದ ಹಾಲಸಿದ್ಧನ ಜಾತ್ರೆ

ಬೆನಕನ ಅಮವಾಸ್ಯೆಗೆ ಸೋಲಾಪುರದ ಮಾಸಿದ್ಧನ ಜಾತ್ರೆ, ಉತ್ತರಿ ಮಳೆಗೆ ಮುಧೋಳ ತಾಲೂಕ ಬೆಳಗಲಿ ಗ್ರಾಮದ ಮಳೆಮಲ್ಲಪ್ಪನ ಜಾತ್ರೆ

ದೀಪಾವಳಿಯಂದು ಉಮದಿಮಲಕಾರಿಸಿದ್ಧ, ಡೋಣಜದ ಮಾಸಿದ್ಧ, ಭೀವರಗಿ ಬಿಳಿಯಾನಿಸಿದ್ಧ, ಸಿಂದಗಿ ತಾಲೂಕಿನ ಹಂಚಿನಾಳ ಗ್ರಾಮದ ಗರಸಿದ್ಧನ ಜಾತ್ರೆ

ಛಟ್ಟಿ ಅಮವಾಸ್ಯೆಗೆ ಅರಕೇರಿ ಅಮೋಘಸಿದ್ಧನ ಜಾತ್ರೆ ಹಾಗೂ ಅಚೇಗಾವಿ ಶೀಲಿಸಿದ್ಧನ ಜಾತ್ರೆ

ಮಕರ ಸಂಕ್ರಮಣದಂದು ಐನಾಪುರ ಕೆರೆಸಿದ್ಧ, ಹತ್ತೂರ ಓಗಣ್ಣಮುತ್ಯಾ, ಮಂದ್ರೂಪ ಮಳೆಗಾಲಸಿದ್ಧನ ಜಾತ್ರೆ

ಶಿವರಾತ್ರಿಯಂದು ಸದಲಗಾದ ಅರ್ಯಾಣಸಿದ್ಧ, ತೆರೆವಾಡ ಮಂಗರಾಯ, ಉದಗಟ್ಟಿ ಅಮೋಘಸಿದ್ಧ, ಕೆರೂರ ಅರ್ಯಾಣಸಿದ್ಧನ ಜಾತ್ರೆ ನಡೆಯುತ್ತದೆ.

ಪ್ರತಿಯೊಂದು ಜಾತ್ರೆಯೂ ವಿಶಿಷ್ಟವಾದ ಆಚರಣೆಯ ಮೂಲಕ ರೈತಾಪಿ ಜನರ ನಿರೀಕ್ಷೆ ಭರವಸೆಗಳೊಂದಿಗೆ ತಳಕು ಹಾಕಿಕೊಂಡು ಬದುಕು-ಜಾತ್ರೆಗಳು ಅಭಿನ್ನವೆಂಬುದನ್ನು ಸಾಬೀತುಪಡಿಸುತ್ತವೆ.

೪.೧.೧ ಕಲ್ಲೂರು

“ಅರಕೇರಿ ಅರಮನಿ, ಭೀವರಗಿ ಗುರುಮನಿ, ಮಾಯ ಮಕಣಾಪುರ ಸಿಂಹಾಸನ (ಶಿವಸ್ಥಾನ) ಗದ್ದಿಗೆ, ಕಲ್ಲೂರು ಕಡಿಮಠ” ವೆಂಬ ಪ್ರಸಿದ್ಧವಾದ ಈ ಘೋಷವಾಕ್ಯ ಈ ಪರಂಪರೆಯ ತಾತ್ವಿಕ ನಡೆಯನ್ನು ಗುರುತಿಸಲು ಸಹಕಾರಿಯಾಗಿದೆ. ಈ ಸಿದ್ಧರಿಗೆ ಅರಕೇರಿ ಅರಮನೆ ಅಂದರೆ ಅರಿವಿನಮನೆ. ಈ ಪರಿಸರದಲ್ಲಿಯೇ ಅಮೋಘಸಿದ್ಧ ತನ್ನ ಅರಿವನ್ನು ವಿಸ್ತಾರಗೊಳಿಸಿಕೊಂಡಿದ್ದು, ಸಾಧನೆಯ ಹಲವಾರು ಹಂತಗಳನ್ನು ತಲುಪಿದನು.

[illegible]

ಚಲನಶೀಲ ಅರಿವಿನ ಮನೆಯಿಂದ ಅಮೋಘಸಿದ್ಧನ ಎರಡನೆಯ ತಲೆಮಾರು ಭೀವರಗಿಯಲ್ಲಿ 'ಗುರು ಮನೆ' ಸ್ಥಾಪಿಸುವ ಮೂಲಕ ಸ್ಥಾವರ ಗೊಂಡರು ಎಂದು ಸೂಚಿಸಲಾಗಿದೆ. ಅದರ ಒಂದು ಭಾಗವೆನ್ನುವಂತೆ ಮಕಣಾಪುರದಲ್ಲಿ ಗುರುಗೌರಿ ಸೋಮಲಿಂಗನನ್ನು ಪಕ್ಕಾ ಸ್ಥಾವರಗೊಳಿಸಿ ಗದ್ದಿಗೆಯನ್ನು ಸ್ಥಾಪಿಸಲಾಯಿತು. ಈ ಪರಂಪರೆ ತಲುಪಿದ ಅಂತಿಮ ಸ್ವರೂಪ ಸೂಚಿಸಲು 'ಕಲ್ಲೂರ ಕಡಿ ಮಠ' ಎಂಬ ಮಾತು ಬಂದಿದೆ. ಕಲ್ಲು ಹಾಸಿಗೆ ಮಾಡಿ ಕಂಬ ಕೋಲುಗಳಿಲ್ಲದೆ ಕಂಬಳಿ ಡೇರೆಹೊಡೆದ ಬಯಲು ಪ್ರೀತಿಯ ಅಮೋಘಸಿದ್ಧ ಪರಂಪರೆ ಸಾಂಸ್ಥಿಕ ರೂಪ ಪಡೆದು ಮಠವನ್ನು ಸ್ಥಾಪಿಸಿಕೊಂಡರುವುದನ್ನು ಈ ಮಾತು ಸೂಚಿಸುತ್ತದೆ. 'ಕಲ್ಲೂರು ಕಡಿ ಮಠ' ಅನ್ನುತ್ತೀರಲ್ಲಾ ಹಾಗೆಂದರೇನು ಎಂದು ಅಲ್ಲಿನ ಒಡೆಯರನ್ನು ಕೇಳಿದರೆ ಅಮೋಘಸಿದ್ಧನ ಮಠಗಳು ಕಲ್ಲೂರನ್ನು ದಾಟಿ ಗುಲಬರ್ಗಾ ಜಿಲ್ಲೆಯಲ್ಲಿ ಹಬ್ಬಿಲ್ಲ. ಇದೇ ಕಡೇ ಊರು, ಆದ್ದರಿಂದ ಕಲ್ಲೂರ ಕಡಿ ಮಠವೆನ್ನುತ್ತೇವೆ ಎಂದು ವಿವರಣೆ ಕೊಡುತ್ತಾರೆ. ಹೀಗೆ ಯೋಚಿಸಿದರೆ ಅವರ ವಿವರಣೆ ಸರಿಯಾದುದೇ ಅನ್ನಿಸುತ್ತದೆ. ಆದರೆ ಕಲ್ಲೂರಿನ ಒಡೆಯರು ಹೇಳುವ ತೋಂಡಿ ಕತೆಯನ್ನು ಕೇಳಿದರೆ ಮೇಲಿನ ವಿವರಣೆ ಮೀರಿದ ಇನ್ನು ಒಂದು ಅಂಶ ಇದ್ದಿರಬಹುದೆಂದು ತಿಳಿದುಬರುತ್ತದೆ. ಅವರು ಹೇಳುವ ತೋಂಡಿ ಕತೆ ಹೀಗಿದೆ:

ಅಮೋಘಸಿದ್ಧನ ನಾಲ್ಕನೆಯ ವರವಿನ ಮಗನ ಹೆಸರು ಕನ್ನಮುತ್ತ್ಯಾ. ಅವನ ಮೊಮ್ಮಗನೊಬ್ಬನ ಹೆಸರು ಮಲ್ಲಾ ಒಡೆಯ. ಈ ಮಲ್ಲಾ ಒಡೆಯ ಕಲ್ಯಾಣದ ಕಡೆಗೆ ಹೊರಟಾಗ ದಾರಿಮಧ್ಯದಲ್ಲಿ ಜೇವರಗಿ ತಾಲೂಕಿನ ಕಲ್ಲೂರಿನಲ್ಲಿ ತಂಗುತ್ತಾನೆ. ಆ ಊರಿನ ಕುರುಬಗೌಡನ ಹೊಲದಲ್ಲಿ ಒಡ್ಡು ದುರಸ್ತಿ ಕೆಲಸ ನಡೆದಿರುತ್ತದೆ. ಪ್ರತಿವರ್ಷವೂ ಈ ಒಡ್ಡು ಒಡೆಯುತ್ತಿರುತ್ತದೆ. ಅದನ್ನು ಗಮನಿಸಿದ ಮಲ್ಲಾ ಒಡೆಯ ಮತ್ತೆ ಒಡೆಯದ ಹಾಗೆ ಒಡ್ಡು ನಿರ್ಮಿಸುವ ತಂತ್ರ ಹೇಳಿಕೊಡುತ್ತಾನೆ. ಅದೂ ಅಲ್ಲದೆ ಸಂತಾನಫಲವಿಲ್ಲದ ಕುರುಬಗೌಡನಿಗೆ ಸಂತಾನ ನೀಡುತ್ತಾನೆ. ಕುರುಬಗೌಡನಿಗೆ ಮುಂದೆ ಹುಟ್ಟುವ ಹೆಣ್ಣು ಮಗುವನ್ನು ತನಗೇ ಕೊಟ್ಟು ಮದುವೆ ಮಾಡಿಸಬೇಕೆಂದು ವಚನ ತೆಗೆದುಕೊಳ್ಳುತ್ತಾನೆ. ಮಲ್ಲಾ ಒಡೆಯ ಹೇಳಿದಂತೆ ಕುರುಬಗೌಡನಿಗೆ ಹೆಣ್ಣುಮಗು ಜನಿಸುತ್ತದೆ. ಅವಳು ಬೆಳೆದು ದೊಡ್ಡವಳೂ ಆಗುತ್ತಾಳೆ. ಕುರುಬಗೌಡನಿಗೆ ತಾನು ಕೊಟ್ಟ ವಚನ ಮರತೇ ಹೋಗಿರುತ್ತದೆ. ಆದರೆ ಮಲ್ಲಾ ಒಡೆಯ ಮರೆತಿರುವುದಿಲ್ಲ. ಒಂದು ರಾತ್ರಿ ಮಾಯರೂಪದಲ್ಲಿ ಕುರುಬಗೌಡನ ಮನೆಯೊಳಗೆ ಬಂದು ಅವನ ಮಗಳಿಗೆ ಅರಿಷಿಣಹಚ್ಚಿದ, ಹಣೆಗೆ ಕುಂಕುಮವಿಟ್ಟ ಕೊರಳಿಗೆ ತಾಳಿಕಟ್ಟಿ ಕಾಲಿಗೆ ಉಂಗುರ ತೊಡಿಸಿದ. ಮಗಳು ಕಸ್ತೂರಾದೇವಿ ಕೆಲ ದಿವಸಗಳಲ್ಲಿ ಗರ್ಭಧರಿಸುತ್ತಾಳೆ. ತಂದೆ-ತಾಯಂದಿರ ವಿರೋಧದ ನಡುವೆಯೂ ಅವಳು ಒಂದು ಪಾಪವಿಲ್ಲದ ಪಿಂಡ ವಿಭೂತಿ ಉಂಡಿಗೆ ಜನ್ಮ ನೀಡುತ್ತಾಳೆ. ಆ ವಿಭೂತಿ ಉಂಡೆಯನ್ನೇ ತೊಟ್ಟಿಲಲ್ಲಿ ಹಾಕಿ ನಾಮಕರಣ ಮಾಡಲು ನಿರ್ಧರಿಸುತ್ತಾರೆ. ನಾಮಕರಣದ ಸಮಯದಲ್ಲಿ ವಿಭೂತಿ ಉಂಡೆಯಿಂದ ಕೂಸೊಂದು ಸಿಡಿದು ಬರುತ್ತದೆ. ಅವನಿಗೆ ಮಳೆಮಲ್ಲಪ್ಪ ಎಂದು ನಾಮಕರಣ ಮಾಡುತ್ತಾರೆ.[೧]

ಈ ಕತೆಯನ್ನು ರೂಪಕವೆಂದು ಭಾವಿಸುವುದಾರೆ ಭಂಡಾರ ಸಂಸ್ಕೃತಿಯ ಮಲ್ಲಾ ಒಡೆಯ ಕಲ್ಯಾಣದ ಕಡೆಗೆ ಬಂದು ವಿಭೂತಿ ಸಂಸ್ಕೃತಿಗೆ ಒಲಿದಿರಬಹುದು. ಇಲ್ಲವೆ ಭಂಡಾರ ಸಂಸ್ಕೃತಿಯ ಮಲ್ಲಾ ಒಡೆಯರ ಮಗ ಮಳಿಮಲ್ಲಪ್ಪ ವಿಭೂತಿ ಸಂಸ್ಕೃತಿಗೆ ಒಲಿದಿರಬಹುದು ಎಂಬುದನ್ನು ಸೂಚಿಸುತ್ತದೆ. ಹೀಗಾಗಿ ಕಲ್ಲೂರ ಕಡಿ 'ಮಠ' ಎನ್ನಿಸಿಕೊಂಡಿರಬಹುದು.

೪.೧.೧.೧ ಎರಡು ಮಠಗಳು : ಕಲ್ಲೂರಿನ ಜಾತ್ರೆ ಬಾದಾಮಿ ಅಮವಾಸ್ಯೆಗೆ ಜರಗುತ್ತದೆ. ಇದು ಒಟ್ಟು ಮೂರು ದಿವಸಗಳ ಜಾತ್ರೆ. ಮೂರು ದಿವಸಗಳ ಜಾತ್ರೆಯಲ್ಲಿ ಈ ಊರಿನ ಎರಡು ಮಠಗಳ ದೇವರು ಪಾಲ್ಗೊಳ್ಳುತ್ತವೆ. ಇಲ್ಲಿನ ಎರಡು ಮಠಗಳಲ್ಲಿ ಒಂದು ಮೇಲಿನ ಮಠ ಹಾಗೂ ಇನ್ನೊಂದು ಕೆಳಗಿನಮಠ. ಮೇಲೆ ಉಲ್ಲೇಖಿಸಿರುವ ಕತೆ ಮೇಲಿನ ಮಠಕ್ಕೆ ಸಂಬಂಧಿಸಿದುದಾಗಿದೆ ಹಾಗೂ ಅವರು ತಮ್ಮನ್ನು ಕನ್ನಮುತ್ಯಾನ ಬಡ್ಡಿಯವರು ಎಂದು ಗುರುತಿಸಿಕೊಳ್ಳುತ್ತಾರೆ. ಕೆಳಗಿನ ಮಠದವರು ತಮ್ಮನ್ನು ಅವಧುಸಿದ್ಧನ ವಂಶದವರೆಂದು ಹೇಳಿಕೊಳ್ಳುತ್ತಾರೆ ಹಾಗೂ ಆ ಕುರಿತು ಅವರಲ್ಲಿಯೂ ಒಂದು ತೋಂಡಿ ಕತೆಯಿದೆ. ಅವತಾರ ಅವಧು ಸಿದ್ಧನ ಮಕ್ಕಳಲ್ಲಿ ಕಡಿಹುಟ್ಟ ಕೆಂಚಸೋಮಣ್ಣ. ಅವನ ಮಗ ಗೇನಸಿದ್ಧ ದಕ್ಷಿಣ ಸೋಲಾಪುರ ತಾಲೂಕಿನ ಕುಂಭಾರಿಯಲ್ಲಿ ನೆಲೆಸಿದ್ದ. ಅವನ ವಂಶದವರೊಬ್ಬರು ಕಲ್ಲೊಂದನ್ನು ಲೆಕ್ಕಿಬುಟ್ಟಿಯಲ್ಲಿ ಹೊತ್ತುಕೊಂಡು ಈ ಊರಿಗೆ ಬಂದರಂತೆ. ಆ ಕಲ್ಲಿಗೆ ಮಾತನಾಡುವ ಶಕ್ತಿ ಇತ್ತಂತೆ. ಆ ಕಲ್ಲಿನ ಮಾತನ್ನು ಗೌಪ್ಯವಾಗಿ ಕೇಳಿಸಿಕೊಂಡು ಪ್ರತಿ ಬಾದಾಮಿ ಅಮವಾಸ್ಯೆಗೆ ಹೇಳಿಕೆ ಮಾಡಲು ಪ್ರಾರಂಭಿಸಿದರಂತೆ. 'ಕಲ್ಲೂರು ಹೇಳಿಕೆ' ಎಂದು ಈ ಭಾಗದಲ್ಲಿ ತುಂಬ ಪ್ರಸಿದ್ಧಿಯನ್ನು ಪಡೆದಿವೆ. ಹೀಗಾಗಿ ಕಲ್ಲಿನ ಊರು ಕಲ್ಲೂರು ಆಯಿತೆಂದು ಹೇಳುತ್ತಾರೆ.[೨]

ಒಟ್ಟಾರೆ ಇಲ್ಲಿನ ಎರಡು ಕತೆಗಳು ಇಲ್ಲಿನ ಎರಡು ಮಠಗಳಿಗೆ ಭಿನ್ನ ಭಿನ್ನ ಮೂಲ ಹೇಳಲು ಹೊರಟಂತೆ ತೋರುತ್ತವೆ. ಕೆಳಗಿನ ಮಠದವರು ಪ್ರಾಕೃತ ಶಿಲೆ(ಕಲ್ಲು)ಯ ಮೂಲ ಹೇಳಿದರೆ, ಮೇಲಿನ ಮಠದವರು ಸಂಸ್ಕೃತ (ಸಂಸ್ಕಾರಗೊಂಡ) ವಿಭೂತಿ ಮೂಲ ಹೇಳಿಕೊಳ್ಳುತ್ತಿದ್ದಾರೆ ಅನ್ನಿಸುತ್ತದೆ.

ಕೆಳಗಿನ ಮಠ ಹಾಗೂ ಮೇಲಿನ ಮಠಗಳ ಕುರಿತು ಇನ್ನೂ ಒಂದು ವದಂತಿ ಇದೆ ಕಲಬುರ್ಗಿಯ ಬಂದೇ ನವಾಜ ಹಾಗೂ ಕಲ್ಲೂರಿನ ಮಲ್ಲಾ ಒಡೆಯರು ಸ್ನೇಹಿತರು. ಅವರಿಬ್ಬರ ಸ್ನೇಹದ ಕುರುಹಾಗಿ ಅನೇಕ ನಂಬಿಕೆ ಆಚರಣೆಗಳು ಜಾತ್ರೆಯ ಸಮಯದಲ್ಲಿ ನಡೆಯುತ್ತವೆ. ಜಾತ್ರೆಯ ಸಂದರ್ಭದಲ್ಲಿ ದೇವರು ಹಸೆಕೊಡ್ರುವ ವೇಳೆಯಲ್ಲಿ ದೇವರಿಗೆ ಮಾದಲಿ ನೈವೇದ್ಯ ಹಿಡಿಯುತ್ತಾರೆ. ಅದೂ ಅಲ್ಲದೆ ಬಂದೇ ನವಾಜರು ಮೇಲಿನ ಮಠಕ್ಕೆ ತನ್ನ ನಾಲ್ಕು ಮಿನಾರುಗಳನ್ನು ಕೊಟ್ಟು ಆ ಗುಡಿಯ ಗೋಪುರವನ್ನು ತಾನು ತೆಗೆದುಕೊಂಡನಂತೆ.[೩] ಹೀಗಾಗಿ ಕಲ್ಲೂರಿನ ಮೇಲಿನ ಮಠಕ್ಕೆ ಇಸ್ಲಾಂ ಸಂಸ್ಕೃತಿಯ ಮಿನಾರುಗಳು ಹಾಗೂ ಬಂದೇ ನವಾಬ ದರ್ಗಾಕ್ಕೆ ಹಿಂದು ದೇವಾಲಯದ ಗೋಪುರ ಕಳಸವಿರುವುದನ್ನು ನೋಡಬಹುದು.

[illegible]

[illegible]

[illegible]

೪.೧.೧.೨ ಪಾಲಕಿ ತಯಾರಿ : ಕಲ್ಲೂರಿನ ಪಾಲಕಿಗಳು ಯಾವುದೇ ಪರವೂರಿಗೆ ಹೋಗುವುದಿಲ್ಲ. ಆದರೆ ಬಾದಾಮಿ ಅಮವಾಸ್ಯೆ ಇನ್ನೂ ಒಂದು ತಿಂಗಳು ಇದೆ ಎನ್ನುವಾಗ ಪಕ್ಕದ ಕಲ್ಲೂರು (ಬಿ) ಗ್ರಾಮಕ್ಕೆ ಅವುಗಳನ್ನು ತೆಗೆದುಕೊಂಡು ಹೋಗಲಾಗುತ್ತದೆ. ಕಲ್ಲೂರು (ಬಿ) ಇಲ್ಲಿಂದ ಮೂರು ಕಿಲೋಮೀಟರ್ ದೂರದಲ್ಲಿದೆ. ಬಹುಶಃ ಕಲ್ಲೂರ (ಬಿ) ಗ್ರಾಮವೇ ಮೂಲ ಕಲ್ಲೂರ ಆಗಿರಬೇಕು. ಕಾರಣಾಂತರದಿಂದ ಇನ್ನೊಂದು ಕಲ್ಲೂರು ರೂಪಗೊಂಡಿರಬೇಕು. ಹೊಸ ಕಲ್ಲೂರಿಗೆ ಬಂದು ನೆಲೆಸಿರುವ ದೇವರುಗಳೂ ಜಾತ್ರೆಯ ಸಮಯಕ್ಕೆ ತಮ್ಮ ಮೂಲಸ್ಥಳದಿಂದಲೇ ಆಚರಣೆ ಪ್ರಾರಂಭಿಸುವುದರ ಸಂಕೇತ ಇದಾಗಿರಬಹುದು. ಬಾದಾಮಿ ಅಮವಾಸ್ಯೆ ಇನ್ನೂ ನಾಲ್ಕು ದಿವಸ ಇದೆ ಅನ್ನುವಾಗ ಮರಳಿ ಹೊಸ ಕಲ್ಲೂರಿಗೆ ಬರುತ್ತವೆ.

೪.೧.೧.೩ ಹಸಿ ಕೂಡ್ರುವುದು : ಅಮವಾಸ್ಯೆಯ ಹಿಂದಿನ ದಿವಸ, ಅಮವಾಸ್ಯೆ ಹಾಗೂ ಅಮವಾಸ್ಯೆಯ ಮರುದಿವಸ -ಹೀಗೆ ಮೂರು ದಿವಸ ಜಾತ್ರೆ ನಡೆಯುತ್ತದೆ. ಅಮವಾಸ್ಯೆಯ ಹಿಂದಿನ ದಿವಸ ಎರಡೂ ಗುಡಿಗಳಲ್ಲಿ ದೇವರು ಹಸಿ ಕೂಡ್ರುವ ಕಾರ್ಯಕ್ರಮವಿರುತ್ತದೆ. ಹಸಿಕೂಡ್ರುವುದು ಅಂದರೆ ದೇವರನ್ನು ಹಸೆಯ ಮೇಲೆ ಕೂಡ್ರಿಸುವುದು ಎಂದರ್ಥ. ಇಲ್ಲಿ ದೇವರು ಎಂದರೆ ದೇವರ ಮುಖಗಳು. ಈ ಮುಖಗಳನ್ನು ಹಸೆಯ ಮೇಲೆ ಕೂಡ್ರಿಸುತ್ತಾರೆ. ಹಸೆಯ ಮೇಲೆ ಕೂಡ್ರುವ ದಿವಸಗಳನ್ನು ಹೊರತುಪಡಿಸಿ ಉಳಿದ ದಿವಸಗಳಲ್ಲಿ ದೇವರ ಕಟ್ಟಿಗೆಯ ಮುಖಗಳನ್ನು ದಿಂಡಿಗಳಲ್ಲಿ ಇಟ್ಟಿರುತ್ತಾರೆ. ದಿಂಡಿಗಳೆಂದರೆ ತಾಮ್ರ ಲೋಹದಿಂದ ತಯಾರಿಸಿದ ಕೊಳವೆಯಾಕಾರದ ಕರಂಡಿಕೆಗಳು. ವರ್ಷಕ್ಕೊಂದೇ ಸಲ ಹೊರಬರುವ ಈ ಮುಖಗಳ ಬಣ್ಣದ ತೇಜಸ್ಸು ಕಡಿಮೆಯಾಗದಿರಲೆಂದು ವರ್ಷವಿಡೀ ಈ ದಿಂಡಿಗಳಲ್ಲಿ ರಕ್ಷಿಸಿ ಇಟ್ಟಿರುತ್ತಾರೆ. ಉಳಿದ ದಿವಸಗಳಲ್ಲಿ ದೇವರ ಜಗಲಿ ಖಾಲಿ ಖಾಲಿ ಕಾಣದಿರಲೆಂದು ಜಗಲಿಯ ಮೇಲೆ ದೇವರ ಬೆಳ್ಳಿಯ ಮುಖಗಳನ್ನು ಮಾಡಿಸಿಟ್ಟಿರುತ್ತಾರೆ.

'ಹಸೆ'ಯ ಮೇಲೆ ಕೂಡ್ರಿಸುವ ವಿಧಾನ ಹೀಗಿದೆ: ಮೊದಲು ಗದ್ದಿಗೆಯ ಮೇಲೆ ಕಂಬಳಿಯನ್ನು ಹಾಸುತ್ತಾರೆ. ಅದರ ಮೇಲೆ ದೇವರ ಶೆಲ್ಲೆ ಮುಂಡಾಸ ಇಡುತ್ತಾರೆ. ಅದರ ಮೇಲೆ ಅಕ್ಕಿಯ ಸಾಸೆ ಹಾಕುತ್ತಾರೆ. ಸಾಸೆಯ ಮೇಲೆ ಭಂಡಾರ ಸಿಂಪಡಿಸಿ ದಿಂಡಿಯೊಳಗಿನಿಂದ ತೆಗೆದ ಕಟ್ಟಿಗೆಯ ಮುಖಗಳನ್ನು ಇಡುತ್ತಾರೆ. ಗದ್ದಿಗೆಯ ಮೇಲಿನ ಕಂಬಳಿಯ ಮೇಲೆ ಹಾಕುವ ಶೆಲ್ಲೆಮುಂಡಾಸ ತಂದು ಕೊಡುವ ಚಾಜು ಕಲ್ಲೂರಿನ ಪೊಲೀಸ ಗೌಡರ ಮನೆತನದ್ದು. ಹಸಿ ಕುಳಿತ ಒಂದು ತಾಸಿನ ನಂತರ ಗುಡಿಗಳಿಗೆ ಕಳಸ ಏರಿಸುವ ಕಾರ್ಯಕ್ರಮವಿರುತ್ತದೆ. ಕಳಸ ಏರಿಸುವ ಚಾಜು ಈ ಊರಿನ ಗೌಡರ ಸಮುದಾಯದ ಸಂಕಣ್ಣನವರ ಎನ್ನುವ ಮನೆತನದವರಿಗೆ ಇರುತ್ತದೆ.

೪.೧.೧.೪ ಭೂತಾಳ ಸಿದ್ಧನ ಗುಡಿಗೆ : ಕಳಸ ಏರಿಸಿದ ನಂತರ ಬೆಳಗಿನ ಹನ್ನೊಂದು ಗಂಟೆಯ ಸುಮಾರಿಗೆ ಎರಡೂ ಗುಡಿಯ ಪಾಲಕಿಗಳು ಗಂಗಸ್ಥಲಕ್ಕೆ ಹೊರಡುತ್ತವೆ. ಮೇಲಿನ ಗುಡಿಯಲ್ಲಿ ಮೂಲದೇವರುಗಳ ಜೊತೆಗೆ ಭೂತಾಳಸಿದ್ಧನ ಬೆಳ್ಳಿಯ ಮುಖವೂ ಇದೆ. ಇದೊಂದು ಅಪವಾದದ ಸಂಗತಿ. ಯಾಕೆಂದರೆ

ಭೂತಾಳಸಿದ್ಧನನ್ನು ಬಯಲು ಭೂತಾಳ ಎಂದೇ ಕರೆದು ಮೂಲ ಗುಡಿಯಿಂದ ಹೊರಗೆ ಅವನನ್ನು ಇಡುವುದು ವಾಡಿಕೆ. ಆದರೆ ಕಲ್ಲೂರಿನ ಮೇಲಿನ ಗುಡಿಯಲ್ಲಿ ಭೂತಾಳಸಿದ್ಧ ಮೂಲ ದೇವರೊಂದಿಗೆ ಇದ್ದಾನೆ. ಮೂಲದೇವರ ಬೆಳ್ಳಿಯ ಮುಖಗಳು ಜಗಲಿಯ ಮೇಲೆ ಇದ್ದರೆ ಭೂತಾಳ ಸಿದ್ಧನ ಬೆಳ್ಳಿಯ ಮುಖ ಎಡಬದಿಯ ಗೋಡೆಯ ಮಾಡದಲ್ಲಿ ಇರುತ್ತದೆ. ಸಣ್ಣದೇವರು, ದೊಡ್ಡದೇವರು ಹಾಗೂ ಭೂತಾಳಸಿದ್ಧ -ಹೀಗೆ ಮೂರು ಮುಖಗಳನ್ನು ಮೆರವಣಿಗೆಯಲ್ಲಿ ಸಾಗಿಸುತ್ತಾ ಊರ ಹೊರವಲಯದಲ್ಲಿರುವ ಭೂತಾಳಸಿದ್ಧ ಗುಡಿಗೆ ಬರುತ್ತಾರೆ.

ಭೂತಾಳಸಿದ್ಧನ ಗುಡಿಯ ಸುತ್ತಲೂ ಒಡೆಯರಿಗೆ ಮೀಸಲಾದ ರುದ್ರ ಭೂಮಿಯಿದೆ. ಇಲ್ಲಿ ಹಲವಾರು ಗವಿಗಳಿವೆ. ಇದರಲ್ಲಿ ಪ್ರಮುಖವಾದ ಗವಿಯೊಂದಿದೆ. ಈ ಗವಿಯಲ್ಲಿ ಹೇಳಿಕೆ ಮಾಡುವ ಒಡೆಯರು ಮೃತರಾದಾಗ ಸಮಾಧಿಗೊಳಿಸುತ್ತಾರೆ. ಈ ಮುಖ್ಯವಾದ ಗವಿಯ ಎದುರಿಗೆ ಎರಡೂ ಪಾಲಿಕೆಗಳನ್ನು ಇಳುವಿ ಪೂಜೆ ಸಲ್ಲಿಸುತ್ತಾರೆ. ಅಲ್ಲಿಂದ ಮೆರವಣಿಗೆಯಲ್ಲಿ ಮತ್ತೆ ಮೂಲ ಗುಡಿಗಳ ಕಡೆಗೆ ಬರುತ್ತಾರೆ. ಇಷ್ಟೆಲ್ಲಾ ಕಾರ್ಯಕ್ರಮ ಮುಗಿಯಬೇಕಾದರೆ ಸಂಜೆ ಐದುಗಂಟೆಯ ಸಮಯವಾಗಿರುತ್ತದೆ. ಮರುದಿವಸ ಅಂದರೆ ಅಮಾವಾಸ್ಯೆಯ ದಿವಸ ಭಕ್ತರು ಗುಡಿಗೆ ಬಂದು ಹರಕೆ ತೀರಿಸುತ್ತಾರೆ.

೪.೧.೧.೫ ದೇವರ ಹಣೆಗೆ ಬಾಸಿಂಗ : ಅಮವಾಸ್ಯೆಯ ಮರುದಿವಸ ನಸುಕಿನ ಎರಡು ಗಂಟೆಗೆ ಕಾರ್ಯಕ್ರಮಗಳು ಪ್ರಾರಂಭವಾಗುತ್ತವೆ. ಎರಡೂ ಗುಡಿಗಳಿಂದ ಮೆರವಣಿಗೆ ಹೊರಟು ಆ ಊರಿನ ಹೂಗಾರನ ಮನೆಗೆ ಬರುತ್ತದೆ. ಹೂಗಾರ ಮನೆಯಿಂದ ದೇವರುಗಳಿಗೆ ಬಾಸಿಂಗ ತರುವ ಕಾರ್ಯಕ್ರಮವಿರುತ್ತದೆ. ಈ ಭಾಗದ ಕುರುಬ ದೇವರಿಗೆ ಬಾಸಿಂಗ ತರುವುದು ವಿಜಾಪುರ ಪಟ್ಟಣದಿಂದ. ಇದನ್ನು ಪಟ್ಟಣದ ಹೂವು ತರುವ ಕಾರ್ಯಕ್ರಮವೆಂದೇ ಕರೆಯುತ್ತಾರೆ. ಆದರೆ ಕಲ್ಲೂರಿನ ದೇವರಿಗೆ ಬಾಸಿಂಗ ತರಲು ವಿಜಾಪುರ ಪಟ್ಟಣಕ್ಕೆ ಹೋಗದೇ ಕಲ್ಲೂರಿನ ಹೂಗಾರ ಅವರ ಮನೆಯಿಂದಲೇ ತರುತ್ತಾರೆ. ಈ ಸೇವೆ ಮಾಡುವ ಹೂಗಾರ ಮನೆತನಕ್ಕೆ ಹತ್ತು ಎಕರೆ ಜಮೀನ ನೀಡಲಾಗಿದೆ. ಹೂಗಾರ ಮನೆಯಿಂದ ಒಟ್ಟು ನಾಲ್ಕು ಬಾಸಿಂಗಗಳನ್ನು ತರುತ್ತಾರೆ. ಎರಡು ಬಾಸಿಂಗಗಳು ಮೇಲಿನ ಗುಡಿಯ ಎರಡು ದೇವರಿಗೆ. ಮತ್ತೆರಡು ಬಾಸಿಂಗಗಳು ಕೆಳಗಿನ ಗುಡಿಯ ಎರಡು ದೇವರಿಗೆ. ಹೀಗೆ ತಂದ ಬಾಸಿಂಗಗಳನ್ನು ದೇವರ ಹಣೆಗೆ ಕಟ್ಟುತ್ತಾರೆ. ಪ್ರತಿ ಗುಡಿಯ ಎರಡು ದೇವರಲ್ಲಿ ಒಂದಕ್ಕೆ ದೊಡ್ಡ ದೇವರೆಂದೂ ಇನ್ನೊಂದಕ್ಕೆ ಸಣ್ಣದೇವರೆಂದೂ ಕರೆಯುತ್ತಾರೆ. ಈ ದೊಡ್ಡ ದೇವರು ಹಾಗೂ ಸಣ್ಣದೇವರು ಅಂದರೆ ಯಾರು ಎಂದು ಕೇಳಿದರೆ ಅವರಲ್ಲಿ ಸ್ಪಷ್ಟ ಉತ್ತರವಿಲ್ಲ. ಬಹುಶಃ ದೊಡ್ಡ ದೇವರೆಂದರೆ ಈ ಸಿದ್ಧ ಪರಂಪರೆಯ ಮೂಲ ಪುರುಷ ಅಮೋಘಸಿದ್ಧನಿದ್ದಿರಬಹುದು. ಸಣ್ಣ ದೇವರೆಂದರೆ ಕೆಳಗಿನ ಮಠಕ್ಕೆ ಸಂಬಂಧಪಟ್ಟಂತೆ. ಅವಧುಸಿದ್ಧನ ವಂಶದ ಯಾರೋ ಒಬ್ಬ ಸಿದ್ಧ ಇರಬಹುದು. ಮೇಲಿನ ಮಠಕ್ಕೆ ಸಂಬಂಧಪಟ್ಟಂತೆ ಸಣ್ಣದೇವರು ಕನ್ಯಾಮುತ್ಯಾನ ವಂಶದ ಮಳೆಮಲ್ಲಪ್ಪ ಇಲ್ಲವೆ ಮಲ್ಲಾ ಒಡೆಯ ಇದ್ದಿರಬಹುದು.

೪.೧.೧.೬ ಮುಖಕ್ಕೆ ಮುಖ, ಟೊಂಕಕ್ಕೆ ನಾಗಬಂಧ : ಎರಡೂ ಗುಡಿಯ ದೇವರುಗಳ ಮುಖಗಳಿಗೆ ಹೂಗಾರ ಮನೆಯಿಂದ ತಂದ ಬಾಸಿಂಗಗಳನ್ನು ಕಟ್ಟಿ ಶೃಂಗರಿಸಿದ ನಂತರ ಹೇಳಿಕೆ ಮಾಡುವ ಒಡೆಯರುಗಳು ಆ ಮುಖಗಳನ್ನು ತಮ್ಮ ಮುಖಗಳಿಗೆ ಕಟ್ಟಿಕೊಳ್ಳುತ್ತಾರೆ. ಈ ಜಾತ್ರೆಯ ವಿಶೇಷವೆಂದರೆ ಜಾತ್ರೆಗೆ ಬಂದ ಭಕ್ತರಿಗೆ ಆ ವರ್ಷದ ಮಳೆ ಬೆಳೆ ಕುರಿತು ಹೇಳಿಕೆ/ನುಡಿ ಮಾಡುವುದು. ಒಂದೊಂದು ಗುಡಿಯಿಂದ ಇಬ್ಬಿಬ್ಬರು ನುಡಿಮಾಡುತ್ತಾರೆ. ಹೀಗೆ ಹೇಳಿಕೆ ಮಾಡುವ ನಾಲ್ಕು ಜನರು ಹೇಳಿಕೆ ಮಾಡುವ ಪೋಷಾಕು ಧರಿಸಲು ಸುಚಿರ್ಭೂತರಾಗಿ ಬಂದಿರುತ್ತಾರೆ. ಅವರು ಮೊದಲು ಕಬಾಯಿ ಧರಿಸುತ್ತಾರೆ. ಕಬಾಯಿ ಅಂದರೆ ಕುತನಿ ಬಟ್ಟೆಯಿಂದ ತಯಾರಿಸಿದ ನಿಲುವಂಗಿ. ಕಬಾಯಿ ಧರಿಸಿದ ಮೇಲೆ ಟೊಂಕಕ್ಕೆ ನಾಗಬಂಧ ಕಟ್ಟಿಕೊಳ್ಳುತ್ತಾರೆ. ನಾಗಬಂಧವೆಂದರೆ ಟೊಂಕಕ್ಕೆ ಕಟ್ಟಿಕೊಳ್ಳುವ ದುಪ್ಪಟ್ಟಿ. ಹೇಳಿಕೆ ಮಾಡುವವರು ಈ ನಾಗಬಂಧ ಕಟ್ಟಿಕೊಳ್ಳಲೇ ಬೇಕು. ಯಾಕೆಂದರೆ ಬಾಸಿಂಗಗಳಿಂದ ಶೃಂಗಾರಗೊಂಡ ದೇವರ ಕಟ್ಟಿಗೆಯ ಮುಖಗಳನ್ನು ನುಡಿ ಮಾಡುವ ಒಡೆಯರು ತಮ್ಮ ಮುಖಕ್ಕೆ ಕಟ್ಟಿಕೊಳ್ಳಲೇಬೇಕು. ಈ ಕಟ್ಟಿಗೆಯ ಮುಖಗಳು ಬಾಸಿಂಗದಿಂದ ಅಲಂಕೃತವಾಗಿ ಮುರ್ನಾಲ್ಕು ಪೂಟ ಎತ್ತರದವುಗಳಾಗಿರುತ್ತವೆ ಆದ್ದರಿಂದ ತುಂಬಾ ಭಾರವನ್ನು ಹೊಂದಿರುತ್ತದೆ. ಹೀಗಾಗಿ ಆ ಬಾಸಿಂಗಗಳು ಭದ್ರವಾಗಿ ನಿಲ್ಲಲೆಂದು ಬಾಸಿಂಗದ ಮೇಲ್ಭಾಗದಿಂದ ಒಂದು ದಾರವನ್ನು ಪೋಣಿಸಿ ಆ ದಾರವನ್ನು ನುಡಿ ಮಾಡುವವನ ತಲೆಯ ಮೇಲಿನಿಂದ ಹಾಯಿಸಿ ಕೆಳಗೆ ತಂದು ನಡಕ್ಕೆ ಕಟ್ಟಿಕೊಂಡ ನಾಗಬಂಧದ ಹಿಂದಿನ ಭಾಗಕ್ಕೆ ಕಟ್ಟುತ್ತಾರೆ. ಹಾಗೆ ಕಟ್ಟಿದರೆ ಮಾತ್ರ ಬಾಸಿಂಗ ಸಹಿತ ಮುಖ ಗಟ್ಟಿಯಾಗಿ ನಿಂತು ನುಡಿಮಾಡುವವರ ಮುಖಕ್ಕೆ ಹೊಂದಾಣಿಕೆಯಾಗುತ್ತದೆ. ಇಲ್ಲವಾದರೆ ಮುಖಕಟ್ಟಿಕೊಂಡು ಆಡುವಾಗ ಜೋಲಿ ತಪ್ಪಿ ಮುಖಗಳು ಕಳಚಿ ಬೀಳುವ ಸಾಧ್ಯತೆಯಿರುತ್ತದೆ. ಮುಖಕ್ಕೆ ಮುಖ ಕಟ್ಟಿಕೊಂಡ ನಂತರ ಬಲಗೈಯಲ್ಲಿ ಬೆಳ್ಳಿ ಬೆತ್ತ ಹಿಡಿದುಕೊಳ್ಳುತ್ತಾರೆ. ಎಡಗೈಯಲ್ಲಿ ಕೊಬ್ಬರಿ ಬಟ್ಟಲು ಹಿಡಿದುಕೊಂಡು ಗುಡಿಯಿಂದ ಹೊರಗೆ ಬರುತ್ತಾರೆ. ಹೀಗೆ ಸಿದ್ಧರಾಗಿ ಹೊರಗೆ ಬಂದವರನ್ನು ಮೆರವಣಿಗೆಯಲ್ಲಿ ಕರೆದೊಯ್ಯಲು ಕಳಸದವರು, ದೀವಟಿಗೆಯವರು, ಡೊಳ್ಳಿನವರು ತಯ್ಯಾರಾಗಿ ಗುಡಿಯ ಹೊರಗಡೆ ಕಾಯುತ್ತ ನಿಂತಿರುತ್ತಾರೆ.

೪.೧.೧.೭. ನಡಗಡ್ಡಿ ನುಡಿ, ಕಡಿಗಡ್ಡಿ ನುಡಿ : ಈ ವೇಳೆಗೆ ಕುರುಬ ಮನೆತನದ ಒಬ್ಬನು ಊರೊಳಗೆಲ್ಲ ಸುತ್ತಾಡಿ ದೇವರು ಗರಿಗಟ್ಟುತ್ತಾರೆ ಬರ್ರಿ, ದೇವರು ಗರಿಗಟ್ಟುತ್ತಾರೆ ಬರ್ರಿ ಎಂದು ಕೂಗಿ ಹೇಳಿಬಂದಿರುತ್ತಾನೆ. ಗುಡಿಯಿಂದ ಮುಖಕಟ್ಟಿಕೊಂಡು ಹೊರಬಂದ ಒಡೆಯರನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಹೇಳಿಕೆ ಮಾಡುವ ಜಾಗೆವರೆಗೆ ಕರೆದುಕೊಂಡು ಹೋಗಲು ಮೂರು ಚಾಜದ ಕಳಸಗಳು ಇರಲೇ ಬೇಕು. ಕೆಳಗಿನ ಗುಡಿಯ ಚಾಜದ ಕಳಸ ಕಲ್ಲೂರಿನ ಮಾಲಿ ಪಾಟೀಲ ಮನೆತನದವರದ್ದಾಗಿರುತ್ತದೆ. ಮೇಲಿನ ಗುಡಿಯ ಚಾಜದ ಕಳಸ ಇದೇ ಊರಿನ ಪೊಲೀಸ ಪಾಟೀಲ ಮನೆತನದ್ದಿರುತ್ತದೆ. ಮೂರನೆಯ ಕಳಸ ಹಾಗೂ ಒಂದು ಡೊಳ್ಳು ಈ ಊರಿನ ಪೂಜಾರಿಗಳ (ಕುರಬರ) ಮನೆತನದ್ದಿರುತ್ತದೆ. ಎರಡು ದೀವಟಿಗೆಯ ಚಾಜ ಮಾದಿಗರ ಮನೆತನದ್ದಿರುತ್ತವೆ. ಈ ಎಲ್ಲ ಚಾಜದವರು ಹಾಗೂ ಇನ್ನಿತರ ಭಕ್ತರು ಸೇರಿಕೊಂಡು ಮೆರವಣಿಗೆಯಲ್ಲಿ

ಊರೆಲ್ಲಾ ಸುತ್ತುತ್ತಾರೆ. ಹೀಗೆ ಊರು ಸುತ್ತುವಾಗಲೆಲ್ಲ ದೇವರ ಮುಖ ಕಟ್ಟಿಕೊಂಡ ಒಡೆಯರು ಆಟವಾಡುತ್ತ ಬರುತ್ತಿರುತ್ತಾರೆ. ಆಟವಾಡುವುದು ಅಂದರೆ ಒಂದು ಕೈಯಲ್ಲಿ ಬೆತ್ತ ಹಿಡಿದು ಇನ್ನೊಂದು ಕೈಯಲ್ಲಿ ಕೊಬ್ಬರಿ ಬಟ್ಟಲ ಹಿಡಿದು ಡೊಳ್ಳಿನ ನಾದಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಿರುತ್ತಾರೆ. ಹೀಗೆ ಕುಣಿಯುತ್ತ ತಾವು ಧರಿಸಿದ ದೇವರ ಚೈತನ್ಯವನ್ನು ಆಹ್ವಾನಿಸಿಕೊಳ್ಳುತ್ತಿರುತ್ತಾರೆ. ಅವರು ಧರಿಸಿದ ದೇವರ ಮುಖ ಒಂದು 'mask.' ಈ 'mask' ಧರಿಸುವುದರಿಂದ ಧರಿಸಿದವನಲ್ಲಿ ಹಾಗೂ ಸುತ್ತಲಿನ ಪ್ರದೇಶದಲ್ಲಿ ಒಂದು ರೀತಿಯ ದೈವೀಭಾವ ಪ್ರಸರಿಸಲು ಪ್ರಾರಂಭಿಸುತ್ತದೆ.

Masks are a familiar and vivid element is many folk and traditional pageants, ceremonies, rituals and festivals and are often of an ancient origion... masks are used almost universally and maintain their power and mystery both for their wearer amd their audience.[೬]

ದೇವರ ಮುಖವನ್ನು ಧರಿಸಿದ ಒಡೆಯರು ನಿಧಾನವಾಗಿ ದೇವರೆ ಆಗಿಬಿಡುತ್ತಾರೆ. ಆಗ ಅವರನ್ನು ನಿಯಂತ್ರಿಸಲು ಒಬ್ಬಿಬ್ಬರು ಅನುಭವಿಕರು ಅವರ ಜೊತೆಗೆ ಇಡೀ ನುಡಿ ಕಾರ್ಯಕ್ರಮ ಮುಗಿಯುವವರೆಗೆ ಇರುತ್ತಾರೆ. The dancer who wears a mask in a ceremony is frequently believed to be transformed in to or possessed by the spirit inhibiting or represented by the mask. Masks are aften believed to contain great power, being potentially dangerous unless handled with the proper rites.[೭]

ಹೀಗೆ ಒಡೆಯರು ದೇವರುಗಳಾಗಿ ಬೀದಿಯಲ್ಲಿ ಗರಿಗಟ್ಟಿಕೊಂಡ ನವಿಲಿನ ಹಾಗೆ ನೃತ್ಯ ಮಾಡುತ್ತ ನುಡಿ ಮಾಡುವ ಜಾಗೆಯ ಕಡೆಗೆ ಹೊರಟಿರುವುದನ್ನು ನೋಡಲು ಭಕ್ತರು ಬೀದಿ ಬೀದಿಗಳಲ್ಲಿ ಕೈಕಟ್ಟಿ ನಿಂತಿರುತ್ತಾರೆ. ಮಾಳಿಗೆಯ ಮೇಲೆ ಕೈ ಮುಗಿದು ಕುಳಿತಿರುತ್ತಾರೆ. ಹೀಗೆ ನುಡಿ ಮಾಡುವ ಜಾಗೆ ನಡುಗಡ್ಡೆಗೆ ದೇವರು ಬಂದು ತಲುಪುವ ವೇಳೆಗೆ ನಸುಕಿನ ಮೂರುಗಂಟೆಯಾಗಿರುತ್ತದೆ. ನಡುಗಡ್ಡಿಯ ಬದಿಗೆ ಇರುವ ಜಾಗೆಯೇ ಕಡಿಗಡ್ಡಿ. ನಡುಗಡ್ಡಿ ಹಾಗೂ ಕಡಿಗಡ್ಡಿ ಎರಡೂ ಚಾವಡಿಯ ಮುಂದಿನ ಬಯಲಿನಲ್ಲಿ ಇವೆ. ಇಲ್ಲಿಯೇ ಕಾಮದಹನವನ್ನು (ಹೋಳಿ ಹುಣ್ಣಿಮೆ ಸಂದರ್ಭದಲ್ಲಿ) ಮಾಡುತ್ತಾರೆ. ಕಾಮದಹನದ ಆಚರಣೆಗೂ ನುಡಿ ಹೇಳುವ ಆಚರಣೆಗೂ ಯಾವುದೇ ಸಂಬಂಧವಿಲ್ಲ. ಆದರೆ ನುಡಿಯ ಖಚಿತತೆಯನ್ನು ಸೂಚಿಸಲು ನುಡಿ ಹೇಳುವವರು "ತಿರಗಲಾಕ ರಾಮನ ಬಾಣ ಅಲ್ಲ ಹಾರ್ಲಾಕ ಕಾಮನ ಬೂದಿ ಅಲ್ಲ" ಎಂದು ಹೇಳುವುದುಂಟು. ಇಷ್ಟು ಸಂಬಂಧವನ್ನು ಬಿಟ್ಟರೆ ಕಾಮನನ್ನು ದಹನ ಮಾಡುವ ಈ ಜಾಗೆಗೂ ನುಡಿ ಹೇಳುವ ಆಚರಣೆಗೂ ಏನೂ ಸಂಬಂಧವಿಲ್ಲ.

ನಡಗಡ್ಡಿಯಲ್ಲಿ ನಿಂತು ಹೇಳಿಕೆಮಾಡುವವರು ಮೇಲಿನ ಗುಡಿಯ ಒಡೆಯರು. ಕಡಿಗಡ್ಡಿಯಲ್ಲಿ ಹೇಳಿಕೆಮಾಡುವವರು ಕೆಳಗಿನ ಗುಡಿಯ ಒಡೆಯರು. ಈ ಎರಡೂ ಗುಡಿಯ ದೇವರುಗಳಿಗೆ ಆಡಲು ಜಾಗೆ ಬಿಟ್ಟು ಸುತ್ತಲೂ ಭಕ್ತರು ನಿಂತಿರುತ್ತಾರೆ. ಚಾವಡಿ ಕಟ್ಟೆಯ ಮೇಲೆ, ಮನೆಯ ಮಾಳಿಗೆ ಮೇಲೆ ಜನ ಗುಂಪುಗಟ್ಟಿ ದೇವರು ಆಡುವುದನ್ನು ನೋಡಲು ಕುಳಿತಿರುತ್ತಾರೆ. ದೇವರುಗಳು ಸ್ವಲ್ಪ ಹೊತ್ತು ಇಲ್ಲಿ ಡೊಳ್ಳಿನ ನಾದಕ್ಕೆ ತಕ್ಕಂತೆ ಬಾಸಿಂಗವನ್ನು ತೇಲಾಡಿಸುತ್ತ, ಬೆತ್ತವನ್ನು ಕುಣಿಸುತ್ತ ಆಟವಾಡುತ್ತವೆ. ಆಟ ಆಡುತ್ತ ಆಡುತ್ತ ಡೊಳ್ಳಿನ ನಾದಕ್ಕೆ ಕುಣಿಯುತ್ತ ಕಣಿಯುತ್ತ ದೇವರು ಉಗ್ರ ತುಂಬಿಕೊಳ್ಳುತ್ತವೆ. ಒಂದೊಂದು ದೇವರನ್ನು ಮುರ್ನಾಲ್ಕು ಜನ ಸಂಭಾಳಿಸುತ್ತಿರುತ್ತಾರೆ. ಹಾಗೆ ಆಡುತ್ತ ಆಡುತ್ತ ಇದ್ದಕ್ಕಿದಂತೆ ಕೆಳಗಿನ ಮಠದ ದೊಡ್ಡ ದೇವರು ಎದುರಿಗಿದ್ದ ಡೊಳ್ಳನ್ನು ಏರಿ ನಿಲ್ಲುತ್ತದೆ. ಹೀಗೆ ಏರಿನಿಂತದ್ದೇ ತಡ ಅಲ್ಲಿ ನೆರೆದ ನಾಲ್ಕೈದು ಸಾವಿರ ಭಕ್ತರು ಮಾತನಾಡುವ ಗಲಗಲ ಶಬ್ದ ಸ್ತಬ್ದವಾಗುತ್ತದೆ. ಡೊಳ್ಳಿನ ಮೇಲೆ ಏರಿನಿಂತ ದೊಡ್ಡ ದೇವರು 'ಎಲೇ' ಎಂದು ಜೋರಾಗಿ ಕೂಗುತ್ತಾನೆ. ಇಡಿ ಊರಿಗೂರೆ ಸ್ತಬ್ದವಾಗುತ್ತದೆ. ಆಗ ಬೆಡಗಿನ ರೂಪದ ಎರಡು ಹೇಳಿಕೆಗಳು ದೊಡ್ಡ ದೇವರ ಬಾಯಿಂದ ಹೊರಬೀಳುತ್ತವೆ. ಈ ಹೇಳಿಕೆ/ನುಡಿಗಳ ಕುರಿತು 'ಉಗಾಳಿಕೆ ಹರಕೆ ಹೇಳಿಕೆ' ಎನ್ನುವ ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗುತ್ತದೆಯಾದ್ದರಿಂದ ೨೦೧೯ನೆಯ ಸಾಲಿನ ಒಂದು ಹೇಳಿಕೆಯನ್ನು ಮಾತ್ರ ಇಲ್ಲಿ ದಾಖಲಿಸಲಾಗಿದೆ.

ಎಲೇ! ಯಾವ ಕೇಳಾವ ತುದಿಗ್ಗೆ ಹಿಡದ ಕೇಳಬ್ಯಾಡ
ಮುಂಗ್ಗೆ ಹಿಡಿದು ಕೇಳ
ಮಿರಗ ಗಿರ್ದಾ, ಆರಿದ್ರ ಅರ್ಧಾ, ಪುಷ್ಯ ಪುನರ್ವಸು
ಛಪ್ಪನ್ನಾಡ ದೇಶಕ್ಕ
ಸಂಪೂರ್ಣ ಮಾಡಬೇಕ ಅನ್ನೂದ್ರಾಗ
ಕಡ್ಡಿ ಅಡ್ಡ ಬಿತ್ತ

ಇಂಥದ್ದೇ ಇನ್ನೊಂದು ಹೇಳಿಕೆಯನ್ನು ಕೆಳಗಿನ ಗುಡಿಯ ದೊಡ್ಡ ದೇವರು ಮಾಡುತ್ತಾನೆ. ಇದಾದ ನಂತರ ಮೇಲಿನ ಗುಡಿಯ ದೊಡ್ಡ ದೇವರು ಎರಡು ಹೇಳಿಕೆ ಮಾಡುತ್ತಾನೆ. ಅದಾದ ನಂತರ ಕೆಳಗಿನ ಗುಡಿಯ ಸಣ್ಣದೇವರು ಹಾಗೂ ಮೇಲಿನ ಗುಡಿಯ ಸಣ್ಣದೇವರು ಎರಡೆರಡು ಹೇಳಿಕೆ ಮಾಡುತ್ತಾರೆ.

ಹೀಗೆ ನಡಗಡ್ಡಿ ಹಾಗೂ ಕಡಿಗಡ್ಡಿಗಳಲ್ಲಿ ಪ್ರತಿವರ್ಷ ಎಂಟು ಹೇಳಿಕೆಗಳು ಆಗುತ್ತವೆ. ಅವೆಲ್ಲಾ ಆಯಾ ಸಾಲಿನ ಮಳೆ ಬೆಳೆ ಜನ ಜಾನುವಾರು ಹಾಗೂ ರಾಜಕಾರಣದ ಸ್ಥಿತಿಗತಿಗಳ ಕುರಿತಾಗಿ ಇರುತ್ತವೆ. ಈ ಹೇಳಿಕೆಗಳು ವರ್ಷವಿಡೀ ಈ ಭಾಗದ ಭಕ್ತರ ಮನಸ್ಸನ್ನ ಆಳುತ್ತವೆ. ಇವುಗಳನ್ನು ನಂಬಿ ಈ ಭಾಗದ ಜನ ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಾರೆ. ಕಲ್ಲೂರ ಸಿದ್ಧರ ನುಡಿ ಯಾವ ಕಾಲಕ್ಕೂ ಸತ್ಯವಾಗುತ್ತವೆ ಎಂದು

ಜನ ನಂಬಿರುತ್ತಾರಾದ್ದರಿಂದ 'ಕಲ್ಲೂರ ಅಮೋಘಸಿದ್ಧನ ಹೇಳಿಕೆ ಅಂದ್ರ ಕಲ್ಲ ಅರಿಮ್ಯಾಲ ಮ್ಯಾಣದ ಗೂಟ ಜಡದಂಗ' ಎನ್ನುವ ಮಾತು ಇಲ್ಲಿ ಪ್ರಚಲಿತವಿದೆ.

೪.೧.೧.೮ ಗವಿ ಹೇಳಿಕೆ ಹಾಗೂ ಕೈಚಕಳಿ : ನಡಗಡ್ಡಿ ಹಾಗೂ ಕಡಿಗಡ್ಡಿಯ ಹೇಳಿಕೆಗಳು ಮುಗಿದ ನಂತರ ನಾಲ್ಕೂ ದೇವರುಗಳು ಮೆರವಣಿಗೆಯಲ್ಲಿ ಊರ ಹೊರವಲಯದಲ್ಲಿರುವ ಭೂತಾಳಸಿದ್ಧನಿರುವ ಗುಡಿಯ ಜಾಗೆಯ ಕಡೆಗೆ ಬರುತ್ತಾರೆ. ಅಲ್ಲಿರುವ ಗವಿಯ ಎದುರಿಗೆ ನಿಂತು ಮತ್ತೆ ಹೇಳಿಕೆ ಮಾಡುತ್ತವೆ. ಇಲ್ಲಿ ಒಂದೊಂದು ದೇವರು ಒಂದೊಂದು ಹೇಳಿಕೆ ಮಾಡುತ್ತವೆ ಇವುಗಳನ್ನು ಗವಿ ಹೇಳಿಕೆಗಳು ಎಂದು ಕರೆಯುತ್ತಾರೆ.

ಈ ಕಡೆಗೆ ಹೇಳಿಕೆಗಳು ಮುಗಿಯುತ್ತಿದ್ದಂತೆ ಎರಡೂ ಗುಡಿಯ ಆರವಣದಲ್ಲಿ ದೊಡ್ಡ ಹಂಡೆಗಳಲ್ಲಿ ಕೈಚಕಳಿ ಸಿದ್ಧವಾಗಿರುತ್ತದೆ. ಕೈಚಳಿಯನ್ನು ಅಲ್ಲಿ ನೆರೆದ ಭಕ್ತರಿಗೆ ಪ್ರಸಾದ ರೂಪದಲ್ಲಿ ಹಂಚಲಾಗುತ್ತದೆ. ಕೈಚಕಳಿ ಅಂದರೆ ಕಟಂಬಲಿಯಲ್ಲಿ ಉಂಬೋ ಎಣ್ಣೆ ಕಲಸಿದ ಪ್ರಸಾದ ರೂಪದ ಪದಾರ್ಥ. ಜನರು ಹೀಗೆ ಪ್ರಸಾದ ಸ್ವೀಕರಿಸುತ್ತಿದ್ದಂತೆ ಗವಿಯ ಎದುರಿಗಿದ್ದ ದೇವರುಗಳು ಮೆರವಣಿಗೆಯಲ್ಲಿ ತಮ್ಮ ತಮ್ಮ ಗುಡಿಗೆ ಮರಳಿ ಬರುತ್ತವೆ. ಗುಡಿಗೆ ಬಂದ ನಂತರ ಮುಖಗಳನ್ನು ಬಿಚ್ಚಿ ಮತ್ತೆ ಗದ್ದುಗೆಯ ಮೇಲೆ ಇಡುತ್ತಾರೆ. ಇಷ್ಟೊತ್ತಿಗೆ ನಸಕು ಮುಗಿದು ಅರುಣೋದಯದ ವೇಳೆ ಆಗಿರುತ್ತದೆ.

೪.೧.೧.೯ ದಿಂಡಿಯಲ್ಲಿ ಮುಖಗಳು : ಕೈಚಕಳಿಯಾದ ನಂತರ ಜನರು ಗುಡಿಗೆ ಬಂದು ಕಾಯಿ ಒಡೆಯಿಸಿಕೊಂಡು ಹೋಗುತ್ತಾರೆ. ಹೇಳಿಕೆಗಳನ್ನು ಮಾಡಿ ಗುಡಿಯ ಹೊರಭಾಗದಲ್ಲಿ ಬಂದು ಕುಳಿತುಕೊಂಡಿರುವ ಒಡೆಯರನ್ನು ಭೆಟ್ಟಿಯಾಗುತ್ತಾರೆ. ಹರಕೆ ಹೊತ್ತ ಜನರು ದೇವರಿಗೆ ಕಣ್ಣಟ್ಟು, ಕ್ವಾರಿಮೀಸೆ ಇತ್ಯಾದಿ ಕಾಣಿಕೆ ಅರ್ಪಿಸುತ್ತಾರೆ. ಕೆಲವೊಂದು ಭಕ್ತರು ಒಡೆಯರಿಗೆ ನಮಸ್ಕರಿಸಿ ಕಾಣಿಕೆ ಅರ್ಪಿಸುತ್ತಾರೆ. ಹಿಂದಿನ ವರ್ಷದ ಹೇಳಿಕೆಗಳ ಮೇಲೆ ನಂಬಿಕೆಯಿಟ್ಟು ಆ ರೀತಿ ನಡೆದುಕೊಂಡು ಲಾಭ ಪಡೆದ ಜನರು ಹೇಳಿಕೆ ಮಾಡಿದ ಒಡೆಯರ ಕಾಲಿಗೆ ರುಳಿ ಮಾಡಿಸಿ ಹಾಕುವುದೂ ಉಂಟು.

ಹೇಳಿಕೆಯ ಸಂದರ್ಭದಲ್ಲಿ ಮುಖ ಧರಿಸಿದ ಒಡೆಯರ ಕಾಲಲ್ಲಿಯ ರುಳಿಯ ಸಂಖ್ಯೆಯನ್ನು ನೋಡಿ ಹೇಳಿಕೆ ಮಾಡುವವನ ಘನತೆಯನ್ನು ಅಳೆಯಲಾಗುತ್ತದೆ.

ಅದೂ ಅಲ್ಲದೆ ಆ ದಿವಸ ಜಾತ್ರೆಗೆ ಬಂದ ಭಕ್ತರಿಗೆ ಅನ್ನ ಸಂತರ್ಪಣೆಯ ವ್ಯವಸ್ಥೆಯೂ ಇರುತ್ತವೆ. ಪ್ರಸಾದ ಸ್ವೀಕರಿಸಿ ಮಧ್ಯಾಹ್ನದ ವೇಳೆಗೆ ಜಾತ್ರೆಗೆ ಬಂದ ಭಕ್ತರು ತಮ್ಮ ತಮ್ಮ ಊರುಗಳಿಗೆ ಮರಳಿ ಹೋಗುತ್ತಾರೆ.

ಅಂದು ಸಂಜೆ ದೇವರ ಮುಖಗಳಿಗೆ ಪೂಜೆ ಸಲ್ಲಿಸಿ ಅವುಗಳನ್ನು ಗದ್ದುಗೆ ಮೇಲಿಂದ ಇಳಿಸಿ ದಿಂಡಿಯಲ್ಲಿ ಮರಳಿ ಇರಿಸುತ್ತಾರೆ. ದೇವರು ಮುಖಗಳು ಒಂದು ವರ್ಷದ ಮಟ್ಟಿಗೆ ದಿಂಡಿ ಸೇರುವ ಮೂಲಕ ಜಾತ್ರೆಯ ಕಾರ್ಯಕ್ರಮಗಳು ಮಂಗಲಗೊಳ್ಳುತ್ತವೆ.

[illegible]

೪.೧.೨ ಚಬನೂರು

ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಚಬನೂರಿನಲ್ಲಿಯೂ ಬಾದಾಮಿ ಅಮಾವಾಸ್ಯೆಯ ದಿವಸವೇ ಜಾತ್ರೆ ಜರುಗುತ್ತದೆ. ಅಲ್ಲಿಯೂ ಹೇಳಿಕೆಗಳು ಆಗುತ್ತವೆ. ಕಲ್ಲೂರಿನ ಜಾತ್ರೆಗೂ ಚಬನೂರಿನ ಜಾತ್ರೆಗೂ ಅನೇಕ ರೀತಿಯ ಸಾಮ್ಯತೆಗಳಿವೆ ಇಲ್ಲಿ ಎರಡೂ ಜಾತ್ರೆಗಳ ಮಧ್ಯದ ಕೆಲ ವ್ಯತ್ಯಾಸಗಳನ್ನು ಗಮನಿಸಬಹುದು. ಕಲ್ಲೂರಿನಂತೆ ಇಲ್ಲಿ ಮೇಲಿನ ಗುಡಿ ಹಾಗೂ ಕೆಳಗಿನ ಗುಡಿ ಎಂದು ಇಲ್ಲ. ಕಲ್ಲೂರಿನಲ್ಲಿ ಇರುವಂತೆ ಇಲ್ಲಿಯೂ ಕಳಸ, ದೀವಟಿಗೆ, ಡೊಳ್ಳು ಇರುತ್ತವೆಯಾದರೂ ಕಲ್ಲೂರಿನ ಜಾತ್ರೆಯಲ್ಲಿ ಕಾಣಸಿಗದ ಈರಕಾರರು ಇಲ್ಲಿ ಇದ್ದಾರೆ. ಇಲ್ಲಿನ ಈರಕಾರರ ಆಟ ಬಹು ಆಕರ್ಷಣೀಯವಾಗಿರುತ್ತದೆಯಾದ್ದರಿಂದ ಈ ಆಟಕ್ಕೆಂದೇ ಸ್ವಲ್ಪ ಸಮಯವನ್ನು ಹೇಳಿಕೆಗೆ ಮುನ್ನ ಮೀಸಲಿಡಲಾಗಿರುತ್ತದೆ. ಕಲ್ಲೂರಿನ ನಾಲ್ಕು ದೇವರು ಸೇರಿ ಒಟ್ಟು ಹನ್ನೆರಡು ಹೇಳಿಕೆ ಮಾಡಿದರೆ ಇಲ್ಲಿ ಎರಡೇ ಹೇಳಿಕೆಗಳಾಗುತ್ತವೆ. ಇಲ್ಲಿಯೂ ದೊಡ್ಡದೇವರು, ಸಣ್ಣದೇವರು ಎಂದು ಎರಡು ದೇವರ ಮುಖಗಳಿರುತ್ತವೆಯಾದರೂ ದೊಡ್ಡ ದೇವರೊಂದೇ ಹೇಳಿಕೆ ಮಾಡುತ್ತದೆ. ಸಣ್ಣದೇವರು ಕೇವಲ ಸಾಥ ನೀಡುತ್ತದೆ. ಕಲ್ಲೂರಿನಲ್ಲಿ ನಡಗಡ್ಡಿ ಕಡಿಗಡ್ಡಿ ಎನ್ನುವ ಜಾಗೆಯಲ್ಲಿ ಚಾವಡಿಯ ಬಯಲಿನಲ್ಲಿ ಹೇಳಿಕೆಗಳು ನಡೆದರೆ ಇಲ್ಲಿ ಗುಡಿಯ ಆವರಣದಲ್ಲಿಯೇ ನಡೆಯುತ್ತವೆ. ಕಲ್ಲೂರಿನಲ್ಲಿಮುಖ್ಯ ಎಂಟು ನುಡಿಗಳೂ ಮುಗಿದ ನಂತರ ಭೂತಾಳಸಿದ್ಧನಿರುವಲ್ಲಿ ಹೋದಂತೆ ಇಲ್ಲಿಯೂ ಭೂತಾಳಸಿದ್ಧನ ಗುಡಿಗೆ ಹೋಗುತ್ತಾರೆ. ಆದರೆ ಭೂತಾಳ ಸಿದ್ಧನ ಗುಡಿಯ ಬದಿಯ ಗವಿಯ ಎದುರಿಗೆ ಕಲ್ಲೂರಿನಲ್ಲಾಗುವಂತೆ ಇಲ್ಲಿ ಹೇಳಿಕೆಯಾಗುವುದಿಲ್ಲ. ಕಲ್ಲೂರಿನಲ್ಲಿ ಭೂತಾಳಸಿದ್ಧನ ಗುಡಿಯಿಂದ ದೇವರುಗಳು ನೇರವಾಗಿ ತಮ್ಮ ತಮ್ಮ ಗುಡಿಗಳಿಗೆ ಹೋದರೆ ಇಲ್ಲಿ ಗುಡಿಗೆ ಬರುವ ಪೂರ್ವದಲ್ಲಿ ಊರಿನಲ್ಲಿ ಮೆರವಣಿಗೆ ಮಾಡುತ್ತ ರೆಡ್ಡೇರ ಸಮುದಾಯದ ಗುರುಪಾದಪ್ಪಗೌಡ ಪಾಟೀಲ, ಹಂಡೇ ಕುರುಬರ ಮನೆತನದ ರಾಮನಗೌಡ ಹಾಗೂ ಗೋವಿಂದಪ್ಪ ಕುಲಕರ್ಣಿ ಅವರ ಮನೆಗೆ ಬಂದು ಚಾಜ ತೀರಿಸುವ ಪದ್ಧತಿಯಿದೆ.

೪.೧.೩ ಹತ್ತೂರು

ದಕ್ಷಿಣ ಸೋಲಾಪುರ ತಾಲೂಕಿನ ಹತ್ತೂರಿನಲ್ಲಿ ಮಕರಸಂಕ್ರಮಣದ ವೇಳೆಯಲ್ಲಿ ಓಗೆಣ್ಣ ಮುತ್ತ್ಯಾನ ಜಾತ್ರೆ ನಡೆಯುತ್ತದೆ. ಸ್ಥಾನಿಕ ದೇವರು ಓಗೆಣ್ಣ ಮುತ್ತ್ಯಾ ಆಗಿದ್ದರೂ ವಿಶಾಲವಾದ ದೇವಾಲಯದ ಆವರಣದಲ್ಲಿ ಅಮೋಘಸಿದ್ಧನ ಗುರು ಸೋಮಲಿಂಗ ಹಾಗೂ ಅವನ ಮಡದಿ ಗೌರಿಯ ಸುಂದರವಾದ ಯುಗಳ ಮೂರ್ತಿ ಕೇಂದ್ರ ಸ್ಥಾನದಲ್ಲಿವೆ. ಇದನ್ನು ಅಖಂಡ ಕರಿಯ ಬಳಪದ ಕಲ್ಲಿನಲ್ಲಿ ಕೆತ್ತಿಸಲಾಗಿದೆ. ಈ ಕೇಂದ್ರ ಗುಡಿಯ ಪಕ್ಕದಲ್ಲಿ ಓಗೆಣ್ಣ ಮುತ್ತ್ಯಾನ ಮಗನಾದ ಬನಸಿದ್ಧ ಹಾಗೂ ಹೆಂಡತಿ ಗೌರಾದೇವಿಯ ವಿಗ್ರಹಗಳಿವೆ. ಈ ಗುಡಿಯ ಬಲಬಾಜುವಿಗೆ ಓಗೆಣ್ಣ ಮುತ್ತ್ಯಾ ಹಾಗೂ ಅವನ ಮೊಮ್ಮಗನಾದ ಪಡದಾನಸಿದ್ಧ ಹಾಗೂ ಹುಲಿಬಂದಪ್ಪನ ವಿಗ್ರಹಗಳಿವೆ. ಇವುಗಳಿಗೆ ನಿತ್ಯ ಮೂರು ಸಲ ಪೂಜೆ ನಡೆಯುವುದಲ್ಲದೆ ವರ್ಷಕ್ಕೊಂದು ಸಲ ದೊಡ್ಡ ಪ್ರಮಾಣದ ಜಾತ್ರೆ ನಡೆಯುತ್ತದೆ.

ಕೇಂದ್ರ ಗುಡಿಯ ಹಿಂಬದಿಯಲ್ಲಿ ವಿಶಾಲವಾದ ಕಟ್ಟೆಯೊಂದರ ಮೇಲೆ ಭವ್ಯವಾದ ಭೂತಾಳಸಿದ್ಧನ ಕರಿಬಳಪದಲ್ಲಿ ಕೆತ್ತಿದ ನಿಂತ ನಿಲುವಿನ ಮೂರ್ತಿಯಿದೆ. ಇಷ್ಟು ದೊಡ್ಡ ಪ್ರಮಾಣದ ಗೌರವ ಭೂತಾಳಸಿದ್ಧನಿಗೆ ಯಾವ ಗುಡಿಯಲ್ಲೂ ದೊರೆತಿಲ್ಲ. ಭೂತಾಳಸಿದ್ಧನೆಂದರೆ ಸಾಮಾನ್ಯವಾಗಿ ಚಂದ್ರಲೇಪಿತ ಒಂದು ಗುಂಡುಕಲ್ಲು. ಅದರ ಬದಿಯಲ್ಲಿ ಅವನ ಆಯುಧವಾದ ಟೊಣಪೆ (ಒನಕೆಯನ್ನು ಹೋಲುವ ಕಟ್ಟಿಗೆಯ ತುಂಡು). ಆದರೆ ಇಲ್ಲಿ ಭೂತಾಳಸಿದ್ಧನ ಕೈಯಲ್ಲಿ ಕರಿಬಳಪದ ಕಲ್ಲಿನಲ್ಲಿಯೇ ತಯಾರಿಸಿದ ಗಧೆ ಇದೆ.

೪.೧.೩.೧ ಎಣ್ಣೆ ಮಜಲು : ಪ್ರತಿ ವರ್ಷ ಸಂಕ್ರಮಣಕ್ಕೆ ಈ ದೇವರ ಜಾತ್ರೆ ನಡೆಯುತ್ತದೆ. ಜನವರಿ ೧೨ರಂದು ಜಾತ್ರೆಯ ಪೂರ್ವಚಟುವಟಿಕೆಗಳು ಪ್ರಾರಂಭವಾಗುತ್ತವೆ. ಅಂದು ನಡೆಯುವ ಪ್ರಮುಖ ಕಾರ್ಯಕ್ರಮ ಎಣ್ಣೆ ಮಜಲು. ಅಂದು ಗುಡಿಯಲ್ಲಿರುವ ಐದು ನಂದಿ ಕೋಲುಗಳೊಂದಿಗೆ ಊರಲ್ಲಿ ಮೆರವಣಿಗೆ ಹೋಗುತ್ತಾರೆ. ಊರಲ್ಲಿರುವ ಎಲ್ಲಾ ದೇವರುಗಳಿಗೆ ಎಣ್ಣೆ ಹಾಕಿ ಮಜ್ಜನ ಮಾಡಿಸುತ್ತಾರೆ. ತಮ್ಮ ದೇವರ ಉತ್ಸವವೆಂದರೆ ಈ ಊರ ಜನರು ಕೇವಲ ಆ ದೇವರ ಉತ್ಸವವೆಂದು ಭಾವಿಸುವುದಿಲ್ಲ. ಅಂದು ತಮ್ಮ ಊರಿನ ಎಲ್ಲ ದೇವರನ್ನು ಗೌರವಿಸಬೇಕು ಎಂದು ಅವರು ನಂಬಿದ್ದಾರೆ. ಹೀಗೆ ಹೊರಟ ಮೆರವಣಿಗೆ ಮುಂಜಾನೆ ಹತ್ತು ಗಂಟೆಗೆ ಪ್ರಾರಂಭವಾಗಿ ಸಾಯಂಕಾಲ ನಾಲ್ಕು ಗಂಟೆಗೆ ಮುಗಿಯುತ್ತದೆ.

೪.೧.೩.೨ ಭೋಗಿಅಕ್ಷತಾ ಕಾರ್ಯಕ್ರಮ : ಮುರುದಿವಸ ಅಂದರೆ ಜನವರಿ ಹದಿಮೂರರಂದು ಭೋಗಿ ಇರುತ್ತದೆ. ಅಂದು ಅಕ್ಷತಾ ಕಾರ್ಯಕ್ರಮ ನಡೆಯುತ್ತದೆ. ಐದು ನಂದಿಕೋಲುಗಳನ್ನು ಗುಡಿಯ ಆವರಣದ ಮುಂದೆ ಇರುವ ಪಾದಗಟ್ಟೆಯಲ್ಲಿ ಕೂಡ್ರಿಸುತ್ತಾರೆ. ಐದರಲ್ಲಿ ಎರಡು ಪ್ರಮುಖ ನಂದಿ ಕೋಲುಗಳು ಡೊಳ್ಳೆ ಮನೆತನದವರಿಗೆ ಇರುತ್ತವೆ. ಈ ಎರಡರಲ್ಲಿ ಒಂದಕ್ಕೆ ಬಾಸಿಂಗ ಹಾಗೂ ಇನ್ನೊಂದಕ್ಕೆ ಸದರ ಬಾಸಿಂಗ ಎನ್ನುತ್ತಾರೆ. ಅಕ್ಷತಾ ಹಾಕುವ ಸಂದರ್ಭದಲ್ಲಿ ಲಿಂಗಾಯಿತ ಸ್ವಾಮಿಗಳು ಮಂಗಾಳಷ್ಟಕ ಹೇಳುತ್ತಾರೆ. ಉಳಿದಂತೆ ಒಡೆಯರು ಪೂಜೆಯ ಕೆಲಸ ನೆರವೇರಿಸುತ್ತಾರೆ. ಅಕ್ಷತೆ ಮುಗಿದ ನಂತರ ಐದೂ ನಂದಿ ಕೋಲುಗಳನ್ನು ಊರ ಅಗಸಿಯ ಬಾಗಿಲಲ್ಲಿ ಸ್ಥಾಪಿಸುತ್ತಾರೆ.

೪.೧.೩.೩ ಗಂಗಸ್ಥಲ : ಜನವರಿ ಹದಿನಾಲ್ಕನೆಯ ತಾರೀಖಿನಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಮತ್ತೆ ಕಾರ್ಯಕ್ರಮ ಪ್ರಾರಂಭವಾಗುತ್ತವೆ. ಗುಡಿಯೊಳಗಿನ ದೇವರಿಗೆ ಸಂಬಂಧಪಟ್ಟಂತೆ ಕಾರ್ಯಕ್ರಮ ಪ್ರಾರಂಭವಾಗುವುದು ಇಂದೇನೆ. ಎರಡು ಪಲ್ಲಕ್ಕಿಗಳು ಹಾಗೂ ಐದು ನಂದಿಕೊಲುಗಳು ಸೇರಿಕೊಂಡು ಹತ್ತೂರಿನ ಸಮೀಪದ ಸೀನಾ ನದಿಗೆ ಗಂಗಸ್ಥಳಕ್ಕೆ ಹೋಗುತ್ತವೆ. ಒಂದು ಪಲ್ಲಕ್ಕಿಯಲ್ಲಿ ಗುರು ಗೌರಿ ಸೋಮಲಿಂಗನ ಮೂರ್ತಿ ಇರುತ್ತದೆ. ಇನ್ನೊಂದು ಪಲ್ಲಕ್ಕಿಯಲ್ಲಿ ಬನಸಿದ್ಧನ ಮೂರ್ತಿ ಇರುತ್ತದೆ.

ಗಂಗಸ್ಥಲಕ್ಕೆ ಹೋಗಿ ದೇವರಿಗೆ ಸ್ನಾನ ಮಾಡಿಸಿಕೊಂಡು ಮೆರವಣಿಗೆಯಲ್ಲಿ ಮರಳಿ ಬರಬೇಕಾದರೆ ಸಾಯಂಕಾಲ ಐದು ಗಂಟೆ ಆಗಿರುತ್ತದೆ. ಮಧ್ಯಾಹ್ನದ ವೇಳೆಯಲ್ಲಿ ಗುಡಿಯ ಆವರಣದಲ್ಲಿ ಅನ್ನ ಸಂತರ್ಪಣೆ

[illegible]

[illegible]

[illegible]

ಇರುತ್ತದೆ. ಮೊದಲು ಒಡೆಯರ ಪಂಕ್ತಿ ಮುಗಿದು ನಂತರ ಉಳಿದ ಭಕ್ತರು ಪ್ರಸಾದ ಸೇವಿಸುವುದು ಇಲ್ಲಿನ ವಾಡಿಕೆ.

೪.೧.೩.೪ ಚಾಜದವರ ಮನೆಗೆ : ಪ್ರಸಾದ ಮುಗಿದ ನಂತರ ಪಲ್ಲಕ್ಕಿಗಳು ಹಾಗೂ ನಂದಿಕೋಲುಗಳು ಚಾಜದವರ ಮನೆಗೆ ಹೋಗುತ್ತವೆ. ಸೋಮಲಿಂಗನ ಪಲ್ಲಕ್ಕಿ ಬಟಗೇರಿ (ಕುರುಬರು) ಅವರ ಮನೆಯಲ್ಲಿ ಹಾಗೂ ಬನಸಿದ್ಧನ ಪಲ್ಲಕ್ಕಿ ಡೊಳ್ಳಿ (ಪಂಚಮಸಾಲಿ) ಅವರ ಮನೆಯಲ್ಲಿ ಕೂಡ್ರುತ್ತವೆ. ಅಂತೆಯೇ ನಂದಿಕೋಲುಗಳು ಡೊಳ್ಳಿ ಅವರ ಮನೆಗಳಲ್ಲಿ ಎರಡು, ನಾಗಶೆಟ್ಟಿ ಪಾಟೀಲರ ಮನೆಯಲ್ಲಿ ಒಂದು, ಕುಲಕರ್ಣಿ ಅವರ ಮನೆಯಲ್ಲಿ ಒಂದು ಹಾಗೂ ಕೋಳಿ ಸಮಾಜದವರ ಮನೆಯಲ್ಲಿ ಒಂದು ಕೂಡ್ರುತ್ತವೆ.

೪.೧.೩.೫ ಖಾರೀಕ ಬಾಳೆಹಣ್ಣು : ಅಂದೇ ರಾತ್ರಿ ಹತ್ತು ಗಂಟೆಯ ಸುಮಾರಿಗೆ ನಂದಿಕೋಲು ಹಾಗೂ ಪಲ್ಲಕ್ಕಿಗಳು ಚಾಜದವರ ಮನೆ ಬಿಟ್ಟು ಮೆರವಣಿಗೆಯಲ್ಲಿ ಗುಡಿಯ ಕಡೆಗೆ ಹೊರಡುತ್ತವೆ. ಡೊಳ್ಳು, ಹಲಗೆ, ಕೊಂಬು ತಾಳ, ದೀವಟಿಗೆಯವರೊಂದಿಗೆ ಮೆರವಣಿಗೆ ಸಾಗಿ ಬರುತ್ತದೆ. ದೀವಟಿಗೆ ಹಿಡಿಯುವ ಚಾಜ ಸಾಂಬಾ ಎಂಬ ಸಮಾಗಾರ ಸಮಾಜದವರಿಗೆ ಇರುತ್ತವೆ. ಹೀಗೆ ಮೆರವಣಿಗೆಯಲ್ಲಿ ಊರಾಡುವ ಸಂದರ್ಭದಲ್ಲಿ ದಾರಿ ಮಧ್ಯದ ಪ್ರತಿಯೊಂದು ಮನೆಯವರು ನೀರು ಹಾಕಿ ಪಲ್ಲಕ್ಕಿ ಹಾಗೂ ನಂದಿಕೋಲುಗಳನ್ನು ಸ್ವಾಗತಿಸುತ್ತಾರೆ. ಪಲ್ಲಕ್ಕಿಯೊಳಗಿನ ದೇವರಿಗೆ ಹಾರ ಹಾಕುತ್ತಾರೆ ಹಾಗೂ ಪಲ್ಲಕ್ಕಿಯ ಮೇಲೆ ಖಾರೀಕ, ಬಾಳೆಹಣ್ಣುಗಳನ್ನು ಹಾರಿಸುತ್ತಾರೆ. ಪಲ್ಲಕ್ಕಿಗಳು ಗುಡಿ ತಲುಪಬೇಕಾದರೆ ನಸುಕಿನ ಐದು ಗಂಟೆಯಾಗಿರುತ್ತದೆ.

೪.೧.೩.೬ ಹೋಮ : ಜನವರಿ ಹದಿನೈದನೆಯ ತಾರೀಖಿನ ನಸುಕಿನ ಐದು ಗಂಟೆಗೆ 'ಹೋಮ' ಕಾರ್ಯಕ್ರಮ ಪ್ರಾರಂಭವಾಗುತ್ತದೆ. 'ಹೋಮ'ವನ್ನು ಶ್ರೀಗಂಧದ ಕಟ್ಟಿಗೆಗಳಿಂದ ಸಿದ್ಧಪಡಿಸಿರುತ್ತಾರೆ. ಹೋಮದ ಮೇಲೆ ಸ್ಥಾಪಿಸಲಾಗಿರುವ ಕಟ್ಟಿಗೆಯೊಂದಕ್ಕೆ ಸೀರೆ ಉಡಿಸುತ್ತಾರೆ. ಕೊರಳಿಗೆ ತಾಳಿ ಕಟ್ಟುತ್ತಾರೆ. ಕಾಲಿಗೆ ಉಂಗುರ ತೊಡಿಸುತ್ತಾರೆ. ನಂತರ ಉಡಿ ತುಂಬುತ್ತಾರೆ. ತೆಂಗು ಒಡೆದು ಪೂಜೆ ಮಾಡುತ್ತಾರೆ. ಇವನ್ನೆಲ್ಲ ಹೋಮದಲ್ಲಿರುವ 'ಚದರ'ದಲ್ಲಿ ಹಾಕುತ್ತಾರೆ. ನಂತರ ಹೋಮ ಹೊತ್ತಿಸಲಾಗುತ್ತದೆ. ಹೋಮ ಹೊತ್ತಿಸುವ ಚಾಜ ಹತ್ತೂರಿನ ಶಿವಗೊಂಡೆ ಎನ್ನುವ ನಡತನದವರ ಮನೆತನಕ್ಕೆ ಇರುತ್ತದೆ.

೪.೧.೪ ಭಂಡಾರಕವಟೆ

ಭಂಡಾರಕವಟೆಯ ಸ್ಥಾನಿಕ ದೇವರು ಅಮೋಘಸಿದ್ಧನ ಪುಣ್ಯದ ಮಗನಾದ ಮಾಸಿದ್ಧಪ್ಪ. ರೈತರ ಬದುಕಿನೊಂದಿಗೆ ಬೆಸೆದುಕೊಂಡು ನಡೆಯುವ ಈ ಜಾತ್ರೆ ತುಂಬಾ ವಿಶೇಷವಾದುದಾಗಿದೆ. ಭಂಡಾರ ಕವಟೆಯಲ್ಲಿ ಮಾಸಿದ್ಧಪ್ಪನ ಹೆಸರಿನಲ್ಲಿ ಭವ್ಯವಾದ ಗುಡಿಯೊಂದಿದೆ. ಈ ಗುಡಿಯಲ್ಲಿ ಅವನ ಮಗ ಅಂಬ್ರಾಯ ಹಾಗೂ ಭೂತಾಳಸಿದ್ಧ ಕೂಡಾ ನೆಲೆಸಿದ್ದಾರೆ. ಈ ಊರಿನ ಜಾತ್ರೆ ಪ್ರತಿವರ್ಷ ಭಾರತ ಹುಣ್ಣಿಮೆಗೆ ಜರುಗುತ್ತದೆ. ಜಾತ್ರೆಯ ಆಚರಣೆಯಲ್ಲಿರುವ ವಿಧಿ ನಿಷೇಧಗಳು ತುಂಬಾ ಕುತೂಹಲಕರವಾಗಿವೆ.

೪.೧.೪.೧ **ಕ್ಷೌರ-ಮೌನ :** ಈ ಆಚರಣೆಯಲ್ಲಿ ಗುಡಿಯ ಮಾಸಿದ್ಧಪ್ಪ ಮತ್ತು ಅಂಬ್ರಾಯಿ ಅವರ ಮಾರಾಯರು ಹಾಗೂ ಗುಡಿಯ ಹೂಗಾರ ಪಾಲ್ಗೊಳ್ಳುತ್ತಾರೆ. ಈ ಮೂರು ಜನ ಗುಡಿಗೆ ಬರುವ ಮುನ್ನ ಮುಖ ಹಾಗೂ ತಲೆ ಕ್ಷೌರ ಮಾಡಿಸಿಕೊಂಡಿರುತ್ತಾರೆ. ಕ್ಷೌರ ಮುಗಿಸಿಕೊಂಡು ಊರ ಬದಿಗೆ ಹರಿಯುವ ಭೀಮಾನದಿಗೆ ಹೋಗಿ ಸ್ನಾನ ಮಾಡಿಕೊಂಡು ಬಂದಿರುತ್ತಾರೆ. ಸ್ನಾನ ಮುಗಿಯುತ್ತಿದ್ದಂತೆ ಮೂವರೂ ಮೌನವ್ರತ ಆಚರಿಸುತ್ತಾರೆ. ಜಾತ್ರೆಯ ಎಲ್ಲ ಕಾರ್ಯಕ್ರಮ ಮುಗಿಯುವವರಿಗೆ ಅವರು ಅಪ್ಪಿತಪ್ಪಿಯೂ ಮಾತನಾಡುವುದಿಲ್ಲ. ಏನಿದ್ದರೂ 'ಸೂಚ' ಮೂಲಕವೇ ಸಂವಹನ ಮಾಡುತ್ತಾರೆ.

೪.೧.೪.೨ **ತಸ್ತಮಗಿ-ಪರ್ರ್ಯಾಣ-ಧೂಪಾರತಿ :** ಸ್ನಾನ ಮುಗಿಸಿ ಮೌನವ್ರತ ಧರಿಸಿ ಈ ಮೂವರೂ ಗುಡಿಯ ಒಳಗೆ ಬರುವಷ್ಟರಲ್ಲಿ ಗುಡಿಯ ಪೌಳಿಯಲ್ಲಿ ಸಾವಿರಾರು ಜನ ನೆರೆದಿರುತ್ತಾರೆ. ಮೂವರೂ ಬಂದು ಸ್ವಲ್ಪ ಹೊತ್ತಿನವರೆಗೆ ಮೌನವಾಗಿ ಮಾಸಿದ್ಧಪ್ಪನ ಗುಡಿಯ ಕಟ್ಟೆಯ ಮೇಲೆ ಕುಳಿತಿರುತ್ತಾರೆ. ಮಾಸಿದ್ಧಪ್ಪನ ಪೂಜಾರಿ ಥಟ್ಟನೆ ಚಿಟಿಗೆ ಮೂಲಕ ಸೂಚನೆ ಕೊಡುತ್ತಾನೆ. ತಕ್ಷಣವೇ ಮೂವರೂ ಎದ್ದು ಗುಡಿಯಿಂದ ಹೊರಗೆ ಬರುತ್ತಾರೆ. ಮೂವರೂ ಸೇರಿ ಕುಂಬಾರ ಮನೆಗೆ ಹೋಗುತ್ತಾರೆ.

ಜಾತ್ರೆಯ ಆಚರಣೆಗೆಂದೇ ಈ ಊರಿನ ಕುಂಬಾರ ಮನೆತನದವರು ತಯಾರಿಸಿಟ್ಟ ತಸ್ತಮಗಿ, ಪರ್ರ್ಯಾಣ ಹಾಗೂ ಧೂಪಾರತಿಯನ್ನು ತೆಗೆದುಕೊಂಡು ಬರುತ್ತಾರೆ. ಅವುಗಳನ್ನು ತಂದು ಗುಡಿಯ ಕಟ್ಟೆಯ ಮೇಲೆ ಇಟ್ಟು ಮೌನವಾಗಿ ಹೋಗಿ ತಮ್ಮ ತಮ್ಮ ಜಾಗೆಯಲ್ಲಿ ಕುಳಿತುಕೊಳ್ಳುತ್ತಾರೆ. ನಂತರದ ಆಚರಣೆಯಲ್ಲಿ ಹೂಗಾರನೇ ಪ್ರಮುಖ ಪಾತ್ರಧಾರಿಯಾಗಿ ಕೆಲಸ ನಿರ್ವಹಿಸುತ್ತಾನೆ.

೪.೧.೪.೩ **ಗೌಡರ ಮನೆಯ ಬತ್ತಿ :** ಮಾಸಿದ್ಧಪ್ಪನ ಪೂಜಾರಿ 'ಸೂಚ' ಕೊಟ್ಟ ತಕ್ಷಣ ಹೂಗಾರ ಒಬ್ಬನೇ ಎದ್ದು ಊರ ಗೌಡರ ಮನೆಗೆ ಬರುತ್ತಾನೆ. ಗೌಡರ ಮನೆಯ ಮಾಡದಲ್ಲಿ ಆಚರಣೆಗೆ ಬೇಕಾದ ಅರಳೆಯನ್ನು ಇಟ್ಟಿರುತ್ತಾರೆ. ಈ ಅರಳೆಯನ್ನು ಹೂಗಾರ ತನ್ನ ಹೆಗಲ ಮೇಲಿನ ಶಲ್ಲೆಯಲ್ಲಿ ತುಂಬಿಕೊಂಡು ಬರುತ್ತಾನೆ. ತಂದ ಅರಳೆಯನ್ನು ಅಂಬ್ರಾಯಿಯ ಗುಡಿಯ ಮುಂದೆ ಇಡುತ್ತಾನೆ. ಹೀಗೆ ಶಲ್ಲೆಯಿಂದ ಅರಳೆಯನ್ನು ಸುರುವುವಾಗ ಅರಳಿ ಬಿಚ್ಚಿ ಬಿಡಿಬಿಡಿಯಾಗಿ ಬಿದ್ದರೆ ಅಲ್ಲಿ ನೆರೆದ ರೈತರು ಸಮಾಧಾನದ ನಿಟ್ಟಿಸಿರು ಬಿಡುತ್ತಾರೆ. ಯಾಕೆಂದರೆ ಅರಳಿ ಬಿಚ್ಚಿ ಬಿದ್ದರೆ ಈ ವರ್ಷದ ಹತ್ತಿಯ ಫಸಲು ಕುಡ್ಡು ಬೀಳುವುದಿಲ್ಲವೆಂದು ಭಾವಿಸುತ್ತಾರೆ. ಅರಳಿ ಇಡಿಯಾಗಿ ಗುತ್ತಾಗಿ ಬಿದ್ದರೆ ಈ ವರ್ಷದ ಹತ್ತಿಯ ಫಸಲು ಕುಡ್ಡು ಬೀಳುತ್ತದೆ ಎಂದು ನಂಬುತ್ತಾರೆ.

೪.೧.೪.೪ **ಶೀತಾಳ ನೀರು-ತೆನಿಗಣಿಕೆ :** ಗೌಡರ ಮನೆಯಿಂದ ಅರಳಿ ತಂದು ಹಾಕಿದ ಹೂಗಾರ ಸ್ವಲ್ಪ ಹೊತ್ತು ಮೌನವಾಗಿ ಕುಳಿತುಕೊಳ್ಳುತ್ತಾನೆ. ಮಾಸಿದ್ಧಪ್ಪನ ಪೂಜಾರಿಯ 'ಸೂಚ' ಬರುತ್ತಿದ್ದಂತೆ ತನ್ನ ಹೆಗಲ ಮೇಲಿನ ಕಂಬಳಿಯನ್ನು ಗೊಂಪಿ ಮಾಡಿಕೊಂಡು ತಲೆಯ ಮೇಲೆ ಹಾಕಿಕೊಂಡು ಸಿದ್ಧನಾಗುತ್ತಾನೆ.

ಕುಂಬಾರ ಮನೆಯಿಂದ ಈ ಹಿಂದೆ ತಂದ ತಸ್ತಮಗಿಯನ್ನು ಹೆಗಲಮೇಲೆ ಇಟ್ಟುಕೊಂಡು ಭೀಮಾನದಿಯ ಕಡಿಗೆ ಹೊರಡುತ್ತಾನೆ. ಗುಡಿಯಿಂದ ಭೀಮಾನದಿಗೆ ಹೂಗಾರ ಹೋಗುವ ದಾರಿಯುದ್ದಕ್ಕೂ ಭಕ್ತರು ಭಕ್ತಿ ಭಾವದಿಂದ ನಿಂತಿರುತ್ತಾರೆ. ನದಿಯ ನೀರು ತುಂಬಿಕೊಂಡು ಮರಳಿ ಗುಡಿಗೆ ಬರುತ್ತಾನೆ.

ಅದಾದ ಸ್ವಲ್ಪ ಹೊತ್ತಿನ ನಂತರ ಪೂಜಾರಿಯ ಸೂಚ ಪಡೆದು ತೆನಿಗಣಕಿ ತರಲು ಹೊರಡುತ್ತಾನೆ. ಗುಡಿಯ ಸಮೀಪದ ಯಾರದಾದರೂ ಹೊಲದಲ್ಲಿ ಹಾಕಿದ ಜೋಳದ ಗೂಡುಗಳಿಗೆ ಹೋಗಿ ತೆನಿಗಣಿಕೆಯ ಸೂಡನ್ನು ಹೊತ್ತುಕೊಂಡು ಬರುತ್ತಾನೆ. ಹಾಗೆ ಬರುವಾಗ ತೆನಿಗಣಿಕೆ ಗುಡಿಯ ಪೌಳಿಯ ತಲೆಬಾಗಿಲಿಗೆ ತಟ್ಟಿ ಬಂದರೆ ಈ ವರ್ಷದ ದನಗಳಿಗೆ ಕಣಿಕೆ ತುಟ್ಟಿಯಾಗುವುದೆಂತಲೂ, ತಟ್ಟದೆ ಸರಳವಾಗಿ ಬಂದರೆ ಕಣಿಕೆ ಸೋವಿಯಾಗುವುದೆಂತಲೂ ಅಲ್ಲಿ ನೆರೆದ ಜನರು ಭಾವಿಸುತ್ತಾರೆ. ತೆನಿಗಣಿಕೆಯನ್ನು ಉತ್ತರದ ದಿಕ್ಕಿಗೆ ತಲೆಮಾಡಿ ಹಾಕಿದರೆ ಆ ವರ್ಷ ಕಣಿಕೆ ಹುಲುಸು ಎಂದು ಭಾವಿಸುತ್ತಾರೆ.

೪.೧.೪.೫ ಗೌಡರ ಮನೆಯಲ್ಲಿ ಪ್ರಸಾದ : ಭಂಡಾರಕವಟೆಯ ಊರ ಗೌಡರಿಗೆ ಈ ಜಾತ್ರೆಯ ಸಂದರ್ಭದಲ್ಲಿ ಅರಳಿ ಒದಗಿಸುವ ಚಾಜ ಇರುವಂತೆ ಇಬ್ಬರೂ ಪೂಜಾರಿಗಳಿಗೆ ಹಾಗೂ ಒಬ್ಬ ಹೂಗಾರನಿಗೆ ಊಟ ಮಾಡಿಸುವ ಚಾಜ ಇರುತ್ತದೆ. ಸಾಯಂಕಾಲವಾಗುತ್ತಿದ್ದಂತೆ ಮೂವರೂ ಸೇರಿ ಊರ ಗೌಡರ ಮನೆಗೆ ಪ್ರಸಾದಕ್ಕೆಂದು ಹೋಗುತ್ತಾರೆ. ಅಲ್ಲಿಯೂ ಮೌನವಾಗಿಯೇ ಇದ್ದು ಪ್ರಸಾದ ಸ್ವೀಕರಿಸಿ ಮರಳಿ ಗುಡಿಗೆ ಬರುವ ವೇಳೆಗೆ ಸಂಜೆ ಆರು ಗಂಟೆಯಾಗಿರುತ್ತದೆ. ಜಾತ್ರೆಗೆಂದು ಬಂದ ಜನರಿಗೆ ಊರ ಜನರ ಮನೆಯಲ್ಲಿ ಊಟದ ವ್ಯವಸ್ಥೆ ಇರುತ್ತದೆ. ಸಾಯಂಕಾಲ ನಾಲ್ಕು ಗಂಟೆ ಅನ್ನುವುದರೊಳಗೆ ಅವರೆಲ್ಲ ಊಟ ಮುಗಿಸಿರುತ್ತಾರೆ.

೪.೧.೪.೬ ಊರೆಲ್ಲ ಖಾಲಿ : ಸಂಜೆಯಾಗುತ್ತಿದ್ದಂತೆ ಜಾತ್ರೆಗೆಂದು ಬಂದು ಸೇರಿದ ಜನರಲ್ಲಿ ಕೆಲವರು ತಮ್ಮ ಊರುಗಳಿಗೆ ಮರಳಿ ಹೋಗುತ್ತಾರೆ. ಇನ್ನು ಕೆಲವು ಜನ ಅದೇ ದಿವಸ ಪಕ್ಕದ ಊರಾದ ಉಮರಜಕ್ಕೆ ರೇವಣಸಿದ್ಧನ ನುಡಿ ಕೇಳಲು ಹೋಗುತ್ತಾರೆ. ಉಳಿದವರು ಇಲ್ಲಿಯೇ ಉಳಿಯುತ್ತಾರಾದರೂ ಯಾರೂ ಊರಿನಲ್ಲಿ ಇರುವಂತಿಲ್ಲ. ಅವರೆಲ್ಲ ತಮ್ಮ ತಮ್ಮ ಮನೆಗಳಿಗೆ ಕೀಲಿ ಹಾಕಿ ಕತ್ತಲಾಗುವುದರ ಒಳಗೆ ಊರು ಬಿಟ್ಟು ತಮ್ಮ ತಮ್ಮ ಹೊಲಕ್ಕೆ ಹೋಗಿ ಅಲ್ಲಿಯೇ ವಸ್ತಿ ಮಾಡುತ್ತಾರೆ. ಆ ರಾತ್ರಿ ಗುಡಿಯ ಆವರಣದಲ್ಲಿ ನಡೆಯುವ ಕಾರ್ಯಕ್ರಮವನ್ನು ಪೂಜಾರಿಗಳು, ಹೂಗಾರ ಹಾಗೂ ಡೋಣಜದ ಪೂಜಾರಿಗಳನ್ನು ಹೊರತು ಪಡಿಸಿ ಯಾರು ನೋಡಬಾರದೆಂದು ನಿಷೇಧವಿದೆ.

೪.೧.೪.೭ ಡೋಣಜದ ಗೂಳಿ : ಭಂಡಾರಕವಟೆಗೂ ಡೋಣಜಕ್ಕೂ ಅವಿನಾಭಾವ ಸಂಬಂಧವಿದೆ. ಭಂಡಾರಕವಟೆಯಲ್ಲಿ ನೆಲೆಸಿದ್ದ ಮಾಸಿದ್ಧಪ್ಪ ಡೋಣಜದ ಭಕ್ತನೊಬ್ಬನ ಅಪೇಕ್ಷೆಯ ಮೇರೆಗೆ ಡೋಣಜಕ್ಕೆ ಹೋಗಿ ನೆಲೆಸಿದನೆಂಬ ಪ್ರತೀತಿ ಇದೆ. ಪಡೆದಪ್ಪ ಅಮೋಘಸಿದ್ಧ ಕೊಟ್ಟ ಭಂಡಾರ ಭರಣಿಯ ಸಲುವಾಗಿ ಅಮೋಘಸಿದ್ಧನ ವರವಿನಮಕ್ಕಳು ಹಾಗೂ ಪುಣ್ಯದ ಮಗ ಮಾಸಿದ್ದಪ್ಪನ ನಡುವೆ ಜಗಳ ನಡೆದು ಶಾಪ

[illegible]

[illegible]

[illegible]

ಪ್ರತಿಶಾಪದ ಘಟನೆ ಜರುಗಿದ್ದನ್ನು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಅದೇ ಸಂದರ್ಭದಲ್ಲಿ ಅವರ ಮಧ್ಯ ಒಂದು ಒಡಂಬಡಿಕೆಯೂ ಆಗಿರುತ್ತದೆ. ಅದೇನೆಂದರೆ ಭಂಡಾರ ಭರಣಿಯನ್ನು ತೆಗೆದುಕೊಂಡು ಭೀಮಾನದಿಯನ್ನು ದಾಟಿ ಉತ್ತರದಿಕ್ಕಿಗೆ ಹೋಗಿರುವ ಮಾಸಿದ್ದಪ್ಪ ಮರಳಿ ಭೀಮಾನದಿಯನ್ನು ದಾಟಿ ದಕ್ಷಿಣ ದಿಕ್ಕಿಗೆ ಬರಕೂಡದು. ಆದರೆ ಭಕ್ತರ ಒತ್ತಾಯಕ್ಕೆ ಮಣಿದು ಮಾತು ತಪ್ಪಿದನೆಂದೂ ಆ ಕಾರಣವಾಗಿಯೇ ಅವನ ರೂಪ ಬೇರೂಪವಾಯಿತೆಂದೂ ಕಥನಗಳು ಹೇಳುತ್ತವೆ. ಮಾಸಿದ್ಧಪ್ಪನ ಭಂಡಾರ ರೂಪ ಹೋಗಿ ಚಂದ್ರ (ರಕ್ತಕೆಂಪು) ರೂಪವಾಯಿತು ಎಂದು ಕತೆ ಹೇಳುತ್ತಾರೆ. ವರವಿನ ಮಕ್ಕಳ ಹಾಗೂ ಪುಣ್ಯದ ಮಗ ಮಾಸಿದ್ದಪ್ಪನ ನಡುವಿನ ಆಸ್ತಿ ಜಗಳ ರಕ್ತಪಾತದಲ್ಲಿ ಕೊನೆಗೊಂಡಿರಬಹುದಾದುದರ ಕಡೆಗೆ ಈ ಕತೆ ಬೆರಳು ತೋರಿಸುತ್ತದೆ.

ಅದೇನೇ ಇದ್ದರೂ ಮಗ ಅಂಬ್ರಾಯಿಯನ್ನು ಭಂಡಾರಕವಟೆಯಲ್ಲಿ ಬಿಟ್ಟು ಮಾಸಿದ್ದಪ್ಪ ಡೋಣಜಕ್ಕೆ ಬಂದುದಂತೂ ಸತ್ಯ. ಹಾಗೆ ಡೋಣಜದಲ್ಲಿದ್ದಾಗ ಮಗನಾದ ಅಂಬ್ರಾಯಿಯನ್ನು ಭೆಟ್ಟಿಯಾಗಲು ಭಂಡಾರ ಕವಟೆಗೆ ಬರುತ್ತಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. ಈ ರೀತಿ ಭೆಟ್ಟಿಕೊಡುತ್ತಿದ್ದುದರ ನೆನೆಪಿಗಾಗಿ ಮಾಸಿದ್ದಪ್ಪ ಗೂಳಿಯಾಗಿ ಬಂದು ಮಗನಿಗೆ ಬಾನಉಣ್ಣಿಸಿ ಹೋಗುವ ಆಚರಣೆ ಇಂದಿಗೂ ನಡೆದುಕೊಂಡು ಬಂದಿದೆ. ಅದೂ ಅಲ್ಲದೆ ಅವರಿಬ್ಬರ ಭೆಟ್ಟಿಯ ಗೌಪ್ಯತೆಯನ್ನು ಸೂಚಿಸುವಂತೆ ಇಡೀ ಆಚರಣೆ ರಾತ್ರಿಯ ಕಾವಳದಲ್ಲಿಯೇ ಜರಗುತ್ತದೆ.

ಊರಿನ ಜನರೆಲ್ಲ ತಮ್ಮ ತಮ್ಮ ಮನೆಗಳಿಗೆ ಕೀಲಿ ಹಾಕಿಕೊಂಡು ಹೊಲಗಳ ಕಡೆಗೆ ಹೋದನಂತರ ಮಧ್ಯರಾತ್ರಿ ವೇಳೆ ಡೋಣಜದ ಗೂಳಿಯ ಬೆನ್ನ ಮೇಲೆ ಬಾನಹೇರಿಕೊಂಡು ಭೀಮಾನದಿಯನ್ನು ದಾಟಿ ಡೋಣಜದಿಂದ ಭಂಡಾರಕವಟೆಗೆ ನಾಲ್ಕು ಜನ ಬರುತ್ತಾರೆ. ಅವರಲ್ಲಿ ಇಬ್ಬರು ಪಂಚಮಸಾಲಿ ಸಮಾಜದವರು ಹಾಗೂ ಇನ್ನಿಬ್ಬರು ಮಾಸಿದ್ದಪ್ಪನ ಗುಡಿಯ ಪೂಜಾರಿಗಳು.

೪.೧.೪.೮ ಎಣ್ಣೆ ಭಂಡಾರ : ಊರ ಜನರೆಲ್ಲ ಅಂದಿನ ರಾತ್ರಿ ಇಲ್ಲಿ ನಡೆಯುವ ಕಾರ್ಯಕ್ರಮ ನೋಡುವುದಿಲ್ಲವಾದರೂ ಗುಡಿಯ ಇಬ್ಬರು ಪೂಜಾರಿಗಳು, ಒಬ್ಬ ಹೂಗಾರ ಹಾಗೂ ಡೋಣಜದ ನಾಲ್ಕು ಜನ ಸಾಕ್ಷೀಭೂತರಾಗುತ್ತಾರೆ. ಡೋಣಜದಿಂದ ಗೂಳಿ ಬಂದದ್ದೇ ತಡ ಹೂಗಾರ ಎಣ್ಣೆ ಭಂಡಾರ ತರಲು ಹೊರಡುತ್ತಾನೆ. ಎಣ್ಣೆ ಭಂಡಾರ ಒದಗಿಸುವ ಚಾಜ ಕೂಡಾ ಈ ಊರಿನ ಗೌಡರಿಗೆ ಇರುತ್ತದೆ. ಈ ಊರಿನ ಗೌಡರಿಗೆ ಇಷ್ಟೆಲ್ಲ ಚಾಜಗಳಿರುವುದಕ್ಕೂ ಮಾಸಿದ್ದಪ್ಪನ ಕೆಲ ಕಥನಗಳಿಗೂ ಅವಿನಾಭಾವ ಸಂಬಂಧವಿದೆ.

ಮಾಸಿದ್ದಪ್ಪನಿನ್ನೂ ತಾಯಿ ಪದ್ಮಾವತಿಯ ಸೇವೆಯಲ್ಲಿದ್ದ ಸಂದರ್ಭ. ಅರಕೇರಿಯಲ್ಲಿ ಭೀಕರ ಬರಗಾಲ ಬೀಳಲು ತಾಯಿಯ ಬಳಿಯಿದ್ದ ಏಳುನೂರು ಕಿಲ್ಲಾರಿಗಳನ್ನು ಮೇಯಿಸುತ್ತ ಮಾಸಿದ್ದಪ್ಪ ಭಂಡಾರ ಕವಟೆಯ ಸೀಮೆಗೆ ಬರುತ್ತಾನೆ. ಭಂಡಾರ ಕವಟೆಯ ಗೌಡನ ಜನ ಅವುಗಳಲ್ಲಿಯ ಒಂದು ಜಡದರ ಎಂಬ ಜಾತಿಯ ಗೂಳಿಯನ್ನು ಕದ್ದೊಯ್ದು ಕಡಿದು ಅಡಿಗೆ ಮಾಡಲಿಕ್ಕೆ ಪ್ರಾರಂಭಿಸಿದರು. ಗೂಳಿಯನ್ನು ಹುಡುಕುತ್ತ ಬಂದ

ಮಾಸಿದ್ಧಪ್ಪನಿಗೂ ಊರಗೌಡನಿಗೂ ವಾಗ್ವಾದ ಬೆಳೆಯುತ್ತದೆ. ನಿನ್ನ ಜನ ನಮ್ಮ ಗೂಳಿಯನ್ನು ಕೊಂದದ್ದು ನಿಜವಾಗಿದ್ದರೆ ನಿನ್ನ ಗೌಡಕಿ ನನಗೆ, ಸುಳ್ಳಾದರೆ ನನ್ನ ಕಂಬಳಿ ಭಂಡಾರ ಭರಣಿ ಬಿರುದುಬಾವಲಿ ನಿನಗೆ ಆಗಲಿ ಎಂದು ಪಂಥವೊಡ್ಡುತ್ತಾನೆ. ಆ ಗೂಳಿಯು ಗೌಡನಲ್ಲಿ ಇದ್ದದ್ದು ಸಿದ್ಧವಾದಾಗ ಗೌಡ ತನ್ನ ಗೌಡಕಿಯನ್ನು ಮಾಸಿದ್ಧಪ್ಪನಿಗೆ ಬಿಟ್ಟುಕೊಡಲು ತಯಾರಾಗುತ್ತಾನೆ. ಆಗ ಮಾಸಿದ್ಧಪ್ಪ ನಾನು ಇನ್ನಷ್ಟು ವರ್ಷಗಳ ನಂತರ ಇಲ್ಲಿಗೇ ಬರುವವನಿದ್ದೇನೆ. ಆಗ ನಾನು ನಿಂತು ಗೌಡಕಿ ಮಾಡುತ್ತೇನೆ. ನೀನು ಕುಂತು ಗೌಡಕಿ ಮಾಡು ಎಂದು ಹೇಳುತ್ತಾನೆ. ಈ ಹಿನ್ನಲೆಯಲ್ಲಿ ಜಾತ್ರೆಯಲ್ಲಿ ನಡೆಯುವ ಆಚರಣೆಗಳಿಗೂ ಈ ಊರಗೌಡರಿಗೂ ನಿಕಟ ಸಂಬಂಧವಿದೆ ಎಂದು ಊಹಿಸಲು ಸಾಧ್ಯ.

೪.೧.೩.೯ ಮುಂಗಾರಿ ಹಿಂಗಾರಿ ಕೊಡಗಳು : ಸ್ವಲ್ಪ ಹೊತ್ತಿನ ನಂತರ ಎರಡನೆಯ ಸಲ ಕುಂಬಾರ ಮನೆಗೆ ಹೋಗುವ ಕಾರ್ಯಕ್ರಮವಿರುತ್ತದೆ. ಈ ಸಲ ಹೂಗಾರನ ಜೊತೆಗೆ ಇನ್ನೊಬ್ಬ ಪೂಜಾರಿ ಇರುತ್ತಾರೆ. ಯಾಕೆಂದರೆ ಹೂಗಾರ ಮನೆಯಿಂದ ಎರಡು ಕೊಡಗಳನ್ನು ತೆರಬೇಕಾಗಿರುತ್ತದೆ. ಹಾಗೆ ಬರುವಾಗ ಮುಂದೆ ಬಂದ ಕೊಡವನ್ನು ಮುಂಗಾರಿ ಕೊಡ ಹಾಗೂ ಹಿಂದೆ ಬಂದ ಕೊಡವನ್ನು ಹಿಂಗಾರಿ ಕೊಡವೆಂದು ಗುರುತಿಸಿಕೊಂಡಿರುತ್ತಾರೆ.

೪.೧.೪.೧೦ ದೇವರಿಗೆ ಭಂಡಾರ : ಈ ಹಿಂದೆ ತಸ್ತಿ ಮಗಿಯಲ್ಲಿ ತಂದಿಟ್ಟ ಸೀತಾಳವನ್ನು ಬಳಸಿ, ಗೌಡರ ಮನೆಯಿಂದ ತಂದಿದ್ದ ಭಂಡಾರವನ್ನು ಪರ್‍ಯಾಣದಲ್ಲಿ ಕಲಸುತ್ತಾರೆ. ಹೀಗೆ ಕಲಸಿ ತಯಾರಾದುದಕ್ಕೆ ಹಸಿ ಭಂಡಾರವೆನ್ನುತ್ತಾರೆ. ಆ ಹಸಿ ಭಂಡಾರವನ್ನು ದೇವರಿಗೆ ಏರಿಸುತ್ತಾರೆ. ಅದಾದ ನಂತರ ಡೋಣಜದಿಂದ ತಂದ ಅಡುಗೆಯನ್ನು ದೇವರಿಗೆ ನೈವೇದ್ಯ ಹಿಡಿಯುತ್ತಾರೆ. ಮಾರಾಯರು ಶಾಕಾಹಾರಿಗಳಾಗಿರುವುದರಿಂದ ನೈವೇದ್ಯ ಸಾಮಾನ್ಯವಾಗಿ ಹಲಿಗಡಬು, ಬಾನ, ತುಪ್ಪ ಇರುತ್ತದೆ. ಹಾಗೆಯೇ ಅದೇ ಊರಿನಲ್ಲಿರುವ ಗುರು ಸೋಮಲಿಂಗನ ಗುಡಿಗೆ ಎಡೆಯನ್ನು ಒಯ್ದು ಪೂಜೆ ಮಾಡಲಾಗುತ್ತದೆ. ಮರಳಿ ಬಂದು ಗೌಡರ ಮನೆಯಿಂದ ಈಗಾಗಲೇ ತಂದಿಟ್ಟಿದ್ದ ಎಣ್ಣೆಯನ್ನು ಬಳಸಿ ಗುಡಿಯ ಮುಂದಿರುವ ಮಾಲಗಂಬಕ್ಕೆ ದೀಪ ಹಚ್ಚುತ್ತಾರೆ.

೪.೧.೪.೧೧ ಊಟಕಿ : ಇದೆಲ್ಲ ಮುಗಿದ ಮೇಲೆ ಅವರೆಲ್ಲ ಸೇರಿ ಊಟಕ್ಕೆ ಕುಳಿತುಕೊಳ್ಳುತ್ತಾರೆ. ಊಟ ಮಾಡುವಾಗಲೂ ಮೌನವಾಗಿಯೇ ಇರುತ್ತಾರೆ. ಇಲ್ಲಿನ ಒಂದು ವಿಶೇಷವೆಂದರೆ ಇವರೆಲ್ಲ ಇಂದು ಊಟ ಮಾಡಲು ಯಾವುದೇ ತೆರನಾದ ಲೋಹದ, ಮಣ್ಣಿನ ತಟ್ಟೆಗಳನ್ನು ಬಳಸುವುದಿಲ್ಲ. ಲೆಕ್ಕಿ ತಪ್ಪಲ ಇಲ್ಲವೇ ಔಡಲ ಎಲೆಯ ಮೇಲೆ ಊಟಬಡಿಸಿಕೊಂಡಿರುತ್ತಾರೆ. ಮಾಸಿದ್ಧಪ್ಪ ಹಾಗೂ ಅಂಬ್ರಾಯಿ ಒಂದು ಕಾಲಕ್ಕೆ ಅನುಭವಿಸಿರಬಹುದಾದ ಕಡುಬಡತನವನ್ನು ನೆನಪಿಸಿಕೊಳ್ಳುವ ಆಚರಣೆ ಇದಾಗಿರಬಹುದು.

ಮಾಸಿದ್ಧಪ್ಪನು ಊರೂರು ಅಲೆದಾಡುತ್ತ ಇಟೆ (ಪುಳಜೆ ಸಮೀಪ), ದೇವಾಂಗ (ಉತ್ತರ ಸೋಲಾಪುರ ತಾಲೂಕ), ಸೋಲಾಪುರ, ಹಂಜಗಿ(ಅಕ್ಕಲಕೋಟ ತಾಲೂಕ), ಬಂದಲಗಿ (ದ.ಸೋಲಾಪುರ ತಾಲೂಕ) ಭಂಡಾರ ಕವಟೆಗಳಲ್ಲಿ ತನ್ನ ಸಾಧುಣಿ ಮಾಡುತ್ತಿರಬೇಕಾದರೆ ಅವನಿಗೆ ಭಂಡಾರಕವಟೆಯಲ್ಲಿನ ತನ್ನ ಜಮೀನಿನ

ಕಂದಾಯ ಕಟ್ಟಲು ಆಗದೇ ಹೋಗುತ್ತದೆ. ಕಂದಾಯ ವಸೂಲಿ ಮಾಡಲು ಅಧಿಕಾರಿಗಳು ಬಂದಾಗ ಮಾಸಿದ್ದಪ್ಪ ಸೋಲಾಪುರದಲ್ಲಿ ಇರುತ್ತಾನೆ. ಕಂದಾಯ ಅಧಿಕಾರಿಗಳ ಕೈಗೆ ಮಾಸಿದ್ದಪ್ಪನ ಮಗ ಅಂಬ್ರಾಯ ಸಿಗುತ್ತಾನೆ. ಆಗ ಆ ಹುಡುಗನನ್ನು ಹಿಡಿದುಕೊಂಡು ಅವನ ತಲೆಯ ಮೇಲೆ ಕಲ್ಲನ್ನು ಹೊರಿಸಿ ನಿಲ್ಲಿಸುತ್ತಾರೆ. ತಂದೆ ಮಹಾಸಿದ್ದಪ್ಪ ಬಂದು ಕಂದಾಯ ತುಂಬುವವರೆಗೆ ಈ ಹುಡುಗ ಈ ಶಿಕ್ಷೆಯನ್ನು ಅನುಭವಿಸಬೇಕು ಎಂದು ಹೇಳುತ್ತಾರೆ. ಇದನ್ನು ಗಮನಿಸಿದ ಡೋಣಜದ ದೇವಪ್ಪಗೌಡ ಎಂಬುವವನು ಆ ಕಂದಾಯವನ್ನು ತುಂಬಿದನು ಎಂದು ಒಂದು ಕಥನವಿದೆ.[8] ಇದನ್ನು ಗಮನಿಸಿದರೆ ಮಾಸಿದ್ದಪ್ಪನ ಬಡತನದ ಅರಿವು ನಮಗಾಗದೇ ಇರದು. ತಮ್ಮ ದೈವ (ಮಾಸಿದ್ದಪ್ಪ ಹಾಗೂ ಅಂಬ್ರಾಯಿ) ಒಂದು ಕಾಲಕ್ಕೆ ಅನುಭವಿಸಿದ ಕಡುಬಡತನದ ಕಹಿ ಘಟನೆಯ ನೆನಪನ್ನು ಈ ಆಚರಣೆಯ (ಔಡಲ ಎಲೆಯಲ್ಲಿ ಊಟ) ಮೂಲಕ ಮಾಡಿಕೊಳ್ಳುತ್ತಿರಬಹುದು ಅನ್ನಿಸುತ್ತದೆ.

೪.೧.೪.೧೨ ಭಂಡಾರ ತಳ : ಊಟ ಮುಗಿಸಿದ ನಂತರ ಡೋಣಜದವರು ತಂದ ತಂಬಾಕು ಸೇವನೆಯಾಗುತ್ತದೆ. ತಂಬಾಕು ಸೇವೆಯ ಈ ಆಚರಣೆಯ ಮಾಸಿದ್ದಪ್ಪನು ಸಿದ್ದಾಟಿಕೆ ಸಾಧನೆಯ ಸಂದರ್ಭದಲ್ಲಿ 'ಹಸಿತಂಬಾಕು' ಸೇವನೆ ಮಾಡಿರುವುದನ್ನು ಸೂಚಿಸುತ್ತಿರಬಹುದು. ಯಾವ ಸಿದ್ಧರ ಗುಡಿಯಲ್ಲಿಯೂ ಕಂಡು ಬರದ ತಂಬಾಕು ಸೇವನೆ ಇಲ್ಲಿ ಮಾತ್ರ ಕಂಡು ಬರುತ್ತವೆ. ತಂಬಾಕು ಸೇವನೆಯಾದ ನಂತರ ದೇವರ ಮೇಲೆ ಏರಿಸಿದ ಹಸಿ ಭಂಡಾರವನ್ನು ಇಳಿಸುತ್ತಾರೆ. ಹಾಗೆ ಇಳಿಸಿದ ನಂತರ ದೇವರ ಮೈಮೇಲೆ ಎಷ್ಟು ಪ್ರಮಾಣದ ಭಂಡಾರ ಉಳಿಯತು ಎನ್ನುವುದರ ಆಧಾರದ ಆ ವರ್ಷದ ಫಸಲಿನ ಪ್ರಮಾಣವನ್ನು ನಿರ್ಧರಿಸುತ್ತಾರೆ.

ಈ ಎಲ್ಲ ವಿಧಿ ಆಚರಣೆಗಳು ಮುಗಿಯುತ್ತಿದ್ದಂತೆ ಡೋಣಜದವರು ಮರಳಿ ಗೂಳಿಯೊಂದಿಗೆ ತಮ್ಮ ಊರಿಗೆ ಹೋಗುತ್ತಾರೆ. ಪ್ರತಿವರ್ಷವೂ ಡೋಣಜದವರು ಗೂಳಿಯೊಂದಿಗೆ ಬಾನ ತೆಗೆದುಕೊಂಡು ಭಂಡಾರ ಕವಟಗೆ ಬರುತ್ತಾರೆ ಹಾಗೂ ನಸುಕಿನಲ್ಲಿಯೆ ಮರಳಿ ಹೋಗಿರುತ್ತಾರೆ. ಆದರೆ ಅವರು ಬಂದುದನ್ನಾಗಲಿ, ಮರಳಿ ಹೋದುದನ್ನಾಗಲಿ ಈ ಹೊತ್ತಿನವರೆಗೆ ಗುಡಿಯ ಇಬ್ಬರು ಮಾರಾಯರನ್ನು ಹಾಗೂ ಒಬ್ಬ ಹೂಗಾರನನ್ನು ಹೊರತು ಪಡಿಸಿ ಯಾರೂ ನೋಡಿಲ್ಲ.

ಆದರೆ ಅವರು ಬಂದು ಹೋದುದರ ಕುರುಹಾಗಿ ಹೂಗಾರ ತಂದು ಹಾಕಿದ ತೆನಿಗಣಕಿಯನ್ನು ಡೋಣಜದ ಗೂಳಿ ತಿಂದಿರುತ್ತದೆ. ಸೆಗಣಿ ಹಾಕಿರುತ್ತದೆ. ಉಚ್ಚೆ ಹೊಯ್ದಿರುತ್ತದೆ. ಅರಳಿ ಎಣ್ಣೆಯನ್ನು ಬಳಸಿ ಗುಡಿಯ ಮುಂದಿನ ಮಾಲಗಂಬಕ್ಕೆ ದೀಪಾಲಂಕಾರ ಮಾಡಲಾಗಿರುತ್ತದೆ. ಊಟ ಮಾಡಿದ ಬಾನ, ಹಲಿಗಡಬು, ತುಪ್ಪ ಚೆಲ್ಲಿರುತ್ತದೆ. ಹಿಂಗಾರಿ ಕೊಡ ಮುಂಗಾರಿ ಕೊಡದೊಳಗಿನ ನೀರು ಗುಡಿಯ ಮುಂದೆ ಚೆಲ್ಲಾಡಿರುತ್ತದೆ. ಹಸಿ ಭಂಡಾರ ಏರಿಸಿ, ಇಳಿಸಿದ ಕುರುಹಾಗಿ ದೇವರ ಮೈ ಮೇಲೆ ಇನ್ನೂ ಭಂಡಾರ ಉಳಿದಿರುತ್ತದೆ.

ಹೊಲದಲ್ಲಿ ವಸ್ತಿ ಮಾಡಿದ ಭಕ್ತರು ಮರುದಿವಸ ಗುಡಿಗೆ ಬಂದು ಇದೆಲ್ಲವನ್ನು ನೋಡುತ್ತಾರೆ. ಡೋಣಜದ ಗೂಳಿ ತೆನಿಗಣಿಕೆಯನ್ನು ಹೊಟ್ಟೆ ತುಂಬಾ ತಿಂದಿತು, ಹೆಚ್ಚು ಸೆಗಣಿ ಉಚ್ಚೆ ಹೋಯಿತು

ಎಂದು ಕಂಡು ಬಂದರೆ ಆ ವರ್ಷ ಸಮೃದ್ಧಿಯ ವರ್ಷವೆಂದು ಭಾವಿಸುತ್ತಾರೆ. ಊಟ ಮಾಡಿದ ಜಾಗೆಯಲ್ಲಿ ತುಪ್ಪ ಹೆಚ್ಚಿನ ಪ್ರಮಾಣದಲ್ಲಿ ಚೆಲ್ಲಾಡಿತ್ತು ಅಂದರೆ ಸುಖದ ಕಾಲ ಎಂದರ್ಥ. ಮುಂಗಾರಿ ಹಿಂಗಾರಿ ಕೊಡಗಳಿಂದ ಚೆಲ್ಲಾಡಿದ ನೀರಿನ ದಿಕ್ಕು ಹಾಗೂ ಪ್ರಮಾಣವನ್ನು ನೋಡಿ ಯಾವ ಯಾವ ದಿಕ್ಕಿಗೆ ಎಷ್ಟೆಷ್ಟು ಪ್ರಮಾಣದ ಮಳೆಯಾಗುತ್ತದೆ ಎನ್ನುವುದನ್ನು ತರ್ಕಿಸುತ್ತಾರೆ.

ಇಲ್ಲಿ ನಡೆಯುವ ಪ್ರತಿಯೊಂದು ವಿಧಿ ಆಚರಣೆಯನ್ನು ಗಮನಿಸಿದಾಗ ಅವೆಲ್ಲ ರೈತಾಪಿ ಜನರ ಬದುಕು ಬವಣೆಯೊಂದಿಗೆ ತಳಕು ಹಾಕಿಕೊಂಡಿರುವುದು ತಿಳಿದು ಬರುತ್ತದೆ. ಮಳೆರಾಯನನ್ನೆ, ಅವಲಂಬಿಸಿ ಸದಾ ಆತಂಕದಲ್ಲಿಯೆ ಬದುಕುವ ರೈತರಿಗೆ ಒಂದು ತೆರನಾದ ಆತ್ಮ ವಿಶ್ವಾಸವನ್ನು ತುಂಬುವ ಕೆಲಸವನ್ನು ಇವೆಲ್ಲ ಆಚರಣೆಗಳು ಮಾಡುತ್ತಿರುತ್ತವೆ.[೯]

೪.೧.೫ ತೆರೆವಾಡ

ಕೋಲಾಪುರ ಜಿಲ್ಲೆಯ ಶಿರೋಳ ತಾಲೂಕಿನ ತೆರೆವಾಡದಲ್ಲಿ ಅಮೋಘಸಿದ್ಧನ ಎರಡನೆಯ ಪುಣ್ಯದ ಮಗ ನೆಲೆಸಿದ್ದಾನೆ. ಇವನು ಪಡೆದಪ್ಪ ನಿಂದ ಹೋಮದ ಕಂಬಳಿಯನ್ನು ಆಶೀರ್ವಾದ ರೂಪದಲ್ಲಿ ಪಡೆದವನು. ಆ ಕಾರಣವಾಗಿ ವರವಿನ ಮಕ್ಕಳೊಂದಿಗೆ ಮನಸ್ತಾಪ ಬೆಳೆಯಿಸಿಕೊಂಡವನು. ಮಾಸಿದ್ದಪ್ಪ ವರವಿನ ಮಕ್ಕಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಭೀವರಗಿ ಕೇಂದ್ರದಿಂದ ದೂರ ಹೋಗದೆ ತೊಂದರೆ ಅನುಭವಿಸಿದ್ದನ್ನು ಈಗಾಗಲೇ ನೋಡಿದ್ದೇವೆ. ಇದನ್ನು ಮಂಗರಾಯ ಮೊದಲೇ ಊಹಿಸಿದಂತೆ ತೋರುತ್ತದೆ. ಹೀಗಾಗಿ ಭೀವರಗಿ ಕೇಂದ್ರದಿಂದ ಬಹುದೂರದ ತೆರೆವಾಡದಲ್ಲಿ ಬಂದು ನೆಲೆಸಿದಂತಿದೆ.

ಅಮೋಘಸಿದ್ದ ಪರಂಪರೆಯ ಎಲ್ಲ ಸಿದ್ಧರ ಜಾತ್ರೆಗಳು ರೈತರ ಬದುಕಿನೊಂದಿಗೆ ತಳಕು ಹಾಕಿಕೊಂಡಿರುವಂತೆ ಮಂಗರಾಯನ ಜಾತ್ರೆ ಕೂಡಾ ರೈತರ ನಿರೀಕ್ಷೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡೇ ನಡೆಯುತ್ತದೆ. ಈ ಜಾತ್ರೆ ಮಹಾಶಿವರಾತ್ರಿಯಾದ ಐದನೆಯ ದಿವಸಕ್ಕೆ ಪ್ರಾರಂಭವಾಗಿ ಮೂರು ದಿವಸಗಳವರೆಗೆ ಜರಗುತ್ತದೆ.

೪.೧.೫.೧ ಅರ್ಾಣಸಿದ್ಧನ ಪಲ್ಲಕ್ಕಿ : ಮೊದಲ ದಿವಸ ಬೆಳಿಗ್ಗೆ ಸದಲಗಾ ಗ್ರಾಮದಿಂದ ಅರ್ಾಣಸಿದ್ಧನ ಪಲ್ಲಕ್ಕಿ ತೆರೆವಾಡಕ್ಕೆ ಬರುತ್ತದೆ. ಪಲ್ಲಕ್ಕಿ ನೇರವಾಗಿ ಮಂಗರಾಯನ ಗದ್ದಿಗೆಯ ಮನೆಗೆ ಬರುತ್ತದೆ. ಅಮೋಘಸಿದ್ದ ಪರಂಪರೆಯ ಸಿದ್ಧರಲ್ಲಿ ಕೆಲವರಿಗೆ ಗದ್ದಿಗೆ ಮನೆ ಹಾಗೂ ಗುಡಿ ಎಂಬ ಎರಡು ತಾಣಗಳಿರುತ್ತವೆ. ಮಂಗರಾಯನಿಗೂ ಸಹ ಎರಡು ತಾಣಗಳಿವೆ. ಮಂಗರಾಯನ ಗದ್ದಿಗೆ ಮನೆಯಿಂದ ಮಂಗರಾಯ ಹಾಗೂ ಅರ್ಾಣಸಿದ್ಧರ ಪಲ್ಲಕ್ಕಿಗಳು ಮೆರವಣಿಗೆಯಲ್ಲಿ ಹೊರಟು ಊರು ಸುತ್ತಾಡಿ ಊರ ಹೊರಗಿರುವ ಮಂಗರಾಯನ ಗುಡಿಗೆ ಬರುತ್ತದೆ. ಪಲ್ಲಕ್ಕಿಗಳು ಗುಡಿ ತಲಪುವ ವೇಳೆಗೆ ಸಾಯಂಕಾಲವಾಗಿರುತ್ತದೆ. ಪಲ್ಲಕ್ಕಿಯೊಂದಿಗೆ ಬಂದ ಊರ ಜನ ಹಾಗೂ ಪರವೂರಿನ ಜನರಿಗೆ ಅಂದು ರಾತ್ರಿ ಗುಡಿಯ ಆವರಣದಲ್ಲಿಯೇ ಪ್ರಸಾದ ವ್ಯವಸ್ಥೆಯಾಗುತ್ತದೆ. ಈ ರಾತ್ರಿಯ ಊಟದ ಚಾಜ ಊರಿನ ಮಗದಮ ಎನ್ನುವ ಮನೆತನದವರಿಗೆ ಇರುತ್ತದೆ.

೪.೧.೫.೨ ಪಂಚಗಂಗಾನದಿಗೆ : ಗುಡಿಯ ಆವರಣದಲ್ಲಿ ಅಂದು ರಾತ್ರಿಯಿಡೀ ಡೊಳ್ಳಿನ ಹಾಡುಗಾರಿಕೆ ನಡೆಯುತ್ತದೆ. ನಸುಕಿನ ನಾಲ್ಕು ಗಂಟೆಯಾಗುತ್ತಿದ್ದಂತೆ ಎರಡೂ ಪಲ್ಲಕ್ಕಿಗಳನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಊರಿನ ಪೂರ್ವದಿಕ್ಕಿನಲ್ಲಿ ಹರಿದಿರುವ ಪಂಚಗಂಗಾ ನದಿಗೆ ಹೋಗುತ್ತಾರೆ. ಈ ಆಚರಣೆಗೆ 'ಗಂಗಸ್ಥಲ'ವೆಂದೂ ಕರೆಯುತ್ತಾರೆ. ಗಂಗಸ್ಥಲದಲ್ಲಿ ಇಬ್ಬರೂ ದೇವರಿಗೆ ಪೂಜೆ ಸಂದ ನಂತರ ಅಲ್ಲಿ ನೆರೆದ ಭಕ್ತರು ತಾವು ತಂದ ತೆಪ್ಪಗಳನ್ನು ಪಂಚಗಂಗಾ ಹೊಳೆಯಲ್ಲಿ ತೇಲಿಬಿಡುತ್ತಾರೆ. ತಮ್ಮ ಬದುಕಿಗೆ ಆಧಾರವಾದ 'ಗಂಗೆ'ಗೆ ಊರ ಜನರೆಲ್ಲ ಸೇರಿ 'ಬಾಗೀನ' ಅರ್ಪಿಸಿದಂತೆ ಈ ಆಚರಣೆ ಇರುತ್ತದೆ.

೪.೧.೫.೩ ಈರಕಾರರ ಅಲಗು ಆಟ : ತೆಪ್ಪ ತೇಲಿ ಬಿಡುವ ಆಚರಣೆ ಮುಗಿದ ನಂತರ ಈರಕಾರರು ಎರಡೂ ಪಲ್ಲಕ್ಕಿಗಳ ಎದುರಿಗೆ ಬಂದು ನಿಲ್ಲುತ್ತಾರೆ. ತಮ್ಮ ಕೈಯಲ್ಲಿರುವ ಹರಿತವಾದ ಅಲಗಿನಿಂದ ಜೋರಾಗಿ ತಮ್ಮ ಹೊಟ್ಟೆಯೊಳಗೆ ಚುಚ್ಚಿಕೊಳ್ಳುತ್ತಾರೆ. ಚುಚ್ಚಿಕೊಂಡ ರಭಸವನ್ನು ನೋಡಿದರೆ ಅಲಗು ಅವರ ಹೊಟ್ಟೆ ಹೊಕ್ಕು ಬೆನ್ನು ದಾಟಿ ಹೊರೆಗೆ ಬರಬೇಕು. ಆದರೆ ಹಾಗಾಗದಂತೆ ನೈಪುಣ್ಯತೆಯಿಂದ ಈರಗಾರರು ಅಲಗು ಆಡುತ್ತಾರೆ.

ತೆರೆವಾಡದ ಮಂಗರಾಯ ಹಾಗೂ ಚಬನೂರಿನ ಜಾತ್ರೆಯನ್ನು ಹೊರತುಪಡಿಸಿ ಈರಗಾರರು ಬೇರಾವ ಕಡೆಗೂ ಕಾಣಿಸಿಕೊಳ್ಳುವುದಿಲ್ಲ. ಈ ಈರಗಾರರು ಯಾರು ಎಂದು ಕೇಳಿದರೆ ಇವರು ಮಾಳಿಂಗರಾಯನ ಶಾಖೆಗೆ ಸಂಬಂಧಪಟ್ಟವರು ಎಂದು ಹೇಳುತ್ತಾರೆ. ಮಾಳಿಂಗರಾಯನ ಶಾಖೆಯವರು ಇಲ್ಲಿ ಏಕೆ ಬಂದಿದ್ದಾರೆ ಎಂದು ಪ್ರಶ್ನಿಸಿದರೆ ಅವರಲ್ಲಿ ಸರಿಯಾದ ಉತ್ತರವಿರಲಿಲ್ಲ. ಸದಾ ಸಂಘರ್ಷದ ಬದುಕನ್ನೆ ಬದುಕಿದ ಮಾಳಿಂಗರಾಯ ಜಕ್ಕಪ್ಪರಾಯ, ತುಕ್ಕಪ್ಪರಾಯ ಇವರ ಆಚರಣೆಗಳಲ್ಲಿ ಹೋರಾಟವನ್ನು ನೆನಪಿಸುವ ಈರಗಾರರು>ವೀರಕಾರರು ಬರುವುದು ಸಹಜ. ಆದರೆ ಮಂಗರಾಯನಾಗಲೀ ಅವನ ಮಕ್ಕಳಾದ ಅಮರಸಿದ್ಧ, ರುದ್ರಸಿದ್ಧ ಹಾಗೂ ಹಾಲಸಿದ್ಧರಾಗಲೀ ಅಂಥ ಸಂಘರ್ಷದ ಬದುಕನ್ನು ಎದುರಿಸಿದಂತೆ ತೋರುವುದಿಲ್ಲ. ಆದಾಗ್ಯೂ ಇವರ ಜಾತ್ರೆಯಲ್ಲಿ ಈರಗಾರರ ಆಗಮನ ಬಿಡಿಸಲಾಗದ ಒಗಟಾಗಿದೆ.

೪.೧.೫.೪ ಮಾದಿಗನ ಹೇಳಿಕೆ : ಅಲಗು ಆಡುವ ಆಚರಣೆ ಮುಗಿದ ನಂತರ ಮಾದಿಗ ಸಮಾಜದ ವ್ಯಕ್ತಿಯೊಬ್ಬನಿಂದ ಹೇಳಿಕೆ ನಡೆಯುತ್ತದೆ. ಹೇಳಿಕೆ ಮಾಡುವ ಈ ವ್ಯಕ್ತಿ ಮಹಾಶಿವರಾತ್ರಿಯ ದಿವಸದಿಂದಲೇ ಉಪವಾಸವೃತವನ್ನು ಕೈಕೊಂಡಿರುತ್ತಾನೆ. ಅಮೋಘಸಿದ್ಧ ಪರಂಪರೆಯಲ್ಲಿ ಹೇಳಿಕೆ ಮಾಡುವವರು ಸಾಮಾನ್ಯವಾಗಿ ಮುಖ ಕಟ್ಟಿಕೊಳ್ಳುತ್ತಾರೆ. ಆದರೆ ಇಲ್ಲಿ ಹೇಳಿಕೆ ಮಾಡುವ ವ್ಯಕ್ತಿ ಮುಖ ಕಟ್ಟಿಕೊಳ್ಳುವುದಿಲ್ಲ. ಅವನು ಕೈಕೊಂಡ ಉಪವಾಸ ವೃತ ಹಾಗೂ ಈರಗಾರರ ಆವೇಶಭರಿತ ಅಲಗು ಆಟ ಇವನಲ್ಲಿ ಪ್ರಭಾವ ಬೀರುವಂತೆ ತೋರುತ್ತದೆ.

ಪ್ರಮುಖ ಮಳೆಗಳ ಹೆಸರುಗಳನ್ನು ತೆಗೆದುಕೊಂಡು ಅವು ಈ ಭಾಗದ ರೈತರಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ದೊರೆಯುತ್ತವೆ ಎಂಬುದರ ಕುರಿತು ಹೇಳಿಕೆ ಮಾಡುತ್ತಾನೆ. ಊರ ಪಕ್ಕದಲ್ಲಿ ಹರಿಯುವ ಪಂಚಗಂಗಾನದಿ

ಈ ಭಾಗದ ಜನರ ಬದುಕಿನಲ್ಲಿ ಎಂಥೆಂಥ ಪಾತ್ರವಾಡಲಿದೆ ಎಂಬುದನ್ನು ಹೇಳುತ್ತಾನೆ. ಕುರುಬ ಸಮುದಾಯದವರು ತಮ್ಮ ಬದುಕಿನ ಭಾಗ್ಯವೆಂದು ಪರಿಗಣಿಸಿರುವ ಕುರಿಗಳಿಗೆ (ಭಾಗ್ಯಗಳಿಗೆ) ಬರಲಿರುವ ರೋಗ ರುಜಿನಗಳ ಕುರಿತು ಎಚ್ಚರಿಕೆಯ ರೂಪದ ಹೇಳಿಕೆ ಮಾಡುತ್ತಾನೆ. ಇನ್ನೂ ಸೋಜಿಗದ ಸಂಗತಿಯೆಂದರೆ ಸ್ಥಳೀಯ ರಾಜ್ಯದ ಹಾಗೂ ದೇಶದ ರಾಜಕಾರಣದ ಕುರಿತು ಒಗಟಿನ ರೂಪದ ಹೇಳಿಕೆ ಮಾಡುತ್ತಾನೆ. ಅಂಥ ಹೇಳಿಕೆಗಳಲ್ಲಿ ಕೆಲವು ಹೀಗಿವೆ:

* ಎಲೇ ಕೇಳ್ರೀ, ರೋಣಿ ಕೊಂಕಣ ಭಾಗ ಹೆಚ್ಚು, ಮಧ್ಯನಾಡ ಕಮ್ಮಿ
* ಒಂದು ಎತ್ತಿನ ಕೊಂಬ ತೋಯಿದ್ವತ್ ಇನ್ನೊಂದ ಇಲ್ಲ
* ನನ್ನ ಯಾರ ನಂಬ್ಯಾರ ಅವರ್‍ನ ಕಂಬಳಿ ನೆರಳಾಗ ಹಿಡಿದೇನ
* ಹಳಿಗ್ವಾಡಿ ಕಪ್ಪರಸಿ ಬಿದ್ದೀತು
* ಭಗವಾ ಝುಂಡಾ ಮೆರಿದೀತ
* ನಾಲ್ಕು ಬಟ್ಟ ನೆಲಾ ಕೆತ್ತಿ ಹೋದೀತ

ಹೇಳಿಕೆಗಳು ಮುಗಿದ ಮೇಲೆ ಹೇಳಿಕೆ ಮಾಡಿದಾತ ತನ್ನ ಉಪವಾಸವನ್ನು ಮುರಿಯುತ್ತಾನೆ.

ಅಷ್ಟೊತ್ತಿಗೆ ಬೆಳಗಿನ ಆರು ಗಂಟೆಯಾಗಿರುತ್ತದೆ. ಗಂಗಸ್ಥಲದಿಂದ ಮೆರವಣಿಗೆ ಹೊರಟು ಊರ ಹೊರಗಿನ ಗುಡಿ ತಲುಪಬೇಕಾದರೆ ಏಳು ಗಂಟೆಯಾಗಿರುತ್ತದೆ. ಇಲ್ಲಿ ನೆರೆದ ಭಕ್ತರಿಗೆಲ್ಲ ಊರ ಗೌಡರು ತಮ್ಮ ಮನೆಗೆ ಕರೆದುಕೊಂಡು ಹೋಗಿ ಪ್ರಸಾದ ಮಾಡಿಸುತ್ತಾರೆ. ಪ್ರಸಾದಕ್ಕೆ ಅಂಬಲಿ, ಹೋಳಿಗೆ, ಹುಗ್ಗಿಯ ವ್ಯವಸ್ಥೆ ಇರುತ್ತದೆ.

೪.೧.೫.೫ ಕೂಡಿ ಸಂಗ್ರಹ-ಕೂಡಿ ವಿತರಣೆ

ಮೂರನೆಯ ದಿವಸದ ಪ್ರಸಾದ ವಿಶೇಷ ರೀತಿಯದ್ದು. ಮೊದಲ ಎರಡು ದಿವಸ ಮಗದಮ್ಮ ಹಾಗೂ ಊರ ಗೌಡರು ಪ್ರಸಾದ ಮಾಡಿಸಿದರೆ, ಮೂರನೆಯ ದಿವಸ ಪ್ರಸಾದದ ಚಾಜ ಭಕ್ತರದ್ದಿರುತ್ತದೆ. ಪರವೂರಿನ ಹಾಗೂ ಸ್ಥಳೀಯ ಭಕ್ತರು ಅಂದಿನ ದಿವಸ ತಮ್ಮ ಸಾಮರ್ಥ್ಯವಿದ್ದಷ್ಟು ಅಡುಗೆ ತಯಾರಿಸಿ ಮಂಗರಾಯನ ಗುಡಿಗೆ ಅರ್ಪಿಸುತ್ತಾರೆ. ಹನಿಹನಿ ಕೂಡಿ ಹಳ್ಳವಾದಂತೆ ಪ್ರಸಾದದ ದೊಡ್ಡ ರಾಶಿಯೇ ಇಲ್ಲಿ ನಿರ್ಮಾಣವಾಗುತ್ತದೆ. ಕೂಡಿ ಸಂಗ್ರಹಿಸಿ ಕೂಡಿ ಹಂಚಿಕೊಂಡು ಸೇವಿಸುವ ಈ ಪರಿ ಅತ್ಯಂತ ವಿನೂತನವಾದುದಾಗಿದೆ. ಇನ್ನೂ ಒಂದು ವಿಶೇಷ ಸಂಗತಿ ಅಂದರೆ ಇಲ್ಲಿ ಸಂಗ್ರಹವಾದ ಆಹಾರದ ಒಂದು ತುಣುಕೂ ಗುಡಿಯ ಆವರಣ ದಾಟಿ ಹೊರಗೆ ಒಯ್ಯುವಂತಿಲ್ಲ.

೪.೧.೫.೬ ಪಲ್ಲಕ್ಕಿಗೆ ಕುರಿ ಉಣ್ಣೆ : ನಾಲ್ಕನೆಯ ದಿವಸ ನಸುಕಿನ ನಾಲ್ಕು ಗಂಟೆಗೆ ಎರಡೂ ಪಲ್ಲಕ್ಕಿಗಳು ಎದ್ದು ಮಂಗರಾಯನ ಗುಡಿಗೆ ಪ್ರದಕ್ಷಿಣೆ ಹಾಕುತ್ತವೆ. ಪಂಚಗಂಗಾ ನದಿಯ ದಂಡೆಯ ಮೇಲೆ ಹೇಳಿಕೆ

ಮಾಡಿದ ವ್ಯಕ್ತಿಯೇ ಇಂದು ಮತ್ತೊಮ್ಮೆ ಹೇಳಿಕೆ ಮಾಡುತ್ತಾನೆ. ಪಲ್ಲಕ್ಕಿಗಳು ಗುಡಿಗೆ ಪ್ರದಕ್ಷಿಣೆ ಹಾಕುವಾಗ ಅಲ್ಲಿ ನೆರೆದ ಭಕ್ತರು ಕಾರೀಖ, ಕೊಬ್ಬರಿ, ಭಂಡಾರ ಹಾಗೂ ಕುರಿಯ ಉಣ್ಣೆಯನ್ನು ಪಲ್ಲಕ್ಕಿಯ ಮೇಲೆ ಹಾರಿಸುತ್ತಾರೆ.[೧೦]

೪.೧.೬ ಮೊರಬ

ಮೊರಬದ ಸ್ಥಾನಿಕ ದೇವರು ಓಗಸಿದ್ಧಪ್ಪ. ಇವನ ಹೆಸರಿನಲ್ಲಿ ಜಾತ್ರೆ ಇಲ್ಲಿ ಅಕ್ಷತ್ತದಿಗೆ ಅಮವಾಸ್ಯೆಗೆ ನಡೆಯುತ್ತದೆ. ಮೊದಲ ದಿವಸ ದೇವರು ಗದ್ದಿಗೆ ಮನೆಯಿಂದ ಊರ ಹೊರಗಿನ ಗುಡಿಗೆ ಪಲ್ಲಕ್ಕಿಯಲ್ಲಿ ಮೆರವಣಿಗೆ ಸಮೇತ ಬರುತ್ತಾನೆ. ಮೆರವಣಿಗೆಯಲ್ಲಿ ಅಂಬಲಿಕೊಡವನ್ನು ಹೊತ್ತು ತಂದಿರುತ್ತಾರೆ. ಗುಡಿಯಲ್ಲಿ ದೇವರು ಮೂರು ದಿವಸ ವಸ್ತಿ ಮಾಡುತ್ತಾನೆ. ಮೂರನೆಯ ದಿವಸ ರಾತ್ರಿ ಮಳೆ ಬೆಳೆಯ ಕುರಿತ ಸೂಚ ನೀಡಲಾಗುತ್ತದೆ.

ಒಡೆಯರಾದವರು ಕಂಬಳಿಗೊಬ್ಬೆ ಹಾಕಿಕೊಂಡು ಹೆಗಲಮೇಲೆ ಮೂರು ದಿವಸದ ಹಿಂದೆ ತಂದಿಟ್ಟ ಅಂಬಲಿ ಗಡಿಗೆಯನ್ನು ಹೊತ್ತುಕೊಂಡು ಗುಡಿಯ ಪ್ರದಕ್ಷಿಣೆ ಹಾಕುತ್ತಾರೆ. ಮೂರು ಸಲ ಪ್ರದಕ್ಷಿಣೆ ಮುಗಿದ ನಂತರ ಅಂಬಲಿ ಗಡಿಗೆಯಲ್ಲಿ ಕೈಹಾಕಿ ಅಂಬಲಿಯನ್ನು ಸೂರಾಡುತ್ತಾರೆ. ನಂತರ ನೀರಿನ ಕೊಡ ಹೊತ್ತು ಗುಡಿಯನ್ನು ಸುತ್ತು ಹಾಕುತ್ತಾರೆ. ಪ್ರದಕ್ಷಿಣೆ ಮುಗಿಸಿ ಕೊಡಗಳನ್ನು ಉರುಳಿಸುತ್ತಾರೆ. ಇದಾದ ನಂತರ ಉಡಿಯಲ್ಲಿ ಬೀಜಗಳನ್ನು ತುಂಬಿಕೊಂಡು ಗುಡಿಯ ಪ್ರದಕ್ಷಿಣೆ ಹಾಕುತ್ತ ಬೀಜಗಳನ್ನು ಬಿತ್ತುತ್ತಾರೆ.

ಅಲ್ಲಿ ನೆರೆದ ಭಕ್ತರು ಯಾವ ಯಾವ ಭಾಗದಲ್ಲಿ ಅಂಬಲಿ ಎಷ್ಟೆಷ್ಟು ಪ್ರಮಾಣದಲ್ಲಿ ಸೂರಾಡಿದೆಯೋ ಅದರ ಪ್ರಮಾಣದ ಆಧಾರದ ಮೇಲೆ ಆ ವರ್ಷದ ಬೆಳೆಯ ಪ್ರಮಾಣವನ್ನು ಗ್ರಹಿಸುತ್ತಾರೆ. ಕೊಡದಿಂದ ಚೆಲ್ಲಲಾದ ನೀರು ಯಾವ ದಿಕ್ಕಿನಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಹರಿದಿದೆಯೋ ಅದರ ಆಧಾರದ ಮೇಲೆ ಆ ವರ್ಷ ಮಳೆಯ ಪ್ರಮಾಣವನ್ನು ಗುರುತಿಸುತ್ತಾರೆ. ಒಡೆಯರು ಉಡಿಯಿಂದ ತೆಗೆದು ಬಿತ್ತಿದ ಬೀಜಗಳೆಲ್ಲ ಗುಡಿಯ ಸುತ್ತಲೂ ಚೆಲ್ಲಾಡಿರುತ್ತವೆ. ಅವುಗಳನ್ನು ಆಯ್ದುಕೊಂಡು ಹೋಗಿ ತಮ್ಮ ಬಿತ್ತನೆಯ ಬೀಜಗಳಲ್ಲಿ ಕೂಡಿಸಿಟ್ಟುಕೊಳ್ಳುತ್ತಾರೆ. ಹಾಗೆ ಮಾಡಿದರೆ ಆ ಬೀಜಗಳು ಒಳ್ಳೆಯ ಫಸಲನ್ನು ಕೊಡುತ್ತವೆ ಎಂದು ಈ ಭಾಗದ ಜನರು ಅಚಲವಾಗಿ ನಂಬಿದ್ದಾರೆ.[೧೧]

೪.೧.೭ ಐನಾಪುರ : ಅಥಣಿ ತಾಲೂಕಿನ ಐನಾಪುರದ ಕೆರೆಸಿದ್ಧನ ಜಾತ್ರೆ ಸಂಕ್ರಮಣದಂದು ಜರಗುತ್ತದೆಯಾದರೂ ವರ್ಷದಲ್ಲಿ ಹನ್ನೆರಡು ತಿಥಿಗಳಿಗೆ ಊರಲ್ಲಿ ಪಲ್ಲಕ್ಕಿ ಉತ್ಸವ ನಡೆಯುತ್ತವೆ. ಕೆರೆಸಿದ್ಧನ ಕುರಿತು ಕುತೂಹಲಕರ ಕಥನವೊಂದಿದೆ. ಅಮೋಘಸಿದ್ಧನ ವರವಿನ ಮಗನಾದ ಬಿಳಿಯಾನಿಸಿದ್ಧನ ಎರಡನೆಯ ಮಗನ ಹೆಸರು ಓಗಸಿದ್ಧ. ಇವನನ್ನು ಅಥಣಿ ತಾಲೂಕಿನ ಹೊನ್ನಮೋಳದ ಒಡೆತನ ಮಾಡಲು ನೇಮಿಸಲಾಗುತ್ತದೆ. ಹಾಗೆ ಹೋಗುವಾಗ ಓಗಸಿದ್ಧ ಅಜ್ಜನ ಬೆತ್ತಗೋಲನ್ನು ಆಶೀರ್ವಾದ ರೂಪದಲ್ಲಿ

ಬೇಡುತ್ತಾನೆ. ಈ ಬೆತ್ತಗೋಲ ಇದ್ದವರು ಭಕ್ತರನ್ನು ಉದ್ಧರಿಸುವ ಶಕ್ತಿ ಪಡೆಯುತ್ತಾರೆ. ಆದರೆ ಅವರಿಗೆ ಸಂತಾನ ಫಲವಿರುವುದಿಲ್ಲವೆಂದು ಹೇಳುತ್ತಾನೆ. ಮಕ್ಕಳಾಗದಿದ್ದರೂ ಪರವಾಯಿಲ್ಲ ಭಕ್ತರ ಉದ್ಧಾರವಾದರೆ ಸಾಕು ಎಂದು ಒಗಸಿದ್ಧ ಬೆತ್ತಗೋಲನ್ನು ಪಡೆದು ಹೊನ್ನಮೋಳೆಗೆ ಬರುತ್ತಾನೆ. ಮೊದಮೊದಲ ಗಂಡನ ಈ ಆಯ್ಕೆ ಸರಿ ಎನ್ನುತ್ತಿದ್ದ ಒಗಸಿದ್ಧನ ಹೆಂಡತಿ ಸಿದ್ದಮ್ಮ ನಾವು ತಪ್ಪು ಆಯ್ಕೆ ಮಾಡಿಕೊಂಡೆವು ನಮಗೆ ಮಕ್ಕಳು ಬೇಕೇ ಬೇಕು ಎಂದು ಹಟ ಹಿಡಿದಳು. ಹೆಂಡತಿಯ ಹಟಮಾರಿತನವನ್ನು ನೋಡಿ ಒಗಸಿದ್ಧನಿಗೆ ಬೇಸರವಾಗುತ್ತದೆ. ಆದರೆ ಕೊನೆಗೆ ತನ್ನ ಸಹೋದರರ ಮಕ್ಕಳಲ್ಲಿ ಒಬ್ಬ ಮಗನನ್ನು ಕೇಳಿ ಪಡೆದುಕೊಂಡು ಬಂದರಾಯಿತೆಂದು ನಿರ್ಧರಿಸುತ್ತಾನೆ. ಅವನ ತಮ್ಮನಾದ ಶೀಲಸಿದ್ಧನಿಗೆ ಎಂಟುಜನ ಮಕ್ಕಳಿದ್ದರು. ಅವರಲ್ಲಿ ಒಬ್ಬ ಮಗನನ್ನು ತನಗೆ ಕೊಡು ಎಂದು ಅಚೇಗಾವಿಗೆ ಹೋಗಿ ಕೇಳುತ್ತಾನೆ. ಶೀಲಸಿದ್ಧ ತನ್ನ ಮಗನನ್ನು ಕೊಡಲು ನಿರಾಕರಿಸುತ್ತಾನೆ. ನಿರಾಸೆಗೊಂಡ ಒಗಸಿದ್ಧ ಇಂದಾಪುರದಲ್ಲಿದ್ದ ಅಣ್ಣನಾದ ಬುಳ್ಳೋಗಿಸಿದ್ಧನಲ್ಲಿಗೆ ಹೋಗುತ್ತಾನೆ. ಅವನಿಗೂ ಎಂಟು ಜನ ಮಕ್ಕಳಿದ್ದರು. ಎಂಟು ಜನರಲ್ಲಿ ಒಬ್ಬನನ್ನು ತನಗೆ ಕೊಡು ಎಂದು ಅಣ್ಣನಲ್ಲಿ ಕೇಳುತ್ತಾನೆ. ಅವನೂ ಹೊಟ್ಟೆಯ ಕೂಸನ್ನು ಬಿಟ್ಟುಕೊಡಲು ನಿರಾಕರಿಸುತ್ತಾನೆ. ಆಗ ದಾರಿಕಾಣದೆ, ಅಣ್ಣನಿಗೆ ತಿಳಿಯದ ಹಾಗೆ ಸಿದ್ದರಾಯ ಎಂಬ ಮಗುವನ್ನು ಕದ್ದು ಓಡಿ ಹೊನ್ನಮೋಳೆಯ ಕಡೆಗೆ ಹೊರಡುತ್ತಾನೆ. ಅಣ್ಣ ಹಾಗೂ ಅಣ್ಣನ ಹೆಂಡತಿ ಅಕ್ಕಾದೇವಿಯರು ಒಗಸಿದ್ಧನ ಬೆನ್ನು ಹತ್ತುತ್ತಾರೆ. ಓಡೋಡುತ್ತ ಐನಾಪುರಕ್ಕೆ ಬರುವಷ್ಟರಲ್ಲಿ ಅಣ್ಣನ ಕೈಯಲ್ಲಿ ಸಿಕ್ಕಿ ಬೀಳುತ್ತಾನೆ. ಸಿದ್ದರಾಯ ಇನ್ನೇನು ತನಗೆ ಸಿಗಲಾರ ಎಂದು ಖಚಿತಪಡಿಸಿಕೊಂಡು ಒಗಸಿದ್ಧ ಕೂಸನ್ನು ಐನಾಪುರದ ಕೆರೆಯಲ್ಲಿ ಚೆಲ್ಲಿಬಿಡುತ್ತಾನೆ. ಕೂಸು ನಿನ್ನದಾಗಿದ್ದರೆ ಕೆರೆಯಿಂದ ಎದ್ದು ಬರುತ್ತದೆ, ಕೂಗು ಎಂದು ಅಣ್ಣನಿಗೆ ಪಂಥವೊಡ್ಡುತ್ತಾನೆ. ಅಣ್ಣ ಪಂಥದಲ್ಲಿ ಸೋಲನ್ನು ಅನುಭವಿಸುತ್ತಾನೆ. ಸಿದ್ಧರಾಯ ಒಗಸಿದ್ಧನ ಪಾಲಿಗೆ ಉಳಿಯುತ್ತಾನೆ. ಕೆರೆಯಲ್ಲಿ ಸಿಕ್ಕ ಕಾರಣದಿಂದ ಅವನನ್ನು ಕೆರೆಸಿದ್ಧ ಎಂದು ಕರೆಯಲಾಯಿತು.

ಇಂಥ ಕೆರೆಸಿದ್ಧನ ಜಾತ್ರೆಯ ಸಂದರ್ಭದಲ್ಲಿ ಸೂಚ ಮೂಲಕ ಮಳೆ ಬೆಳೆಯ ಕುರಿತು ಭವಿಷ್ಯ ತಿಳಿದುಕೊಳ್ಳುತ್ತಾರೆ ಉಗಾದಿ ಪಾಡ್ಯದಂದು ನಡೆಯುವ ಪಲ್ಲಕ್ಕಿ ಉತ್ಸವದ ಸಂದರ್ಭದಲ್ಲಿ ನಾಲ್ಕು ಸಲ ಕೌಲ ಕೇಳುತ್ತಾರೆ. ಕೌಲ ಕೇಳುವುದು ಅಮೋಘಸಿದ್ಧ ಪರಂಪರೆಯಲ್ಲಿ ಅತ್ಯಂತ ಜನಪ್ರಿಯವಾದ ಆಚರಣೆ. ಕರಿಯೋಗಿಸಿದ್ಧನೆಂಬ ಸಿದ್ಧನೊಬ್ಬ ವಾಸಿಸುವ ಊರು ಕೌಲ>ಕವಲುಗುಡ್ಡ ಎಂದೇ ಪ್ರಸಿದ್ಧಿ ಪಡೆದಿದೆ. ಮೊದಲ ಕೌಲು ಐನಾಪುರದಲ್ಲಿಮಳೆಯ ಕುರಿತಾಗಿರುತ್ತದೆ. ಎರಡನೆಯ ಕೌಲು ಬೆಳೆಯ ಕುರಿತಾಗಿರುತ್ತದೆ. ಮೂರನೆಯ ಕೌಲು ಹೊಳೆ ಹೊಗುವ ಕುರಿತಾಗಿರುತ್ತದೆ. ನಾಲ್ಕನೆಯ ಕೌಲು ಊರನ್ನು ಕಾಯುವ ಕುರಿತಾಗಿರುತ್ತದೆ. ಕೌಲನ್ನು ಕೇಳುವಾಗ ದೇವರಿಗೆ ಹೂವನ್ನು ಹಚ್ಚುತ್ತಾರೆ. ಹೂವು ಕೊಡುವ ಸೂಚ ಆಧಾರದ ಮೇಲೆ ಭವಿಷ್ಯ ನಿರ್ಧರಿಸುತ್ತಾರೆ.[೧೨]

೪.೧.೮ ಉಮದಿ

ಉಮದಿಗೆ ನೇಮಿಸಲ್ಪಟ್ಟವನು ನಿಜವಾಗಿಯೂ ಕನ್ನಮುತ್ತ್ಯಾನ ಐದನೆಯ ಮಗನಾದ ಜ್ಯೋತಿಲಕ್ಕಪ್ಪ. ಆದರೆ ಅವನು ಶಾಂತ ಸ್ವಭಾವದವನೂ ಮುಗ್ಧನೂ ಆದುದರಿಂದ ಅವನಿಗೆ ಉಮದಿಯಲ್ಲಿಯೇ ಇದ್ದ ರಾವಳಸಿದ್ಧನೆಂಬುವವನು ಉಪಟಳ ಕೊಡಲು ಪ್ರಾರಂಭಿಸುತ್ತಾನೆ. ಅವನ ಉಪಟಳವನ್ನು ನಿಯಂತ್ರಿಸಲು ಸಹೋದರನಾದ ಮಲಕಾರಿಸಿದ್ಧನು ಬರಬೇಕಾಗುತ್ತದೆ. ಹೀಗಾಗಿ ಈ ಊರಿನಲ್ಲಿ ಮಲಕಾರಿಸಿದ್ಧ ಹಾಗೂ ಜ್ಯೋತಿ ಲಕ್ಕಪ್ಪ ಇಬ್ಬರನ್ನೂ ಸೇರಿಸಿಯೇ ಪೂಜೆ ಮಾಡುತ್ತಾರೆ ಹಾಗೂ ಜಾತ್ರೆ ಆಚರಿಸುತ್ತಾರೆ. ಉಮದಿಯಲ್ಲಿ ವರ್ಷಕ್ಕೆ ಎರಡು ಸಲ ಜಾತ್ರೆ ನಡೆಯುತ್ತದೆ. ದೀಪಾವಳಿಯಲ್ಲಿ ನಡೆಯುವ ಜಾತ್ರೆ ಎರಡು ದಿವಸದ್ದಾದರೆ, ಉಗಾದಿಯಲ್ಲಿ ನಡೆಯುವ ಜಾತ್ರೆ ಎಂಟು ದಿವಸದ್ದಾಗಿರುತ್ತದೆ. ಈ ಜಾತ್ರೆಯ ವಿಶೇಷವೆಂದರೆ ಹೆಚ್ಚಿನ ಸಂಖ್ಯೆಯ ಪಲ್ಲಕ್ಕಿಗಳನ್ನು ಸೇರಿಸುವುದು. ಛಟ್ಟಿ ಅಮವಾಸೆಯಂದು ಮುಮ್ಮೆಟಗುಡ್ಡದಲ್ಲಿ ತಂದೆ ಅಮೋಘಸಿದ್ಧನ ಜಾತ್ರೆಯ ವಿಶೇಷವೂ ಪಲ್ಲಕ್ಕಿಗಳ ಭೆಟ್ಟಿ. ಮುಮ್ಮೆಟಗುಡ್ಡದಲ್ಲಿ ಸೇರುವ ಪಲ್ಲಕ್ಕಿಗಳ ನಂತರದ ಸ್ಥಾನ ಉಮದಿಗೆ ಸೇರುತ್ತದೆ. ಒಡೆಯರಲ್ಲಿ ಶಿಸ್ತು ಬದ್ಧವಾದ ಸಂಘಟನೆ ಕಡಿಮೆಯೆಂದು ಹಿಂದಿನ ಅಧ್ಯಾಯದ 'ವರ್ತಮಾನದ ಒಡೆಯರು' ಎನ್ನುವ ಭಾಗದಲ್ಲಿ ಚರ್ಚಿಸಲಾಗಿತ್ತು. ಅಂಥ ಕೊರತೆಯನ್ನು ನೀಗಿಸುವ ಕೆಲಸವನ್ನು ಪಲ್ಲಕ್ಕಿ ಭೇಟಿ ಆಚರಣೆಗಳು ಮಾಡುತ್ತವೆ. ಹೀಗೆ ಕೂಡಿದಾಗ ಅವರಲ್ಲಿ ಒಂದು ರೀತಿಯ ಸಂಘ ಶಕ್ತಿಯ ಕಲ್ಪನೆ ಮೂಡುತ್ತದೆ. ಪರಸ್ಪರ ಹಂಚಿಕೊಳ್ಳುವ ಮೂಲಕ ಪರಂಪರೆಯ ಕೊಂಡಿಯನ್ನು ಗಟ್ಟಿಗೊಳಿಸುತ್ತಾ ಬರುತ್ತಾರೆ.

ಪಲ್ಲಕ್ಕಿಗಳ ಭೆಟ್ಟಿ ಅತ್ಯಂತ ಆಕರ್ಷಣೀಯವಾದ ಆಚರಣೆಯಾಗಿದೆ. ಒಡೆಯರು ತಮ್ಮ ತಮ್ಮ ದೇವ ಪಲ್ಲಕ್ಕಿಗಳನ್ನು ಹೆಗಲಮೇಲೆ ಹೊತ್ತುಕೊಂಡು ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಾರೆ. ಒಂದಕ್ಕೊಂದು ಪಲ್ಲಕ್ಕಿ ಭೆಟ್ಟಿಯಾದವೆಂದರೆ ಒಬ್ಬರನ್ನುಒಬ್ಬರು ಅಗಲಲು ಮನಸಿಲ್ಲದವರಂತೆ ತಬ್ಬಿಕೊಂಡು ನಿಂತವರಂತೆ ನಿಂತು ಬಿಡುತ್ತವೆ.

ಈ ಜಾತ್ರೆಯ ಇನ್ನೊಂದು ಆಕರ್ಷಕ ಆಚರಣೆಯೆಂದರೆ ಮಲಕಾರಿಸಿದ್ಧ ಹಣೆಗೆ ದಂಡಿಕಟ್ಟಿ ಕುಣಿಯುವುದು. ತಂಗಿ ಗುಬ್ಬೆವ್ವಳ ಗಂಡನನ್ನು ಕೊಂದ ಪಶ್ಚಾತ್ತಾಪಕ್ಕೆ ನಸುಕಿನ ವೇಳೆಯಲ್ಲಿ ಹಣೆಗೆ ದಂಡಿ ಕಟ್ಟಿ ಆಡುವುದು ತುಂಬಾ ರಮಣೀಯವಾಗಿರುತ್ತದೆ.[೧೩]

೪.೧.೯ ಕುಂಚನೂರು

ಕುಂಚನೂರು ಜಮಖಂಡಿಯಿಂದ ಹತ್ತುಕಿಲೋಮೀಟರ್ ದೂರದಲ್ಲಿರುವ ಕೆಂಚಮಾದಣ್ಣನ ಕ್ಷೇತ್ರ. ಕನ್ನಮುತ್ತ್ಯಾನ ಆರು ಜನ ಮಕ್ಕಳಲ್ಲಿ ಮೂರನೆಯವನು. ವರ್ಷದಲ್ಲಿ ಮೂರು ಸಲ ಕೆಂಚಮಾದಣ್ಣನ ಉತ್ಸವ ನಡೆಯುತ್ತದೆ. ದೀಪಾವಳಿ ಕಡೆ ಶ್ರಾವಣ ಹಾಗೂ ಉಗಾದಿ ಹೀಗೆ ಮೂರು ಸಲ ಉತ್ಸವ ಜರುತ್ತದೆ.

೪.೧.೯.೧ ಪೇಟೆಯಿಂದ ಹೂವು : ದೀಪಾವಳಿಯ ಸಂದರ್ಭದಲ್ಲಿ ಜರಗುವ ಉತ್ಸವವು ನರಕ ಚತುರ್ದಶಿಯ ಹಿಂದಿನ ದಿವಸ ಪ್ರಾರಂಭವಾಗುತ್ತದೆ. ಆ ದಿವಸವನ್ನು ಅವರು ಬರಮಪ್ಪನ ಪೂಜೆಯ ದಿವಸವೆಂದು ಕರೆಯುತ್ತಾರೆ. ಇದೇ ದಿವಸ ಉತ್ಸವ ಮೂರ್ತಿ ಕೆಂಚಮಾದಣ್ಣನಿಗೆ ಬೇಕಾಗುವ ಹೂವನ್ನು ವಿಜಾಪುರ ಪೇಟೆಯಿಂದ ತರುತ್ತಾರೆ. ಈ ಊರಿನಿಂದ ವಿಜಾಪುರ ಅರವತ್ತು ಎಪ್ಪತ್ತು ಕಿಲೋಮೀಟರ್ ದೂರದಲ್ಲಿದೆ. ಹೂವು ತರಲು ಹೋಗಿಬರುವ ವ್ಯಕ್ತಿ ತುಂಬಾ ಕಟ್ಟು ನಿಟ್ಟಿನ ನಿಯಮಗಳನ್ನು ಪಾಲಿಸ ಬೇಕಾಗುತ್ತದೆ. ದಾರಿ ಮಧ್ಯದಲ್ಲಿ ಜಲಬಾಧೆ ತೀರಿಸಿಕೊಂಡನೆಂದರೆ ಸ್ನಾನಮಾಡಿ ಮತ್ತೆ ಮಡಿಯಾಗಲೇ ಬೇಕು. ದಾರಿ ದೂರವಿರುವುದರಿಂದ ಹೂವು ತರಲು ಹೋದವನನ್ನು ದಾರಿಮಧ್ಯದಲ್ಲಿ ಸ್ವಾಗತಿಸಿ, ಪ್ರಸಾದ ವ್ಯವಸ್ಥೆ ಮಾಡಿಸಿ, ಮೆರವಣಿಗೆಯಲ್ಲಿ ಊರುದಾಟಿಸುವ ವ್ಯವಸ್ಥೆಯನ್ನು ದಾರಿಮಧ್ಯದ ಊರಿನ ಭಕ್ತರು ಮಾಡುತ್ತಾರೆ.

೪.೧.೯.೨ ಮಾದಣ್ಣನ ಕಟ್ಟೆ : ವಿಜಾಪುರದಿಂದ ಹೂವನ್ನು ತೆಗೆದುಕೊಂಡು ಕುಂಚನೂರ ಕಡೆಗೆ ಬರುವಾಗ ಹೂವನ್ನು ಸಿಕ್ಕ ಸಿಕ್ಕ ಜಾಗೆಯಲ್ಲಿ ಇಳಿಸಲು ಬರುವುದಿಲ್ಲ. ಭಾವಿಯ ಕಟ್ಟೆಯ ಮೇಲೋ ಊರಿನ ಗುಡಿಗಳ ಕಟ್ಟೆಯ ಮೇಲೋ ಹೂವನ್ನು ಇಳುವಿ ನೈಸರ್ಗಿಕ ಕ್ರಿಯೆಗಳನ್ನು ತೀರಿಸಿಕೊಂಡು ಶುಚಿರ್ಭೂತರಾಗಿ ಮತ್ತೆ ಪ್ರಯಾಣ ಬೆಳೆಯಿಸುತ್ತಾರೆ. ಹೂವನ್ನು ಹೊತ್ತುಕೊಂಡು ಅವನು ನೇರವಾಗಿ ಗುಡಿಗೆ ಬರುವಂತಿಲ್ಲ. ಊರ ಹೊರಭಾಗದಲ್ಲಿ ಮಾದಣ್ಣನಕಟ್ಟೆ ಎಂಬ ಕಟ್ಟೆ ಇರುತ್ತದೆ. ಅದರ ಮೇಲೆ ಹೂವನ್ನು ಇಳುವಬೇಕು. ಹೂವನ್ನು ಕಟ್ಟೆಯ ಮೇಲೆ ಇಳುವಲಾಗಿದೆ ಎಂದು ತಿಳಿಯುತ್ತಿದ್ದಂತೆ ಆ ಸಾಲಿನ ಪೂಜೆಯಿರುವ ಮಾರಾಯರ ಗದ್ದುಗೆ ಮನೆಯಿಂದ ಪಲ್ಲಕ್ಕಿಯನ್ನು ಮೆರವಣಿಗೆಯಲ್ಲಿ ಮಾದಣ್ಣನ ಕಟ್ಟೆಯ ಕಡೆಗೆ ತೆಗೆದುಕೊಂಡು ಬರುತ್ತಾರೆ. ಅಲ್ಲಿಂದ ಹೂ ಹಾಗೂ ಪಲ್ಲಕ್ಕಿ ಎರಡನ್ನೂ ಮೆರವಣಿಗೆಯಲ್ಲಿ ಮಾದಣ್ಣನ ಗುಡಿಗೆ ತರುತ್ತಾರೆ.

೪.೧.೯.೩ ಹಸಿ ಕೂಡ್ರುವುದು : ಎರಡನೆಯ ದಿವಸ ಅಂದರೆ ನರಕ ಚತುರ್ದಶಿಯ ದಿವಸ ನಸುಕಿನಲ್ಲಿ ಮಾದಣ್ಣ ಹಸಿಕೂಡ್ರುತ್ತಾನೆ. ಹಸಿ ಕೂಡ್ರುವುದು ಅಂದರೆ ಗುಡಿಯ ಗದ್ದುಗೆಯ ಮೇಲೆ ಕಂಚಿನ ಕುದುರೆ ಮೇಲೆ ಕುಳಿತ ಮಾದಣ್ಣನ ಮೂರ್ತಿಗೆ ವಿಜಾಪುರದಿಂದ ತಂದ ಹೂವಿನಿಂದ ಅಲಂಕಾರ ಮಾಡುವುದು. ಇದೇ ವೇಳೆಗೆ ಕುಂಚನೂರ ಗ್ರಾಮದ ಕವಟಗಿ ಎನ್ನುವವರ ಮನೆಯಿಂದ ಅಂಬಲಿ ತುಂಬಿದ ಮಗಿಯನ್ನು ಮೆರವಣಿಗೆಯಲ್ಲಿ ಗುಡಿಗೆ ತರಲಾಗುತ್ತದೆ. ಅಂಬಲಿ ಮಗಿಯನ್ನು ದೇವರ ಮುಂದಿಟ್ಟು ಪೂಜೆ ಮಾಡುತ್ತಾರೆ.

೪.೧.೯.೪ ಊರ ದೇವರಿಗೆ ಪೂಜೆ : ಮೂರನೆಯ ದಿವಸ ಅಂದರೆ ಅಮವಾಸ್ಯೆಯ ದಿವಸ ಗುಡಿಯಿಂದ ವಾಲಗದ ಸಮೇತ ಊರೆಲ್ಲಾ ಸುತ್ತಾಡಿ ಊರಲ್ಲಿರುವ ಪ್ರತಿಯೊಂದು ದೇವರ ಗುಡಿಗೂ ಹೋಗಿ ಅಲ್ಲಿ ಪೂಜೆ ಸಲ್ಲಿಸಲಾಗುತ್ತದೆ. ಗ್ರಾಮೀಣ ಮನಸ್ಸುಗಳಿಗೆ ಮಾದಣ್ಣನ ಉತ್ಸವವೆಂದರೆ ಕೇವಲ ಮಾದಣ್ಣ ಉತ್ಸವವಲ್ಲ. ಊರಲ್ಲಿಯ ಪ್ರತಿಯೊಂದು ದೇವರನ್ನು ಗೌರವಿಸಿದಾಗಲೇ ಅವರಿಗೆ ಸಮಾಧಾನ.

[illegible]

೪.೧.೯.೫ ಸಕ್ಕರೆ ಬಾನ : ನಾಲ್ಕನೆಯ ದಿವಸ ಅಂದರೆ ಬಲಿಪಾಡ್ಯಮಿಯ ದಿವಸ ಮಾದಣ್ಣನ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿ ಮತ್ತೆ ಮೆರವಣಿಗೆ ಹೊರಡುತ್ತಾರೆ. ಆ ಊರಿನ ಹಣಮಂತ ದೇವರ ಗುಡಿ ಕಟ್ಟೆಯವರಿಗೆ ಬಂದು ಅಲ್ಲಿ ಪಲ್ಲಕ್ಕಿಯನ್ನು ಇಳುವುತ್ತಾರೆ. ಈ ಸಂದರ್ಭದಲ್ಲಿ ಭಕ್ತರು ಸಕ್ಕರೆ ಬಾನ ಹಂಚುತ್ತಾರೆ.

೪.೧.೯.೬ ಜೈನ ಗೌಡರ ಮನೆಗೆ : ಹಣಮಂತ ದೇವರ ಕಟ್ಟೆಯಿಂದ ಪಲ್ಲಕ್ಕಿ ಎದ್ದು ನೇರವಾಗಿ ಆ ಊರಿನ ಜೈನಗೌಡರ ಮನೆಗೆ ಬರುತ್ತದೆ. ಗೌಡರು ಪಲ್ಲಕ್ಕಿಗೆ ಪೂಜೆ ಸಲ್ಲಿಸುತ್ತಾರೆ. ಈ ಆಚರಣೆಯು ಒಂದು ಚಾರಿತ್ರಿಕ ಘಟನೆಯ ಹಿನ್ನೆಲೆಯಲ್ಲಿ ಜರಗುವಂಥದ್ದಾಗಿದೆ. ನೂರಾರು ವರ್ಷಗಳ ಹಿಂದೆ ಆನೆಗುಂದಿಯ ಚತುರ್ಥ ಜೈನರ ಮನೆತನವೊಂದು ಅಲ್ಲಿ ನಡೆದ ಕದನದ ಕಾರಣದಿಂದ ಆತಂಕಗೊಂಡು ಆ ನೆಲೆಯನ್ನು ತೊರೆದು ಜಮಖಂಡಿಯ ಕಡೆಗೆ ಬಂದರಂತೆ, ಹಾಗೆ ಬಂದ ಅವರು ಕುಂಚನೂರ ಗ್ರಾಮದ ಮಾದಣ್ಣನ ಗುಡಿಯ ಪಕ್ಕದಲ್ಲಿದ್ದ ಹುಡೇದ ಸಮೀಪದಲ್ಲಿ ಆಶ್ರಯ ಪಡೆದರಂತೆ. ಮಾದಣ್ಣನ ಗುಡಿಯ ರಾಜಂಗಳವನ್ನು ನಿತ್ಯ ಸ್ವಚ್ಛಗೊಳಿಸುತ್ತಿದ್ದರಂತೆ. ಒಂದು ಸಲ ಮಾದಣ್ಣನ ಮಾರಾಯರು ಗುಡಿಯಲ್ಲಿ ಕುಳಿತು ದೇವರಿಗೆ ಪೂಜೆ ಸಲ್ಲಿಸುತ್ತಿರುವ ಸಮಯದಲ್ಲಿ ಒಬ್ಬ ಫೌಜದಾರ ಬಂದು ದರ್ಪದಿಂದ ಕರೆದನಂತೆ. ಭಕ್ತರಿಂದ ಕಾಲಿಗೆ ಬೀಳಿಸಿಕೊಂಡು ನೆಮ್ಮದಿಯಿಂದ ಇದ್ದ ಮಾರಾಯರ ಮನಸ್ಸಿಗೆ ತುಂಬಾ ಬೇಸರವಾಯಿತಂತೆ. ತಾನು ಮಾರಾಯನಿರುವುದರ ಜೊತೆಗೆ ನಾಡಗೌಡನೂ ಆಗಿರುವುದರಿಂದ ಈ ರೀತಿಯ ಅವಮಾನ ಅನುಭವಿಸಬೇಕಾಯಿತೆಂದು ನಾಡಗೌಡಕಿಯನ್ನು ಬಿಟ್ಟುಕೊಡಲು ನಿರ್ಣಯಿಸಿದನಂತೆ. ಗುಡಿಯ ಪಕ್ಕದಲ್ಲಿಯೇ ವಾಸವಿದ್ದು ಗುಡಿಯ ರಾಜಂಗಳದ ಸೇವೆ ಮಾಡುತ್ತಿದ್ದ ಜೈನ ವ್ಯಕ್ತಿಯನ್ನು ಕರೆದು ಇನ್ನು ಮೇಲೆ ಈ ಊರಿನ ನಾಡಗೌಡಕಿಯನ್ನು ನೀನೇ ಮಾಡು ಎಂದು ಹೇಳಿದನಂತೆ. ನಿಂತು ಗೌಡಕಿ ಮಾಡುವುದಕ್ಕಿಂತ ಕುಂತು ಪೂಜಾರಿಕೆ ಮಾಡುವುದು ಶ್ರೇಷ್ಠವೆಂದು ಭಾವಿಸಿದನಂತೆ. ಗುಡಿಯೊಂದರ ಪೂಜಾರಿಕೆಯು ಊರನ್ನಾಳುವ ಗೌಡರಿಗಿಂತ ಹೆಚ್ಚು ಸುರಕ್ಷಿತವೆನ್ನಿಸಿರಬೇಕು ಕುಂಚನೂರಿನ ಮಾರಾಯರಿಗೆ. ಹೀಗೆ ಮಾರಾಯರು ಗೌಡಕಿಯೊಂದಿಗೆ ತಮಗಿರುವ ಇನಾಮಿ ಜಮೀನನ್ನೂ ಅವನಿಗೆ ಬಿಟ್ಟುಕೊಟ್ಟರಂತೆ. ಅಂದಿನಿಂದ ಈ ಊರಗೌಡಕಿ ಜೈನ ಮನೆತನದವರಿಗೆ ಬಂದಿದೆ. ಇಂದಿಗೂ ಹಾಗೆಯೇ ಉಳಿದುಕೊಂಡಿದೆ.

೪.೧.೯.೭ ಶಾವರಸಿದ್ಧನ ಗದ್ದುಗೆಗೆ : ಜೈನರ ಮನೆಯಲ್ಲಿ ಪೂಜೆ ಮುಗಿಸಿಕೊಂಡು ಪಲ್ಲಕ್ಕಿ ಅಲ್ಲಿಯೇ ಸಮೀಪದಲ್ಲಿರುವ ಶಾವರಸಿದ್ಧನ ಗದ್ದುಗೆ ಇರುವ ಹಂಜಿ ಎನ್ನುವ ಬಣಜಿಗರ ಮನೆಗೆ ಬರುತ್ತದೆ. ಶಾವರಸಿದ್ಧ ಬಣಜಿಗರ ಮನೆಯಲ್ಲಿ ಬಂದು ಏಕೆ ನೆಲೆಸಿದ ಎನ್ನುವುದು ಜಿಜ್ಞಾಸೆಗೆ ಒಳಪಡಬೇಕಾದ ವಿಷಯವಾಗಿದೆ. 'ಶಾವರ' ಎನ್ನುವುದು 'ಶ್ರಾವಕ' ಶಬ್ದದಿಂದ ನಿಷ್ಪನ್ನವಾದುದು ಎಂದು ನಂಬುವುದಾದರೆ ಅವನು ಜೈನ ಮೂಲದವನಾಗಿರಬೇಕು. ಆದರೆ ಇಲ್ಲಿ ಬಣಜಿಗರ ಮನೆಯಲ್ಲಿ ನೆಲೆಸಿದ್ದಾನೆ. ಇಂದಿನ ಬಣಜಿಗರು ಮೂಲದಲ್ಲಿ ಜೈನರಾಗಿದ್ದರು. ಶರಣ ಚಳವಳಿಯ ಸಂದರ್ಭದಲ್ಲಿ ಜೈನರು ಲಿಂಗಾಯತಕ್ಕೆ ಮತಾಂತರ

ಹೊಂದಿದರು ಎನ್ನುವುದು ಕೆಲ ಸಂಶೋಧಕರ ಅಭಿಮತವಾಗಿದೆ. ಅದೊಂದು ವೇಳೆ ಸತ್ಯವೆಂದಾದರೆ ಕುಂಚನೂರಿನಲ್ಲಿರುವ ಹಂಜಿ ಎನ್ನುವ ಬಣಜಿಗರು ಜೈನದಿಂದ ಮತಾಂತರ ಹೊಂದಿರಬಹುದು ಎಂದು ತರ್ಕಿಸಲು ಸಾಧ್ಯ. ಹಾಗೂ ಜೈನ 'ಶಾವರ' ಬಣಜಿಗರ ಮನೆಯಲ್ಲಿ ಬಂದು ನೆಲೆಸಿದುದಕ್ಕೆ ಕಾರಣವನ್ನು ಊಹಿಸಬಹುದಾಗಿದೆ.

೪.೧.೯.೮ ಗದ್ದುಗೆಯ ಮಾರಾಯರ ಮನೆಗೆ : ಶಾವರಸಿದ್ಧನ ಗದ್ದುಗೆ ಇರುವ ಬಣಜಿಗರ ಮನೆಯವರೂ ಪಲ್ಲಕ್ಕಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ಅಲ್ಲಿಯೇ ಸಮೀಪದಲ್ಲಿರುವ ಮಾದಣ್ಣನ ಗದ್ದುಗೆ ಇರುವ ಮಾರಾಯರ ಮನೆಗೆ ಪಲ್ಲಕ್ಕಿ ಬರುತ್ತದೆ. ಅಮೋಘಸಿದ್ಧ ಪರಂಪರೆಯ ಸಿದ್ಧ ದೇವರಿಗೆ ಎರಡೆರಡು ಸ್ಥಾನಗಳಿರುವುದನ್ನು ಈ ಹಿಂದೆಯೂ ಗಮನಿಸಿದ್ದೇವೆ. ಒಂದು ಊರೊಳಗಿನ ಗದ್ದುಗೆ ಮನೆ. ಇನ್ನೊಂದು ಊರ ಹೊರಗಿರುವ ದೇವರ ಗುಡಿ. ಗದ್ದುಗೆ ಮನೆ ಎಂದರೆ ಪ್ರಸಕ್ತ ಸಾಲಿನಲ್ಲಿ ಸ್ಥಾನಿಕ ದೇವರನ್ನು ಪೂಜಿಸುವ ಹಕ್ಕನ್ನು ಪಡೆದ ಮಾರಾಯರ ಮನೆ. ಪೂಜೆಯ ಹಕ್ಕು ಮಾರಾಯ ಬಡ್ಡಿಗಳಲ್ಲಿ ಹಂಚಿಹೋಗಿರುತ್ತವೆ. ಪ್ರಸ್ತುತ ಸಾಲಿನಲ್ಲಿ ಯಾವ ಬಡ್ಡಿಯವರಿಗೆ ಪೂಜಾರಿಕೆ ಬಂದಿದೆಯೋ ಅವರದೇ ಆ ವರ್ಷ ಗದ್ದುಗೆ ಮನೆ ಅನ್ನಿಸಿಕೊಳ್ಳುತ್ತದೆ.

ಇಂಥ ಮನೆಗೆ ಕುಂಚನೂರಿನ ಮಾದಣ್ಣನ ಪಲ್ಲಕ್ಕಿ ಬರುತ್ತದೆ. ಮಾರಾಯರ ಮನೆಯವರು ಪಲ್ಲಕ್ಕಿಗೆ ಪೂಜೆ ಸಲ್ಲಿಸುತ್ತಾರೆ. ಪೂಜೆ ಮುಗಿದ ನಂತರ ಪಲ್ಲಕ್ಕಿಯೊಂದಿಗೆ ಬಂದ ಕೊಂಬಿನವರಿಗೆ, ಹಲಗಿ, ಡೊಳ್ಳಿನವರಿಗೆ, ದೀವಟಿಗೆಯವರಿಗೆ, ಭಕ್ತರು ಅಂದು ಗುಡಿಗೆ ತಂದು ಅರ್ಪಿಸಿದ ಸಕ್ಕರೆಬಾನ, ಕಾಯಿಹೋಳಕಿಗಳನ್ನು ನೀಡಲಾಗುತ್ತದೆ. ಅಲ್ಲಿಂದ ಪಲ್ಲಕ್ಕಿ ಮತ್ತೆ ಮೆರವಣಿಗೆಯಲ್ಲಿ ಊರ ಹೊರಗಿನ ಗುಡಿಗೆ ಬರುತ್ತದೆ. ಅಷ್ಟೊತ್ತಿಗೆ ಸಾಯಂಕಾಲವಾಗಿರುತ್ತದೆ.

೪.೧.೯.೯ ಪಣತಿ ಅಲಂಕಾರ : ಅಂದು ಸಾಂಯಕಾಲ ಊರ ಜನರೆಲ್ಲ ತಮ್ಮ ತಮ್ಮ ಮನೆಯಿಂದ ಪಣತಿಗಳನ್ನು ಹಾಗೂ ಎಣ್ಣೆಯನ್ನು ತೆಗೆದುಕೊಂಡು ಬರುತ್ತಾರೆ. ತಾವು ತಂದ ಪಣತಿಗಳಲ್ಲಿ ಎಣ್ಣೆ ಹಾಕಿ ಅದರಲ್ಲಿ ಬತ್ತಿಗಳನ್ನು ಇಟ್ಟು, ಪಣತಿ ಹೊತ್ತಿಸಿ ಗುಡಿಯ ಬೇರೆ ಬೇರೆ ಭಾಗಗಳಲ್ಲಿ ಅವುಗಳನ್ನು ಇಟ್ಟು ಗುಡಿಗೆ ದೀಪಾಲಂಕಾರ ಮಾಡಿ ಸಂತೋಷ ಪಡುತ್ತಾರೆ. ಹೀಗೆ ಅಲಂಕೃತಗೊಂಡ ಗುಡಿಯನ್ನು ನೋಡಿದರೆ ಆಧುನಿಕ ವಿದ್ಯುತ್ ಅಲಂಕಾರದ ಸೊಬಗು ಸಪ್ಪೆಯೆನ್ನಿಸುತ್ತದೆ.

೪.೧.೯.೧೦ ಹೊಯ್ಕು : ಉತ್ಸವದ ಪ್ರಮುಖ ಆಚರಣೆಯೆಂದರೆ ಹೊಯ್ಕು ಮಾಡುವುದು. 'ಹೊಯ್ಕು' ಮಾಡುವ ವ್ಯಕ್ತಿ ಸಾಮಾನ್ಯವಾಗಿ ಆ ಗುಡಿಯ ಹೂಗಾರನಾಗಿರುತ್ತಾನೆ. ಈ ಹೂಗಾರ ಲಿಂಗಾಯಿತರಲ್ಲಿರುವ 'ಜೀರ' ಅಲ್ಲ ಇವರು ಕುರುಬರು. ಇವರನ್ನು ಪೂಜಾರಿ ಎಂದೂ, ಹಿರಕುರ ಎಂದೂ ಕರೆಯುತ್ತಾರೆ. 'ಹೊಯ್ಕು'ನ ಶಬ್ದಶಃ ಅರ್ಥ ಬಡಿವಾರ, ಒಣಜಂಬದ ಮಾತು ಎಂದಿದೆ. ಆದರೆ ಇಡೀ ಆಚರಣೆಯುದ್ದಕ್ಕೂ ಹೂಗಾರ ಒಂದೂ ಮಾತನ್ನು ಆಡುವುದಿಲ್ಲ. ಆಚರಣೆಯುದ್ದಕ್ಕೂ ಅವನು ಮೌನಿಯಾಗಿರುತ್ತಾನೆ. 'ಹೊಯ್ಕು' ಅಂದರೆ ಇಲ್ಲಿ ಮೌನದಲ್ಲಿ ಹೇಳಿದ ಮಾತು ಎಂದು ತಿಳಿದುಕೊಳ್ಳಬೇಕು.

ಹೊಯ್ಕ ಮಾಡುವ ವ್ಯಕ್ತಿ ಹಿಂದಿನ ಮೂರು ದಿವಸ ಉಪವಾಸವಿರುತ್ತಾನೆ ಹಾಗೂ ಮೌನವ್ರತ ಆಚರಿಸುತ್ತಾನೆ. ಹೊಯ್ಕ ಮಾಡುವ ದಿವಸ ಅಂದರೆ ಉತ್ಸವದ ಕೊನೆಯ ದಿವಸದ ರಾತ್ರಿಹನ್ನೆರಡು ಗಂಟೆ ಸುಮಾರಿಗೆ ಅವನಿಗೆ ಎಣ್ಣೆ ಹಾಕಿ ಚೆನ್ನಾಗಿ ಎರೆಯುತ್ತಾರೆ. ಕಂಬಳಿ ಕುಂಚಗಿ/ಗೊಂಪಿ ಮಾಡಿ ಅವನ ತಲೆಯ ಮೇಲೆ ಹಾಕಲಾಗುತ್ತದೆ. ಹೀಗೆ ಸಿದ್ಧನಾಗಿ ಆತ ನಸುಕಿನ ಮೂರು ಗಂಟೆಯ ಸುಮಾರಿಗೆ ಗುಡಿಯೊಳಗೆ ಪ್ರವೇಶಿಸುತ್ತಾನೆ. ಮೂರು ದಿವಸದ ಹಿಂದೆ ಕವಟಗಿ ಮನೆತನದವರು ಗುಡಿಯೊಳಗೆ ತಂದಿಟ್ಟ ಅಂಬಲಿ ಮಗಿಯ ಮುಚ್ಚಳ ತೆರೆದು ನೋಡಿ ಗರ್ಭಗುಡಿಯಿಂದ ಹೊರಗೆ ಬರುತ್ತಾನೆ. ಮಗಿಯಲ್ಲಿನ ಅಂಬಲಿ ಒಳಗೆ ಸರಿದಿದೆಯೋ, ಮೇಲೇರಿದೆಯೋ ಉಕ್ಕಿ ಹೊರಚೆಲ್ಲಲಿದೆಯೋ ಎನ್ನುವುದನ್ನು ಆಧರಿಸಿ ಆತ ತನ್ನ ಮುಂದಿನ ಚಟುವಟಿಕೆಗಳನ್ನು ನಿರ್ಣಯಿಸಿಕೊಳ್ಳುತ್ತಾನೆ.

ಈಗ ಗರ್ಭಗುಡಿಯ ಪ್ರವೇಶಮಾಡಿ ಅಂಬಲಿ ಮಗಿಯನ್ನು ತಲೆಯ ಮೇಲೆ ಹೊತ್ತುಕೊಂಡು ಹೊರಬಂದು ಗರ್ಭಗುಡಿಗೆ ಪ್ರದಕ್ಷಿಣೆ ಹಾಕುತ್ತಾನೆ. ಇವನು ಹೀಗೆ ಪ್ರದಕ್ಷಿಣೆ ಹಾಕುತ್ತಿರುವಾಗ ಗುಡಿಯ ಮುಂದೆ ನಿಂತ ಡೊಳ್ಳಿನವರು ತಾಳಬದ್ಧವಾಗಿ ಡೊಳ್ಳನ್ನು ನುಡಿಸುತ್ತಿರುತ್ತಾರೆ. ಡೊಳ್ಳಿನ ಬಡಿತ ಹಾಗೇ ತಾರಕಕ್ಕೆ ಏರುತ್ತದೆ. ನಾಲ್ಕೈದು ಸುತ್ತು ಹಾಕಿದ ನಂತರ ಹೊಯ್ಕ ಮಾಡುವ ಹೂಗಾರ ಗಕ್ಕನೆ ನಿಲ್ಲುತ್ತಾನೆ. ತಲೆಯ ಮೇಲೆ ಹೊತ್ತುಕೊಂಡು ತಂದಿದ್ದ ಅಂಬಲಿ ಮಗಿಯಲ್ಲಿ ಕೈಹಾಕಿ ಅಂಬಲಿಯನ್ನು ನಾಲ್ಕು ದಿಕ್ಕಿಗೆ ಸೂರಾಡುತ್ತಾನೆ. ಯಾವ ಯಾವ ದಿಕ್ಕಿನಲ್ಲಿ ಎಷ್ಟೆಷ್ಟು ಅಂಬಲಿಯನ್ನು ಸೂರಾಡಲಾಗಿದೆ ಎನ್ನುವುದರ ಆಧಾರದ ಮೇಲೆ ಆ ಸಾಲಿನ ಫಸಲಿನ ಪ್ರಮಾಣವನ್ನು ಅಲ್ಲಿ ನೆರೆದವರು ತರ್ಕಿಸಿಕೊಳ್ಳುತ್ತಾರೆ. ನಂತರ ಅಲ್ಲಿ ನೆರೆದವರಿಗೆಲ್ಲ ಅಂಬಲಿಯನ್ನು ಪ್ರಸಾದರೂಪದಲ್ಲಿ ನೀಡಲಾಗುತ್ತದೆ. ಇದನ್ನು ಕೈಚಳಕ ಹಂಚುವ ಕಾರ್ಯಕ್ರಮವೆನ್ನುತ್ತಾರೆ.

ಅದಾದ ನಂತರ ಹೂಗಾರ ನೀರಿನ ಗಡಿಗೆಯನ್ನು ಹೊತ್ತು ಗರ್ಭ ಗುಡಿಗೆ ಪ್ರದಕ್ಷಿಣೆ ಹಾಕಲು ಪ್ರಾರಂಭಿಸುತ್ತಾನೆ. ಯಥಾ ಪ್ರಕಾರ ಡೊಳ್ಳಿನ ನಾದವಿರುತ್ತದೆ. ಐದು ಸುತ್ತು ಪ್ರದಕ್ಷಿಣೆ ಹಾಕಿದ ನಂತರ ಗಡಿಗೆಯೊಳಗಿನ ನೀರನ್ನು ನೆಲಕ್ಕೆ ಸುರುವುತ್ತಾನೆ. ನೆಲಕ್ಕೆ ಸುರುವಿದ ನೀರು ಯಾವ ಯಾವ ದಿಕ್ಕಿನಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಹರಿದುಹೋಯಿತು ಎನ್ನುವುದನ್ನು ನೋಡಿ ಮಳೆಯ ಪ್ರಮಾಣವನ್ನು ನಿರ್ಧರಿಸಿಕೊಳ್ಳುತ್ತಾರೆ. ಅಂಬಲಿ ಸೂರಾಟ ಹಾಗೂ ನೀರಿನ ಚೆಲ್ಲಾಟ ಎರಡನ್ನೂ ಸೇರಿಸಿಯೇ ಹೊಯ್ಕ ಮಾಡುವುದು ಎಂದು ಕರೆಯುತ್ತಾರೆ.

ಇದೆಲ್ಲ ಮುಗಿಯುವುದರೊಳಗೆ ನಸುಕಿನ ಐದು ಗಂಟೆಯಾಗಿ ಬೆಳಕು ಚುಮುಚುಮು ಅನ್ನುತ್ತಿರುತ್ತದೆ. ಹೊಯ್ಕದ ಭರವಸೆಯನ್ನು ಎದೆಯಲ್ಲಿ ಹೊತ್ತುಕೊಂಡು ರೈತರು ಆ ಸಾಲಿನ ತಮ್ಮ ಬದುಕಿನ ಏರಿಳಿತಗಳನ್ನು ಕಲ್ಪಿಸಿಕೊಳ್ಳುತ್ತ ತಮ್ಮ ಊರ ಕಡೆಗೆ ಪಯಣ ಬೆಳೆಯಿಸುತ್ತಾರೆ.[೯]

೪.೧.೧೦ ಮುಮ್ಮಟಗುಡ್ಡ : ವಿಜಾಪುರದಿಂದ ಹದಿನೈದು ಕಿಲೋಮೀಟರ್ ದೂರದಲ್ಲಿರುವ ಮುಮ್ಮಟಗುಡ್ಡದ ಮೇಲೆ ಅಮೋಘಸಿದ್ಧನ ಗದ್ದುಗೆಯಿದೆ. ಅದರ ಮೇಲೆ ಒಂದು ಪುಟ್ಟ ಗುಡಿಯನ್ನು

ನಿರ್ಮಿಸಲಾಗಿದೆ. ಅರಕೇರಿ, ಜಾಲಗೇರಿ ಹಾಗೂ ಸಿದ್ಧಾಪುರ ಮೂರು ಊರುಗಳ ಸೀಮೆ>ಜಾಗೆ>ಮೆಟ್ಟುಗಳ ಸಂಗಮದಲ್ಲಿ ಈ ಸ್ಥಳವಿರುವುದರಿಂದ ಮೂರು+ಮೆಟ್ಟುಗಳ ಗುಡ್ಡ ಮುಮ್ಮೆಟ ಗುಡ್ಡವಾಗಿರಬಹುದು ಎಂದು ತರ್ಕಿಸಿ ಹೇಳಲಾಗುತ್ತದೆ.[೧೫]

ಎತ್ತರವಾದ ಮಣ್ಣಿನ ದಿನ್ನೆಯ ಮೇಲೆ ಈ ಗುಡಿಯನ್ನು ನಿರ್ಮಿಸಿರುವುದರಿಂದ ಸುತ್ತಲೂ ಆರೇಳು ಕಿಲೋಮೀಟರ್ ದೂರದಿಂದಲೇ ಅಮೋಘಸಿದ್ಧನ ಪುಟ್ಟಗುಡಿಯ ಪುಟ್ಟ ಶಿಖರವನ್ನು ಕಾಣಬಹುದು. ಇದು ಅಮೋಘಸಿದ್ಧನ ಸಿದ್ಧಸಾಧನೆಯ ಜಾಗ್ರತ ಸ್ಥಾನ. ಪಕ್ಕದಲ್ಲಿರುವ ಸಿದ್ಧಾಪುರ (ಸಿದ್ಧರ ಪುರ) ಹಾಗೂ ಭೂತನಾಳ (ಭೂತನಾಥ) ಅಮೋಘಸಿದ್ಧನನ್ನು ಇಲ್ಲಿಗೆ ಆಕರ್ಷಿಸಿರಬಹುದು.

ಪ್ರತಿವರ್ಷ ಛಟ್ಟಿ ಅಮವಾಸಿಗೆ ಅಮೋಘಸಿದ್ಧನ ಹೆಸರಿನಲ್ಲಿ ಇಲ್ಲಿ ಬಹುದೊಡ್ಡ ಪ್ರಮಾಣದ ಜಾತ್ರೆ ನಡೆಯುತ್ತದೆ. ಕರ್ನಾಟಕ ಮಹಾರಾಷ್ಟ್ರ ಎರಡೂ ರಾಜ್ಯಗಳ ಕಡೆಯಿಂದ ಭಕ್ತರು ಅಪಾರ ಸಂಖ್ಯೆಯಲ್ಲಿ ಕಲೆಯುತ್ತಾರೆ.

೪.೧.೧೦.೧ ಬೇರಿನ ಕಡೆಗೆ ಕುಡಿಗಳು : ಪ್ರಸ್ತುತ ಜಾತ್ರೆ ಇಡೀ ಅಮೋಘಸಿದ್ಧನ ಪರಂಪರೆಯ ಮೂಲಪುರುಷನಿಗೆ ಸಂಬಂಧಿಸಿರುವುದರಿಂದ ಅವನ ವಂಶದ ಕುಡಿಗಳಾದ ಮಕ್ಕಳು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಗಿರಿಮೊಮ್ಮಕ್ಕಳು, ಪಲ್ಲಕ್ಕಿಗಳು ಇಲ್ಲಿ ಸಮಾವೇಶಗೊಳ್ಳುತ್ತವೆ. ಕನಿಷ್ಟ ಪಕ್ಷ ಎರಡು ನೂರು ಪಲ್ಲಕ್ಕಿಗಳಾದರೂ ಇಲ್ಲಿ ಬಂದು ಮೂಲ ಪುರುಷ 'ಅಮಸಿದ್ಧಮುತ್ತ್ಯಾ'ನನ್ನು ಭೆಟ್ಟಿಯಾಗಿ ಹೋಗುತ್ತವೆ.

'ಭೇಟಿ ಕೊಟ್ಟ ಬರುವುನ ಮುತ್ತ್ಯಾಗsss
ಹೋಗಿ ಛಟ್ಟಿಯ ಜಾತರ್ಯಾಗsss'

ಎನ್ನುವುದು ಎಲ್ಲರ ಅಂತರಂಗದ ಹಾಡಾಗಿರುತ್ತದೆ.

ದೂರದ ಸಾಂಗಲಿ, ಮೀರಜ, ಕಸಬೆ ಡಿಗ್ರೋಜ, ಗೋಕಾಕದ ಜೋಕ್ಯಾನ ಹಟ್ಟಿ, ರಾಜಾಪುರ, ಅಥಣಿ ತಾಲೂಕಿನ ಹೊನ್ನಮೋಳೆ, ಐನಾಪುರ, ಮುಧೋಳ ತಾಲೂಕಿನ ಹೊನ್ನ ಬೆಳಗಲಿ ಜೇವರಗಿ ತಾಲೂಕಿನ ಕಲ್ಲೂರ, ಜಮಖಂಡಿ ತಾಲೂಕಿನ ಕುಂಚನೂರ ಜತ್ತ ತಾಲೂಕಿನ ಉಮದಿ, ಬೆಳ್ಳುಂಡಗಿ, ಭೀವರಗಿ, ಸುಸಲಾದ ಮುತಾದ ಕಡೆಗಳಿಂದ ಛಟ್ಟಿ ಅಮವಾಸೆಯ ಹಿಂದಿನ ದಿವಸ ಮುಮ್ಮೆಟಗುಡ್ಡಕ್ಕೆ ಪಲ್ಲಕ್ಕಿಗಳು ಬಂದು ಸೇರುತ್ತವೆ. ಅಮೋಘಸಿದ್ಧನ ಸರ್ವಪರಿವಾರವೇ ಇಲ್ಲಿ ಬಂದು ಸೇರುತ್ತದೆಯಾದರೂ ಐನಾಪುರ ಕೆರೆಸಿದ್ಧ, ಭಂಡಾರಕವಟೆ ಮಾಸಿದ್ಧಪ್ಪ, ತೆರವಾಡ ಮಂಗರಾಯ, ಅಚೇಗಾಯಿ ಶೀಲಸಿದ್ಧ ಇವರ ಪಲ್ಲಕ್ಕಿಗಳು ಬರುವುದಿಲ್ಲ.

ಜಾತ್ರೆಗೆ ಬರುವ ದೇವರುಗಳು ತಮ್ಮ ಮೂಲಸ್ಥಳಕ್ಕೂ ಮುಮ್ಮೆಟಗುಡ್ಡಕ್ಕೂ ಇರುವ ದೂರವನ್ನು ಲೆಕ್ಕಹಾಕಿಕೊಂಡು ತಳಬಿಡುವ ದಿನವನ್ನು ನಿರ್ಧರಿಸಿಕೊಳ್ಳುತ್ತಾರೆ. ದೂರ ದಾರಿಯ ದೇವರುಗಳು ದಾರಿಮಧ್ಯದಲ್ಲಿ ನಿರ್ಧಿಷ್ಟ ಊರುಗಳ ನಿರ್ಧಿಷ್ಟ ಭಕ್ತರ ಮನೆಯಲ್ಲಿ ತಂಗುತ್ತಾರೆ.

೪.೧.೧೦.೨ ಬನದ ಕೆಳಗೆ ಪಲ್ಲಕ್ಕಿಗಳು : ಛಟ್ಟಿ ಅಮವಾಸೆಯ ಹಿಂದಿನ ದಿವಸ ಮುಮ್ಮೆಟಕ್ಕೆ ಬರುವ ಪಲ್ಲಕ್ಕಿಗಳು ಇಳಿದುಕೊಳ್ಳಲಿಕ್ಕೆ ಗುಡ್ಡದ ಎಡಬದಿಗೆ ಒಂದು ವಿಶಾಲವಾದ ಆಲದ ಬನ ನಿರ್ಮಿಸಲಾಗಿದೆ. ಒಂದೊಂದು ಆಲದ ಮರದ ಕೆಳಗೆ ಒಂದೊಂದು ಕಟ್ಟೆಯನ್ನು ಕಟ್ಟಿಸಲಾಗಿದೆ. ಕಟ್ಟೆಗಳನ್ನು ನಿರ್ಧಿಷ್ಟವಾದ ಪಲ್ಲಕ್ಕಿಗಳಿಗೆ ಮೀಸಲಿಡಲಾಗಿರುತ್ತದೆ. ಅವರೆಲ್ಲ ತಮಗೆ ನಿಗದಿಪಡಿಸಿದ ಕಟ್ಟೆಯ ಮೇಲೆ ಬಂದು ಕುಳಿತುಕೊಳ್ಳುವ ಮೊದಲು ಮುತ್ಯಾನ ಗುಡಿಗೆ ಹೋಗಿ ದರ್ಶನ ಪಡೆದು ಬಂದಿರುತ್ತಾರೆ.

ಬನದ ಪಕ್ಕದಲ್ಲಿಯೇ ಬಾವಿಯೊಂದು ಇರುವುದರಿಂದ ಪಲ್ಲಕ್ಕಿಯೊಂದಿಗೆ ಬಂದ ಮಾರಾಯರು ಹಾಗೂ ಭಕ್ತರುಗಳಿಗೆ ಸ್ನಾನ ಇತ್ಯಾದಿ ಕೆಲಸಗಳಿಗೆ ಯಾವುದೇ ತೊಂದರೆಯಿಲ್ಲ. ಅಂದು ರಾತ್ರಿ ಮಾರಾಯರು, ಭಕ್ತರು ಸೇರಿಕೊಂಡು ಪ್ರಸಾದ ಸಿದ್ಧಪಡಿಸಿಕೊಂಡು ಮುತ್ಯಾನಿಗೆ ನೈವೇದ್ಯ ಹಿಡಿದು ಊಟ ಮಾಡಿದ ನಂತರ ಡೊಳ್ಳಿನ ಹಾಡುಗಳನ್ನು ಹಾಡಿ ರಾತ್ರಿ ಕಳೆಯುತ್ತಾರೆ.

ಇಲ್ಲಿಗೆ ಬರುವ ಮುನ್ನವೇ ತಮ್ಮ ದೇವರುಗಳ ಮುಖ ಬೆಳಗಿಕೊಂಡು ಬಂದಿರುವುದರಿಂದ ಬೆಳಿಗ್ಗೆ ಗಂಗಸ್ಥಲಕ್ಕೆ ಇಲ್ಲಿ ಪ್ರತ್ಯೇಕವಾಗಿ ಹೋಗಬೇಕಾದ ಪ್ರಸಂಗವಿರುವುದಿಲ್ಲ. ಆದರೆ ಪಲ್ಲಕ್ಕಿ ಹೊತ್ತುಕೊಂಡು ಓಡೋಡುತ್ತ ದಾರಿಕ್ರಮಿಸಿ ಬಂದಿರುತ್ತಾರಾದ್ದರಿಂದ ಪಾಲಕಿಯ ಕೀಲಗಳು ಸಡಿಲಾಗಿರುತ್ತವೆ. ಅವುಗಳನ್ನು ಬಿಗಿದು ಭಂಡಾರದಿಂದ ದೇವರ ಮುಖಗಳನ್ನು ಬೆಳಗಿ, ಹೂವು ಹಾರಗಳಿಂದ ಪಲ್ಲಕ್ಕಿಯನ್ನು ಸಿಂಗರಿಸುತ್ತಾರೆ.

೪.೧.೧೦.೩ ಮಹಾಮಿಲನ : ಅಂದು ಮಧ್ಯಾಹ್ನದ ವೇಳೆಗೆ ಪಲ್ಲಕ್ಕಿಗಳು ಒಂದೊಂದಾಗಿ ತಮ್ಮ ಕಟ್ಟೆಯನ್ನು ಬಿಟ್ಟು ಮೆರವಣಿಗೆಯೊಂದಿಗೆ ಅಮೋಘಸಿದ್ಧನ ಗುಡಿಯ ಕೆಳಗೆ ಪೂರ್ವದಿಕ್ಕಿನಲ್ಲಿರುವ ವಿಶಾಲವಾದ ಪ್ರದೇಶದಲ್ಲಿ ಬಂದು ಸೇರುತ್ತವೆ. ಪಲ್ಲಕ್ಕಿಗಳನ್ನು ಹೊತ್ತವರು ಡೊಳ್ಳಿನ ನಾದಕ್ಕೆ ತಕ್ಕಂತೆ ಭಾವಾವೇಶದಲ್ಲಿ ಕುಣಿಯಲು ಪ್ರಾರಂಭಿಸುತ್ತಾರೆ.

ಭಕ್ತರನ್ನು ಒಲಿಸಿಕೊಳ್ಳಲು ನಾಡ ಸಾಧುನಿ ಮಾಡಲು ನಾಡಗೌಡಕಿ ಮಾಡಲು ಈ ಪರಂಪರೆಯ ಸಿದ್ಧರು ನಾಡಿನ ಬೇರೆ ಬೇರೆ ಪ್ರದೇಶಗಳಿಗೆ ಚದುರಿಹೋದುದನ್ನು ಈ ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಒಂದೇ ಮೂಲದ ಅವರೆಲ್ಲ ಮತ್ತೆ ಒಂದುಗೂಡಲು ಇದೊಂದು ದೊಡ್ಡ ಅವಕಾಶ. ಹೀಗೆ ಬಂದು ಸೇರಿದ ತಂದೆ ಮಕ್ಕಳ, ಅಣ್ಣ ತಮ್ಮಂದಿರ, ಅಜ್ಜಮೊಮ್ಮಕ್ಕಳ ಪಲ್ಲಕ್ಕಿಗಳು ಒಂದಕ್ಕೊಂದು ಭೆಟ್ಟಿಯಾಗುತ್ತವೆ. ಆಗ ಐದೈದು, ಆರಾರು ಪಲ್ಲಕ್ಕಿಗಳು ಒಂದೆಡೆ ಕಲೆತು ಒಂದು ಪಲ್ಲಕ್ಕಿ ಇನ್ನೊಂದು ಪಲ್ಲಕ್ಕಿಯ ಮುಖದಲ್ಲಿ ಮುಖ ಸೇರಿಸಿದಂತೆ, ಒಬ್ಬರನ್ನೊಬ್ಬರು ಅಪ್ಪಿಕೊಂಡಂತೆ ನಟಿಸುತ್ತವೆ. ಹೀಗೆ ಸೇರಿಕೊಂಡ ಅಪ್ಪ, ಮಗ,

ಅಣ್ಣ ತಮ್ಮ, ಅಜ್ಜಮೊಮ್ಮಗ ಒಬ್ಬರನ್ನೊಬ್ಬರು ಬಿಟ್ಟು ಅಗಲಲು ಮನಸ್ಸಿಲ್ಲದವರಂತೆ ಹೊಯ್ದಾಡುತ್ತ ನಿಲ್ಲುತ್ತವೆ. ಬಿಟ್ಟು ಹೋಗಲು ಮನಸ್ಸೇ ಇಲ್ಲ ಎನ್ನುವುದನ್ನು ಸೂಚಿಸಲು ಪಲ್ಲಕ್ಕಿ ಹಿಡಿದ ಆರೇಳು ಜನ ಪಲ್ಲಕ್ಕಿಯನ್ನು ಮೇಲಕ್ಕೆತ್ತಿ ತಿರುಗಿಸುತ್ತಾರೆ. ದೂರದಿಂದ ನೋಡುವವರಿಗೆ ಅವು ಗಾಳಿಯಲ್ಲಿ ತೇಲಾಡುತ್ತಿರುವಂತೆ ಕಾಣಿಸುತ್ತವೆ. ಪಲ್ಲಕ್ಕಿಯ ಭಾಗ್ಯವಿಲ್ಲದ ಕೆಲ ದೇವರುಗಳು ಚೌಕಿಯಲ್ಲಿ ಬಂದಿರುತ್ತವೆ. ಈ ಸಣ್ಣ ಸಣ್ಣ ಚೌಕಿಗಳು ದೊಡ್ಡ ದೊಡ್ಡ ಪಲ್ಲಕ್ಕಿಗಳ ಮಧ್ಯದಲ್ಲಿ ತೂರಿಕೊಳ್ಳಲು ಪ್ರಯತ್ನಿಸುತ್ತಿರುತ್ತವೆ. ದೇವರುಗಳು ಬಿಟ್ಟು ಅಗಲಲು ಪಡುವ ಸಂಕಟ ವೇದನೆಯನ್ನು ನೋಡುವ ಜನರ ಕಣ್ಣಲ್ಲಿ ನೀರಾಡಲು ಪ್ರಾರಂಭವಾಗುತ್ತದೆ. ಚೌಕಿಗಳು ಚಲನವಲನ ದುಃಖಪಡುವ ದೊಡ್ಡವರ ಕಾಲ ಕಾಲಲ್ಲಿ ಬಂದು ಸೇರಿಕೊಳ್ಳುವ ಪುಟ್ಟ ಮಕ್ಕಳ ಹಾಗೆ ಕಾಣಿಸುತ್ತದೆ.

೪.೧.೧೦.೪ ಪರಂಪರೆಯ ಸಾತತ್ಯ : ಪಲ್ಲಕ್ಕಿಗಳ ಅವಿಸ್ಮರಣೀಯ ಮಿಲನ, ಅಗಲುವಲ್ಲಿನ ಅವರ ತೊಳಲಾಟ ಮಾರಾಯರ ಮೇಲೆ ಮನೋವೈಜ್ಞಾನಿಕ ಪ್ರಭಾವ ಬೀರುವಂಥದ್ದಾಗಿರುತ್ತದೆ. ಇಡೀ ಆಚರಣೆ ದೂರ ದೂರ ಸಿಡಿದು ಹೋದವರೆಲ್ಲ ಮತ್ತೆ ಮತ್ತೆ ಕೂಡುವ ಮೂಲಕ ತಮ್ಮ ಮೂಲದ ಸ್ಮೃತಿ ಹಸಿರಾಗಿರುವಂತೆ ಮಾಡುತ್ತದೆ. ಸಂಪರ್ಕಸಾಧನಗಳ ಕೊರತೆಯ ಸಂದರ್ಭದಲ್ಲಿ ದೂರ ದೂರ ಹೋಗಿ ನೆಲೆಸಿರುವವರು ಮೂಲದ ಕೊಂಡಿಯಿಂದ ಬೇರ್ಪಡದ ಹಾಗೆ ಈ ಮಹಾಮಿಲನ ನೋಡಿಕೊಳ್ಳುತ್ತದೆ.

ಭೆಟ್ಟಿಯ ಸಮಯದ ಜಯಘೋಷವಂತೂ ವರ್ತಮಾನದ ಮಾರಾಯರು ತಮ್ಮ ಪರಂಪರೆಯ ಸಾತತ್ಯವನ್ನು ರಕ್ಷಿಸಿಕೊಳ್ಳುವಂತೆ ಮಾಡುತ್ತದೆ. ಈ ಸಮಯದಲ್ಲಿ ಅಲ್ಲಿ ಉಗ್ಗಡಿಸುವ ಉಗಾಳಿಕೆ ಹೀಗಿದೆ:

ಹರಹರೋ ಗುರುಗೌರಿ ಸೋಮಲಿಂಗೋ, ನಾಡಗೌಡ ಅಮಸಿದ್ಧೋ
ಅವತಾರ ಅವಧುಸಿದ್ಧೋ, ದೇವೇಂದ್ರ ಬಿಳಿಯಾನಿಸಿದ್ಧೋ
ಆಚಾರಗೌಡ ಸೋಮಣ್ಣಮುತ್ತ್ಯೋ, ಕಡಹುಟ್ಟಕನ್ನಮುತ್ತ್ಯೋ
ಬಯಲ ಭೂತೋ ಹರಹರೋ ಭಕ್ತ ಹರಹರೋ ||ಘೋ|| [೧೬]

ಮಳೀ ಕೀಲ ಬೇಡಿದಂಥ ಬೆಳೀಕೀಲಿ ಬೇಡಿದಂಥ ಸಿದ್ಧೋ
ಬಂಜೀಗಿ ತೊಟ್ಟಿಲಬೇಡಿದಂಥ, ಬಡವನ ಭಾಗ್ಯ ಬೇಡಿದಂಥ ಸಿದ್ಧೋ
ಬಯಲಭೂತೋ ಹರಹರೋ ಭಕ್ತ ಹರಹರೋ || ಘೋ || [೧೭]

ಹರಹರೋ ಅವತಾರ ಅವಧು ಸಿದ್ಧೋ, ದೇವೀಂದ್ರ ಬಿಳಿಯಾನಿಸಿದ್ಧೋ
ಆಚಾರಗೌಡ ಸೋಮಣ್ಣ ಮುತ್ತ್ಯೋ, ಕಡಿಹುಟ್ಟಿ ಕನ್ಯಮುತ್ತ್ಯೋ
ಬಯಲ ಭೂತೋ ಹರಹರೋ ಭಕ್ತ ಹರಹರೋ
ಕೌಲಗುಡ್ಡ ಕರಿಯೋಗಿ ಸಿದ್ಧೋ, ಗದ್ದನಕೇರಿ ಮಲಕಾರಿಸಿದ್ಧೋ

[illegible]

[illegible]

[illegible]

ಕುಂಚನೂರ ಕೆಂಚಮಾದಣ್ಣೋ, ಇನವಂದಗಿ ಈರ ಮಾದಣ್ಣೋ
ಜ್ಯೋತಿ ಲಕ್ಕಪ್ಪೊಡಿಯೋ, ಅರಕೇರಿ ಬರ್ಮ್ಮಒಡಿಯೋ
ಬಯಲಭೂತೋ ಹರಹರೋ ಭಕ್ತಹರಹರೋ
ಶಂಭು ಮಾದೇವ ಇಂದಾಪುರ ದ್ಯಾವ ಬಳೋಗಿ ಸಿದ್ಧೋ
ಹೊನ್ನಮೋಳೆದ ಜಗಸಿದ್ಧೋ ಉಗ್ರದಾಗಿನ ಪದಮೊಡಿಯೋ
ಪಂಚ ಪೂಜಾದ ಗೌಡೋ ಅಚೆಗಾಯಿ ಶೀಲಸಿದ್ಧೋ

ಬಯಲ ಭೂತೋ ಹರಹರೋ ಭಕ್ತ ಹರಹರೋ
ಹರಹರೋ ಸಾಲದೊಡ್ಡಿ ಸೊಡ್ಡಿ ಸಿದ್ಧೊ
ಅಥಣಿ ಮಳೆಗಾಲಸಿದ್ಧೋ, ಮೊರಬದ ಯೋಗಿ ಒಡೆಯೋ
ಒಡಚಿ ನಾಗಪ್ಪಡೆಯೋ ಕೆಂಚ ಸೋಮದೇವ್ರೋ
ಬಯಲ ಭೂತೋ ಹರಹರೋ ಭಕ್ತ ಹರಹರೋ[೧೮]

ಹೀಗೆ ಉಗ್ಗಡಿಸುವ ಮೂಲಕ ಈ ಪರಂಪರೆಯನ್ನು ತೋಂಡಿಯಲ್ಲಿ ಜೀವಂತವಿಟ್ಟು, ಸ್ಮೃತಿಯಲ್ಲಿ ಸ್ಥಿರಗೊಳಿಸಿ ಪರಂಪರೆಯ ಸಾತತ್ಯವನ್ನು ಸಾಧಿಸಲಾಗುತ್ತದೆ. ಪ್ರತಿಯೊಬ್ಬ ಒಡೆಯನನ್ನು ಮಾರಾಯನನ್ನು ನಿದ್ದೆಗಣ್ಣಲ್ಲಿ ಎಬ್ಬಿಸಿ ಕೇಳಿದರೂ ಪರಂಪರೆಯಲ್ಲಿ ಬರುವ ನೂರಾರು ಸಿದ್ಧರ ಹೆಸರುಗಳನ್ನು ಅಡೆತಡೆಯಿಲ್ಲದೆ ಹೇಳಿ ಬಿಡುತ್ತಾನೆ.

ಈ ಹಿನ್ನೆಲೆಯಲ್ಲಿಯೇ ಒಡೆಯರು ತಮಗೆ ಹೆಳವರು ಇರುವುದಿಲ್ಲವೆಂದು ಹೇಳಿಕೊಳ್ಳುತ್ತಿರಬಹುದು. ಹೆಳವರು ಮಾಡುವ ಕೆಲಸವನ್ನು ಇಂಥ ಉಗಾಳಿಕೆಗಳು ಮಡುತ್ತವೆಯಾದ್ದರಿಂದ ಅವರಿಗೆ ಹೆಳವರ ಅವಶ್ಯಕತೆ ಬಿದ್ದಂತೆ ತೋರುವುದಿಲ್ಲ. ಅದೂ ಅಲ್ಲದೆ ತಮ್ಮ ಪರಂಪರೆಯನ್ನು ಕಾಲದ ಮಿತಿಯಲ್ಲಿ ಬಂಧಿಸದೆ ಕಾಲಾತೀತ ಗೊಳಿಸುವ ನಿಗೂಢಗೊಳಿಸುವ ಪ್ರಯತ್ನವೂ ಇದರ ಹಿಂದೆ ಇದ್ದಿರುವಂತೆ ತೋರುತ್ತದೆ. ಅಮೋಘುಸಿದ್ಧನ ಬಗೆಗೆ ಬರೆಯುವವನ, ಮಾತಾಡುವವನ, ಶೋಧಕ್ಕೆ ತೊಡಗುವವನ ವಂಶ ಸರ್ವನಾಶವಾಗುತ್ತದೆ ಎಂದು ಸದಾ ಅನ್ಯರಿಗೆ ಹೇಳುವ ಇವರು ಅವನ ಕುರಿತು ಕಥನಗಳನ್ನು ರೂಪಿಸಿಕೊಳ್ಳುವ, ಉಗಾಳಿಕೆ ಮಾಡುವ ಮೂಲಕ ಅದೇ ಕೆಲಸ ಮಾಡುತ್ತಿರುವುದು ಸೋಜಿಗದ ಸಂಗತಿಯಾಗಿದೆ.

ಅಮೋಘುಸಿದ್ಧನ ವರವಿನ ಮಕ್ಕಳ ವಂಶದ ಶಾಖೆ ಉಪಶಾಖೆಗಳನ್ನು ದಾಖಲಿಸುವ ಇಂಥ ಉಗಾಳಿಕೆಗಳು ಪುಣ್ಯದ ಮಕ್ಕಳ ಕುರಿತು ಪ್ರಾರಂಭಿಕ ಹಂತದ ಉಲ್ಲೇಖ ಮಾಡಿ ನಂತರದವರ ಬಗೆಗೆ ಮೌನವಹಿಸಿರುವುದರ ಹಿಂದೆ ಬಹುದೊಡ್ಡ ಕಾರಣವಿದ್ದಿರುವ ಸಾಧ್ಯತೆಯಿದೆ.

೪.೧.೧೦.೫ ಭಂಡಾರ ಸೂರಾಡುವಿಕೆ : ಛಟ್ಟಿ ಜಾತ್ರೆಗೆ ತಪ್ಪಿಸದೇ ಮುಮ್ಮೆಟಗುಡ್ಡಕ್ಕೆ ಬರುವ ಭಕ್ತರ ಬಹುದೊಡ್ಡ ಸಮೂಹವೇ ಇದೆ. ವೈಯಕ್ತಿಕ ಬದುಕಿನ ಏನೆಲ್ಲ ಕೆಲಸಗಳನ್ನು ಬದಿಗೊತ್ತಿ ಮುಮ್ಮೆಟಗುಡ್ಡಕ್ಕೆ

ತಪ್ಪದೆ ಹಾಜರಾಗುತ್ತಾರೆ. ಹಿಂದಿನ ವರ್ಷ ಹರಕೆ ಹೊತ್ತವರು, ಈ ವರ್ಷ ಸಂಕಲ್ಪ ಮಾಡಿ ಹರಕೆ ಹೊರುವವರು, ಹರಕೆ ಈಡೇರಿಸಿ ಸಂತೃಪ್ತರಾದವರು ಹೀಗೆ ಭಕ್ತಗಣ ಇಲ್ಲಿ ನೆರೆದಿರುತ್ತದೆ. ಅಮವಾಸ್ಯೆಯ ಮಧ್ಯಾಹ್ನ ಮೂರರಿಂದ ಐದರವರೆಗೆ ಇಲ್ಲಿ ನಡೆಯುವ ಪಲ್ಲಕ್ಕಿಗಳ ಮಹಾಮಿಲನವನ್ನು ನೋಡಲು ಲಕ್ಷಾಂತರ ಜನ ಸೇರಿರುತ್ತಾರೆ. ಇಲ್ಲಿ ನೆರೆದ ಕೆಲವರಂತೂ ಉಡಿಯಲ್ಲಿ ಭಂಡಾರ ಕಟ್ಟಿಕೊಂಡು ನಿಂತಿರುತ್ತಾರೆ. ಅವರೆಲ್ಲ ನೂಕುನುಗ್ಗಲಿನ ಮಧ್ಯದಲ್ಲಿ ನುಸುಳಿ ಪಲ್ಲಕ್ಕಿಯ ಕಡೆಗೆ ಭಂಡಾರ ಹೊಡೆಯುತ್ತಾರೆ. ಹಿಡಿತುಂಬ ಭಂಡಾರ ಹಿಡಿದು ನೇರವಾಗಿ ಪಲ್ಲಕ್ಕಿಯೊಳಗಿನ ದೇವರ ಬೆಳ್ಳಿಯ ಮುಖಕ್ಕೆ ಭಂಡಾರ ಹೊಡೆದರೆಂದರೆ ಪುನೀತರಾದಂತೆ ವರ್ತಿಸುತ್ತಾರೆ.

ಮಹಾಮಿಲನ ಪ್ರಾರಂಭವಾದ ಅರ್ಧಗಂಟೆಯೊಳಗೆ ಆಕಾಶದ ತುಂಬಾ ಭಂಡಾರ ವರ್ಣದ ಮೋಡಗಳು ಗೋಚರಿಸ ತೊಡಗುತ್ತವೆ. ನಾಲ್ಕೈದು ಎಕರೆ ಬಯಲಿನಲ್ಲಿ ನಡೆಯುವ ಈ ಆಚರಣೆ ಪ್ರಾರಂಭವಾದ ಒಂದು ತಾಸಿನಲ್ಲಿ ಇಡಿ ನೆಲವೆಲ್ಲ ಭಂಡಾರಮಯವಾಗುತ್ತದೆ. ಅಲ್ಲಿ ನೆರೆದ ಭಕ್ತರ ಮೈಯೆಲ್ಲಾ ಭಂಡಾರ, ನೆಲಮುಗಿಲಲ್ಲೆ ಭಂಡಾರ, ಮುತ್ತ್ಯಾನ ಭಂಡಾರ ಮೈಮೇಲೆ ಚೆಲ್ಲಾಡಿಕೊಂಡು ತಮ್ಮ ಜೀವನ ಪಾವನ ವಾಯಿತೆಂದು ಅವರು ನಂಬುತ್ತಾರೆ. ಮಹಿಳೆಯರೂ ಸಹ ಈ ಭಂಡಾರ ಸೂರಾಟದಲ್ಲಿ ಪಾಲ್ಗೊಳ್ಳುತ್ತಾರೆ. ಭಂಡಾರದ ಜೊತೆ ಜೊತೆಗೆ ಅಲ್ಲಿ ನೆರೆದವರ ಉಗಾಳಿಕೆ ಹಾಗೂ ಘೇ ಎನ್ನುವ ನಾದವೂ ನೆಲಮುಗಿಲನ್ನು ಆವರಿಸಿಬಿಡುತ್ತದೆ. ಗುಡ್ಡದ ಮೇಲೆ ಕುಳಿತ ಮುತ್ತ್ಯಾ ಮಕ್ಕಳ ಈ ಆಟವನ್ನು ನೋಡಿ ಕ್ಬಾರಿ ಮೀಸೆಯಲ್ಲಿ ಮುಗುಳುನಗೆ ಸೂಸುತ್ತಿರುತ್ತಾನೆ.

ಮುಮ್ಮೆಟಗುಡ್ಡದ ಅಮಸಿದ್ಧ ಮುತ್ತ್ಯಾನ ಪಲ್ಲಕ್ಕಿ ಈ ಮಹಾಮಿಲನದಲ್ಲಿ ಇರುತ್ತದೆಯೇ ಎಂದು ಒಬ್ಬ ಮಾರಾಯರನ್ನು ಕೇಳಿದರೆ ಇಲ್ಲವೆಂದು ಹೇಳಿದರು. ಏಕೆ ಎಂದು ಮರುಪ್ರಶ್ನೆ ಮಾಡಿದರೆ ಮುತ್ತ್ಯಾ ಎಷ್ಟಾದರೂ ದೊಡ್ಡವ ಅವನ ಭೆಟ್ಟಿಗೆ ಸಣ್ಣವರು ಬರುತ್ತಾರೆ. ದೊಡ್ಡವ ಗುಡ್ಡಾ ಇಳಿದು ಬರಲು ಹೇಗೆ ಸಾಧ್ಯ ಎಂದು ನನ್ನನ್ನೇ ಪ್ರಶ್ನಿಸಿದರು. ಅವರ ವಿವರಣೆ ಸರಿ ಎನ್ನಿಸಿತು. ಅವರೇ ಮುಂದುವರಿಸಿ ಇನ್ನೊಂದು ಮಾಹಿತಿ ಒದಗಿಸಿದರು. ಮುಮ್ಮೆಟಗುಡ್ಡದ ಅಮಸಿದ್ಧಪ್ಪನಿಗೆ ಪಾಲಿಕೆಯಿಲ್ಲ ಎಂದು ಹೇಳಿದರು ಯಾಕೆ ಇಲ್ಲವೆಂಬ ಪ್ರಶ್ನೆಗೆ ಅವರು ನೀಡಿದ ವಿವರವಿದು: ಅವನದು ಬೆಳ್ಳಿಯ/ಕಂಚಿನ/ಬಂಗಾರದ/ಕಟ್ಟಿಗೆಯ ಮುಖವಿದ್ದರೆ ಅದನ್ನು ತಂದು ಪಲ್ಲಕ್ಕಿಯಲ್ಲಿ ಕೂಡ್ರಿಸಬಹುದಾಗಿತ್ತು. ಅವನಿಗೆ ಅಂಥ ಮುಖವಿಲ್ಲವೆಂದು ಹೇಳಿದರು. ಮುಂದುವರಿಸಿ ಅವರು ನೀಡಿದ ವಿವರವಿದು: ಅವನದು 'ಬಿಚಮೂರ್ತಿ.' ಬಿಚಮೂರ್ತಿ ಅಂದರೆ ಮೂಲ ಗುಂಡುಕಲ್ಲಿಗೆ ಮೇಣವನ್ನು ಮೆತ್ತಿ ಆ ಮೇಣದ ಮೇಲೆ ಪ್ರತ್ಯೇಕ ಕಣ್ಣು, ಮೂಗು, ಕಿವಿ, ಕ್ಬಾರಿ ಮೀಸೆಗಳನ್ನು ಒತ್ತಿ ನೋಡುವವರಿಗೆ ಅಖಂಡ ಮುಖ ಕಾಣುವ ಹಾಗೆ ಮಾಡಿರುತ್ತಾರೆ.[೯೯]

೪.೧.೧೦.೬ ಮರಳಿ ಮೂಲ ತಳಕ್ಕೆ : ಪಲ್ಲಕ್ಕಿ ಭೆಟ್ಟಿ ಮುಗಿಸಿಕೊಂಡು ಎಲ್ಲರೂ ತಮ್ಮ ತಮ್ಮ ಕಟ್ಟೆಯ ಜಾಗೆಗೆ ಬರುತ್ತಾರೆ. ಅಲ್ಲಿಗೆ ಬಂದ ನಂತರ ಭಕ್ತರು ಪ್ರಸಾದವನ್ನು ತಯಾರಿಸಿಕೊಳ್ಳುತ್ತಾರೆ. ಪ್ರಸಾದವಾದ

ನಂತರ ಯಥಾ ಪ್ರಕಾರ ಡೊಳ್ಳಿನ ಹಾಡುಗಳ ಹಬ್ಬ ನಡೆಯುತ್ತದೆ. ಮರುದಿವಸ ಮುಂಜಾನೆ ಒಬ್ಬೊಬ್ಬರೆ ದೇವರು ಕಟ್ಟೆ ಇಳಿದು ಮುತ್ತ್ಯಾನ ದರ್ಶನ ಪಡೆದು ತಮ್ಮ ತಮ್ಮ ಊರುಗಳಿಗೆ ಮರಳುತ್ತವೆ. ದರ್ಶನಕ್ಕೆ ಬಂದ ಮಕ್ಕಳು ಮೊಮ್ಮಕ್ಕಳು ಮರಿಮೊಮ್ಮಕ್ಕಳು ಇವರಿಗೆ ಮುತ್ತ್ಯಾ 'ಗರಿಪ್ರಸಾದ' ಕೊಡುತ್ತಾನೆ. ಗರಿಪ್ರಸಾದವೆಂದರೆ ಎಲೆ, ಅಡಿಕೆ, ಬಾಳಿಕಾಯಿ, ಟೆಂಗು ಹಾಗೂ ಹೂವಿನ ಹಾರಗಳ ಅಶೀರ್ವಾದ ರೂಪದ ಕಾಣಿಕೆ. ಮುತ್ತ್ಯಾನ ಆಶೀರ್ವಾದ ಪಡೆದು ಗುಡ್ಡ ಇಳಿದು ಪಲ್ಲಕ್ಕಿಗಳು ತಮ್ಮ ತಾಣದ ಕಡೆಗೆ ಮುಖ ಮಾಡುತ್ತವೆ.

ಮುತ್ತ್ಯಾನ ಜಾತ್ರೆಯಲ್ಲಿ ಗುರುಗೌರಿ ಸೋಮಲಿಂಗ ಹಾಗೂ ಹೆಂಡತಿ ಪದ್ಮಾವತಿಯರಿಗೆ ಏನು ಸ್ಥಾನವಿದೆ ಎನ್ನುವ ಕುತೂಹಲ ಮೂಡುವುದು ಸಹಜ. ಸೋಮಲಿಂಗ ಮುತ್ತ್ಯಾನ ಗುರುವಾದುದರಿಂದ ಅವನು ಈ ಮಿಲನದಲ್ಲಿ ಉಳಿದವರಂತೆ ಬರುವುದಿಲ್ಲ. ಆದರೆ ಅವನಿಗೆ ಅಂದು ಸಲ್ಲಬೇಕಾದ ಗೌರವ ಭಕ್ತರಿಂದ ಸಲ್ಲುತ್ತದೆ. ಮುಮ್ಮೆಟಗುಡ್ಡದಿಂದ ಮಕಣಾಪುರಕ್ಕೆ ಹೋಗಿ ಗುರುವಿಗೂ ನೈವೇದ್ಯ ಹಿಡಿದು ಬರುತ್ತಾರೆ. ಪದ್ಮಾವತಿಯು ಅಲ್ಲಿಯೇ ಸಮೀಪದ ಅರಕೇರಿಯಲ್ಲಿರುವವಳು. ಅಂದು ಅವಳಿಗೆ ಭಕ್ತರು ಉಡಿತುಂಬಿ ನೈವೇದ್ಯ ಅರ್ಪಿಸುವುದನ್ನು ಮಾಡುತ್ತಾರೆ. ಅದೂ ಅಲ್ಲದೇ ಅಮೋಘಸಿದ್ಧನ ಮುಂದೆ ಇರುವ ಭೂತಾಳಸಿದ್ಧನಿಗೂ ಹಿಂದೆ ಇರುವ ಬಾಳೇದ ಖಂಡರಾಯನಿಗೂ ನೈವೇದ್ಯ ಅರ್ಪಿಸಲಾಗುತ್ತದೆ. ಪದ್ಮಾವತಿಯ ಉಡಿ ತುಂಬಿದಂತೆ ಮುತ್ತ್ಯಾನ ಗುಡಿಯ ಹಿಂದೆ ಇರುವ ಮಣೂರ ಎಲ್ಲಮ್ಮನಿಗೂ ಉಡಿ ತುಂಬುವ ನೈವೇದ್ಯ ಅರ್ಪಿಸುವ ಕೆಲಸ ಭಕ್ತರಿಂದ ನಡೆಯುತ್ತದೆ.[೨೦]

೪.೧.೧೧.೧ ಅಚೇಗಾವಿ : ಈ ಗ್ರಾಮದ ಸ್ಥಾನಿಕ ದೇವರು ಶೀಲಿಸಿದ್ಧ. ಇವನು ಅಚೇಗಾವಿ ಗ್ರಾಮಕ್ಕೆ ಬಂದು ನೆಲೆಸಿರುವುದಕ್ಕೆ ಒಂದು ಕತೆಯಿದೆ. ಅಮೋಘಸಿದ್ಧನ ನಾಲ್ಕು ಜನ ವರವಿನ ಮಕ್ಕಳಲ್ಲಿ ಬಿಳಿಯಾನಿಸಿದ್ಧ ಎರಡನೆಯವನು. ಬಬಲಾದಿಯ ಕೊಂತೆವ್ವನೊಂದಿಗೆ ಬಿಳಿಯಾನಿಸಿದ್ಧನ ಮದುವೆಯಾಗುತ್ತದೆ. ಅವರಿಗೆ ಐದು ಜನ ಗಂಡುಮಕ್ಕಳು ಐವರಲ್ಲಿ ಶೀಲಿಸಿದ್ಧ ಕೊನೆಯವನು. ಶೀಲಸಿದ್ಧ ಶಿಶುವಿದ್ದಾಗಲೇ ಬಲಿ ಕೊಡಬೇಕಾದ ಪ್ರಸಂಗವೊಂದು ಬರುತ್ತದೆ. ಅಮೋಘಸಿದ್ಧನು ತನ್ನ ಬಳಿಯಿದ್ದ ಹೋಮದ ಕಂಬಳಿಯನ್ನು ತನ್ನ ವರವಿನ ಮಕ್ಕಳಲ್ಲಿ ಯಾರಿಗಾದರೂ ಕೊಡದೆ ಎರಡನೆಯ ಪುಣ್ಯದ ಮಗನಾದ ತೆರೆವಾಡದ ಮಂಗರಾಯನಿಗೆ ಕೊಡುತ್ತಾನೆ. ಹೋಮದ ಕಂಬಳಿ ಪಡೆದ ಮಂಗರಾಯ ಪಶ್ಚಿಮ ದಿಕ್ಕಿಗೆ ಹೋಗಿ ಬಿಡುತ್ತಾನೆ. ವಿಷಯ ತಿಳಿದು ಸಿಟ್ಟಿಗೆದ್ದ ಅವಧುಸಿದ್ಧ ಕಂಬಳಿಯನ್ನು ಪಡೆದು ಬರಬೇಕೆಂದು ಮಂಗರಾಯನ ಬೆನ್ನು ಹತ್ತುತ್ತಾನೆ. ಚಿಕ್ಕೋಡಿ ತಾಲೂಕಿನ ಸದಲಗಾ ಗ್ರಾಮವನ್ನು ತಲಪುವಷ್ಟರಲ್ಲಿ ಮಂಗರಾಯನನ್ನು ಅವಧುಸಿದ್ಧ ತರುಬಿ ನಿಲ್ಲಿಸಿ ನಮ್ಮ ಕಂಬಳಿ ನಮಗೆ ಕೊಡು ಎಂದು ಕೇಳುತ್ತಾನೆ. ಇಬ್ಬರಲ್ಲಿ ಮಾತಿಗೆ ಮಾತು ಬೆಳೆಯುತ್ತದೆ. ಅಲ್ಲಿಯೇ ಇದ್ದ ಶಮನಮೀರಾ ಎಂಬ ಸೂಫಿ ಸಂತನು ನೀವಿಬ್ಬರೂ ಕಂಬಳಿ ವಂಶದವರೇ ಇದ್ದೀರಿ, ನಿಮ್ಮ ನಿಮ್ಮಲ್ಲಿ ಜಗಳ ಬೇಡ ಎಂದು ಸಂಧಾನ ನಡೆಯಿಸಿ ಹೋಮದ ಕಂಬಳಿ ಮಂಗರಾಯನಲ್ಲಿಯೇ

ಉಳಿಯುವಂತೆ ಮಾಡುತ್ತಾನೆ. ಅವಧುಸಿದ್ಧ ಒಪ್ಪಿಕೊಳ್ಳುತ್ತಾನೆ. ಸಂಧಾನ ಮುಗಿಸಿ ಅವಧುಸಿದ್ಧ ಅವರಲ್ಲಿಯೇ ಊಟಮುಗಿಸಿಕೊಂಡು ಮರಳಿ ಭೀವರಗಿಗೆ ಹೊರಟು ಬರುತ್ತಾನೆ. ಆದರೆ ಅವನು ಮೋಸಕ್ಕೆ ಬಲಿಯಾಗಿರುತ್ತಾನೆ. ಬಲಾಢ್ಯ ಅವಧುಸಿದ್ಧ ಸಧ್ಯಕ್ಕೆ ಹೋಮದ ಕಂಬಳಿಯನ್ನು ಬಿಟ್ಟುಕೊಟ್ಟಿದ್ದಾನೆ. ಆದರೆ ಮತ್ತೆ ಕೇಳಬಹುದು ಎಂದು ಸಂಶಯಿಸಿ ಮಂಗರಾಯ ಹಾಗೂ ಶಮನಮೀರಾ ಇಬ್ಬರೂ ಸೇರಿ ಊಟದಲ್ಲಿ ವಿಷ ಬೆರೆಯಿಸಿರುತ್ತಾರೆ. ವಿಷ ಪ್ರಾಸನದಿಂದ ಅವಧುಸಿದ್ಧನ ಸಾವು ಖಚಿತವೆಂದು ತಿಳಿದ ಕೊಂತೆವ್ವ (ತಮ್ಮನ ಹೆಂಡತಿ) ಮಾವನಾದ ಅಮೋಘಸಿದ್ಧನಲ್ಲಿಗೆ ಬಂದು ಇದಕ್ಕೆ ಪರಿಹಾರ ಇಲ್ಲವೆ ಎಂದು ಕೇಳುತ್ತಾಳೆ. ಆಗ ಅಮೋಘಸಿದ್ಧ ಅವಳಿಗೆ 'ನಿನ್ನ ಕೂಸು ಶೀಲಿಸಿದ್ಧನನ್ನು ಬಲಿಕೊಟ್ಟರೆ' ಅವನ ದೊಡ್ಡಪ್ಪ ಅವಧು ಸಿದ್ಧ ಬದುಕಿ ಉಳಿಯುತ್ತಾನೆ ಎಂದು ಹೇಳುತ್ತಾನೆ. ಕೊಂತೆವ್ವ ಅಂತೆಯೇ ಮಾಡುತ್ತಾಳೆ. ಅವಧುಸಿದ್ಧನ ಪ್ರಾಣ ಉಳಿಯುತ್ತದೆ ಹಾಗೂ ಪವಾಡ ಸದೃಶ್ಯವಾಗಿ ಕೂಸು ಶೀಲಿಸಿದ್ಧನೂ ಉಳಿಯುತ್ತಾನೆ.[೨೧] ಇಂಥ ಶೀಲಿಸಿದ್ಧನು ಬೆಳೆದು ದೊಡ್ಡವನಾದ ನಂತರ ಇಪ್ಪತ್ತೊಂದು ಧರ್ಮರ ಆಸ್ತಿ ಹಂಚಿಕೆಯ ಸಂದರ್ಭದಲ್ಲೂ ವಿಶೇಷತೆಯನ್ನು ಮೆರೆಯುತ್ತಾನೆ. ಒಟ್ಟು ಆಸ್ತಿಯನ್ನು ಇಪ್ಪತ್ತೊಂದು ಪಾಲು ಮಾಡುತ್ತಾರೆ. ಅದರಲ್ಲಿ ಒಂದು ಪಾಲು ಹೀಗೆ ಇರುತ್ತದೆ. ಶಾವರಸಿದ್ಧನನ್ನು ತೆಗೆದುಕೊಳ್ಳಬೇಕು ಹಾಗೂ ಜಕ್ಕೇರಿ ಹಂಗೋಡ ಮಾಡುವ ಹಕ್ಕನ್ನು ಪಡೆಯಬೇಕು. ಭೂಮಿ, ಕಿಲ್ಲಾರಿ, ಸಂಪತ್ತು ಏನೂ ಇಲ್ಲದ ಈ ಪಾಲನ್ನು ಯಾರೂ ಆಯ್ಕೆ ಮಾಡಿಕೊಳ್ಳಲು ಮುಂದೆ ಬರುವುದಿಲ್ಲ. ಶೀಲಿಸಿದ್ಧ ಮಾತ್ರ ಈ ಪಾಲನ್ನು ಪಡೆದು ಭೀವರಗಿ ಬಿಟ್ಟು ಪೂರ್ವದಿಕ್ಕಿಗೆ ಸಂಚಾರ ಮಾಡುತ್ತಾ ಟಕ್ಕಳಕಿ, ಆಹೇರವಾಡಿ ಮುಂತಾದ ಊರುಗಳಲ್ಲಿ ತಂಗುತ್ತಾ ಕೊನೆಗೆ ಅಚೆಗಾವಿಗೆ ಬಂದು ನೆಲೆನಿಲ್ಲುತ್ತಾನೆ. ಆಸ್ತಿಗಾಗಿ ಸದಾ ಹಪಹಪಿಸುವ, ಹಿರಿತನಕ್ಕಾಗಿ ಸದಾ ಕಿತ್ತಾಡುವ ಧರ್ಮರ ಮಧ್ಯದಲ್ಲಿ ಶೀಲಿಸಿದ್ಧ ಬಹುದೊಡ್ಡ ಆದರ್ಶವನ್ನು ಮೆರೆದಿದ್ದಾನೆ.[೨೨]

ಇಂಥ ಶೀಲಿಸಿದ್ಧನ ಜಾತ್ರೆ ಪ್ರತಿವರ್ಷ ಛಟ್ಟಿ ಅಮವಾಸ್ಯೆಯಂದು ಜರಗುತ್ತದೆ. ಇದೂ ಒಂದು ವೈಪರಿತ್ಯವೆ ಆಗಿದೆ. ಯಾಕೆಂದರೆ ಛಟ್ಟಿ ಅಮವಾಸ್ಯೆಯಂದು ಈ ಸಿದ್ಧರ ಮೂಲ ಪುರುಷ ಅಮೋಘಸಿದ್ಧನ ಜಾತ್ರೆಯಿರುತ್ತದೆ. ಅಂದಿನ ದಿವಸ ನಾಡಿನ ಮೂಲೆ ಮೂಲೆಯಲ್ಲಿ ಹೋಗಿ ನೆಲೆಸಿರುವ ಅವನ ಮಕ್ಕಳು ಮೊಮ್ಮಕ್ಕಳು, ಮರಿಮಕ್ಕಳು, ಮುಮ್ಮೆಟಗುಡ್ಡದ ಕಡೆಗೆ ಧಾವಿಸಿಬರುತ್ತಾರೆ. ಹಾಗೂ ವರ್ಷಕ್ಕೊಂದು ಸಲವಾದರೂ ಸೇರಿ ಸುಖದುಃಖ ಹಂಚಿಕೊಳ್ಳುತ್ತಾರೆ. ಅಂದರೆ ಆ ದಿವಸ ಯಾವುದೇ ಸಿದ್ಧರ ಜಾತ್ರೆ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅಂಥದ್ದರಲ್ಲಿ ಶೀಲಿಸಿದ್ಧನ ಜಾತ್ರೆ ಮಾತ್ರ ಅಂದೇ ನೆರವೇರುತ್ತದೆ. ಮುತ್ತ್ಯಾ ಅಮೋಘಸಿದ್ಧನಷ್ಟು ತಾನು ಬಲಿಷ್ಠ ಎಂದು ತೋರಿಸಿಕೊಳ್ಳಲೋ ಅಥವಾ ಆಸ್ತಿ ಪಾಲವಾಟನಿಯಲ್ಲಿ ಆದ ಅನ್ಯಾಯದ ವಿರುದ್ಧ ಧ್ವನಿಯೆತ್ತಲೋ ಸ್ಪಷ್ಟವಾಗಿ ತಿಳಿಯುವುದಿಲ್ಲ.

ಅದೇನೆ ಇರಲಿ ಇಲ್ಲಿನ ಜಾತ್ರೆ ಎರಡು ದಿವಸಗಳ ಅವಧಿಯದ್ದು. ಛಟ್ಟಿ ಅಮವಾಸ್ಯೆಯ ದಿವಸ ಬೆಳಿಗ್ಗೆ ದೇವರಿಗೆ ಎಣ್ಣೆಮಜಲು (ಎಣ್ಣೆ ಮಜ್ಜನ) ಮಾಡುತ್ತಾರೆ. ಶೀಲಿಸಿದ್ಧನ ಗುಡಿ ಊರಿನ ಹೊರವಲಯದಲ್ಲಿದೆ.

ಅಂದಿನ ದಿವಸ ಊರೊಳಗಿನ ನಂದಿಕೋಲ ಹಾಗೂ ಪಾಲಕಿಯನ್ನು ಮೆರವಣಿಗೆಯಲ್ಲಿ ಈ ಗುಡಿಗೆ ಬರುತ್ತಾರೆ. ಗುಡಿ ತಲುಪುವಷ್ಟರಲ್ಲಿ ಸಾಯಂಕಾಲ ನಾಲ್ಕು ಗಂಟೆಯಾಗಿರುತ್ತದೆ.

ಸಾಮಾನ್ಯವಾಗಿ ಜಾತ್ರೆಗೆಂದು ಏಳೂರು ಪಲ್ಲಕ್ಕಿಗಳನ್ನು ಕರೆಯಿಸಿರುತ್ತಾರೆ. ಅವರೆಲ್ಲ ಊರ ಹೊರಗಿನ ಗುಡಿಯ ವಿಸ್ತಾರವಾದ ಜಾಗೆಯಲ್ಲಿ ಬಂದು ತಂಗಿರುತ್ತಾರೆ. ಇಲ್ಲಿನ ಪಾಲಕಿಗಳ ಭೆಟ್ಟಿ ಕಾರ್ಯಕ್ರಮ ಮುಮ್ಮಟಗುಡ್ಡದಲ್ಲಿ ಭಟ್ಟಿ ಜಾತ್ರೆಯಲ್ಲಿ ಭೆಟ್ಟಿಯಾಗುವ ನೂರಾರು ಪಾಲಿಕೆಗಳ ಮಿಲನವನ್ನು ನೆನಪಿಸಿ ಕೊಡುತ್ತದೆ. ಪಾಲಿಕೆಗಳ ಭೇಟಿಯ ನಂತರ ಅಲ್ಲಿ ನೆರೆದ ಭಕ್ತರಿಗೆಲ್ಲ ಪ್ರಸಾದವಾಗುತ್ತದೆ. ಪ್ರಸಾದ ಮುಗಿದ ನಂತರ ರಾತ್ರಿಯಿಡಿ ಡೊಳ್ಳಿನ ಹಾಡಿಕೆಯ ಕಾರ್ಯಕ್ರಮ ನಡೆಯುತ್ತದೆ.

ಮರುದಿವಸ ಬೆಳಿಗ್ಗೆ ದೇವರುಗಳಿಗೆ ಮಹಾಕ್ಷೀರಾಭಿಷೇಕವಾಗುತ್ತದೆ. ಅದಾದ ನಂತರ ಪಾಲಕಿ, ನಂದಿಕೋಲಗಳೊಂದಿಗೆ ಊರ ಕಡೆಗೆ ಮೆರವಣಿಗೆ ಹೋಗುತ್ತದೆ. ಊರಿನ ಕುರುಬ ಸಮಾಜದವರಿಗೆ, ಗುರವ ಸಮಾಜದವರಿಗೆ, ಗಾಣಿಗೇರ ಸಮಾಜದವರಿಗೆ ಮೆರವಣಿಗೆ ಸಂದರ್ಭದಲ್ಲಿ ಚಾಜಗಳು ಇರುತ್ತವೆ. ಇವರೆಲ್ಲಾ ಸೇರಿ ಮೆರವಣಿಗೆಯನ್ನು ಊರ ತುಂಬೆಲ್ಲಾ ಮಾಡಿ ಮರಳಿ ಊರಹೊರಗಿನ ಗುಡಿಗೆ ಬರಬೇಕಾದರೆ ಮತ್ತೆ ಸಂಜೆ ನಾಲ್ಕು ಗಂಟೆಯಾಗಿರುತ್ತದೆ. ಮೆರವಣಿಗೆಯಲ್ಲಿ ಈ ತನಕ ಪಾಲ್ಗೊಂಡ ಜನರಿಗೆಲ್ಲ ಪ್ರಸಾದ ನಡೆಯುತ್ತದೆ.

ಪ್ರಸಾದ ಮುಗಿದ ನಂತರ ಸಂಜೆ ಎಂಟು ಗಂಟೆಯವರೆಗೆ ಡೊಳ್ಳಿನ ಹಾಡಿಕೆ ನಡೆಯುತ್ತವೆ. ಈ ಕಡೆಗೆ ಡೊಳ್ಳಿನ ಹಾಡಿಕೆ ನಡೆಯುತ್ತಿದ್ದಂತೆ ಇನ್ನೊಂದು ಕಡೆಗೆ ಹೇಳಿಕೆ ಮಾಡಲು ಸಿದ್ಧತೆ ನಡೆದಿರುತ್ತದೆ. ಸ್ಥಾನಿಕ ದೇವರು ಶೀಲಿಸಿದ್ಧನಾದರೂ ಅವನು ತನ್ನೊಂದಿಗೆ ಕರೆದುಕೊಂಡು ಬಂದ ಶಾವರಸಿದ್ಧನಿಗೆ ಇಲ್ಲಿ ಪ್ರಮುಖ ಸ್ಥಾನವಿದೆ. ಶಾವರಸಿದ್ಧನನ್ನು ಮೂಲ ಗುಡಿಯಲ್ಲಿ ಕೂಡ್ರಿಸಿ ಮೆರವಣಿಗೆಯಲ್ಲಿ ಸುತ್ತಾಡಿ ಬರುವವ ಶೀಲಿಸಿದ್ಧನಾಗಿರುತ್ತಾನೆ. ಗುಡಿಗೆ ಸಂಬಂಧಪಟ್ಟ ದೇವರು ಶೀಲಿಸಿದ್ಧ ಹಾಗೂ ಶಾವರಸಿದ್ಧರಾದರೂ ಹೇಳಿಕೆ ಸಂದರ್ಭದಲ್ಲಿ ಮುಖ ಕಟ್ಟಿಕೊಳ್ಳುವುದು ಮಲಕಾರಿಸಿದ್ಧನದು ಎಂಬುದು ತುಂಬಾ ವಿಶೇಷವಾದುದು. ಗುಡಿಯ ಮಾರಾಯರು ಮಲಕಾರಿಸಿದ್ಧನ ಮುಖ ಕಟ್ಟಿ ಹೇಳಿಕೆಗಳನ್ನು ಮಾಡುವ ಪರಿ ಕಲ್ಲೂರಿನ ಮಾದರಿಯೇ ಆಗಿದ್ದರೂ ಇಲ್ಲಿ ಸಣ್ಣದೇವರು ಹಾಗೂ ದೊಡ್ಡದೇವರು ಎಂಬ ಎರಡು ಮುಖಗಳಿಲ್ಲ. ಒಂದೇ ಒಂದು ಮಲಕಾರಿಸಿದ್ಧನ ಮುಖ ಕಟ್ಟಿಕೊಂಡು ಭೂಮಿಗೆ ಮಳೆಬೆಳೆ ಜನ ದನಗಳಿಗೆ ರೋಗರುಜಿನ ಹಾಗೂ ನಾಡಿಗೆ ರಾಜಕಾರಣದ ಬಗೆಗೆ ಪ್ರತ್ಯೇಕವಾಗಿ ಹೇಳಿಕೆ ಮಾಡುತ್ತಾರೆ.

ಹೇಳಿಕೆಗಳನ್ನು ಆಲಿಸಿದ ಭಕ್ತರು ಅವು ನೀಡುವ ಭರವಸೆ ಬೆದರಿಕೆಗಳನ್ನು ಎದೆಯಲ್ಲಿ ಹೊತ್ತು ಭಯ ಭಕ್ತಿಯಿಂದ ತಮ್ಮ ಊರುಗಳಿಗೆ ನಸುಕಿನಲ್ಲಿ ಪಯಣ ಬೆಳೆಯಿಸುತ್ತಾರೆ.

ಜಾತ್ರೆಯಷ್ಟೇ ದೊಡ್ಡಪ್ರಮಾಣದ ಉತ್ಸವ ಇಲ್ಲಿ ನಡೆಯುತ್ತದೆ. ಅದನ್ನು 'ದೊಡ್ಡ ಹಬ್ಬ'ವೆಂದು ಕರೆಯುತ್ತಾರೆ. ಈ ದೊಡ್ಡಹಬ್ಬದಲ್ಲಿ ಮಾರಾಯರ ಏಳು ಜನ ಮುತ್ತೈದೆಯರನ್ನು ಮೆರವಣಿಗೆಯಲ್ಲಿ

[illegible]

ಕರೆದುಕೊಂಡು ಬಂದು ಅವರ ಪಾದ ಪೂಜೆ ಮಾಡುವ ಆಚರಣೆ ಇರುತ್ತದೆ. ಅದರ ಕುರಿತು ಇದೇ ಅಧ್ಯಾಯದ ನಂಬಿಕೆ ಆಚರಣೆಗಳು ವಿಭಾಗದಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ.[೨೩]

೪.೨ ನಂಬಿಕೆ-ಆಚರಣೆಗಳು

ಜಾತ್ರೆಗಳು ಆವರ್ತಿತವಾದವುಗಳಾಗಿದ್ದರೆ ಹಬ್ಬಗಳು, ಕುಂಭ ಕೂಡಿಸುವದು, ಪೂಜೆ ಕಟ್ಟುವುದು, ಕೌಲ ಕೇಳುವುದು, ಪಟ್ಟಗಟ್ಟುವುದು ಮುಂತಾದವುಗಳು ಸಾಂದರ್ಭಿಕವಾಗಿರುತ್ತವೆ. ಅಮೋಘಸಿದ್ಧ ಹಾಗೂ ಅವನ ಪರಂಪರೆಯ ಸಿದ್ಧರ ಕುರಿತು ಸಾಂದರ್ಭಿಕವಾಗಿ ಹಲವಾರು ಆಚರಣೆಗಳು ನಡೆಯುತ್ತವೆ. ಜಾತ್ರೆಗಳು ಸಾಮಾನ್ಯವಾಗಿ ವರ್ಷಕ್ಕೊಂದರಂತೆಯೋ, ಎರಡು ಸಲವೋ ನಡೆಯುತ್ತವೆ. ಆದರೆ ಭಕ್ತರ ಬೇಡಿಕೆಯ ಆಧಾರದ ಮೇಲೆ ನಡೆಯುವ ಉತ್ಸವಗಳು, ಆಚರಣೆಗಳು ಆವರ್ತಿತವಾಗಿರದೇ ಸಾಂದರ್ಭಿಕವಾಗಿ ಜರಗುತ್ತವೆ. ಇವುಗಳಿಗೆ ಕಾಲ ನಿಗದಿಯಾಗಿರುವುದಿಲ್ಲ.

೪.೨.೧ ಹಬ್ಬಗಳು

ಅಮೋಘಸಿದ್ಧ ಪರಂಪರೆಯ ಸಿದ್ಧರ ಭಕ್ತರು ತಮ್ಮ ಮನೆಯಲ್ಲಿ ಲಗ್ನದಂಥಹ ಶುಭಕಾರ್ಯ ನಡೆಯುವ ಸಂದರ್ಭದಲ್ಲಿ 'ಹಬ್ಬ' ಮಾಡುವುದಾಗಿ ಹರಕೆ ಹೊತ್ತುಕೊಳ್ಳುತ್ತಾರೆ. ಹಾಗೆ ಹರಕೆ ಹೊತ್ತುಕೊಂಡವರು ನಮ್ಮ ಮನೆಯಲ್ಲಿ ಮದುವೆ ನಡೆಯಲಿದೆ, ಅದಕ್ಕಿಂತ ಪೂರ್ವದಲ್ಲಿ ಮುತ್ತ್ಯಾನ ಹಬ್ಬ ಮಾಡುವ ಹರಕೆ ಹೊತ್ತುಕೊಂಡಿದ್ದೇವೆ ಎಂದು ಒಡೆಯರಿಗೆ ತಿಳಿಸುತ್ತಾರೆ. ಒಡೆಯರು ಅದಕ್ಕೆ ಸಮ್ಮತಿಸುತ್ತಾರೆ. ಹಬ್ಬ ಎರಡು ದಿವಸಗಳವರೆಗೆ ನಡೆಯುತ್ತದೆ. ಜಾತ್ರೆಯನ್ನು ನೆರವೇರಿಸುವವರು ಇಡೀ ಊರಿನವರಾದರೆ ಹಬ್ಬವನ್ನು ನೆರವೇರಿಸುವವರು ಒಂದು ಕುಟುಂಬದವರಾಗಿರುತ್ತಾರೆ. ಆದರೆ ಈ ಹಬ್ಬಗಳು ಕೌಟುಂಬಿಕ ನೆಲೆಯವಾಗಿದ್ದರೂ ಸಾರ್ವತ್ರಿಕತೆಯ ಜಾತ್ರೆಯ ಆಚರಣೆಗಳಷ್ಟೇ ಅದ್ದೂರಿಯಿಂದ ನೆರವೇರುತ್ತವೆ. ಮೊದಲನೆಯ ದಿವಸ ಹೂವಿನ ಊಟವಿರುತ್ತದೆ. ಹಬ್ಬದ ಹಿಂದಿನ ದಿವಸ ಹೂಗಾರ ವಿಜಾಪುರಕ್ಕೆ ಹೋಗಿ ಹೂವನ್ನು ತಂದಿರುತ್ತಾನೆ. ಇದಕ್ಕೆ ಪಟ್ಟಣದ ಹೂವು ತರುವ ಕಾರ್ಯಕ್ರಮವೆಂದು ಕರೆಯುತ್ತಾರೆ. ಹೂವನ್ನು ತರಲು ಹೋದವರು ಬಲು ಕಟ್ಟುನಿಟ್ಟಿನಿಂದ ಮಡಿಹುಡಿಯಿಂದ ನಡೆದುಕೊಳ್ಳುತ್ತಾರೆ. ಒಡೆಯರು ತಮ್ಮನ್ನು ಮೇಲು ಮತದವರೆಂದು ಭಾವಿಸಿರುವುದರಿಂದ ಆಚರಣೆಗಳ ಪ್ರತಿಯೊಂದು ಚಟುವಟಿಕೆಯಲ್ಲಿ ಕಟ್ಟುನಿಟ್ಟಿನ ನಿಯಮ ಪಾಲಿಸುತ್ತಾರೆ. ತಾವು ಕುರುಬರಲ್ಲಿಅತೀ ಶ್ರೇಷ್ಠ ಕುಲದವರೆಂಬ ನಂಬಿಕೆ ಇಲ್ಲಿ ಕೆಲಸ ಮಾಡುತ್ತಿರುತ್ತದೆ. ಒಡೆಯರು ತಮ್ಮನ್ನು 'ಮೇಲುಮತ'ದವರು ಎಂದುಕೊಂಡಂತೆ ತಾವು ಬೀಗತನ ಮಾಡುವ ನಡತನದವರನ್ನು/ ನರೋಟಿಯವರನ್ನು 'ಶೀಲಮತ'ದವರು ಎಂದು ಭಾವಿಸಿದ್ದಾರೆ. ಇನ್ನುಳಿದವರನ್ನು/ಕುರುಬರನ್ನು 'ಹಾಲುಮತ'ದವರು ಎಂದು ಮಾನಸಿಕವಾಗಿ ವಿಭಾಗಿಸಿಕೊಂಡಿರುವ ಹಿನ್ನಲೆಯಲ್ಲಿ ಇವರ ಆಚರಣೆಯಲ್ಲಿರುವ ಕಟ್ಟುನಿಟ್ಟಿನ ನಿಯಮಗಳನ್ನು ಅರ್ಥೈಸಿಕೊಳ್ಳಬಹುದು. ಪಟ್ಟಣಕ್ಕೆ ಹೂವು ಕಟ್ಟಿಸಿಕೊಂಡು ಬರಲು ಹೋದ ವ್ಯಕ್ತಿ ಬರಿಗಾಲಲ್ಲಿ ನಡೆಯುತ್ತಾ ಹೋಗುತ್ತಾನೆ ಹಾಗೂ ದಾರಿ ಮಧ್ಯದಲ್ಲಿ ಎಲ್ಲಿಯೂ ಕಾಲ್ಮಡಿಯಲು

ನಿಲ್ಲುವುದಿಲ್ಲ. ಮರಳಿ ಬರುವಾಗಲಂತೂ ಹೂವಿನ ಬಾಸಿಂಗವನ್ನು ಇಳಿಸುವುದಿಲ್ಲ. ಇಳಿಸುವ ಪ್ರಸಂಗ ಬಂದರೆ ದೇವಸ್ಥಾನದಲ್ಲಿ ಇಳಿಸುತ್ತಾರೆ. ಕಾಲ್ಮಡಿಯುವ ಪ್ರಸಂಗ ಬಂದರೆ ಸ್ನಾನಮಾಡಿ ಮಡಿಗೊಂಡ ನಂತರವೇ ಹೂವಿನ ಬಾಸಿಂಗವನ್ನು ಹೊತ್ತುಕೊಳ್ಳುತ್ತಾರೆ. ಅದೂ ಅಲ್ಲದೆ ದಾರಿಯಲ್ಲಿ ಬರುವಾಗ ಯಾರನ್ನೂ ಮುಟ್ಟಿಸಿ ಕೊಳ್ಳುವುದಿಲ್ಲ.

ಹಾಗೆ ತಂದ ಹೂವಿನ ಬಾಸಿಂಗವನ್ನು 'ಹೂವಿನ ಊಟ' ಆಚರಣೆಯ ದಿವಸ ದೇವರಿಗೆ ಕಟ್ಟಿ ಸಿಂಗರಿಸುತ್ತಾರೆ. ಅಂದು ಗ್ರಾಮದ ಎಲ್ಲರಿಗೂ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರಿಗೂ ಬಿನ್ನಹ ಮಾಡಿಕೊಂಡಿರುತ್ತಾರೆ. ಊರ ಜನರಿಗೆ ಊಟಕ್ಕೆ ಹೇಳಿಬರುವ ಚಾಜ ಗುಡಿಯ ಹೂಗಾರನಿಗೆ ಇರುತ್ತದೆ. ಅಂದು ಸೇರಿದ ಜನರಿಗೆ ರೊಟ್ಟಿ ಹಾಗೂ ಕಟಂಬಲಿಯ ಊಟವಿರುತ್ತದೆ. ಎರಡನೆಯ ದಿವಸ ಸಿಹಿ ಅಡುಗೆಯ ಊಟವಿರುತ್ತದೆ. ಅಂದು ಸಾಮಾನ್ಯವಾಗಿ ಹಾಲುಗ್ಗಿ ಮಾಡಿಸಿರುತ್ತಾರೆ. ಈ ಮಾಹಿತಿಯನ್ನು ಭೀವರಗಿಯಲ್ಲಿ ನಡೆಯುವ ಹಬ್ಬದ ಆಚರಣೆಯ ಆಧಾರದ ಮೇಲೆ ನೀಡಲಾಗಿದೆ.

ಭಂಡಾರ ಕವಟೆಯಲ್ಲಿಯೂ ಹಬ್ಬ ಮಾಡಿಸುವ ಆಚರಣೆ ಇದೆ. ಇಲ್ಲಿ ಹಬ್ಬ ಮೂರು ದಿವಸ ನಡೆಯುತ್ತದೆ. ಭಕ್ತರು ಹಬ್ಬ ಮಾಡಿಸುವುದಿದೆ ಎಂದು ಒಡೆಯರಿಗೆ ತಿಳಿಸುತ್ತಾರೆ. ಇಲ್ಲಿಯೂ ಪಟ್ಟಣದ ಹೂವು ತರುವ ಪದ್ಧತಿಯಿದೆ. ಭಂಡಾರಕವಟೆಯ ಸ್ಥಾನಿಕ ದೇವರಾದ ಮಾಸಿದ್ದಪ್ಪ ಭಕ್ತರ ಮನೆಯಲ್ಲಿ ಹೋಗಿ ಮೂರು ದಿವಸ ವಸ್ತಿ ಮಾಡುತ್ತಾನೆ. ಹೋಗುವಾಗ ಊರಿನ ಇನ್ನೊಬ್ಬ ದೇವತೆ ಪೀರನನ್ನೂ ಕರೆದುಕೊಂಡು ಹೋಗುತ್ತಾನೆ. ಅವನೂ ಅಲ್ಲಿ ವಸ್ತಿ ಮಾಡುತ್ತಾನೆ. ಮಾಸಿದ್ದಪ್ಪ ಭಕ್ತರ ಮನೆಗೆ ಪಾಲಿಕೆಯಲ್ಲಿ ಬಂದರೆ ಪೀರನು ಚೌಕಿಯಲ್ಲಿ ಬರುತ್ತಾನೆ. ಈ ಪೀರ ಮಾಸಿದ್ಧಪ್ಪನ ಕಾಲದಲ್ಲಿ ಭಂಡಾರಕವಟೆಯ ಗೌಡನಾಗಿದ್ದ. ಈ ಊರಿಗೆ ಮಾಸಿದ್ದಪ್ಪ ಏಳನೂರು ಕಿಲ್ಲಾರಿಗಳು ಮೇಯಿಸುತ್ತಾ ಬಂದಾಗ ಪೀರನಿಗೂ ಮಾಸಿದ್ಧಪ್ಪನಿಗೂ ಮುಖಾಮುಖಿಯಾದದ್ದನ್ನು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಆ ಕಾರಣವಾಗಿಯೇ ಮಾಸಿದ್ದಪ್ಪ ಹಾಗೂ ಪೀರ ಹೀಗೆ ಇಬ್ಬರೂ ಸೇರಿಯೇ ಭಕ್ತರ ಮನೆಯಲ್ಲಿ ಮೂರು ದಿವಸ ವಾಸ್ತವ್ಯ ಮಾಡುತ್ತಾರೆ. ಮೂರು ದಿವಸವೂ ಬೇಡಿಕೊಂಡ ಭಕ್ತ ಊರ ಜನರಿಗೆಲ್ಲಾ ಊಟಕ್ಕೆ ಹಾಕಬೇಕು. ನಿತ್ಯ ಏನಿಲ್ಲವೆಂದರೂ ಏಳರಿಂದ ಎಂಟುಸಾವಿರ ಜನ ಊಟ ಮಾಡುತ್ತಾರೆ. ಒಡೆಯರು ಹಬ್ಬಕ್ಕೆಂದು ಭಂಡಾರ ಹಿಡಿದರೆ ಅಲ್ಲಿರುವ ಆರು ಜನ ಒಡೆಯರಿಗೆ ಐದರಿಂದ ಹತ್ತುಸಾವಿರ ಕಾಣಿಕೆ ನೀಡುತ್ತಾರೆ. ಪ್ರತಿಯೊಬ್ಬ ಒಡೆಯರಿಗೆ ಒಂದೊಂದು ಹೊಸ ಕಂಬಳಿ ನೇಯಿಸಿಕೊಡಲಾಗುತ್ತದೆ. ಹೀಗಾಗಿ ಭಕ್ತನಿಗೆ ಹಬ್ಬ ಮಾಡಿಸಲು ತಗಲುವ ಅಂದಾಜು ವೆಚ್ಚ ಒಂದೂವರೆಯಿಂದ ಎರಡು ಲಕ್ಷ ರೂಪಾಯಿ. ಯಾವುದಾದರೂ ಕಾರಣಕ್ಕೆ ದೊಡ್ಡ ಖರ್ಚು ಬಂತೆಂದರೆ 'ಏನ ಮಾಸಿದ್ದಪ್ಪನ ಹಬ್ಬದ ಖರ್ಚು ಬಂದಂಗಾಯಿತಲ್ಲಾ' ಎಂದು ಜನರು ಆಡಿಕೊಳ್ಳುವುದು ವಾಡಿಕೆಯಾಗಿದೆ. ಹೀಗಾಗಿಯೇ ಅವರು ಇದನ್ನು ದೊಡ್ಡ ಹಬ್ಬವೆಂದು ಕರೆಯುತ್ತಾರೆ.[೨೪]

೪.೨.೨ ಜಕ್ಕೇರಿ ಹಂಗೊಡ

ದಕ್ಷಿಣ ಸೋಲಾಪೂರ ತಾಲೂಕಿನ ಅಚೇಗಾವಿಯಲ್ಲಿ ಶೀಲಿಸಿದ್ಧನ ಹೆಸರಿನಲ್ಲಿ ಹಬ್ಬ ಆಚರಿಸುತ್ತಾರೆ. ಅವರು ಈ ಹಬ್ಬವನ್ನು ಜಕ್ಕೇರಿ ಹಂಗೊಡ ಎಂದು ಕರೆಯುತ್ತಾರೆ. ಜಕ್ಕೇರಿ ಹಂಗೊಡದ ಆಚರಣೆಯ ಹಿಂದೆ ಅಮೋಘಸಿದ್ಧನ ಕುರಿತಾಗಿರುವ ಒಂದು ಪುರಾಣ ಕಥೆಯಿದೆ. ಪಾರ್ವತಿ ಪರಶಿವ ಇಬ್ಬರ ಪ್ರೀತಿಯ ಕೂಸಾಗಿ ಕೈಲಾಸದಲ್ಲಿ ಬೆಳೆಯುತ್ತಿದ್ದ ಅಮೋಘಸಿದ್ಧನನ್ನು ಒಂದು ಸಲ ನಮ್ಮಿಬ್ಬರಲ್ಲಿ ನಿನಗೆ ಯಾರು ಪ್ರಿಯರು ಎಂದು ಪಾರ್ವತಿ ಪ್ರಶ್ನಿಸಿದಳಂತೆ. ಆಗ ಅಮೋಘಸಿದ್ಧನು ನನಗೆ ಗುರು ಹಾಗೂ ತಂದೆಯಾದ ಪರಶಿವನೇ ಹೆಚ್ಚು ಪ್ರಿಯ ಎಂದು ಹೇಳಿದನಂತೆ. ಅವನ ಮಾತು ಕೇಳಿದ ಪಾರ್ವತಿ ಅಮೋಘಸಿದ್ಧನಿಗೆ ತೊಂದರೆ ಕೊಡಲು ಪ್ರಾರಂಭಿಸುತ್ತಾಳೆ. ಅವನ ಗುರು ಸೇವೆಯಲ್ಲಿ ಹಲವಾರು ವಿಘ್ನಗಳನ್ನು ಒಡ್ಡುತ್ತಾಳೆ. ಗುರುಪೂಜೆಗೆ ಕಪ್ಪೆ ಕಲಕದ ಸೀತಾಳ ತುರುವುದು ಅಮೋಘಸಿದ್ಧನ ದೈನಂದಿನ ಕೆಲಸ. ಮೂರುನೂರಾ ಅರವತ್ತೈದು ಪಾವಟಿಗೆಗಳ ಸೋಪಾನ ಬಾವಿಯಿಂದ ನೀರು ತರುತ್ತಿರುತ್ತಾನೆ. ಅಮೋಘಸಿದ್ಧನಿಗೆ ವಿಘ್ನ ಒಡ್ಡುವ ಸಲುವಾಗಿ ಅಲ್ಲಿ ಕಪ್ಪೆ ಬರುವಂತೆ ಮಾಡುತ್ತಾಳೆ. ಕಪ್ಪೆ ಕಲಕಿದ ನೀರು ಮೀಸಲು ಕಳೆದುಕೊಂಡಿತು ಎಂದು ಸೀತಾಳವನ್ನ ಅಲ್ಲಿಯೇ ಸುರವಿ ಬಿಡುತ್ತಾನೆ. ಆಗ ಆ ಹೊಂಡದಲ್ಲಿ ವಾಸವಾಗಿದ್ದ ಏಳು ಜನ ಜಕ್ಕಣೇರು ಅಮೋಘಸಿದ್ಧನ ದರ್ಶನದಿಂದ ತಮ್ಮ ಬಾಳು ಪಾವನವಾಯಿತೆಂದು ಹೇಳುತ್ತಾರೆ. ಅದಕ್ಕೆ ಪ್ರತಿಯಾಗಿ ಅಮೋಘಸಿದ್ಧನು ನಾನು ಭೂಮಿಗೆ ಹೋದ ನಂತರ ನನ್ನ ಎರಡನೆಯ ವರವಿನ ಮಗನಾದ ಬಿಳಿಯಾನಿಸಿದ್ಧನ ಐದನೆಯ ಮಗನಿಗೆ ನಡೆಯುವ ಹಬ್ಬದಲ್ಲಿ ನಿಮಗೂ ಮರ್ಯಾದೆ ಸಿಗಲಿ. ಆ ಹಬ್ಬವನ್ನು ಜಕ್ಕೇರಿ ಹಂಗೊಡ ಎಂದು ಆಚರಿಸುವಂತಾಗುತ್ತದೆ ಎಂದು ಹೇಳುತ್ತಾನೆ.

ಪುರುಷ ಕೇಂದ್ರಿತವಾದ ಅಮ್ಮೋಘಸಿದ್ಧನ ಪರಂಪರೆಯ ಸಿದ್ಧರ ಆಚರಣಾ ಲೋಕದಲ್ಲಿ ಮಹಿಳೆಯರಿಗೆ ಅಲ್ಲೊಮ್ಮೆ ಇಲ್ಲೊಮ್ಮೆ ಅಪವಾದವೆನ್ನುವಂತೆ ಮಹಿಳೆಯರಿಗೆ ಗೌರವ ದೊರೆಯುವುದುಂಟು. ಅಂಥಹ ಒಂದು ಹಬ್ಬ ಜಕ್ಕೇರಿ ಹಂಗೊಡ.

ಮಾರಾಯರ ಮನೆಯಲ್ಲಿ ಏನಾದರೂ ಕಾರಣ ಕಟ್ಟು ಇದ್ದರೆ ಆ ಮೊದಲು ಅವರು ಈ ಹಬ್ಬವನ್ನು ಆಚರಿಸುತ್ತಾರೆ. ಈ ಆಚರಣೆಯಲ್ಲಿ ಮಾರಾಯರ ಮನೆಯ ಸ್ತ್ರೀಯರು ಕೇಂದ್ರದಲ್ಲಿರುತ್ತಾರೆ. ಜಕ್ಕೇರಿ ಹಂಗೊಡ ಆಚರಿಸುವ ಮುನ್ನ ಏಳು ಜನ ಮಹಿಳೆಯರನ್ನು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಆಮಂತ್ರಿಸುತ್ತಾರೆ. ಹಾಗೇ ಆಮಂತ್ರಿತವಾದ ಮಹಿಳೆಯರು ಮುತ್ತೈದೆಯರು ಆಗಿರಬೇಕೆನ್ನುವದು ಮಹತ್ವದ ಅಂಶ. ಆಚರಣೆಯ ದಿವಸವೇ ಅವರು ಉಪವಾಸವಿರಬೇಕಾಗುತ್ತದೆ. ಹೂವಿನ ದಂಡೆ ಹಾಕಿ ಏಳೂ ಜನ ಮುತ್ತೈದೆಯರನ್ನು ಅಂದು ಬೆಳಗಿನ ಜಾವ ಸಿಂಗರಿಸಿರುತ್ತಾರೆ. ಊರಿನಲ್ಲಿರುವ ಶೀಲಿಸಿದ್ಧನ ಪಾಲಕಿ ಮೆರವಣಿಗೆ ಸಮೇತ ಊರಾಡುತ್ತಾ ಊರಹೊರಗಿರುವ ಶಾವರಸಿದ್ಧನ ಗುಡಿಯ ಕಡೆಗೆ ಹೊರಡುತ್ತದೆ. ಆ ಮೆರವಣಿಗೆಯ ಮುಂಚೂಣಿಯಲ್ಲಿ ಈ ಏಳು ಜನ ಮುತ್ತೈದೆಯರು ಇರುತ್ತಾರೆ. ಆ ಸಂದರ್ಭದಲ್ಲಿ ಅವರ ತಲೆಯ ಮೇಲೆ

ಸೀತಾಳ ಬಿಂದಿಗಿಯನ್ನು ಹೊರಿಸಲಾಗಿರುತ್ತದೆ. ಆ ಬಿಂದಿಗಿಯ ಮೇಲೆ ಒಂದು ಪರ್ಯಾಣವನ್ನು ಇಟ್ಟು ಅದರಲ್ಲಿ ಹತ್ತಿಕಾಳು ಹಾಕಿ ದೀಪ ಬೆಳಗಿಸುತ್ತಾರೆ. ಇದೊಂದು ರೀತಿ ಗುಗ್ಗಳ ಮೆರವಣಿಗೆಯನ್ನು ನೆನಪಿಸುವಂತೆ ಇರುತ್ತದೆ. ಪಾಲಕಿ ಹಾಗೂ ಮಹಿಳೆಯರನ್ನು ಜಕಣೇರ ಗುಡಿಗೆ ಕರೆದುಕೊಂಡು ಬರುತ್ತಾರೆ. ಬಂದ ನಂತರ ಏಳು ಮುತ್ತೈದೆಯರು ಹೊತ್ತು ತಂದ ಸೀತಾಳ ಬಿಂದೆಗೆಗಳನ್ನು ಗುಡಿಯ ಮುಂದುಗಡೆ ಇಳುವುತ್ತಾರೆ. ಏಳು ಜನ ಮಾರಾಯರು ಹೋಗಿ ಸೀತಾಳವನ್ನು ತುಂಬಿ ಕೊಂಡು ಬರುತ್ತಾರೆ. ನಂತರ ಅಲ್ಲಿ ನೆರೆದವರೆಲ್ಲಾ ದೇವರ ಹಾಗೂ ಮುತ್ತೈದೆಯರ ಪಾದ ತೊಳೆದು ನಮಸ್ಕರಿಸಲು ಪ್ರಾರಂಭಿಸುತ್ತಾರೆ. ನಮಸ್ಕರಿಸಲು ಬಂದ ಪ್ರತಿಯೊಬ್ಬನೂ ಮುತ್ತೈದೆಯ ಪಾದವನ್ನು ತೊಳೆದು ಪೂಜೆ ಸಲ್ಲಿಸಿ ನಮಸ್ಕರಿಸುತ್ತಾರೆ. ಹಾಗೆ ಸಲ್ಲಿಸಲು ಬಂದ ವ್ಯಕ್ತಿ ಸ್ವತಃ ಪೂಜಿಸಿಕೊಳ್ಳುವವಳ ಗಂಡನಾಗಿದ್ದರೂ ಅವನು ಅವಳ ಪಾದವನ್ನು ತೊಳೆದು ಪೂಜೆ ಮಾಡಿ ನಮಸ್ಕರಿಸಲೇಬೇಕು. ಈ ಪೂಜೆ ಮುಗಿದ ನಂತರ ಮರಳಿ ಗುಡಿಗೆ ಬರುತ್ತಾರೆ. ಅಲ್ಲಿ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯುತ್ತದೆ. ಅದಾದ ನಂತರ ಮುತ್ತೈದೆಯರ ಬಾಯಲ್ಲಿ ಬೆಲ್ಲದ ಹರಳು ಹಾಕಿ ನೀರು ಕುಡಿಸುತ್ತಾರೆ.

ಇಂಥದೊಂದು ಅಪರೂಪದ ಆಚರಣೆ ಪುರುಷ ಪ್ರಧಾನ ಪರಂಪರೆಯಲ್ಲಿ ಹೇಗೆ ಬಂದು ಸೇರಿತು ಎನ್ನುವುದು ತುಂಬಾ ಕುತೂಹಲಕರ ಸಂಗತಿಯಾಗಿದೆ. ಯಾಕೆ ಈ ಪೂಜೆ ಎಂದು ಕೇಳಿದರೆ ಈ ಮೊದಲು ಚರ್ಚಿಸಿದ ಅಮೋಘಸಿದ್ಧ ಹಾಗೂ ಮುನ್ನೂರಾ ಅರವತ್ತೈದು ಸೋಪಾನ ಬಾವಿಯ ಪುರಾಣಕತೆಯನ್ನು ಹೇಳುತ್ತಾರೆ. ಅಮೋಘಸಿದ್ಧನ ಪರಂಪರೆಯಲ್ಲಿ ಮಹಿಳೆಯರು ಪೂಜೆಗೊಂಡದ್ದು ಅಪರೂಪ. ಅಮೋಘಸಿದ್ಧನ ಹೆಂಡತಿ ಪದ್ಮಾವತಿಯ ಕುರಿತು ಒಂದಿಷ್ಟು ಹಾಡು ಹೇಳುವುದನ್ನು ಬಿಟ್ಟರೆ ಹಾಗೂ ಉಡಿ ತುಂಬುವುದನ್ನು ಬಿಟ್ಟರೆ ಮತ್ತೇನೂ ಇಲ್ಲ. ಆದರೆ ಶೀಲಸಿದ್ಧನ ತಾಯಿ ಕೊಂತೆವ್ವಳಿಗೆ ಜತ್ತ ತಾಲೂಕಿನ ಬಲಾದಿಯಲ್ಲಿ ಒಂದು ಗುಡಿಯಿದೆ. ಅವಳ ಮೂರ್ತಿಯಿದೆ. ಅವಳದೇ ಆದ ಪಾಲಕಿ ಕೂಡ ಇದೆ. ಬಬಲಾದಿಯ ಹೊರವಲಯದ ಕಾತರಕಂಟಿಯಲ್ಲಿರುವ ಕೊಂತೆವ್ವನದೆಂದು ಹೇಳುವ ಶಿಲಾ ಮೂರ್ತಿಯೊಂದು ಇದೆ. ಅವಳ ಗುಡಿಯ ದಕ್ಷಿಣ ದಿಕ್ಕಿನಲ್ಲಿ ಶಾವರಸಿದ್ಧನ ಮೂರ್ತಿಯಿರುವ ಇನ್ನೊಂದು ಪುಟ್ಟ ಗುಡಿ ಇದೆ. ಇಲ್ಲಿರುವ ಶಾವರಸಿದ್ಧನಲ್ಲಿ ಕೊಂತೆವ್ವನಿಗಿರುವ ಗೌರವ ಇದರ ಹಿನ್ನೆಲೆಯನ್ನು ಶೋಧಿಸಿದರೆ ಅವಳ ಮಗ(ಶೀಲಸಿದ್ಧ)ನ ಹೆಸರಿನಲ್ಲಿ ನಡೆಯುವ ಹಬ್ಬದ ಸಂದರ್ಭದ ಮುತ್ತೈದೆಯ ಪೂಜೆಯ ಹಿಂದಿರುವ ಕಾರಣ ತಿಳಿಯಬಹುದು.

೪.೨.೩ ಕುಂಭ ಕೂಡಿಸುವುದು

ಈ ವಿಧಿಯನ್ನು ಒಡೆಯರು ಇಲ್ಲವೆ ಹಿರಕೂರ ಅವರು ಹರಕೆಯ ರೂಪದಲ್ಲಿ ತೀರಿಸುತ್ತಾರೆ. ಒಡೆಯರ ಮನೆಯಲ್ಲಾಗಲಿ, ಹಿರಕೂರ ಅವರ ಮನೆಯಲ್ಲಾಗಲಿ ಏನೇ ಕಾರಣವಿದ್ದರೂ ಕುಂಭ ಕೂಡ್ರಿಸುವ ಆಚರಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಇದನ್ನು ವಿಶೇಷವಾಗಿ ಹತ್ತೂರಿನ ಬನಸಿದ್ಧನ ಒಡೆಯರು ಹಾಗೂ

ಹಿರಕೂರ ಅವರು ಮಾಡುತ್ತಾರೆ. ಹತ್ತೂರಿನ ಸಮೀಪದಲ್ಲಿ ಕಟಕನಹಳ್ಳಿ ಎಂಬ ಗ್ರಾಮವಿದೆ. ಆ ಗ್ರಾಮದಲ್ಲಿ ಕಟ್ಟೆವ್ವ ಎಂಬ ದೇವತೆಯಿದ್ದಾಳೆ. ಅವಳ ಹೆಸರಿನಲ್ಲಿ ಈ ಆಚರಣೆ ನಡೆಯುತ್ತದೆ. ಕಾರಣ ಮಾಡುವವರ ಮನೆಯಲ್ಲಿ ಜೋಳದ ಕಿಚಡಿಯನ್ನು ತಯಾರಿಸುತ್ತಾರೆ. ಕಿಚಡಿ ಇನ್ನೂ ಸ್ವಲ್ಪ ಬಿಸಿ ಬಿಸಿ ಇರುವಾಗಲೇ ಅದನ್ನು ಕಲಿಸಿ ಕಿಚಡಿಗೆ ಜಿಗಟು ಬರುವಂತೆ ಮಾಡುತ್ತಾರೆ. ಈ ಜಿಗುಟಾದ ಕಿಚಡಿಯಿಂದ ಕುಂಭ ತಯಾರಿಸುವ ಮುನ್ನ ಕುಂಭ ಕೂಡಿಸಬೇಕಾದ ಜಾಗೆಯಲ್ಲಿ ಕಂಬಳಿ ಹಾಸುತ್ತಾರೆ. ಅದರ ಮೇಲೆ ಒಂದು ಖಣ ಇಡುತ್ತಾರೆ. ಖಣದ ಮೇಲೆ ಸಾಸಿ ಹೊಯ್ಯುತ್ತಾರೆ. ಅದರ ಮೇಲೆ ಗೋಪುರಾಕಾರದ ಕಿಚಡಿಯ ಕುಂಭವನ್ನು ತಯಾರಿಸಿ ಇಡುತ್ತಾರೆ. ಕುಂಭಕ್ಕೆ ಕಣ್ಣು, ಮೂಗು ಬರುವಂತೆ ತೀಡುತ್ತಾರೆ. ಅದಾದ ನಂತರ ಕುಂಭದ ಸುತ್ತಲೂ ರಂಗ ಹೊಯ್ಯುತ್ತಾರೆ. ಸ್ತ್ರೀ ರೂಪದ ಕುಂಭಕ್ಕೆ ಪೂಜೆ ಸಲ್ಲಿಸುತ್ತಾರೆ. ಕುಂಭದ ನೆತ್ತಿಯ ಮೇಲೆ ಕಣಕದ ಆರತಿ ಇಡುತ್ತಾರೆ. ಪೂಜೆ ಮುಗಿದ ನಂತರ ಒಂದು ನೂರು ಜನ ಮುತ್ತೈದೆಯರಿಗೆ ಊಟಕ್ಕೆ ಬಡಿಸುತ್ತಾರೆ. ಈ ಹಬ್ಬಕ್ಕೆ ಕಡ್ಡಾಯವಾಗಿ ಹೋಳಿಗೆಯನ್ನು ತಯಾರಿಸುತ್ತಾರೆ. ಪ್ರತಿಯೊಬ್ಬ ಮುತ್ತೈದೆಯ ಎಡೆಯಲ್ಲಿ ಐದೈದು ಹೋಳಿಗೆಗಳನ್ನು ಬಡಿಸುತ್ತಾರೆ. ಅದರ ನಂತರ ಮನೆಯ ಹೆಣ್ಣು ಮಕ್ಕಳು ಬಿಳಿಸೀರೆಯನ್ನು ಉಟ್ಟುಕೊಂಡು ಪಡಿ ಬೇಡಲು ಹತ್ತೆಂಟು ಮನೆಗಳಿಗೆ ಹೋಗಿ ಬರುತ್ತಾರೆ. ಪಡಿಯನ್ನು ಹಾಕಿಸಿಕೊಳ್ಳಲು ಅವರು ಕೈಯಲ್ಲಿ ಮೊರವನ್ನು ಹಿಡಿದುಕೊಂಡಿರುತ್ತಾರೆ. ಊರ ಮುತ್ತೈದೆಯರು ಮೊರದಲ್ಲಿ ಪಡಿಯನ್ನು ಇಡುತ್ತಾರೆ.

ಇಡೀ ಕಾರ್ಯಕ್ರಮ ಸಂಜೆಯ ಸಮಯಕ್ಕೆ ಪ್ರಾರಂಭವಾಗುತ್ತದೆ. ಕಾರ್ಯಕ್ರಮ ಮುಗಿಯುವ ವೇಳೆಗೆ ನಸುಕಿನ ಮುರ್ನಾಲ್ಕು ಗಂಟೆಯಾಗಿರುತ್ತದೆ. ಕಾರ್ಯಕ್ರಮ ಮುಗಿದ ನಂತರ ಕುಂಭವನ್ನು ಹರಕೆ ತೀರಿಸುವ ಒಡೆಯರ ಇಲ್ಲವೇ ಹಿರಕೂರ ಅವರ ಮನೆಯಲ್ಲಿ ಐಕ್ಯ ಮಾಡುತ್ತಾರೆ. ಮನೆಯಲ್ಲಿ ಐಕ್ಯ ಮಾಡಲು ತಕ್ಕ ಜಾಗ ಇರದಿದ್ದರೆ ಸಮೀಪದ ಬಾವಿಯಲ್ಲಿ ಐಕ್ಯ ಮಾಡುತ್ತಾರೆ.

ಇಡೀ ಆಚರಣೆಯ ಕೇಂದ್ರದಲ್ಲಿ ಮಹಿಳೆಯರೇ ಇರುವುದು ಇಲ್ಲಿನ ವಿಶೇಷ. ಆರಾಧನೆಗೊಳ್ಳುವ ದೇವತೆ ಕಟ್ಟೆವ್ವ. ಆಚರಣೆಯಲ್ಲಿ ಪ್ರಸಾದ ಪಡೆಯುವವರು ಮಹಿಳೆಯರೇ ಹಾಗೂ ಪ್ರತಿಯಾಗಿ ಪಡಿ ಪಡೆಯುವವರೂ ಮಹಿಳೆಯರೇ. ಪುರುಷ ಕೇಂದ್ರಿತ ಒಡೆಯರ ಆಚರಣೆಗಳಲ್ಲಿ ಇದೊಂದು ಅಪರೂಪದ ಆಚರಣೆಯೆಂದೇ ಹೇಳಬೇಕು.[೨೬]

೪.೨.೪ ಕೌಲು ಕಟ್ಟುವುದು

ಹೇಳಿಕೆ ಮಾಡುವುದು ಸೂಚ ಹೇಳುವುದು ಇವು ಕುರುಬ ಸಂಪ್ರದಾಯದ ಪೂಜಾರಿಗಳಲ್ಲಿ/ಮಾರಾಯರಲ್ಲಿ ಸಾಮಾನ್ಯ. ಇವು ಸಮುಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನಡೆಯುವಂತಹ ಆಚರಣೆಗಳು. ಆದರೆ ಇಲ್ಲಿ ವ್ಯಷ್ಟಿನೆಲೆಯಲ್ಲಿ ಆಚರಣೆಗಳೂ ಇವೆ. ಅವುಗಳಲ್ಲಿ ಕೌಲು ಕಟ್ಟುವುದು, ಕೌಲು ಕೇಳುವುದು ಅಥವಾ ಪೂಜೆ ಕಟ್ಟುವುದು ಎನ್ನುವ ಆಚರಣೆ ಪ್ರಮುಖವಾದದ್ದು. ಕೌಲು ಎಂದರೆ ಕರಾರು, ಒಪ್ಪಂದ ಎಂಬ ಅರ್ಥವಿದೆ. ಕೌಲು>ಕವಲು ಎಂದರೆ ಆಸರೆ, ಆಧಾರ ಎಂಬ ಅರ್ಥವೂ ಇದೆ. ಇದೊಂದು ರೀತಿಯ ದೈವ

ಹಾಗೂ ಭಕ್ತರ ನಡುವೆ ಮೌನವಾಗಿ ನಡೆಯುವ ಒಪ್ಪಂದವೂ ಹೌದು. ದೈವ ನೀಡುವ ಸೂಚನೆಯನ್ನು ತಮ್ಮ ಮನಸ್ಸಿಗೆ ಆಧಾರವೊದಗಿಸಿಕೊಳ್ಳುವ ಕ್ರಿಯೆಯೂ ಹೌದು. ಭಕ್ತರು ಹಾಗೂ ದೇವರ ನಡುವೆ ಪೂಜಾರಿಯ ಮಧ್ಯಸ್ಥಿಕೆ ಬಯಸದೇ ನೇರ ಅನುಸಂಧಾನದ ಬಯಕೆ ಇಲ್ಲಿದೆ. ಅಂಥದ್ದೊಂದು ಬಯಕೆಯನ್ನು ವ್ಯಕ್ತಪಡಿಸುವ ತ್ರಿಪದಿಯೊಂದು ಹೀಗಿದೆ:

"ದೇವರಿಗಿ ಹೊಂಟೀನಿ ದಾರಿ ಬಿಡ ಪೂಜಾರಿ,
ದೇವರಗಿ ನನಗೆ ಇಸವಾಸ | ಅಮಸಿದ್ಧ
ಅಮಸಿದ್ಧಗ ನನಗ ಒಳಮಾತ"

ಅಮೋಘಸಿದ್ಧ ಪರಂಪರೆಯ ಬಹುಪಾಲು ಸಿದ್ಧರ ದೈವಗಳಲ್ಲಿ ಭಕ್ತರು ಅಪಾರ ಪ್ರಮಾಣದ ಭಕ್ತಿಯನ್ನು ಹೊಂದಿದ್ದಾರೆ. ಹಾಗೂ ಆ ದೇವರೊಂದಿಗೆ ಅವರು ತಮ್ಮ ಕಷ್ಟದ ದಿನಗಳಲ್ಲಿ ಮೌನದಲ್ಲಿ ಮಾನಸಿಕ ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. ಇಲ್ಲವಾದರೆ ತಮ್ಮ ಆಸೆಗಳು, ನಿರೀಕ್ಷೆಗಳು ಫಲಿಸುವವೋ ಇಲ್ಲವೋ ಎನ್ನುವುದರ ಕುರಿತು ಅವರು ದೈವಗಳಿಂದ ಆಧಾರ ಪಡೆಯುತ್ತಾರೆ. ಭಕ್ತರಾದವರು ತಮ್ಮ ಮನಸ್ಸಿನಲ್ಲಿ ಏನೋ ಒಂದು ಸಂಕಲ್ಪ ಮಾಡಿಕೊಂಡು ದೇವರ ಗುಡಿಗೆ ಬರುತ್ತಾರೆ. ಗುಡಿಯ ಮಾರಾಯರಿಗೆ/ಒಡೆಯರಿಗೆ ಕೌಲು ಕಟ್ಟಲು ಕೇಳಿಕೊಳ್ಳುತ್ತಾರೆ. ಕೌಲು ಕಟ್ಟುವಲ್ಲಿ ಬೇರೆ ಬೇರೆ ವಿಧಗಳಿವೆ. ದೇವರ ಮೂರ್ತಿಯ ಎಡ ಹಾಗೂ ಬಲ ಬದಿಯ ಮೇಲೆಲ್ಲಾ ಹೂಗಳಿಂದ ಸಿಂಗರಿಸಲಾಗುತ್ತದೆ. ಭಕ್ತರು ಆಗ ಆ ಹೂವುಗಳನ್ನು ನೋಡುತ್ತಾ ಕುಳಿತುಕೊಳ್ಳುತ್ತಾರೆ. ಬಲಕಿನ ಕಡೆಯ ಹೂವು ಕೆಳಗೆ ಬಿದ್ದರೆ ಭಕ್ತರು ತಮ್ಮ ಸಂಕಲ್ಪ ಈಡೇರುತ್ತದೆ ಎಂದು ನಂಬುತ್ತಾರೆ. ಎಡಭಾಗದ ಹೂವು ಬಿದ್ದರೆ ಸಂಕಲ್ಪ ಈಡೇರುವುದಿಲ್ಲ ಎಂದು ನಂಬುತ್ತಾರೆ. ಇದೊಂದು ವಿಧವಾದರೆ ಇನ್ನೊಂದು ವಿಧದಲ್ಲಿ ದೇವರ ಗದ್ದುಗೆಯ ಮೇಲೆ ಪತ್ರಿಯ ಹೂವುಗಳನ್ನು ಗೋಪುರಾಕಾರದಲ್ಲಿ ಏರಿಸುತ್ತಾರೆ. ಪತ್ರಿಯ ಹೂವಿನ ರಾಶಿಯ ಮೇಲೆ ಒಂದು ಎಕ್ಕಿಯ ಹೂವನ್ನು ಇಡುತ್ತಾರೆ. ಒಳ್ಳೆಯದಾಗುವುದಿದ್ದರೆ ಹೂವು ಗೋಪುರದಿಂದ ಬಲಭಾಗದ ಕಡೆಗೆ ಬೀಳುತ್ತದೆ. ಈ ಪರಂಪರೆಯಲ್ಲಿ ಕವಲು>ಕೌಲು ಎಷ್ಟು ಪ್ರಮುಖವೆಂದರೆ ಅಮೋಘಸಿದ್ಧನ ನಾಲ್ಕನೆಯ ಧರ್ಮದ ಮಗನಾದ ಕಡಿವುಟ್ಟ ಕನ್ಯಮುತ್ಯಾನ ಮಗನೊಬ್ಬನ ಹೆಸರು ಕರಿಯೋಗಿಸಿದ್ಧ. ಈ ಕರಿಯೋಗಿಸಿದ್ಧ ನೆಲಸಿದ್ದು ಅಥಣಿ ತಾಲೂಕಿನ ಒಂದು ಗುಡ್ಡ ಪ್ರದೇಶದಲ್ಲಿ. ಆತನ ಕೌಲು ಹೇಳುವ ಸಾಮರ್ಥ್ಯದ ಕಾರಣವಾಗಿಯೇ ಆ ಗುಡ್ಡಕ್ಕೆ ಕೌಲುಗುಡ್ಡ>ಕವಲುಗುಡ್ಡ ಎಂದು ಕರೆದಿರುವ ಸಾಧ್ಯತೆಯಿದೆ. ಅದೇ ರೀತಿಯಾಗಿ ಅಮೋಘಸಿದ್ಧನ ಪುಣ್ಯದ ಮಕ್ಕಳಲ್ಲಿ ಒಬ್ಬನಾದ ಮಲಕಾರಿಸಿದ್ಧ ಗೋಕಾಕ ನಾಡಿನಲ್ಲಿ ಬಂದು ನೆಲೆಸಿದ ವಿಷಯ ಈ ಹಿಂದೆಯೇ ಗಮನಿಸಿದ್ದೇವೆ. ಈತನು ಸಂಚರಿಸಿದ ಊರುಗಳಲ್ಲಿ ಕೆಮ್ಮನಕೋಲು ಎಂಬ ಗ್ರಾಮವೊಂದಿದೆ. ಕೆಮ್ಮನ>ಕೆಮ್ಮಣ್ಣು ಕೋಲು>ಕೌಲು ಎಂದು ಬಿಡಿಸಿಕೊಂಡರೆ ಕರಿಯೋಗ ಸಿದ್ಧನದು

ಕೌಲು ಹೇಳಲು ಗುಡ್ಡ ಪ್ರದೇಶವಿದ್ದರೆ, ಮಲಕಾರಿಸಿದ್ಧನ ಹೆಸರಿನಲ್ಲಿ ಕೌಲು ಹೇಳುವ ಕೆಮ್ಮಣ್ಣು ಪ್ರದೇಶವಿದೆ.[೨೭]

ಕುರುಬರ ಆರಾಧ್ಯ ದೈವಗಳಾದ ಬೀರಪ್ಪ, ಮಾಳಿಂಗರಾಯ, ಮೈಲಾರಲಿಂಗ ಇವರ ಆಚರಣೆಗಳಿಗೆ ಹೋಲಿಸಿದರೆ, ಅಮೋಘಸಿದ್ಧನ ಪರಂಪರೆಯ ಆಚರಣೆಗಳು ಸೌಮ್ಯವೆಂದೇ ಹೇಳಬೇಕು. ಅಲಗು ಆಡುವ, ಗುಂಡು ಹೊಡೆದುಕೊಳ್ಳುವ, ಬಿಲ್ಲೇರಿ ಕೆಳಗೆ ಬೀಳುವ ಉಗ್ರ ಆಚರಣೆಗಳು ಇಲ್ಲಿ ಇಲ್ಲ. ಗೋಕಾಕ ತಾಲೂಕಿನ ಉದಗಟ್ಟಿ ಎಂಬ ಗ್ರಾಮದಲ್ಲಿ ಅಮೋಘಸಿದ್ಧನ ಗುಡಿಯಿದೆ. ಇಲ್ಲಿ ಅಮೋಘಸಿದ್ಧ ನೆಲೆಸಿರುವ ಜಾಗವನ್ನು ನೋಡಿದರೆ ಮುಮ್ಮಟಗುಡ್ಡದ ನೆನಪಾಗುತ್ತದೆ. ಇಲ್ಲಿಯೂ ಕೂಡಾ ಎತ್ತರವಾದ ಮಣ್ಣಿನ ದಿನ್ನೆಯ ಮೇಲೆ ಅಮೋಘಸಿದ್ಧ ನೆಲೆಸಿದ್ದಾನೆ. ಶಿವರಾತ್ರಿಯಾದ ಎರಡು ಮೂರನೆಯ ದಿವಸ ಜಾತ್ರೆ ನಡೆಯುತ್ತದೆ. ಜಾತ್ರೆಯ ಸಮಯದಲ್ಲಿ ಹಾಲು ಹುಗ್ಗಿಯ ಪ್ರಸಾದವಿರುತ್ತದೆ. ಕುದಿಯುವ ಹುಗ್ಗಿಯಲ್ಲಿ ದೇವರಸಿಯರು ಐದು ಸಾರಿ ಕೈಹಾಕಿ ನೈವೇದ್ಯವನ್ನು ದೇವರಿಗೆ ಹಿಡಿಯುವ ಪದ್ಧತಿಯಿದೆ. ಅದೂ ಅಲ್ಲದೇ ಅವರು ಸುಡುವ ಕೆಂಡಗಳನ್ನೂ ಮೈಮೇಲೆ ಸುರವಿಕೊಳ್ಳುತ್ತಾರೆ. ತೆರೆವಾಡದಲ್ಲಿಯೂ ಉಗ್ರ ಆಚರಣೆ ಇದ್ದುದನ್ನು ಹಿಂದೆ ಗಮನಿಸಿದ್ದೇವೆ. ಇಲ್ಲಿನ ಜಾತ್ರೆಯ ಸಂದರ್ಭದಲ್ಲಿ ಈರಗಾರರು ಅಲಗು ಆಡುವ ಪದ್ಧತಿಯಿದೆ.

೪.೨.೫ ಕಟ್ಟೆ ಮುಟ್ಟುವುದು

ಭೀವರಗಿಯಲ್ಲಿ 'ಧರ್ಮರ ಕಟ್ಟೆ' ಎಂಬ ಹೆಸರಿನ ಕಟ್ಟೆಯಿದೆ. ಈ ಕಟ್ಟೆಗೆ ಈ ಭಾಗದ ಜನರು ನ್ಯಾಯ-ನಿಬದ್ದಿಗಳನ್ನು ಬಗೆಹರಿಸುವ ತಾಕತ್ತಿದೆ ಎಂದು ನಂಬಿದ್ದಾರೆ. ಕಟ್ಟೆ ನಿರ್ಮಾಣದ ಸುತ್ತಲೂ ಒಂದು ನಿಗೂಢವಾದ ಕಥನವನ್ನು ಹೆಣೆದುಕೊಂಡಿದ್ದಾರೆ. 'ಕಟ್ಟಿಸಿದವರನ್ನು ಮುಟ್ಟಿಸಿಕೊಡದ ಧರ್ಮದ ಕಟ್ಟೆ' ಇದು ಎಂಬ ಖ್ಯಾತಿ ಇದಕ್ಕಿದೆ. ತಂದೆಯಾದ ಅಮೋಘಸಿದ್ಧನಿಂದ ಹೋಮದ ಕಂಬಳಿ, ನೇಮದ ಬೆತ್ತ ಪ್ರಸಾದದ ಗಂಟುಗಳನ್ನು ನಿರೀಕ್ಷಿಸಿದ್ದ ನಾಲ್ವರು ಧರ್ಮರು, ಅವೆಲ್ಲಾ ಪುಣ್ಯದ ಮಕ್ಕಳ ಪಾಲಾದುದನ್ನು ನೋಡಿ ನಿರಾಸೆಗೊಳ್ಳುತ್ತಾರೆ. ಮುಖ ಒಣಗಿಸಿಕೊಂಡು ತಂದೆಯ ಎದುರಿಗೆ ನಾಲ್ವರು ಧರ್ಮರು ಹೋಗಿ ಮುಂದೆ ನಮ್ಮ ಗತಿ ಏನು ಎಂಬಂತೆ ಕುಳಿತುಕೊಳ್ಳುತ್ತಾರೆ. ಆಗ ಅಮೋಘಸಿದ್ಧ ನಿರಾಸೆಗೊಳ್ಳುವ ಅವಶ್ಯಕತೆಯಿಲ್ಲ, ನೀವು ನಿಮ್ಮ ನಿಮ್ಮ ಕುದರೆ ಏರಿ ದೇಶ ಸಂಚಾರಕ್ಕೆ ಹೊರಡಿರಿ. ನಿಮ್ಮ ಕುದರೆಗಳು ಯಾವ ಜಾಗೆಯಲ್ಲಿ ಹೋಗಿ ಪೂರ್ವದಿಕ್ಕಿಗೆ ಮುಖಮಾಡಿ ಮೊಳಕಾಲೂರಿ ನಿಲ್ಲುತ್ತವೆಯೋ ಎಲ್ಲಿ ಅವುಗಳ ಬಾಯಿಂದ ಜೊಲ್ಲು ಸುರಿಯುತ್ತದೆಯೋ ಅಲ್ಲಿಯೇ ನೀವು ನೆಲೆಸಿರಿ ಹಾಗೂ ನಿಮ್ಮ ಸಿದ್ಧಾಟಿಕೆಯನ್ನು ಮುಂದುವರೆಸಿರಿ ಎಂದು ಹೇಳಿ ಕಳುಹಿಸುತ್ತಾನೆ. ಹೀಗೆ ಹೊರಟ ಅವರ ಕುದರೆಗಳು 'ಮೈಲಾರಹಟ್ಟಿ' ಎಂಬ ಗ್ರಾಮಕ್ಕೆ ಬಂದು ನಿಲ್ಲುತ್ತದೆ. ನಾಲ್ವರು ಅಲ್ಲಿಯೇ ನೆಲೆನಿಂತು ಮೈಲಾರ ಹಟ್ಟಿಯನ್ನು ಭೀವರಗಿಯಾಗಿ ಪರಿವರ್ತಿಸಿದರು. ಆ ಊರಿನ ಗೌಡರಿಂದ ಅಪಾರವಾದ ಭೂ ಸಂಪತ್ತನ್ನು ಕಾಣಿಕೆಯಾಗಿ ಪಡೆದರು. ಊರಿನಲ್ಲಿ

ನಿಂತ ಮೇಲೆ ಅವರು ಒಂದು ಕಟ್ಟೆಯನ್ನು ಕಟ್ಟಿಸುತ್ತಾರೆ. ಅದು ಸಿದ್ಧಾಟಿಕೆಯ ಶಕ್ತಿಯನ್ನು ತುಂಬಿಕೊಂಡ ಕಟ್ಟೆಯಾದುದರಿಂದ ಅದರ ಒಡಲೊಳಗಿಂದ ಸದಾ ಬೆಂಕಿ ತುಂಬಿಕೊಂಡ ಹಾಗೆ ತೋರಿ ಅದು ಯಾರನ್ನೂ ತನ್ನ ಸಮೀಪ ಬರಗೊಡಲಿಲ್ಲ. ತಂದೆ ಅಮೋಘಸಿದ್ಧ ಹಾಗೂ ಗುರು ಗೌರಿ ಸೋಮಲಿಂಗ ಇಬ್ಬರೂ ಆಶೀರ್ವದಿಸಿದ ನಂತರ ಅದು ಶಾಂತವಾಗುತ್ತದೆ. ಅಂಥ ಭೀಕರವಾದ ಕಟ್ಟೆಯ ಮೇಲೆ ಮೊದಲು ಏರುವ ಧೈರ್ಯ ಮಾಡುವವನೆಂದರೆ ಆಚಾರ ಗೌಡ ಸೋಮಣ್ಣ ಮುತ್ಯಾ.

ಇಂಥ ಕಟ್ಟೆ ಇಂದಿಗೂ ಜನರಲ್ಲಿ ನ್ಯಾಯ ಪ್ರಜ್ಞೆ ಮೂಡಿಸುವಲ್ಲಿ ನಿರತವಾಗಿದೆ. ಸುತ್ತಮುತ್ತಲಿನ ಭಾಗದಲ್ಲಿ ಏನಾದರೂ ನ್ಯಾಯ-ನಿಬದ್ಧಿಗಳಿದ್ದರೆ ಅವರು ಭೀವರಿಗೆಗೆ ಬಂದು ಅದನ್ನು ಬಗೆಹರಿಸಿಕೊಂಡು ಹೋಗುತ್ತಾರೆ. ವ್ಯಾಜ್ಯದಲ್ಲಿ ಪಾಲುದಾರರಾದವರು ಕಟ್ಟೆಯ ಎದುರಿಗೆ ಬಂದು ನಿಂತು ಕಟ್ಟೆಯನ್ನು ಮುಟ್ಟಿ ಹೀಗೆ ಹೀಗೆ ಎಂದು ಹೇಳಬೇಕು. ವಾದಿ ಪ್ರತಿವಾದಿಗಳು ಇಬ್ಬರೂ ತಮ್ಮದನ್ನು ಪ್ರಸ್ತುತಪಡಿಸಬೇಕು. ಯಾರಾದರೂ ಸುಳ್ಳುವಾದ ಮಂಡಿಸಿದರೆ ಅವರು ಕೆಲವೇ ದಿವಸಗಳಲ್ಲಿ ಸರ್ವನಾಶವಾಗುತ್ತಾರೆಂಬ ನಂಬಿಕೆ ಇರುವುದರಿಂದ ಕಟ್ಟೆಯನ್ನು ಮುಟ್ಟಿದವರು ಸತ್ಯವನ್ನಲ್ಲದೇ ಬೇರೇನನ್ನೂ ಹೇಳುವ ಧೈರ್ಯ ಮಾಡುವುದಿಲ್ಲ. ಹೀಗೆ ಅಲ್ಪ ವೆಚ್ಚದಲ್ಲಿ ದೊಡ್ಡದೊಡ್ಡ ವ್ಯಾಜ್ಯಗಳನ್ನು ಬಗೆಹರಿಸಿಕೊಂಡ ಉದಾಹರಣೆಗಳಿವೆ.[೨೮]

೪.೨.೬ ನಿವಾಳಿಕೆ-ಚಮ್ಮಾಳಿಗೆ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಕೆರೂರ ಗ್ರಾಮದಲ್ಲಿ ಆರ್ಯಾನಸಿದ್ಧ ಎಂಬ ದೇವರ ಜಾತ್ರೆಯಲ್ಲಿ ನಡೆಯುವ ಆಚರಣೆಗಳಿವು. ಆರ್ಯಾನಸಿದ್ಧನ ಜಾತ್ರೆ ಶಿವರಾತ್ರಿಯಾದ ಐದು ದಿವಸಗಳ ನಂತರ ಪ್ರಾರಂಭವಾಗುತ್ತದೆ. ಐದು ದಿವಸಗಳವರೆಗೆ ಜಾತ್ರೆ ನಡೆಯುತ್ತದೆ. ಕರಿಕಟ್ಟುವುದರೊಂದಿಗೆ ಜಾತ್ರೆ ಪ್ರಾರಂಭವಾದರೆ ನಿವಾಳಿಕೆಯೊಂದಿಗೆ ಜಾತ್ರೆ ಮುಕ್ತಾಯವಾಗುತ್ತದೆ. ಕರಿ ಕಟ್ಟುವುದು ಎಂದರೆ ಜಾತ್ರೆ ಪ್ರಾರಂಭವಾದ ದಿವಸದಿಂದ ಜಾತ್ರೆ ಮುಗಿಯುವವರೆಗೆ ಊರಿನಿಂದ ಯಾರೂ ಹೊರಗೆ ಹೋಗುವಂತಿಲ್ಲ. ಇದೊಂದು ರೀತಿಯ ನಿಷೇಧ. ಕರಿ ಕಟ್ಟುವ ದಿವಸ ಈ ಜಾತ್ರೆಯಲ್ಲಿ ಒಂದು ಮಹತ್ವದ ಆಚರಣೆ ನಡೆಯುತ್ತದೆ. ಈ ಊರಿನ ಮಾದಿಗರು ಮಾಡುವ ಸೇವೆ ಇದಾಗಿದೆ. ಈ ಸೇವೆ ಮಾಡುವ ಮಾದಿಗ ಮನೆತನದವರು ಜಾತ್ರೆ ಇನ್ನೂ ಹತ್ತು-ಹದಿನೈದು ದಿವಸ ಇದೇ ಅನ್ನುವಾಗಲೇ ತುಂಬಾ ಶ್ರದ್ಧಾಭಕ್ತಿಯಿಂದ ಆರ್ಯಾನಸಿದ್ಧನಿಗೆ ಚಮ್ಮಾವುಗೆ ತಯಾರಿಸಲು ಪ್ರಾರಂಭಿಸುತ್ತಾರೆ. ಚಮ್ಮಾವುಗೆ ತಯಾರಿಸುವ ಸಂದರ್ಭದಲ್ಲಿ ಭಕ್ತಿಭಾವ ಸದಾ ಮೂಡಿರಲಿ ಎನ್ನುವ ಉದ್ದೇಶದಿಂದ ಡೊಳ್ಳಿನ ವಾಲಗದವರನ್ನು ಕರೆಯಿಸಿರುತ್ತಾರೆ. ವಾಲದವರಿಗೆ ನಿತ್ಯ ಅನ್ನ ಸಂತರ್ಪಣೆ ಮಾಡಿಸುತ್ತಾರೆ. ಕರಿಕಟ್ಟಿಸುವ ಹಿಂದಿನ ದಿವಸದ ಹೊತ್ತಿಗೆ ಚಮ್ಮಾವುಗೆ ತಯಾರಿಕೆ ಪೂರ್ಣಗೊಂಡಿರುತ್ತದೆ. ಕರಿಕಟ್ಟಿಸುವ ದಿವಸ ಮಾದಿಗರ ಓಣಿಯಿಂದ ಊರಲ್ಲಿರುವ ಆರ್ಯಾನಸಿದ್ಧನ ಗುಡಿಯವರೆಗೆ ಚಮ್ಮಾಳಿಗೆಯನ್ನು ಮೆರವಣಿಗೆಯಲ್ಲಿ ಹೊತ್ತು ತರುತ್ತಾರೆ. ಮೆರವಣಿಗೆಯಲ್ಲಿ ತಂದ

[illegible]

ಅವುಗಳನ್ನು ಆರ್ಯಾನಸಿದ್ಧನ ಗುಡಿಯ ಒಳಗಿನ ಕಂಬಕ್ಕೆ ನೇತು ಬಿಡುತ್ತಾರೆ. ಹೀಗೆ ಗುಡಿ ಸೇರಿದ ಈ ಚಮ್ಮಾವುಗೆಗಳು ಐದು ದಿವಸಗಳವರೆಗೆ ಅಲ್ಲಿಯೇ ಇರುತ್ತವೆ.

ಗುಡಿಯ ಪೂಜಾರಿಗೆ ಐದನೆಯ ದಿವಸ ದೇವರು ಮೈಮೇಲೆ ಬರುತ್ತಾನೆ. ದೇವರು ಮೈ ಮೇಲೆ ಬರುತ್ತಿದ್ದಂತೆ ಪೂಜಾರಿ ಅರೆಪ್ರಜ್ಞಾವಸ್ಥೆಯಲ್ಲಿ ಮುರ್ನಾಲ್ಕು ತಾಸು ಬಿದ್ದುಕೊಂಡಿರುತ್ತಾನೆ. ಪ್ರಜ್ಞೆ ತಿಳಿದು ಎಚ್ಚೆತ್ತ ಪೂಜಾರಿ ಕಂಬಕ್ಕೆ ಕಟ್ಟಿದ ಚೆಮ್ಮಾವುಗೆಗಳನ್ನು ಧರಿಸುತ್ತಾನೆ. ಹೀಗೆ ಪ್ರಜ್ಞೆತಪ್ಪಿ ಎಚ್ಚರ ಗೊಳ್ಳುವ ಕ್ರಿಯೆಗೆ ನಿವಾಳಿಕೆ ಎಂದು ಕರೆಯುತ್ತಾರೆ. ಈ ಎರಡು ಆಚರಣೆಗಳಿಗೆ ಪೂರಕವಾದ ಪುರಾಣ ಕಥೆಯನ್ನು ಇಲ್ಲಿ ಹೇಳುತ್ತಾರೆ.

ನಿವಾಳಿಕೆಗೆ ಸಂಬಂಧಪಟ್ಟಂತೆ ಪುರಾಣ ಕಥೆ ಹೀಗಿದೆ : ಆರ್ಯಾನಸಿದ್ಧನ ತಾಯಿ ಅಮೋಘಸಿದ್ಧನ ಒಬ್ಬಳೇ ಮಗಳಾದ ರೆಬಕವ್ವ. ಅವಳ ಇನ್ನೊಂದು ಹೆಸರು ಜಿನ್ನವ್ವ. ಅವಳಿಗೆ ಅರಕೇರಿಯಲ್ಲಿನ ಆಸ್ತಿಯನ್ನು ಅಣ್ಣಂದಿರು ಬಿಟ್ಟಿರುತ್ತಾರೆ. ಆದರೆ ಕೆಲ ವರ್ಷಗಳ ನಂತರ ಅವಳಿಂದ ಅವರು ಆ ಆಸ್ತಿಯನ್ನು ಮರಳಿ ಪಡೆಯುತ್ತಾರೆ. ಆಗ ರೆಬಕವ್ವ ನನ್ನ ಗತಿ ಏನೆಂದು ತಂದೆ ಅಮ್ಮೋಘಸಿದ್ಧನಿಗೆ ಕೇಳುತ್ತಾಳೆ. ನೀನು ನಿನ್ನ ಗಂಡನಾದ 'ಹೊನ್ನಪ್ಪಗೌಡ/ಹೊನ್ನಚಾವರ ಮುತ್ಯಾನೊಂದಿಗೆ ಪಶ್ಚಿಮದಿಕ್ಕಿಗೆ ಹೋಗು ಎಂದು ಅಮ್ಮೋಘಸಿದ್ಧ ಆದೇಶಿಸುತ್ತಾನೆ. ಹೋಗುವಾಗ ಮಗಳಿಗೆ ಕೆಲವು ಕಿಲಾರಿಗಳನ್ನು ಕೊಡುತ್ತಾನೆ. ಕಿಲಾರಿಗಳನ್ನು ಕಾಯುತ್ತಾ ಗಂಡ-ಹೆಂಡರಿಬ್ಬರೇ ಕೆರಪನಹಳ್ಳಿ(ಈಗಿನ ಕೆರೂರ)ಯ ಕಡೆಗೆ ಬರುತ್ತಾರೆ. ರೆಬಕವ್ವಳಿಗೆ ಬಹಳ ವರ್ಷಗಳಾದರೂ ಮಕ್ಕಳಾಗಿರುವುದಿಲ್ಲ. ಕೆರಪನಹಳ್ಳಿಯ ಸಮೀಪದ ಕಲ್ಲೊಂಡಿಲಿಂಗದ ಆಶೀರ್ವಾದದಿಂದ ಅವಳಿಗೆ ಅವಳಿಜವಳಿ ಮಕ್ಕಳಾಗುತ್ತವೆ. ತಾಯಿ ರೆವಕವ್ವ/ಜಿನ್ನವ್ವ ಗರ್ಭಧರಿಸಿರುವ ಸಂದರ್ಭದಲ್ಲಿ ಪಟ್ಟಣಕಡೊಳದ ಇಟ್ರಾಯ ಹಾಗೂ ಅವನ ಗುರು ಮರಗುಂಡಿ ಮುರಸಿದ್ಧ ಇವಳಲ್ಲಿಗೆ ಬಂದು ಅವಳಿಗೆ ಹುಟ್ಟಲಿರುವ ಮೊದಲ ಕೂಸನ್ನು ತಮಗೆ ಕೊಡಬೇಕೆಂದು ವಚನ ತೆಗೆದುಕೊಂಡಿರುತ್ತಾರೆ. ಮಾತಿನಂತೆ ಮೊದಲ ಮಗನಾದ ಮಲಕಾರಿಸಿದ್ಧ/ಆರ್ಯಾನಸಿದ್ಧನನ್ನು ಅವಳು ಇಟ್ರಾಯನಿಗೆ ಕೊಡುತ್ತಾಳೆ. ಕಡೊಳಿಯಲ್ಲಿ ಇಟ್ರಾಯ ಕಟ್ಟಿಸುತ್ತಿದ್ದ ಗುಡಿಯ ಕೆಲಸದಲ್ಲಿ ಕನೇರಿ ಎಂಬ ರಾಕ್ಷಸಿಯ ಕಾಟದ ಕಾರಣದಿಂದ ತೊಂದರೆ ಉಂಟಾಗುತ್ತಿರುತ್ತದೆ. ಗೌಂಡಿಗಳು ಗುಡಿ ಕಟ್ಟಲೆಂದು ಕೈಯಲ್ಲಿ ಹಿಡಿದ ಕಲ್ಲು, ಮಣ್ಣು ಕೈಯಲ್ಲಿಯೇ ಮಾಯವಾಗವಂತೆ ಮಾಡುತ್ತಿರುತ್ತದೆ. ಅಲ್ಲದೆ ಹಗಲು ಕಟ್ಟಿದ ಗುಡಿಯನ್ನು ರಾತ್ರಿ ಹಾಗೂ ರಾತ್ರಿ ಕಟ್ಟಿದ ಗುಡಿಯನ್ನು ಹಗಲು ಹೊತ್ತು ಕನೇರಿ ನಾಶ ಮಾಡುತ್ತಿರುತ್ತದೆ. ಯಾಕೆ ಕಾಡುತ್ತಿ ಎಂದು ಕೇಳಿದರೆ ನನಗೆ ಜಡೆಕೂಸಿನ ಹಾರಬೇಕು ಎಂದು ಹೇಳಿರುತ್ತಾರೆ. ಅಂಥ ಕನೇರಿ ರಾಕ್ಷಸನಿಗೆ ಆರ್ಯಾನಸಿದ್ಧನನ್ನು ಹಾರ ಕೊಡಲು ಇಟ್ರಾಯ ತರುತ್ತಾನೆ. ಕನೇರಿ ಕೂಸನ್ನು ಹಾರತೆಗೆದುಕೊಳ್ಳಲು ಬರುತ್ತದೆ. ಪಾಯದಲ್ಲಿ ಆಡುತ್ತಾ ಮಲಗಿದ್ದ ಕೂಸನ್ನು ತಿನ್ನಲು ಕನೇರಿ ಬಂದಾಗ ಕೂಸು ತನ್ನ ಜಡೆಯಿಂದ ಕನೇರಿಯನ್ನು ಬಂಧಿಸಿ ಕೊಲ್ಹಾಪುರದ ಕೆರೆಯಲ್ಲಿ ಒಗೆಯುತ್ತದೆ ಹಾಗೂ ರಾಕ್ಷಸಿ ಬಂಧಿಸಿಟ್ಟಿದ್ದ ಸಾವಿರಾರು ಸಿದ್ಧರನ್ನು ಮುಕ್ತಗೊಳಿಸುತ್ತದೆ. ಹಾಗೂ

ಕನೇರಿಯನ್ನು ಸದಾ ವಶವರ್ತಿ ಮಾಡಿಕೊಳ್ಳುತ್ತದೆ. ತನ್ನ ಕೆಲಸ ಪೂರೈಸಿದ ಆರ್ಯಾನಸಿದ್ಧ ತಂದೆ-ತಾಯಿಯ ಬಳಿಗೆ ಹೋಗಲು ಹೊರಟು ನಿಲ್ಲುತ್ತಾನೆ. ಆಗ ಇಟ್ರಾಯ ತನ್ನ ಬಳಿಯಿದ್ದ ಎರಡು ಬಿರುದುಗಳಲ್ಲಿ ಅಲಗು ಆಡುವ ಬಿರುದನ್ನು ತನ್ನ ಬಳಿ ಉಳಿಸಿಕೊಂಡು ನಿವಾಳಿಕೆ ಬಿರುದನ್ನು ಆರ್ಯಾನಸಿದ್ಧನಿಗೆ ಕೊಟ್ಟು ಕಳಿಸುತ್ತಾನೆ. ಈ ಹಿನ್ನೆಲೆಯಲ್ಲಿ ನಿವಾಳಿಕೆ ಆಚರಣೆಯನ್ನು ಗಮನಿಸಬಹುದು.

ಕೂಸನ್ನು ಇಟ್ರಾಯ ಕಡೋಳಿಗೆ ಒಯ್ದು ನಂತರ ತಾಯಿಯಾದ ರೆಬಕವ್ವಳ ದುಃಖಕ್ಕೆ ಪಾರವೆ ಇರಲಿಲ್ಲ. ಬಹಳ ವರ್ಷಗಳ ನಂತರ ಕರ್ಲೋಂಡಿಯ ಲಿಂಗನ ಆಶೀರ್ವಾದದ ಫಲವಾಗಿ ಪಡೆದ ಮಗನನ್ನು ಕಳೆದುಕೊಳ್ಳುವಂತಾಯಿತಲ್ಲ ಎಂದು ಅವಳು ಕಣ್ಣೀರು ಹಾಕುತ್ತಾಳೆ. ಅದನ್ನು ನೆನಪಿಸುವಂತೆ ಇಂದಿಗೂ ಜಾತ್ರೆಯ ಸಮಯದಲ್ಲಿ ಊರ ಹೊರಗಿರುವ ಆರ್ಯಾನಸಿದ್ಧನ ಗುಡಿಯ ಹಿಂದಿನ ಭಾಗದಲ್ಲಿರುವ ಒಣಗಿದ ಕನೇರಿ ಭಾವಿಯಲ್ಲಿ ಇಂದಿಗೂ ಸೆಲೆ ಒಡೆಯುತ್ತದೆ ಎಂದು ಹೇಳುತ್ತಾರೆ.

ಚಮ್ಮಾಳಿಗೆ ಆಚರಣೆಗೆ ಪೂರಕವಾದ ಪುರಾಣ ಕಥೆಯೊಂದು ಹೀಗಿದೆ. ಆರ್ಯಾನಸಿದ್ಧ ಬೆಳೆದು ದೊಡ್ಡವನಾದ ನಂತರ ಕಿಲ್ಲಾರಿಗಳನ್ನು ಮೇಯಿಸುತ್ತಾ ಸುತ್ತಮುತ್ತಲಿನ ಭಾಗದಲ್ಲಿ ಸಂಚರಿಸುತ್ತಾನೆ. ಹೀಗೆ ಒಂದು ಸಲ ಕಿಲಾರಿಗಳನ್ನು ಮೇಯಿಸುತ್ತಾ ರಾಯಬಾಗ ತಾಲೂಕಿನ ಅಲಕನೂರ ಅಡವಿಗೆ ಬರುತ್ತಾನೆ. ಆ ಪ್ರದೇಶ ಕರಿಸಿದ್ಧನೆಂಬುವವನ ಸುಪರ್ದಿಯಲ್ಲಿರುತ್ತದೆ. ಅವನ ಒಡೆತನದ ಅಡವಿಯಲ್ಲಿ ಕಿಲಾರಿಗಳನ್ನು ಮೇಯಿಸಲು ಬಂದ ಆರ್ಯಾನಸಿದ್ಧನೊಂದಿಗೆ ಕದನ ನಡೆಯುತ್ತದೆ. ಕರಿಸಿದ್ಧ ತನ್ನ ಸೈನ್ಯಬಲದೊಂದಿಗೆ ಕಾದಾಡಲು ಬಂದರೆ ಆರ್ಯಾನಸಿದ್ಧ ತನ್ನ ಗೋವುಗಳ ಸಹಾಯದಿಂದ ಹೋರಾಡಲು ನಿಲ್ಲುತ್ತಾನೆ. ಕರಿಸಿದ್ಧನಿಗೆ ಆರ್ಯಾನಸಿದ್ಧನನ್ನು ಸೋಲಿಸಲು ಕಷ್ಟವಾಗುತ್ತದೆ. ಆರ್ಯಾನಸಿದ್ಧನ ಸಾವಿನ ರಹಸ್ಯ ಎಲ್ಲಿದೆ ಎಂದು ತಿಳಿದರೆ ಮಾತ್ರ ತನಗೆ ಗೆಲವು ಸಾಧ್ಯ ಎಂದು ಭಾವಿಸುತ್ತಾನೆ. ಆರ್ಯಾನಸಿದ್ಧನ ಬಳಿ ಒಂದು ಕೊಳಲು ಇರುತ್ತದೆ. ಆ ಕೊಳಲಿನಿಂದ ಸುಖದ ನಾದ ಹಾಗೂ ದುಃಖದ ನಾದ ಹೊರಡಿಸಲು ಸಾಧ್ಯವಿರುತ್ತದೆ. ಕೊಳಲನ್ನು ತುಟಿಗೆ ಅಡ್ಡವಾಗಿ ಹಿಡಿದು ಊದಿದರೆ ಸುಖದ ನಾದ ಹೊರಡುತ್ತಿರುತ್ತದೆ. ತುಟಿಗೆ ನೇರವಾಗಿ ಹಿಡಿದು ಊದಿದರೆ ದುಃಖದ ನಾದ ಹೊರಡುತ್ತಿರುತ್ತದೆ. ಸುಖದ ನಾದ ಕೇಳಿದರೆ ಇವನ ಕಿಲಾರಿಗಳು ನೆಮ್ಮದಿಯಿಂದ ಮೇಯುತ್ತಿದ್ದವು. ದುಃಖದ ನಾದ ಕೇಳಿದರೆ ತನ್ನ ಒಡೆಯನಿಗೆ ಏನೋ ತೊಂದರೆ ಬಂದಿದೆ ಎಂದು ಮೇಯುವುದನ್ನು ನಿಲ್ಲಿಸಿ, ಅವನ ರಕ್ಷಣೆಗೆ ಧಾವಿಸಿ ಬರುತ್ತಿದ್ದವು. ರಹಸ್ಯ ತಿಳಿದ ಕರಿಸಿದ್ಧ ಆರ್ಯಾನಸಿದ್ಧನ ತಾಯಿಯ ವೇಷ ಧರಿಸಿಕೊಂಡು ಕೊಳಲನ್ನು ಕದಿಯುತ್ತಾನೆ. ಮರುದಿನ ಆರ್ಯಾನಸಿದ್ಧನ ಮೇಲೆ ದಂಡೆತ್ತಿ ಬರುತ್ತಾನೆ. ಅವನ ಬಳಿ ಕೊಳಲು ಇರದ ಕಾರಣ ಕಷ್ಟ ಕಾಲದಲ್ಲಿ ಕಿಲಾರಿಗಳು ಅವನ ರಕ್ಷಣೆಗೆ ಬರದಂತಾಗುತ್ತದೆ. ಹೀಗಾಗಿ ಆರ್ಯಾನಸಿದ್ಧ ಜೀವ ಉಳಿಸಿಕೊಳ್ಳಲು ದೂರ ಓಡಿ ಹೋಗಿ ತಲೆಮರೆಸಿಕೊಳ್ಳುತ್ತಾನೆ. ಈ ಮೊದಲು ನಿತ್ಯವೂ ಆರ್ಯಾನಸಿದ್ಧ ಎಲ್ಲಿಯೇ ಇದ್ದರೂ ಕಿಲಾರಿಗಳ ಹಾಲನ್ನು ಹಿಂಡಿ ಕಪಲಿಯೊಂದರಲ್ಲಿ ತುಂಬಿ ಗೂಳಿಯೊಂದರ ಬೆನ್ನ ಮೇಲೆ ಹೇರಿ ತಾಯಿಗೆ ಕಳುಹಿಸುತ್ತಿದ್ದ. ನಿತ್ಯದಂತೆ ಗೂಳಿ ಬರದೇ ಇದ್ದಾಗ ಮಗನಿಗೆ ಏನೋ ಅಪಾಯವಾಗಿದೆ

[illegible]

ಎಂದು ಭಾವಿಸಿ ಮಗನನ್ನು ಶೋಧಿಸಲು ಹೊರಡುತ್ತಾಳೆ. ಹಾಗೇ ಜಿನ್ನವ್ವ/ರೆಬಕವ್ವ ಹೊರಟು ನಿಂತಾಗ ಅವಳ ಬೆಂಗಾವಲಿಗೆಂದು ಮಾದಿಗರ ಚೆನ್ನಯ್ಯ ಹೊರಡುತ್ತಾನೆ. ದಾರಿ ಮಧ್ಯದಲ್ಲಿ ಕಲ್ಲು-ಮುಳ್ಳುಗಳು ಕಾಲಿಗೆ ನಾಟಿ ಜಿನ್ನವ್ವ ತೊಂದರೆಗೀಡಾಗುತ್ತಾಳೆ. ಆಗ ಮಾದಿಗರ ಚೆನ್ನಯ್ಯ ತನ್ನ ತೊಡೆಯ ಚರ್ಮದಿಂದ ಅವಳಿಗೆ ಚಮ್ಮಾವುಗೆ ಮಾಡಿಕೊಡುತ್ತಾನೆ. ಇಂಥದೊಂದು ಘಟನೆಯ ಹಿನ್ನೆಲೆಯಲ್ಲಿ ಆರ್ಯಾನಸಿದ್ಧನ ಜಾತ್ರೆಯಲ್ಲಿ ಚಮ್ಮಾಳಿಗೆ ಆಚರಣೆ ನಡೆಯುತ್ತದೆ. ಹೀಗೆ ಹುಡುಕುತ್ತಾ ಹೊರಟಾಗ ಚೆನ್ನಯ್ಯ ಕೈಯ ದಿವಟಿಗೆಯ ಎಣ್ಣೆ ತೀರಿಹೋಗುತ್ತದೆ. ಅಲ್ಲಿಯೇ ಇದ್ದ ನದಿಯ ನೀರಿನಿಂದ ದೀವಿಟಿಗೆ ಉರಿಸಿದಳೆಂದು ಹೇಳಲಾಗುತ್ತದೆ. ಅದರ ನೆನಪಿಗಾಗಿ ಇಂದಿಗೂ ಜಾತ್ರೆಯ ಸಂದರ್ಭದಲ್ಲಿ ಆರ್ಯಾನಸಿದ್ಧನ ಪಾಲಕಿ ಯಲಪಾರಹಳ್ಳಿ(ಆರ್ಯಾನಸಿದ್ಧನ ತಮ್ಮ ಹಾಗೂ ತಂದೆ ನೆಲೆಸಿರುವ ಊರು. ಇದು ರಾಯಭಾಗ ತಾಲೂಕಿನಲ್ಲಿದೆ)ಗೆ ರಾತ್ರಿ ವೇಳೆಯಲ್ಲಿ ಹೊರಟಾಗ ದಾರಿಮಧ್ಯದಲ್ಲಿನ ನದಿಯ ದಂಡೆಯ ಮೇಲೆ ಸ್ವಲ್ಪ ಹೊತ್ತು ಪಾಲಕಿ ಇಳುವಿ ದೀವಿಟಿಗೆಗೆ ನೀರನ್ನು ಹಾಕುವ ಆಚರಣೆ ಇದೆ.

ಜಾತ್ರೆಯ ಸಂದರ್ಭದಲ್ಲಿ ನಿವಾಳಿಕೆಯ ನಂತರ ಆರ್ಯಾನಸಿದ್ಧನ ಪೂಜಾರಿ ಚೆಮ್ಮಾವುಗೆ ಧರಿಸಲು ಪ್ರಾರಂಭಿಸಿದರೆ ಒಂದು ವರ್ಷದವರೆಗೂ ಅವುಗಳನ್ನು ಧರಿಸಬೇಕು. ಆತ ಧರಿಸುವ ಅವುಗಳನ್ನು ಬೇರೆ ಯಾರೂ ಧರಿಸುವ ಧೈರ್ಯ ಮಾಡುವುದಿಲ್ಲ. ಒಂದು ವರ್ಷ ಧರಿಸಿ ಹಳೆಯದಾದ ಚೆಮ್ಮಾವುಗೆಗಳನ್ನು ಹೊಳೆಯಲ್ಲಿ ಬಿಟ್ಟು ಬರುತ್ತಾರೆ.

೪.೨.೭ ವಿಧಿ-ನಿಷೇಧಗಳು

ಅಮೋಘಸಿದ್ಧನ ಪರಂಪರೆಯ ಗುಡಿಗುಂಡಾರಗಳಲ್ಲಿ ಪೂಜೆ ಮಾಡಿಕೊಂಡಿರುವವರನ್ನು ಒಡೆಯರು/ ಮಾರಾಯರು ಎಂದು ಕರೆಯುತ್ತಾರೆ. ಅವರು ತಮ್ಮ ಬದುಕಿನದುದ್ದಕ್ಕೂ ಹಲವಾರು ವಿಧಿ ನಿಷೇಧಗಳನ್ನು ಪಾಲಿಸುತ್ತಾರೆ.

೪.೨.೭.೧ ಜನನ : ಒಡೆಯರ ಮನೆಯಲ್ಲಿ ಕೂಸು ಜನಿಸಿದ ಮರುದಿವಸ ಸ್ಥಾನಿಕ ದೇವರ ಗದ್ದುಗೆಯ ಪೂಜಾರಿ/ಮಾರಾಯ ಬಂದು ಹೊರಸಿನ ಕಾಲಿಗೆ ಜಂಗಕಟ್ಟಿ ಹೋಗುತ್ತಾರೆ. ಐದು ದಿವಸವಾದ ನಂತರ ಮಕಣಾಪುರದ ಮಾರಾಯರಾಗಲಿ, ಅರಕೇರಿಯ ಮಾರಾಯರಾಗಲಿ ಇಲ್ಲವೇ ಸ್ಥಾನಿಕ ದೇವರ ಮಾರಾಯರಾಗಲಿ ಮನೆಗೆ ಬಂದು ಕೂಸು ಹಾಗೂ ತಾಯಿ ಇರುವ ಹೊರಸಿನ ಕಾಲಿಗೆ ಲಿಂಗ ಕಟ್ಟಿ ಹೋಗುತ್ತಾರೆ. ಹೊರಸಿನ ಕಾಲಿಗೆ ಜಂಗು ಹಾಗೂ ಲಿಂಗಧಾರಣೆಯಂತಹ ಆಚರಣೆಗಳು ಒಡೆಯರ ಕೂಸಿಗೆ ಲಿಂಗಾಯತದ ದೀಕ್ಷೆ ನಡೆಯುವುದನ್ನು ಸೂಚಿಸುತ್ತವೆ. ಹದಿಮೂರನೆಯ ದಿವಸ ಕೂಸಿಗೆ ನಾಮಕರಣ ಮಾಡುತ್ತಾರೆ. ಹಾಗೂ ಮನೆಯಲ್ಲಿಯೇ ತಯಾರಿಸಿದ ಕಾಡಿಗೆಯನ್ನು ಕೂಸಿಗೆ, ತಾಯಿಗೆ ಹಾಗೂ ಅಲ್ಲಿ ನೆರೆದ ಮಹಿಳೆಯರ ಕಣ್ಣಿಗೆ ಹಚ್ಚುತ್ತಾರೆ. ತಿನ್ನುವ ಎಲೆಗೆ ಕೊಬ್ಬರಿ ಎಣ್ಣೆಯಾಗಲಿ, ಉಂಬುವ ಎಣ್ಣೆಯಾಗಲಿ ಲೇಪಿಸಿ ಪಣತಿ ಇಲ್ಲವೇ ದೇವರ ಎದುರಿನ ದೀಪದ ಉರಿಗೆ ಹಿಡಿಯುತ್ತಾರೆ. ಎಣ್ಣೆ ಸುಟ್ಟು ಕಪ್ಪಾಗುತ್ತದೆ. ಎಲೆಯ ಮೈಗೆ ಅಂಟಿಕೊಂಡ

ಕಪ್ಪು ಜಿಡ್ಡನ್ನು ಕಾಡಿಗೆ ಎಂದು ಕರೆಯುತ್ತಾರೆ. ಈ ಕಾಡಿಗೆಯನ್ನು ಆರೋಗ್ಯದ ದೃಷ್ಟಿಯಿಂದ ಬಳಸುತ್ತಾರೆ. ಕಾಡಿಗೆ ಲೇಪನದಿಂದ ಕಣ್ಣಿನ ತಾಪ ಶಮನವಾಗಿ ಒಂದು ರೀತಿಯ ತಂಪಿನ ಅನುಭವವನ್ನು ನೀಡುತ್ತದೆ. ಅದೂ ಅಲ್ಲದೆ ಮಗುವಿನ ಗಲ್ಲ-ಗದ್ದಗಳ ಮೇಲೆ ಕಾಡಿಗೆಯ ಕಪ್ಪುಚುಕ್ಕೆಯನ್ನು ಹಚ್ಚುವುದರಿಂದ ಮಗುವಿಗೆ ದೃಷ್ಟಿದೋಷ ತಗಲುವುದಿಲ್ಲವೆಂದು ನಂಬುತ್ತಾರೆ.

ಕೂಸು ಒಂದು ತಿಂಗಳಿನದಾದ ನಂತರ ಅದರ ಕೊರಳಲ್ಲಿ ಅಡ್ಡ ದಾರವನ್ನು ಕಟ್ಟುತ್ತಾರೆ. ಇದನ್ನು ಕುರಿಯ ಉಣ್ಣೆಯಿಂದ ತಯಾರಿಸಲಾಗುತ್ತದೆ. ಕೊರಳಿಗೆ ಕಟ್ಟಿದ ಕರಿದಾರ/ಅಡ್ಡದಾರ ಹಾಗೂ ಹೊರಸಿನ ಕಾಲಿಗೆ ಕಟ್ಟುವ ಜಂಗ ಹಾಗೂ ಲಿಂಗ ಎರಡರ ಮಿಶ್ರಣ ಸಾಮಾಜಿಕ ಜಾತಿ ವ್ಯವಸ್ಥೆಯಲ್ಲಿ ಮಾರಾಯರ ವಿಲಕ್ಷಣ ಸ್ಥಾನವನ್ನು ನಿರ್ದೇಶಿಸುವಂಥದ್ದಾಗಿದೆ. ಕುರುಬ ಜಾತಿಯ ಸ್ಮೃತಿಯನ್ನು ನೆನಪಿಸುವ ಕರಿದಾರ ಹಾಗೂ ಲಿಂಗಾಯತದ ನೆನಪನ್ನು ನೀಡುವ ಲಿಂಗ ಒಡೆಯರ ಸಂದಿಗ್ಧ ಸ್ಥಾನವನ್ನು ಸೂಚಿಸುತ್ತದೆ.

ಕೂಸು ಐದು ತಿಂಗಳಾಗುತ್ತಿದ್ದಂತೆ ಜಡೆ ತೆಗೆಯುವ ಕಾರ್ಯ ನಡೆಯುತ್ತದೆ. ಒಡೆಯರ ಮೂಲ ಸ್ಥಾನವಾದ ಮುಮ್ಮೆಟಗುಡ್ಡಕ್ಕೆ ಇಲ್ಲವೇ ಅಮ್ಮೋಗಸಿದ್ಧನ ಗುರುವಿನ ಸ್ಥಾನವಾದ ಮಕಣಾಪೂರಕ್ಕೆ ಹೋಗಿ ಜಡೆ ತೆಗೆಯಿಸುತ್ತಾರೆ. ಅಲ್ಲಿ ಗುಡಿಯ ಪೂಜಾರಿ ಕೂಸಿನ ತಲೆಯ ಮೇಲೆ ಭಂಡಾರ ಸಿಂಪಡಿಸುತ್ತಾನೆ. ಎಲೆಗೂ ಭಂಡಾರ ಸಿಮಪಡಿಸುತ್ತಾನೆ. ಎಲೆಯನ್ನು ಕತ್ತರಿಯ ಹಾಗೆ ಮಾಡುತ್ತಾನೆ. ಇದಕ್ಕೆ ಎಲೆಗತ್ತರಿ ಎಂದು ಕರೆಯುತ್ತಾರೆ. ಎಲೆಗತ್ತರಿಯಿಂದ ಕೂಸಿನ ಜಡಿಗೆ ಮುಟ್ಟಿಸಿ ಎಲೆಯನ್ನು ತಾಯಿಯ ಉಡಿಯಲ್ಲಿ ಹಾಕುತ್ತಾನೆ. ಹೀಗೆ ಐದು ಸಲ ಮಾಡುತ್ತಾನೆ. ತಾಯಿಯ ಉಡಿಯಲ್ಲಿ ಬಿದ್ದ ಐದು ಎಲೆಗತ್ತರಿಗಳನ್ನು ಗಂಗೆಗೆ ಕೂಡಿಸುತ್ತಾರೆ. ಹೊಳೆಯೋ ಕೆರೆಯೋ, ಬಾವಿಯೋ, ಯಾವದಾದರೂ ಒಂದರಲ್ಲಿ, ಎಲೆಗಳನ್ನು ಬಿಟ್ಟು ಬರುವುದಕ್ಕೆ ಗಂಗೆಗೆ ಕೂಡಿಸುವುದು ಎಂದು ಕರೆಯುತ್ತಾರೆ. ಈ ಆಚರಣೆಯಾದ ನಂತರ ಊರಿನಲ್ಲಿ ಕೂಸಿನ ಸೋದರಮಾವ ಬಂದು ನಿಜವಾದ ಕತ್ತರಿಯನ್ನು ಬಳಸಿ ಕೂಸಿನ ಜಡೆಯನ್ನು ತೆಗೆಯುತ್ತಾನೆ.

ಒಡೆಯ ಜಡೆಕೂಸಿನ ಕುರಿತಾದ ಇನ್ನೊಂದು ವಿಶೇಷವೆಂದರೆ ಈ ಕೂಸನ್ನು ಬಚ್ಚಲದಲ್ಲಿ ಎರೆಯುವುದಿಲ್ಲ. ದೊಡ್ಡ ಭಾಂಡೆಯಲ್ಲೋ, ಬೋಗಣಿಯಲ್ಲೋ ಎರೆದು ಆ ನೀರನ್ನು ಯಾರೂ ತುಳಿಯದ ಜಾಗದಲ್ಲಿ ಹೋಗಿ ಸುರಿವಿ ಬರುತ್ತಾರೆ. ಒಡೆಯರ ಕೂಸಿನ ಜಡೆಯ ನೀರನ್ನು ಯಾರೂ ತುಳಿಯಬಾರದು ಎಂದು ಅವರು ನಂಬಿದ್ದಾರೆ. ಇದು ಒಡೆಯರು ಶೀಲವಂತಿಕೆಗೆ ಕೊಡುವ ಮಹತ್ವದ ಕುರುಹಾಗಿದೆ.

೪.೨.೭.೨ **ಅಯ್ಯತನ :** ಒಡೆಯರ ಹುಡುಗ ಐದು ವರ್ಷದವನಾಗುವದರೊಳಗಾಗಿ ಈ ವಿಧಿಯನ್ನು ಮುಗಿಸುತ್ತಾರೆ. ಅಯ್ಯತನವೂ ಲಿಂಗಾಯತದ ಅಯ್ಯಾಚಾರದ ಅನುಕರಣೆಯಾಗಿರುವಂತಹದ್ದು. ಬಾಲಕನಿಗೆ ಬೆಳಗಿನ ಸಮಯದಲ್ಲಿ ಮನೆಯಲ್ಲಿ ಸ್ನಾನ ಮಾಡಿಸುತ್ತಾರೆ. ಹಣೆಗೆ ಭಂಡಾರ ಲೇಪಿಸುತ್ತಾರೆ. ಮಾರಾಯರಾಗಲಿ ಯಾರೇ ಹಿರಿಯ ಒಡೆಯರಾಗಲಿ ಬಾಲಕನ ಕಿವಿಯಲ್ಲಿ ಮಂತ್ರೋಪದೇಶ ಮಾಡುತ್ತಾರೆ. ಬಾಲಕನು ಆಹಾರ-ವಿಹಾರಗಳಲ್ಲಿ ಪಾಲಿಸಬೇಕಾದ ವಿಧಿ-ನಿಷೇಧಗಳನ್ನೂ ಅವನ ಗಮನಕ್ಕೆ ತರುತ್ತಾರೆ. ಬಾಲಕನ ಪಾಲಕರಿಗೂ

ಆ ಕುರಿತು ಎಚ್ಚರವಹಿಸಲು ಹೇಳುತ್ತಾರೆ. ನಂತರ ಬಾಲಕನಿಗೆ ಹೊಸಬಟ್ಟೆ ಹಾಕಿ ಗುಡಿಗೆ ಕರೆದುಕೊಂಡು ಬರುತ್ತಾರೆ. ಗುಡಿಗೆ ಬಂದ ಬಾಲಕ ದೇವರಿಗೆ ನಮಸ್ಕಾರ ಮಾಡಿ ಮರಳಿ ಮನೆಗೆ ಹೋಗುತ್ತಾನೆ.

೪.೨.೭.೩ ಪಟ್ಟಗಟ್ಟುವುದು : ಒಡೆಯರಲ್ಲಿ ಇದೊಂದು ವಿಶಿಷ್ಟ ಆಚರಣೆ. ಇದರಲ್ಲಿ ಎರಡು ತೆರ: ಗೃಹಸ್ಥರಿಗೆ ಪಟ್ಟ ಹಾಗೂ ಸನ್ಯಾಸಿಗಳಿಗೆ ಪಟ್ಟ. ಗೃಹಸ್ಥರಾದ ಒಡೆಯರೆಲ್ಲರಿಗೂ ಪಟ್ಟಗಟ್ಟುವುದಿಲ್ಲ. ಹಾಗೆ ಪಟ್ಟಗಟ್ಟಿಸಿಕೊಳ್ಳಬೇಕಾದವನು ಮುಂದೆ ಹೇಳಿಕೆ ಮಾಡುವವನಾಗಿರಬೇಕು. ಅಂದರೆ ಹೇಳಿಕೆ ಮಾಡಲಿರುವ ಗೃಹಸ್ಥ ಒಡೆಯರಿಗೆ ಪಟ್ಟಗಟ್ಟಲಾಗುತ್ತದೆ. ಅಲ್ಲದೇ ಬಾಲ್ಯದಿಂದಲೂ ವೈರಾಗ್ಯ ತಾಳಿ ಸನ್ಯಾಸ ಜೀವನ ನಡೆಯಿಸಲು ಮಾನಸಿಕವಾಗಿ ಸಿದ್ಧರಾದ ಒಡೆಯರಿಗೂ ಪಟ್ಟಗಟ್ಟುತ್ತಾರೆ. ಅದೂ ಅಲ್ಲದೆ ಸಂಸಾರಸ್ಥನಾಗಿ ಕೆಲವು ವರ್ಷ ಜೀವನ ನಡೆಯಿಸಿದ ನಂತರ ವೈರಾಗ್ಯ ಮೂಡಿದರೆ ಅವರಿಗೂ ಸನ್ಯಾಸಿ ಪಟ್ಟಗಟ್ಟುವರು. ಇದೊಂದು ರೀತಿಯ flexibleದ ವಿಧಿಯಾಗಿದೆ. ಅಯ್ಯತನವು ಮನೆಯಲ್ಲಿನಡೆಯುವ ಸಂಸ್ಕಾರವಾದರೆ ಪಟ್ಟಗಟ್ಟುವುದು ದೇವರ ಗುಡಿಯ ಆವರಣದಲ್ಲಿ ನಡೆಯುವಂಥದ್ದು. ಹೇಳಿಕೆ ಮಾಡಲಿರುವ ಒಡೆಯರು ಮದುವೆಯಾಗುವ ಮೊದಲೇ ಈ ಸಂಸ್ಕಾರವನ್ನು ತೀರಿಸಿಕೊಳ್ಳಬೇಕು. ಮದುವೆಗೆ ನಾಲ್ಕೈದು ದಿನ ಮುಂಚೆ ಒಂದು ಶುಭದಿನವನ್ನು ನಿಶ್ಚಯಿಸಿಕೊಳ್ಳುತ್ತಾರೆ. ವರನನ್ನು ಗುಡಿಯ ಆವರಣಕ್ಕೆ ಕರೆದುಕೊಂಡು ಹೋಗುತ್ತಾರೆ. ಇಲ್ಲಿ ನಡೆಯುವ ಪ್ರತಿಯೊಂದು ಕ್ರಿಯೆಯೂ ವಿವಾಹದ ಸನ್ನಿವೇಶವನ್ನು ನೆನಪಿಸುವಂತೆ ಇರುತ್ತವೆ. ಆದರೆ ವಧು ಇಲ್ಲಿ ಇರುವುದಿಲ್ಲ. ಮದುವೆಯಾಗಲಿರುವವನನ್ನು ಗುಡಿಯ ಆವರಣದಲ್ಲಿ ಕೂಡ್ರಿಸಿ ಅವನು ಮೈಗೆಲ್ಲಾ ಅರಿಷಿಣ ಲೇಪಿಸುತ್ತಾರೆ. ನಂತರ ಎಣ್ಣೆ ಹಚ್ಚಿ ಎರೆಯುತ್ತಾರೆ. ಸಾಸಕ್ಕಿ ಹೊಯ್ದು ಅದರ ಮೇಲೆ ಕೂಡ್ರಿಸಿ ಅವನ ಕೈಗೆ ಬಿಳಿಯ ನೂಲಿನ ಕಂಕಣ ಕಟ್ಟುತ್ತಾರೆ. ಕಳಸಹೂಡುತ್ತಾರೆ. ನಾಲ್ಕು ಮೂಲಿಗೆ ಒಂದೊಂದರಂತೆ ನಾಲ್ಕು ಮಣ್ಣಿನ ಮಗಿಗಳನ್ನು ಇಡುತ್ತಾರೆ. ನಡುವಿನ ಮಗಿಯ ಮೇಲೆ ಒಂದು ಖಣ ಏರಿಸಿ, ಒಂದು ಟೆಂಗು ಇಡುತ್ತಾರೆ. ನಾಲ್ಕು ಮೂಲೆಯಲ್ಲಿರುವ ಮಗಿಗಳ ಮೇಲೆ ಎಲೆ ಅಡಿಕೆ ಸಮೇತ ಖಣ ಹಾಗೂ ಟೆಂಗು ಇಡುವರು. ಅವನ ಹಣೆಗೆ ಬಾಸಿಂಗ ಕಟ್ಟುತ್ತಾರೆ. ಈ ಬಾಸಿಂಗ ಹೂವಿನ ಬಾಸಿಂಗವಲ್ಲ, ಬೆಳ್ಳಿಯ ದೇವರ ಮುಖ. ಇಲ್ಲವೇ ಕಟ್ಟಿಗೆಯ ದೇವರ ಮುಖವಾಗಿರುತ್ತದೆ. ಅದೂ ಅಲ್ಲದೇ ಕಾಲುಗಳಿಗೆ ಬೆಳ್ಳಿಯ ಕಡಗಗಳನ್ನು ತೊಡಿಸುತ್ತಾರೆ. ಸನ್ಯಾಸಿಯಾದವನಿಗೂ ಇದೇ ರೀತಿಯಲ್ಲಿಯೇ ಪಟ್ಟಗಟ್ಟುತ್ತಾರೆ. ವ್ಯತ್ಯಾಸವೇನೆಂದರೆ ಸನ್ಯಾಸಿ ಆದವನಿಗೆ ಕೆಂಪು ಬಟ್ಟೆ ಹಾಕಿದರೆ ಸಂಸಾರಸ್ಥರಿಗೆ ಬಿಳಿಬಟ್ಟೆ ಹಾಕುತ್ತಾರೆ. ಸನ್ಯಾಸಿಯಾದವರಿಗೆ ಬೆಳ್ಳಿಯ ಕಿರೀಟ ಹಾಕುವುದಿಲ್ಲ. ಸನ್ಯಾಸಿ ಆದವನಿಗೆ ಕೈಯಲ್ಲಿ ದಂಡ ಕಮಂಡಲ ಕೊಡುತ್ತಾರೆ. ಆದರೆ ಇಬ್ಬರೂ ಈ ಸಂದರ್ಭದಲ್ಲಿ ಬಗಲಿಗೆ ಭಂಡಾರ ಚೀಲ, ಹೆಗಲಮೇಲೆ ಹೋಮದ ಕಂಬಳಿ ಹಾಗೂ ಕೈಯಲ್ಲಿ ನೇಮದ ಬೆತ್ತ ಹಿಡಿಯಲೇ ಬೇಕು. ಕೈಯಲ್ಲಿಯ ಬೆತ್ತಕ್ಕೆ ಗುಳದಾಳಿ ಕಟ್ಟುತ್ತಾರೆ. ಕಾಲುಂಗರ ತೊಡಿಸುತ್ತಾರೆ ಹಾಗೂ ಚಿಟನಾಗರ ಇಡುತ್ತಾರೆ. ಅಮ್ಮೋಘಸಿದ್ಧ ಬೆತ್ತದ ಜೊತೆಗೆ ಪದಮವ್ವಳನ್ನು ಮದುವೆಯಾದದ್ದನ್ನು ಈ ಹಿಂದೆ ನೋಡಿದ್ದೇವೆ. ಆದರೆ ಇಲ್ಲಿ ಪಟ್ಟಗಟ್ಟಿಸಿಕೊಳ್ಳುವವನೇ

[illegible]

ಬೆತ್ತದ ಗಂಡನಾಗುವ ತಿರುವು ಮುರುವ ಕ್ರಿಯೆ ನಡೆಯುತ್ತದೆ. ಮುಖಕ್ಕೆ ಕಟ್ಟಿಕೊಂಡ ಮುಖ ಸಾಮಾನ್ಯವಾಗಿ ಮಲಕಾರಿಸಿದ್ಧನ ಮುಖವಾಗಿರುತ್ತದೆ. ಇಲ್ಲಿನ ವಿಶೇಷವೆಂದರೆ ಇವರಿಗೆ ಲಿಂಗಧಾರಣೆ ಮಾಡಿಸುವುದಿಲ್ಲ. ಮುಖಕಟ್ಟಿಕೊಂಡ ನಂತರ ಇವರು ಕೈಯಲ್ಲಿ ಬೆತ್ತವನ್ನು ಗಾಳಿಯಲ್ಲಿ ತೂರಾಡುತ್ತಾ ಡೊಳ್ಳಿನ ನಾದಕ್ಕೆ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ. ಅದಾದ ನಂತರ ಅಲ್ಲಿ ನೆರೆದ ಜನರೆಲ್ಲಾ ಅಕ್ಷತೆ ಹಾಕುತ್ತಾರೆ. ಇಡೀ ಆಚರಣೆಯನ್ನು ಗಮನಿಸಿದರೆ ತಮ್ಮ ಮೂಲದೇವತೆಯನ್ನು ಅವ್ಹಾನಿಸಿಕೊಂಡು ಅವನೊಂದಿಗೆ ಲೀನವಾಗಿ ತಾನೂ ಆ ದೇವತೆಯ ಎತ್ತರಕ್ಕೆ ಏರುವ ಕ್ರಿಯೆಯನ್ನು ಸೂಚಿಸುತ್ತದೆ.

೪.೨.೭.೪ ಮದುವೆ : ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಚರ್ಚೆ ಮಾಡಿರುವಂತೆ ಒಡೆಯರು ತಮ್ಮ ಬೀಗತನವನ್ನು ನಡೆತನದವರೊಂದಿಗೆ (ಕುರುಬರ ಒಂದು ಪಂಗಡ) ಮಾಡುತ್ತಾರೆ. ಹತ್ತಿ ಕಂಕಣದ ಕುರುಬರಲ್ಲಿ ಕಪ್ಪು ಕಡಿ ತಿನ್ನದವರಾಗಿದ್ದರೆ ಅವರೊಂದಿಗೆ ಬೀಗತನ ಮಾಡುತ್ತಾರೆ. ತೀರಾ ಇತ್ತೀಚೆಗೆ ಸರೂರ ಒಡೆಯರೊಂದಿಗೆ ಬೀಗತನ ಮಾಡುತ್ತಲಿದ್ದಾರೆ. ಮಾಂಸಾಹಾರಿಗಳಾದ ಹತ್ತಿ ಕಂಕಣದ ಕುರುಬರೊಂದಿಗೆ ಉಣ್ಣೆ ಕಂಕಣದ ಕುರುಬರೊಂದಿಗೆ ಅವರು ಬೀಗತನ ಮಾಡಲು ಬಯಸುವುದಿಲ್ಲ. ಇದಕ್ಕೆಲ್ಲಾ ಅವರು ನಂಬಿಕೊಂಡು ಬಂದ ಆಹಾರ ಪದ್ಧತಿಯೇ ಕಾರಣ. 'ಕಪ್ಪುಕಡಿ ತಿನ್ನವರಿದ್ರ ಇಲ್ಲಿ ಕಟ್ಟೆ ಹತ್ತಿಸ ಕೊಡುವುದಿಲ್ಲ' ವೆಂದು ನಿಷ್ಠುರವಾಗಿ ಹೇಳುತ್ತಾರೆ.

ಮದುವೆಯನ್ನು ನಡೆಯಿಸಿಕೊಡುವವರು ಗದ್ದುಗೆ ಪೂಜೆ ಇರುವ ಒಡೆಯರಾಗಿರುತ್ತಾರೆ. ಇಲ್ಲವೇ ಶಿವಸ್ಥಾನವೆಂದು ಕರೆಯಿಸಿಕೊಳ್ಳುವ ಮಕಣಾಪೂರದ ಪೂಜಾರಿಗಳಾಗಿರುತ್ತಾರೆ. ಒಡೆಯ 'ವರನನ್ನು ಮದುವೆಯಾಗಲಿರುವ ನಡತನದ/ಕುರುಬ ವಧುವಿಗೆ ಲಿಂಗದೀಕ್ಷೆ ಕಾರ್ಯಕ್ರಮ ನಡೆಯುತ್ತದೆ. ಮದುವೆಯ ಹಿಂದಿನ ರಾತ್ರಿಯೇ ವಧು-ವರರಿಬ್ಬರಿಗೂ ಅರಿಷಿಣ ಹಚ್ಚುವ ಕಾರ್ಯಕ್ರಮ ನಡೆಯುತ್ತದೆ.

ಒಡೆಯರ ವಿವಾಹ ಸಂದರ್ಭದಲ್ಲಿ ಕಡ್ಡಾಯವಾಗಿ ಜೋಡಗುಗ್ಗಳ ಎಬ್ಬಿಸುತ್ತಾರೆ. ಮದುವೆಯಾಗಲಿರುವ ವಧು-ವರರಿಬ್ಬರೂ ಸ್ವಲ್ಪ ಹೊತ್ತಿನ ಮಟ್ಟಿಗಾದರೂ ತಲೆಯ ಮೇಲೆ ಗುಗ್ಗಳ ಹೊತ್ತು ಕೊನೆ ಪಕ್ಷ ಆರೇಳು ಹೆಜ್ಜೆಗಳನ್ನಾದರೂ ನಡೆಯಲೇಬೇಕು. ನಂತರ ಅಕ್ಷತಾ ಕಾರ್ಯಕ್ರಮ ನಡೆಯುತ್ತದೆ. ಮದುವೆಯಾದ ನಂತರ ಮದುಮಕ್ಕಳು ಮುಮ್ಮೆಟ್ಟ ಗುಡ್ಡಕ್ಕೆ ಹೋಗಿ ಅಲ್ಲಿಂದ ಮಣೂರ ಎಲ್ಲಮ್ಮಾ ಹಾಗೂ ಬಾಳೇದ ಖಂಡೇರಾಯ ನಲ್ಲಿಗೆ ಹೋಗಿ ದರ್ಶನ ಪಡೆದು ಬರುತ್ತಾರೆ.

೪.೨.೭.೫ ಗದ್ದುಗೆ ಏರುವುದು : ಅಮ್ಮೋಘಸಿದ್ಧನ ಪರಂಪರೆಯ ಒಡೆಯರುಗಳು ಪಾಲಿಸುವ ಅತ್ಯಂತ ಪ್ರಮುಖವಾದ ಆಚರಣೆ ಇದಾಗಿದೆ. ಪ್ರತಿಯೊಂದು ಗುಡಿಗೂ ಪೂಜಾರಿಕೆಯ ಹಲವಾರು ಬಡ್ಡಿಗಳಿರುತ್ತವೆ. ಪ್ರತಿಯೊಂದು ಬಡ್ಡಿಯವರು ಒಂದೊಂದು ವರ್ಷ ಪೂಜಾರಿಕೆ ಮಾಡುತ್ತಾರೆ. ಇದೊಂದು ರೀತಿಯ ಒಪ್ಪಂದ. ಒಡೆಯರುಗಳು ಯಾವುದೇ ರೀತಿಯ ತಂಟೆ-ತಕರಾರುಗಳಿಲ್ಲದೇ ತಮ್ಮ ಪೂಜಾರಿಕೆಯ ಅವಧಿಯನ್ನು ನಿಗದಿತ ದಿವಸಕ್ಕೆ ಮುಗಿಸುತ್ತಾರೆ. ನಿಗದಿತ ದಿನದಂದು ಹೊಸ ಪೂಜಾರಿಗೆ ಪೂಜಾರಿಕೆಯನ್ನು ಹಸ್ತಾಂತರಗೊಳಿಸುತ್ತಾರೆ.

ಹೊಸ ಪೂಜಾರಿ ಪೂಜಾರಿಕೆಯ ಅಧಿಕಾರ ಪಡೆದುಕೊಳ್ಳುವ ಕ್ರಿಯೆಗೆ ಗದ್ದುಗೆ ಏರುವುದು ಎನ್ನುತ್ತಾರೆ. ಒಂದು ಗುಡಿಯ ಪೂಜಾರಿಕೆ ಮೂರು ಬಡ್ಡಿಗಳಲ್ಲಿ ಹಂಚಿ ಹೋಗಿದ್ದರೆ ಪ್ರತಿಯೊಂದು ಬಡ್ಡಿಯವರಿಗೂ ಮೂರು ವರ್ಷಕ್ಕೊಮ್ಮೆ ಪೂಜಾರಿಕೆ ಬರುತ್ತದೆ. ಭಂಡಾರಕವಟೆಯ ಮಾಸಿದ್ಧನ ಗುಡಿಯ ಪೂಜಾರಿಕೆ ಒಂಬತ್ತು ಬಡ್ಡಿಗಳಲ್ಲಿ ಹಂಚಿ ಹೋಗಿದೆ. ಅಲ್ಲಿ ಒಂದೊಂದು ಬಡ್ಡಿಗೆ ಒಂಬತ್ತು ವರ್ಷಕ್ಕೊಂದು ಸಲ ಪೂಜಾರಿಕೆ ಬರುತ್ತದೆ. ಸಾಮಾನ್ಯವಾಗಿ ಕಾರಹುಣ್ಣಿಮೆಯಂದು ಗದ್ದುಗೆ ಏರುವ ಕಾರ್ಯಕ್ರಮ ನಡೆಯುತ್ತದೆ. ಕಾರಹುಣ್ಣಿಮೆಯ ದಿವಸ ಹಳೆ ಪೂಜಾರಿಯು ಸಂಜೆ ಏಳು ಗಂಟೆಗೆ ಪೂಜೆ ಸಲ್ಲಿಸುವುದರೊಂದಿಗೆ ಅವನ ಪೂಜಾರಿಕೆ ಮುಗಿಯುತ್ತದೆ. ಮರುದಿನ ನಸುಕಿನ ನಾಲ್ಕುಗಂಟೆಯ ಪೂಜೆಯೊಂದಿಗೆ ಹೊಸದಾಗಿ ಗದ್ದುಗೆ ಏರಿದವನ ಪೂಜಾರಿಕೆ ಪ್ರಾರಂಭವಾಗುತ್ತದೆ.

ಗದ್ದುಗೆ ಏರಿದ ಪೂಜಾರಿಯು ತುಂಬಾ ಕಟ್ಟುನಿಟ್ಟಿನ ಬದಕು ನಡೆಸಬೇಕಾಗುತ್ತದೆ. ಗದ್ದುಗೆ ಏರಿದ ದಿನದಿಂದ ದೇವರ ಪೂಜೆಯನ್ನು ತುಂಬಾ ಶ್ರದ್ಧೆಯಿಂದ ಮಾಡಬೇಕು. ಪ್ರತಿಸಲದ ಪೂಜೆಗೂ ಸಮೀಪದ ನದಿಗೆ ಹೋಗಿ ಮಡಿಯಿಂದ ಸೀತಾಳ ನೀರು ತರಬೇಕು. ನಸುಕಿನ ನಾಲ್ಕು ಗಂಟೆಗೆ ಪೂಜೆ ಮಾಡಬೇಕಾದರೆ ಪೂಜಾರಿಯಾದವನು ಎರಡು ಗಂಟೆಗೆ ಎದ್ದು ನದಿಗೆ ಹೋಗಿ ತಣ್ಣೀರ ಜಳಕ ಮಾಡಿ ಮಡಿಯಿಂದ ಸೀತಾಳ ಬಿಂದಗಿಯಲ್ಲಿ ನೀರು ತುಂಬಿಕೊಂಡು ಬರಬೇಕು. ಒಂದೊಮ್ಮೆ ಗದ್ದಿಗೆ ಏರಿದ ನಂತರ ಗುಡಿಯ ಆವರಣವೇ ಆವನ ಕಾರ್ಯಚಟುವಟಿಕೆಗಳ ತಾಣವಾಗಿರುತ್ತದೆ. ಅವನು ತನ್ನ ಊಟ, ಜಳಕ ಇಲ್ಲಿಯೇ ಮಾಡಬೇಕು. ಉಮದಿಯ ಮಲಕಾರಿ ಸಿದ್ಧನ ಪೂಜಾರಿಗಳಂತೂ ನಿತ್ಯ ಐದು ಸಲ ಪೂಜೆ ಮಾಡಬೇಕು. ರಾತ್ರಿ ಎಂಟು ಗಂಟೆಗೆ, ಹತ್ತು ಗಂಟೆಗೆ, ಮಧ್ಯರಾತ್ರಿ ಹನ್ನೆರಡು ಗಂಟೆಗೆ ನಸುಕಿನ ಮೂರಕ್ಕೆ ಹಾಗೂ ಬೆಳಿಗ್ಗೆ ಎಂಟಕ್ಕೆ ಹೀಗೆ ಐದು ಸಲ ಪೂಜೆ ಮಾಡಬೇಕು. ಗದ್ದುಗೆ ಏರಿದ ಯಾರೇ ಇರಲಿ ತಮ್ಮ ಹೊಲಮನೆಗಳನ್ನು ನೆನಪಿಸಿಕೊಳ್ಳುವಂತಿಲ್ಲ. ಹೆಂಡರ ಮುಖ ನೋಡುವಂತಿಲ್ಲ. ವರ್ಷವಡೀ ಅವರು ಬ್ರಹ್ಮಚರ್ಯ ವ್ರತವನ್ನು ಪಾಲಿಸುತ್ತಾರೆ.

ಗದ್ದುಗೆ ಬದಲಿ ಮಾಡುವಾಗ ಹಳೆಯ ಪೂಜಾರಿಯಾದವನು ಗುಡಿಯ ಎಲ್ಲಾ ಚರಾಚರ ಆಸ್ತಿಯ ವಿವರವಾದ ಪಟ್ಟಿಯನ್ನು ಕೊಡಬೇಕಾಗುತ್ತದೆ. ಹೀಗೆ ಸಿದ್ಧವಾದ ಪಟ್ಟಿಯನ್ನು ಹಿಂದಿನ ವರ್ಷ ಇನ್ನೊಬ್ಬ ಪೂಜಾರಿ ಕೊಟ್ಟ ಪಟ್ಟಿಯೊಂದಿಗೆ ಹೋಲಿಸಿ ಏನಾದರೂ ಕಳೆದುಹೋಗಿದ್ದರೆ ಕೊರತೆ ಪಟ್ಟಿಯನ್ನು ತಯಾರಿಸುತ್ತಾರೆ. ಕಳೆದು ಹೋದ ವಸ್ತುಗಳನ್ನು ತರಿಸಿಕೊಡುವುದು ನಡೆಯುತ್ತದೆ. ಅದೂ ಅಲ್ಲದೆ ವರ್ಷವಿಡೀ ದೇವರ ಪೂಜೆ ಮಾಡುವಾಗ ತನ್ನ ಮೈಕೈಗೆ ಮೆತ್ತಿಕೊಂಡ ಎಣ್ಣೆ, ಭಂಡಾರ ಹಾಗೂ ದೀಪದ ಬಾಬತ್ತು ಎಂದು ಗದ್ದುಗೆ ಇಳಿಯುವಾಗ ಕೊಡಬೇಕು. ಭಂಡಾರಕವಟೆಯಲ್ಲಿ ಗದ್ದುಗೆ ಇಳಿಯುವ ಪೂಜಾರಿ ಒಂದು ಮಣ ಭಂಡಾರ, ಒಂದು ಮಣ ಎಣ್ಣೆ, ಹತ್ತು ಹದಿನೈದು ಮನೆತನದವರಿಗೆ ಊಟ ಹಾಕಿಸಬೇಕು. ಹತ್ತೂರಿನಲ್ಲಿ ಗದ್ದುಗೆ ಬದಲಿಸುವ ವೇಳೆಯಲ್ಲಿ ಇಡೀ ಊರಿಗೆ ಊಟ ಹಾಕಿಸಬೇಕು. ಗದ್ದುಗೆ ಇಳಿಯುವ ಪೂಜಾರಿಗೆ

ಅವನ ಬಂಧುಬಳಗದವರು ಬಟ್ಟೆಯ ಆಹೇರಿ ಮಾಡುವ ಪದ್ಧತಿ ಇದೆ. ಅಥಣಿ ತಾಲೂಕಿನ ಐನಾಪೂರದಲ್ಲಿ ಗದ್ದುಗೆ ಏರುವ ವಿಧಿಯನ್ನು ನಿತ್ಯವೂ ಆಚರಿಸುತ್ತಾರೆ. ಪೂಜಾರಿಗಳು ತಮ್ಮ ಮನೆಯಲ್ಲಿ ಹೆರಿಗೆಯಾದರೆ ಸೂತಕ ತಮಗೆ ಅಯಿತೆಂದು ಸೂಕತದ ವೇಳೆ ಮುಗಿಯುವರಿಗೆ ಪೂಜೆ ಸಲ್ಲಿಸುವುದಿಲ್ಲ. ಆ ದಿನಗಳಲ್ಲಿ ಬೇರೆ ಪೂಜಾರಿಗಳು ಪೂಜೆ ಸಲ್ಲಿಸುವ ಕೆಲಸ ಮಾಡುತ್ತಾರೆ. ಆದರೆ ಕುಂಚನೂರಿನ ಒಡೆಯರು ಅಂತಹ ಯಾವುದೇ ಸೂತಕ ಆಚರಿಸುವುದಿಲ್ಲ. ಸ್ವತಃ ಒಡೆಯರ ಮನೆಯಲ್ಲಿ ಯಾರೇ ಮಡಿದರೂ ಪೂಜೆ ನಿಲ್ಲಿಸುವುದಿಲ್ಲ.[೩೩]

೪.೨.೮ ಪೂಜಾರಿ/ಒಡೆಯರ ಕರ್ತವ್ಯಗಳು

ಗದ್ದುಗೆ ಏರಿದ ಪೂಜಾರಿ/ಒಡೆಯರು ಹಲವಾರು ನಿರ್ದಿಷ್ಟ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ಗುಡಿಗೆ ಸಂಬಂಧಪಟ್ಟಂತೆ ಅವನು ಶ್ರದ್ಧಾಭಕ್ತಿಯಿಂದ ದೇವರ ಪೂಜೆ ಮಾಡಬೇಕು. ಸಾಮಾನ್ಯವಾಗಿ ನಿತ್ಯ ಎರಡು ಸಲ ಪೂಜೆ ಸಲ್ಲಿಸಲಾಗುತ್ತದೆ. ಆದರೆ ಉಮದಿಯಂಥ ಊರಿನಲ್ಲಿ ಮಲಕಾರಿಸಿದ್ಧನಿಗೆ ಅಲ್ಲಿನ ಒಡೆಯರು ಐದು ಸಲ ಜೋಡ ಧೂಪಾರ್ತಿಯೊಂದಿಗೆ ಪೂಜೆ ಸಲ್ಲಿಸುತ್ತಾರೆ. ಪೂಜೆ ಸಲ್ಲಿಸುವಾಗ ಅಮ್ಮೋಘಸಿದ್ಧನ ವಂಶಾವಳಿಯನ್ನು ಸ್ಮೃತಿಗೆ ತಂದುಕೊಳ್ಳಲೆಂದು ಉಗ್ಗಡಿಸುವಿಕೆ ಮಾಡುತ್ತಾರೆ.

ಭಕ್ತರ ಮನೆಯಲ್ಲಿ ವಿಶೇಷವಾಗಿ ಕುರುಬ ಭಕ್ತರ ಮನೆಯಲ್ಲಿ ನಡೆಯುವ ಅನೇಕ ಕಾರ್ಯಕ್ರಮಗಳಲ್ಲಿ ಇವರಿಗೆ ಆಮಂತ್ರಣವಿರುತ್ತದೆ. ಕೂಸು ಜನಿಸಿ ಐದು ದಿವಸವಾದಾಗ ಇವರನ್ನು ಐದೆಸಿ ಕಾರ್ಯಕ್ರಮಕ್ಕೆ ಕರೆಯಿಸುತ್ತಾರೆ. ಆಗ ಅಲ್ಲಿಗೆ ಹೋದ ಇವರು ಕೂಸಿರುವ ಹೊರಸಿನ ಕಾಳಿಗೆ ಲಿಂಗ ಕಟ್ಟಿ ಬರುತ್ತಾರೆ. ಕೂಸಿಗೆ ಜಡೆ ತೆಗೆಸುವ ಕಾರ್ಯಕ್ರಮದಲ್ಲಿ ಇವರು ಪಾಲ್ಗೊಳ್ಳುತ್ತಾರೆ. ಹತ್ತೂರಿನ ಒಡೆಯರು ಐದೆಸಿಗಾಗಲಿ, ಹೆಸರಿಡುವಾಗಾಗಲಿ ಭಕ್ತರ ಮನೆಗೆ ಹೋಗುವುದಿಲ್ಲ. ಇವುಗಳನ್ನು ಅವರು ಸೂತಕಗಳೆಂದು ಭಾವಿಸುತ್ತಾರೆ. ಕೂಸಿನ ಕೂದಲಿಗೆ ಭಂಡಾರ ಲೇಪನ ಮಾಡಿ ಎಲೆಗತ್ತರಿ ಹಚ್ಚಿ ಕಾರ್ಯನೆರವೇರಿಸುತ್ತಾರೆ. ಕನ್ಯೆ ನೋಡಲು ಇವರನ್ನು ಕರೆದುಕೊಂಡು ಹೋಗುತ್ತಾರೆ. ಲಗ್ನದ ಕಾರ್ಯದಲ್ಲಿ ಇವರು ಬಗಲಿಗೆ ಭಂಡಾರದ ಭರಣಿ, ಹೆಗಲ ಮೇಳೆ ಹೋಮದ ಕಂಬಳಿ, ಕೈಯಲ್ಲಿ ನೇಮದ ಬೆತ್ತ ಹಿಡಿದು ಹೊರಡುತ್ತಾರೆ. ಲಗ್ನದಲ್ಲಿ ಕಳಸ ಹೂಡುವ ಕೆಲಸ ಮಾಡುತ್ತಾರೆ. ಆದರೆ ಮಂತ್ರ ಹೇಳುವುದಿಲ್ಲ. ಆದರೆ ಕೆಮ್ಮನಕೋಲದ ಪೂಜಾರಿಗಳು ಮಂತ್ರ ಹೇಳುತ್ತೇವೆ ಎಂದು ಹೇಳಿದರು. ಯಾವ ಮಂತ್ರ ಎಂದು ಕೇಳಿದರೆ ಒಂದು ಗ್ರಂಥ ತಂದು ತೋರಿಸಿ ಇದರೊಳಗಿನ ಒಂದು ಶ್ಲೋಕ ಹೇಳುತ್ತೇನೆ ಎಂದರು. ಆ ಗ್ರಂಥದ ಹೆಸರು "ವೀರಶೈವ ದಶರತ್ನ" ಎಂಬ ಹೆಸರಿನದಾಗಿತ್ತು. ಅದರ ಲೇಖಕರು ವೇದಮೂರ್ತಿ ಬ್ರಹ್ಮಶಾಸ್ತ್ರಿ ಸಿದ್ಧಾಂತ ಪುರೋಹಿತ ಚೆನ್ನವೀರ ಶಾಸ್ತ್ರಿ ಸಾಲಿಮಠ. ಅವರು ತೋರಿಸಿದ ಗ್ರಂಥಕ್ಕೂ ಸಿದ್ಧಪರಂಪರೆಯ ಇವರಿಗೂ ಯಾವದೇ ಸಂಬಂಧವೇ ಇಲ್ಲದ ಕಾರಣ ಇದೊಂದು ಹೊಸ ಸೇರ್ಪಡೆ ಎನಿಸಿತು.

[illegible]

ಭಕ್ತರು ಮೃತರಾದಾಗ ಪೂಜಾರಿಗಳು/ಒಡೆಯರು ಹೋಗುತ್ತಾರೆ. ಲಗ್ನಕ್ಕೆ ಭಂಡಾರ ಚೀಲ ತೆಗೆದುಕೊಂಡು ಹೋಗುವ ಇವರು ಭಕ್ತರು ಮೃತರಾದಾಗ ಭಂಡಾರ ಚೀಲ ಒಯ್ಯುವುದಿಲ್ಲ. ಭಂಡಾರದ ಜಾಗೆಯಲ್ಲಿ ವಿಭೂತಿಯನ್ನು ಒಯ್ಯುತ್ತಾರೆ. ಅಂದರೆ ವರನಿಗೆ ಭಂಡಾರ ಲೇಪಿಸುವ ಇವರು ತೀರಿಕೊಂಡವರಿಗೆ ವಿಭೂತಿ ಧಾರಣೆ ಮಾಡುತ್ತಾರೆ. ಭಂಡಾರಕ್ಕೂ ಸಜೀವಕ್ಕೂ ಇವರು ಏರ್ಪಡಿಸುವ ನಂಟು ವಿಶಿಷ್ಟವಾದದ್ದು. ನಿರ್ಜಿವಕ್ಕೆ ಭಂಡಾರ ಬಳಕೆ ನಿಷಿದ್ಧವೆಂದು ಇವರು ಭಾವಿಸಿದ್ದಾರೆ. ಪಾಯ ಪೂಜೆಗೆ, ಮನೆಶಾಂತಿಗೆ, ಬಾವಿ ಪೂಜೆಗೆ ಇವರು ಹೋಗುತ್ತಾರೆ. ಆದರೆ ಉಣ್ಣಿ ಕಂಕಣದವರ ಯಾವುದೇ ಕಾರಣಗಳಲ್ಲಿ ಪಾಲ್ಗೊಳ್ಳುವುದಿಲ್ಲವೆಂದು ಹೇಳುತ್ತಾರೆ. ಅದೇನಿದ್ದರೂ ಸರೂರ ಒಡೆಯರ ಕೆಲಸವೆಂದು ಹೇಳುತ್ತಾರೆ.[೨೪]

ಕಾಯಿಕೊಟ್ಟು ಯಾವುದಾದರೂ ಭಕ್ತರು ಇವರನ್ನು ಮನೆಗೆ ಆಮಂತ್ರಿಸಿದ್ದರೆ ಪಾಲಕಿಯೊಂದಿಗೆ ಭಕ್ತರ ಮನೆಗೆ ಹೋಗುತ್ತಾರೆ. ಭಕ್ತರ ಮನೆಯಲ್ಲಿ ವಸತಿ ಮಾಡಿ, ಬೆಳಗಿನ ಜಾವದಲ್ಲಿ ಮನೆತನದವರ ಭವಿಷ್ಯದ ಕುರಿತು ಹೇಳಿಕೆ ಮಾಡುತ್ತಾರೆ. ಹರಕೆಯ ಹಾಡನ್ನು ಹಾಡಿ ಮರಳಿ ಗುಡಿಗೆ ಬರುತ್ತಾರೆ. ಹರಕೆಯ ಹಾಡನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗುವುದು.

ಅಮ್ಮೋಘಸಿದ್ಧನನ್ನು ನಾಡಗೌಡ ಅಮಸಿದ್ಧ ಎಂದೂ ಕರೆಯುತ್ತಾರೆ. ಅವನು ಭಕ್ತರಿಗೆ ಕೇವಲ ಆಧ್ಯಾತ್ಮದ ಗುರುವಿನ ಸಂಕೇತವಲ್ಲ. ಅವನು ಭಕ್ತರ ಲೌಕಿಕ ಸಮಸ್ಯೆಗಳನ್ನು ಬಗೆಹರಿಸಬಲ್ಲ ನಾಡಗೌಡನೂ ಹೌದು. ಭಕ್ತರ ನ್ಯಾಯ ಬಗೆ ಹರಿಸುವ ಪರಂಪರೆ ಇಂದಿನವರೆಗೆ ಒಡೆಯರಲ್ಲಿ/ಪೂಜಾರಿಗಳಲ್ಲಿ ಹರಿದು ಬಂದಿದೆ.

ಭೀವರಗಿಯ ಧರ್ಮದ ಕಟ್ಟೆಯಲ್ಲಿ ಈ ಪರಂಪರೆಯನ್ನು ಕಾಣಬಹುದು. ಭೀವರಗಿಯ ಧರ್ಮದ ಕಟ್ಟೆಯ ವಿವರವನ್ನು ಈ ಹಿಂದೆಯೇ ನೋಡಿದ್ದೇವೆ. ಉದಗಟ್ಟಿ ಎನ್ನುವ ಊರಿನಲ್ಲಿ ನ್ಯಾಯ ಬಗೆಹರಿಸುವ ಪದ್ಧತಿ ವಿಶಿಷ್ಟ ರೀತಿಯಲ್ಲಿ ನೆರವೇರುತ್ತದೆ. ಭಕ್ತರಲ್ಲಿ ಯಾವುದೇ ಒಂದು ವಿಷಯಕ್ಕಾಗಿ ಮನಸ್ತಾಪ ಉಂಟಾಗಿ ತಮಗೆ ಅನ್ಯಾಯವಾಗಿದೆ ಎಂದು ಅನ್ನಿಸಿದರೆ ಅವರು ನ್ಯಾಯ ಪರಿಹಾರಕ್ಕಾಗಿ ಗುಡಿಗೆ ಬರುತ್ತಾರೆ. ಹಾಗೆ ಯಾರಾದರೂ ಬಂದರೆ ಅಲ್ಲಿ ಪಂಚರನ್ನು ಸೇರಿಸುತ್ತಾರೆ. ವಾದಿ ಪ್ರತಿವಾದಿ ಇಬ್ಬರೂ ತಲಾ ಹತ್ತು ಸಾವಿರ ರೂಪಾಯಿಯನ್ನು ಗುಡಿಯಲ್ಲಿ ದೇವರ ಮುಂದೆ ಇಡುತ್ತಾರೆ. ನಂತರ ತಮ್ಮ ವಾದವನ್ನು ಮಂಡಿಸುತ್ತಾರೆ. ಇಬ್ಬರ ವಾದ ಕೇಳಿದ ನಂತರ ಪಂಚರ ಸಭೆ ಮುಕ್ತಾಯವಾಗುತ್ತದೆ. ತಪ್ಪು ಮಾಹಿತಿ ನೀಡಿ ವಾದಿಸಿದವನ ಮನೆಯಲ್ಲಿ ತಿಂಗಳೊಪ್ಪತ್ತಿನಲ್ಲಿ ಕೂಸು ಇಲ್ಲವೇ ಕುನ್ನಿ ಸಾವನ್ನಪ್ಪುತ್ತದೆ. ಅಂಥವನ ಹಣವನ್ನು ಪಂಚರು ಜಪ್ತಿ ಮಾಡಿಕೊಳ್ಳುತ್ತಾರೆ. ಸರಿ ಮಾಹಿತಿ ನೀಡಿದವನ ಹಣವನ್ನು ಅವನಿಗೆ ಮರಳಿಸುತ್ತಾರೆ. ಜಪ್ತಿ ಮಾಡಿಕೊಂಡ ಹಣವನ್ನು ಗುಡಿಯ ಜೀರ್ಣೋದ್ಧಾರಕ್ಕೆ ಬಳಸುತ್ತಾರೆ.[೨೫]

ಕಲ್ಲೂರಿನ ಒಡೆಯರು ತಮ್ಮ ಗುಡಿಗೆ ಬಂದ ಎಣ್ಣೆ ಭಂಡಾರವನ್ನು ಸ್ವಂತಕ್ಕೆ ಬಳಸಿಕೊಳ್ಳುವುದಿಲ್ಲ. ಅದೆಲ್ಲವನ್ನು ಮುಮ್ಮಟಗುಡ್ಡಕ್ಕೆ ಇಲ್ಲವೇ ಭೀವರಗಿಗೆ ಕಳುಹಿಸಿ ಕೊಡುವುದಾಗಿ ಹೇಳಿದರು.

೪.೨.೯ ಶುದ್ಧೀಕರಣ

ಒಡೆಯರು ಕುರುಬರಿಗೆ ಗುರುಸ್ಥಾನದಲ್ಲಿರುವುದರಿಂದ ಕುರುಬರು ಮೈಲಿಗೆ ಆದಾಗ ಅವರನ್ನು ಶುದ್ಧೀಕರಿಸಿ ಸಮಾಜದ ಮುಖ್ಯ ಪ್ರವಾಹದಲ್ಲಿ ಸೇರಿಕೊಳ್ಳುವಂತೆ ಮಾಡುತ್ತಾರೆ. ಈಗಾಗಲೇ ಚರ್ಚಿಸಿರುವಂತೆ ಗುರುಸ್ಥಾನದ ಒಡೆಯರು ವೈವಾಹಿಕ ಸಂಬಂಧ ಬೆಳೆಸುವುದು ಶಿಷ್ಯಸ್ಥಾನದಲ್ಲಿರುವ ಕುರುಬರೊಂದಿಗೆ/ನಡತನವರೊಂದಿಗೆ. ವೈವಾಹಿಕ ಸಂಬಂಧ ಬೆಳೆಸುವಾಗ ಕುರುಬರು ಶುದ್ಧ ಶಾಕಾಹಾರಿಗಳಾಗಿದ್ದಾರೆಯೋ ಇಲ್ಲವೋ ಎಂಬುವದನ್ನು ಖಚಿತಪಡಿಸಿಕೊಳ್ಳುತ್ತಾರೆ. ಯಾರಾದರೂ ಶಾಕಾಹಾರಿಗಳೆಂದು ಸುಳ್ಳು ಹೇಳಿ ಬೀಗತನ ಮಾಡಿದ್ದಾರೆಂದು ನಂತರ ತಿಳಿದು ಬಂದರೆ ಸೊಸೆಯಾಗಿ ಬಂದವಳಿಗೆ ಶುದ್ಧೀಕರಣ ಮಾಡಿ ತಮ್ಮ ಒಡೆಯರ ಕುಟುಂಬದಲ್ಲಿ absorb ಮಾಡಿಕೊಳ್ಳುತ್ತಾರೆ. ಸುಡುವ ಹತ್ತಿಕಟ್ಟಿಗೆಯನ್ನು ಸೊಸೆಯ ನಾಲಿಗೆಯ ಮೇಲೆ ಹಾಕಿ ಶುದ್ಧೀಕರಿಸುವುದು ಒಂದು ಪರಿಯಾದರೆ ಸೊಸೆಯ ನಾಲಿಗೆಯ ಮೇಲೆ ಭಂಡಾರ ಹಾಕಿ ಶುದ್ಧೀಕರಿಸುವುದು ಇನ್ನೊಂದು ಪರಿಯಾಗಿದೆ. ತುಂಬಾ ಮಡಿವಂತ ಒಡೆಯರು ಇಂಥ ಸಂದರ್ಭದಲ್ಲಿ ವಿವಾಹ ಸಂಬಂಧವನ್ನು ಮುರಿದುಕೊಂಡ ಉದಾಹರಣೆಗಳೂ ಇವೆ. ಆದರೆ ಒಂದು ಸಲ ಸೊಸೆ ಕುಟುಂಬದಲ್ಲಿ ವಿಲೀನ ಆದಳೆಂದರೆ ಅವಳಿಗೂ ಗುರುಮಾತೆಯ ಪಟ್ಟ ಬರುತ್ತದೆ. ಒಡೆಯರ ಸೊಸೆಯಾದವಳು ತವರು ಮನೆಗೆ ಬಂದಾಗ ಅವಳಿಗೆ (ಮನೆಯ ಮಗಳಿಗೆ) ಇಲ್ಲಿ ಯಾವುದೇ ಸೇವಾ ಕೆಲಸಗಳನ್ನು ಹಚ್ಚುವುದಿಲ್ಲ. ಅವಳಿಂದ ಈ ಮನೆಯಲ್ಲಿ ಉಂಡ ತಾಟು ಎತ್ತಿಸಿಕೊಡುವುದಿಲ್ಲ ಹಾಗೂ ತೊಳೆಯಿಸಿಕೊಡುವುದಿಲ್ಲ. ಈಗ ವಿವರಸಿದ್ದು ಮಹಿಳೆಗೆ ಮೀಸಲಾದ ಶುದ್ಧೀಕರಣದ ಪ್ರಸಂಗ. ಇನ್ನು ಮಹಿಳೆ ಪುರುಷರಿಬ್ಬರನ್ನೂ ಶುದ್ಧೀಕರಿಸುವ ಪ್ರಸಂಗವನ್ನು ನೋಡಬಹುದು. ಕುರುಬ ಮಹಿಳೆಯಾಗಲಿ, ಪುರುಷನಾಗಲಿ ಯಾರಿಂದಲಾದರೂ ಕೆರವಿನಿಂದ ಹೊಡೆಸಿಕೊಂಡಿದ್ದರೆ, ಹಾವು ಕಡಿಸಿಕೊಂಡಿದ್ದರೆ ಅಥವಾ ಜೈಲಿಗೆ ಹೋಗಿ ಬಂದಿದ್ದರೆ ಅಂಥವರನ್ನು ಅಶುದ್ಧರಾದವರು ಎಂದು ಭಾವಿಸಲಾಗುತ್ತದೆ. ಅಂಥವರನ್ನು ಶಾಸ್ತ್ರೋಕ್ತವಾಗಿ ಶುದ್ಧೀಕರಿಸುತ್ತಾರೆ. ಅಶುದ್ಧನಾದವನು ನನ್ನನ್ನು ಶುದ್ಧೀಕರಿಸಿ ಎಂದು ಒಡೆಯರಲ್ಲಿ ಕೇಳಿಕೊಂಡಿರುತ್ತಾರೆ. ಶುದ್ಧೀಕರಣಕ್ಕೆ ಒಡೆಯರು ಒಂದು ದಿನವನ್ನು ನಿಗದಿಪಡಿಸುತ್ತಾರೆ. ಅಂದಿನ ದಿವಸ ಅಶುದ್ಧನಾದವನು ಅಭ್ಯಂಜನ ಸ್ನಾನ ಮಾಡುತ್ತಾನೆ, ಹೊಸ ಬಟ್ಟೆ ಧರಿಸುತ್ತಾನೆ. ಅಲ್ಲಿ ಸೇರಲಿರುವ ಸಮಾಜ ಬಾಂಧವರಿಗೆ ಅನ್ನಪ್ರಸಾದ ವ್ಯವಸ್ಥೆ ಮಾಡಿಸಿರುತ್ತಾನೆ. ಗುಡಿಗೆ ಬಂದ ಒಡೆಯರ ಪಾದಪೂಜೆ ಮಾಡುತ್ತಾನೆ. ಪಾದೋದಕವನ್ನು ಸೇವಿಸುತ್ತಾನೆ. ಮತ್ತೊಂದು ಸಲ ಪಾದಪೂಜೆ ಮಾಡಿ, ಈ ಸಲದ ಪಾದೋದಕವನ್ನು ಮೈಮೇಲಿ ಸಿಂಪಡಿಸಿಕೊಳ್ಳುತ್ತಾನೆ. ಆಗ ಒಡೆಯರು ಅವನಿಂದ ಈ ರೀತಿಯ ಮಂತ್ರವನ್ನು ಹೇಳಿಸುತ್ತಾರೆ.

> "ಹರಹರ ಕಾಲಹರ ಕರ್ಮಹರ ದುರಿತಹರ
> ಪಾಪವೆಲ್ಲಾ ಪರಿಹಾರ ಅಯ್ಯಾನಾಥ ಮಹಾಪ್ರಸಾದ
> ಪೂರ್ವ ಜನ್ಮ ಕರ್ಮ ನಿವಾರಣಾ

[illegible]

ಧೀಕ್ಷಾ ಗುರು ಶಿಕ್ಷಾ ಗುರು ಮೋಕ್ಷಾ ಗುರು

ಗುರುವಿನ ಗುರು ಪರಮಗುರು

ಪರಮರಾಧ್ಯ ಶ್ರೀ ಗುರುವಿನ ಪರಮಾರಾಧ್ಯ

ಮಹಾ ಮಹತ್ವ ಮಹಾಂತ ಶ್ರೀ ಗುರುವಿನ ಪಾದ ಪದ್ಮಗಳಿಗೆ

ಕರವ ಜೋಡಿಸಿ ಶಿರವ ಬಾಗಿ

ಕಾಯ ಪಾವನದ ಮಾಡ್ಡೆ ಶ್ರೀ ಗುರವೇ ನಮಃ"

ಈ ಮಂತ್ರ ಹೇಳಿಸಿದ ನಂತರ ಶುದ್ಧೀಕರಣ ಬಯಸಿ ನಿಂತವನ ಬಾಯಲ್ಲಿ ಸಕ್ಕರೆ ಹಾಕಲಾಗುತ್ತದೆ. ಅದಾದ ನಂತರ ಗುರುವಿನ ಬಾಯಲ್ಲೂ, ಅಲ್ಲಿ ನೆರೆದ ಸಮಾಜ ಬಾಂಧವರ ಬಾಯಲ್ಲೂ ಸಕ್ಕರೆ ಹಾಕುತ್ತಾರೆ. ಆಗ ಗುರು ಅವರಿಗೆಲ್ಲಾ ಹೀಗೆ ಆಜ್ಞೆ ಮಾಡುತ್ತಾನೆ. "ಇವನು ಇಂದಿನಿಂದ ಶುದ್ಧನಾಗಿದ್ದಾನೆ, ಇವನನ್ನು ಯಾವ ಕಾರಣಕ್ಕೂ ಇನ್ನು ನಂತರ ತುಚ್ಛೀಕರಿಸ ಬೇಡಿರಿ" ಬಾಯಲ್ಲಿ ಸಕ್ಕರೆ ಹಾಕಿಕೊಂಡ ಅವರೆಲ್ಲಾ ಆ ಮೂಲಕ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾರೆ.[೩೬]

೪.೨.೧೦ ಶವಸಂಸ್ಕಾರ

ಪೂಜಾರಿಗಳು/ಒಡೆಯರು ತೀರಿಹೋದರೆ ಅವರ ಹೆಣಗಳಿಗೆ ಸಂಸ್ಕಾರ ಮಾಡಲು ಪ್ರತ್ಯೇಕವಾದ ರುದ್ರಭೂಮಿ ಇರುತ್ತದೆ. ಜೇವರ್ಗಿ ತಾಲೂಕಿನ ಕಲ್ಲೂರ ಹಾಗೂ ಜಮಖಂಡಿ ತಾಲೂಕಿನ ಕುಂಚನೂರು ಹಾಗೂ ಜತ್ತ ತಾಲೂಕಿನ ಉಮದಿ ಊರುಗಳಲ್ಲಿ ಒಡೆಯರ ಶವಸಂಸ್ಕಾರದ ವಿಧಿ-ವಿಧಾನಗಳು ತುಂಬಾ ಅಪರೂಪದ್ದಾಗಿವೆ. ಕಲ್ಲೂರಿನಲ್ಲಿ ಹೇಳಿಕೆ ಮಾಡುವ ಒಡೆಯರ ಶವಸಂಸ್ಕಾರಕ್ಕಾಗಿಯೇ ಒಂದು ವಿಶೇಷವಾದ ಪ್ರತ್ಯೇಕ ಗವಿ ಇದೆ. ಕುಂಚನೂರಿನಲ್ಲಿ ಎಲ್ಲಾ ಮಾರಾಯರಿಗಾಗಿ ಒಂದು ವಿಶೇಷವಾದ ಪ್ರತ್ಯೇಕ ಗವಿ ಇದೆ. ಕಲ್ಲೂರಿನಲ್ಲಿ ಆ ಗವಿ ಮೂಲಗುಡಿಗಳಿಂದ ಸ್ವಲ್ಪ ದೂರದಲ್ಲಿ ಊರ ಹೊರವಲಯದಲ್ಲಿ ಭೂತಾಳಸಿದ್ಧನ ಗುಡಿ ಇರುವ ರುದ್ರ ಭೂಮಿಯಲ್ಲಿ ಇದೆ. ಕುಂಚನೂರಿನಲ್ಲಿ ಗುಡಿ ಎಡಬಲಗಳಲ್ಲಿ ಗವಿಗಳಿವೆ.

ಒಡೆಯರು ಮೃತರಾದ ಸುದ್ದಿ ತಿಳಿದ ಕೂಡಲೇ ಗವಿಯ ಬಾಯಿಗೆ (ನೆಲಮಾಳಿಗೆಯಾಕಾರದ ಗವಿ) ಹಾಕಿದ ಕಲ್ಲನ್ನು ತೆಗೆಯುತ್ತಾರೆ. ಆ ಗವಿಯಲ್ಲಿ ಇಳಿದು ಹುತ್ತದ ಮಣ್ಣಿನಿಂದ ಗವಿಯನ್ನು ಸಾರಿಸುತ್ತಾರೆ. ಸುಣ್ಣ, ಹುರಮಂಜು ಹಾಕಿ ಸಮಾಧಿಯನ್ನು ಶೃಂಗರಿಸುತ್ತಾರೆ. ಮೆರವಣಿಗೆಯಲ್ಲಿ ಮೃತ ಮಾರಾಯರನ್ನು ಮನೆಯಿಂದ ಗವಿ ಇರುವ ಗುಡಿಯ ಕಡೆಗೆ ಕರೆತರುತ್ತಾರೆ.

ಸಮಾಧಿ ಮಾಡುವಾಗ ಮೃತ ಮಾರಾಯರ ಮೈಮೇಲಿನ ಬಟ್ಟೆಯನ್ನು ತೆಗೆಯುವುದಿಲ್ಲ. ಅವನು ಸದಾ ಉಪಯೋಗಿಸುವ ಭಂಡಾರ ಚೀಲ, ಕಂಬಳಿ ಹಾಗೂ ಬೆತ್ತವನ್ನು ಸಹ ಗವಿಯೊಳಗೆ ಒಯ್ಯುತ್ತಾರೆ. ಹೂಗಾರ(ಹಿರಕೂರ)ನ ಮನೆಯಿಂದ ತಂದ ಬಾನದ ಎಡೆಯನ್ನು ಹಿಡಿದು ಆರತಿ ಎತ್ತಿ ಪೂಜೆ ಸಲ್ಲಿಸುತ್ತಾರೆ.

ಗವಿಯ ಒಳಗೆ ಮೃತ ಮಾರಾಯರಿಬ್ಬರ ಅಸ್ತಿ ಇರುತ್ತದೆ. ಒಬ್ಬ ಮಾರಾಯನ ಅಸ್ತಿ ಪದ್ಮಾಸನದಲ್ಲಿ ಇರುತ್ತದೆ. ಇನ್ನೊಬ್ಬ ಮಾರಾಯನ ಅಸ್ತಿ ಪದ್ಮಾಸನ ಹಾಕಿ ಕುಳಿತ ಅಸ್ತಿಯ ತೊಡೆಯ ಮೇಲಿರುತ್ತದೆ. ಮಾರಾಯರ ಶವಸಂಸ್ಕಾರದ ವೈಶಿಷ್ಟ್ಯ ಇರುವುದೇ ಇಲ್ಲಿ. ಮೃತ ಮಾರಾಯರನ್ನು ಉಳಿದ ಹೆಣಗಳನ್ನು ಹೂಳುವಂತೆ ಹೂಳುವುದಿಲ್ಲ. ಅದರ ಬದಲಿಗೆ ಪದ್ಮಾಸನದಲ್ಲಿ ಕೂಡಿಸುತ್ತಾರೆ. ಶವ ಹಾಗೆ ಕುಳಿತುಕೊಳ್ಳುವಂತೆ ಮಾಡಲು ಗವಿಯ ಚಾವಣಿಯಿಂದ ಜೋತುಬಿಟ್ಟ ಮೂರು ಕೊಕ್ಕೆಯುಳ್ಳ ಹಗ್ಗದಿಂದ ಕಟ್ಟಿರುತ್ತಾರೆ. ಒಂದು ಹಗ್ಗದ ಕೊಕ್ಕೆ ಬಲಭಾಗವನ್ನು ಹಿಡಿದರೆ, ಇನ್ನೊಂದು ಎಡಭಾಗವನ್ನು ಹಿಡಿಯುತ್ತದೆ. ಮೂರನೆಯ ಹಗ್ಗದ ಕೊಕ್ಕೆ ಶಿರ ನೆಟ್ಟಗೆ ನಿಲ್ಲುವಂತೆ ಮಾಡುತ್ತದೆ. ಹೀಗೆ ಮಾಡುವಾಗ ಇಲ್ಲಿ ಇಂತಹದೇ ಸ್ಥಿತಿಯಲ್ಲಿರುವ ಇನ್ನೋರ್ವ ಮಾರಾಯನ ಅಸ್ತಿ ಇರುತ್ತದೆ. ಆ ಅಸ್ತಿಯನ್ನು ಕೊಕ್ಕೆಗಳಿಂದ ಬಿಡಿಸಿಕೊಂಡು ಒಂದು ಚೀಲದಲ್ಲಿ ಹಾಕಿ ಇಂದು ಸಮಾಧಿ ಮಾಡಲಿರುವ ಮೃತ ಮಾರಾಯನ ತೊಡೆಯ ಮೇಲೆ ಇಡುತ್ತಾರೆ. ಹೀಗಾಗಿ ಇಲ್ಲಿ ಯಾವಾಗಲೂ ಒಂದು ಪದ್ಮಾಸನ ಭಂಗಿಯ ಅಸ್ತಿ ಹಾಗೂ ಇನ್ನೊಂದು ತೊಡೆಯ ಮೇಲಿರುವ ಚೀಲದೊಳಗಿನ ಅಸ್ತಿ ಇದ್ದೇ ಇರುತ್ತದೆ. ಮೂರನೆಯ ಮೃತ ದೇಹ ಗವಿಯಲ್ಲಿ ಬರುತ್ತಿದ್ದಂತೆ ತೊಡೆಯ ಮೇಲಿನ ಅಸ್ತಿಯನ್ನು ತೆಗೆದು ಈ ಗವಿಯ ಕೆಳಗಿರುವ ಇನ್ನೊಂದು ಗವಿಯಲ್ಲಿ ಹಾಕುತ್ತಾರೆ.

ಹೀಗೆ ಮಾಡಿದ ನಂತರ ಗವಿಯಿಂದ ಜನರು ಮೇಲೇರಿ ಬಂದು ಗವಿಯ ಬಾಯಿಯನ್ನು ದೊಡ್ಡ ಫರಸಿಯಿಂದ ಮುಚ್ಚುತ್ತಾರೆ. ಇಲ್ಲಿಗೆ ಶವಸಂಸ್ಕಾರ ಮುಕ್ತಾಯವಾಗುತ್ತದೆ. ಸಮಾಧಿ ಕೆಲಸ ಮುಗಿದ ನಂತರ (ಹತ್ತು ಹನ್ನೊಂದು ದಿವಸಗಳಾದ ನಂತರ) ಹಿರೆಕೂರ/ಹೂಗಾರ ಹೊಳೆಗೆ ಹೋಗಿ ಒಂದು ಕಲ್ಲನ್ನು ತೆಗೆದುಕೊಂಡು ಬರುತ್ತಾರೆ. ಆ ಕಲ್ಲನ್ನು ಇದೀಗತಾನೆ ಮೃತನಾದವನ ಪ್ರತೀಕವೆಂದು ಭಾವಿಸಿ ಗವಿಯ ಮಗ್ಗಲಲ್ಲಿ, ಮಧ್ಯದಲ್ಲಿ ಇಟ್ಟು ಪೂಜಿಸಲು ಪ್ರಾರಂಭಿಸುತ್ತಾರೆ. ಕಲ್ಲೂರಿನಲ್ಲಿ ಗವಿಯಲ್ಲಿ ಮೃತ ಮಾರಾಯನನ್ನು ಇಡುವಾಗ ಹೂಗಾರ 'ಮಕದರವಿಯನ್ನು ಹರಿಯುವ' ಪದ್ಧತಿಯಿದೆ. ಮೃತ ಮಾರಾಯನ ಮುಖಕ್ಕೆ ಕಟ್ಟಿದ ಅರಿವೆಯನ್ನು ತೆಗೆದು ಮುಖದ ಮುಂದೆ ಹಿಡಿದು ಹರಿದೊಗೆಯುವ ಚಾಜ ಹಿರಿಕೂರ/ಹೂಗಾರರಿಗೆ ಇರುತ್ತದೆ.

ತೆರೆವಾಡ ಮಂಗರಾಯನ ಪೂಜಾರಿಗಳು ತಮ್ಮನ್ನು ಒಡೆಯರು ಎಂದು ಕರೆದುಕೊಳ್ಳುವುದಿಲ್ಲ. ಅವರು ಮೃತ ಪೂಜಾರಿಗಳನ್ನು ಹೂಳುತ್ತಾರೆ. ಅಂದರೆ ಸಮಾಧಿಯಲ್ಲಿ ಇಟ್ಟು ಮಣ್ಣು ಎಳೆಯುತ್ತಾರೆ. ಹೀಗೆ ಮಾಡುವಾಗ ಅವನಲ್ಲಿರುವ ಬಂಗಾರದ ಒಂದು ಚೂರನ್ನು ತೆಗೆದು ಮೃತನ ಮಡದಿಯ ಕಣ್ಣಲ್ಲಿ ಹಾಕುವ ಪದ್ಧತಿಯಿದೆ. "ಇವನದೆಂಥ ಸಂಸಾರ! ಸತ್ತರೆ ಹೆಂಡತಿ ಕಣ್ಣಾಗ ಹಾಕಾಕ ಒಂದುಚೂರ ಬಂಗಾರ ಉಳಿಸಿಲ್ಲ"ವೆಂದು ಕೆಟ್ಟ ಸಂಸಾರ ಮಾಡಿದ ಪೂಜಾರಿಗಳ ಕುರಿತು ಜನರಾಡಿಕೊಳ್ಳುವುದರ ಹಿಂದೆ ಈ ವಿಧಿ ಇರುವುದನ್ನು ಗಮನಿಸಬೇಕು.[೩೨]

೪.೨.೧೧ ಭೂತಾಳಸಿದ್ಧನಿಗೆ ಬ್ಯಾಟಿ

ಅಮೋಘಸಿದ್ಧನ ಪರಂಪರೆ ಪಕ್ಕಾ ಶಾಕಾಹಾರಿಯಿದ್ದರೂ ಅಮ್ಮೋಘಸಿದ್ಧನ ಶಿಷ್ಯ ಹಾಗೂ ಸೇವಕನಾದ ಭೂತಾಳಸಿದ್ಧ ಮಾಂಸಾಹಾರಿಯಾಗಿಯೇ ಉಳಿದಿದ್ದು ಸೋಜಿಗದ ಸಂಗತಿಯಾಗಿದೆ. ಅಮೋಘಸಿದ್ಧ ಪರಂಪರೆ ಅನ್ಯರ ಆಹಾರ ಪದ್ಧತಿಯ ಮೇಲೆ ಆಕ್ರಮಣ ಮಾಡಲಿಲ್ಲವೆನ್ನುವುದಕ್ಕೆ ಇದೊಂದು ನಿದರ್ಶನ. ಈ ಪರಂಪರೆ ಶಾಕಾಹಾರ ಪದ್ಧತಿಯನ್ನು ಸ್ವೀಕರಿಸಿದೆಯಾದರೂ ಅದನ್ನು ತನ್ನ ಶಿಷ್ಯನ ಮೇಲೆ ಹೇರಿಲ್ಲವೆನ್ನುವುದು ಈ ಪರಂಪರೆಯ ಹೆಗ್ಗಳಿಕೆ ಎನ್ನಬೇಕು.

ಕಲ್ಲೂರು, 'ಹೇಳಿಕೆ ಕಲ್ಲೂರ' ಎಂದೇ ಪ್ರಸಿದ್ಧವಾಗಿದೆ. ಬಾದಾಮಿ ಅಮಾವಾಸ್ಯೆಗೆ ಪ್ರತಿವರ್ಷ ಇಲ್ಲಿ ಹೇಳಿಕೆಗಳಾಗುತ್ತವೆ. ಅವೆಲ್ಲಾ ಮಳೆ-ಬೆಳೆಯ ಕುರಿತಾಗಿಯೇ ಇರುತ್ತವೆ. ಬಾದಾಮಿ ಅಮಾವಾಸ್ಯೆಯನ್ನು ಹೊರತುಪಡಿಸಿ ಈ ಊರಿನಲ್ಲಿ ಕಿರು ಹೇಳಿಕೆಗಳಾಗುತ್ತಿರುತ್ತವೆ. ಹೇಳಿಕೆಗಳು ಸಾಮಾನ್ಯವಾಗಿ ಈ ಹಿಂದೆ ವಿವರಿಸಿದಂತೆ ನಡಗಡ್ಡಿ ಹಾಗೂ ಕಡಿಗಡ್ಡಿಯಲ್ಲಿ ಆಗುತ್ತದೆ. ಆದರೆ ಈ ಕಿರು ಹೇಳಿಕೆಗಳು ಅಮೋಘಸಿದ್ಧನ ಗುಡಿಯ ಆವರಣದಲ್ಲಿಯೇ ಆಗುತ್ತವೆ. ಸಕಾಲಕ್ಕೆ ಮಳೆಬಾರದೇ ಈ ಭಾಗದ ರೈತ ಜನ ಕಂಗಲಾಗಿ 'ಮಳೆಕೊಡು' ಎಂದು ಕೇಳಲು ಬರುತ್ತಾರೆ. ಹಾಗೆ ಕೇಳಲು ಬಂದವರು ಮೂಲಗುಡಿಯಿಂದ ದೂರದಲ್ಲಿರುವ ಭೂತಾಳಸಿದ್ಧನ ಗುಡಿಗೆ ಹೋಗಿ ಎರಡು ಬ್ಯಾಟಿ ಹಾಕಿಸಿ ಬರುತ್ತಾರೆ. ರಾತ್ರಿಯೆಲ್ಲಾ ಗುಡಿಯ ಆವರಣದಲ್ಲಿ ಡೊಳ್ಳಿನ ವಾಲಗ ನಡೆಯುತ್ತವೆ. ನಸುಕಿನ ವೇಳೆಯಲ್ಲಿ ಗುಡಿಯ ಪೂಜಾರಿ ಡೊಳ್ಳಿನ ಮೇಲೆ ಏರಿ ನಿಂತು ಮಳೆಯನ್ನು ಇನ್ನು ಇಂತಿಷ್ಟು ದಿವಸದಲ್ಲಿ ಕೊಡುತ್ತೇನೆ ಎಂದು ಭರವಸೆ ಕೊಡುತ್ತಾನೆ. "ಇನ್ನು ಒಂದು ವಾರದಾಗ ದಂಡೆಬ್ಬಿಸ್ತಿನಲೇ ಗಾಣಿ ಮಿಣಿ" ಎಂದು ನುಡಿ ಆದರೆ ಒಂದು ವಾರದಲ್ಲಿ ಮೋಡಗಳು ದಂಡೆದ್ದು ಬಂದು ಮಳೆ ಖಂಡಿತವಾಗಿಯೂ ಆಗುತ್ತದೆ ಎಂದು ಜನ ನಂಬಿದ್ದಾರೆ. ಬಾದಾಮಿ ಅಮಾವಾಸ್ಯೆಯ ಸಂದರ್ಭದಲ್ಲಿಯೇ ಹೇಳಿಕೆಯಲ್ಲಿ 'ಇದಿಮಾಯಿ ರಂಡಿ' ಇದರಿಗಿ ಬಂದ್ಲು ಎನ್ನುವಂಥ ಮಾತು ಸೇರಿಕೊಂಡಿರುತ್ತದೆ. ಅದರ ಮುಂದಿನ ಭಾಗದಲ್ಲಿ ಭೂತ್ಯಾನ ಹಚ್ಚಿ ಬಯಲು ಮಾಡೀನಿ ಎಂಬ ಭರವಸೆಯೂ ಇರುತ್ತದೆ. ಈ ಎಳೆಯನ್ನು ಹಿಡಿದುಕೊಂಡು ರೈತಜನ ಮಳೆ ಬರದಿದ್ದರೆ ಇದೆಲ್ಲಾ ಇದಿಮಾಯಿ ರಂಡಿಯದೇ ಕರಾಮತ್ತು ಎಂದು ಭಾವಿಸುತ್ತಾರೆ. ಹಾಗೂ ಭೂತಾಳಸಿದ್ಧನನ್ನು ಇದಿಮಾಯಿ ರಂಡಿ ಒಡ್ಡಿದ ಸಮಸ್ಯೆಯನ್ನು ಪರಿಹರಿಸಬಲ್ಲ ಶಕ್ತಿಯುಳ್ಳಾತ ಎಂದು ನಂಬಿರುತ್ತಾರೆ. ಆ ಕಾರಣವಾಗಿಯೇ ಇಂಥ ಸಂದರ್ಭದಲ್ಲಿ ಹೇಳಿಕೆ ನಡೆಯಿಸುವಾಗ ಸಮಸ್ಯೆ ಪರಿಹರಿಸುವ ಭೂತಾಳಸಿದ್ಧನನ್ನೂ ಸಂಪ್ರೀತಿಗೊಳಿಸುವ ಸಲುವಾಗಿ ಅವನಿಗೆ ಜೋಡು ಬ್ಯಾಟಿಯನ್ನು ಹಾಕಿಸುತ್ತಾರೆ.[೬೮]

೪.೨.೧೨ ಸಾಯುವವರೆಗೂ ಮುಖಕಟ್ಟಬೇಕು

ಹೇಳಿಕೆ ಮಾಡುವವರ ಬಗೆಗೆ ಕಲ್ಲೂರಿನಲ್ಲಿ ಒಂದು ವಿಶಿಷ್ಟವಾದ ನಂಬಿಕೆಯಿದೆ. ಈಗಾಗಲೇ ಗಮನಿಸಿರುವಂತೆ ಈ ಊರಿನಲ್ಲಿ ಹೇಳಿಕೆ ಮಾಡುವಾಗ ಹೇಳಿಕೆ ಮಾಡುವ ಪೂಜಾರಿ ತನ್ನ ಮುಖಕ್ಕೆ ದೇವರ

ಕಟ್ಟಿಗೆಯ ಮುಖ ಕಟ್ಟಿಕೊಳ್ಳುತ್ತಾನೆ. ಒಂದು ಸಲ ಒಬ್ಬ ಪೂಜಾರಿಗೆ ಹೇಳಿಕೆ ಮಾಡುವ ಹೊಣೆಗಾರಿಕೆ ಬಂತೆಂದರೆ ಆತನು ಪ್ರತಿವರ್ಷ ಹೇಳಿಕೆ ಮಾಡುತ್ತಾ ಹೊಗಬೇಕು. ವಯಸ್ಸಾದ ಮೇಲೆ ತಮ್ಮ ಜವಾಬ್ದಾರಿಗಳನ್ನು ತಮ್ಮ ವಂಶದ ಹರೆಯದವರಿಗೆ ವರ್ಗಾಯಿಸುವುದು ಸಾಮಾನ್ಯ ಸಂಗತಿ. ಆದರೆ ಕಲ್ಲೂರಿನಲ್ಲಿ ಪೂಜಾರಿ ಒಂದು ಸಲ ಮುಖಕಟ್ಟಿಕೊಂಡು ಹೇಳಿಕೆ ಮಾಡಲು ಪ್ರಾರಂಭಿಸಿದನೆಂದರೆ ಅವನು ಎಷ್ಟೇ ಮುಪ್ಪಾದರು ಬಾದಾಮಿ ಅಮಾವಾಸ್ಯೆಗೆ ಮುಖ ಕಟ್ಟಲೇಬೇಕು. ಆತ ತೀರಿ ಹೋದ ನಂತರವೇ ಆ ವಂಶದವರೊಬ್ಬರು ಮುಖ ಕಟ್ಟಿಕೊಳ್ಳಬೇಕು. ಪಟ್ಟಣದ ಬಾಸಿಂಗ, ಕಟ್ಟಿಗೆಯ ಮುಖ, ಕೈಯಲ್ಲಿಯ ಬೆಳ್ಳಿಯ ಬೆತ್ತ ಮೈಮೇಲೆ ಭಾರವಾದ ಕಂಬಳಿ ಇವೆಲ್ಲವನ್ನು ಹಾಕಿಕೊಂಡು ಆಟವಾಡುತ್ತಾ, ಕುಣಿಯುತ್ತ ಊರು ಸುತ್ತುತ್ತ ಡೊಳ್ಳೆರಿ ಹೇಳಿಕೆ ಮಾಡಲು ದೈಹಿಕವಾಗಿ ಅಪಾರ ಬಲ ಬೇಕಾಗುತ್ತದೆ. ಹರೆಯದ ಹುಡುಗರೇ ಹೇಳಿಕೆ ಮಾಡಿ ಮುಖ ತೆಗೆದರೆಂದರೆ ಹಿಂಡಿ ಹಿಪ್ಪೆಯಾಗಿರುತ್ತಾರೆ. ಹೀಗಿರುವಾಗ ವಯಸ್ಸಾದವರಿಗೆ ದೈಹಿಕವಾಗಿ ತುಂಬಾ ದಣಿವಾಗುತ್ತಿದೆ. ಆದಾಗ್ಯೂ ಒಂದು ಸಲ ಮುಖ ಕಟ್ಟಿಕೊಂಡರೆಂದರೆ ಸಾವಿನೊಂದಿಗೇ ಅವರ ಆ ಚಾಜು ಮುಕ್ತಾಯವಾಗುತ್ತದೆ.[೩೯]

೪.೨.೧೩ ಇನಾಮಿ ಜಮೀನಿನಲ್ಲಿ ಪ್ರಥಮ ಕೂರಿಗೆ

ಉತ್ತರಿ ಮಳೆ ಹಾಗೂ ಬಿತ್ತನೆಯ ಕೆಲಸಕ್ಕೆ ನಿಕಟವಾದ ಸಂಬಂಧವಿದೆ. 'ಉತ್ತರಿ ಬಿತ್ತರಿ' ಎಂಬ ನಾಣ್ಣುಡಿ ಉತ್ತರ ಕರ್ನಾಟಕದ ಭಾಗದಲ್ಲಿ ಪ್ರಚಲಿತವಿದೆ. ಜಮಖಂಡಿ ತಾಲೂಕಿನ ಕುಂಚನೂರಿನಲ್ಲಿ ಮಾದಣ್ಣ (ಅಮೋಘಸಿದ್ಧನ ಮೊಮ್ಮಗ) ನೆಲೆಸಿದ್ದಾನೆ. ಅವನ ಕುರಿತು ಉತ್ತರಿಯ ಪ್ರಾರಂಭದ ದಿನಗಳಲ್ಲಿ ಉತ್ಸವ ನಡೆಯುತ್ತದೆ. ಅಂದಿನ ಬೆಳಗಿನ ಸಮಯಕ್ಕೆ ಪ್ರಸ್ತದೊಂದಿಗೆ ಉತ್ಸವ ಮುಗಿಯುತ್ತದೆ. 'ಪ್ರಸ್ತ' ಮುಗಿಸಿಯೇ ಈ ಊರಿನ ರೈತರು ಕೂರಿಗೆಯ ಮೇಲೆ ಕೈ ಇಡುತ್ತಾರೆ. ಹಾಗೆ ಬಿತ್ತನೆ ಪ್ರಾರಂಭಿಸುವ ಪೂರ್ವದಲ್ಲಿ ಈ ಗುಡಿಯ ಪೂಜಾರಿಯವರಿಗೆ ಇರುವ ಇನಾಮಿ ಜಮೀನಿನಲ್ಲಿ ಪ್ರಥಮ ಕೂರಿಗೆ ಹಾಕಿ ಬಿತ್ತನೆಗೆ ಚಾಲನೆ ನೀಡಲಾಗುತ್ತದೆ. ಇನಾಮಿ ಜಮೀನಿನಲ್ಲಿ ಬಿತ್ತನೆ ಪ್ರಾರಂಭವಾಗದ ಹೊರತು ಈ ಊರಿನ ಯಾರೂ ತಮ್ಮ ಹೊಲದಲ್ಲಿ ಬಿತ್ತನೆಯನ್ನು ಪ್ರಾರಂಭಿಸುವುದಿಲ್ಲ.

೪.೨.೧೪ ಪೂಜಾರಿ ಸತ್ತರ ಜೈನರಿಗೆ ಸೂತಕ

ಕುಂಚನೂರಿನ ಮಾದಣ್ಣನ ಗುಡಿಯ ಮಾರಾಯರು ತೀರಿಕೊಂಡರೆ ಆ ಊರಿನ ಜೈನ ಪಾಟೀಲರ ಮನೆಯವರು ಸೂತಕ ಆಚರಿಸುತ್ತಾರೆ. ಇಲ್ಲಿ ಮಾರಾಯರು ತೀರಿಕೊಂಡರೆ ಬಡವರಿಗೆ ದಾನ, ಧರ್ಮ ಮಾಡುವ ಕೆಲಸ ಕೂಡ ಜೈನ ಗೌಡರದೇ ಆಗಿರುತ್ತದೆ. ಆ ಸಂದರ್ಭದಲ್ಲಿ ಜೈನ ಗೌಡರ ಮನೆಯವರೆಲ್ಲಾ ಹನ್ನೊಂದು ದಿವಸ ಸೂತಕ ಆಚರಿಸುತ್ತಾರೆ. ಸೂತಕದಲ್ಲಿ ಅವರು ತಮ್ಮ ಮೇಲೆ ನಿಷೇಧವನ್ನು ಹೇರಿಕೊಳ್ಳುತ್ತಾರೆ. ಈ ಹನ್ನೊಂದು ದಿವಸಗಳವರೆಗೆ ಅವರು ಹಾಲನ್ನು ಉಣ್ಣುವುದಿಲ್ಲ. ಯಾಕೆ ಹೀಗೆ ಎಂದು ಕೇಳಿದರೆ ಜೈನರು ಹಾಗೂ ಮಾರಾಯರು ಅಣ್ಣತಮ್ಮರಂತೆ ಪಾಲಿಸಿಕೊಂಡು ಬಂದಿದ್ದಾರೆ ಎಂದು

ಹೇಳಿದರು. ಅಲ್ಲದೇ ತುಂಬಾ ಕುತೂಹಲಕಾರಿಯಾದ ವಿಷಯವನ್ನು ಪ್ರಸ್ತಾಪಿಸಿದರು. ಕುಂಚನೂರಿನಲ್ಲಿರುವ ಜೈನರು ಮೂಲತಃ ಆನೆಗುಂದಿಯವರು. ಅಲ್ಲಿಯ ಕದನದ ಕಾರಣದಿಂದ ಆನೆಗುಂದಿಯನ್ನು ತೊರೆದು ಬರಿಗೈಯಲ್ಲಿ ಕುಂಚನೂರಿಗೆ ವಲಸೆ ಬಂದರು. ಕುಂಚನೂರಿನ ಹುಡೇದ ಬಾಜು ವಾಸ ಮಾಡಿಕೊಂಡಿದ್ದರು. ಇಲ್ಲಿಯೇ ಸಮೀಪದಲ್ಲಿದ್ದ ಮಾದಣ್ಣನ ಗುಡಿಯ ರಾಜಂಗಳ ಸೇವೆ ಮಾಡಿಕೊಂಡು ಉಪಜೀವನ ನಡೆಸುತ್ತಿದ್ದರು. ಒಂದು ಸಲ ಈ ಊರಿಗೆ ಒಬ್ಬ ಫೌಜದಾರ ಬಂದ. ಪೂಜಾರಿಕೆಯೊಂದಿಗೆ ಗೌಡಕಿಯನ್ನು ಮಾಡಿಕೊಂಡಿದ್ದ ಗುಡಿಯ ಮಾರಾಯರನ್ನು ಈಗಿಂದೀಗಲೇ ಮಹಾರಾಜರನ್ನು ಭೆಟ್ಟಿಯಾಗಲು ಬರಬೇಕೆಂದು ಒಳ್ಳೆಯ ದರ್ಪದಿಂದ ಹೇಳಿದ. ಫೌಜದಾರನೊಬ್ಬನ ದರ್ಪವನ್ನು ನೋಡಿ ಮಾರಾಯರಿಗೆ ತುಂಬಾ ಬೇಸರವಾಯಿತು. ತಮಗಿರುವ ಗೌಡಕಿಯ ಕಾರಣದಿಂದಲೇ ತಾವು ಫೌಜದಾರನ ದರ್ಪಕ್ಕೆ ತುತ್ತಾಗಬೇಕಾಯಿತು ಈ ಗೌಡಕಿಯೇ ಬೇಡ, ಕೇವಲ ಪೂಜಾರಿಕೆ ಸಾಕು ಅನ್ನಿಸಿತು. ಆಗ ಅಲ್ಲಿಯೇ ರಾಜಂಗಳದ ಸೇವೆ ಮಾಡುತ್ತಿದ್ದ ಜೈನರಿಗೆ ತಮ್ಮ ಗೌಡಕಿಯನ್ನು ಬಿಟ್ಟುಕೊಟ್ಟು ಕೇವಲ ಗುಡಿಯ ಪೂಜಾರಿಕೆಯನ್ನು ಉಳಿಸಿಕೊಂಡು ಅದರೊಂದಿಗೆ ತಮ್ಮ ಪಾಲಿನ ಇನಾಮಿ ಹೊಲವನ್ನು ಅವರಿಗೆ ಬಿಟ್ಟುಕೊಟ್ಟರು. ಅಂದಿನಿಂದ ಈ ಊರಿನ ಗೌಡಕಿ ಚತುರ್ಥ ಜೈನ ಮನೆತನದವರಿಗೆ ಬಂದಿತು.

ಈ ಹಿನ್ನೆಲೆಯಲ್ಲಿ ಮಾದಣ್ಣನ ಉತ್ಸವದ ಸಂದರ್ಭದಲ್ಲಿ ಜೈನಗೌಡರ ಪಾಲುದಾರಿಕೆ ಢಾಳಾಗಿ ಗೋಚರಿಸುತ್ತದೆ. ಈ ಊರಿನ ಜೈನಗೌಡರು ತಮ್ಮ ಮನೆಯ ಜಗುಲಿಯ ಮೇಲೆ ಮಾದಣ್ಣನ ಮೂರ್ತಿಯನ್ನಿಟ್ಟು ಪೂಜಿಸುತ್ತಾರೆ. ಮಾದಣ್ಣ ಜೈನರ ಜಗುಲಿ ಏರಿದುದರ ಕುರಿತು ಒಂದು ಕಥೆಯನ್ನು ಹೇಳುತ್ತಾರೆ. ಈ ಊರಿನ ಜೈನ ಗೌಡರ ಮನೆಯಲ್ಲಿ ಮಲ್ಲಪ್ಪನೆಂಬ ಪಾಮರನಿದ್ದ. ಒಂದು ಸಲ ಈ ಮಲ್ಲಪ್ಪ ಊರಿನ ಪಕ್ಕದಲ್ಲಿ ತುಂಬಿ ಹರಿಯುವ ಕೃಷ್ಣಾ ಹೊಳೆಯಲ್ಲಿ ಹಾರಿಕೊಂಡ. ಸತ್ತೇಹೋದ ಎಂದು ಎಲ್ಲರೂ ಭಾವಿಸಿದರು. ಹಿರೇಹೊಳೆಯ ಪಾಲದ ಎಂದು ಭಾವಿಸಿರುವಂತೆಯೇ ಆತ ಈಜಿ ದಡ ಸೇರಿದ. ಹೀಗೆ ಬರುವಾಗ ಕೈಯಲ್ಲಿ ಒಂದು ಸಣ್ಣ ಬೆಳ್ಳಿಯ ಮಂಚವನ್ನು ತಂದಿದ್ದ. ಯಾಕೆ ಹೀಗೆ ಹೊಳೆಗೆ ಹಾರಿಕೊಂಡಿ ಎಂದು ಕೇಳಿದರೆ ನಮ್ಮ ಮನೆಯ ಜಗುಲಿಯ ಮೇಲಿರುವ ಮಾದಣ್ಣನಿಗೆ ಮಲಗಲು ಮಂಚವಿರಲಿಲ್ಲ. ಆ ಮಂಚ ಹೊಳೆಯಲ್ಲಿ ದೊರೆಯುತ್ತದೆ ಎಂದು ಕನಸು ಬಿದ್ದಿತು. ಹೀಗಾಗಿ ಹೊಳೆಗೆ ಹಾರಿದೆ ಎಂದು ಹೇಳಿದನು. ಆ ಮಂಚವು ಇಂದಿಗೂ ಜೈನಗೌಡರ ಜಗುಲಿಯ ಮೇಲಿದೆ.

ದೀಪಾವಳಿ ಹಾಗು ಯುಗಾದಿಯ ಸಂದರ್ಭದಲ್ಲಿ ಜೈನ ಗೌಡರ ಮನೆಯಿಂದಲೇ ಪ್ರಥಮ ಎಡೆಯನ್ನು ತಂದು ಮಾದಣ್ಣನಿಗೆ ಹಿಡಿಯಲಾಗುತ್ತದೆ. ಉತ್ಸವದ ಸಂದರ್ಭದಲ್ಲಿ ಮಾದಣ್ಣನ ಪಾಲಕಿ ಮೆರವಣಿಗೆಯಲ್ಲಿ ಹೊರಟಾಗ ಮೊದಲ ಆರತಿ ಬೆಳಗುವವರು ಜೈನ ಗೌಡರ ಮನೆಯ ಮಹಿಳೆಯರು. ಜೈನ ಗೌಡರ ಮನೆಯಲ್ಲಿ ಮದುವೆ ನಡೆದರೆ ಗುಗ್ಗಳ ಎಬ್ಬಿಸುತ್ತಾರೆ. ಮದುಮಗ ಹಾಗೂ ಮದುಮಗಳು ತಲಾ ಒಂದೊಂದು ಗುಗ್ಗಳ

ಹೊತ್ತುಕೊಂಡು ತಮ್ಮ ಮನೆಯಿಂದ ಮಾದಣ್ಣನ ಗುಡಿಯವರೆಗೆ ಮೆರವಣಿಗೆ ಸಮೇತ ಬರುತ್ತಾರೆ. ಈ ಗುಗ್ಗಳ ಸೇವೆಯಾದ ನಂತರವೇ ಅವರ ಜೈನ ಸಂಪ್ರದಾಯದ ಪ್ರಕಾರ ಮದುವೆ ನಡೆಯುತ್ತದೆ.[೪೧]

೪.೨.೧೫ ಶಾವರಸಿದ್ಧನಿಗೆ ಹೊಸ ಕಂಬಳಿ

ಇದೇ ಊರಿನ ಹಂಜಿ ಎನ್ನುವವರ ಮನೆಯಲ್ಲಿ ಶಾವರಸಿದ್ಧನಿದ್ದಾನೆ. ಈ ಶಾವರಸಿದ್ಧನ ಬಗೆಗೆ ಈ ಹಿಂದೆ ವಿವರವಾಗಿ ಬರೆಯಲಾಗಿದೆ. ಹಂಜಿಯವರು ಜಾತಿಯಿಂದ 'ಬಣಜಿಗರು.' ಹಂಜಿಯವರ ಮನೆಯಲ್ಲಿ ಶಾವರಸಿದ್ಧ ಎಂದು ಬಂದು ನೆಲೆಸಿದ ಎನ್ನುವ ಬಗೆಗೆ ಅವರಿಗಾಗಲಿ, ಊರಿನವರಿಗಾಗಲಿ ಯಾವದೇ ರೀತಿಯ ಮಾಹಿತಿಯಿಲ್ಲ. ಈ ಮನೆಯ ಒಂದು ಕೋಣೆಯಲ್ಲಿ ಶಾವರಸಿದ್ಧನ ಮೂರ್ತಿಯನ್ನಿಟ್ಟು ಪೂಜಿಸುತ್ತಾರೆ. ಈ ಶಾವರಸಿದ್ಧನ ಪೂಜೆಗೆ ಪುರುಷರೇ ಬೇಕು. ಮಹಿಳೆಯರು ಅಪ್ಪಿತಪ್ಪಿ ಈ ಕೋಣೆಯನ್ನು ಪ್ರವೇಶಿಸುವುದಿಲ್ಲ. ಹಂಜಿಯವರ ಮನೆಯಲ್ಲಿ ಮದುವೆ ನಡೆದರೆ ಶಾವರಸಿದ್ಧನಿಗೆ ಹೊಸ ಕಂಬಳಿಯನ್ನು ಹೊದಿಸುವ ಪದ್ಧತಿಯಿದೆ. ಅದೂ ಅಲ್ಲದೇ ಗ್ರಾಮ ದೇವತೆಯಾದ ಮದಣ್ಣನಿಗೆ ಹಬ್ಬ ಮಾಡಿಸುತ್ತಾರೆ.[೪೨]

೪.೨.೧೬ ಹರಕೆಗಳು

ಅಪಾರ ನಂಬಿಕೆಯನ್ನಿಟ್ಟುಕೊಂಡ ಭಕ್ತರು ಅಮೋಘಸಿದ್ಧ ಪರಂಪರೆಯ ದೇವರಲ್ಲಿ ಹರಕೆ ತೀರಿಸಲು ಬರುತ್ತಾರೆ. ಮನದಲ್ಲಿ ಏನೋ ಒಂದು ಸಂಕಲ್ಪ ಮಾಡಿಕೊಂಡು ಹಾಗೆ ನಡೆದರೆ ಹರಕೆ ಸಲ್ಲಿಸುವುದಾಗಿ ಬೇಡಿಕೊಂಡಿರುತ್ತಾರೆ. ಇದು ನೇರವಾಗಿ ದೇವರು ಹಾಗೂ ಭಕ್ತನ ನಡುವಿನ ಅಂತರಂಗದ ಸಂಬಂಧ. ತಾವು ಸಂಕಲ್ಪ ಮಾಡದಿಂತೆ ಸಂಭವಿಸಿತೆಂದರೆ ಹರಕೆ ತೀರಿಸಲು ಮಾರಾಯರಲ್ಲಿಗೆ ಬರುತ್ತಾರೆ. ಹರಕೆ ಇಂಥಹದೇ ಆಗಬೇಕೆಂದೇನಿಲ್ಲ. ಆ ಗಳಿಗೆಯಲ್ಲಿ ಭಕ್ತನ ಮನಸ್ಸಿನಲ್ಲಿ ಏನು ಹೊಳೆಯುತ್ತದೆಯೋ ಅದು. ಇಲ್ಲಿ ಅಂಥ ಕೆಲವು ಹರಕೆಗಳನ್ನು ವಿವರಿಸಲಾಗಿದೆ.

೪.೨.೧೬.೧ ದೇವರ ಆಳುಮಗ : ಅಮೋಘಸಿದ್ಧನಿಗೆ ಮೂವರು ಪುಣ್ಯದ ಮಕ್ಕಳು. ಅವರಲ್ಲಿ ಕರಣಿ ಮಲಕಾರಿಸಿದ್ಧ ಎರಡನೆಯವನು. ಅವನು ಗೋಕಾಕ ತಾಲೂಕಿನ ಕೆಮ್ಮನಕೋಲದಲ್ಲಿ ನೆಲೆಸಿದ್ದಾನೆ. ಈ ದೇವರಿಗೆ ಭಕ್ತರು ವಿಶಿಷ್ಟವಾದ ಹರಕೆಯನ್ನು ಹೊರುತ್ತಾರೆ. ಅದೇ 'ದೇವರ ಆಳುಮಗ' ಆಗುವುದು. ಒಂದೊಮ್ಮೆ ಒಬ್ಬ ವ್ಯಕ್ತಿ 'ದೇವರ ಆಳು' ಎಂದು ಒಂದು ನಿರ್ಧಿಷ್ಟ ಕಾಲಾವಧಿಯವರಿಗೆ ಹರಕೆ ಹೊತ್ತನೆಂದರೆ ಆತನು ದೇವರಿಗೆ ಸಲ್ಲಿಸುವ ಯಾವುದೇ ಸೇವೆಗೆ ಯಾವುದೇ ರೀತಿಯ ಫಲವನ್ನು ನಿರೀಕ್ಷಿಸುವುದಿಲ್ಲ. ಅವನು ದೇವರಿಗೆ ಸಲ್ಲಿಸುವ ಎಲ್ಲಾ ಸೇವೆಗಳು ಪುಕ್ಕಟೆಯಾಗಿರುತ್ತವೆ. ಕೆಲವು ಜನ ತಿಂಗಳಮಟ್ಟಿಗೆ, ಆರು ತಿಂಗಳಮಟ್ಟಿಗೆ, ವರ್ಷದ ಮಟ್ಟಿಗೆ, ಮತ್ತೆ ಕೆಲಜನ ಜೀವನಪೂರ್ತಿ 'ದೇವರ ಆಳುಮಗ' ಹರಕೆ ಹೊರುವ ಪದ್ಧತಿಯಿದೆ.[೪೩]

೪.೨.೧೬.೨ ದಿಮ್ಮ ಇಡುವುದು : ದೇವರಲ್ಲಿ ಏನೇನೋ ಬೇಡಿಕೊಂಡ ಭಕ್ತರು ತಮ್ಮ ಮನೆಯಲ್ಲಿ ದಿಮ್ಮ ಇಡಿಸಿಕೊಳ್ಳುವುದಾಗಿ ಹರಕೆ ಹೊರುತ್ತಾರೆ. 'ದಿಮ್ಮ' ಅಂದರೆ 'ಡೊಳ್ಳು' ದಿಮ್ಮ ಇಡಿಸುವುದು

ಎಂದರೆ ಮನೆಯಲ್ಲಿ ನಿತ್ಯವೂ ಡೊಳ್ಳಿನ ಹಾಡು ನಡೆಯಿಸಿಕೊಡುವುದು. ಹರಕೆ ಹೊತ್ತವರು ಒಬ್ಬ ಡೊಳ್ಳಿನ ಹಾಡುಗಾರನನ್ನು ತಮ್ಮ ಮನೆಗೆ ಬರಲು ಆಮಂತ್ರಿಸುತ್ತಾರೆ. ಸಾಮಾನ್ಯವಾಗಿ ಈ ಕಾರ್ಯಕ್ರಮ ನಾಗರ ಪಂಚಮಿಗೆ ಪ್ರಾರಂಭವಾಗಿ ಚೌತಿಗೆ ಮುಗಿಯುತ್ತದೆ. ವರ್ಷಕ್ಕೊಂದಾವರ್ತಿ ಮೂರು ವರ್ಷ ಹಾಡನ್ನು ನಡೆಯಿಸಿಕೊಡುತ್ತಾರೆ. ಡೊಳ್ಳಿನ ಹಾಡುಗಾರ ನಿತ್ಯವೂ ಸಾಯಂಕಾಲ ಹರಕೆ ಹೊತ್ತವರ ಮನೆಗೆ ಬಂದು ದೇವರ ಕುರಿತು ಹಾಡುಗಳನ್ನು ಹಾಡುತ್ತಾನೆ. ಹಾಡುಗಾರ ಹಾಡುವಾಗ ದಿಮ್ಮಿನ ಮೇಲೆ ಸಣ್ಣಗೆ ತಾಳವನ್ನು ಹಾಕುತ್ತಿರುತ್ತಾನೆ. ಹಾಡನ್ನು ಕೇಳಲು ಬಂದವರಿಗೆ ಹರಕೆ ಹೊತ್ತ ಮನೆಯವರು ಎಲೆ ಅಡಿಕೆ, ಚಹಾ ಪಾನೀಯ ಮಾಡಿಸುತ್ತಾರೆ. ಅದೂ ಅಲ್ಲದೆ ಹಾಡಲು ಬಂದವರಿಗೆ ಪ್ರತಿ ಸೋಮವಾರಕ್ಕೊಮ್ಮೆ ಹರಕೆ ಹೊತ್ತ ಮನೆಯವರು ಪ್ರಸಾದ ವ್ಯವಸ್ಥೆ ಮಾಡಿಸುತ್ತಾರೆ. ಹಾಡಲು ಬಂದವರು ತಮ್ಮ ಸೇವೆಗೆ ಪ್ರತಿಯಾಗಿ ಹರಕೆ ಮನೆಯವರಿಂದ ಏನನ್ನೂ ಬಯಸುವುದಿಲ್ಲ. ಹಾಡುಗಾರರಿಗೆ ಇದೊಂದು ರೀತಿಯ ಸೇವೆ. 'ಮನುಷ್ಯ ಕೊಟ್ಟಿದ್ದು ಸಾಲೋದಿಲ್ಲ ದೇವರು ಕೊಟ್ಟಿದ್ದು ಸರಿಯೋದಿಲ್ಲ' ಎಂದು ಹಾಡುಗಾರರು ಅಚಲವಾಗಿ ನಂಬಿರುತ್ತಾರೆ.[೪೪]

೪.೨.೧೬.೩ **ಭಂಡಾರ ಪೂಜೆ :** ಅಥಣಿ ತಾಲೂಕಿನಲ್ಲಿ ಹೊನ್ನಮೋಳೆ ಎಂಬ ಗ್ರಾಮವಿದೆ. ಅಲ್ಲಿನ ಸ್ಥಾನಿಕ ದೇವರು ಅಮೋಘಸಿದ್ಧನ ಮೊಮ್ಮಗನಾದ ಓಗಸಿದ್ಧ. ಈ ದೇವರ ಭಕ್ತರು ತಮ್ಮ ಇಷ್ಟಗಳನ್ನು ಪೂರೈಸಿದರೆ ಭಂಡಾರ ಪೂಜೆ ಮಾಡಿಸುವುದಾಗಿ ಹರಕೆ ಹೊರುತ್ತಾರೆ. ಅಮ್ಮೋಘಸಿದ್ಧ ಪರಂಪರೆಯ ಸಿದ್ಧರ ಮೂರ್ತಿಗಳು ಕಲ್ಲು ಇಲ್ಲವೇ ಲೋಹದಿಂದ ಮಾಡಿದವುಗಳಾಗಿರುತ್ತವೆ. ಹೇಳಿಕೆ ಮಾಡುವಾಗ ಬಳಸುವ ಸಿದ್ಧರ ಮುಖಗಳು ಕಟ್ಟಿಗೆಯದಾಗಿರುತ್ತವೆ. ಕಲ್ಲಿನ ಸಿದ್ಧರ ಮೂರ್ತಿಗಳಿಗೆ ಸಾಮಾನ್ಯವಾಗಿ ಭಂಡಾರ ಪೂಜೆ ಮಾಡಿಸುತ್ತಾರೆ. ಹರಕೆ ಹೊತ್ತ ಭಕ್ತರು ನಿಗದಿತ ದಿನದಂತೆ ತಮ್ಮ ಹೆಸರಿನಲ್ಲಿ ಭಂಡಾರ ಪೂಜೆ ಮಾಡಿಸಬೇಕೆಂದು ಮಾರಾಯರಲ್ಲಿ ಕೇಳಿಕೊಂಡಿರುತ್ತಾರೆ. ಈ ಭಂಡಾರವನ್ನು ತಯಾರಿಸಿ ಕೊಡುವ ಕೆಲಸವನ್ನು ಕೆಲವೊಂದು ದೇವಸ್ಥಾನದಲ್ಲಿ ಹಿರಿಕುರುಬರು ಮಾಡಿಕೊಡುತ್ತಾರೆ. ಭಕ್ತರು ಹಿರಿಕುರುಬರಿಗೆ ಅರಿಸಿಣದ ಬೋಟುಗಳನ್ನು ತಂದು ಕೊಟ್ಟಿರುತ್ತಾರೆ. ಅವುಗಳನ್ನು ನೆನೆಯಿಸಿ, ಒಣಗಿಸಿ ಕುಟ್ಟಿ, ಬೀಸಿ, ಸಾಣಿಸಿ, ಮೃದುವಾದ ಭಂಡಾರವನ್ನು ತಯಾರಿಸಲಾಗುತ್ತದೆ. ಭಂಡಾರ ಪೂಜೆಯ ದಿವಸ ಬೆಳಗಿನ ಸಮಯಕ್ಕೆ ಭಕ್ತರು ಎಣ್ಣೆಯನ್ನು ತರುತ್ತಾರೆ. ಅಷ್ಟೊತ್ತಿಗೆ ಮಾರಾಯರು ಸೀತಾಳದಿಂದ ದೇವರ ಮೂರ್ತಿಯನ್ನು ಸ್ವಚ್ಛವಾಗಿ ತೊಳೆದಿರುತ್ತಾರೆ. ಭಕ್ತರು ತಂದ ಎಣ್ಣೆಯನ್ನು ಬಳಸಿ ದೇವರ ಮೈಮೇಲೆ ಭಂಡಾರ ಲೇಪಿಸುತ್ತಾರೆ. ಎಣ್ಣೆಯಿಂದ ದೇವರ ಮೈ ತಪತಪ ತೊಯ್ದು ನಂತರ ಅದರ ಮೇಲೆ ಭಂಡಾರ ಲೇಪನ ಮಾಡುತ್ತಾರೆ. ಭಂಡಾರ ಲೇಪಿತವಾದ ದೇವರ ಮೂರ್ತಿಗೆ ಒಂದು ರೀತಿಯ ಆಕರ್ಷಕ ಸೊಬಗು ಮೂಡುತ್ತದೆ. ಎಣ್ಣೆ ಹೆಚ್ಚಿನ ಪ್ರಮಾಣದಲ್ಲಿ ಹಚ್ಚಿದ ಭಾಗದಲ್ಲಿ ಭಂಡಾರ ಹಸಿಹಸಿಯಾಗಿ ಕಾಣುತ್ತದೆ. ಆಗ ಭಾವುಳ್ಳ ಭಕ್ತರಿಗೆ ದೇವರು ಬೆವರಿದಂತೆ ಕಾಣುತ್ತಾನೆ. ಅದನ್ನು ವರ್ಣಿಸುವ ಹಾಡು ಹೀಗಿದೆ :

ಶಿವನೆ ಸೋಮಯ್ಯನ ಶಿಸುಮಗ ಹರಣದ ಕೆರಿ ನಮ್ಮೊಡಿಯಾನೆ
ಹೂವಿನೊಳಗವ ಹುದುಗ್ಯಾನೆ ಮಾಲ್ಯೊಳಗ ಮಾರಿ ತೋರ್ಯಾನೆ
ಮಾಲ್ಯೊಳಗ ಮಾರಿ ತೋರ್ಯಾನ ದೇವರ ಭಂಡರದೊಳಗವ ಬೆವತಾನೆ[೪೫]

ಭಕ್ತರು ಮಾಡಿಕೊಂಡು ಬಂದ ನೈವೇದ್ಯವನ್ನು ದೇವರಿಗೆ ಹಿಡಿದು ಆರತಿ ಎತ್ತಿ ಪೂಜೆ ಸಲ್ಲಿಸುತ್ತಾರೆ. ಇದೇ ದಿವಸ ಭಂಡಾರದಿಂದ ಲೇಪಿತಗೊಂಡ ದೇವರು ಭಕ್ತರಲ್ಲಿ ಅವರ್ಣನೀಯ ಭಕ್ತಿಭಾವ ಹೊಮ್ಮಿಸುತ್ತಲೇ ಇರುತ್ತಾನೆ. ಅಂದು ಸಂಜೆ ಭಂಡಾರ ಇಳಿಸುವ ಕಾರ್ಯಕ್ರಮವಿರುತ್ತದೆ. ದೇವರಿಗೆ ಲೇಪಿಸಿದ ಭಂಡಾರವನ್ನು ನಿಧಾನವಾಗಿ ತೆಗೆಯುವುದಕ್ಕೆ ಭಂಡಾರ ಇಳಿಸುವದು ಎಂದು ಕರೆಯುತ್ತಾರೆ. ಹೀಗೆ ಇಳಿಸಿದ ಭಂಡಾರವನ್ನು ಹಲವಾರು ದಿವಸಗಳವರೆಗೆ ಗುಡಿಗೆ ಬಂದ ಭಕ್ತರ ಹಣೆಗೆ ಮಾರಾಯರು ಹಚ್ಚುತ್ತಾರೆ. ನಾಲ್ಕು ಬೆರಳು ಹಾಗೂ ಹೆಬ್ಬೆರಳಿನ ಮಧ್ಯದಲ್ಲಿ ಸಿಗುವಷ್ಟು ಭಂಡಾರವನ್ನು ತೆಗೆದುಕೊಂಡು ಭಕ್ತರ ಹಣೆಗೆ ಬಳಿಯುತ್ತಾರೆ. ಹಣೆಯಲ್ಲಿ ಒಂದಿಷ್ಟು ಭಾಗವೂ ಉಳಿಯದಂತೆ ಭಂಡಾರ ಲೇಪಿತವಾಗುತ್ತದೆ. ದೇವರ ಮೈಯ ಭಂಡಾರ ತಮ್ಮ ಹಣೆಯ ಮೇಲೆ ಬಂದಾಗ ಭಕ್ತರು ಪುಳಕಿತಗೊಳ್ಳುತ್ತಾರೆ.

೪.೨.೧೬.೪ ಕಂಬಳಿ ಏರಿಸುವುದು : ಅಥಣಿ ತಾಲೂಕಿನ ಹೊನ್ನಮೋಳೆಯ ಓಗಸಿದ್ಧ ಮೊದಲ್ಗೊಂಡು ಅನೇಕ ಸಿದ್ಧರಿಗೆ ಭಕ್ತರು ಕಂಬಳಿ ಏರಿಸುವ ಹರಕೆ ಹೊರುತ್ತಾರೆ. ಹರಕೆ ಹೊತ್ತ ಭಕ್ತರು ಶ್ರದ್ಧಾಭಕ್ತಿಯಿಂದ ಕಂಬಳಿ ನೇಯುವ ನೇಕಾರನಿಂದ ಜೋಡಗಂಬಳಿಯನ್ನು ನೇಯಿಸಿ ಇಟ್ಟುಕೊಂಡಿರುತ್ತಾನೆ. ಮಾರಾಯರಲ್ಲಿಗೆ ಬಂದು ತಾವು ಕಂಬಳಿ ಏರಿಸುವ ಹರಕೆ ಹೊತ್ತಿರುವದಾಗಿ ತಿಳಿಸುತ್ತಾರೆ. ನಿಗದಿತ ದಿವಸದಂದು ಮಾರಾಯರು ಡೊಳ್ಳಿನ ವಾಲಗ ಹಾಗೂ ಅಪ್ತಾಗಿರಿಯೊಂದಿಗೆ ಭಕ್ತರ ಮನೆಗೆ ಹೋಗುತ್ತಾರೆ. ಭಕ್ತರ ಮನೆಯ ಗಂಡುಮಕ್ಕಳಲ್ಲಿ ಒಬ್ಬನು ಆ ಎರಡೂ ಕಂಬಳಿಗಳನ್ನು ದೊಡ್ಡ ಪರಾತದಲ್ಲಿ ಹೊತ್ತುಕೊಂಡು ಡೊಳ್ಳಿನ ವಾಲಗ ಅಪ್ತಗಿರಿಯೊಂದಿಗೆ ದೇವರ ಗುಡಿಗೆ ಬರುತ್ತಾನೆ. ಭಕ್ತರ ಮನೆಯಲ್ಲಿ ಬೆಲ್ಲ, ನೆನೆಗಡಲಿಯನ್ನು ಈ ಕಾರ್ಯಕ್ರಮಕ್ಕೆಂದೇ ಪ್ರಸಾದ ರೂಪದಲ್ಲಿ ತಯಾರಿಸಿಟ್ಟುಕೊಂಡಿರುತ್ತಾರೆ. ಮೆರವಣಿಗೆಯಲ್ಲಿ ತಂದ ಜೋಡಗಂಬಳಿಗಳನ್ನು ದೇವರ ಮೂರ್ತಿಯ ಸುತ್ತಲೂ ತಯಾರಿಸಿದ ಚೌಕಟ್ಟಿನ ಮೇಲೆ ಹೊದಿಸುತ್ತಾರೆ. ಅದಾದ ನಂತರ ದೇವರಿಗೆ ಆರತಿ ಎತ್ತುತ್ತಾರೆ. ಅಲ್ಲಿ ನೆರೆದ ಭಕ್ತರಿಗೆ ಬೆಲ್ಲ ನೆನೆಗಡಲೆಯ ಪ್ರಸಾದವನ್ನು ಹಂಚಲಾಗುತ್ತದೆ. ಈ ಕಂಬಳಿಗಳಿಗೆ ನಾಲ್ಕು ಏಣುಗಳು ಇರುತ್ತವೆ. ಮೂರು ಏಣುಗಳು ಬ್ರಹ್ಮ, ವಿಷ್ಣು, ಮಹೇಶ್ವರರ ಸಂಕೇತವೆಂದೂ, ನಾಲ್ಕನೆಯ ಸಣ್ಣ ಏಣು ಪಾರ್ವತಿಯ ಮುತ್ತಿನ ಎಳೆಯಂತಲೂ ಹೇಳುತ್ತಾರೆ. ಇಂಥ ಕಂಬಳಿಯನ್ನು ಮಾರಾಯರು ಅತ್ಯಂತ ಪೂಜ್ಯ ಭಾವನೆಯಿಂದ ನೋಡಿಕೊಳ್ಳುತ್ತಾರೆ. ಇದನ್ನು ಅವರು ನೆಲದ ಮೇಲೆ ಅಪ್ಪಿತಪ್ಪಿಯೂ ಇಡುವುದಿಲ್ಲ. ಇದ್ದರೆ ಅದು ಅವರ ಹೆಗಲ ಮೇಲೆ ಇರುತ್ತದೆ. ಇಲ್ಲವಾದರೆ ನೆಲಕ್ಕೆ ತಗುಲದ ಹಾಗೆ ಗುಡಿಯಲ್ಲಿ ಅದನ್ನು ಗೂಟಕ್ಕೆ ಜೋತು ಬಿಟ್ಟಿರುತ್ತಾರೆ. ಯಾವುದೇ ಸಂದರ್ಭದಲ್ಲಿ ಮಹಿಳೆಯರು ಈ ಕಂಬಳಿಯನ್ನು ಮುಟ್ಟುವುದಿಲ್ಲ. ಈ ಕಂಬಳಿಯನ್ನು ಅವರು ಹೋಮದ ಕಂಬಿ

[illegible]

[illegible]

[illegible]

ಎಂದು ಕರೆಯುತ್ತಾರೆ. ಅದು ಬಹುಶಃ ವ್ಯೋಮದ ಕಂಬಳಿ ಇದ್ದಿರಬಹುದು. ಅನೇಕ ಮಾರಾಯರು ಇಂಥ ಕಂಬಳಿಯನ್ನು ಬೀಸಿ ಮಳೆ ತರಿಸಿದ್ದಾರೆ ಎಂದು ಜನ ಅಚಲವಾಗಿ ನಂಬಿದ್ದಾರೆ. ಅಮೋಘಸಿದ್ಧನ ಮಾರಾಯರಿಗೆ ನಾಲ್ಕು ಏಣಿನ ಕಂಬಳಿಯಾದರೆ ಬೀರಪ್ಪ ಪರಂಪರೆಯ ಪೂಜಾರಿಗಳಿಗೆ ಮೂರು ಏಣಿನ ಕಂಬಳಿ ಇರುತ್ತದೆ. ಇದನ್ನೇ ಬಳಸಿ ಮಾರಾಯರು ತಾವೂ ಬೀರಪ್ಪನ ಪೂಜಾರಿಗಳಿಗಿಂತ ಶ್ರೇಷ್ಟವೆಂದು ಹೇಳಿಕೊಳ್ಳುತ್ತಾರೆ. ಬಿಳಿಕಂಬಳಿ(ಜಾಡಿ)ಯನ್ನು ರೇವಣಸಿದ್ಧನ ಒಡೆಯರು ಧರಿಸುವ ಕುರಿತು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ತಾವು ಸದಾ ಹೆಗಲ ಮೇಲೆ ಹಾಕಿಕೊಳ್ಳುವ ನಾಲ್ಕು ಏಣಿನ ಕಂಬಳಿಯ ಕುರಿತು ಇವರು ರಚಿಸಿಕೊಂಡು ಹಾಡು ಹೀಗಿದೆ :

ಕಂಬಳೆಪ್ಪ ಕಂಬಳಿ ಅರಿತವಗ ಕರಿಕಂಬಳಿ
ಅರಿದವಗ ಜೀವಕ್ಕ ಮುಂಬಳಿ
ಇಟ್ಟಲ್ಲಿ ಇರುವುದು ಕಂಬಳಿ
ಕರೆದಲ್ಲಿ ಬರುವುದು ಕಂಬಳಿ
ಹಾವಾಗಿ ಹರಿವುದು ಕಂಬಳಿ
ಚೇಳಾಗಿ ಚಿಮ್ಮುವುದು ಕಂಬಳಿ[೪೬]

ಇಂಥ ಕಂಬಳಿಯನ್ನು ಅಮೋಘಸಿದ್ಧ ಕೈಲಾಸದಿಂದ ಬರುವಾಗ ಶಿವನಿಂದ ಬೇಡಿ ಪಡೆದಿದ್ದಾನೆ ಎಂದು ಅವರು ನಂಬಿದ್ದಾರೆ. ಹೀಗಾಗಿ ಕಂಬಳಿಯ ಬಗೆಗೆ ಅವರಿಗೆ ಅಪಾರವಾದ ಶ್ರದ್ಧೆ ಹಾಗೂ ಗೌರವ.[೪೭]

೪.೨.೧೬.೫ ಕೂಸು ಹಾರಿಸುವದು : ಹರಕೆಗಳು ಸೌಮ್ಯ ರೀತಿಯದಿದ್ದಂತೆ ಉಗ್ರರೀತಿಯ ಹರಕೆಗಳೂ ಇರುತ್ತವೆ. ಮಹಾರಾಷ್ಟ್ರದ ಸಾಂಗಲಿ ತಾಲೂಕಿನ ಬ್ರಹ್ಮನಾಳದಲ್ಲಿ ಅಮೋಘಸಿದ್ಧನ ಮೊಮ್ಮಗನಾದ ಇಂದಾಪೂರದ ಬಳೋಗಿಸಿದ್ಧನ ಮಗ ಜೀತಾಳಸಿದ್ಧ ನೆಲೆಸಿದ್ದಾನೆ. ಈತನ ಜಾತ್ರೆ ಶ್ರಾವಣ ಮಾಸದ ಮೂರನೆಯ ಸೋಮವಾರಕ್ಕೆ ಜರಗುತ್ತದೆ. ಕೃಷ್ಣಾ ವಿರಳಾ ನದಿಯ ಸಂಗಮದಲ್ಲಿ ನೆಲೆಸಿರುವ ಇವನ ಗುಡಿಗೆ ಬ್ರಹ್ಮನಾಳದಿಂದ ಭಕ್ತರು ಮೆರವಣಿಗೆಯಲ್ಲಿ ಬರುತ್ತಾರೆ. ರಾತ್ರಿ ಹನ್ನೊಂದು ಗಂಟೆಗೆ ಗದ್ದುಗೆ ಮನೆಯಿಂದ ಹೊರಟ ಮೆರವಣಿಗೆ ಗುಡಿಯನ್ನು ತಲುಪಬೇಕಾದರೆ ಬೆಳಕು ಹರಿದಿರುತ್ತದೆ. ಜಾತ್ರೆಯ ಈ ಸಂದರ್ಭದ ವಿಶೇಷ ಕಾರ್ಯಕ್ರಮವೆಂದರೆ ಹರಕೆ ಹೊತ್ತವರು ಕೂಸುಗಳನ್ನೂ ಹಾರಿಸುವುದು. ಇದೊಂದು ರೀತಿಯ ಅತೀ ಉಗ್ರವಾದ ಹರಕೆ. ಸಂಕಲ್ಪ ಸಿದ್ಧಿಸಿದ್ದರೆ ತಮಗೆ ಹುಟ್ಟುವ ಮಗುವನ್ನು ಹಾರಿಸುವುದಾಗಿ ಭಕ್ತರು ಹರಕೆ ಹೊರುವ ಪದ್ಧತಿ ಬ್ರಹ್ಮನಾಳದಲ್ಲಿದೆ. ಒಂದೂವರೆ ತಿಂಗಳಿನ ಕೂಸಿನಿಂದ ಹಿಡಿದು ಎರಡು ವರ್ಷದ ಹುಡಗರನ್ನು ಹಾರಿಸಲಾಗುತ್ತದೆ. ಸಂಗಮದಲ್ಲಿ ನೆಲೆಸಿರುವ ಜೀತಾಳಸಿದ್ಧನ ಗುಡಿಯ ಮೇಲ್ಭಾಗದಲ್ಲಿ ಕೂಸುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಗುಡಿಯ ಮಾಳಿಗೆಯ ಮೇಲೆ ನಿಂತು ಕೂಸುಗಳನ್ನು ನೆಲಕ್ಕೆ ಚೆಲ್ಲಿ ಬಿಡುತ್ತಾರೆ. ಕೆಳಗೆ ನಿಂತವರು ಕೂಸುಗಳನ್ನು ಕಂಬಳಿಯಲ್ಲಿ ಹಿಡಿದು ಇಳಿಸಿಕೊಂಡು ಪಾಲಕರ ಕೈಯಲ್ಲಿ

ಕೊಡುತ್ತಾರೆ.[೪೮] ಮೂಲದಲ್ಲಿ ಇದು ಇನ್ನೂ ಉಗ್ರವಾದ ಭಕ್ತಿ ಇರುವ ಸಾಧ್ಯತೆ ಇದೆ. ಇದೊಂದು ಜೀವಬಲಿಯ ಪಳಯುಳಿಕೆಯಾಗಿರಬಹುದು.

೪.೨.೧೭ ನಿಷೇಧಗಳು

ಒಂದು ಪರಂಪರೆಯ ವಿಶಿಷ್ಟತೆಯಿರುವುದು ಅದು ತನ್ನ ಆಚರಣೆಗಳಲ್ಲಿ ಹಾಕಿಕೊಳ್ಳುವ ನಿಷೇಧಗಳಲ್ಲಿ. ಈ ತೆರನಾದ ನಿಷೇಧಗಳು ತುಂಬಾ ವಿಶಿಷ್ಟವಾಗಿರುವುದರಿಂದ ಅನ್ಯರಿಗಿಂತ ಭಿನ್ನವಾಗಿ ತೋರುತ್ತವೆ ಹಾಗೂ ಪರಂಪರೆಯ ಅನನ್ಯತೆಯನ್ನು ಸೂಚಿಸುತ್ತದೆ. ಅಂಥಹ ಹಲವಾರು ನಿಷೇದಗಳನ್ನು ಅಮೋಘಸಿದ್ಧನ ಮಾರಾಯರು ಹಾಗೂ ಭಕ್ತರು ಹಾಕಿಕೊಂಡಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸಲಾಗಿದೆ.

೪.೨.೧೭.೧ ಭೀವರಗಿಗೆ ಎಣ್ಣೆ ಭಂಡಾರ : ಅಮೋಘಸಿದ್ಧನ ಪರಂಪರೆಯಲ್ಲಿ ಆಸ್ತಿಯ ಒಡೆತನದ ಮೋಹ ಯಾವ ಪ್ರಮಾಣದ್ದು ಎಂಬುದನ್ನು ಹಿಂದಿನ ಅಧ್ಯಾಯದಲ್ಲಿ ನೋಡಿದ್ದೇವೆ. ಆದರೇ ಅದೇ ಪರಂಪರೆಯಲ್ಲಿ ಒಡೆತನ ನಿರಸನದ ಹಲವಾರು ನಿದರ್ಶನಗಳನ್ನು ಕಾಣುತ್ತೇವೆ. ಗುಲಬರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ ಕಲ್ಲೂರಿನಲ್ಲಿ ಅಂಥ ಒಂದು ನಿದರ್ಶನವಿದೆ. ಈ ಊರಿನಲ್ಲಿ ಮಾರಾಯರು ತಮ್ಮ ಗುಡಿಗೆ ಭಕ್ತಿಯಿಂದ ಕಾಣಿಕೆ ರೂಪದಲ್ಲಿ ಬಂದ ಎಣ್ಣೆ ಭಂಡಾರವನ್ನು ತಮ್ಮ ಸ್ವಂತಕ್ಕೆ ಬಳಸಿಕೊಳ್ಳುವುದಿಲ್ಲ. ವರ್ಷದುದ್ದಕ್ಕೂ ತಮ್ಮ ಗುಡಿಯಲ್ಲಿ ಸಂಗ್ರಹವಾದ ಎಣ್ಣೆ ಹಾಗೂ ಭಂಡಾರವನ್ನು ಪರಂಪರೆಯ ಗುರುಮನೆಯೆಂದು ಕರೆಯಿಸಿಕೊಳ್ಳುವ ಭೀವರಿಗಿಗೆ ಒಯ್ದು ಮುಟ್ಟಿಸುತ್ತಾರೆ. ಈ ವಿಷಯದಲ್ಲಿ ಭಂಡಾರಕವಟೆ ಮಾಸಿದ್ದಪ್ಪನ ಮಾರಾಯರದು ಇನ್ನೂ ಒಂದು ಹೆಜ್ಜೆ ಮುಂದೆ. ಮಾಸಿದ್ದಪ್ಪನ ಮಾರಾಯರು ಕಾರಹುಣ್ಣಿಮೆಯ ಕರಿದಿವಸ ಗದ್ದುಗೆ ಏರುವ ಹಾಗೂ ಇಳಿಯುವ ಕಾರ್ಯ ಮಾಡುತ್ತಾರೆ. ಗದ್ದುಗೆ ಏರಿದ ಮಾರಾಯರು ಗುಡಿಗೆ ಬಂದ ಭಂಡಾರ ಹಾಗೂ ಎಣ್ಣೆಯನ್ನು ಸ್ವಂತಕ್ಕೆ ಬಳಸಿಕೊಳ್ಳುವುದಿಲ್ಲ. ಅಷ್ಟೇ ಅಲ್ಲ ವರ್ಷದುದ್ದಕ್ಕೂ ಮಾಸಿದ್ದಪ್ಪನ ಸೇವೆ ಮಾಡುವಾಗ ತನ್ನ ಮೈಗೆ ಎಣ್ಣೆ ಹಾಗೂ ಭಂಡಾರ ಹತ್ತಿತ್ತು, ಅದು ನಿತ್ಯ ಸ್ನಾನ ಮಾಡುವಾಗ ತೊಳೆದು ಹೋಗಿದೆ. ಅಷ್ಟು ಪ್ರಮಾಣದ ಎಣ್ಣೆ ಭಂಡಾರವನ್ನು ನಾನು ಮಾಸಿದ್ದಪ್ಪನ ಗುಡಿಯಿಂದ ಹೊರಗೆ ಒಯ್ದಂತಾಗಿದೆ, ಆ ಕಾರಣವಾಗಿ ಗದ್ದುಗೆ ಇಳಿಯುವ ದಿವಸ ಗುಡಿಗೆ ಎಣ್ಣೆ ಭಂಡಾರವನ್ನು ಕಾಣಿಕೆ ರೂಪದಲ್ಲಿ ಕೊಡಿಸುತ್ತೇವೆ ಎಂದು ಕೊಡುತ್ತಾನೆ. ಆಸ್ತಿ ಒಡೆತನ ನಿರಸನದ ಅತ್ಯಂತ ಸೂಕ್ಷ್ಮ ನಿದರ್ಶನ ಇದಾಗಿದೆ.[೪೯]

೪.೨.೧೭.೨ ಗುಡಿಯ ಹೊಸ್ತಿಲಗೆ ತಲೆ : ಅಮೋಘಸಿದ್ಧನ ಪರಂಪರೆಯ ಸಿದ್ಧರ ಗುಡಿಯ ಮಾರಾಯರು ತಮ್ಮತಮ್ಮ ಪಾಳೆಯ ಪ್ರಕಾರ ಗದ್ದುಗೆ ಏರುತ್ತಾರೆ. ಗದ್ದುಗೆ ಏರುವುದೆಂದರೆ ದೇವರ ಪೂಜಾರಿಕೆ ಹೊಣೆಯನ್ನು ಹೊತ್ತುಕೊಳ್ಳುವುದು. ಪೂಜಾರಿಕೆ ಹೊಣೆ ನಿರ್ವಹಣೆ ಮಾರಾಯರಲ್ಲಿ ತುಂಬಾ ವ್ಯವಸ್ಥಿತವಾಗಿದೆ. ಒಮ್ಮೆ ಗದ್ದುಗೆ ಏರಿದ ಮಾರಾಯರ ಪೂಜಾ ಅವಧಿ ಒಂದು ವರ್ಷದ್ದಾಗಿರುತ್ತದೆ. ಮಾರಾಯರು ಒಂದೊಮ್ಮೆ ಗದ್ದುಗೆ ಏರಿದರೆಂದರೆ ಅನೇಕ ನಿಷೇಧಗಳನ್ನು ತಮ್ಮ ಮೇಲೆ ಹೇರಿಕೊಳ್ಳುತ್ತಾರೆ. ಅದರಲ್ಲಿ ಮಹತ್ವದ

ನಿಷೇಧವೆಂದರೆ ವರ್ಷದುದ್ದಕ್ಕೂ ನೈಷ್ಠಿಕ ಬ್ರಹ್ಮಚರ್ಯವನ್ನು ಕಾಪಾಡಿಕೊಳ್ಳುವದು. ಮಾರಾಯರಾಗುವವರು ಸನ್ಯಾಸಿಗಳಾಗಲೇಬೇಕೆಂಬ ಕಟ್ಟುಪಾಡುಗಳಿಲ್ಲ. ಅವರು ಅನ್ಯರಂತೆ ಸಂಸಾರಸ್ಥ ಜೀವನ ನಡೆಸಬಹುದು. ಆದರೆ ಅದೇ ಮಾರಾಯರು ಗದ್ದುಗೆ ಏರಿದರೆಂದರೆ ಸಂಸಾರಸ್ಥರಾಗಿದ್ದರೂ ಒಂದು ವರ್ಷದವರೆಗೆ ಬ್ರಹ್ಮಚರ್ಯವನ್ನು ಪಾಲಿಸಬೇಕು. ಇದೊಂದು ರೀತಿಯ ತಾತ್ಕಾಲಿಕ ಬ್ರಹ್ಮಚರ್ಯ. ಗದ್ದುಗೆ ಇಳಿದ ಮೇಲೆ ಮತ್ತೆ ಯಥಾ ಪ್ರಕಾರ ಸಾಂಸಾರಿಕ ಜೀವನ ನಡೆಸಬಹುದು. ಗದ್ದುಗೆ ಏರಿದ ಮಾರಾಯರಿಗೆ ಸಂಸಾರದ ಮೋಹ ಅಂಟಿಕೊಂಡರೆ ಗುಡಿಯ ಆದಾಯದಲ್ಲಿ ಮೋಹ ಉಂಟಾಗುವ ಸಾಧ್ಯತೆಯಿರುತ್ತದೆ. ಆದಾಯ ನಿರಸನದ ಬೇರು ಸಂಸಾರ ನಿರಸನವಾಗಿದೆ ಎನ್ನುವದನ್ನು ಇವರು ಸರಿಯಾಗಿ ಗ್ರಹಸಿರುವಂತಿದೆ. ಹೀಗಾಗಿ ಅವರು ಗದ್ದುಗೆ ಏರಿದರೆಂದರೆ ವರ್ಷದುದ್ದಕ್ಕೂ ಹೆಂಡತಿಯ ಮುಖ ನೋಡುವುದಿಲ್ಲ. ಹಗಲು ರಾತ್ರಿ ದೇವರ ಸೇವೆ ಮಾಡುತ್ತಾ ಗುಡಿಯಲ್ಲಿಯೇ ವಸತಿ ಮಾಡುತ್ತಾರೆ. ಅದನ್ನೇ ಅವರು ಗುಡಿಯ ಹೊಸ್ತಿಲಿಗೆ ತಲೆಹೆಚ್ಚಿ ಮಲಗುವುದು ಎನ್ನುತ್ತಾರೆ. ಯಾವುದೇ ಜಂಜಾಟವಿಲ್ಲದ ಕಾರಣದಿಂದ ಮಾರಾಯರು ನಿಷ್ಠೆಯಿಂದ ದೇವರ ಪೂಜೆ ಮಾಡಲು ಸಾಧ್ಯವಾಗುತ್ತದೆ. ಕನಿಷ್ಠ ಪಕ್ಷ ಎರಡು ಸಲವಾದರೂ ಮಡಿಯಿಂದ ಸೀತಾಳ ತಂದು ದೇವರ ಪೂಜೆ ಮಾಡಿಯೇ ಮಾಡುತ್ತಾರೆ. ದಿವಸಕ್ಕೆ ಐದು ಸಲ ಪೂಜೆ ಸಲ್ಲಿಸುವ ಮಾರಾಯರ ಉದಾಹರಣೆಗಳು ಇವೆ. ಈ ಪರಂಪರೆಯ ಪಂಚಪೂಜಾದ ಗೌಡ ಎಂಬ ಸಿದ್ಧನನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.[೫೦]

೪.೨.೧೭.೩ ಪರವೂರಿಗೆ ಹೋಗದ ಪಾಲಕಿ : ಅಮೋಘಸಿದ್ಧನ ಮೂವರ ಪುಣ್ಯದ ಮಕ್ಕಳಲ್ಲಿ ಮಂಗರಾಯ ಒಬ್ಬ. ಆತ ಮಹಾರಾಷ್ಟ್ರದ ಕೋಲಾಪುರ ಜಿಲ್ಲೆಯ ಶೀರೋಳ ತಾಲೂಕಿನ ತೆರೆವಾಡದಲ್ಲಿ ನೆಲೆಸಿದ್ದಾನೆ. ಈ ದೇವರ ಪಾಲಕಿ ತೆರೆವಾಡದ ಸೀಮೆಯನ್ನು ದಾಟಿ ಹೊರಗೆ ಹೋಗುವುದಿಲ್ಲ ಎಂದು ಹೇಳುತ್ತಾರೆ.[೫೧] ಪಾಲಕಿ ಭೆಟ್ಟಿ ಈ ಪರಂಪರೆಯ ಪ್ರಮುಖ ಲಕ್ಷಣ. ಪಾಲಕಿ ಭೆಟ್ಟಿಗಳ ಮೂಲಕವೇ ಈ ದೇವರುಗಳು ಸಂಬಂಧವನ್ನು ಪುನರ್‌ನವೀಕರಣಗೊಳಿಸಿಕೊಳ್ಳುತ್ತಿರುತ್ತವೆ. ಪರಂಪರೆಯ ಸಾತತ್ಯವೂ ಇದರಿಂದ ಸಾಧ್ಯವಾಗುತ್ತದೆ. ಹಾಗಿದ್ದಾಗಲೂ ತೆರೆವಾಡದ ಮಂಗಾರಾಯನ ಪಾಲಕಿ ಭೆಟ್ಟಿಯಲ್ಲಿ ಪಾಲ್ಗೊಳ್ಳದಿರಲು ಏನು ಕಾರಣವಿರಬೇಕು ಎಂದು ಅನಿಸದೇ ಇರದು. ಈ ದೇವರ ಪೂಜಾರಿಗಳು ತಮ್ಮನ್ನು ಒಡೆಯರು ಎಂದು ಕರೆದುಕೊಳ್ಳುವುದಿಲ್ಲ. ಒಡೆಯರಂತೆ ಇವರ ಬೆಡಗು ಕೋಟೆನವರ ಅಲ್ಲ. ಇವರು ಬನ್ನೇನವರ ಬೆಡಗಿನವರು. ಆದರೆ ಇವರು ಸದಲಗಾದ ಆರ್ಯಾನಸಿದ್ಧನೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದಾರೆ. ಜಾತ್ರೆ ಸಮಯದಲ್ಲಿ ಆರ್ಯಾನಸಿದ್ಧನ ಪಾಲಕಿಯನ್ನು ಕರೆಯಿಸಿಕೊಳ್ಳುತ್ತಾರೆ. ಈ ಆರ್ಯಾನಸಿದ್ಧನು ನಾಲ್ಕು ಜನ ಧರ್ಮದ ಸಹೋದರಿ ರೆಬಕವ್ವಳ ಮಗನಾಗಿದ್ದಾನೆ. ಅಣ್ಣಂದಿರೊಂದಿಗೆ ಆಸ್ತಿಯ ವಿಷಯದಲ್ಲಿ ರೆಬಕವ್ವ ಜಗಳವಾಡಿ ಅರಕೇರಿ ತೊರೆದು ಸದಲಗದಾ ಮಾರ್ಗವಾಗಿ ಕೆರೂರಗೆ ಬಂದು ನೆಲೆಸಿ ಕರ್ಲೊಂಡಿಲಿಂಗನ ಆಶೀರ್ವಾದದಿಂದ ಆರ್ಯಾನಸಿದ್ಧನನ್ನು ಪಡೆದಳು. ಅಣ್ಣಂದಿರಿಂದ ಸಿಡಿದು ಬಂದ ರೆಬಕವ್ವ ಅವರೊಂದಿಗೆ

[illegible]

ಯಾವುದೇ ರೀತಿಯ ಸಂಪರ್ಕ ಇಟ್ಟುಕೊಂಡಂತೆ ತೋರುವುದಿಲ್ಲ. ಅಣ್ಣಂದಿರೊಂದಿಗೆ ಸದಾ ಒಂದು ರೀತಿಯ ತಿರಸ್ಕಾರವನ್ನು ಬೆಳೆಸಿಕೊಂಡು ಆರ್ಯಾನಸಿದ್ಧನನ್ನೂ ಪ್ರತಿಶಕ್ತಿಯಾಗಿ ಬೆಳೆಸಿದ ಹಾಗೆ ತೋರುತ್ತದೆ. ಅದೇ ರೀತಿಯಾಗಿ ಮಂಗರಾಯ ಹಾಗೂ ನಾಲ್ಕು ಜನ ಧರ್ಮರ ಮಧ್ಯೆ ತಂದೆಯಾದ ಅಮೋಘಸಿದ್ಧನಿಂದ ಪಡೆದ ಹೋಮದ ಕಂಬಳಿ ವಿಷಯವಾಗಿ ಜಗಳವೂ ಆಗಿದೆ. ಹೀಗಾಗಿ ಆರ್ಯಾನಸಿದ್ಧ ಹಾಗೂ ಮಂಗರಾಯ ಇಬ್ಬರೂ ನಾಲ್ವರು ಧರ್ಮರಿಂದ ದೂರ ಉಳಿಯ ಬಯಸಿರುವುದು ಸಹಜವೇ ಆಗಿದೆ. ಅದೇ ರೀತಿಯಾಗಿ ನಾಲ್ವರು ಧರ್ಮರಿಗೂ ಇವರ ಬಗೆಗ ಅಸಹನೆ ಇರುವುದು ಸತ್ಯ. ಹೀಗಾಗಿ ಒಬ್ಬರು ಇನ್ನೊಬ್ಬರನ್ನು ಭೆಟ್ಟಿಯಾಗುವುದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

೪.೨.೧೭.೪ ಮೀಸಲು ಹಾಲು : ತೆರೆವಾಡದ ಮಂಗರಾಯನ ಭಕ್ತರು ತಮ್ಮ ಮನೆಯ ದನಗಳು ಈದ ಐದು ದಿವಸಗಳವರೆಗೆ ಅವುಗಳ ಹಾಲನ್ನು ಸ್ವಂತಕ್ಕೆ ಬಳಸುವುದಿಲ್ಲ. ನಿತ್ಯವೂ ಹಿಂಡಿಕೊಂಡ ಹಾಲನ್ನು ಸಂಗ್ರಹಿಸಿ ಹೆಪ್ಪುಹಾಕಿ, ಬೆಣ್ಣೆ ತೆಗೆದು ಕಾಯಿಸಿ ತುಪ್ಪಮಾಡಿ ತಂದು ಮಂಗರಾಯನಿಗೆ ಅರ್ಪಿಸುತ್ತಾರೆ. ಮೊದಲ ಐದು ದಿವಸದ ಹಾಲು ತಮ್ಮ ದೇವರಿಗೆ ಮೀಸಲು ಎಂಥು ಭಾವಿಸಿ ಒಂದು ಹನಿ ಹಾಲನ್ನು ಅಪ್ಪಿತಪ್ಪಿ ಸ್ವಂತಕ್ಕೆ ಬಳಸುವುದಿಲ್ಲ.[೨೨]

೪.೧.೧೭.೫ ಕರಿಕಟ್ಟುವುದು : ಮಹಾರಾಷ್ಟ್ರದ ಸಾಂಗಲಿ ತಾಲೂಕಿನ ಬ್ರಹ್ಮನಾಳದ ಜೀತಾಳಸಿದ್ಧನ ಜಾತ್ರೆ ಮೂರನೆಯ ಶ್ರಾವಣ ಸೋಮವಾರ ಜರಗುತ್ತದೆ. ಜಾತ್ರೆ ಇನ್ನೂ ಮೂರು ದಿವಸ ಇದೆ ಎನ್ನುವಾಗಲೇ ಕರಿ ಕಟ್ಟುತ್ತದೆ. ಹೀಗೆ ಕರಿ ಕಟ್ಟಿದರೆ ಈ ಊರಿನಿಂದ ಯಾರೂ ಹೊರಗೆ ಹೋಗುವಂತಿಲ್ಲ. ಜಾತ್ರೆಯ ಸಮಯದಲ್ಲಿ ಎಲ್ಲರೂ ಊರಲ್ಲಿಯೇ ಇರಲಿ ಎನ್ನುವ ವ್ಯವಹಾರಿಕ ಜ್ಞಾನ ಇದರ ಹಿಂದೆ ಇರುವ ಸಾಧ್ಯತೆಯಿದೆ. ಅದೂ ಅಲ್ಲದೇ ಊರವರು ಎಲ್ಲಾ ಊರಲ್ಲಿಯೇ ಇದ್ದುಕೊಂಡು ಜಾತ್ರೆ ನಡೆಸಿದರೆ ಜಾತ್ರೆಗೆ ಒಂದು ಅರ್ಥ ಬರುವುದು ಸಹಜ. ಈ ಊರಲ್ಲಿ ಜಾತ್ರೆ ಸಮಯದಲ್ಲಿ ಇನ್ನೊಂದು ವಿಶೇಷವಿದೆ. ಸ್ಥಾನಿಕ ದೇವರು ಜೀತಾಳಸಿದ್ಧನು ಗದ್ದುಗೆ ಮನೆಯಿಂದ ಗುಡಿಯ ಕಡೆಗೆ ಮೆರವಣಿಗೆ ಹೊರಟನೆಂದರೆ ಮನೆಯಲ್ಲಿ ಯಾರೂ ಕಂಬಳಿ ಹಾಸಿಕೊಂಡು ಕುಳಿತುಕೊಳ್ಳುವಂತಿಲ್ಲ.[೨೩] ಈ ವಿಶೇಷದ ಹಿಂದೆಯೂ ವ್ಯವಹಾರಿಕವಾದ ಕಾರಣವಿದೆ. ಮನೆಯಲ್ಲಿ ಏನಾದರೂ ವಿಶೇಷ ಕಾರ್ಯಕ್ರಮವಿದ್ದರೆ ಶುಭದ ಸಂಕೇತವಾದ ಕಂಬಳಿ ಹಾಸಿಕೊಂಡು ಕುಳಿತುಕೊಳ್ಳುವ ಪದ್ಧತಿ. ಊರಿನಲ್ಲಿ ಎಲ್ಲರೂ ಸೇರಿ ಮಾಡಬೇಕಾದ ಜಾತ್ರೆಯ ವೇಳೆಯಲ್ಲಿಯೇ ಮನೆಯಲ್ಲಿ ವಿಶೇಷ ಕಾರ್ಯಕ್ರಮ ಮಾಡುತ್ತಾ ಕುಳಿತುಕೊಂಡರೆ ಜಾತ್ರೆ ನಡೆಯುವುದು ಹೇಗೆ ಎನ್ನುವ ಆಲೋಚನೆ ಈ ನಿಷೇಧದ ಹಿಂದೆ ಇದೆ.

೪.೨.೧೮ ನೈವೇದ್ಯ/ಪ್ರಸಾದ

ಭಕ್ತರ ಆಹಾರ ಪದ್ಧತಿಗೂ ಅವರು ತಮ್ಮ ದೇವರಿಗೆ ಅರ್ಪಿಸುವ ನೈವೇದ್ಯಕ್ಕೂ ನಿಕಟವಾದ ಸಂಬಂಧವಿರುತ್ತದೆ. ನೈವೇದ್ಯಗಳು ಆ ದೇವರ ಭಕ್ತ ವರ್ಗದ ಆಹಾರ ಪದ್ಧತಿಯನ್ನು ಬಿಂಬಿಸುವಂಥದ್ದಾ

ಗಿರುತ್ತದೆ. ಅಮೋಘಸಿದ್ಧನ ಪರಂಪರೆ ಸಿದ್ಧರಿಗೆ ಇರುವ ನೈವೇದ್ಯ ಶಾಕಾಹಾರದ್ದಾಗಿದೆ. ಅಲ್ಲಲ್ಲಿ ಅಮ್ಮೋಘಸಿದ್ಧನ ಶಿಷ್ಯನಾದ ಭೂತಾಳಸಿದ್ಧನಿಗೆ ಮಾಂಸದ ಎಡೆ ಹಿಡಿಯುವುದನ್ನು ಬಿಟ್ಟರೆ ಉಳಿದಂತೆ ಎಲ್ಲಾ ದೇವರಿಗೆ ಶುದ್ಧ ಶಾಕಾಹಾರವೇ ಎಡೆಯಾಗಿದೆ. ಶಾಕಾಹಾರದ ಸಾಮಾನ್ಯ ರೂಪವೆಂದರೆ ಕಟಂಬಲಿ.

ಬಡವರಿಗೂ ಕೂಡ ಈ ನೈವೇದ್ಯ ತಯಾರಿಸಿಕೊಳ್ಳುವುದು ಕಷ್ಟವೆನಿಸಲಾರದು. ಇಂತಹ ಸರಳ ನೈವೇದ್ಯ ಪದ್ಧತಿಯು ಬಹುಪಾಲು ಭಕ್ತರನ್ನು ನೈವೇದ್ಯದ ಕಾರಣದಿಂದಲೇ ಭಕ್ತರನ್ನು ಹೊರಗಿರಿಸುವ, ಅನ್ಯಗೊಳಿಸುವ ಕ್ರಿಯೆಯಿಂದ ಪಾರು ಮಾಡಬಲ್ಲದು. ಕಡುಬಡವನಾದರೂ ಇಂಥ ನೈವೇದ್ಯವನ್ನು ತಯಾರಿಸುವ ಸಾಮರ್ಥ್ಯವುಳ್ಳವನಾಗಿರುತ್ತಾನಾದಕಾರಣದಿಂದ ಭಕ್ತಿಯಲ್ಲಿ ತನ್ನ ಪಾಲುದಾರಿಕೆಯನ್ನು, ಒಳಗೊಳ್ಳುವಿಕೆ ಯನ್ನು ಸಾಧಿಸಬಲ್ಲ. ಕಟಂಬಲಿ, ಕೈಚಕಳಿಗಳಿಲ್ಲದ ಅಮೋಘಸಿದ್ಧ ಪರಂಪರೆಯ ಗುಡಿಗಳೇ ಇಲ್ಲವೆನ್ನಬೇಕು. ಭಕ್ತರು ಸಿರಿವಂತರಿದ್ದರೇ ಅವರ ನೈವೇದ್ಯವು ಸಿರಿವಂತಿಕೆಯನ್ನು ಬಿಂಬಿಸುವಂಥದಾಗುತ್ತದೆ. ಈ ಗುಡಿಯ ಪೂಜಾರಿಗಳು ಕುರುಬರ ಗುರುಗಳಾಗಿರುವುದರಿಂದ ಕುರುಬರಲ್ಲಿ ಬಹುಪಾಲು ಜನ ಬಡವರೇ ಆಗಿರುವುದರಿಂದ ಅವರ ದೇವರ ನೈವೇದ್ಯ ಸಹಜವಾಗಿ ಸರಳ ರೂಪದಲ್ಲಿರುತ್ತದೆ. ಆದರೆ ಇತ್ತೀಚೆಗೆ ಈ ದೇವರಿಗೆ ಹಿಡಿಯುವ ನೈವೇದ್ಯ ಹಾಗೂ ಪ್ರಸಾದದ ಸ್ವರೂಪ ಬದಲಾಗತೊಡಗಿದೆ. ಭಕ್ತ ಸ್ಥಿತಿವಂತನಾಗುತ್ತಿದ್ದಂತೆ ಕಟಂಬಲಿಯ ಜಾಗೆಯಲ್ಲಿ ಹುಗ್ಗಿಹೋಳಿಗೆ ಪ್ರವೇಶ ಪಡೆಯತೊಡಗಿದೆ. ಅಲ್ಲದೇ ನೈವೇದ್ಯವು ಪ್ರಸಾದದ ಸ್ವರೂಪ ಪಡೆದು ಶ್ರೀಮಂತಿಕೆಯ ಪ್ರದರ್ಶನದ ವಸ್ತುವಾಗತೊಡಗಿದೆ. ಒಂದು ಕಾಲಕ್ಕೆ ಪ್ರಸಾದದ ಕಲ್ಪನೆಯ ಹಿಂದೆ ಭಕ್ತಿ, ಶ್ರದ್ಧೆ ಇತ್ತು. ಈಗ ಅದರ ಜಾಗೆಯಲ್ಲಿ ಪ್ರತಿಷ್ಠೆ ಪ್ರವೇಶಿಸಿದೆ. ತೆರೆವಾಡದಲ್ಲಿ ಜಾತ್ರೆ ನಡೆದರೆ ಮೊದಲ ದಿವಸದ ಅನ್ನ ಖರ್ಚನ್ನು ಆ ಊರಿನ 'ಮಗದಮ್' ಮನೆತನದವರು ನೋಡಿಕೊಳ್ಳುತ್ತಾರೆ. ಎರಡನೆಯ ದಿವಸದ ಖರ್ಚನ್ನು ಆ ಊರಿನ ಗೌಡರ ಮನೆತನವದರು ನೋಡಿಕೊಳ್ಳುತ್ತಾರೆ. ಮೂರನೆಯ ದಿವಸದ ಅನ್ನ ಖರ್ಚನ್ನು ಇಡೀ ಊರಿನ ಜನ ನೋಡಿಕೊಳ್ಳುತ್ತಾರೆ. ಹೀಗೆ ಪ್ರಸಾದದ ಖರ್ಚಿನ ಭಾರ ಹರಿದು ಹಂಚಿ ಹೋಗುತ್ತಿತ್ತು. ಅದೂ ಅಲ್ಲದೇ ಪ್ರಸಾದದ ಬಗೆಗೆ ಜನರಲ್ಲಿ ತುಂಬಾ ಶ್ರದ್ಧೆ ಇರುತ್ತಿತ್ತು. ತೆರೆವಾಡದಲ್ಲಿ ಮಂಗರಾಯನ ಪೌಳಿಯಲ್ಲಿ ಬಂದ ಪ್ರಸಾದದ ಒಂದೂ ಅಗಳೂ ಹೊರಗೆ ಹೋಗುವುದಿಲ್ಲ. ಅದೆಲ್ಲವನ್ನು ಅಲ್ಲಿಯೇ ವಿನಿಯೋಗಿಸಲಾಗುತ್ತದೆ. ಸಂಗ್ರಹದ ನಿರಾಕರಣೆಯನ್ನು ಈ ರೀತಿಯ ನಂಬಿಕೆಯಲ್ಲಿ ನೋಡಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಅಮೋಘಸಿದ್ಧನ ಪರಂಪರೆಯ ಸಿದ್ಧರಿಗೆ ಹಬ್ಬ ಮಾಡಿಸುವುದು ಕೆಲ ಶ್ರೀಮಂತರಿಗೆ ಪ್ರತಿಷ್ಠೆಯ ಚಿನ್ಹೆಯಾಗಿದೆ. ಹಬ್ಬಕ್ಕಾಗಿ ಇಂದು ಅವರು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಲಿದ್ದಾರೆ. ಅಂಬಲಿಯ ಜಾಗೆಯಲ್ಲಿ ಹುಗ್ಗಿ, ಹೋಳಿಗೆ, ಶಿರಾ, ಬುಂದೇ ಪ್ರವೇಶ ಪಡೆದುಕೊಳ್ಳತೊಡಗಿವೆ.

೪.೨.೧೯ ಹಿರೆಕೂರ ಅವರ ಕರ್ತವ್ಯಗಳು

ಈ ಪರಂಪರೆಯ ಸಿದ್ಧರ ಗುಡಿಯ ಪೂಜಾರಿಕೆ ಮಾಡುವವರನ್ನು ಮಾರಾಯರು/ಒಡೆಯರು/ಪೂಜಾರಿಗಳು ಎಂದು ಕರೆಯುತ್ತಾರೆ. ಒಡೆಯರು ಕರ್ತವ್ಯಗಳ ಕುರಿತು ಈಗಾಗಲೇ ನೋಡಿದ್ದೇವೆ. ಒಡೆಯರಿಗೆ ಪೂಜೆಯ

[illegible]

ಹಾಗೂ ಧಾರ್ಮಿಕ ವಿಧಿಗಳ ನಿರ್ವಹಣೆಯಲ್ಲಿ ಸಹಾಯಕ್ಕೆ ನಿಲ್ಲುವವರೇ ಹಿರಕೂರ ಅವರು. ಈ ಹಿರಕೂರ ಅವರನ್ನು ಹಿರೇಕುರುಬರು, ಹೂಗಾರ ಅಥವಾ ಫೂಲಾರಿ ಎಂದು ಕರೆಯುತ್ತಾರೆ. ಲಿಂಗಾಯಿತ ವ್ಯವಸ್ಥೆಯಲ್ಲಿ ಮಠದ ಸ್ವಾಮಿಗಳಿಗೂ, ಮಠಪತಿಗಳಿಗೂ ಇರುವ ಸಂಬಂಧದಂತೆ ಒಡೆಯರ ಹಾಗೂ ಹಿರಕೂರ ಅವರ ಮಧ್ಯ ಇರುತ್ತದೆ. ಇವರು ಗುಡಿಯ ಸೇವಕರು. ಗುಡಿಯ ಅಂಗಳದ ಕಸಗೂಡಿಸುವುದು, ಪೂಜೆಗೆ ಹೂವು, ನೀರು ತರುವುದು ಇವರ ಪ್ರಮುಖ ಕರ್ತವ್ಯಗಳು. ಪೂಜೆಯ ಸಂದರ್ಭದಲ್ಲಿ ಒಡೆಯರು ಆರತಿ ಬೆಳಗುತ್ತಾರೆ. ಆಗ ಗಂಟೆ ಬಾರಿಸುವ ಕೆಲಸ ಇವರದಾಗಿರುತ್ತದೆ. ನಿಮ್ಮ ಕರ್ತವ್ಯಗಳೇನು ಎಂದು ಒಬ್ಬ ಹಿರಕೂರನನ್ನೂ ಕೇಳಿದಾಗ ಈ ಗುಡಿಯ ಆಚರಣೆಯಲ್ಲಿ 'ಉಪ್ಪಿನಿಂದ ಹಿಡಿದು ತುಪ್ಪದ ತನಕ' ನಮ್ಮ ಕೆಲಸ ಇರುತ್ತದೆ ಎಂದು ಹೇಳಿದರು.

ನಡತನದವರಲ್ಲಿ ಅಟ್ರಾ ಕುಳಿಗಳಿವೆ ಎಂದು ನಂಬಲಾಗಿದೆ. ಅವರಲ್ಲಿ ಹಿರಕೂರ, ಬಂಡಗಾರ, ಕಟ್ಟಿಕಾರ, ಹೊನ್ನಮಾನೆ, ಬನ್ನೇಗೋಳ, ಮಂಗವಾಡ ಹಾಗೂ ಬಂಡೇಕಾರ ಪ್ರಮುಖರು. ಅಟ್ರಾಕುಳಿಗಳಲ್ಲೇ ಹಿರಕೂರ ಅವರು ತಾವು ಶ್ರೇಷ್ಠವೆಂದು ಹೇಳಿಕೊಳ್ಳುತ್ತಾರೆ. ಒಡೆಯರು ಮಾಡುವ ವಿಧಾನಗಳಲ್ಲಿ ಸರ್ವರೀತಿಯಿಂದ ಸಹಾಯ ಮಾಡುವವರು ಇವರಾದ್ದರಿಂದ, ಗುಡಿಯ ಆವರಣದೊಳಗೆ ಕೆಲಸ ಮಾಡುವವರು ಇವರಾದ್ದರಿಂದ ಅನ್ಯರಿಗಿಂತ ಶ್ರೇಷ್ಠವೆಂದು ಭಾವಿಸಿರಬಹುದು.

ದೇವರ ಪೂಜೆಗೆ ಬೇಕಾದ ಹೂವನ್ನು ಸಂಗ್ರಹಿಸಿ ತರುವುದು ಇತರ ಕರ್ತವ್ಯಗಳಲ್ಲಿ ಒಂದಾಗಿರುವುದರಿಂದ ಇವರನ್ನು ಹೂಗಾರ ಅಥವಾ ಫೂಲಾರಿ ಎಂದು ಕರೆಯುತ್ತಾರೆ. ದೇವರ ಪಲ್ಲಕ್ಕಿ ಊರಲ್ಲಾಗಲಿ, ಪರವೂರಲ್ಲಾಗಲಿ ಹೊರಟರೆ ಪಲ್ಲಕ್ಕಿಯನ್ನು ಸಿದ್ಧಗೊಳಿಸುವ ಕೆಲಸವನ್ನು ಇವರೆ ಮಾಡುತ್ತಾರೆ. ಪಲ್ಲಕ್ಕಿಯಲ್ಲಿ ದೇವರನ್ನು ಕೂಡ್ರಿಸಿ ದೇವರನ್ನೂ, ಪಲ್ಲಕ್ಕಿಯನ್ನೂ ಶೃಂಗರಿಸುವ ಕೆಲಸವನ್ನು ಮಾಡುತ್ತಾರೆ.

ದೇವರ ಹಬ್ಬಗಳಿದ್ದಾಗ ದೇವರ ಕೆಳಗಿನ ಮಂದಿಗೆ ಊಟಕ್ಕೆ ಹೇಳಿಬರುವ ಕೆಲಸವನ್ನು ಹಿರಕೂರರು ಮಾಡುತ್ತಾರೆ. ದೇವರ ಕೆಳಗಿನ ಮಂದಿ ಎಂದರೆ ಮೆರವಣಿಗೆಯಲ್ಲಿ ಸೇವೆ ಸಲ್ಲಿಸುವ ದೀವಟಿಗೆಯವರು, ಕೊಳಲಿನವರು, ಹಲಗೆಯವರು, ಡೊಳ್ಳಿನವರು ಹಾಗೂ ಸಿಂಗದವರು. ಭಕ್ತರು ಒಡೆಯರನ್ನು ಊಟಕ್ಕೆ ಕರೆಯಿಸಿಕೊಂಡರೆ, ಒಡೆಯರ ಉಳಿದ ಬಡ್ಡಿಯವರು, ಹಿರಿಕೂರ ಅವರು ಹೋಗುತ್ತಾರೆ. ಸಹಪಂಕ್ತಿಯಲ್ಲಿ ಅವರೊಂದಿಗೆ ಕುಳಿತು ಊಟ ಸೇವಿಸುತ್ತಾರೆ. ಭಕ್ತರು ತಮ್ಮ ಮನೆಯಲ್ಲಿ ದಿಮ್ಮು ಇಡಿಸಿಕೊಂಡರೆ ಅವರ ಮನೆಗೆ ಹೋಗಿ ದೇವರ ಕುರಿತು ಹಾಡಗಳನ್ನು ಹಾಡಿ ಬರುತ್ತಾರೆ. ಭಕ್ತರ ಮನೆಗೆ ಹೋದಾಗ ಪೂಜೆ ಮುಗಿದ ನಂತರ ಹರಕೆ ಪದವನ್ನು ಹೇಳುತ್ತಾರೆ. ಅದೂ ಅಲ್ಲದೇ ಕುರುಬ ಸಮಾಜದಲ್ಲಿ ಹೊಸ ಮಾಲಿಗಿತ್ತಿ ನಡೆಯಲು ಬಂದಾಗ ಕಡುಬಿನ ಬುಟ್ಟಿಯನ್ನು ತಂದವರೊಂದಿಗೆ ಊರೆಲ್ಲಾ ಸುತ್ತಾಡಿ ಕಡಬು ಬೀರುವ ಕೆಲಸದಲ್ಲಿ ಸಹಾಯ ಮಾಡುತ್ತಾರೆ. ಕುಬಸದ ಬುತ್ತಿಯನ್ನು ಬೀರುವಾಗಲೂ ಇದೇ ರೀತಿ ಸಹಕರಿಸುತ್ತಾರೆ. ಕುರಬ ಮನೆಯ ಹುಡಗಿ ಮೈ ನೆರೆದಾಗ ಬೀಗರಿಗೆ ಆ ಸುದ್ದಿ ಮುಟ್ಟಿಸಿ ಬರುವ ಕೆಲಸವನ್ನು ಇವರು

[illegible]

[illegible]

[illegible]

[illegible]

[illegible]

ಮಾಡುತ್ತಾರೆ. ಒಡೆಯರಿಗೆ ಪ್ರತ್ಯೇಕ ಸಮಾಧಿ ಜಾಗ ಇದ್ದ ಹಾಗೆಯೇ ಹಿರಕೂರ ಅವರಿಗೂ ಪತ್ಯೇಕವಾದ ಸಮಾಧಿ ಜಾಗ ಇರುತ್ತದೆ.[೫೪]

೪.೨.೨೦ ಒಡೆಯ ಮಹಿಳೆಯ ಪಾಲುಗಾರಿಕೆ

ಅಮ್ಮೋಘಸಿದ್ಧನ ಪಡೆಯರು ಪುರುಷಪ್ರಧಾನ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟವರು. ಗದ್ದುಗೆ ಏರಿದ ಒಡೆಯರು ಒಂದು ವರ್ಷ ಪೂರ್ತಿ ಹೆಂಡತಿಯ ಮುಖ ನೋಡುವುದನ್ನು ಅಪರಾಧವೆಂದು ಭಾವಿಸುತ್ತಾರೆ. ವಸ್ತುಸ್ಥಿತಿ ಹೀಗಿರುವಾಗ ಒಡೆಯರ ಧಾರ್ಮಿಕ ಆಚರಣೆಗಳಲ್ಲಿ ಮಹಿಳೆಯ ಪಾಲುಗಾರಿಕೆಯನ್ನು ಕಲ್ಪಿಸಿಕೊಳ್ಳುವುದು ಕಷ್ಟ. ರೇವಣಸಿದ್ಧ ಪರಂಪರೆಯಲ್ಲಿ ಒಡೆರಮ್ಮಳಿಗೆ ಇದ್ದ ಸ್ಥಾನಮಾನ ಅಮೋಘಸಿದ್ಧ ಪರಂಪರೆಯ ಒಡೆಯ ಮಹಿಳೆಯರಿಗಿಲ್ಲ. ಆದಾಗ್ಯೂ ಅಲ್ಲೊಂದು ಇನ್ನೊಂದು ಮಹಿಳೆಯ ಕುರಿತು ಉದಾರ ನಿಲುವು ಕಂಡುಬರುತ್ತವೆ. ಇವರು ತಮ್ಮ ಗಂಡ ತೀರಿಕೊಂಡಾಗ ಸೌಭಾಗ್ಯದ ಸಂಕೇತಗಳಾದ ಕಾಲುಂಗುರ, ಕುಂಕುಮ, ಹಸಿರುಬಳೆ ತೆಗೆಯುವುದಿಲ್ಲ. ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ಕಲ್ಲೂರಿನಲ್ಲಿ ಇಂಥಹ ಸಂಪ್ರದಾಯ ಇಂದಿಗೂ ಇದೆ. ಇಲ್ಲಿನ ಒಡೆಯರಿಗೆ ಒಂದು ಪ್ರಶ್ನೆ ಕೇಳಿದೆ. ಒಡೆಯರ ಪತ್ನಿ ತೀರಿಕೊಂಡರೆ ಒಡೆಯರು ಮರು ಮದುವೆಯಾಗುತ್ತಾರೆಯೇ? ಆಗ ಅವರು ಕೊಟ್ಟ ಉತ್ತರ ಇದಾಗಿತ್ತು 'ನಾವು ಮರುಮದುವೆ ಆಗುತ್ತೇವೆ. ಆದರೆ ಉಡುಕಿ ಮಾಡಿಕೊಳ್ಳುವುದಿಲ್ಲ.' ಅಂದರೆ ಒಡೆಯನು ವಿಧುರನಾಗಿದ್ದರೂ ಅವನು ವಿಧವೆಯನ್ನು ಮದುವೆಯಾಗಲಾರ. ಅವನಿಗೆ ಏನಿದ್ದರೂ ಮೊದಲ ಮದುವೆಗೆ ಅರ್ಹವಾದ ಕನ್ಯೆ ಬೇಕು. ಇಲ್ಲಿ ಇನ್ನೂ ಒಂದು ವಿಲಕ್ಷಣ ಸಂಗತಿಯೆಂದರೆ ವಿಧವೆಯಾದವಳು ಯಾವ ಸಂದರ್ಭದಲ್ಲೂ ಮರುಮದುವೆ ಯಾಗುವಂತಿಲ್ಲ. ಯಾಕೆ ಇಂತಹ ತೊಡಕು ಎಂದು ವಿಚಾರಿಸಿದರೆ ಮಹಿಳೆಯೊಬ್ಬಳು ಒಡೆಯರನ್ನು ಮದುವೆಯಾಗುವ ಮೂಲಕ ಅವಳ ಬೆಡಗು ಕೋಟೆನವರ ಆಗಿರುತ್ತದೆ. ಕೋಟೆನವರ ಬೆಡಗಿನ ಈ ಗುರುಮಾತೆ ವಿಧವೆಯನ್ನು ನಡೆತನದವರು ಮದುವೆಯಾಗಲು ಸಾಧ್ಯವೇ ಇಲ್ಲ. ಅದು ಅಲ್ಲದೆ ಕೋಟೆನವರ ಬೆಡಗಿನ ವಿಧುರ ಒಡೆಯರಾರೂ ಸಮಬೆಡಗಿನ ಕಾರಣದಿಂದ ಮದುವೆಯಾಗಲು ಬರುವುದಿಲ್ಲ. ಹೀಗಾಗಿ ಅವಳಿಗೆ ವಿಧವೆ ಪಟ್ಟಗಟ್ಟದೇ ಸದಾಕಾಲ ಸುಮಂಗಲೆ ಪಟ್ಟಗಟ್ಟಿ ಸಮಸ್ಯೆಗೆ ಪರಿಹಾರ ಕಂಡುಕೊಂಡಿರುವಂತಿದೆ.

ಇಷ್ಟೆಲ್ಲಾ ಪುರುಷಪ್ರಧಾನವಾದ ವ್ಯವಸ್ಥೆಯಲ್ಲಿ ಒಡೆಯರ ಮಹಿಳೆ ಅಲ್ಲಲ್ಲಿ ಅಲ್ಪ ಪ್ರಮಾಣದಲ್ಲಿ ಪಾಲುಗಾರಿಕೆ ಹೊಂದಿದ್ದಾಳೆ. ಕಲ್ಲೂರಿನ ಮೇಲಿನ ಮಠದಲ್ಲಿ ಒಂದು ಸಲ ಇಪ್ಪತ್ತು ವರ್ಷಗಳವರೆಗೆ ಒಡೆಯರೇ ಇರಲಿಲ್ಲ. ಆಗಿನ ಅವಧಿಯಲ್ಲಿ ಒಡೆಯ ಮಹಿಳೆ ಹೇಳಿಕೆ ಮಾಡುವುದನ್ನು ಬಿಟ್ಟು ಉಳಿದೆಲ್ಲಾ ಧಾರ್ಮಿಕ ವಿಧಿಗಳನ್ನು ನಡೆಯಿಸಿಕೊಂಡು ಬಂದಳಂತೆ. ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಕುಂಚನೂರಿನಲ್ಲಿ ಗದ್ದುಗೆ ಒಡೆಯರ ಮಹಿಳೆ ಕೆಲವು ಕೆಲಸಗಳನ್ನು ನಿರ್ವಹಿಸುತ್ತಾಳೆ. ಈ ಊರಿನಲ್ಲಿ ಮಾದಣ್ಣನ ಭಕ್ತರು ದಿನಂಪ್ರತಿ ತಾವು ಮಾಡಿದ ರೊಟ್ಟಿಗಳಲ್ಲಿ ಮುರ್ನಾಲ್ಕು ರೊಟ್ಟಿಗಳನ್ನು ಮೀಸಲು ರೊಟ್ಟಿಗಳೆಂದು ತೆಗೆದು ಬಂಕದ ನೆಲುವಿನಲ್ಲೋ ಮಾಡದಲ್ಲಿಯೋ ಇಡುತ್ತಾರೆ. ಊರೆಲ್ಲಾ ತಿರುಗಾಡಿ ಒಡೆಯ

ಮಹಿಳೆ ಆ ಮೀಸಲು ರೊಟ್ಟಿಗಳನ್ನೆಲ್ಲಾ ಸಂಗ್ರಹಿಸಿ ಗುಡಿಗೆ ತಂದು ಇಡುತ್ತಾಳೆ. ಆ ರೊಟ್ಟಿಗಳನ್ನೆಲ್ಲಾ ಗುಡಿಯಲ್ಲಿ ದಾಸೋಹಕ್ಕೆ ಬಳಸುತ್ತಾರೆ. ಅಲ್ಲದೇ ಗುಡಿಯ ಸೇವಾಧಾರಿಗಳಿಗೆ ಉಳಿದ ರೊಟ್ಟಿಗಳನ್ನು ಹಂಚಲಾಗುತ್ತದೆ. ಜಾತ್ರೆ/ಉತ್ಸವಗಳಲ್ಲಿ ಭಕ್ತರು ತಂದ ಬಾನವನ್ನು ಜಾತ್ರೆಯಲ್ಲಿ ಸೇರಿದ ಭಕ್ತರಿಗೆ ಪ್ರಸಾದ ರೂಪದಲ್ಲಿ ವಿತರಿಸುವ ಕೆಲಸವನ್ನು ಮಹಿಳೆಯರು ಮಾಡುತ್ತಾರೆ. ತೆರವಾಡದಲ್ಲಿ ಪೂಜಾರಿಗಳ ಹೆಂಡಂದಿರು ಪ್ರತಿ ಗುರುವಾರ ಆ ಊರಿನ ಗೌಡರ ಮನೆಗೆ ಹೋಗಿ ಅಂದಿನ ನೈವೇದ್ಯವನ್ನು ತಂದು ಗುಡಿಗೆ ಕೊಡುತ್ತಾರೆ. ಇದನ್ನೆಲ್ಲಾ ಗಮನಿಸಿದಾಗ ಒಡೆಯ ಮಹಿಳೆಯ ಪಾಲುಗಾರಿಕೆ ಅತ್ಯಂತ ಅಲ್ಪ ಪ್ರಮಾಣದಲ್ಲಿದೆ ಎಂದು ತಿಳಿದುಬರುತ್ತದೆ.

ಇವರು ಪೂಜಾರಿ ವರ್ಗದವರಾಗಿರುವುದರಿಂದ ದಿನದ ಹೊಟ್ಟೆಯ ಚಿಂತೆ ಅನಾಯಾಸವಾಗಿ ಬಗೆಹರಿಯುವುದರಿಂದ ಶಿಕ್ಷಣ ಪಡೆದು ಆ ಮೂಲಕ ನೌಕರಿ ಮಾಡಿ ಉಪಜೀವನ ನಡೆಸಬಹುದು ಎಂದು ಅತ್ಯಂತ ಕಡಿಮೆ ಪ್ರಮಾಣದ ಒಡೆಯರು ತಿಳಿದುಕೊಂಡಿದ್ದಾರೆ. ಆ ಕಾರಣವಾಗಿ ಒಡೆಯರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ಈ ಒಂದೆರಡು ದಶಕದಲ್ಲಿ ಮಾತ್ರ ಯೋಚಿಸಿದ್ದಾರೆ. ಬಹುಪಾಲು ಗಂಡಮಕ್ಕಳೇ ಶಿಕ್ಷಣದಿಂದ ವಂಚಿತರಾಗಿರುವ ಸಂದರ್ಭದಲ್ಲಿ ಒಡೆಯ ಬಾಲಕಿಯರು ಶಿಕ್ಷಣ ಪಡೆಯುವುದು ಅತ್ಯಂತ ಅಪರೂಪವೆಂದೇ ಭಾವಿಸಬೇಕು. ಆದರೂ ಒಡೆಯರಲ್ಲಿ ಇತ್ತೀಚಿನ ದಿನಗಳಲ್ಲಿ ಶಿಕ್ಷಣದ ಮಹತ್ವ ತಿಳಿದು ಬರುತ್ತಿದ್ದು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಮುಂದಾಗುತ್ತಿರುವುದು ಒಳ್ಳೆಯ ಸೂಚನೆ ಎಂದೇ ಭಾವಿಸಬೇಕು.

೪.೨.೨೧ ಆದಾಯದ ಮೂಲ : ಭೂಮಿ, ಕಾಣಿಕೆ ದಕ್ಷಿಣೆ

ಅಮೋಘಸಿದ್ಧನ ಪರಂಪರೆಯವರ ಕಥನವನ್ನು ಗಮನಿಸಿದರೆ ಅವರು ಧಾರ್ಮಿಕ ಹಕ್ಕುಗಳ ಗುರುಗಳೂ ಹೌದು, ರಾಜಕೀಯ ಆರ್ಥಿಕ ಹಕ್ಕುಳ್ಳ ನಾಡಗೌಡರೂ ಹೌದು ಎನ್ನುವ ಸತ್ಯ ಗೋಚರಿಸುತ್ತಿದೆ. ಆ ಕಾರಣವಾಗಿ ಅವರ ಆದಾಯದ ಮೂಲ ಉಂಬಳಿಯ ರೂಪದಲ್ಲಿ ಭೂಮಿ ಹಾಗೂ ಕಾಣಿಕೆಯ ರೂಪದಲ್ಲಿ ಧನ, ದವಸಧಾನ್ಯಗಳು -ಎರಡು ರೀತಿಯ ಅದಾಯ ಪಡೆಯುವ ಇವರು ನಿಜವಾಗಿಯೂ ಒಡೆಯರು. ಇಂದಿನವರೆಗೂ ಒಂದೆರಡು ಗುಡಿಗಳ ಒಡೆಯರ ಅಪವಾದಗಳನ್ನು ಬಿಟ್ಟರೆ ಉಳಿದೆಲ್ಲಾ ಒಡೆಯರು ಆರ್ಥಿಕವಾಗಿ ಗಟ್ಟಿಮುಟ್ಟಾಗಿಯೇ ಇದ್ದಾರೆ. ಕೆಲವೊಂದು ಊರುಗಳಲ್ಲಿ ಒಂದು ದೇವರ ಕೆಳಗಿನ ಒಡೆಯರ ಬಡ್ಡಿಗಳ ಸಂಖ್ಯೆ ಹೆಚ್ಚಾದಂತೆ ಮೂಲ ಆಸ್ತಿ ವಿಭಜನೆಯಾಗಿ ಒಡೆಯರ ಆರ್ಥಿಕ ಸ್ಥಿತಿಗತಿ ಅಷ್ಟಕಷ್ಟೆ ಇದೆ. ಭೂಮಿಯಿಂದ ಬರುವ ಆದಾಯದ ಜೊತೆ ಜೊತೆ ಭಕ್ತರಿಂದ ಹರಿದು ಬರುವ ಕಾಣಿಕೆ ಹಾಗೂ ದಕ್ಷಿಣೆರೂಪದ ಅದಾಯ ಚೆನ್ನಾಗಿರುತ್ತದೆ. ದೇವರು ಭಕ್ತರ ಮೇಲೆ ಬೀರುವ ಪ್ರಭಾವದ ಆಧಾರದ ಮೇಲೆ ಒಡೆಯರ, ಹಿರಕೂರ ಅವರ ಹಾಗೂ ಕಟ್ಟಿಕಾರ(ನಿಶಾನೆ ಹಿಡಿಯುವರು), ಡೊಳ್ಳಿನ ವಾಲಗದವರು, ತಾಳ ಬಾರಿಸುವವರು, ಸತ್ತಿಗೆ ಹಿಡಿಯುವವರು ಮುಂತಾದ ಚಾಜದವರಿಗೆ ಆದಾಯ ನಿರ್ಣಯವಾಗುತ್ತದೆ. ದಕ್ಷಿಣೆ ಬಂದರೆ

ಪೂಜಾರಿಗಳಿಗೆ, ಕಾಣಿಗೆ ಬಂದರೆ ಟ್ರಸ್ಟಿನವರಿಗೆ ಎಂಬ ಮಾತೊಂದು ಒಡೆಯರಲ್ಲಿ ಪ್ರಚಲಿತವಿದೆ. ದಕ್ಷಿಣೆ ಎಂದರೆ ಒಡೆಯರು ಗುಡಿಯಲ್ಲಿ ಮಾಡುವ ಆಚರಣೆಗಳಿಗೆ, ಭಕ್ತರ ಮನೆಗಳಿಗೆ ಹೋಗಿ ನೆರವೇರಿಸುವ ವಿಧಿಗಳಿಗೆ ಪ್ರತಿಯಾಗಿ ನೀಡುವ ಹಣಕ್ಕೆ ಅವರು ದಕ್ಷಿಣೆ ಎನ್ನುತ್ತಾರೆ. ದೊಡ್ಡ ಪ್ರಮಾಣದಲ್ಲಿ ಗುಡಿಗೆ ಏನನ್ನಾದರೂ ನೀಡಿದರೆ ಅದನ್ನು ಕಾಣಿಕೆ ಎಂದು ಕರೆಯುತ್ತಾರೆ. ಕಾಣಿಕೆಯ ಹಣ ಗುಡಿಯ ಟ್ರಸ್ಟಿನವರಿಗೆ ಸಂದಾಯವಾಗುತ್ತದೆ. ಟ್ರಸ್ಟಿಗೆ ಸಂದಾಯವಾದ ಹಣ ಗುಡಿಯ ಜೀರ್ಣೋದ್ಧಾರಕ್ಕೆ ಬಳಕೆಯಾಗುತ್ತದೆ. ದಕ್ಷಿಣೆ ರೂಪದಲ್ಲಿ ಬಂದ ಹಣವನ್ನು ಒಡೆಯರು ಸ್ವಂತಕ್ಕೆ ಬಳಸಿಕೊಳ್ಳುತ್ತಾರೆ. ದಕ್ಷಿಣೆಯ ಹಣ ಒರತೆಯ ನೀರಿನ ಹಾಗೆ ನಿತ್ಯ ನಿರಂತರವಾಗಿ ಹರಿದು ಬರುವುದರಿಂದ ಧೀರ್ಘಾವದಿಯಲ್ಲಿ ದಕ್ಷಿಣೆಯ ಒಟ್ಟು ಮೊತ್ತ ಗಣನೀಯವಾಗಿಯೇ ಇರುತ್ತದೆ. ರಾಶಿಯ ಸಮಯದಲ್ಲಿ ಭಕ್ತರ ಕಣಗಳಿಗೆ ಹೋದರೆ ಒಡೆಯರು ಹಿರಕೂರ ಅವರು ಉಳಿದ ಚಾಜದವರಿಗೆ ಐದರಿಂದ ಹದಿನೈದು ಬುಟ್ಟಿಯವರೆಗೆ ಮೆದೆ ಕೊಟ್ಟು ಕಳಿಸುತ್ತಾರೆ. ಹೀಗೆ ಹಲವಾರು ಭಕ್ತರು ಕಣಗಳಿಗೆ ಹೋಗುವ ಮೂಲಕ ಐದರಿಂದ ಹದಿನೈದು ಚೀಲದಷ್ಟು ದವಸಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಭಕ್ತರು ಬಂದು ಪಾಲಕಿ ಸಮೇತ ಮನೆಗೆ ಬರಬೇಕೆಂದು ಭಂಡಾರ ಕೊಡುತ್ತಾರೆ. ಭಂಡಾರ ಹಿಡಿದರೆ ಅವರಿಗೆ ದೊಡ್ಡ ಪ್ರಮಾಣದ ಆದಾಯ ಸಂದಾಯವಾಗುತ್ತದೆ. ಒಡೆಯರು ಭಂಡಾರ ಹಿಡಿದರೆ ಭಕ್ತರು ಐದರಿಂದ ಹತ್ತುಸಾವಿರ ರೂಪಾಯಿಗಳವರೆಗೆ ಕೊಡುತ್ತಾರೆ. ತಿಂಗಳಿಗೊಂದರಂತೆ ಭಂಡಾರ ಹಿಡಿದರೆ ಒಂದೊಂದು ಪಲ್ಲಕ್ಕಿಯ ವಾರ್ಷಿಕ ಆದಾಯ ಒಂದು ಲಕ್ಷ ಆಗುತ್ತದೆ.

ಇದೂ ಅಲ್ಲದೇ ಭಕ್ತರ ಮನೆಗೆ ಐದೆಸಿಗೆ ಹೋದರೆ, ಲಗ್ನಕ್ಕೆ ಹೋದರೆ ದಕ್ಷಿಣೆಯ ಸಮೇತ ಬಟ್ಟೆಬರಿ, ಆಹೇರಿಯೂ ದೊರೆಯುತ್ತದೆ. ಬೇಡಿಕೊಂಡ ಭಕ್ತರು ತಮ್ಮ ಬೇಡಿಕೆ ಈಡೇರಿದರೆ ಕಣ್ಣೆಟ್ಟು, ಕ್ಯಾರಿಮೀಸೆ ಉಡದಾರ ಇತ್ಯಾದಿಗಳನ್ನು ತಂದು ಅರ್ಪಿಸುತ್ತಾರೆ.

ಹೀಗೆ ಒಡೆಯರಿಗೆ ಹಲವಾರು ಮೂಲಗಳಿಂದ ಆದಾಯ ಹರಿದು ಬಂದು ಅವರು ಸ್ಥಿತಿವಂತರಾಗಿರುವಂತೆ ಮಾಡಿದೆ. ತಮ್ಮ ದೇವರು ಅನ್ಯ ದೇವರಿಗಿಂತ ಹೆಚ್ಚಿನ ಪ್ರಮಾಣದ ಸಿದ್ಧಾಟಿಕೆಯವನು ಎಂದು ಪ್ರಚಾರ ಮಾಡುವ ಮೂಲಕವೂ ಭಕ್ತರನ್ನು ತಮ್ಮ ಕಡೆಗೆ ಹೊರಳಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಾ ಬಂದಿದ್ದನ್ನುನಾವು ಕಾಣುತ್ತೇವೆ.

ಕೊನೆ ಟಿಪ್ಪಣಿಗಳು

೧. ಮಾಹಿತಿ ನೀಡಿದವರು: ಕಲ್ಲಪ್ಪ ಭೂತಾಳ ಪೂಜೇರಿ, ಶಿವಶರಣಪ್ಪ ಶಿವಪೂಜೆಪ್ಪ ಒಡೆಯರ, ಸಾ. ಕಲ್ಲೂರ, ತಾ. ಜೇವರಗಿ, ಜಿ. ಗುಲಬರ್ಗಾ

೨. ಮಾಹಿತಿ ನೀಡಿದವರು: ಧರ್ಮರಾಜ ಓಗೆಪ್ಪ ಒಡೆಯರ, ಸಾ. ಕಲ್ಲೂರ, ತಾ.ಜೇವರಗಿ

೩. ಮಾಹಿತಿ ನೀಡಿದವರು: ಬಿ.ಆಯ್.ತಂಬದ ಗುರುಗಳು, ಸಾ. ಸೋಲಾಪುರ

೪. ನೋಡಿ: http:\\en.wikipedia.org\wiki\mask

೫. ನೋಡಿ: http:\\www.himalayan mart.com/masks

೬. ಕಲ್ಲೂರ ಹಾಗೂ ಚಬನೂರ ಜಾತ್ರೆಯ ವಿವರವನ್ನು ಕ್ಷೇತ್ರಕಾರ್ಯದ ಅನುಭವ ಮಾರಾಯರು ಒದಗಿಸಿದ ಮಾಹಿತಿಯ ಆಧಾರದ ಮೇಲೆ ನೀಡಲಾಗಿದೆ

೭. ಹತ್ತೂರಿನ ಜಾತ್ರೆಯ ವಿವರವನ್ನು ಕ್ಷೇತ್ರಕಾರ್ಯದ ಅನುಭವ ಹಾಗೂ ಹತ್ತೂರಿನ ಶೀಲಿಸಿದ್ಧ ಮಾರಾಯರು ಹಾಗೂ ಅವಧು ಬನಸಿದ್ಧ ಹಿರಕೂರ ಅವರು ಒದಗಿಸಿದ ಮಾಹಿತಿಯ ಆಧಾರದ ಮೇಲೆ ನೀಡಲಾಗಿದೆ

೮. ನೋಡಿ: 'ಸಿದ್ಧಸಿರಿ' ಮದಗೊಂಡ ಮಾರಾಯ, ಮುಮ್ಮೆಟಗುಡ್ಡ, ಪುಟ ೬೩

೯. ಜಾತ್ರೆಯ ವಿವರಣೆಗೆ ಆಧಾರ: ಕ್ಷೇತ್ರಕಾರ್ಯ ಹಾಗೂ ಅಣ್ಣರಾದ ವಿಠಲ ಅಜಾ ವಡೆಯರ, ಸುಲ್ತಾನ ಸೋಮಣ್ಣ ಪೂಜಾರಿ ಹಾಗೂ ಅಮಸಿದ್ಧ ಶಿವಯೋಗಿ ಪುಲಾರಿ, ಸಾ. ಭಂಡಾರಕವಟೆ ಅವರು ನೀಡಿದ ವಿವರ

೧೦. ಜಾತ್ರೆಯ ವಿವರಣೆಗೆ ಆಧಾರ: ಕ್ಷೇತ್ರಕಾರ್ಯ ಹಾಗೂ ತೆರವಾಡದ ಶಿವಗೊಂಡ ಬಾಬುಗೌಡ ಪಾಟೀಲ, ತುಕಾರಾಮ ಹೊನ್ನಸಿದ್ಧ ಪೂಜಾರಿ, ಜಗನ್ನಾಥ ರಾ.ಪೂಜಾರಿ ಅವರು ನೀಡಿದ ಮಾಹಿತಿ

೧೧. ಮಾಹಿತಿ ನೀಡಿದವರು: ಅವತಾರಿ ಬಿಳಿಯಾನಿ ಒಡೆಯರು, ಸಾ. ಮೊರಬ ತಾ.ರಾಯಬಾಗ, ಅಮೋಘಸಿದ್ಧ ಬಿಳಿಯಾನಿ ಒಡೆಯರ ಡಿಸ್ಟ್ರಿಕ್ಟ್ ಕೋರ್ಟ್ ಜಡ್ಜ್, ಬೆಂಗಳೂರು

೧೨. ಮಾಹಿತಿ ನೀಡಿದವರು: ಸಿದ್ಧಗೌಡ ಮಲ್ಲಪ್ಪ ಒಡೆಯರು, ಸಾ. ಐನಾಪುರ, ತಾ. ಅಥಣಿ

೧೩. ಮಾಹಿತಿ ನೀಡಿದವರು: ಮದಗೊಂಡ ಬಿಳಿಯಾನಿಸಿದ್ಧ ಒಡೆಯರ, ಸಾ. ಉಮದಿ, ತಾ. ಜತ್ತ

೧೪. ಜಾತ್ರೆಯ ವಿವರಣೆಗೆ ಆಧಾರ: ಕ್ಷೇತ್ರಕಾರ್ಯ ಹಾಗೂ ಕುಂಚನೂರಿನ ಅಮೋಗೆಪ್ಪ ಮಾದಪ್ಪ ಒಡೆಯರ, ಅಮಸಿದ್ಧ ಮುತ್ತಪ್ಪ ಕೊನೆಗೋಳ ಅವರು ನೀಡಿದ ವಿವರ

೧೫. ಲೇಖನ: ಸಿದ್ಧ ಪರಂಪರೆಯಲ್ಲಿ ಅಮೋಘಸಿದ್ಧ: ಡಾ. ಎಂ.ಎಂ.ಪಡಶೆಟ್ಟಿ, ಗ್ರಂಥ ಹಾಲಕೆನೆ: (ಸಂ) ಡಾ. ಶ್ರೀರಾಮ ಇಟ್ಟಣ್ಣವರ, ಪ್ರೊ. ವ್ಹಿ.ಡಿ.ವಸ್ತ್ರದ ಹಾಗೂ ಪ್ರೊ. ಚನ್ನಪ್ಪ ಕಟ್ಟಿ

೧೬. ಉಗ್ಗಡಿಸಿದವರು: ಅಮ್ಮಣ್ಣ ಶಿವಪ್ಪ ಒಡೆಯರ, ಸಾ. ಕುಂಚನೂರು, ತಾ. ಜಮಖಂಡಿ

೧೭. ಉಗ್ಗಡಿಸಿದವರು: ಮಹಾದೇವಪ್ಪ ಬಿಳಿಯಾನಿಸಿದ್ಧ ಒಡೆಯರ, ಸಾ. ಕುಂಚನೂರು, ತಾ. ಜಮಖಂಡಿ

೧೮. ಉಗ್ಗಡಿಸಿದವರು: ಅಮೋಗೆಪ್ಪ ಮಾದಪ್ಪ ಒಡೆಯರ, ಸಾ. ಕುಂಚನೂರು, ತಾ. ಜಮಖಂಡಿ

೧೯. ಮಾಹಿತಿ ನೀಡಿದವರು: ಮಹಾದೇವ ವಿಠ್ಠಲ ಬಡಚಿ, ಸಾ. ಹೊನ್ನಬೆಳಗಲಿ, ತಾ. ಮುಧೋಳ

೨೦. ಜಾತ್ರೆಯ ವಿವರಣೆಗೆ ಆಧಾರ: ಕ್ಷೇತ್ರಕಾರ್ಯ ಹಾಗೂ ಅಮೋಗೆಪ್ಪ ಮಾದಪ್ಪ ಒಡೆಯರ, ಸಾ. ಕುಂಚನೂರ ಹಾಗೂ ವಿಠಲ ಅಮಸಿದ್ಧ ಬಿರಾದಾರ, ಸಾ. ಭೀವರಗಿ

೨೧. ವಿವರಕ್ಕೆ ನೋಡಿ- 'ಸಿದ್ಧಸಿರಿ' ಮದಗೊಂಡ ಮಾರಾಯರು ಪುಟ ೭೨, ೭೪, ೭೫

೨೨. ಮಾಹಿತಿ ನೀಡಿದವರು: ಶಾವರಸಿದ್ಧ ಧರ್ಮಣ್ಣ ಜಳಗೌಡರ ಸಾ: ಅಚೇಗಾವಿ, ತಾ. ದ.ಸೋಲಾಪುರ

೨೩. ಜಾತ್ರೆಯ ವಿವರಣೆ ನೀಡಿದವರು: ಶಾವರಸಿದ್ಧ ಧರ್ಮಣ್ಣ ಜಳಗೌಡರ ಹಾಗೂ ಅರವಿಂದ ನಾಡಗೌಡ, ಸಾ. ಅಚೇಗಾವಿ, ತಾ. ದ.ಸೋಲಾಪುರ

೨೪. ಮಾಹಿತಿ ನೀಡಿದವರು: ಅಣ್ಣಾರಾವ ವಿಠಲ ಅಜಾವಡಿಯರ ಸಾ: ಭಂಡಾರಕವಟೆ

೨೫. ಮಾಹಿತಿ ನೀಡಿದವರು: ಶಾವರಸಿದ್ಧ ಧರ್ಮಣ್ಣ ಜಳಗೌಡರ ಹಾಗೂ ಅರವಿಂದ ನಾಡಗೌಡ, ಸಾ. ಅಚೇಗಾವಿ ತಾ. ದ.ಸೋಲಾಪುರ

೨೬. ಮಾಹಿತಿ ನೀಡಿದವರು: ಅವಧು ಬನಸಿದ್ಧ ಹಿರಕೂರ, ಸಾ. ಹತ್ತೂರ, ತಾ. ದಕ್ಷಿಣ ಸೋಲಾಪುರ

೨೭. ಮಾಹಿತಿ ನೀಡಿದವರು: ಸಿದ್ಧಗೌಡ ಮಲ್ಲಪ್ಪ ಒಡೆಯರ, ಸಾ. ಐನಾಪುರ, ತಾ. ಅಥಣಿ, ಜಿ. ಬೆಳಗಾವಿ

೨೮. ಮಾಹಿತಿ ನೀಡಿದವರು: ಸೋಮಲಿಂಗ ತಿಪ್ಪಣ್ಣ ಬಿರಾದಾರ, ಸಾ. ಭೀವರಗಿ, ತಾ. ಜತ್ತ

೨೯. ಮಾಹಿತಿ ನೀಡಿದವರು: ಚಿದಾನಂದ ಸಿದ್ದಪ್ಪ ಒಡೆಯರ ಹಾಗೂ ಬಸವಣ್ಣೆಪ್ಪ ಚಿದಾನಂದ ಒಡೆಯರ, ಸಾ. ಕೆರೂರ ತಾ. ಚಿಕ್ಕೋಡಿ, ಜಿ. ಬೆಳಗಾವಿ

೩೦. ಮಾಹಿತಿ ನೀಡಿದವರು: ಅಮೋಗೆಪ್ಪ ಮಾದಣ್ಣ ಒಡೆಯರ, ಸಾ. ಕುಂಚನೂರ, ತಾ. ಜಮಖಂಡಿ

೩೧. ಮಾಹಿತಿ ನೀಡಿದವರು: ಸಂಕಯ್ಯ ಗುರಯ್ಯ ಒಡೆಯರ, ಸಾ. ಸಿದ್ದಾಪುರ ತಾ. ಬೀಳಗಿ

೩೨. ಮಾಹಿತಿ ನೀಡಿದವರು: ಅಮೋಗೆಪ್ಪ ಮಾದಣ್ಣ ಒಡೆಯರ, ಸಾ. ಕುಂಚನೂರ ತಾ. ಜಮಖಂಡಿ

೩೩. ಮಾಹಿತಿ ನೀಡಿದವರು: ಅಣ್ಣರಾವ್ ವಿಠಲ ಅಜಾವಡಿಯರು, ಸುಲ್ತಾನ ಸೋಮಣ್ಣ ಪೂಜಾರಿ, ಅಮಸಿದ್ಧ ಶಿವಯೋಗಿ ಫುಲಾರಿ ಸಾ. ಭಂಡಾರಕವಟೆ

೨೪. ಮಾಹಿತಿ ನೀಡಿದವರು: ಅಮೋಗೆಪ್ಪ ಮಾದಣ್ಣ ಒಡೆಯರ, ಸಾ. ಕುಂಚನೂರ, ತಾ. ಜಮಖಂಡಿ, ಜಿ. ಬಾಗಲಕೋಟೆ

೩೫. ಮಾಹಿತಿ ನೀಡಿದವರು: ಭೂತಪ್ಪ ಒಡೆಯರ, ಸಾ. ಉದಗಟ್ಟಿ, ತಾ. ಗೋಕಾಕ

೩೬. ಮಾಹಿತಿ ನೀಡಿದವರು: ಸಂಕಯ್ಯ ಗುರಯ್ಯ ಒಡೆಯರ, ಸಾ. ಸಿದ್ದಾಪುರ, ತಾ. ಬೀಳಗಿ

೩೭. ಮಾಹಿತಿ ನೀಡಿದವರು: ಅಮೋಗೆಪ್ಪ ಮಾದಣ್ಣ ಒಡೆಯರ, ಸಾ. ಕುಂಚನೂರ, ಮದಗೊಂಡ ಮಲ್ಲಪ್ಪ ಬಾಳಗೆ ಸಾ. ಉಮದಿ, ಧರ್ಮರಾಜ ಹೂವ್ವೆಗೆಪ್ಪ, ಒಡೆಯರ ಹಾಗೂ ಮಲಕಾರಿಸಿದ್ಧ ಮಲ್ಲಾ ಒಡೆಯರ, ಸಾ. ಕಲ್ಲೂರ, ತಾ. ಜೇವರಗಿ

೩೮. ಮಾಹಿತಿ ನೀಡಿದವರು: ಸಿದ್ದಣ್ಣ ಮುತ್ತಗಿ, ಯಶವಂತರಾಯ ಮಲ್ಲೇದ, ಸಾ. ಕಲ್ಲೂರ (ಕೆ) ತಾ. ಜೇವರಗಿ

೩೯. ಮಾಹಿತಿ ನೀಡಿದವರು: ಅದೇ

೪೦. ಮಾಹಿತಿ ನೀಡಿದವರು: ಅಮೋಗೆಪ್ಪ ಮಾದಣ್ಣ ಒಡೆಯರ, ಸಾ. ಕುಂಚನೂರ, ತಾ. ಜಮಖಂಡಿ

೪೧. ಮಾಹಿತಿ ನೀಡಿದವರು: ಅದೇ

೪೨. ಮಾಹಿತಿ ನೀಡಿದವರು: ಅದೇ

೪೩. ಮಾಹಿತಿ ನೀಡಿದವರು: ಸಿದ್ಧಲಿಂಗಪ್ಪ ಒಡೆಯರ, ಸಾ. ಕೆಮ್ಮನಕೋಲ, ತಾ. ಗೋಕಾಕ

೪೪. ಮಾಹಿತಿ ನೀಡಿದವರು: ಅವಧು ಬನಸಿದ್ಧ ಹಿರಕೂರ, ಸಾ: ಹತ್ತೂರ, ತಾ. ದ.ಸೋಲಾಪುರ

೪೫. ಹಾಡಿದವರು: ಅವಧು ಬನಸಿದ್ಧ ಹಿರಕೂರ, ಸಾ. ಹತ್ತೂರ, ತಾ. ದ.ಸೋಲಾಪುರ

೪೬. ಹಾಡಿದವರು: ಅದೇ

೪೭. ಮಾಹಿತಿ ನೀಡಿದವರು: ಅದೇ

೪೮. ಮಾಹಿತಿ ನೀಡಿದವರು: ಧನಪಾಲ ಜಿತ್ತು ಒಡೆಯರ, ಶ್ರೀಪಾಲ ಬಾಬುರಾವ ಒಡೆಯರ, ಸಾ. ಬ್ರಹ್ಮನಾಳ ತಾ. ಸಾಂಗಲಿ

೪೯. ಮಾಹಿತಿ ನೀಡಿದವರು: ಮಲಕಾರಿಸಿದ್ಧ ಮಲ್ಲಾ ಒಡೆಯರ, ಸಾ. ಕಲ್ಲೂರ, ತಾ. ಜೇವರಗಿ

೫೦. ಮಾಹಿತಿ ನೀಡಿದವರು: ಮಾನಸಿದ್ಧ ಚಂದ್ರಮ ಶಿರಗಟ್ಟಿ (ಒಡೆಯರ) ಸಾ. ಉಮದಿ, ತಾ. ಜತ್ತ

೫೧. ಮಾಹಿತಿ ನೀಡಿದವರು: ಶಿವಗೊಂಡ ಬಾಬುಗೊಂಡ ಪಾಟೀಲ, ಸಾ. ತೆರೆವಾಡ, ತಾ. ಶಿರೋಳ ಜಿ. ಕೋಲಾಪುರ

೫೨. ಮಾಹಿತಿ ನೀಡಿದವರು: ಜಗನ್ನಾಥ ರಾ. ಪೂಜಾರಿ, ಸಾ. ತೆರೆವಾಡ, ತಾ. ಶಿರೋಳ, ಜಿ. ಕೋಲಾಪುರ

೫೩. ಮಾಹಿತಿ ನೀಡಿದವರು: ಧನಪಾಲ ಜಿತ್ತು ಒಡೆಯರ, ಸಾ. ಬ್ರಹ್ಮನಾಳ, ತಾ. ಸಾಂಗಲಿ

೫೪. ಮಾಹಿತಿ ನೀಡಿದವರು: ಅವಧು ಬನಸಿದ್ಧ ಹಿರಕೂರ, ಸಾ. ಹತ್ತೂರ, ತಾ. ದ.ಸೋಲಾಪುರ

೫೫. ಮಾಹಿತಿ ನೀಡಿದವರು: ಅದೇ

ಅಧ್ಯಾಯ : ಐದು

ಒಡೆಯರ ಸಾಹಿತ್ಯ : ಉಗಾಳಿಕೆ, ಹರಕೆ ಮತ್ತು ಹೇಳಿಕೆ

ಅಧ್ಯಾಯ : ಐದು

ಒಡೆಯರ ಸಾಹಿತ್ಯ ಉಗಾಳಿಕೆ, ಹರಕೆ ಮತ್ತು ಹೇಳಿಕೆ

೫. ಒಡೆಯರ ಸಾಹಿತ್ಯ

ಪಂಥವೊಂದು ತನ್ನನ್ನು ಜನಮಾನಸದಲ್ಲಿ ಸ್ಥಿರವಾಗಿ ಸ್ಥಾಪಿಸಿಕೊಳ್ಳಲು ಹಲವಾರು ತಂತ್ರಗಳನ್ನು ರೂಪಿಸಿಕೊಂಡಿರುತ್ತದೆ. ಜಾತ್ರೆ, ಉತ್ಸವ, ಆಚರಣೆಗಳು ಆ ತಂತ್ರದ ಒಂದು ಭಾಗವಾದರೆ, ಆ ಸಂದರ್ಭಕ್ಕೆ ಸರಿಹೊಂದುವಂಥ ಸಾಹಿತ್ಯ ಸೃಷ್ಟಿಸಿಕೊಳ್ಳುವುದು ಇನ್ನೊಂದು ಭಾಗವಾಗಿರುತ್ತದೆ. ಹಿಂದಿನ ಅಧ್ಯಾಯದಲ್ಲಿ ಜಾತ್ರೆ, ಉತ್ಸವ, ನಂಬಿಕೆ, ಆಚರಣೆಗಳ ಕುರಿತು ಚರ್ಚಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಒಡೆಯರು ತಮ್ಮ ಪೂರ್ವಜರ ಹೆಸರಿನಲ್ಲಿ ನಡೆಯಿಸುವ ಜಾತ್ರೆ, ಉತ್ಸವ, ಆಚರಣೆಗಳಲ್ಲಿ ಬಳಸುವ ಸಾಹಿತ್ಯದ ಕುರಿತು ಚರ್ಚಿಸಲಾಗುತ್ತದೆ.

ವಿವಿಧ ಸನ್ನಿವೇಶಗಳಲ್ಲಿ ಒಡೆಯರು/ಮಾರಾಯರು ಬಳಸುವ ಸಾಹಿತ್ಯವನ್ನು ಪ್ರಸ್ತುತ ಅಧ್ಯಾಯದಲ್ಲಿ ಉಗಾಳಿಕೆ, ಹರಕೆ ಹಾಗೂ ಹೇಳಿಕೆ ಎಂಬ ಉಪ ಶೀರ್ಷಿಕೆಯಲ್ಲಿ ವಿಭಾಗೀಕರಿಸಿಕೊಳ್ಳಲಾಗಿದೆ. ತಮ್ಮ ಪರಂಪರೆಯಲ್ಲಿ ಆಗಿ ಹೋದವರ ಕುರಿತು ಇವರು ಅಪಾರವಾದ ಡೊಳ್ಳಿನ ಹಾಡುಗಳನ್ನು ರಚಿಸಿದ್ದಾರೆ. ಅಂಥ ಹಾಡುಗಳನ್ನು ಮೊದಲ ಅಧ್ಯಾಯದಲ್ಲಿ ಸಾಂದರ್ಭಿಕವಾಗಿ ಆಕಾರ ಸಾಮಗ್ರಿಯಾಗಿ ಬಳಸಿಕೊಂಡಿರುವು ದರಿಂದ ಆ ಕುರಿತು ಇಲ್ಲಿ ಚರ್ಚಿಸದೇ ಕೇವಲ ಉಗಾಳಿಕೆ, ಹರಕೆ ಮತ್ತು ಹೇಳಿಕೆಗಳ ಕುರಿತು ಚರ್ಚಿಸಲಾಗಿದೆ.

೫.೧ ಉಗಾಳಿಕೆ

ಪಂಥವೊಂದು ತನ್ನ ಮೂಲ ವ್ಯಕ್ತಿಯ ಬಗೆಗೆ ಭಕ್ತಿಭಾವ ಸೃಷ್ಟಿಯಾಗುವಂತೆ, ಅವನ ಹೆಸರು ಸದಾ ಭಕ್ತರ ನಾಲಗೆಯ ಮೇಲೆ ಉಳಿಯುವಂತೆ ಮಾಡುವ ಉದ್ದೇಶದಿಂದ 'ಉಗಾಳಿಕೆ'ಯನ್ನು ರೂಪಿಸಿ ಕೊಂಡಿರುತ್ತದೆ. ಉಗಾಳಿಕೆ ಎನ್ನುವ ಶಬ್ದ 'ಉಗ್ಗಡಿಸು' ಎನ್ನುವುದಕ್ಕೆ ಸಮಾನವಾಗಿ ಬಳಸಿದ್ದಾಗಿದೆ. ಎಲ್ಲಮ್ಮ ನಿನ್ನಾಲಕ ಉಧೋ, ವೆಂಕಟರಮಣ ಗೋವಿಂದಾ ಗೋವಿಂದ, ಏಳುಕೋಟಿ ಏಳುಕೋಟಿಗೋ, ದಾವಲ ಮಲ್ಲಿಕ್‌ಕೀ ದೋಸ್ತರಾಹೋದೀನ್, ಪರೂತ ಮಲ್ಲಯ್ಯ ಉಘೇ ಉಘೇ ಎಂದು ಬೇರೆ ಬೇರೆ ಪಂಥಗಳು ಹೇಳುವಂತೆ ಅಮೋಘಸಿದ್ಧ ಪರಂಪರೆಯವರು 'ಹರ ಹರೋ ಭಕ್ತ ಹರ ಹರೋ' ಎಂದು ಉಗಾಳಿಕೆ ಮಾಡುವುದಿದೆ.

[illegible]

[illegible]

[illegible]

[illegible]

[illegible]

[illegible]

ಮೇಲೆ ಉಲ್ಲೇಖಿಸಿರುವ ಬಹುಪಾಲು ಪಂಥಗಳಿಗೆ ಒಬ್ಬನೇ ಮುಖ್ಯ ಮೂಲಪುರುಷನಿರುವುದರಿಂದ ಅವರ ಉಗ್ಗಡಿಸುವಿಕೆಯು ವೈವಿಧ್ಯಮಯವಾಗಿರುವುದಿಲ್ಲ. ಆದರೆ ಅಮೋಘಸಿದ್ಧ ಪರಂಪರೆಯಲ್ಲಿ ಬಹುದೇವತೆಗಳು ಪ್ರಮುಖರೆನ್ನಿಸಿಕೊಂಡಿರುವುದರಿಂದ ಅವರ ಉಗಾಳಿಕೆಯಲ್ಲಿ ಅಪಾರವಾದ ವೈವಿಧ್ಯತೆಯಿರುತ್ತದೆ. ದೇವತೆಗಳು ಹಲವರಾದರೂ ಒಂದೇ ವಂಶದವರಾಗಿರುವುದರಿಂದ ಅವರ ಉಗಾಳಿಕೆಗಳಲ್ಲಿ ವಂಶಾವಳಿಯನ್ನು ಸ್ಮೃತಿಯಲ್ಲಿ ಉಳಿಸಲು ಪ್ರಯತ್ನಿಸುವ ಉಗಾಳಿಕೆಗಳು ನಮಗೆ ದೊರೆಯುತ್ತವೆ.

ಉಗಾಳಿಕೆಯನ್ನು ಸಾಮಾನ್ಯವಾಗಿ ಎರಡು ಸಂದರ್ಭದಲ್ಲಿ ಮಾಡುತ್ತಾರೆ. ದೇವರಿಗೆ ಗುಡಿಯಲ್ಲಿ ಪೂಜೆ ಸಲ್ಲಿಸುವಾಗ ಹಾಗೂ ಭಕ್ತರ ಮನೆಗೆ ಪ್ರಸಾದ ಸ್ವೀಕರಿಸಲು ಹೋದಾಗ.

೫.೧.೧ ಪೂಜಾ ಸಮಯದ ಉಗಾಳಿಕೆ

ಅಮೋಘಸಿದ್ಧನ ಪೂಜಾರಿಗಳು ತಮ್ಮ ದೇವರ ಪೂಜೆಯನ್ನು ಬಹುನಿಷ್ಠೆಯಿಂದ ಮಾಡುತ್ತಾರೆ. 'ನೇಮ ನಿಷ್ಠೆ' ಅವರ ಅತ್ಯಂತ ಜನಪ್ರಿಯ ಪರಿಕಲ್ಪನೆ. ಅವರ ಪೂಜಾ ಕ್ರಮವನ್ನು ವಿವರಿಸುವ ಹಾಡೊಂದಿದೆ. ಇಪ್ಪತ್ತೊಂದು ಧರ್ಮರಲ್ಲಿ ಒಬ್ಬನಾದ ಹತ್ತೂರ ಓಗಣ್ಣ ಮುತ್ತ್ಯಾ ತನ್ನ ಅಜ್ಜನ ಗುರುವಾದ ಸೋಮಲಿಂಗನನ್ನು ಪೂಜಿಸುವ ದೃಶ್ಯವನ್ನು ಈ ಹಾಡು ವರ್ಣಿಸುತ್ತದೆ.

ಹತ್ತೂರ ಓಗಣ್ಣ ಮುತ್ತ್ಯಾನು ಗುರುವಿನ ಶಾವೆಯ ಮಾಡ್ಯಾನು
ಹರಹರೋ ನನ ಕೈಲಾಸೋ ಒಂದಾನೆ ಒಂದು ದಿನದಲ್ಲಿ
ಒಂದಾನೇ ಒಂದು ದಿನದಲ್ಲಿ ಇಂದಿನ ಕಾಲದಲ್ಯಾನು
ಸಿದ್ಧರ ಮನಿದೊಳಗ್ಯಾನು ಝಾಮ ಜಳಕವ ಮಾಡ್ಯಾನು
ಝಾಮ ಜಳಕವ ಮಾಡ್ಯಾನು ನೇಮ ನಿಷ್ಠಿಯ ಮಾಡ್ಯಾನೆ
ಹರಹರ ಅನುವೂತಾನಲ್ಲೋ ಶಿವಶಿವ ಅನುವೂತಾನಲ್ಲೋ

ಹೂವ್ವಿನ ಝುಲ್ಲೆವ ಹಿಡಿದಾನೆ ಸೀತಾಳ ಬಿಂದಗಿ ಹೊತ್ತಾನೆ
ಹ್ಯಾಮದ ಕಂಬಳಿ ಹೊದ್ದಾನೆ ನೇಮದ ಬೆತ್ತೊಂದ ಹಿಡಿದಾನೋ
ಸಿದ್ಧರ ಶಿವಮನಿ ಬಿಟ್ಟಾನೆ ಬಯಲ ಮಡ್ಡಿಗೆ ಬಂದಾನೋ

ಬಯಲ ಮಡ್ಡಿಗೆ ಬಂದಾನೇ ಮಕಣಾಪುರದ ಮಾರಗ
ಮಕಣಾಪುರದ ಮಾರಗ ಇಂದೇ ಹಿಡಿವೂತಾನಲ್ಲೋ
ಸಾಗಿ ಬರುವೂತಾನಲ್ಲೋ ಬೀಗಿ ಬರುವೂತಾನಲ್ಲೋ
ಬೀಗಿ ಬರುವೂತಾನಲ್ಲೋ ಗುರುವಿನ ಗುಡಿಯವ ಹೊಕ್ಕಾನೋ

ಗುರುವಿನ ಗುಡಿಯ ಒಳಗ್ಯಾನು ಬಲಗಾಲ ಪಾದವ ಒಗದಾನೆ
ಬಲಗಾಲ ಪಾದವ ಒಗದಾನೆ ಸೀತಾಳ ಬಿಂದಗಿ ಇಳವ್ಯಾನ
ಸೀತಾಳ ಬಿಂದಗಿ ಇಳವ್ಯಾನೆ ಹೂವಿನ ಝುಲ್ಲೆವ ಇಟ್ಯಾನೆ
ಹೂವಿನ ಝುಲ್ಲೆವ ಇಟ್ಯಾನೆ ಗುರುವಿನ ಗುಡಿಯ ಒಳಗ್ಯಾನೋ
ಗುರುವಿನ ಗುಡಿಯ ಒಳಗ್ಯಾನೋ ಗುರುವಿನ ಮಂಡೆವ ಬಿಚ್ಚ್ಯಾನೆ

ಎಡಕೀನ ಮಂಡೆವ ಬಿಚ್ಚ್ಯಾನೋ ಮಿಡಿಯ ನಾಗರನಿದ್ದಾವ
ಮಿಡಿಯ ನಾಗರನಿದ್ದಾವೇ ಎಡಗೈಲಿ ಎಳದೊಗದಾನೋ
ಬಲಕಿನ ಮಂಡೆವ ಬಿಚ್ಚ್ಯಾನೋ ರಿಕ್ಕದ ಚೇಳನಿದ್ದಾವೋ
ರಿಕ್ಕದ ಚೇಳನಿದ್ದಾವೋ ಬಲಗೈಲಿ ಎಳೆದೊಗದಾನೋ

ನೀರಿಟ್ಟ ನೀರೆರದಾನೋ ಎಣ್ಣೆಲಿ ಎಣ್ಣೆ ಮಜಲ ಮಾಡ್ಯಾನೋ
ಎಣ್ಣೆಲಿ ಎಣ್ಣೆ ಮಜಲ ಮಾಡ್ಯಾನೋ ಬತ್ತೀಲಿ ತಿಳಿ ಮಜಲ ಮಾಡ್ಯಾನೋ
ಹರಹರೋ ನನ ಕೈಲಾಸೋ ಧೂಪ ತುಂಬುತಾನಲ್ಲೋ
ಉಗ್ಗಾರಿ ಮನಿಗವ ಹೋಗ್ಯಾನೋ ತೆರೆದ ಖಂಡವ ತಂದಾನೋ
ಮಾಪದ ಎಣ್ಣೆವ ನೀಡ್ಯಾನೇ ಗಗ್ಗಡ ಜ್ಯೋತಿ ಹಚ್ಚ್ಯಾನೋ[1]

ಇಲ್ಲಿ ವರ್ಣಿತವಾಗಿರುವ ಓಗಣ್ಣ ಮುತ್ಯಾ ಮಾಡಿದ ಪೂಜೆಯ ಚಿತ್ರಣ ಮಾರಾಯರು ನಿತ್ಯವೂ ಮಾಡುವ ಪೂಜೆಯ ವಿವರಗಳ ಸ್ಮೃತಿಯ ಆಧಾರದ ಮೇಲೆ ನೀಡಿದ್ದಾಗಿದೆ. ಇಲ್ಲಿ ಬರುವ ಝಾವ ಜಳಕ, ನೇಮನಿಷ್ಠಿ, ಹೂವಿನ ಝೊಲ್ಲಿ, ಸೀತಾಳ ಬಿಂದಗಿ, ಹೋಮದ ಕಂಬಳಿ, ನೇಮದ ಬೆತ್ತ, ನೀರಿಟ್ಟ ನೀರೆರೆಯುವುದು, ಎಣ್ಣೆಲಿ ಎಣ್ಣೆ ಮಜಲ ಮಾಡುವುದು, ಬತ್ತೀಲಿ ತಿಳಿಮಜಲ ಮಾಡುವುದು, ಮಾಪದ ಎಣ್ಣೆ, ಗಗ್ಗಡ (ಕಕ್ಕಡ) ಜ್ಯೋತಿ ವಿವರಗಳು ಇಂದಿಗೂ ಪ್ರತಿಯೊಬ್ಬ ಮಾರಾಯರು ಮಾಡುವ ಪೂಜೆಯನ್ನು ನೆನಪಿಸುವಂಥದ್ದಾಗಿದೆ.

ಹೀಗೆ ಪೂಜೆ ಸಲ್ಲಿಸುವ ಸಂದರ್ಭದಲ್ಲಿ ಅವರು ದೇವರ ನಾಮಗಳನ್ನು ಉಗಾಳಿಸುತ್ತಿರುತ್ತಾರೆ. ಪೂಜೆಯಲ್ಲಿ ಮಾರಾಯರಿಗೆ ಸಾಥ ನೀಡುವ ಹೂಗಾರ/ಹಿರಕೂರ ಘೇ ಅನ್ನುತ್ತಿರುತ್ತಾನೆ.

ಹರಹರೋ, ಕೌಲಗುಡ್ಡ ಕರಿಯೋಗಿಸಿದ್ಧ ಗದ್ದನಕೇರಿಮಳಿಸಿದ್ಧ ||ಘೇ||
ಕುಂಚನೂರು ಕೆಂಚಮಾದಣ್ಣಾ ಉಮದಿ ಮಲಕಾರಿಸಿದ್ಧೋ ||ಘೇ||
ಜ್ಯೋತಿಲಕ್ಕಪ್ಪೆಡಿಯೋ ಅರಕೇರಿ ಬರಮ ಬಡಿಯೋ ||ಘೇ||
ಹರಹರೋ ಭಕ್ತ ಹರಹರೋ ||ಘೇ||[2]

ಈ ಉಗಾಳಿಕೆ ಮಾಡಿದವರು ಕುಂಚನೂರಿನ ಮಾದಣ್ಣನ ಗುಡಿಯ ಮಾರಾಯರು. ಇವರು ಈ ತೆರನಾದ ಉಗಾಳಿಕೆ ಮಾಡಲು ಕಾರಣವೇನೆಂದರೆ ಇಲ್ಲಿ ಉಲ್ಲೇಖಿತರಾದ ದೇವರುಗಳು ಅಮೋಘಸಿದ್ಧನ ನಾಲ್ಕನೆಯ ವರವಿನ ಮಗನಾದ ಕನ್ನಮುತ್ತ್ಯಾನ ವಂಶದವರಾಗಿರುವುದು.

ಮಾರಾಯರು ಯಾವು ಬಡ್ಡಿಯವರೇ ಆಗಿರಲಿ ಇಡೀ ಪರಂಪರೆಯ ಗುರುವಿನ ಸ್ಥಾನದಲ್ಲಿರುವ ಸೋಮಲಿಂಗನನ್ನು, ವಂಶದ ತಾಯಿ ಬೇರಿನಂತಿರುವ ಅಮೋಘಸಿದ್ಧನನ್ನು ಹಾಗೂ ಅಮೋಘಸಿದ್ಧನ ಸೇವಕ ಹಾಗೂ ಶಿಷ್ಯನಾದ ಭೂತಾಳಸಿದ್ಧನನ್ನು ತಪ್ಪದೇ ನೆನಪಿಸಿಕೊಳ್ಳುತ್ತಾರೆ. ಅಮೋಘಸಿದ್ಧನಿಗೆ ಪಂಥದ ಪಥವನ್ನು ತೋರಿಸಿದ ಗುರು ಸೋಮಲಿಂಗ, ಪಂಥವನ್ನು ಗಟ್ಟಿಗೊಳಿಸಿದ ಅಮೋಘಸಿದ್ಧ ಹಾಗೂ ಪಂಥ ವಿಪತ್ತನ್ನು ಎದುರಿಸುವ ಸಂದರ್ಭದಲ್ಲಿ ವಿಪತ್ತಿನಿಂದ ಪಾರು ಮಾಡಿ ಅದನ್ನು ಪೋಷಿಸಿದ ಭೂತಾಳಸಿದ್ಧನನ್ನು ಮಾರಾಯರು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಅಂಥ ಒಂದು ಉಗಾಳಿಕೆ ಇಲ್ಲಿದೆ:

ಹರಹರೋ ಗುರುಗೌರಿ ಸೋಮಲಿಂಗೋ, ನಾಡಗೌಡ ಅಮಸಿದ್ಧೋ
ಅವತಾರ ಅವಧುಸಿದ್ಧೋ ದೇವೇಂದ್ರ ಬಿಳಿಯಾನಿ ಸಿದ್ಧೋ
ಆಚಾರಗೌಡ ಸೋಮಣ್ಣ ಮುತ್ತ್ಯೋ ಕಡಿಹುಟ್ಟಿ ಕನ್ನಮುತ್ತ್ಯೋ
ಬಯಲ ಭೂತೋ ಹರಹರೋ ಭಕ್ತ ಹರಹರೋ[೩]

ಇಂತಹದ್ದೇ ಇನ್ನೊಂದು ಉಗಾಳಿಕೆ ಹೀಗಿದೆ :

ಹರಹರೋ ಅವತಾರ ಅವಧುಸಿದ್ಧೋ ದೇವೇಂದ್ರ ಬಿಳಿಯಾನಿಸಿದ್ಧೋ
ಆಚಾರಗೌಡ ಸೋಮಣ್ಣ ಮುತ್ತ್ಯೋ ಕಡಿಹುಟ್ಟಿ ಕನ್ನಮುತ್ತ್ಯೋ
ಬಯಲು ಭೂತೋ ಹರಹರೋ ಭಕ್ತ ಹರಹರೋ

ಕೌಲುಗುಡ್ಡ ಕರಿಯೋಗಿ ಸಿದ್ಧೋ ಗದ್ದನಕೇರಿ ಮಲಕಾರಿ ಸಿದ್ಧೋ
ಕುಂಚನೂರ ಕೆಂಚ ಮಾದಣ್ಣೋ ಇನವಂದಗಿ ಈರ ಮಾದಣ್ಣೋ
ಜ್ಯೋತಿ ಲಕ್ಕಪ್ಪೊಡೆಯೋ ಅರಕೇರಿ ಬರಮ ಒಡಿಯೋ
ಬಯಲ ಭೂತೋ ಹರಹರೋ ಭಕ್ತ ಹರಹರೋ

ಶಂಭು ಮಾದೇವ ಇಂದಾಪುರ ದ್ಯಾವ ಬಳೋಗಿ ಸಿದ್ಧೋ
ಹೊನ್ನ ಮೋಳೆದ ಒಗಸಿದ್ಧೋ ಉಗ್ರದಾಗಿನ ಪದಮ ಒಡಿಯೋ
ಪಂಚ ಪೂಜಾದ ಗೌಡೋ ಅಚೇಗಾಯಿ ಶೀಲಿಸಿದ್ಧೋ
ಬಯಲ ಭೂತೋ ಹರಹರೋ ಭಕ್ತ ಹರಹರೋ[೪]

[illegible]

[illegible]

ಇಲ್ಲಿನ ಉಗಾಳಿಕೆಯ ಪ್ರಾರಂಭಿಕ ಭಾಗ ಈ ಪರಂಪರೆಯ ಶೈವದ ಮೂಲವನ್ನು ನೆನಪಿಸುವಂತೆ ಮಾಡುವ ಉದ್ದೇಶ ಹೊಂದಿದೆ. ಆದರೆ ಪ್ರತಿ ಉಗಾಳಿಕೆಯ ನುಡಿಯ ಕೊನೆಯಲ್ಲಿ ಬರುವ ಹರಹರೋ ಭಕ್ತ ಹರಹರೋ ಎನ್ನುವ ಸಾಲು ಇಡೀ ಪಂಥದ ತಾತ್ವಿಕತೆಯನ್ನು ಸಾರುವ ಉದ್ದೇಶ ಹೊಂದಿದೆ ಅನ್ನಿಸುತ್ತದೆ. ಈ ಪಂಥ ಭಕ್ತನನ್ನು ಹರನೊಂದಿಗೆ ಸಮೀಕರಿಸುವ ನೂತನ ಪ್ರಯೋಗ ಮಾಡಿದೆ.

ದೇವರು, ಪೂಜಾರಿ ಹಾಗೂ ಭಕ್ತ ಈ ಮೂವರ ಕುರಿತು ಇವರ ತಾತ್ವಿಕತೆಯನ್ನು ಬಿಂಬಿಸುವ ಹಾಡೊಂದಿದೆ:

ಹಾಡೇನಪ್ಪಾ ನಾ ಹಾಡೇನೋ ನನ್ನ ಹಾಲಿನಂಥ ದೇವರೋ
ಹಾಲಿನಂಥ ದೇವರಗಿ ಸೀತಾಳದಂಥ ಪೂಜಾರಿ
ಸೀತಾಳದಂಥ ಪೂಜಾರಿಗೊಬ್ಬ ಸಮುದರದಂಥ ಭಕ್ತಾನೋ

ಹಾಲಿನಂತ ದೇವರನಂದರ ಗುರುಗೌರಿ ಸೋಮಲಿಂಗಾನೋ
ಸೀತಾಳದಂಥ ಪೂಜಾರಿ ಬಾರೋ ಯೋಗಿ ಅಮ್ಮೋಗಿ ಸಿದ್ಧಾನೋ
ಸಮುದರದಂಥ ಭಕ್ತನಂದರ ಕುಂಬಾರ ರಾಮಯ್ಯೋ[೫]

ಇಲ್ಲಿ ಗುರುವನ್ನು ಸಾಂದ್ರವಾದ ಹಾಲಿಗೆ, ಪೂಜಾರಿಯನ್ನು ಸೀತಾಳಕ್ಕೆ ಹಾಗೂ ಭಕ್ತನನ್ನು ಅಪಾರ ವಿಸ್ತಾರದ ಸಮುದ್ರಕ್ಕೆ ಹೋಲಿಸುವ ಮೂಲಕ ಭಕ್ತನಿಗೆ ಬಹುದೊಡ್ಡ ಗೌರವವನ್ನು ಸಲ್ಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಭಕ್ತ 'ಹರಹರೋ' ಅನ್ನಿಸಿದ್ದಾನೆ.

೫.೧.೨ ಭಕ್ತರ ಮನೆಯಲ್ಲಿ ಉಗಾಳಿಕೆ

ಗದ್ದುಗೆ ಏರಿದ ಮಾರಾಯರು ತಮ್ಮ ದೈವವನ್ನು ನಿತ್ಯ ಕನಿಷ್ಠ ಮೂರು ಹೊತ್ತು ಪೂಜಿಸುತ್ತಾರೆ. ಅಂದರೆ ಗುಡಿಯಲ್ಲಿ ನಿತ್ಯ ಮೂರು ಹೊತ್ತು ಉಗಾಳಿಕೆ ನಡೆಯುತ್ತದೆ. ಅದೂ ಅಲ್ಲದೆ ಭಕ್ತರು ಮಾರಾಯರನ್ನು ಊಟಕ್ಕೆಂದು ಮನೆಗೆ ಆಮಂತ್ರಿಸಿದಾಗಲೂ ಉಗಾಳಿಸುವ ಪದ್ಧತಿ ಇದೆ. ಭಕ್ತರು ಮಾರಾಯರನ್ನು ಮನೆಗೆ ಕರೆಯಿಸಿ ಊಟ ಮಾಡಿಸುವ ಸಮಯದಲ್ಲಿ ಈ ರೀತಿ ಉಗಾಳಿಸುತ್ತಾರೆ.

ಭಕ್ತ ಮಾಡಿದಂಥ ಗುರು ಸೋಮಲಿಂಗ ಅಮಸಿದ್ಧ
ಬಯಲ ಭೂತಾಳ ಸಿದ್ಧಗ ಮುಟ್ಟಿತೋ
ನಾಲೂರ ಒಂದ ಧರ್ಮರಿಗೆ ಮುಟ್ಟಿತೋ
ಇಪ್ಪತ್ತೊಂದ ಮಂದಿ ಧರ್ಮರಿಗೆ ಮುಟ್ಟಿತೋ
ನೂರಾ ಒಂದು ಧರ್ಮರಿಗೆ ಮುಟ್ಟಿತೋ
ನವಕೋಟಿ ಸಿದ್ಧರಿಗೆ ಮುಟ್ಟಿತೋ
ಸಪ್ತೇಳು ಕೋಟಿ ಶರಣರಿಗೆ ಮುಟ್ಟಿತೋ

ಒಡೆಯರ ಮಕ್ಕಳ ಸರಸೋ

ಬಾರದಂಥ ಭಕ್ತಗ ಉತ್ಪತ

ಜಯಾ ಜಯನಮಃ ಪಾರ್ವತಿ ಶಿವ ಹರಹರ ಮಹಾದೇವ್

ಭಕ್ತರ ಮನೆಯಲ್ಲಿ ಪ್ರಸಾದ ಸ್ವೀಕರಿಸಲು ಬಂದ ಮಾರಾಯರು ತಾವು ಸ್ವೀಕರಿಸಲಿರುವ ಪ್ರಸಾದ ಇಡೀ ಪರಂಪರೆಯ ಎಲ್ಲ ಮೂಲ ಪುರುಷರಿಗೆ ಮುಟ್ಟುತ್ತದೆ ಎಂದು ಈ ಮೇಲಿನ ಉಗಾಳಿಕೆಯ ಮೂಲಕ ಹೇಳುತ್ತಾರೆ. ತಮ್ಮ ಪರಂಪರೆಯ ಪೂರ್ವದ ದೈವಗಳಾದ ಗುರು ಸೋಮಲಿಂಗನಿಂದ ಹಿಡಿದು, ಇವೊತ್ತಿನ ಒಡೆಯರ ಮಕ್ಕಳವರೆಗೂ ಈ ಪ್ರಸಾದ ತಲುಪಲಿದೆ ಎಂದು ಭಾವಿಸುವ ಪರಿಕ್ರಮದಲ್ಲಿ ಮಾರಾಯರಿಗೆ ತಮ್ಮ ವಂಶದ ಸಾತತ್ಯದ ಬಗೆಗೆ ಅಚಲವಾದ ಗ್ರಹಿಕೆ ಇರುವುದು ಸ್ಪಷ್ಟವಾಗುತ್ತದೆ. ಪ್ರಸಾದ ಇಂಥಿಂಥವರಿಗೆ ಮುಟ್ಟಿತು ಎಂದು ಉಗಾಳಿಸುವಂತೆ ಇಂಥಿಂಥ ಪ್ರಸಾದ ಇಂಥಿಂಥವರ ಹೆಸರಿನಲ್ಲಿ ಸ್ವೀಕರಿಸಲಾಯಿತು ಎಂದು ಹೇಳುವ ಇನ್ನೊಂದು ರೀತಿಯಿದೆ.

ಹರಹರ ಮಾಯ ಮಕಣಾಪುರ ಗುರುಗೌರಿ ಸೋಮಲಿಂಗನ ಹೆಸರಲಿ ಅಂದಾನ

ತಂದಿ ಅಮಸಿದ್ಧನ ಹೆಸರಲಿ ಅಂದಾನ

ಅವತಾರ ಅವಧುಸಿದ್ಧನ ಹೆಸರಲಿ ಅಂದಾನ

ಕಡಿಹುಟ್ಟಿ ಕನ್ನ ಮುತ್ತ್ಯಾನ ಹೆಸರಲಿ ಅಂದಾನ

ತೆರವಾಡ ಮಂಗರಾಯನ ಹೆಸರಲಿ ಅಂದಾನ

ಕರಣಿ ಮಲಕಾರಿಸಿದ್ಧನ ಹೆಸರಲಿ ಅಂದಾನ

ಇಪ್ಪತ್ತೊಂದ ಮಂದಿ ಧರ್ಮರ ಹೆಸರಲಿ ಅಂದಾನ

ನೂರಾ ಒಂದ ಧರ್ಮರ ಹೆಸರಲಿ ಅಂದಾನ

ಶಿವಪಾರ್ವತಿ ಹರಹರ ಮಹಾದೇವ್

೫.೨ ಹರಕೆ

ಹರಕೆಯ ಹಾಡುಗಳು ಭಕ್ತ ಹಾಗೂ ಮಾರಾಯರ ನಡುವೆ ತನ್ಮೂಲಕ ದೈವದೊಂದಿಗೆ ಭಾವನಾತ್ಮಕ ಸಂಬಂಧ ಬೆಸೆಯುವ ಸಾಧನಗಳು. ತಮ್ಮ ದೇವರು ಭಕ್ತರ ಮೇಲೆ ಸದಾ ಅಂತಃಕರಣ ತೋರುತ್ತ ಭಕ್ತರಿಗೆ ಸರ್ವರೀತಿಯ ಸಮೃದ್ಧಿಯನ್ನು ಹರಸುವ ಕೆಲಸವನ್ನು ಮಾರಾಯರು ಈ ಹರಕೆಯ ಹಾಡುಗಳ ಮೂಲಕ ಮಾಡುತ್ತಾರೆ. ಮಾರಾಯರು ಹರಕೆಯ ಹಾಡುಗಳನ್ನು ರಚಿಸಿ, ತಮ್ಮ ಭಕ್ತರನ್ನು ಹರಸುವ ಕೆಲಸವನ್ನು ಅತ್ಯಂತ ವ್ಯವಸ್ಥಿತವಾಗಿ ಮಾಡುವವರಾಗಿದ್ದಾರೆ.

ಹರಕಿಯ ಹಾಡುಗಳನ್ನು ಮಾರಾಯರು ಭಕ್ತರ ಮನೆಗೆ ಬಂದು ಪ್ರಸಾದ ಸ್ವೀಕರಿಸಿ ಮರಳಿ ಹೋಗುವಾಗ ಹಾಡುತ್ತಾರೆ. ಭಕ್ತರು ತಮ್ಮ ಮನೆಯಲ್ಲಿ ಮದುವೆ ಮಾಡಿದ ಸಂದರ್ಭದಲ್ಲಿ, ಚೊಚ್ಚಿಲ ಕೂಸು ಜನಿಸಿದ

ಸಂದರ್ಭದಲ್ಲಿ, ಪುತ್ರ ಸಂತಾನವಾದ ಸಂದರ್ಭದಲ್ಲಿ, ಜಡೆ ತೆಗೆಯಿಸುವಾಗ, ಬಾವಿಯಲ್ಲಿ ನೀರು ಬಿದ್ದಾಗ, ರೋಗಮುಕ್ತವಾದಾಗ, ಖುಷಿಯಿಂದ ಧನ್ಯತಾಭಾವದಿಂದ ದೇವರನ್ನು ಮನೆಗೆ ಕರೆಯಿಸಿಕೊಳ್ಳುವ ಪದ್ಧತಿ ಇದೆ. ಹರಕೆ ತೀರಿಸಲು ದೇವರ ಗುಡಿಗೆ ಹೋಗುವುದು ಒಂದು ರೀತಿಯಾದರೆ, ದೇವರನ್ನೇ ಮನೆಗೆ ಬರಮಾಡಿಕೊಂಡು ಹರಕೆ ತೀರಿಸುವುದು ಇನ್ನೊಂದು ರೀತಿ. ಹರಕೆ ತೀರಿಸಲು ಭಕ್ತ ಗುಡಿಗೆ ಹೋದರೆ ಅಲ್ಲಿ ಪೂಜಾರಿ ಭಕ್ತರಿಂದ ಕಾಣಿಕೆಯ ರೂಪದಲ್ಲಿ ಏನನ್ನಾದರೂ ಪಡೆಯುತ್ತಾನೆಯೇ ಹೊರತು, ಹರಕೆಯ ಹಾಡನ್ನು ಹಾಡುವುದಿಲ್ಲ. ಹರಕೆಯ ಹಾಡು ಹಾಡುವುದೇನಿದ್ದರೂ ಮಾರಾಯರು ಭಕ್ತರ ಮನೆಗೆ ಬಂದಾಗಲೇ. ದೇವರನ್ನು ಮನೆಗೆ ಬರಮಾಡಿಕೊಳ್ಳುವ ಹಲವಾರು ಹಂತಗಳನ್ನು ಹರಕೆಯ ಹಾಡುಗಳ ಮೂಲಕ ಗ್ರಹಿಸಿ, ಈ ರೀತಿ ಪರಿಚಯಿಸಲಾಗಿದೆ.

೫.೨.೧ ಸರಸಿಗೆ ಸರಸ ನುಡಿದಾರೆ

ದೇವರನ್ನು ಹಬ್ಬಕ್ಕೆ ಮನೆಗೆ ಕರೆಯಿಸಬೇಕೆಂದು ನಿರ್ಣಯಿಸುವ ಮುನ್ನ ಮನೆಯ ಸದಸ್ಯರು ಅದರಲ್ಲೂ ವಿಶೇಷವಾಗಿ ಗಂಡ ಹೆಂಡತಿ ತಮ್ಮ ತಮ್ಮಲ್ಲಿ ಚರ್ಚಿಸುತ್ತಾರೆ.

ಭಾವುಳ್ಳ ಭಕ್ತನಂಬವನು ಭಕ್ತನ ಮಡದಿನಂಬವಳು
ಮಾತಿಗೆ ಮಾತವರ ಆಡ್ಯಾರ ಸರಸಿಗೆ ಸರಸವರು ನುಡಿದಾರೆ
ಓಗೆಣ್ಣ ಮುತ್ತ್ಯಾನ ಹಬ್ಬssರಿ ನವ್ವೇ ಮಾಡೂಣಂದಾರೆ
ಬನಸಿದ್ಧ ಮುತ್ತ್ಯಾನ ಹಬ್ಬರಿss ನವ್ವೇ ಮಾಡೂಣಂದಾರೆ
ನವ್ವೇ ಮಾಡೂಣಂದಾರೆ ಹರಕಿಯ ಮುಟ್ಸೂಣಂದಾರೆ[೮]

ಗಂಡ ಹೆಂಡಿರು ಚರ್ಚಿಸಿ ದೇವರ ಹಬ್ಬ ಮಾಡಲು ನಿಶ್ಚಯಿಸಿದ ನಂತರ ದೇವರ ಗುಡಿಯ ಮಾರಾಯರನ್ನು ಆಮಂತ್ರಿಸಲು ಹೋಗುತ್ತಾರೆ.

೫.೨.೨ ಮಾರಾಯರಿಗೆ ಭಂಡಾರ

ದೇವರನ್ನು ಮನೆಗೆ ಹಬ್ಬಕ್ಕೆ ಕರೆಯಿಸಬೇಕೆಂದು ನಿರ್ಣಯಿಸಿದ ಭಕ್ತ ಸಿದ್ಧರ ಗುಡಿಗೆ ಬಂದು ಮಾರಾಯರನ್ನು ಭೆಟ್ಟಿಯಾಗಿ ಇಂಥಿಂಥ ದಿವಸ ದೇವರ ಪಲ್ಲಕ್ಕಿಯೊಂದಿಗೆ ತಮ್ಮ ಮನೆಗೆ ಬರಬೇಕು ಎಂದು ಆಮಂತ್ರಿಸಲು ಭಂಡಾರ ಸಮೇತ ಹೋಗುತ್ತಾನೆ. ಮಾರಾಯರು ಅಂದು ಯಾವ ಭಕ್ತರ ಮನೆಗೂ ಹೋಗುವುದು ಇರದಿದ್ದರೆ, ಭಂಡಾರ ಹಿಡಿಯುತ್ತಾರೆ. ಭಂಡಾರ ಹಿಡಿಯುವುದು ಅಂದರೆ ಮಾರಾಯರು ದೇವರ ಪಲ್ಲಕ್ಕಿಯೊಂದಿಗೆ ಭಕ್ತರ ಮನೆಗೆ ಬರಲು ಒಪ್ಪುವುದು ಎಂದರ್ಥ. ಒಂದು ವೇಳೆ ಆ ನಿಗದಿತ ದಿನದಂದು ಪಲ್ಲಕ್ಕಿ ಬೇರೆ ಯಾರದಾದರೂ ಮನೆಗೆ ಹೋಗುವುದಿದ್ದರೆ ಮಾರಾಯರು ಭಂಡಾರ ಹಿಡಿಯುವುದಿಲ್ಲ. ಅಂದಿನ ದಿವಸ ಬರಲಾಗುವುದಿಲ್ಲ. ಇಂಥಿಂಥ ದಿವಸ ಕರೆದರೆ ಪಲ್ಲಕ್ಕಿಯೊಂದಿಗೆ ಬರುವೆವು ಎಂದು ತಿಳಿಸುತ್ತಾರೆ. ಭಕ್ತನಿಗೆ ಆ ದಿವಸ ಹೊಂದಾಣಿಕೆಯಾದರೆ ಮಾರಾಯರಿಗೆ ಭಂಡಾರ ಕೊಡುತ್ತಾನೆ. ಇಲ್ಲವಾದರೆ ಬೇರೊಂದು ದಿವಸ

ಬರಬಹುದೆ ಎಂದು ಹೇಳುತ್ತಾನೆ. ದಿನ ಹೊಂದಾಣಿಕೆಯಾದರೆ ಭಕ್ತ ಭಂಡಾರ ಕೊಡುತ್ತಾನೆ. ಮಾರಾಯರು ಭಂಡಾರ ಹಿಡಿಯುತ್ತಾರೆ. ಇಂಥದೊಂದು ಸನ್ನಿವೇಶವನ್ನು ನಾಟಕೀಕರಿಸಿದಂತೆ ಬಳಸುವ ಹರಕೆಯ ಹಾಡಿನ ಭಾಗವೊಂದು ಹೀಗಿದೆ :

ದೇವರ ಉಂಡೇನಂದ ಕಾಲಕ
ಭಗತಗನವಾನಿಲ್ಲೇನೋss
ಭಗತಾss ಉಣಿಸೇನಂದ ಕಾಲಕss
ದೇವರಿಗನವಾನಿಲ್ಲೇನೋ
ದೇವರ ಮನವೋ ಭಗತರ ಮನವೋ
ಇಂದಿಗೆರ ಕೂಡಿ ಬಂದಾವೋ[೯]

೫.೨.೩ ಹಿಟ್ಟೆಲ್ಲ ಕಡಿಗಾದಾವೋ

ಮಾರಾಯರು ಹಾಗೂ ಭಕ್ತರು -ಇಬ್ಬರಿಗೂ ಅನುಕೂಲಕರವಾದ ದಿನ ನಿಗದಿಯಾದ ನಂತರ ಭಕ್ತನಾದವನು ತನ್ನ ನೆರೆಮನೆ ಹಾಗೂ ಹೊರಮನೆಯವರಿಗೆ ಈ ಸಂತಸದ ಸುದ್ದಿ ತಿಳಿಸುತ್ತಾರೆ. ಹಬ್ಬಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾರೆ.

ನೆರಮನಿ ಹೊರಮನಿ ಕರದಾನೋ
ಅವ ಗಳಗಿಯ ಗಾಲಿ ಒಡದಾನೋ
ನೆರಮನಿಗಿ ರಾಶಿಯ ಒಯ್ದಾನ ಭಗತ
ಹಿಟ್ಟಕ್ಕಿ ತಯ್ಯಾರ ಮಾಡ್ಯಾನೋ
ಹಿಟ್ಟೆಲ್ಲ ಕಡಿಗಾದಾವೋ
ಅಲ್ಲಿ ಅಕ್ಕೆಲ್ಲ ಕಡಿಗಾದವೋ[೧೦]

೫.೨.೪ ಹಸಿಮಗ ಪಲ್ಲಕ್ಕೇರ್‍ಯಾನೋ

ಹಬ್ಬಕ್ಕೆ ಬೇಕಾದ ಹಿಟ್ಟು ಹಾಗೂ ಅಕ್ಕಿ ತಯಾರಾದ ನಂತರ ಭಾವುಳ್ಳ ಭಕ್ತನಾದವನು ಪೂಜೆ ಮಾಡಲು ಬರಬೇಕಾಗ ಪುಣ್ಯುಳ್ಳ ಗೌಡ(ಮಾರಾಯ)ನಲ್ಲಿಗೆ ಹೋಗುತ್ತಾನೆ. ಹಾಗೆ ಹೋಗುವಾಗ ಝಾಮ ಜಳಕ ಮಾಡಿ, ನೇಮನಿಷ್ಠೆಯಿಂದ ಮಡದಿ ಇಲ್ಲವೆ ಮಗಳನ್ನು ಕರೆದುಕೊಂಡು ಪಂಚ ಕಳಸದೊಂದಿಗೆ ಸಿದ್ಧರ ಗುಡಿಗೆ ಬರುತ್ತಾನೆ.

ಭಾವುಳ್ಳ ಭಗತೋ ನಮ್ಮಯ್ಯ
ಅಲ್ಲಿ ಹೆಣ್ಣ ಮಗಳ ಕರದಾನೋ

ಬಾರಬಾರ ಏ ನನ್ನ ಮಗಳ

ಗುರುವಿನ ಕರಿಯಲಿ ಹೋಗೂನೋ

ಹೆಣ್ಣು ಮಗಳು ಹ್ಯಾಮದ ಗೊಂಬಿ

ಝೂಮ ಜಳಕಾ ಮಾಡ್ಯಾಳೋ

ಝೂಮ ಜಳಕಾ ಮಾಡ್ಯಾಳ ಬಾಲಿ

ನೇಮನಿಷ್ಠಿಯ ಮಾಡ್ಯಾಳೋ

ಸಣ್ಣಗ ಸೆರಗ ಉಟ್ಯಾಳ ಬಾಲಿ

ಬಣ್ಣದ ನೇಯ್ಗಿ ಉಟ್ಯಾಳೋ

ವಾರಿಯ ಬೈತಾಲಿ ತಗದಾಳೋ

ಸೀರಿಗೆ ಕುಂಕುಮ ತುಂಬ್ಯಾಳೋ

ದೇವರ ಕ್ವಾಣಿ ಒಳಗ್ಯಾನೋ

ಆಕಿ ಕಂಚ (ಪಂಚ) ಕಳಸ ಹೂಡ್ಯಾಳೋ

ಭಾವುಳ್ಳ ಭಕ್ತೋ ನಮ್ಮಯ್ಯ ಅವಾ

ಝೂಮ ಜಳಕಾ ಮಾಡ್ಯಾನೋ

ಅಡಕಿ ಬಣ್ಣದ ದಟ್ಟೇನೋ

ಅವ ತೊಡಿತುಂಬ ತಗದುಟ್ಯಾನೋ

ಮುರಗಿ ಹೊಡದಾನ ಮುಂಡಾಸ ಸುತ್ತ್ಯಾನ

ಗರಗರಿ ಶಮನಾ ಬಿಟ್ಯಾನೋ

ದೇವರ ಮನಿಯ ಒಳಗ್ಯಾನೋ ಅವಾ

ಕೈಪದ ದೀವಟಗಿ ಹಿಡದಾನೋ[೧೧]

ಮಗಳ ಕೈಯಲ್ಲಿ ಪಂಚ ಕಳಸ, ತಂದೆಯ ಕೈಯಲ್ಲಿ ಕೈಪದ ದೀವಟಿಗೆ ಹಿಡಿದುಕೊಂಡು ದೇವರನ್ನು ಕರೆತರಲು ಗುಡಿಗೆ ಬರುತ್ತಾರೆ. ಮಾರಾಯರು ದೇವರನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ಭಕ್ತನ ಮನೆಯ ಕಡೆಗೆ ಸಕಲ ವಾದ್ಯಗಳೊಂದಿಗೆ ಚಾಜದವರೊಂದಿಗೆ ಊರಲ್ಲಿ ಮೆರವಣಿಗೆ ಮೂಲಕ ಹೊರಟು ನಿಲ್ಲುತ್ತಾನೆ. ಪಲ್ಲಕ್ಕಿಯಲ್ಲಿ ಕುಳಿತ ಅಮೋಘಸಿದ್ಧ ಮೂರ್ತಿಯ ವರ್ಣನೆ ಹೀಗಿದೆ :

ಯೋಗಿ ನನ್ನಮ್ಮೋಗಿ ಸಿದ್ಧಾನೋ ಅವ

ಹಸರ ಬಣ್ಣದ ಗೊಂಡ್ಯಾನೋ

ಹಸರ ಬಣ್ಣದ ಗೊಂಡ್ಯಾ ಹಿಡದಾನ
ಹಸಿಮಗ ಪಲ್ಲಕ್ಕೇರ್ಯಾನೋ

ರಾಮರತನದ ಗೊಂಡೆ ಹಿಡದಾನ
ರಾಜ ಪಲ್ಲಕ್ಕೇರ್ಯಾನೋ
ಹಿಂದೊಂದ ಮುಂದೊಂದ ದಂಡೇನೋ ಅಲ್ಲಿ
ನಡೆದಂಥ ಪಲ್ಲಕ್ಕೇನೋ
ಊರ ಮೆರವೂತ ಹೊಂಟಾನ ಗುರುವ
ಸೋಸಿ ನಡೆವೂತ ಹೊಂಟಾನೋ [೧೨]

ದೇವರುಭಕ್ತರು ಇಬ್ಬರೂ ಒಂದೇ ಊರಿನವರಾಗಿದ್ದರೆ, ದೇವರ ಪಲ್ಲಕ್ಕಿ ನೇರವಾಗಿ ಭಕ್ತರ ಮನೆಗೆ ಬರುತ್ತದೆ. ಒಂದು ವೇಳೆ ಪರವೂರಿನ ಭಕ್ತ ದೇವರನ್ನು ತನ್ನ ಮನೆಗೆ ಕರೆಯಿಸುವುದಿದ್ದರೆ, ಪಲ್ಲಕ್ಕಿ ಹಿಂದಿನ ದಿವಸ ರಾತ್ರಿ ವೇಳೆಗೆ ಭಕ್ತನ ಊರನ್ನು ತಲುಪಿ, ಆ ಊರಿನ ಪ್ರಮುಖ ದೇವಸ್ಥಾನದಲ್ಲಿ ಬಿಡಾರ ಹೂಡಿರುತ್ತಾರೆ. ಮರು ದಿವಸ ಬೆಳಿಗ್ಗೆ ಭಕ್ತರು ಬಾಜಾಭಜಂತ್ರಿಯೊಂದಿಗೆ ಪಲ್ಲಕ್ಕಿ ಬಿಡಾರ ಹೂಡಿರುವ ಗುಡಿಗೆ ಬರುತ್ತಾರೆ. ಹಾಗೆ ಹೋಗುವ ಭಕ್ತ ದಂಡವತ್/ದೀಡ ನಮಸ್ಕಾರ ಹಾಕುತ್ತಾ ಹೋಗುವುದೂ ಉಂಟು. ದಂಡವತ್ ಹಾಕುತ್ತ ಗುಡಿಗೆ ಬಂದ ಭಕ್ತನಿಗೆ ಅವನ ಸಂಬಂಧಿಕರು ಆಹೇರ ಮಾಡುತ್ತಾರೆ. ಆಹೇರ ಮುಗಿದ ನಂತರ ದೇವರ ಪಲ್ಲಕ್ಕಿ ಊರಾಡುತ್ತ ಭಕ್ತನ ಮನೆ ತಲುಪುತ್ತದೆ. ಆಮಂತ್ರಣ ಕೊಡುವ ಭಕ್ತ ಒಂದೇ ಪಲ್ಲಕ್ಕಿಯನ್ನು ಆಮಂತ್ರಿಸಬಹುದು. ಅವನಲ್ಲಿ ದೈವಭಕ್ತಿ ಹಾಗೂ ಹಣದ ಶಕ್ತಿ ಹೆಚ್ಚಿದ್ದರೆ ಹಲವಾರು ಪಲ್ಲಕ್ಕಿಗಳನ್ನು ಆಮಂತ್ರಿಸಬಹುದು.

೫.೨.೫ ನಿವಾಳಿ

ಪಲ್ಲಕ್ಕಿ ಭಕ್ತರ ಮನೆ ತಲುಪುತ್ತಿದ್ದಂತೆ ಭಕ್ತರು ಪಲ್ಲಕ್ಕಿ ಹೊತ್ತು ಬಂದ ಮಾರಾಯರ ಪಾದಕ್ಕೆ ನೀರು ಹಾಕುತ್ತಾರೆ. ಅಲ್ಲದೆ ದೇವರಿಗೆ ನದರು ಆಗಿದ್ದರೆ ಶಮನವಾಗಲಿ ಎಂದು ಕಣಕದ ಆರತಿಗಳಿಂದ ನಿವಾಳಿ ತೆಗೆಯುತ್ತಾರೆ. ಬಲಗೈಯಲ್ಲಿ ಹಿಡಿದ ಆರತಿಯಿಂದ ದೇವರಿಗೆ ಬೆಳಗಿ ಅದನ್ನು ಎಡಗಡೆಗೆ ಇಳುವುತ್ತಾರೆ. ಎಡಗೈಯಲ್ಲಿ ಹಿಡಿದ ಆರತಿಯಿಂದ ದೇವರಿಗೆ ಬೆಳಗಿ ಅದನ್ನು ಬಲಗಡೆಗೆ ಇಳುವುತ್ತಾರೆ.

ಇದಾದ ನಂತರ ಪಲ್ಲಕ್ಕಿಯೊಳಗಿನ ದೇವರನ್ನು ತಗೆದು, ಭಕ್ತನ ಮನೆಯ ಜಗಲಿಯ ಮೇಲೆ ಸ್ಥಾಪಿಸುತ್ತಾರೆ. ದೇವರನ್ನು ಪಲ್ಲಕ್ಕಿಯಿಂದ ಹೊರಗೆ ತಗೆಯುವಾಗ ಇಡೀ ಪಲ್ಲಕ್ಕಿಯನ್ನು ಕಂಬಳಿಯಿಂದ ಮರೆ ಮಾಡಿರುತ್ತಾರೆ. ಹೊರ ತಗೆಯಲಾದ ದೇವರನ್ನು ಕಂಬಳಿಯಲ್ಲಿ ಸುತ್ತಿಕೊಂಡು ಮನೆಯ ಒಳಗೆ ಬರುತ್ತಾರೆ. ದೇವರು ಮನೆಯಲ್ಲಿ ಬರುವುದರಿಂದ ಭಕ್ತನಿಗೆ ಆಗುವ ಲಾಭಗಳ ಕುರಿತು ಹರಕೆಯ ಹಾಡಿನ ಭಾಗವೊಂದು ಹೀಗೆ ಹೇಳುತ್ತದೆ.

ಯೋಗಿ ನನ್ನಮ್ಮೋಗಿ ಸಿದ್ಧಾನೋ ಅಲ್ಲಿ
ಭಾವುಳ್ಳ ಭಕ್ತನ ಮನಿಮುಂದೋ
ಒಂದೊಂದ ಹೆಜ್ಜಿಯ ಒಗದಾರ ಅಲ್ಲಿ
ಒಂದೊಂದ ಮುತ್ತ ಉದರ್‍ಯಾವೋ
ಬಲಗಾಲ ಮುಂದಿಟ್ಟಾನ ದೇವರ
ಭಾಗ್ಯಕ್ಕ ಬಲನಾದಾವೋ
ಎಡಗಾಲ ಹಿಂದಿಟ್ಟಾನೋ ಅಲ್ಲಿ
ಕೆಡಗಾಲ ಹಿಂದನಾದವೋ[೧೮]

೫.೨.೬ ಹೊಸ ಕಂಬಳಿ

ದೇವರನ್ನು ಹಸೆಯ ಮೇಲೆ ಕೂಡ್ರಿಸಿದ ನಂತರ ಭಕ್ತರು ತಂದ ಹೊಸ ಕಂಬಳಿಯನ್ನು ದೇವರಿಗೆ ಏರಿಸುತ್ತಾರೆ. ಕಂಬಳಿ ಏರಿಸುವಾಗ ಭರ್ಜರಿ ಪೂಜೆ ಮಾಡುತ್ತಾರೆ. ಗಂಟೆ ಜಾಗಟೆಯ ನಾದ, ಡೊಳ್ಳಿನ ನಾದ, ಉಗಾಳಿಕೆ ಎಲ್ಲ ಸೇರಿ ಮನೆಯಲ್ಲಿ ದೈವೀ ಆವರಣ ಉಂಟಾಗುತ್ತದೆ. ಭಕ್ತನಾದವನು ತನ್ನ ಸಾಮರ್ಥ್ಯಕ್ಕನುಗುಣವಾಗಿ ಮಾರಾಯರಿಗೆ ಕಾಣಿಕೆ ಅರ್ಪಿಸುತ್ತಾನೆ.

ಇಷ್ಟೆಲ್ಲಾ ಆಗುವುದರೊಳಗೆ ಮಧ್ಯಾಹ್ನದ ವೇಳೆಯಾಗಿರುತ್ತದೆ. ಮಾರಾಯರಿಗೆ ಪ್ರಸಾದದ ವ್ಯವಸ್ಥೆಯಾಗುತ್ತದೆ. ಅಲ್ಲಿ ನೆರೆದ ಭಕ್ತರಿಗೂ ಪ್ರಸಾದವಾಗುತ್ತದೆ. ರಾತ್ರಿ ಸಮಯದವರೆಗೆ ಅದೂ ಇದೂ ಮಾತಾಡಿಕೊಳ್ಳುತ್ತಾ ಸಮಯ ಕಳೆಯುತ್ತಾರೆ. ರಾತ್ರಿಯ ಪ್ರಸಾದವಾದ ನಂತರ ಡೊಳ್ಳಿನ ಹಾಡಿಕೆಗಳು ಪ್ರಾರಂಭವಾಗುತ್ತವೆ.

೫.೨.೭ ಹಣೆದಂಡಿ

ನಸುಕಿನ ಮೂರರ ವೇಳೆಗೆ ಹಬ್ಬದ ಮುಖ್ಯವಾದ ಕಾರ್ಯಕ್ರಮ ನಡೆಯುತ್ತದೆ. ಕರೆಯಿಸಿದ ದೇವರಲ್ಲಿ ಮಲಕಾರಿಸಿದ್ಧನಿದ್ದರೆ ಕಾರ್ಯಕ್ರಮಕ್ಕೆ ವಿಶೇಷ ರಂಗು ಬರುತ್ತದೆ. ಏಕೆಂದರೆ ಮಲಕಾರಿಸಿದ್ಧ ಹಣೆದಂಡಿ ಕಟ್ಟಿಕೊಂಡು ಆಟವಾಡುತ್ತಾನೆ. ಅವನು ಹೀಗೆ ಆಟವಾಡುವ ಆಚರಣೆಯ ಹಿಂದೆ ಒಂದು ಕಥನವಿದೆ. ಮಲಕಾರಿಸಿದ್ಧ ಹಾಗೂ ಅವನ ನಾಲ್ವರು ಸಹೋದರರಿಗೆ ಒಬ್ಬಳೇ ಒಬ್ಬಳು ತಂಗಿ. ಅವಳ ಹೆಸರು ಗುಬ್ಬೆವ್ವ. ಅವಳನ್ನು ಮಂಗಳವೇಡ ತಾಲೂಕಿನ ಶಿವಣಗಿಯ ಮದಗೊಂಡನಿಗೆ ಕೊಟ್ಟು ಮದುವೆ ಮಾಡಲಾಗಿರುತ್ತದೆ. ಹಲವಾರು ರಾಜರುಗಳೊಂದಿಗೆ ಕಾದಾಡಿ ಗೆದ್ದ ಅಣ್ಣ ಮಲಕಾರಿಸಿದ್ಧನಿಗೆ ಬಂಗಾರದ ಉಂಗುರ ಆಹೇರಿ ಮಾಡಲು ಗುಬ್ಬೆವ್ವ ತನ್ನ ಗಂಡನೊಂದಿಗೆ ತವರು ಮನೆಗೆ ಬರುತ್ತಾಳೆ. ಯುದ್ಧದ ಸಮಯದಲ್ಲಿ ಮಲಕಾರಿಸಿದ್ಧ ತನ್ನ ಒಂದು ಬೆರಳನ್ನು ಕಳೆದುಕೊಂಡಿರುತ್ತಾನೆ. ಬೆರಳಿಲ್ಲದ ಅಣ್ಣನಿಗೆ ಬಂಗಾರದ ಉಂಗುರ ತಗೆದುಕೊಂಡು ಹೊರಟ ಗುಬ್ಬೆವ್ವಳ ಬಗೆಗೆ ಗಂಡ ಅಪಹಾಸ್ಯ ಮಾಡಿರುತ್ತಾನೆ. ಇದೆಲ್ಲವನ್ನು ತಿಳಿದ ಮಲಕಾರಿಸಿದ್ಧ ಬೀಗನಾದ

ಮದಗೊಂಡನನ್ನು ಬೆನ್ನಲ್ಲಿ ಚಪ್ಪರಿಸಿ ಕೊಂದುಬಿಡುತ್ತಾನೆ. ಪಶ್ಚಾತ್ತಾಪಪಟ್ಟುಕೊಂಡ ಅಣ್ಣ, ತಂಗಿಗೆ ನಿನ್ನ 'ಹಣೆದಂಡಿ' ಕಟ್ಟಿಕೊಂಡು ಆಟವಾಡುತ್ತೇನೆ ಎಂದು ಭರವಸೆ ಕೊಡುತ್ತಾನೆ. ತನ್ನ ಮುತ್ತೈದಿತನವನ್ನು ಕಸಿದುಕೊಂಡ ಅಣ್ಣನಿಗೆ ತಂಗಿಯಾದ ಗುಬ್ಬೆವ್ವ ಶಾಪ ಹಾಕುತ್ತಾಳೆ. ನನ್ನ ಹಣೆದಂಡಿ ಕಟ್ಟಿ ಆಡುತ್ತಿ ನಿಜ. ಆದರೆ ಸೂರ್ಯನ ಕಿರಣ ನಿನ್ನ ಹಣೆದಂಡಿ ನೋಡದಿರಲಿ ಎಂದು ಹೇಳುತ್ತಾಳೆ. ಆ ಕಾರಣವಾಗಿಯೇ ಆ ಹಣೆದಂಡಿ ಕಟ್ಟಿ ಆಡುವ ಆಚರಣೆಯನ್ನು ನಸುಕಿನ ಮೂರು ಗಂಟೆಯಿಂದ ಐದು ಗಂಟೆಯ ಒಳಗೆ ಮುಗಿಸಲೇಬೇಕು. ಮಾರಾಯರಲ್ಲಿ ಐದಾರು ಜನ ಒಬ್ಬರಾದ ನಂತರ ಒಬ್ಬರಂತೆ ಮಲಕಾರಿಸಿದ್ಧನ ಮುಖಕಟ್ಟಿಕೊಂಡು ಹಣೆದಂಡಿ ಕಟ್ಟಿ ಕೈಯಲ್ಲಿ ಬೆತ್ತ ಹಿಡಿದು ಸುಂದರವಾದ ನೃತ್ಯ ಪ್ರದರ್ಶನ ಮಾಡುತ್ತಾರೆ. ಅವರು ನೃತ್ಯ ಮಾಡುವಾಗ ಮೇಳದವರು ಮದ್ದಳೆ ಬಾರಿಸುತ್ತಾರೆ ಕೊಳಲು ನುಡಿಸುತ್ತಾರೆ ಹಾಗೂ ದೀವಟಿಗೆಯವರು ಎರಡು ದಿವಟಿಗೆ ಹಿಡಿದು ನಿಂತಿರುತ್ತಾರೆ.

ಇವರೆಲ್ಲ ಕುಣಿಯುವ ಜಾಗೆಯಲ್ಲಿ ಪಟ್ಟಣದಿಂದ ತಂದ ಹೂಗಳಿಂದ ಕುಣಿಯುವ ಜಾಗೆಯನ್ನು ಅಲಂಕಾರ ಮಾಡಿರುತ್ತಾರೆ. ಕುಣಿಯುವ ಮಲಕಾರಿಸಿದ್ಧನಾಗಿದ್ದರೂ ಹಣೆದಂಡಿ ಕಟ್ಟಿಕೊಂಡಿರುವುದರಿಂದ ಅವನನ್ನು ಆ ಸಂಧರ್ಭದಲ್ಲಿ ತಂಗಿ ಗುಬ್ಬೆವ್ವ ಎಂದು ಭಕ್ತರು ಭಾವಿಸಿರುತ್ತಾರೆ. ಗುಬ್ಬವ್ವಗಳ ಕಾಲು ಒರಟಾದ ನೆಲಕ್ಕೆ ತಾಗಿ ನೋಯಿಸದಿರಲಿ ಎಂದು ಕಣಿಯುವ ಜಾಗೆಯಲ್ಲಿ ಹೂವನ್ನು ಸೂರಾಡಿರುತ್ತಾರೆ.

ಇದೆಲ್ಲ ಮುಗಿದ ನಂತರ ಜಗಲಿಯ ಮೇಲೆ ದೇವರಿಗೆ ಕೊನೆಯ ಪೂಜೆ ಸಲ್ಲಿಸಲಾಗುತ್ತದೆ. ಆವಾಗಲೇ ಭಕ್ತನಿಗೆ ಹರಕೆ ಕೊಡುತ್ತಾರೆ.

೫.೨.೮ ರಾಜದ್ಹಕ್ಕಿಗಳು

ಹರಕೆ ಹಾಡುವ ಮಾರಾಯರು ತಮ್ಮನ್ನು ಹಕ್ಕಿಗಳಿಗೆ ಹೋಲಿಸಿಕೊಂಡಿದ್ದಾರೆ. ಭಾವುಳ್ಳ ಭಕ್ತನ ಮನೆಯಲ್ಲಿ ಅವರು ಉಂಡ ಊಟದ ಪರಿಯನ್ನು ಬಲು ಸುಂದರವಾಗಿ ಅಭಿವ್ಯಕ್ತಪಡಿಸಿದ್ದಾರೆ.

ಭಾವುಳ್ಳ ಭಕ್ತನ ಮನಿ ಮುಂದಯ್ಯ ರಾಯ ಸಕ್ಕರಿಯ ಮರಹುಟ್ಟಿ
ಏ ರಾಯ ಸಕ್ಕರಿಯ ಮರಕಯ್ಯ ರಾಜದ್ಹಕ್ಕಿಗಳು ನೆರೆದಾವೋ
ಪಕ್ಕವಿಲ್ಲದ ಪಾರಿವಾಳ ಲೆಕ್ಕವಿಲ್ಲದ ಗಿಳಿ ಹಿಂಡೋ
ಲೆಕ್ಕವಿಲ್ಲದ ಗಿಳಿಹಿಂಡ ಕೂಡಿ ಏನೇನ ಊಟಾ ಮಾಡ್ಯಾವೋ[೧೫]

ಮಾರಾಯರು ಉಂಡ ಊಟದ ವರ್ಣನೆ ಭಕ್ತರ ಮನೆಯ ಹಾಗೂ ಮನಸ್ಸಿನ ಸಮೃದ್ಧಿಯನ್ನು ಬಿಂಬಿಸುವಂಥದ್ದಾಗಿದೆ.

ನೆರದ ಬಂದ ಹಕ್ಕಿನೋ ಅಲ್ಲಿ
ಹಾಲ ಹಣ್ಣ ಉಂಡಾವೋ

ಹಾಲ ಹಣ್ಣ ಉಂಡಾವೋ ಗಿಳಿಗೋಳ

ಮ್ಯಾಲ ಗಿಣ್ಣ ಉಂಡಾವೋ

ಹಾಲೀಲೆ ಕೈ ತೊಳದಾವ ಗಿಳಿಗೋಳ

ತುಪ್ಪದಲೆ ಬಾಯಿ ತೊಳದಾವೋ ಅಲ್ಲಿ

ಮ್ಯಾಲ ಕೈತಾಳ ಮುಗದಾವೋ[೧೫]

೫.೨.೯ ಸೂಗರ ನಿದ್ದಿ

ಹಾಲು ಹಣ್ಣು, ಗಿಣ್ಣ ತುಪ್ಪದಿಂದ ಕೂಡಿದ ಸುಗ್ರಾಸಭೋಜನವನ್ನು ಮಾಡಿದ ಮಾರಾಯರು ತುಪ್ಪದಲ್ಲಿ ಬಾಯಿ ತೊಳೆಯುತ್ತಾರೆ, ಹಾಲಿನಲ್ಲಿ ಕೈ ತೊಳೆಯುತ್ತಾರೆ. ಇಂಥ ಸುಗ್ರಾಸ ಭೋಜನ ನೀಡುವ ಸಾಮರ್ಥ್ಯ ಹಾಗೂ ಭಾವನೆಯನ್ನು ಭಕ್ತನಿಗೆ ದಯಪಾಲಿಸಿದ ದೇವನನ್ನು ನೆನಪಿಸಿಕೊಂಡು ಮೇಲೆ ಕೈ ಮುಗಿಯುತ್ತಾರೆ. ಇದಾದ ನಂತರ ಸುಖದ ನಿದ್ರೆ ಮಾಡುತ್ತಾರೆ. ನಿದ್ರೆ ಮುಗಿಸಿ ಬೆಳಗಿನ ಜಾವ ಎದ್ದು ಹೊರಡುವ ಸಿದ್ಧತೆ ನಡೆಸುತ್ತಾರೆ. ಅವರು ರಾತ್ರಿ ಕಳೆದು ಎದ್ದ ವರ್ಣನೆ ರೂಪಕ ಹಾಗೂ ಪ್ರತಿಮಾತ್ಮಕ ಶಕ್ತಿಯುಳ್ಳದ್ದಾಗಿದೆ.

ಹಾಲ ಹಣ್ಣ ಉಂಡೀರ ಗಿಳಿಗೋಳ

ಹ್ವಾಳ ಮಗ್ಗಿಲೆ ಮಲಗ್ಯಾವೋ

ಹ್ವಾಳ ಮಗ್ಗಿಲೆ ಮಲಗಿದ ಗಿಳಿಗೋಳ

ಪಂಕ ಜಾಡಿಸಿ ಎದ್ದಾವೊ[೧೬]

ಎಂದು ಒಂದು ಹರಕೆಯ ಹಾಡಿನ ಭಾಗ ಹೇಳಿದರೆ ಮತ್ತೊಂದು ಹರಕೆಯ ಹಾಡು

ಸಂಜಿಕೆ ಚಿಂವ್ ಚಿಂವ್ ಮಾಡ್ಯಾವೋ ಸೂಗರ ನಿದ್ದಿ ಮಾಡ್ಯಾವೋ

ಸೂಗರ ನಿದ್ದಿ ಮಾಡೂದರಾಗ ಮೂಡಲ ಮಗ್ಗಲ ಹರದಾವೊ[೧೭]

ಎಂದು ಹೇಳುತ್ತದೆ.

ಇನ್ನೂ ಒಂದು ಹರಕೆಯ ಹಾಡು ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುತ್ತದೆ.

ಹಾಲ ಹಣ್ಣನೆ ಉಂಡಾವ ಹಕ್ಕಿ

ಮೇಲ ಗಿಣ್ಣನೆ ಉಂಡಾವೋ

ತುಪ್ಪದಲಿ ಕೈ ತೊಳದಾವೋ

ಒಂದು ಪಕ್ಕಲೆ ಹಾಸ್ಯಾವ ಹಕ್ಕಿ

ಒಂದು ಪಕ್ಕಲೆ ಹೊಚ್ಚ್ಯಾವೋ

ಒಂದು ಪಕ್ಕಲೆ ಹೊಚ್ಚ್ಯಾವ ಹಕ್ಕಿ

ಸೂಗರ ನಿದ್ದಿ ಮಾಡ್ಯಾವ್ರೋ[೧೮]

ಮೇಲಿನ ಹರಕೆಯ ಹಾಡುಗಳ ಈ ಸಾಲುಗಳಲ್ಲಿ ಮಾರಾಯರು ತಮ್ಮನ್ನು ಹಕ್ಕಿಗಳಿಗೆ ಹೋಲಿಸಿಕೊಂಡು ಹಾಡಿದರೆ ಇನ್ನೊಂದು ಹರಕೆಯ ಹಾಡು ಸ್ವತಃ ಧರ್ಮರೇ/ಪರಂಪರೆಯ ಸಿದ್ಧರೇ ಬಂದು ಪ್ರಸಾದ ಸ್ವೀಕರಿಸಿದಂತೆ ವರ್ಣಿಸುತ್ತದೆ. ಇಲ್ಲಿ ದೇವರಾಗಿ ಸ್ಥಾವರ ದೇವರುಗಳ ಜಂಗಮ ಪ್ರತಿನಿಧಿಗಳಾಗಿ ಮಾರಾಯರು ಕಾಣಿಸಿ ಕೊಳ್ಳುತ್ತಾರೆ.

ಹಂತವ್ಯಾಳ್ಯಾದ ಒಳಗ್ಯಾನೋ ಇಪ್ಪತ್ತೊಂದು ಧರ್ಮರೋ

ಇಪ್ಪತ್ತೊಂದು ಧರ್ಮರೋ ಊಟಕ್ಕೆ ಮೊದಲಾಗ್ಯಾರೋ

ಸಣ್ಣಕ್ಕಿ ಸವಿಬಾನಾನೋ ರಾಯ ಪುಡಿಯ ಸಕ್ಕರಿ

ಹಂಥಾ ವ್ಯಾಳ್ಯಾದ ಒಳಗ್ಯಾನೋ ಧರ್ಮರ ಊಟ ಮುಗದಾವ್ರೋ

ಧರ್ಮರ ಊಟಾ ಮುಗದಾವ್ರೋ ಸೀತಾಳ ಕೈ ತೊಳದಾರೋ

ಸೀತಾಳಲೇ ಕೈ ತೊಳದಾರೋ ಮ್ಯಾಲ ಎಲಿಗೋಳ ಮೆಲಿದಾರೋ[೧೯]

೫.೨.೧೦ ಹರಕೆ ಹಾಡಿನ ಆಶಯ

ಇಷ್ಟೆಲ್ಲಾ ಪೂರ್ವಪೀಠಿಕೆಯ ನಂತರ ಮಾರಾಯರು ನಿಜವಾದ ಹರಕೆ ಕೊಡಲು ಪ್ರಾರಂಭಿಸುತ್ತಾರೆ. ಅವರು ಕೊಡುವ ಹರಕೆಗಳು ವೃದ್ಧಿಸೂಚಕವಾಗಿರುತ್ತದೆ. ಭಕ್ತನಾದವನು ಸರ್ವರೀತಿಯಲ್ಲಿ ನೆಮ್ಮದಿಯಿಂದ ಇರಬೇಕಾದರೆ ಏನೇನು ಬೇಕೋ ಅದೆಲ್ಲವನ್ನು ಇಲ್ಲಿ ಹರಸುತ್ತಾರೆ. ಮಾರಾಯರ ಒಟ್ಟು ಸಾಹಿತ್ಯ ಪ್ರಯೋಜನ ಮೂಲವೆನ್ನುವುದನ್ನು ಇಲ್ಲಿ ಯಾರಾದರೂ ಗ್ರಹಿಸಬಹುದು. ಅವರು ನೀಡುವ ಭರವಸೆಗಳನ್ನು ಹಾರೈಕೆಗಳನ್ನು ಕೆಳಗಿನಂತೆ ವಿಶ್ಲೇಷಿಸಬಹುದು.

ಅದಕ್ಕಿಂತಲೂ ಮೊದಲು ಅತ್ಯಂತ ಕಿರಿದಾದ ಹರಕೆಯ ಹಾಡನ್ನು ಗಮನಿಸಿದರೆ ಒಟ್ಟು ಹರಕೆಯ ಹಾಡಿನ ಆಶಯ ಸ್ಪಷ್ಟವಾಗುತ್ತದೆ.

ಶಿವಾ ಹರ ಹರೋ

ಪಂಚ ಪಶು ಕೊಡೋ

ಆಡೂ ಮಕ್ಕಳ ಕೊಡೋ

ತೂಗೂ ತೊಟ್ಟಿಲ ಕೊಡೋ

ಬೆಳ್ಳಿಯ ಬಟ್ಟಲ ಕೊಡೋ

ಹಾಗಲಕಾಯಿ ಕೊಡೋ

ಒಟ್ಟಿದ ಬಣವಿ ಕೊಡೋ
ಸದಾ ಕಾಲ ಇದಕ್ಕೂ ಹೆಚ್ಚಿಗೆ ಕೊಡೋ
ಅಮೋಗಸಿದ್ಧ [೧೯]

೫.೨.೧೦.೧ ಸಂತಾನ ಫಲ : ಯಾವುದೇ ಪಂಥ ತನ್ನ ಸಾಮರ್ಥ್ಯವನ್ನು ಪ್ರತಿಪಾದಿಸುವುದು ಅದು ನೀಡುವ ಸಂತಾನ ಫಲದ ಭರವಸೆಯ ಪ್ರಮಾಣದ ಮೇಲೆ ನಿಂತಿರುತ್ತದೆ. ಜನ ಸಮುದಾಯಗಳು ಹೆಚ್ಚೆಚ್ಚು ಭಕ್ತಿಯಿಂದ ನಡೆದುಕೊಳ್ಳುವದು ಪಂಥದ ದೈವದಲ್ಲಿರುವ ಸಂತಾನ ಭಾಗ್ಯ ಕರುಣಿಸುವ ಶಕ್ತಿಯನ್ನು ತನ್ನ ಪರಮ ಅಸ್ತ್ರವೆಂಬಂತೆ ಬೆಳೆಸಿಕೊಂಡು ಬಂದಿದೆ. ಈ ಶಕ್ತಿಯನ್ನು ಅಮೋಘಸಿದ್ಧನು ಕೈಲಾಸದಿಂದ ಬರುವಾಗಲೇ ಶಿವನಿಂದ ವರಬೇಡಿ ಪಡೆದು ಬಂದವನೆಂದು ಹಲವಾರು ರೀತಿಯಿಂದ ವರ್ಣಿಸಿ ಕಥನಗಳ ಮೂಲಕ ಪ್ರಚಾರಪಡಿಸಿರುವುದು ನಮಗೆ ಈಗಾಗಲೇ ತಿಳಿದ ಸಂಗತಿಯಾಗಿದೆ.

ಹುಟ್ಟು ಬಂಜೆಯರಿಗೆ ತೊಟ್ಟಿಲ ಭಾಗ್ಯವನ್ನು ಅಮೋಘಸಿದ್ಧನು ವರದ ರೂಪದಲ್ಲಿ ಪಡೆದುದು ಸರ್ವವಿದಿತವಾಗಿರುವದರಿಂದ ಅವನ ಭಕ್ತರಿಗೆ ಕೊಡುವ ಹರಕೆಯಲ್ಲಿ ಅದಕ್ಕೆ ಪ್ರಥಮ ಸ್ಥಾನವಿದೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಪುತ್ರ ಸಂತಾನಕ್ಕೆ ಅತ್ಯಂತ ಪ್ರಮುಖ ಸ್ಥಾನವಿರುತ್ತದೆ. ಹರಕೆಯ ಹಾಡೊಂದು ಈ ಶಕ್ತಿಯನ್ನು 'ಕೊರಡು' 'ಬರಡು' ಮತ್ತು 'ಕೊನರು' 'ಹಯನು' ಪ್ರತಿಮೆಯ ಮೂಲಕ ಹಿಡಿದಿಡುತ್ತದೆ.

ನೆರೆದ ಬಂದ ಹಕ್ಕಿ ಏನೋ ತಮ್ಮ
ಹರದ ಹೋಗೋ ವ್ಯಾಳ್ಯಾಗೋ
ಹರದ ಹೋಗೋ ವ್ಯಾಳ್ಯಾಗೋ
ಹೀಗೊಂದ ಹರಕಿ ಕೊಟ್ಟಾವೋ

ಕೊರಡೊಡೆದು ಕೊನಿ ಚಿಗಿಯಲಿ ಈ ಮನಿ
ಬರಡೆಮ್ಮಿ ಹೈನಾಗಲೀ
ಬರಡೆಮ್ಮಿ ಹೈನಾಗಲೀ ಈ ಮನಿ
ಬಾಣಂತಿ ಜೋಗುಳ್ಯಾಡಲಿ [೨೦]

ಇಲ್ಲಿ ಬರುವ ಕೊರಡು ಹಾಗೂ ಬರಡು ಸಂತಾನ ಕೊರತೆಯ ಸಂಕೇತ. ಸಂತಾನವಿಲ್ಲದ ಮನೆಯಲ್ಲಿ 'ಆಡೂ ಮಕ್ಕಳ ಕುಡು ತೂಗೂ ತೊಟ್ಲ ಕುಡು' ಎಂದು ದೇವರಲ್ಲಿ ಕೇಳಿಕೊಳ್ಳುವ ಮೂಲಕ ಭಕ್ತನ ಮನೆಯಲ್ಲಿ ಸಂತಾನ ಫಲವಿರಲಿ ಎಂದು ಹರಸುತ್ತಾರೆ. ರೈತಾಪಿ ಜನರು ಅಮೋಘಸಿದ್ಧ ಪರಂಪರೆಯ ಸಿದ್ದರ ಪಕ್ಕಾ ಭಕ್ತರು. ರೈತಾಪಿ ಜನರಿಗೆ ಪ್ರಮುಖವಾಗಿ ಬೇಕಾದದ್ದು ದುಡಿಯುವ ಕೈಗಳು -ಮಾನವ ಸಂಪನ್ಮೂಲ. ಆ ಮಾನವ ಸಂಪನ್ಮೂಲ ಮೂಲಕವೇ ಅವರ ಭೂಮಿಗೆ ಕಿಮ್ಮತ್ತು ಬರುವುದು. ಸಂತಾನ

[illegible]

[illegible]

[illegible]

[illegible]

ಅಪೇಕ್ಷೆ ಕೇವಲ ಫ್ಯೂಡಲ್ ವ್ಯವಸ್ಥೆಯ ದ್ಯೋತಕವೆಂದು ಭಾವಿಸಿಬೇಕಾಗಿಲ್ಲ. ರೈತಾಪಿ ಜನರಿಗೆ 'ಸಂತಾನ' ಉತ್ಪಾದನಾ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿರುವ ಮಾನವ ಸಂಪನ್ಮೂಲ. ಅಲ್ಲಿ ಗಂಡು ಹೆಣ್ಣು ಎಂಬ ಬೇಧ ಭಾವವಿಲ್ಲ. ಎಲ್ಲವೂ ಮಾನವ ಸಂಪನ್ಮೂಲ. ಅದಕ್ಕಾಗಿಯೇ ಭಕ್ತನಿಗೆ ಅವರು ಕನಿಷ್ಠ ಎರಡು ಗಂಡು ಮಕ್ಕಳು ಹಾಗೂ ಎರಡು ಹೆಣ್ಣು ಮಕ್ಕಳು ಜನಿಸಲಿ ಎಂದು ಹಾರೈಸುತ್ತಾರೆ.

ಏ ಭಾವುಳ್ಳ ಭಕ್ತನ ಮನಿಯೊಳಗಯ್ಯ ಗಂಡ ಮಕ್ಕಳ ಹುಟ್ಟಾಲೋ
ಗಂಡ ಮಕ್ಕಳ ಹುಟ್ಟಲೆಯ್ಯ ಹೆಣ್ಣು ಮಕ್ಕಳ ಹುಟ್ಟಾಲೋ
ಏ ಮಾದಣ್ಣ ಮಾದಗೊಂಡನೆಂಬ ಗಂಡು ಮಕ್ಕಳ ಹುಟ್ಟಾಲೊ
ಏ ಕೊಂತೆವ್ವ ಕನ್ನವ್ವನೆಂಬೋ ಹೆಣ್ಣ ಮಕ್ಕಳ ಹುಟ್ಟಾಲೊ
ಏ ಗಂಡ ಮಕ್ಕಳ ಹುಟ್ಟಲಿ ನಿನಮನಿ ಜೋಡೆರಡ ತೊಟ್ಟಿಲ ಕಟ್ಟಾಲೊ
ಜೋಡೆರಡ ತೊಟ್ಟಿಲ ಕಟ್ಟಲಿ ನಿನಮನಿ ರಂಭೆರ ಜೋಗುಳ ಹಾಡಾಲೋ[೨೧]

೫.೨.೧೦.೨ **ಪಂಚಪಶು :** ಉತ್ಪಾದನಾ ಚಟುವಟಿಕೆಯಲ್ಲಿ ಮಾನವ ಸಂಪನ್ಮೂಲ ಬೇಕಾಗುವಂತೆ, ಪೂರಕವಾಗಿ ಪಶು ಸಂಪತ್ತೂ ಬೇಕಾಗುತ್ತದೆ. ಅದನ್ನೇ ನೆನಪಿಸುವಂತೆ ಅವರ ಹರಕೆಯಲ್ಲಿ 'ಪಂಚಪಶು' ಕೊಡು ಎಂಬುದು ಇದೆ. ರೈತಾಪಿ ಜನರ ಭೌತಿಕ ಸಾಮರ್ಥ್ಯವನ್ನು ಅಳೆಯುವುದು ಅವನು ತನ್ನ ದಂದಕ್ಕಿಯಲ್ಲಿ ಕಟ್ಟುವ ಪಶುಸಂಪತ್ತಿನ ಅಧಾರದ ಮೇಲೆ. ಪಶುಸಂಪತ್ತಿನಲ್ಲಿ ಕೃಷಿ ಚಟುವಟಿಕೆಯಲ್ಲಿ ನೇರವಾಗಿ ಪಾಲ್ಗೊಳ್ಳುವ ಎತ್ತು ಹೋರಿಗಳ ಜೊತೆಜೊತೆಗೆ ಆಕಳುಗಳನ್ನು ಸ್ಮರಿಸದೇ ಇರಲಾಗದು ಹಾಗಂತಲೇ, ಕಟ್ಟಿದ ಕಪ್ಪಲಿ ಕರಿಯಲಿ ನಿನಮನಿ[೨೨] ಎಂದು ಹರಕಿ ಮಾಡಲಾಗುತ್ತದೆ. 'ಹೈನು' ಕುಟುಂಬದ ಸೌಖ್ಯವು ಹೌದು ಸಂಪತ್ತು ಹೌದು ಎನ್ನುವ ಪ್ರಜ್ಞೆ ಹಾಡಿದ ಮಾರಾಯನಿಗಿದೆ.

೫.೨.೧೦.೩ **ಭೌತಿಕ ಸಂಪತ್ತು :** ಮಾನವ ಸಂಪತ್ತು ಹಾಗೂ ಪಶು ಸಂಪತ್ತು ಎರಡೂ ಸೇರಿಕೊಂಡು ಭೂಮಿ ತಾಯಿಯ ಸೇವೆಯಲ್ಲಿ ತೊಡಗಿದರೆ, ಖಂಡಿತವಾಗಿಯೂ ಆ ಮನೆಯಲ್ಲಿ ಧವಸ ಧಾನ್ಯಗಳಿಗೆ ಕೊರತೆ ಇರಲಾರದು ಹಾಗೂ ಇರಬಾರದು ಎಂಬುದು ಹರಕೆ ಕೊಡುವ ಮಾರಾಯರ ಭಾವನೆ. ಒಂದು ಮನೆಯಲ್ಲಿರುವ ದವಸ ಧಾನ್ಯದ ಪ್ರಮಾಣವನ್ನು ಭಕ್ತನ ಹೊಲದಲ್ಲಿರುವ ಬಣವೆಗಳು ಹಾಗೂ ಮನೆಯ ಅಂಗಳದಲ್ಲಿರುವ ಹಗೆಗಳ ಲೆಕ್ಕದಲ್ಲಿ ಅಳೆಯಬಹುದು.

ಕಾಮಣ್ಣ ಭೀಮಣ್ಣನಂಗ
ಜೋಡರೆಡು ಬಣವಿ ಒಟ್ಟಲ್ಯೋ
ಗಂಗವ್ವ ಗೌರವನಂಗ
ಜೋಡರೆಡು ಹಗೆಗಳಾಗಲ್ಯೋ[೨೩]

ಹೊಲದಲ್ಲಿ ಒಟ್ಟುವ ಬಣವಿಗಳು ಭಕ್ತನ ಭೌತಿಕ ಸಂಪತ್ತಿನ ತೋರು ಸಂಕೇತಗಳಾದರೆ, ಅಂಗಳದಲ್ಲಿರುವ ಹಗೆಗಳು ಆ ಭಕ್ತನ ಭೌತಿಕ ಸಂಪತ್ತಿನ ಗೌಪ್ಯ ಸಂಕೇತಗಳಾಗಿ ತೋರುತ್ತವೆ. ಇದೇ ಭಾವವನ್ನು ಸ್ಫುರಿಸುವ ಇನ್ನೊಂದು ಹರಕೆ ಹಾಡಿನ ಸಾಲುಗಳು ಹೀಗಿವೆ-

ಭಾವುಳ್ಳ ಭಕ್ತನ ಹೊಲದೊಳಗೋ ಕಾಮಮ್ಣಭೀಮನಂಥವರು
ಕಾಮಣ್ಣಭೀಮನಂತವರೋ ಜೋಡೆರಡು ಬಣವಿ ಒಟ್ಟಲೋ
ಭಾವುಳ ಭಕ್ತನ ಮನೆಯೊಳಗೋ ಗಂಗಿ ಗೌರೆಂಬ ಹಗೆಗಳೋ
ಗಂಗಿಗೌರೆಂಬ ಹಗೆಗಳೋ ತುಂಬಿ ತುಳಕಲೆಂದಾನೋ[೨೪]

೫.೨.೧೦.೪ ಹಿರಿತನ-ಗೌಡಕಿ : ಭೌತಿಕ ಸಂಪತ್ತಿನ ಜೊತೆಜೊತೆಗೆ ಭಕ್ತನಿಗೆ ಹಿರಿತನ ಹಾಗೂ ಗೌಡಕಿ ಲಭಿಸಲಿ ಎಂದೂ ಹಾರೈಸುತ್ತಾರೆ. ಇಲ್ಲಿ ಭಕ್ತನಿಗೆ ದೊರೆಯುವ ಹಿರಿತನ ಹಾಗೂ ಗೌಡಕಿಗಳು ಅಧಿಕಾರದ ಸಂಕೇತವಲ್ಲ. ಭಕ್ತನಾದವನಿಗೆ ಸಮುದಾಯದ ಸೇವೆ ಮಾಡಲು ದೊರೆತ ಸೌಲಭ್ಯವಾಗಿದೆ. ಅವನಿಗೆ ದೊರೆತ ಹಿರಿತನ ಹಾಗೂ ಗೌಡಕಿಗಳು ಅಧಿಕಾರದ ಕೇಂದ್ರೀಕರಣದ ಸಂಕೇತವಲ್ಲ. ಅದು ಹಿರಿಯ ಬಳ್ಳಿಯ ಹಾಗೆ ಕಾವಡಿಯ ಕುಡಿಯ ಹಾಗೆ ಪ್ರಸರಿಸುವ ವಿಕೇಂದ್ರೀಕರಣವಾಗುವ ಗುಣವುಳ್ಳದ್ದು. ಅದು ಅವನನ್ನು ಸ್ಥಾವರಗೊಳಿಸದೇ ಸದಾ ಚಲನಶೀಲಗೊಳಿಸುವಂಥದ್ದು.

ಹೀರಿಯ ಬಳ್ಳ್ಯಾಗಿ ಹಬ್ಬಲಿ ನಿನಮನಿ
ಹಿರಿತನಕ ಮೊದಲಾಗಲೋ
ಕಾವಡಿ ಕುಡಿಯಾಗಿ ಹಬ್ಬಲಿ ನಿನಮನಿ
ಗೌಡಕಿ ಪಟ್ಟಗಟ್ಟಲೋ[೨೫]

ಎನ್ನುವಂಥ ಹರಕೆಯ ಸಾಲುಗಳು ಭಕ್ತನಿಗೆ ದೊರೆಯುವ ಅಧಿಕಾರದ ಲಕ್ಷಣಗಳನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ. ಇಂಥದೇ ವಿಷಯವನ್ನು ಪ್ರಸ್ತಾಪಿಸುವ ಬೇರೊಂದು ಹರಕೆಯ ಹಾಡಿನ ಸಾಲುಗಳನ್ನು ಗಮನಿಸಬಹುದು.

ನಿನ್ನ ಭೂಮಿಯ ಒಳಗ್ಯಾನ ಹಾಗಲ ಬೆಳ್ಳ್ಯಾಗಿ ಹಬ್ಬಲಿ
ಹಾಗಲಿ ಬೆಳ್ಳ್ಯಾಗಿ ಹಬ್ಬಲಿ ಕುಂಬಳ ಕುಡಿಯಾಗಿ ಚಿಗಿಯಲಿ
ಕುಂಬಳ ಕುಡಿಯಾಗಿ ಚಿಗಿಯಾಲಿ ಕುಡಿಗೊಂದು ಮಿಡಿಗಳಾಗಲಿ
ನಿಮ್ಮ ಮನೆಯ ಒಳಗ್ಯಾನು ತುಂಬಿದ ಬೆಳದಿಂಗಳ ತೋರಾಲಿ[೨೬]

೫.೨.೧೦.೫ ಕುಟುಂಬ ಸಾಮರಸ್ಯ : ಇಷ್ಟೆಲ್ಲಾ ಭೋಗಭಾಗ್ಯವಿದ್ದು, ಕುಟುಂಬದ ಸಾಮರಸ್ಯದಲ್ಲಿ ಹೊಂದಾಣಿಕೆ ಇರದಿದ್ದರೆ ಅವಕ್ಕೆಲ್ಲ ಯಾವುದೇ ಅರ್ಥ ಬರುವುದಿಲ್ಲ. ಆದ್ದರಿಂದ ಹರಕೆಯ ಹಾಡಿನ

[illegible]

ಮಹತ್ವದ ಆಶಯವೆಂದರೆ ತುಂಬು ಸಂಸಾರ ಹಾಗೂ ಸಾಮರಸ್ಯದ ಕೂಡು ಕುಟುಂಬ. ಕುಟುಂಬದ ಸರ್ವ ಸದಸ್ಯರ ಮಧ್ಯದಲ್ಲಿ belongingness ಪ್ರಜ್ಞೆ ಇರಬೇಕು ಎಂಬುದು ಅವರ ಹಂಬಲ. ಇಲ್ಲಿ ನನ್ನದೂ ಎನ್ನುವುದಕ್ಕಿಂತ ನಮ್ಮದು ಎನ್ನುವ ಪ್ರಜ್ಞೆ ಜಾಗ್ರತವಾಗಿರುತ್ತದೆ. ಸಾಮಾನ್ಯವಾಗಿ ಕುಟುಂಬ ವಿಘಟನೆಗೆ ಕಾರಣರೆಂದು ಭಾವಿಸಲಾದ ಅತ್ತಿಗೆ ನಾದಿನಿಯರು ಹಾಗೂ ಅತ್ತೆ ಸೊಸೆಯಂದಿರು ಇಲ್ಲಿ ಕೂಡು ಬಾಳುವೆಯನ್ನು ನಡೆಸುವವರಿದ್ದಾರೆ. ಹಳಸಿದ ಸಂಬಂಧಗಳಿದ್ದಲ್ಲಿ ಭೋಗಭಾಗ್ಯ, ಸಿರಿ ಸಂಪತ್ತು ಶೂನ್ಯವಾಗಿ ತೋರುತ್ತವೆ. ಆದ್ದರಿಂದಲೇ ಹರಕಿಯ ಹಾಡಿನಲ್ಲಿ ಸುಮಧುರ ಸಂಬಂಧದ ಕೂಡು ಕುಟುಂಬದ ಹಂಬಲವಿದೆ.

ಅತ್ತಿ ಸೊಸ್ಯಾರಗಲಿ ನಿನಮನಿ
ಅತ್ತಿಗೆ ನಾದುನಿ ನಡಿಯಲೋ
ಹೇಮರಡ್ಡಿ ಮಲ್ಲಮ್ಮನಂಗ ಅತ್ತಿಗೆ ಸೊಸ್ಯಾರಾಗಲೊ [೨೭]

೫.೨.೧೦.೬ ಆಕಳ ಜನಗಿ-ಕುಂಟಲೆತ್ತು : ಇಷ್ಟೆಲ್ಲಾ ಹರಕೆಯನ್ನು ಕೊಟ್ಟು ಮುಗಿಸಿದ ನಂತರ ಮಾರಾಯರು ಕಾಣಿಕೆಗಾಗಿ ಭಕ್ತನನ್ನು ಕಾಡುತ್ತಾರೆ. ಹರಕೆಯ ಹಾಡು ಸೃಷ್ಟಿಸುವ ಭಾವತೀವ್ರತೆಯಿಂದ ಭಕ್ತ ನಿಜವಾಗಿಯೂ ಮೃದುವಾಗಿ ಹೋಗಿರುತ್ತಾನೆ. ಇದೇ ಸರಿಯಾದ ಸಮಯವೆಂದು ಭಾವಿಸಿ ಮಾರಾಯರು ಭಕ್ತರಿಂದ ಕಾಣಿಕೆ ಬೇಡುತ್ತಾರೆ. ಎಷ್ಟೋ ಸಂದರ್ಭದಲ್ಲಿ ಮಾರಾಯರ ಬೇಡಿಕೆಗಳು ಇಡೇರಿಸಲ್ಪಡುತ್ತವೆ. ಆದರೆ ಕೆಲವೊಂದು ಸಲ ಮಾರಾಯರ ಬೇಡಿಕೆಯಿಂದ ಭಕ್ತರಿಗೆ ಕಿರಿಕಿರಿಯೂ ಆಗುತ್ತದೆ. ಅಂಥದೊಂದು ಸನ್ನಿವೇಶವನ್ನು ನೆನಪಿಸುವ ಹರಕೆಯ ಹಾಡಿನ ಭಾಗ ಹೀಗಿದೆ :

ಭಾವುಳ್ಳ ಭಕ್ತಗ ಹೇಳ್ಯಾರೋ ಯ್ಯಾಳೆ ಬಂದದ ನೋಡಲ್ಲ
ಯ್ಯಾಳ್ಯಾ ಬಂದಾದ ನೋಡಪ್ಪ ನಿನ ಯೋಗಿನ ನೆನಿಯಲಿಬೇಕಲ್ಲ
ಯೋಗಿನ ನೆನೆದರ ನೋಡಪ್ಪ ನಿನ ಬಂದ ಸಂಕಟ ನೋಡಪ್ಪಾ
ಬಂದ ಸಂಕಟ ನೋಡಪ್ಪ ನಿರಬಯಲಾದಾವ ನೋಡಲ್ಲ
ಭಾವುಳ್ಳ ಭಕ್ತಗ ನೋಡಪ್ಪ ಮತ್ತೇನ ಹೇಳೂತಾರಲ್ಲ
ಭಾವುಳ್ಳ ಭಕ್ತನ ಮನಿಯೊಳಗೆ ಭಾಗ್ಯ ಹೆಚ್ಚಾಗಲೆಂದಾರ
ಭಾಗ್ಯ ಹೆಚ್ಚಾಗಲೆಂದಾರೋ ಬದುಕ ಹೆಚ್ಚಾಗಲೆಂದಾರ
ಭಾವುಳ್ಳ ಭಕ್ತಗ ನೋಡಪ್ಪ ಅವರು ಕಾಡಬಾರದು ಕಾಡ್ಯಾರ
ಕಾಡಬಾರದು ಕಾಡ್ಯಾರೋ, ಬೇಡಬಾರದು ಬೇಡ್ಯಾರೋ
ಭಾವುಳ್ಳ ಭಕ್ತಗ ನೋಡಪ್ಪ ಆಕಳ ಜನಗಿ ಕೇಳ್ಯಾರೋ
ಆಕಳ ಜನಗಿ ಕೇಳ್ಯಾರೋ ಬಸವನ ಕಂಟಲಿ ಕೇಳ್ಯಾರೋ [೨೮]

ಮಾರಾಯರು ಕಾಡಬಾರದ್ದನ್ನು ಕಾಡಿದರೂ, ಬೇಡಬಾರದ್ದನ್ನು ಬೇಡಿದರೂ ಭಕ್ತರಿಗೆ ಬೇಸರವಾಗುವುದಿಲ್ಲ ವೇನೋ. ಅವರು ಅಮೋಘಸಿದ್ಧನ ಮೇಲಿನ ಅಪಾರವಾದ ಶ್ರದ್ಧೆಯ ಕಾರಣದಿಂದ ಮಾರಾಯರು ಬೇಡಿದ್ದನ್ನು ಕೊಟ್ಟು ಕಳುಹಿಸುತ್ತಾರೆ. ತನಗೆ ಏನೆಲ್ಲಾ ಕೊಟ್ಟವನು ಅಮೋಘಸಿದ್ಧ. ಅವನೇ ಬಂದು ಬೇಡಿದರೆ ಕೊಟ್ಟು ಕೃತಜ್ಞರಾಗಬೇಕೆಂದು ಅವರು ಭಾವಿಸುತ್ತಾರೆ.

೫.೨.೧೦.೭ ಬೆಳ್ಳಿಯ ಉದಿಗೋಳ್ಳೈದಾವ್ರೋ : ನಸುಕಿನ ಮೂರುಗಂಟೆಗೆ ಪ್ರಾರಂಭವಾಗುವ ಈ ಆಚರಣೆ ಮುಗಿಯಬೇಕಾದರೆ ಸೂರ್ಯೋದಯದ ಸಮಯವಾಗಿರುತ್ತದೆ. ಸಮಯ ಹೋದದ್ದು ಭಕ್ತರಿಗೂ ಗೊತ್ತಾಗುವುದಿಲ್ಲ ಹಾಗೂ ಮಾರಾಯರ ಗಮನಕ್ಕೂ ಬಂದಿರುವುದಿಲ್ಲ. ಬೆಳಗು ಹರಿಯುವುದು ಗಮನಕ್ಕೆ ಬರುತ್ತಿದ್ದಂತೆಯೇ

ಏ ಹೀಂಗ ಹಾಡುತ ಹೋದಾರಯ್ಯ ಬೈಗುಂಟು ಬೆಳಗಾದಾವ್ರೋ
ಏ ಬೈಗುಂಟು ಬೆಳಗಾದಾವ ಗುರುವೆ ಬೆಳ್ಳಿಯ ಉದಿಗೋಳ್ಳೈದಾವ್ರೋ
ಬೆಳ್ಳಿಯ ಉದಿಗೋಳ್ಳೈದಾವಯ್ಯ ಹಿಡಿಯೋ ಗುರುವಿನ ಮಾರಗ[೨೯]

ಎಂದು ಹೇಳಿಕೊಳ್ಳುತ್ತಾ ಪಲ್ಲಕ್ಕಿ ಸಮೇತ ಮುಂದಿನ ಊರಿಗೋ, ಇಲ್ಲವೆ ಮೂಲ ನೆಲೆಗೋ ಹೋಗುವ ಸಿದ್ಧತೆ ನಡೆಸುತ್ತಾರೆ. ಅದನ್ನು ತಿಳಿದ ಭಕ್ತರ ಮನೆಯ ಹೆಣ್ಣುಮಕ್ಕಳು ಪಂಚ ಕಳಸ ಹಿಡಿದು ಪೂಜೆ ಸಲ್ಲಿಸುತ್ತಾರೆ.

ಹೆಣ್ಣು ಮಗಳು ಹೇಮದ ಗೊಂಬಿ ಸೋಳ ಸಿಂಗಾರನಾಗ್ಯಾಳೋ
ಸೋಳ ಸಿಂಗಾರಾಗ್ಯಾಳೋ ಪಂಚ ಕಳಸ ಹಿಡಿದಾಳೋ
ಪಂಚ ಕಳಸ ಹಿಡಿದಾಳ ಬಾಲಿ, ಗುರುವಿನ ಇದಿರಿಗಿ ಬೆಳಗ್ಯಾಳೋ

ಹೀಗೆ ಹೆಣ್ಣುಮಗಳು ಪಲ್ಲಕ್ಕಿಯೊಳಗಿನ ದೇವರಿಗೆ ಪಂಚ ಕಳಸ ಬೆಳಗುವುದರೊಂದಿಗೆ ಆಚರಣೆ ಮುಕ್ತಾಯವಾಗುತ್ತದೆ. ಆಗ ಮಾರಾಯರು

ಏ ಕೆಂದಾನ ಮಳಿ ಬಂದು ಕೆಂದಾಡ್ತದಪ್ಪ ನಡಿ ನಮ್ಮ ನಾಡಿಗೆ ಹೋಗೂಣ
ಏ ಕೆಂದಾನ ಮಳಿ ಬಂದು ಕೆಂದಾಡ್ತದಪ್ಪ ನಡಿ ನಮ್ಮ ನಾಡಿಗೆ ಹೋಗೂಣ
ಏ ಹೊಡಿಯೋ ಡೊಳ್ಳ ಹಿಡಿಯೋ ಸತ್ತಗಿ ದೇವರ ಬಂದಾವ ಘೇ[೩೦]

ಎನ್ನುತ್ತ ಭಕ್ತರ ಮನೆಯಿಂದ ಬೀಳ್ಕೊಟ್ಟು ಹೊರಡುತ್ತಾರೆ. ಇಲ್ಲಿನ ಒಂದು ವಿಶಿಷ್ಟ ಸಂಗತಿಯೆಂದರೆ ಭಕ್ತರ ಆತಿಥ್ಯ, ಗೌರವ ಎಷ್ಟೇ ದೊಡ್ಡ ಪ್ರಮಾಣದ್ದಿರಲಿ ಮಾರಾಯರು ಹರಕೆ ಕೊಡಲು ಬಂದಾಗ ಒಂದು ರಾತ್ರಿಗಿಂತ ಹೆಚ್ಚಿಗೆ ಭಕ್ತರ ಮನೆಯಲ್ಲಿ ತಂಗುವುದಿಲ್ಲ. ಹರಕೆ ಕೊಟ್ಟ ತಕ್ಷಣ ಅಲ್ಲಿಂದ ನಿರ್ಗಮಿಸುತ್ತಾರೆ.

೫.೩ ಹೇಳಿಕೆಗಳು

೫.೩.೧ ಪೂರ್ವ ಪೀಠಿಕೆ

ಭಕ್ತ ಹರೋಹರೋ ಎಂದು ಹೇಳುವ ಮಾರಾಯರಿಗೆ ತಮ್ಮ ದೈವವನ್ನು ನಂಬಿದ ಭಕ್ತರ ಬಗೆಗೆ ಅಪಾರವಾದ ಕಕ್ಕುಲಾತಿ ಇರುವುದನ್ನು ಅವರು ಹಾಡುವ ಹರಕೆಯ ಹಾಡುಗಳ ಅಧ್ಯಯನದಲ್ಲಿ ಗಮನಿಸಿದ್ದೇವೆ. ಜಾತ್ರೆ, ಉತ್ಸವದ ವಿಭಾಗದಲ್ಲಿ ಕಲ್ಲೂರಿನ ಜಾತ್ರೆಯನ್ನು ಕುರಿತು ವಿವರಿಸುವ ಸಂದರ್ಭದಲ್ಲಿ ಬಾದಾಮಿ ಅಮವಾಸ್ಯೆಗೆ ಮಾರಾಯರು ಮಳೆಬೆಳೆ, ಜನಜಾನುವಾರು, ರಾಜಕೀಯ ಕುರಿತು ಬೆಡಗಿನ ರೂಪದ ಹೇಳಿಕೆಗಳು ನಡೆಯಿಸುತ್ತಾರೆ ಎಂದು ಹೇಳಲಾಗಿದೆ. ಅಮೋಘಸಿದ್ಧ ಪರಂಪರೆಯ ಅನೇಕ ಸಿದ್ಧರ ಗುಡಿಗಳಿದ್ದರೂ ಹೇಳಿಕೆ ಮಾಡುವುದು ಕೆಲವೇ ಗುಡಿಗಳಲ್ಲಿ ಮಾತ್ರ ಎನ್ನುವುದು ವಿಶೇಷ. ಉಳಿದ ಕಡೆಗಳಲ್ಲೆಲ್ಲಾ ಸೂಚ (ಭಂಡಾರಕವಟೆ, ಕುಂಚನೂರು)ಗಳ ಮೂಲಕ, ಕೌಲು ಕಟ್ಟುವ ಮೂಲಕ (ಐನಾಪೂರ, ಸದಲಗಾ) ಭಕ್ತರಿಗೆ ಭವಿಷತ್ತಿನ ಬಗೆಗೆ ಭರವಸೆ ತುಂಬವ ಕೆಲಸ ಮಾಡುತ್ತಾರೆ. ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ಕಲ್ಲೂರು, ಬಸವನಬಾಗೇವಾಡಿ ತಾಲೂಕಿನ ಚಬನೂರು, ಸಿಂದಗಿ ತಾಲೂಕಿನ ಢವಳಾರ, ಗಬಸಾವಳಗಿ, ದ.ಸೋಲಾಪುರದ ಅಚೇಗಾವಿ ಮುಂತಾದ ಊರುಗಳಲ್ಲಿ ಹೇಳಿಕೆಗಳನ್ನು ಮಾಡುವ ಪದ್ಧತಿಯಿದೆ. ಸೂಚಗಳು ಭವಿಷ್ಯತ್ತಿನ ಕುರಿತು ಹೇಳುವ ಮೌನ ಸಾಂಕೇತಿಕಗಳಾದರೆ, ಹೇಳಿಕೆಗಳು ಧ್ವನಿ ರೂಪಗಳು ಧ್ವನಿ ರೂಪದಲ್ಲಿರುತ್ತವೆಂದಮಾತ್ರಕ್ಕೆ ಎಲ್ಲವೂ ಸ್ಪಷ್ಟವಾಗಿಯೇ ಇರುತ್ತವೆ ಎಂದರ್ಥವಲ್ಲ. ಈ ಹೇಳಿಕೆಗಳಲ್ಲಿ ಬಹುಪಾಲು ಬೆಡಗಿನ ರೂಪದಲ್ಲಿದ್ದು, ಅರ್ಥ ಸಂಧಿಗ್ಧತೆಯ ಮೂಲಕ ಜನರ ಮನಸ್ಸನ್ನು ಹಿಡಿದಿಟ್ಟು ಕೊಳ್ಳಬಲ್ಲ ಸಾಮರ್ಥ್ಯ ಹೊಂದಿರುತ್ತವೆ. ಹೇಳಿಕೆಗಳು ಕುರುಬ ಸಮುದಾಯದ ವಿಶಿಷ್ಟ ಸಾಹಿತ್ಯಿಕ ಕೊಡುಗೆ. ಇಂಥ ಹೇಳಿಕೆಗಳ ಕುರಿತು ಆದ್ಯ ರೂಪದ ಚಿಂತನೆ ನಡೆಯಿಸಿದವರು ಡಾ. ಎಂ.ಎಂ.ಪಡಶೆಟ್ಟಿ ಅವರು.

ಪ್ರಸ್ತುತ ಸಂಪಾದಿತ ಕೃತಿಯ ಪ್ರಸ್ತಾವನೆಯಲ್ಲಿ ಹಲವಾರು ಮೌಲಿಕವಾದ ಅಂಶಗಳ ಕುರಿತು ಚರ್ಚಿಸಿದ್ದಾರೆ. "ಜಾನಪದದ ಪರಂಪರಾನುಗತ ಜ್ಞಾನ, ಅನುಭವಗಳು ಹಲವಾರು ಪ್ರಕಾರಗಳಲ್ಲಿ ತನ್ನ ಅಭಿವ್ಯಕ್ತಿಯನ್ನು ಪಡೆಯುತ್ತವೆ. ಇವುಗಳಲ್ಲಿ ಮಳೆಬೆಳೆ ಕುರಿತಾದ ಕುರುಬರ ಹೇಳಿಕೆಗಳಲ್ಲಿ ಅವರ ಅನುಭವದ ಅಭಿವ್ಯಕ್ತಿಯನ್ನು ಕಾಣುತ್ತೇವೆ."[೩೧]

ಅಮೋಘಸಿದ್ಧನಿಗೆ ಸರ್ವಜಾತಿ ಸಮುದಾಯದವರು ನಡೆದುಕೊಳ್ಳುತ್ತಾರೆಂದರೂ, ಅವರಲ್ಲಿರುವ ಸಾಮಾನ್ಯ ಅಂಶವೆಂದರೆ ಕೃಷಿಯನ್ನು ಅವಲಂಭಿಸಿದ ಅವರ ಬದುಕು. ಕೃಷಿಕನಾದವನು ಮುಗಿಲದೈವದ ಕೃಪೆಯನ್ನು ಸದಾ ನಿರೀಕ್ಷಿಸುತ್ತಾ ಬದುಕು ನಡೆಸುತ್ತಿರುತ್ತಾನೆ. ಅದರಲ್ಲೂ ಬಯಲು ಸೀಮೆಯ ಕರ್ನಾಟಕದ ಉತ್ತರ ಭಾಗದ ರೈತರ ಬದುಕು ಮಳೆರಾಜನ ಕರುಣೆಯನ್ನು ಅವಲಂಬಿಸಿರುತ್ತದೆ. ತುಂಬಾ ಅನಿಶ್ಚಿತವಾದ ಮಳೆಯ ಕುರಿತು ಈ ಭಾಗದ ಜನರಲ್ಲಿ ಹಲವಾರು ನಂಬಿಕೆ, ಆಚರಣೆಗಳಿರುತ್ತವೆ. ರೈತರಿಗೆ ಮಳೆಯನ್ನು ತಂದುಕೊಡುವ ದೈವವೆಂದು ಈ ಭಾಗದಲ್ಲಿ ಗುರ್ಜಿಯ ಆರಾಧನೆ ನಡೆಯುತ್ತದೆ. ಮುಗಿಲ ಸೇರಿದ ಮಳೆರಾಯು

ಒಂದೊಂದು ಸಲ ಭೂಮಿಯನ್ನು ಮರೆತುಬಿಡುವುದು ಉಂಟು. ಅಂತಹ ಸಂದರ್ಭದಲ್ಲಿ ಮಳೆರಾಯನನ್ನು ಅನನ್ಯ ಭಕ್ತಿಯಿಂದ ಆರಾಧಿಸಿ, ಆಹ್ವಾನಿಸುವ ಕೆಲಸ ಈ ಆಚರಣೆಯಲ್ಲಿ ನಡೆಯುತ್ತದೆ. "ರೊಟ್ಟಿಯ ಹಂಚನ್ನು ಬೋರಲು ಮಾಡಿ, ಅದರ ಮೇಲೆ ಕೆಸರಿನ ಮುದ್ದೆ ಮಾಡಿಟ್ಟು, ಅದರಲ್ಲಿ ಕಪ್ಪೆ ಹಾಗೂ ಕರ್ಕಿಯನ್ನು ಇಟ್ಟು ಹಾಡು ಹೇಳುತ್ತಾ ಮನೆಮನೆಗೆ ತಿರುಗುತ್ತಾ ಭಿಕ್ಷೆ ಬೇಡುತ್ತಾರೆ." ಉಭಯವಾಸಿಯಾದ ಕಪ್ಪೆ ಹಾಗೂ ನೀರಿನ ಆಸರೆಯಿಲ್ಲದೆ ಬಹು ದಿವಸ ಜೀವ ಹಿಡಿದುಕೊಂಡು ನಿಲ್ಲಬಲ್ಲ ಶಕ್ತಿಯ ಹಠಮಾರಿ ಕರಕಿ ರೈತಾಪಿ ಜನರ ನಿರೀಕ್ಷೆ ಹಾಗೂ ಜಿಗುಟುತನವನ್ನು ಸೂಚಿಸುವ ಪ್ರತಿಮೆಗಳಾಗಿವೆ. ಈ ಆಚರಣೆಯಲ್ಲಿ ಹಾಗೆ ಬಂದ ಗುರ್ಜಿಯ ಮೇಲೆ ಪ್ರತಿ ಮನೆಯವರು ನೀರು ಹಾಕುತ್ತಾರೆ. ಗುರ್ಜಿ ಹೊತ್ತ ಹುಡುಗರು ಜನ ನೀರು ಹಾಕುತ್ತಿದ್ದಂತೆ ಗರಗರನೆ ತಿರುಗಲು ಪ್ರಾರಂಭಿಸುತ್ತಾರೆ. ಬೋರಲು ಹಾಕಿದ ಹಂಚಿನ ಮೇಲೆ ಸುರುವಲ್ಪಟ್ಟ ನೀರು ಮಳೆಯ ಆಕಾರದಲ್ಲಿ ಹನಿಹನಿಯಾಗಿ ನೆಲಕ್ಕೆ ಬೀಳಲು ಪ್ರಾರಂಭಿಸುತ್ತದೆ. ಮುಂಬರುವ ಮಳೆಯ ನಿರೀಕ್ಷೆಯನ್ನು ಇಂಥದೊಂದು ಅಪರೂಪದ ಭಾವಾಭಿನಯದ ಮೂಲಕ ಅಭಿವ್ಯಕ್ತಿಸುತ್ತಾರೆ. ಮಳೆ ಬಾರದೆ ನೆಲಕ್ಕೆ ಬಾಯಾರಿಕೆಯಾಗಿದೆ ಎಂಬುದನ್ನು ನೇರವಾಗಿ ಹೇಳದೆ

"ಆಯ್ಗಾರ ಹೆಂಡತಿ ಗಂಡ ಹಡದಾಳೋ
ನೆತ್ತಿಗೆ ಎರಿಯಾಕ ನೀರಿಲ್ಲ... ನೀರಿಲ್ಲ..." ಎಂದು ಹೇಳುತ್ತಾ,

"ಕರೆಕಂಬಳಿ ಗುರುಸಿದ್ಧ ಗುರುಸಿದ್ಧ
ಕಂಬಳಿ ಬೀಸೋ ಸುರಿಮಳೆಯೋ... ಸುರಿಮಳೆಯೋ.."[೩೩]

ಎಂದು ಕರಿಕಂಬಳಿಯವನನ್ನು ವಿನಂತಿಸಿಕೊಳ್ಳುತ್ತಾರೆ. ಈ ಕರಿಕಂಬಳಿಯ 'ಗುರುಸಿದ್ಧ' ಬೀರದೇವರ ಪೂಜಾರಿ ಆಗಿರಬಹುದು, ಅಮೋಘಸ್ಥಾನ ಮಾರಾಯರು ಆಗಿರಬಹುದು.

"ಕಂಬಳಿಬೀಸೋ, ಸುರಿಮಳೆಯೇ, ಸುರಿಮಳೆಯೇ" ಎನ್ನುವ ಸಾಲಿನಲ್ಲಿ ಮೊದಲ ಭಾಗದ ವಿನಂತಿ (ಕಂಬಳಿ ಬೀಸೋ) ನಂತರದ ಭಾಗದ ವಿನಂತಿಯ ಫಲ(ಸುರಿಮಳೆಯೋ, ಸುರಿ ಮಳೆಯೋ)ವಾಗಿ ರೂಪಾಂತರಗೊಂಡ ಕ್ರಮ ಅತ್ಯಂತ ರೋಚಕವಾಗಿ ಬಿಂಬಿತವಾಗಿದೆ.

ಮಳೆ-ಬೆಳೆಗಳ ಕುರಿತು ಕುರುಬರೇ ಏಕೆ ಹೇಳಿಕೆ ಮಾಡಲು ಪ್ರಾರಂಭಿಸಿದರು ಎನ್ನುವುದು ತುಂಬಾ ಕುತೂಹಲದ ಸಂಗತಿಯಾಗಿದೆ. ಕುರಿಗಳ ಬೆನ್ನು ಹತ್ತಿ ಅಡಿವಿ ಅಡವಿ ಸುತ್ತುವ ಬೀರ ದೇವರ ಆರಾಧಕರಾದ ಇವರು, ಕಿಲ್ಲಾರಗಳನ್ನು ಕಾಯುತ್ತಾ ಅವುಗಳ ಬೆನ್ನು ಹತ್ತಿ ಹಸಿರು, ನೀರು ಇರುವ ಜಾಗೆಗಳ ಶೋಧದಲ್ಲಿ ತಿರುಗಾಡುವ ಮಾರಾಯರು ಸದಾ ನಿಸರ್ಗದ ಒಡನಾಡಿಗಳಾಗಿದ್ದವರು. ನಿಸರ್ಗದ ನಿಗೂಢ ಚಟುವಟಿಕೆಗಳ ಅದರಲ್ಲೂ ವಿಶೇಷವಾಗಿ ಮಳೆಯ ಕುರಿತು ಸಹಜವಾದ ಅರಿವನ್ನು ಪಡೆದುಕೊಂಡವರು. ಇವರು ತಮ್ಮ ಕುರಿಯ ಮೆಂದೆಗಳ ಹಾಗೂ ಕಿಲ್ಲಾರಿಗಳ ಚಲನವಲನದ ಮೂಲಕವಾಗಿಯೇ ಮಳೆಯ ಬರುವಿಕೆಯನ್ನು

ಗ್ರಹಿಸಬಲ್ಲ ಶಕ್ತಿಯುಳ್ಳವರು. ಹೀಗಾಗಿ ತಮ್ಮಲ್ಲಿ ಸಂಪಾದಿತವಾದ ಜ್ಞಾನವನ್ನು 'ಹೇಳಿಕೆಗಳು' ಎನ್ನುವ ಆಚರಣೆಯ ಮೂಲಕ ರೈತಾಪಿ ವರ್ಗದವರಿಗೆ ಹಂಚುತ್ತಾರೆ. ಈಗಾಗಲೇ ಹೇಳಿಕೊಂಡಂತೆ ಹೇಳಿಕೆಗಳು ಬೆಡಗಿನ ಸ್ವರೂಪದಲ್ಲಿರುತ್ತವೆ. ಭವಿಷ್ಯದ ಸಂದಿಗ್ಧ ಸಂಗತಿಗಳನ್ನು ಪ್ರಕಟಪಡಿಸಲು ತುಂಬಾ ಉಪಯುಕ್ತವಾದ ಮಾಧ್ಯಮವಿದು. ಹೇಳಿಕೆ ಮಾಡುವ ಕುರುಬರು ಓದಿಕೊಂಡ ಮಹಾ ಪಂಡಿತರೇನಲ್ಲ. ಆದರೆ ಸಂದಿಗ್ಧ ಸಂಗತಿಗಳನ್ನು ಅಭಿವ್ಯಕ್ತಿಸಲು ಅವರು ಬಳಸಿಕೊಂಡ ಅಂಶಗಳನ್ನು ಗಮನಿಸಿದರೆ ಸಾಹಿತ್ಯ ಅಧ್ಯಯನ ಮಾಡುವವರಿಗೆ ಬೆರಗು ಉಂಟಾಗದೇ ಇರದು.

ಈ ಅಧ್ಯಯನದ ಒಂದು ಮಿತಿಯಲ್ಲಿ ಅದರ ಬೆರುಗುಗೊಳಿಸುವ ಗುಣ ಹೊಂದಿರುವ ಸಾಹಿತ್ಯಿಕ ಅಂಶಗಳನ್ನು ಹಾಗೂ ಮಾರಾಯರ ಜೀವಪರ ಧೋರಣೆಯನ್ನು ಇಲ್ಲಿ ಚರ್ಚಿಸಲಾಗಿದೆ. ಈ ಹೇಳಿಕೆಗಳೆಲ್ಲಾ ಕರ್ಣಪಾತಳಿಯಲ್ಲಿ ಸಂವಹನಗೊಳ್ಳುತ್ತವೆಯಾದ್ದರಿಂದ ಇವುಗಳನ್ನು ಕೇಳುವ ಸಮುದಾಯ ಇಲ್ಲಿ ಸದಾ ಉಲ್ಲೇಖಗೊಳ್ಳುತ್ತಲೇ ಇರುತ್ತದೆ. ಅವರನ್ನು ಮಾರಾಯರು 'ಕರಿತಲಿ ಮಾನವರು' ಎಂದು ಕರೆಯುತ್ತಾರೆ.

ಹೇಳಿಕೆಗಳು ಸಾಮಾನ್ಯವಾಗಿ ಈ ಕರಿತಲಿ ಮಾನವನನ್ನು ಉದ್ದೇಶಿಸಿಯೇ ಹೇಳಿದಂಥವುಗಳಾಗಿವೆ. ಈ ಕರಿತಲಿ ಮಾನವನ ಬಗೆಗೆ ಹೇಳಕಿ ಮಾಡುವವನಿಗೆ ವಿಪರೀತವಾದ ಕೋಪವೂ ಇದೆ. ಅದೇ ಕಾಲಕ್ಕೆ ಅಪಾರವಾದ ಅಂತಃಕರಣವೂ ಇದೆ.

"ಕರಿತಲಿ ಮಾನವಗ ಎಷ್ಟು ಹೇಳಿದರೂ ಸೊಕ್ಕ ಮುರಿಲಿಲ್ಲ" ಎಂದು ಕರಿತಲಿ ಮಾನವರ ಬಗೆಗೆ ಕೋಪವನ್ನು ವ್ಯಕ್ತಪಡಿಸಿದರೆ, 'ಎಲೇ! ಎಷ್ಟು ಹೇಳಿದರೂ ಕರಿತಲಿ ಮಾನವಗ ಸಮಜ ಆಗಲಿಲ್ಲ' ಎಂದು ಅವನ ಅಜ್ಞಾನದ ಬಗೆಗೆ ಅಂತಃಕರಣವನ್ನು ಸೂಚಿಸಲಾಗಿದೆ.

ರೈತಾಪಿ ವರ್ಗದ ಬದುಕಿನ ಅವಿಭಾಜ್ಯ ಅಂಗಗಳಾದ ಜನ(ಮಾನವ ಸಂಪನ್ಮೂಲ), ಜಾನುವಾರು (ಪಶುಸಂಪತ್ತು), ಮಳೆ(ಉತ್ಪಾದನಾ ಜೀವ ಜಲ), ಬೆಳೆ (ಉತ್ಪಾದನೆ) ಹಾಗೂ ರಾಜಕೀಯ (ಮೇಲಿನ ನಾಲ್ಕನ್ನೂ ನಿರ್ವಹಿಸುವ ಸಂಸ್ಥೆ) ಇವೆಲ್ಲದರ ಕುರಿತು ತುಂಬಾ ಕುತೂಹಲಕರವಾದ ಭವಿಷ್ಯರೂಪದ ನುಡಿಗಳನ್ನು ಹೇಳುತ್ತಾರೆ.

ಹೇಳಿಕೆಯನ್ನು ಮಾಡುವ ದೈವ (ಇಲ್ಲಿ ಅಮೋಘಸಿದ್ಧ) ಇವೆಲ್ಲವನ್ನು ಸಮೃದ್ಧವಾಗಿ ನೀಡಲು ಹಂಬಲಿಸುತ್ತದೆ. ಆದರೆ ದೈವದ ಸಂಕಲ್ಪವನ್ನು ಮೀರಿ, ವಿಧಿ ತನ್ನ ಆಟವನ್ನು ಆಡುತ್ತದೆ. ರೈತಾಪಿ ಜನರ ಬದುಕಿನೊಂದಿಗೆ ಚೆಲ್ಲಾಟವಾಡಲು ಬರುವ ವಿಧಿಯನ್ನು ಇಲ್ಲಿ 'ಇದಿಮಾಯಿ ರಂಡಿ' ಎಂದು ಕರೆಯಲಾಗಿದೆ. ಇವಳನ್ನೇ ಇನ್ನೊಂದು ಸಂದರ್ಭದಲ್ಲಿ 'ತಂಗಿ' ಎಂದು ಕರೆಯಲಾಗಿದೆ.

ಎಲೇ, ಇಚೇರಿ ನಿಂಗಣ್ಣ ಏನ ಆನಂದದಿಂದ ಬಂದ್ಯೋ ಬಾ
ಹಂಡ ಹವಳ ಕೂರಿಗಿ ಹೂಡಿ

[illegible]

ಒಕ್ಕಲಿಗನ ಮಗನಿಗೆ ಹನ್ನೊಂದು ದಿನಸಿನ (ಜೀನಸಿನ)
ಬೀಜಾ ಕೊಟ್ಟು ಬಿತ್ತೂದರಾಗ
ಇದಿಮಾಯಿ ರಂಡಿ ಇದರಿಗಿ ಬಂದಳು

ಎನ್ನುವಂಥ ಸಾಲುಗಳಲ್ಲಿ ದೈವದ ಒಳಿತನ ಸಂಕಲ್ಪ, ವಿಧಿ(ಇದಿ)ಯ ಕೇಡಿನ ಸಂಕಲ್ಪ ಮುಖಾಮುಖಿಯಾಗುವುದನ್ನು ನೋಡುತ್ತೇವೆ.

ಎಲೇ! ಅರಕೇರಿ ಅರಮನಿ ಭೀವರಗಿ ಗುರುಮನಿ
ಮಾಯ ಮಕಣಾಪುರ ಸಿಂಹಾಸದ ಗದ್ದಗಿ
ಎಲೇ ತಂಗಿ ರಥ ತಯಾರಾಯ್ತು
ಬಸವನ ಚಿಕ್ಕ ದಸರೀಗಿ ಹರದೀನಿ[೩೩]

ವಿಧಿಯನ್ನು ಇದಿಮಾಯಿ ರಂಡಿ ಎಂದು ಒಂದೊಂದು ಸಲ ತುಚ್ಛವಾಗಿ ಬೈದಂತೆ ಮಾಡಿದರೆ, ಬೇರೆ ಸಂದರ್ಭದಲ್ಲಿ ಅವಳನ್ನು ತನ್ನ ಸ್ವಂತ ತಂಗಿ ಎಂದು ಭಾವಿಸುವುದಿದೆ. ದೈವವಾದ ಇವನು ಭಕ್ತರ ಹೆಗಲ ಮೇಲಿನ ಪಲ್ಲಕ್ಕಿಯಲ್ಲಿ ಹೊರಟಿದ್ದರೆ, ಅವಳು ಸ್ವಂತ ರಥದಲ್ಲಿ ಬರುವುದುಂಟು. ದೈವ ವಿಧಿಗಳ ಈ ಸ್ನೇಹ ಈರ್ಷೆಯ ಸಂಬಂಧ ತಾತ್ವಿಕ ಚಿಂತನೆಗೆ ಗ್ರಾಸವಾಗುವಂಥ ವಸ್ತುವಾಗಿದೆ. ಮನುಷ್ಯನ ಬದುಕಿನಲ್ಲಿ ಒಳಿತು ಬಯಸುವ ಶಕ್ತಿ (ದೈವ) ಇರುವಂತೆ ಕೇಡನ್ನು ಬಯಸುವ ವಿಧಿಯೂ ಇರುತ್ತದೆ ಎಂಬುದನ್ನು ಸ್ವೀಕರಿಸಿಕೊಂಡ ಮನಸ್ಸುಗಳು ಇಂಥ ಸಂಬಂಧಗಳನ್ನು ಕಲ್ಪಿಸಲು ಸಾಧ್ಯ. ‘ಕೇಡು’ ಇಲ್ಲವೇ ಇಲ್ಲ, ಎಲ್ಲವೂ ಶಿವಮಯ ಎನ್ನುವ ಆದರ್ಶವಾದಿ ನೆಲೆಗಿಂತ ಕೇಡಿನ ಅಸ್ತಿತ್ವವನ್ನು ಒಪ್ಪಿಕೊಂಡು, ಅದನ್ನು ಮುಖಾಮುಖಿ ಮಾಡಿಕೊಳ್ಳುವ ಇಲ್ಲಿನ ಪರಿ ನಿಜಕ್ಕೂ ಅನನ್ಯವಾದುದು. ಅಂಥ ಕೇಡನ್ನು ಎದುರಿಸಲು ಶಿವ(ದೈವ)ನ ಪಕ್ಷದಲ್ಲಿ ಒಂದು ಶಕ್ತಿಯಿದೆ. ಅದೇ ಭೂತಾಳಸಿದ್ಧ.

ಒಂದೊಂದು ಸಲ ದೈವ ವಿಧಿಗಳು ಎರಡೂ ಸೇರಿಯೇ ಜನ ಕಲ್ಯಾಣವನ್ನು ಬಯಸುವುದುಂಟು. ಅಂಥ ಸಂದರ್ಭವನ್ನು ಸೂಚಿಸುವ ಈ ಹೇಳಿಕೆಯನ್ನು ನೋಡಿ

ಎಲೇ! ತಂಗಿ ಅಣ್ಣ ಕೂಡಿ ಢವಳಾರ ಅಗಸ್ಯಾಗ ಬರುವಾಗ
ಬಂಗಾರ ಹೊಗಿ ಹಾರತೆಲೇ ಗಾಣಮಿಣಿ[೩೪]

ದೈವ ಹಾಗೂ ವಿಧಿಗಳು ಮುಖಾಮುಖಿಯಾಗಿ ನಿಂತಾಗ ದೈವದ ಪರವಾಗಿ ಯಾವಾಗಲೂ ಒಂದು ಶಕ್ತಿ ಬಂದು ನಿಂತುಕೊಳ್ಳುತ್ತದೆ. ಅದೇ ಹಿಂಡ ದೆವ್ವಿನ ಗಂಡ ಪುಂಡ ಭೂತಾಳಸಿದ್ಧ.

ಚಪ್ಪನ್ನಾಡ ದೇಶಕ್ಕೆ ಬಳಕೂರಗಿ ಮಾಡುದರಾಗ
ಇದಿಮಾಯಿ ರಂಡಿ ಇದರೀಗಿ ಬಂದಾಳಲೇ

ಭೂತ್ಯಾನ ಹಚ್ಚಿ ಬೈಲ ಮಾಡಿ
ಒಕ್ಕಲಿಗನ ಮಗನಿಗೆ
ಉಮೇದಾರದಲ್ಲಿ ಇಟ್ಟಿನಲೇಗಾಣಮಿಣಿ

ಎನ್ನುವಂಥ ಹೇಳಿಕೆಯ ಭಾಗದಲ್ಲಿ ಬರುವ 'ಭೂತ್ಯಾ' ಹಾಗೂ

ಇದಿಮಾಯಿ ರಂಡಿ ಇದರಿಗೆ ಬಂದಾಳು
ಭೂತ್ಯಾನ ಹಚ್ಚಿ ಕಡದ ಫೈಸಲ್ ಮಾಡಿ
ಬಸವನ ಚಿಕ್ಕಾ ದಸರೀಗಿ ಹರೀಬೇಕು ಅನುದರಾಗ
ಒಳಗಡೆ ಹರೀತು...

ಎನ್ನುವ ಹೇಳಿಕೆಯಲ್ಲಿ ಬರುವ 'ಭೂತ್ಯಾ' ಬೇರೆ ಯಾರೂ ಅಲ್ಲ, ಅಮೋಘಸಿದ್ಧನ ಶಿಷ್ಯನಾದ ಭೂತಾಳಸಿದ್ಧ.

ಹೇಳಿಕೆಯ ಅಂತರಂಗದಲ್ಲಿ ಸಂದಿಗ್ಧತೆಯ ನೆರಳು ಇದ್ದರೂ ಹೇಳುವವನ ನಿಲುವಿನಲ್ಲಿ ತುಂಬಾ ಖಚಿತತೆ ವ್ಯಕ್ತವಾಗುವುದನ್ನು ಗಮನಿಸುತ್ತೇವೆ. ಅಂತಲೇ ಹೇಳಿಕೆಗಳು

ಎಲೇ! ಯಾವ ಕೇಳಾವ
ತುದಿಗ್ಯೆ ಹಿಡದ ಕೇಳಬ್ಯಾಡ
ಮುಂಗ್ಯೆ ಹಿಡದ ಕೇಳಲೇ

ಎಂದು ಪ್ರಾರಂಭವಾಗುತ್ತವೆ. ಇಂಥ ಮಾತುಗಳಲ್ಲಿರುವ ಖಾಚಿತ್ಯದ ಧ್ವನಿಯನ್ನು ಸ್ಪಷ್ಟವಾಗಿಯೇ ಗುರುತಿಸಬಹುದು. ಧ್ವನಿಯಲ್ಲಿ ಖಚಿತತೆ ಇದ್ದರೂ ಅದು ಮೃದುವಾದುದು ಎಂಬುದನ್ನೂ ಗಮನಿಸಬಹುದು. ಮೃದುವಾದುದಾದರೂ ತುಂಬಾ ಖಚಿತವಾದುದೆ ಎಂಬುದನ್ನು ಬಿಂಬಿಸಲು

ಕಲ್ಲೂರ ಸಿದ್ಧ ಹೇಳಿದ ಮಾತ
ಕಲ್ಲsssರಿ ಮ್ಯಾಲ ಮ್ಯಾಣದ ಗೂಟ ಜಡದಂಗಲೇ ಗಾಣಮಿಣಿ

ಎನ್ನುವಂಥ ಮಾತುಗಳು ಬರುತ್ತವೆ. ಮೇಣದಂತೆ ಮೃದುವಾದರೂ, ಕಲ್ಲನ್ನ ಬೇಧಿಸಿ ಒಳ ಸೇರುವ ಶಕ್ತಿಯುಳ್ಳದ್ದು ಎನ್ನುವುದನ್ನು ಗಮನಿಸಬೇಕು.

ಹೇಳಿಕೆ ಶುಭದಾಯಕವಾಗಿದೆಯೋ, ಅಶುಭದಾಯಕವಾಗಿಯೋ ಎನ್ನುವುದನ್ನು 'ಹಂದರ' ಹಾಗೂ 'ಹುತ್ತ' ಎನ್ನುವ ಪ್ರತಿಮೆಗಳಲ್ಲಿ ಸೂಚಿಸಲಾಗುತ್ತದೆ.

'ಎಲೇ ನಡಗಡ್ಯಾಗ ಹಂದ್ರ ಹಾಕಿ' ಎಂದು ಪ್ರಾರಂಭಗೊಂಡರೆ, ಹೇಳಿಕೆಯ ಮುಂದಿನ ಭಾಗದಲ್ಲಿ ಶುಭವಿದೆ ಎಂದು ಜನ ನಿಟ್ಟುಸಿರು ಬಿಡುತ್ತಾರೆ. 'ನಡಗಡ್ಯಾಗ ಹುತ್ತ ಹುಟ್ಟಿತು' ಎಂದು ಪ್ರಾರಂಭವಾದರೆ,

ಹೇಳಿಕೆ ಕೇಳಲು ನೆರೆದ ಜನ ಅಶುಭದ ಸೂಚನೆಯನ್ನು ಪಡೆದು ಉಸಿರು ಬಿಗಿ ಹಿಡಿದು ನಿಲ್ಲುತ್ತಾರೆ. ಹಂದರದ ಪ್ರತಿಮೆಯೊಂದಿಗೆ ಪ್ರಾರಂಭವಾಗುವ ಹೇಳಿಕಯೊಂದು ಹೀಗಿದೆ :

ಎಲೇ! ನಡಗಡ್ಡ್ಯಾಗ ಹಂದ್ರ ಹಾಕಿ
ಚಪ್ಪನ್ನಾಡ ದೇಶಕ್ಕ ಬಿನ್ನಕೊಟ್ಟು
ಬಸವಗ ಶಿಶುವಿಗ ತೊಟ್ಟಿಲದಾಗ ಹಾಕಿದ್ಯಾ
ಕಳಸಗಿತ್ತಿಗಿ ಕಳೆ ಬಂತಲೇ ಗಾಣಮಿಣಿ[೩೫]

ಹಂದರವೆನ್ನುವ ಶಬ್ದವೇ ಶುಭಕರ. ಶುಭಕರವಾದ, ಮಂಗಳಕರವಾದ ಸನ್ನಿವೇಶವನ್ನು ನೆನಪಿಸುವಂತದ್ದು. ಅಂತೆಯೇ ಇಲ್ಲಿ ದೈವ ಹಂದರ ಹಾಕಿ ಚಪ್ಪನ್ನಾಡ ದೇಶಕ್ಕೆ ಬಿನ್ನ ಕೊಟ್ಟು ಶುಭ ಕಾರ್ಯದಲ್ಲಿ ಪಾಲ್ಗೊಳ್ಳಲು ಆಮಂತ್ರಿಸುತ್ತದೆ.

ಜನ(ಶಿಶು), ಜಾನುವಾರು(ಬಸವ)ಗಳನ್ನು ರಕ್ಷಣೆ ಮಾಡುತ್ತಿದ್ದೇನೆ ಎನ್ನುವುದನ್ನು ಸೂಚಿಸಲು ತೊಟ್ಟಿಲದ ಪ್ರತಿಮೆಯ ಬಳಕೆಯಾಗಿದೆ. ಈ ಸನ್ನಿವೇಶದ ಶುಭವನ್ನು ಕ್ರೋಢೀಕರಿಸಿ ಹೇಳುವಂತೆ ಕಳಸಗಿತ್ತಿಯ ಮುಖದಲ್ಲಿ 'ಕಳೆಯ' ವಿವರಣೆ ಬಂದಿದೆ.

ಹುತ್ತದ ಪ್ರತಿಮೆಯೊಂದಿಗೆ ಪ್ರಾರಂಭವಾಗುವ ಹೇಳಿಕೆಗಳ ಪರಿಯನ್ನು ನೋಡಿ :

"ಎಲೇ ನಡುಗಡ್ಡ್ಯಾಗ ಹುತ್ತ ಹುಟ್ಟಿತು
ಹುತ್ತ ಒಡದ ಮುತ್ತ ತಗದ್ಯಾ
ಮೆತ್ತ್ಯಾಗ ಮಾಡಿ ನುಚ್ಚ ಕೊಡಬೇಕು ಅನೂದರಾಗ
ಇದಿಮಾಯಿ ರಂಡಿ ಇದಿರಿಗಿ ನಿಂತಳು[೩೬]

ಈ ಹೇಳಿಕೆಯಲ್ಲಿ ಇದಿಮಾಯಿ ರಂಡಿ ಮೇಲುಗೈ ಸಾಧಿಸಿದಂತೆ ಕಂಡರೆ

ಎಲೇ! ನಡಗಡ್ಡ್ಯಾಗ ಹುತ್ತ ಹುಟ್ಟಿತು
ಜೋಡ ಬಾರಿನ ಬಂದೂಕ ತಗೊಂಡು
ಹೊಡದರ ಪುಸ್ಸಂತು
ರಾಮನ ಬಾಣ ಎತ್ತಿ ಹೊಡದರ
ಬೇಲಿ ಬಿತ್ತು
ಬೇಲ್ಯಾಗ ಒಕ್ಕಲಿಗನ ಮಗನ
ಸಂರಕ್ಷಣ ಮಾಡಿನಲೇ ಗಾಣಮಿಣಿ[೩೭]

ಎನ್ನುವ ಹೇಳಿಕೆ ದೈವವು ವಿಧಿಯನ್ನು ನಿಯಂತ್ರಿಸಿ ನಂಬಿದ ಭಕ್ತರನ್ನು ರಕ್ಷಿಸುವ ಚಿತ್ರಣ ನೀಡುತ್ತದೆ.

ಹೇಳಿಕೆ ಮಾಡುವವನಲ್ಲಿ ನಂಬಿಕೆ ಇಡದಿದ್ದರೆ, ಈ ಹೇಳಿಕೆಗಳಿಗೆ ಅರ್ಥವೇ ಬರುವುದಿಲ್ಲ. ಹೀಗಾಗಿ ನಂಬಿಕೆಯ ಅವಶ್ಯಕತೆಯನ್ನು ಹೇಳಿಕೆ ಮಾಡುವವ ಮೇಲಿಂದ ಮೇಲೆ ಒತ್ತು ಕೊಟ್ಟು ಹೇಳುತ್ತಿರುತ್ತಾನೆ.

'ಎಲೇ! ನಂಬಿಗಿ ಇಲ್ಲದವನು ನುಚ್ಚ ಎಂಬಲಿಕ್ಕಿಂತ ಕಡಿ' ಎಂದು ನಂಬಿಕೆಗೇಡಿಗಳನ್ನು ತುಚ್ಛವಾಗಿ ಕಂಡರೆ 'ನನ್ನಂತೆ ನಡದರ ಮುತ್ತಿನ ತುರಾಯಿ ಹಚ್ತೀನಿ'

'ನನ್ನಂತೆ ನಡದರ ಹಸಿರು ನಿಶಾನೆ ಹಚ್ತಿನಿ' ಮತ್ತು

'ನನ್ನಂತೆ ನಡದ್ರ ಬಸವಗ ಬಾಲಗ ಹಿಡಿ ಹೊನ್ನ ಕೊಟ್ಟು ದಂಡಿಗಿ ಹಚ್ತಿನಿ' ಎಂದು ನಂಬಿದವರಿಗೆ ಸಲಹುವ ಭರವಸೆ ಕೊಡಲಾಗುತ್ತದೆ. ತನ್ನನ್ನು ನಂಬದಿದ್ದರೆ ಎಲ್ಲಾ ತಿರುವು ಮುರುವು ಮಾಡುವುದಾಗಿ ಅಂಜಿಸುವ ಹೇಳಿಕೆಗಳೂ ಇವೆ :

ಗುಡ್ಡದಾನ ಹುಲಿ ಗಡಬಡಿಸಿ ಹೊರಗ ಬರುವುದರಾಗ
ನನ್ನಂತೆ ನಡದ್ರ ಐದು ದಿನದಾಗ ಹೊರಗ ತರ್ತಿನಿ
ಇಲ್ಲಂದ್ರ ಚಿತ್ತ ಇದ್ದದ್ದು ಟಪ್ಪ ಹೊಡಿತೀನಿ[೩೮]

ನಂಬಿ ನಡೆಯದಿದ್ದರೆ, ಅವರ ನಾಶವನ್ನು ಮಾಡಲೂ ಹಿಂಜರಿಯದಿರುವುದನ್ನು ಸೂಚಿಸುವ ಮಾತುಗಳೂ ಇವೆ.

ನಂಬಿಗಿ ಇಟ್ಟ ನಡದರ
ಅರಸನ ಅರಮನ್ಯಾಗ ಇಡತೀನಿ
ಅಪನಂಬಿಗಿ ಮಾಡಿದರ
ಪಾತಾಳಕ ತುಳಿತಿನಲೇ ಗಾಣಮಿಣಿ[೩೯]

ತನ್ನನ್ನು ಅರಸನೆಂದು ಕಲ್ಪಿಸಿಕೊಂಡು ಭಕ್ತರನ್ನು ಆಳು ಎಂದು ಭಾವಿಸಿರುವ ಹೇಳಿಕೆಯೊಂದು ಈ ರೀತಿ ಇದೆ.

ಅರಸನ ಆಳು ಸರಿಯಾಗಿ ನಡದ್ರ ನಡಸ್ತೀನಿ
ಇಲ್ಲಾಂದ್ರ ಹುಡೇದ ಗಡ್ಡಿ ಉಳ್ಳಿಸಿದಂಗ ಉಳ್ಳಿಸ್ತೀನಿ[೪೦]

ಇಷ್ಟೆಲ್ಲಾ ಆವರಣದಲ್ಲಿ ಅಮೋಘಸಿದ್ಧನ ಮಾರಾಯರು ಹೇಳಿಕೆಗಳನ್ನು ಮಾಡುತ್ತಾರೆ. ಅವರ ಹೇಳಿಕೆಗಳ ಕೇಂದ್ರ ಆಸಕ್ತಿ ಈಗಾಗಲೇ ಹೇಳಿದಂತೆ ಜನ ಜಾನುವಾರು ಮಳೆ ಬೆಳೆ ಹಾಗೂ ರಾಜಕೀಯ ವಿಷಯಗಳು.

೫.೩.೨ ಜನರ ಕುರಿತು ಹೇಳಿಕೆಗಳು

ಹೇಳಿಕೆಯಲ್ಲಿ ಪ್ರಸ್ತಾಪವಾಗುವ ಜನರನ್ನು ಬಾಲ, ಶಿಶು ಬಡವ, ಒಕ್ಕಲಿಗನ ಮಗ ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ. ತನ್ನನ್ನು ನಂಬಿದ ಭಕ್ತರ ಸಂರಕ್ಷಣೆ ಮಾಡುವುದನ್ನು ಈ ದೈವ

ನಿಶ್ಚಿತಗೊಳಿಸಿಕೊಂಡಿದೆ. ಹಾಗಂತಲೇ ಅವನಿಗೆ ಸದಾ ಸಮೃದ್ಧಿಯನ್ನು ನೀಡಿ, ಕಷ್ಟ ಬಂದಾಗ ಅವುಗಳನ್ನು ಪರಿಹರಿಸುವುದು ಇಲ್ಲಿನ ದೈವದ ಸಂಕಲ್ಪವಾಗಿರುತ್ತದೆ. ತನ್ನನ್ನು ನಂಬಿದವರನ್ನು ಬಲ್ಲಿದ, ದತ್ತಗೇಡಿ (ನಂಬಿಗೆಗೇಡಿ) ಹಾಗೂ ಬಡವ ಎಂದು ವರ್ಗೀಕರಿಸಿಕೊಂಡಿರುತ್ತದೆ. ಅವರೆಲ್ಲರನ್ನು ಯಾವ ಯಾವ ರೀತಿ ಸಲುಹಬಲ್ಲದು ಎಂಬುದನ್ನು ಹೇಳಿಕೆಯೊಂದು ತುಂಬಾ ವ್ಯವಸ್ಥಿತವಾಗಿ ವಿವರಿಸುತ್ತದೆ.

ಹವಳ ಮುತ್ತ ಉಡಿಕಟ್ಟಿ ಬಿತ್ತೂದರಾಗ
ಬಲ್ಲಿದವನಿಗೆ ಹವಳ
ದತ್ತಗೇಡಿಗೆ ಮುತ್ತು
ಬಡವನಿಗೆ ಬಗಲಾಗ ಹಿಡದ
ದಂಡೀಗೆ ಹಚ್ಚುದ್ರಾಗ ಜಡಹರೀತದ[೮೧]

ಭಕ್ತ ಜನರನ್ನು ದೈವಾನರು ಹಾಗೂ ದತ್ತಗೇಡಿಗಳು ಎಂದು ವರ್ಗೀಕರಿಸುವುದು ಇನ್ನೊಂದು ವಿಧ. ದೈವಾನರನ್ನು ದವಳವರು>ದೌಳವರು ಎಂದು ಕರೆಯುವ ವಾಡಿಕೆಯೂ ಇದೆ. ಹೇಳಿಕೆಗಳು ತುಂಬಾ ದುರಸ್ತಿ ಯಾದವುಗಳು ಅವು ಅತ್ಯಂತ ಖಚಿತವಾದವುಗಳು ಎಂದು ಹೇಳುತ್ತಾ ದೌಳವರಿಗೆ ಹಾಗೂ ದತ್ತಗೇಡಿಗಳಿಗೆ ಯಾವ ಯಾವ ರೀತಿಯಲ್ಲಿ ಸಲಹುತ್ತೇನೆ ಎಂದು ಒಂದು ಹೇಳಿಕೆ ಹೀಗೆ ಹೇಳುತ್ತದೆ-

ಹಾರ್ಲಿಕ್ಕ ರಾಮನ ಬಾಣ ಅಲ್ಲ
ತಿರಗ್ಲಿಕ್ಕ ಕಾಮನ ಬೂದಿ ಅಲ್ಲ
ದೈವಾನಗ ಬೆಳಿ ದತ್ತಗೇಡಿಗಿ ಮಳಿ[೮೨]

ಎಂದು ಹೇಳುವ ಮೂಲಕ ದೈವಾನನಿಗೆ ಸಂಪೂರ್ಣ ಮಳೆಯನ್ನು ನೀಡದಿದ್ದರೂ ಅವನ ಬದುಕು ಸುಗಮವಾಗಿ ಸಾಗುವಷ್ಟು ಬೆಳೆ ಕೊಟ್ಟು ಸಲಹುತ್ತೇನೆ ಎಂದು ಒಂದು ನೆಲೆಯಲ್ಲಿ ಹೇಳಿದರೆ, ದತ್ತಗೇಡಿಗೆ ಸಂಪೂರ್ಣ ಮಳೆ ಕೊಟ್ಟರೂ ಅವನ ಕೈಗೆ ಬೆಳೆ ಹತ್ತದಂತೆ ನೋಡಿಕೊಳ್ಳುವುದನ್ನು ಈ ಹೇಳಿಕೆ ವಿವರಿಸುತ್ತದೆ. ದತ್ತಗೇಡಿ ಆದವನು ಮಳೆ ಬಂದಿತೆಂದು ಹಿಗ್ಗುವಷ್ಟರಲ್ಲಿ ಅದು ಹಸಿಬರವಾಗಿಯೋ, ಬರಬಾರದ ವೇಳೆಗೆ ಮಳಿ ಬಂದೋ, ಬರಬೇಕಾದ ವೇಳೆ ಬರದೆ ಹೋಗುವ ಮೂಲಕವೋ ಸಂಕಷ್ಟಕ್ಕೆ ಸಿಲುಕಿಕೊಳ್ಳುವುದನ್ನು ಅತ್ಯಂತ ಸಂಕ್ಷಿಪ್ತದಲ್ಲಿ ಸ್ಪಷ್ಟಪಡಿಸುತ್ತದೆ.

ದಿನಮಾನಗಳು ಎಷ್ಟೇ ಕಷ್ಟ ನಿಷ್ಠುರದವಾದರೂ ಅವುಗಳನ್ನೆಲ್ಲಾ ಬಯಲು ಮಾಡಿ ಇದ್ದುದರಲ್ಲಿಯೇ ಒಕ್ಕಲಿಗ ಮಗನನ್ನು ಸಲಹುವೆನೆಂದು ಹೇಳುವ ಹೇಳಿಕೆಗಳು ಭಕ್ತರಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸುತ್ತವೆ. ಕನಿಷ್ಠ ಮಳೆಗಾಲ ಬಂದರೂ ಇದ್ದುದರಲ್ಲಿಯೇ ಬದುಕು ನಡೆಯಿಸಲು ಸಾಕಾಗುವಷ್ಟು ಬೆಳೆಯನ್ನು ನೀಡಿ ರಕ್ಷಣೆ ನೀಡುತ್ತೇನೆ ಎನ್ನುವ ಭರವಸೆಯ ಮಾತುಗಳಲ್ಲಿ ಎಂಥ ನಿರಾಶಾವಾದಿಯ ಮನಸ್ಸಿನಲ್ಲೂ

ಆಶಾವಾದವನ್ನು ಸೃಷ್ಟಿ ಮಾಡಬಲ್ಲ ಶಕ್ತಿಯಿದೆ. ಕಷ್ಟಗಳು ಯಾವ ಕಾಲಕ್ಕಾದರೂ ಇದ್ದೇ ಇದೆ. ಆದರೆ ಅವುಗಳನ್ನು ಎದುರಿಸುವಲ್ಲಿ ಜನ ತಳೆಯುವ ನಿಲುವಿನ ಆಧಾರದ ಮೇಲೆ ಅವರ ಬದುಕಿನ ಸುಖದುಃಖ ನಿಂತಿರುತ್ತವೆ. ಈ ಪೂರ್ವದಲ್ಲಿ ರೈತಾಪಿ ಜನ ಪಾಲಿಗೆ ಬಂದದ್ದನ್ನು ಭಗವಂತನ ಕೃಪೆ ಎಂದು ಭಾವಿಸುವ ಮೂಲಕ ಜೀವಪರವಾದ ನಿಲುವು ತಳೆಯುತ್ತಿದ್ದರು. ಬೇಕಾದಂಥ ಬರಗಾಲ ಬಿದ್ದರೂ ಕೈಗೆ ಬಂದ ಬೆಳೆಗಳು ಬಾಯಿಗೆ ಬರದೇ ಹೋದರೂ ಈ ಭಾಗದ ಜನ ಜೀವ ವಿರೋಧಿ ನಿಲುವನ್ನು ತಳೆಯುತ್ತಿರಲಿಲ್ಲ. ಹೇಳಿಕೆಗಳು ಅಂಥ ನಿಲವು ತೆಗೆದುಕೊಳ್ಳದ ಹಾಗೆ ಅವರಲ್ಲಿ ಆತ್ಮ ವಿಶ್ವಾಸವನ್ನು ಹುಟ್ಟಿಸುತ್ತಿದ್ದವು.

ಎಲೆ! ಎತ್ತ ನೋಡಿದತ್ತ ಕರಿ ರಂಡೀನ ಕಾಣತಾಳ
ದಿಲ್ಲಿ ಸಿಂಹಾಸನಕ್ಕ ಕರಿ ಜಂಡಾ ಹಚ್ಚೇನಿ
ಜಾಡಿ ಪದರಾಗ ಐದ ಹನಿ ಕಟ್ಟೇನಿ
ಸಿಕ್ಕವಂಗ ಸಿಕ್ತು ಸಿಗ್ನಾರದಂವಗ ಇಲ್ಲ
ನೆಲಗಂಗಿ ತಿರುವಿ
ಒಕ್ಕಲಿಗನ ಮಗನ ಆನಂದದಿಂದ
ಪಾಚೇಕ ಹಚ್ಚೇನಲೇ ಗಾಣಮಿಣಿ[೪೩]

ಈ ಹೇಳಿಕೆಯಲ್ಲಿ ಬರುವ ಕಪ್ಪು ಬಣ್ಣ ಕಷ್ಟದ ಸಂಕೇತವಾಗಿ ಬಂದಂತೆ ತೋರುತ್ತದೆ. ಆದರೆ ಅದೇ ರೀತಿಯಲ್ಲಿ ಭರವಸೆಯೂ ಇದೆ. ಈ ಹೇಳಿಕೆಯನ್ನು ಗಮನಿಸುತ್ತಿದ್ದಂತೆ ದರ್ಶನ ಪಡೆದವನೊಬ್ಬನ ಮಾತಿನ ಹಾಗೆ ತೋರುತ್ತದೆ. ತನ್ನ ಅನುಭವದ ಹಿನ್ನೆಲೆಯಲ್ಲಿ ಆತ ಬದುಕನ್ನು ಗ್ರಹಿಸಬಲ್ಲ ಎನ್ನುವುದನ್ನು ಒಪ್ಪಿಕೊಳ್ಳುವುದಾದರೆ, ಅವನಿಗೆ ಮುಂದಿನ ದಿನಮಾನಗಳು ಅಂಗೈ ಕನ್ನಡಿಯೊಳಗಿನ ಚಿತ್ರದ ಹಾಗೆ ಸ್ಪಷ್ಟವಾಗಿ ಗೋಚರಿಸುತ್ತಿರುತ್ತವೆ ಅನ್ನಿಸುತ್ತದೆ. ಅವನು ಬಿಳಿಯದರ ಹುಡುಕಾಟ ಎಷ್ಟೇ ಮಾಡಿದರೂ ಅವನಿಗೆ ಕಾಣಿಸುವುದು ಕೇವಲ ಕರಿರಂಡಿ. ಅಧಿಕಾರದ ಕೇಂದ್ರ ಸ್ಥಾನದ ದಿಲ್ಲಿಯಲ್ಲೂ ಬಿಳಿಯ ಬೆಳಕಿನ ಸೆಳಕುಗಳು ಇಲ್ಲ. ಎಲ್ಲ ಕಡೆಗೂ ಕಪ್ಪು ಕಪ್ಪು. ಭರವಸೆಯೇ ಇಲ್ಲದೆ ಸುಮ್ಮನೆ ಕೈಚೆಲ್ಲಬೇಕು. ಆದರೆ ಕರಿಮೋಡದಲ್ಲಿ ಮಿಂಚಿನ ಸೆಳಕು ಕಂಡಂತೆ, ತಾನು ಹೊದ್ದ ಕಂಬಳಿಯಲ್ಲಿ/ಜಾಡಿಯಲ್ಲಿ ಭರವಸೆಯ ಹನಿಗಳನ್ನು ಕಾಣುತ್ತಾನೆ. 'ಜಾಡಿ ಪದರಾಗ ಐದ ಹನಿ ಕಟ್ಟೇನಿ' ಎನ್ನುವ ಮೂಲಕ ಭರವಸೆ ತುಂಬಲು ಪ್ರಯತ್ನಿಸುತ್ತಾನೆ. ಐದು ಹನಿ ಕಾದ ಹಂಚಿನ ಮೇಲೆ ಬಿದ್ದ ನೀರ ಹನಿ ಎಂದು ಭಕ್ತ ಭಾವಿಸುವುದು ಸಹಜ. ಆದ್ದರಿಂದ ಆ ಹನಿಗಳು ಸಿಕ್ಕಂವಗ ಸಿಕ್ತು, ಸಿಗ್ನಾರದಂವಗ ಇಲ್ಲ ಎನ್ನುವ ವಾಸ್ತವಿಕ ಮಾತನ್ನು ಹೇಳುತ್ತಾನೆ. ಆದರೆ ಅದೇ ಕಾಲಕ್ಕೆ ಭವರವಸೆಯ ಇನ್ನೊಂದು ಸಾಧ್ಯತೆಯನ್ನು ಭಕ್ತರ ಮುಂದೆ ಇಡುತ್ತಾನೆ. ಈ ಪರಿಕ್ರಮ ಒಬ್ಬ ಮನೋವಿಜ್ಞಾನಿಯೊಬ್ಬನ ತರ್ಕ ಸಾಮರ್ಥ್ಯವನ್ನು ಬಿಂಬಿಸುತ್ತದೆ. ಆಕಾಶ ಕೈಕೊಟ್ಟರೆ ನೆಲಗಂಗಿ ತಿರುವಿ

ಒಕ್ಕಲಿಗ ಮಗನನ್ನು ಪಾಜೇಕ ಹಚ್ಚುತ್ತೇನೆ ಎಂದು ಭರವಸೆ ಕೊಡುತ್ತಾನೆ. 'ಸಮುದ್ರಕ ಜೋಡ ಯಾತಾಳ ಹೂಡೀನಿ' ಎನ್ನುವ ಹೇಳಿಕೆಯೊಂದರ ಭಾಗವು ಇದೇ ಆಶಯವನ್ನು ವ್ಯಕ್ತಪಡಿಸುತ್ತದೆ.

ಕೃಷಿ ಕೂಲಿಕಾರರ ಕುರಿತು ಹೇಳಿಕೆಗಳಿವೆ. ದುಡಿಯುವ ಕೈಗಳಿಗೆ ಅತ್ಯುತ್ತಮ ಆದಾಯ ಬರುವುದನ್ನು ಸೂಚಿಸುವ ಹೇಳಿಕೆಯೊಂದು ಹೀಗಿದೆ:

'ಬಡವನ ಕುರುಪಿಗೆ ಬಂಗಾರ ಅಣಸ ಹಾಕೀನಿ'

ಇಲ್ಲಿ ಬಳಕೆಯಾಗಿರುವ 'ಕರಿರಂಡಿ', ಕರಿಜೆಂಡೆ, ಕರಿಜಾಡಿ, ಐದು ಹನಿ, 'ನೆಲಗಂಗಿ' ಎನ್ನುವಂತಹ ರೂಪಕಗಳ ಬಳಕೆ, ಹೇಳಿಕೆ ಮಾಡುವವನ ಸಂವಹನ ಸಾಮರ್ಥ್ಯದ ಬಗೆಗೆ ಬೆರಗು ಮೂಡಿಸುತ್ತವೆ. ಮಾರಾಯನೊಬ್ಬನು ಪಾರಂಪರಿಕ ಜ್ಞಾನ ಹಾಗೂ ವರ್ತಮಾನದ ಎಚ್ಚರಗಳ ಅನುಸಂಧಾನದಲ್ಲಿ ಸೃಷ್ಟಿಸಿದ ಈ ಸಾಹಿತ್ಯ ಪ್ರಕಾರ ಆಳವಾದ ಹಾಗೂ ವಿಸ್ತೃತವಾದ ಅಧ್ಯಯನವನ್ನು ಆಹ್ವಾನಿಸುತ್ತದೆ.

ಹೇಳಿಕೆಗಳಲ್ಲಿ ಬಡವರ ಬಗೆಗೆ ವಿಶೇಷವಾದ ಕಾಳಜಿ ಇರುವುದು ಕಂಡು ಬರುತ್ತದೆ. ಬಡವನಿಗೆ ಬಂದ ಕಷ್ಟಗಳನ್ನು ಎಲ್ಲ ಹಂತದಲ್ಲೂ ತಾವೇ ಪರಿಹರಿಸುವವರು ಎಂದು ಮಾರಾಯರು ಹೇಳಿಕೊಳ್ಳುತ್ತಾರೆ. ಇಡೀ ವ್ಯವಸ್ಥೆಯಲ್ಲಿ ಬಡವನಾದವನು ಬೇರೆ ಬೇರೆ ಕಾರಣಗಳಿಗಾಗಿ ಉಪೇಕ್ಷೆಗೆ, ಶೋಷಣೆಗೆ ತುತ್ತಾಗುತ್ತಿರುತ್ತಾನೆ. ಅಂಥವನ ಪರ ನಿಂತು ಮಾರಾಯರು ತಮ್ಮ ಹೇಳಿಕೆಗಳ ಮೂಲಕ ಮಾತನಾಡುತ್ತಾರೆ.

ಎಲೇ! ಬಡವನ ತಲಿಮ್ಯಾಲಿನ ವಜ್ಜಿ
ಹೆಗಲಮ್ಯಾಲ ಬಂತು
ಹೆಗಲಮ್ಯಾಲಿನ ವಜ್ಜಿ
ಮುಂಗೈಗೆ ಬಂತಲೇ ಗಾಣಮಿಣಿ[೪೪]

೫.೩.೩ ಜಾನುವಾರು ಕುರಿತು ಹೇಳಿಕೆ

ರೈತಸಮುದಾಯದಲ್ಲಿ ಮಾನವ ಸಂಪನ್ಮೂಲಕ್ಕೆ ಇದ್ದಷ್ಟೇ ಮೌಲ್ಯ ಪಶು ಸಂಪತ್ತಿಗೂ ಇರುತ್ತದೆ. ಉತ್ಪಾದನಾ ಚಟುವಟಿಕೆಗಳಲ್ಲಿ ಮನುಷ್ಯನ ಬೌದ್ಧಿಕ ಹಾಗೂ ದೈಹಿಕ ಸಾಮರ್ಥ್ಯಕ್ಕೆ ಪೂರಕವಾಗಿ ಪಶು ಸಂಪತ್ತು ಸಾಥ್ ನೀಡುತ್ತದೆ. ರೈತನ ದೈಹಿಕ ಶ್ರಮವನ್ನು ಕಡಿಮೆಗೊಳಿಸುವುದಲ್ಲದೆ, ಉತ್ಪಾದನಾ ಚಟುವಟಿಕೆಯ ವೇಗ ಹೆಚ್ಚಿಸುವಲ್ಲಿ ಜಾನುವಾರುಗಳು ಸಹಕರಿಸುತ್ತವೆ. ಅದೂ ಅಲ್ಲದೆ ಅವುಗಳಿಂದ ದೊರೆಯುವ ಹಯನು, ಮಾಂಸ ಹಾಗೂ ಗೊಬ್ಬರ ರೈತರ ಬದುಕಿಗೆ ಆಸರೆಯಾಗಿ ನಿಲ್ಲುತ್ತವೆ.

ರೈತರ ಬದುಕಿನಲ್ಲಿ ಪಶುಗಳಿಗಿರುವ ಮಹತ್ವದ ಸ್ಥಾನವನ್ನು ಅರಿತುಕೊಂಡೇ ಮಾರಾಯರು ಇಬ್ಬರನ್ನೂ (ಜನ ಹಾಗೂ ಜಾನುವಾರು) ಏಕ ಕಾಲದಲ್ಲಿ ಸ್ಮರಿಸಿಕೊಂಡೇ ಹೇಳಿಕೆ ಮಾಡಿರುತ್ತಾರೆ.

ಎಲೇ ಎಷ್ಟು ಹೇಳಿದರೂ ಕರಿತಲಿ ಮಾನವಗ
ಸಮಜ ಆಗಲಿಲ್ಲ
ಬಾಲಗ ಬಸವಗ ಬಗಲಾಗ ಹಿಡಕೊಂಡ
ದಂಡೀಗೆ ಹಚ್ಚಬೇಕು ಅನೂದರಾಗ
ಬಸವಗ ಖುಷಿ ಆಯಿತಲೇ ಗಾಣಮಿಣಿ[೪೬]

ಇಲ್ಲಿ ಬರುವ ಬಾಲ ಹಾಗೂ ಬಸವ ಬೇರಾರೂ ಅಲ್ಲ, ಮಾರಾಯರು ಮೇಲಿಂದ ಮೇಲೆ ಉಲ್ಲೇಖಿಸುವ ಒಕ್ಕಲಿಗಮಗ ಹಾಗೂ ಪಶು ಸಂಪತ್ತು. ಬಾಲಗ, ಬಸವಗ ಅಂದ ಹಾಗೆಯೇ ಬಸವಗ, 'ಶಿಶುಮಗ'ಗ ಎನ್ನುವುದೂ ಉಂಟು. ಇವರಿಬ್ಬರ ರಕ್ಷಣೆಯಿಂದಲೇ ಸ್ವಸ್ಥ ಸಮೃದ್ಧ ಸಮಾಜ ನಿರ್ಮಾಣ ಸಾಧ್ಯ ಎಂಬುದು ಮಾರಾಯರ ಪಾರಂಪರಿಕ ತಿಳುವಳಿಕೆ. ಸಮೃದ್ಧ ಸಮಾಜ ನಿರ್ಮಾಣದಲ್ಲಿ ಮಹತ್ವದ ಪಾತ್ರ ನಿರ್ವಹಿಸುವ ಬಸವನನ್ನು ಖುಷಿ ಇಡಬೇಕು ಹಾಗೂ ಬಸವ ಖುಷಿ ಇರಬೇಕು ಎಂಬುದು ಮಾರಾಯರ ಹೇಳಿಕೆಗಳ ಮೂಲ ಆಶಯ.

ಮನುಷ್ಯನನ್ನು ಕುರಿತು ಹೇಳಿಕೆ ಮಾಡುವಾಗ ಅವನನ್ನು ಕರಿತಲಿ ಮಾನವನೆಂದೂ, ಅವನಿಗೆ ಎಷ್ಟು ಹೇಳಿದರೂ ಬುದ್ಧಿ ಬರಿಲ್ಲವೆಂದೂ ಅವನು ಸದಾ ತನ್ನಲ್ಲಿ ನಂಬಿಕೆ ಇಡಬೇಕೆಂದೂ, ನಂಬದಿದ್ದರೆ ಹುಡೇದ ಗಡ್ಡಿ ಉರುಳಿಸಿದಂತೆ ಉರುಳಿಸಿ ಬಿಡುವೆನೆಂತಲೂ ಹೇಳಿರುವುದನ್ನು ಕೇಳಿದ್ದೇವೆ. ಆದರೆ ಪಶುಗಳ ವಿಷಯಕ್ಕೆ ಬಂದಾಗ ಅವುಗಳ ಕುರಿತು ಅಂಥ ಯಾವುದೇ ಸಿಟ್ಟು ಸೆಡವು, ಬೆದರಿಕೆ ಇಲ್ಲ. ಸದಾ ಕಾಲವೂ ಅವು ನೆಮ್ಮದಿಯಿಂದ ಬದುಕಬೇಕು. ಅವುಗಳಿಗೆ ಯಾವುದೇ ತೊಂದರೆಯಾಗಬಾರದು ಎಂದು ಮಾರಾಯರು ಬಯಸುತ್ತಾರೆ. ಪಶುಗಳಿಗೆ ಸಾಕಷ್ಟು ಪ್ರಮಾಣದ ಮೇವು, ಕಣಕಿ, ಹುಲ್ಲು ಕೊಟ್ಟು ಅವು ಸದಾ ನೆಮ್ಮದಿಯಿಂದ ಬದುಕಲಿ ಎಂದು ಹೇಳಿಕೆ ಮಾಡಲಾಗುತ್ತದೆ.

ಎಲೇ ಬಡವಗ ಬಲ್ಲಿದಗ ಐದ ದಿನಸಿನ ಬೀಜಾಕೊಟ್ಟು
ಬಡದಾಡಿ ಬಿತ್ತೂದರಾಗ
ಬಲ್ಲಿದ್ನ ಭೂಮ್ಯಾಗ ಬಸವ ಡರಿ ಹೊಡದನಲೇ ಗಾಣಮಿಣಿ

ಎನ್ನುವ ಈ ಹೇಳಿಕೆಯಲ್ಲಿ 'ಡರಿ' ಹೊಡೆಯುವ ಶಬ್ದ ಬಸವಣ್ಣನಿಗೆ ಮೇವಿನ ಯಾವುದೇ ರೀತಿಯ ತೊಂದರೆಯಿಲ್ಲ. ಹೊಟ್ಟೆ ತುಂಬ ಉಂಡು ತೃಪ್ತಿಯಿಂದ ಡರಿ (ತೇಗು) ಹೊಡೆಯುತ್ತಾನೆ ಎಂದು ಭರವಸೆ ಕೊಡುತ್ತಾನೆ.

ಬಾಯುಳ್ಳ ರೈತನಿಗೆ ಉಣಲಿಕ್ಕೆ ಉಡಲಿಕ್ಕೆ ಏನಾದರೂ ಕಷ್ಟ ಬಂದರೆ ಆತ ಅದನ್ನು ಹೇಗಾದರೂ ಪರಿಹರಿಸಿಕೊಳ್ಳಬಹುದು. ಆದರೆ ಮೂಕ ಪ್ರಾಣಿಯಾದ ಪಶುಗಳಿಗೆ ಯಾವುದೇ ಕಷ್ಟ ಬರಬಾರದು ಎಂಬುದು ಮಾರಾಯರ ಹಂಬಲ.

ಎಲೇ! ಅರಕೇರಿ ಅರಮನಿ ಬೇವೂರ (ಭೀವರಗಿ) ಗುರುಮನಿ

ಮಾಯಿ ಮಕಣಾಪೂರ ಸಿಂಹಾಸನ (ಶಿವಸ್ಥಾನ) ಗದ್ದಗಿ

ಎಲೇ! ತಂಗಿ ರಥ ತಯಾರಾಯ್ತು

ಬಸವನ ಚಿಕ್ಕ ದಸರೀಗಿ ಹರವೀನಿ[೪೬]

ಎನ್ನುವ ಈ ಹೇಳಿಕೆಯಲ್ಲಿ ಮನುಷ್ಯರಿಗೆ ವಿಧಿ ಕಾಡಲು ಬರುವ ಚಿತ್ರಣವಿದು. ತಂಗಿ(ಇದಿಮಾಯಿ)ಯ ರಥ ತಯಾರಾಗಿ ಮನುಷ್ಯರಿಗೆ ಕಷ್ಟ ಕೋಟಲೆ ಕೊಡಲು ಬರುವುದನ್ನು ಹೇಳುತ್ತಾ ಪಶುಗಳ ವಿಷಯಕ್ಕೆ ಬಂದರೆ ಅಂಥ ಯಾವುದೇ ತೊಂದರೆ ಸೂಚಿಸುವ ಮಾತುಗಳು ಕಂಡು ಬರುವುದಿಲ್ಲ. ಬದಲಾಗಿ ಬಸವನ ಆಹಾರಕ್ಕೆ ಏನೂ ಕೊರತೆಯಿಲ್ಲ ಎನ್ನುವುದನ್ನು ಸೂಚಿಸಲು ಬಸವನ ಚಿಕ್ಕ ದಸರೀಗಿ ಹರದೀನಿ ಎನ್ನುವ ಮಾತು ಬರುತ್ತದೆ. ಭೂಮಿಯಲ್ಲಿ ಸದಾ ದುಡಿಯುವ ಬಸವನ ಬಾಯಿಗೆ ಚಿಕ್ಕ ಹಾಕುವುದು ಒಂದೇ ಒಂದು ವಿಶೇಷ ಸಂದರ್ಭದಲ್ಲಿ. ಒಳ್ಳೆಯ ಮಳೆಬಿದ್ದು, ಸಕಾಲಕ್ಕೆ ಬೀಜ ಬಿತ್ತಿ ಅನುಕೂಲಕರ ಹವಾಮಾನದ ಕಾರಣವಾಗಿ ಭೂಮಿಯಲ್ಲಿ ಮಣಕಾಲಮಟ ಬೆಳೆ ಬೆಳೆದು ನಿಂತಾಗ ಕಾಂಡಕ್ಕೆ ಒಳ್ಳೆಯ ಆಸರೆ ಸಿಗಲಿ, ಬೆಳೆಗಳ ಮಧ್ಯದ ಕಳೆ ನಾಶವಾಗಲಿ ಎನ್ನುವ ಉದ್ದೇಶದಿಂದ 'ಎಡೆ' ಹೊಡೆಯುವುದು ವಾಡಿಕೆ. ಆ ಸಂದರ್ಭದಲ್ಲಿ 'ಎಡೆ'ಗೆ ಹೂಡಿದ ಬಸವ ಮಣಕಾಲಮಟ ಬೆಳೆದ ಹಸಿರು ಬೆಳೆಗೆ ಬಾಯಿ ಹಾಕಿ, ಬೆಳೆ ಕಡಿದು ತಿನ್ನದಿರಲಿ ಎಂದು ಅದರ ಬಾಯಿಗೆ ಚಿಕ್ಕ ಹಾಕಲಾಗುತ್ತದೆ. ದಸರಿಯ ಸಮಯಕ್ಕ ಈ ಚಟುವಟಿಕೆಗಳು ಸಂಪೂರ್ಣವಾಗಿ ಮುಗಿದಿರುತ್ತವೆ. ಹಾಗೂ ಆಗಾಗ ಬಿದ್ದ ಮಳೆಯ ಕಾರಣದಿಂದ ಬದುವಿನ ತುಂಬ ಹಸಿರು ಹುಲ್ಲು ನಳನಳಿಸುತ್ತ ಬೆಳೆದು ನಿಂತಿರುತ್ತದೆ. ಅಂಥ ಮೇವನ್ನು ಅದು ಬದುವಿನ ಮೇಲೆ ನಿಂತು ಮೇಯುವುದಕ್ಕಾಗಿ ಅದರ ಚಿಕ್ಕವನ್ನು ಬಿಚ್ಚಿ (ಚಿಕ್ಕ ಹರಿದು) ಬದುವಿನ ಮೇಲೆ ಬಿಡುತ್ತಾರೆ. ಹೀಗೆ ಬಸವನಿಗೆ ನಿಸರ್ಗ ಯಾವುದೇ ಅಡೆತಡೆಯಿಲ್ಲದೆ ಆಹಾರವನ್ನು ಕೊಡುತ್ತದೆ. ಅದರಲ್ಲಿ ಯಾವುದೇ ಸಂಶಯ ಬೇಡ ಎಂದು ಹೇಳುವ ಮಾರಾಯರು ಮನುಷ್ಯರ ಕುರಿತು ಹೇಳುವಾಗ ಇಷ್ಟೆಲ್ಲಾ ಸುಖಸಮೃದ್ಧಿ ಇದೆ ಎನ್ನುತ್ತಿರುವಂತೆ ಅವನನ್ನು ಕಾಡಲು ತಂಗಿ ರಥ ತಯಾರು ಮಾಡಿಕೊಂಡು ಬರಬಹುದು. ಹೊಡೆ ಹಿರಿದು ಬೆಳೆದ ತೆನೆ ಸುಂಕಕಟ್ಟಿಕೊಂಡು ನಿಂತಿರುವಂತೆಯೇ ಅಕಾಲಿಕ ಮಳೆ ಬಿದ್ದು, ಸುಂಕ ತೊಳೆದುಕೊಂಡು ಹೋಗಬಹುದು. ಹಾಲುಗಾಳು ಹಿಡಿದಿರುವಾಗ ಅಕಾಲಿಕ ಮಳೆ ಬಿದ್ದು ಕಾಳುಗಳೆಲ್ಲ ಕಾಡಿಗೆಗಟ್ಟಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಬಹುದು. ಆದರೆ ಬಸವನ ವಿಷಯದಲ್ಲಿ ಇಂಥ ಯಾವುದೇ ವಿಪತ್ತು ಬರಲಿದೆ ಎಂದು ಹೇಳಿಕೆಗಳು ರೈತರಲ್ಲಿ ಭೀತಿಯನ್ನು ಸೃಷ್ಟಿಸುವುದಿಲ್ಲ.

ಇನ್ನೊಂದು ಹೇಳಿಕೆಯ ಮೊದಲ ಭಾಗದಲ್ಲಿ ಬಸವ ಹಾಗೂ ಶಿಶು ಇಬ್ಬರಿಗೂ ಸುಖ ಸಮೃದ್ಧಿ ಇದೆ ಎಂದು ಹೇಳುತ್ತಾ ಶಿಶುವಿಗೆ ವಿಪತ್ತು ಬಂದಿರುವುದನ್ನು ಸೂಚಿಸುತ್ತಾ, ಬಸವನಿಗೆ ಮಾತ್ರ ತೊಂದರೆಯಿಲ್ಲವೆಂದು ಹೇಳಲಾಗಿದೆ.

ಎಲೇ ಹಾರಲಾಕ ರಾಮನ ಬಾಣಲ್ಲ
ತಿರಗಲಾಕ ಕಾಮನ ಬೂದೆಲ್ಲ
ನಡಗಡ್ಡಿಗಿ ಹಂದ್ರಾ ಹಾಕಿ
ಬಸವಗ ಬಾಸಿಂಗ ಕಟ್ಟಿ ಶಿಶುವಿಗೆ ಕಂಕಣಕಟ್ಟಿ
ಅಕ್ಕಿಕಾಳ ಹಾಕೂದ್ರಾಗ
ಕಳಸಗಿತ್ತಿ ಮಾರಿ ಕೆಳಗಾಯಿತ್ತು
ಕಳಸಗಿತ್ತಿಗಿ ಸಮಾಧಾನ ಮಾಡಿ
ಅಕ್ಕಿಕಾಳ ಹಾಕಿ
ಬಸವನ ಚಿಕ್ಕ ದಸರೀಗಿ ಹರದೀನಲೇ ಗಾಣಮಿಣಿ[೪೭]

ಹೇಳಿಕೆಗಳಲ್ಲಿ 'ತಂಗಿ' ವಿಧಿಯ ಸಂಕೇತವಾದರೆ, 'ಕಳಸಗಿತ್ತಿ' ಮಂಗಲದ ಸಂಕೇತ. ಮೇಲಿನ ಹೇಳಿಕೆಯಲ್ಲಿ ಕಳಸಗಿತ್ತಿ ಮುಖ ಕೆಳಗೆ ಮಾಡಿದ್ದಾಳೆ. ಅಂದರೆ ರೈತರಿಗೆ ಏನೋ ತೊಂದರೆ ಬರಲಿದೆ ಎಂದರ್ಥ. ಆದರೆ ಬಸವನಿಗೆ ಮಾತ್ರ ಏನೂ ತೊಂದರೆ ಇಲ್ಲ.

ಬಸವನಿಗೆ ಆಗಾಗ ಅಪರೂಪಕ್ಕೆ ವಿಪತ್ತು ಬರುವುದುಂಟು. ಹಾಗೊಂದು ವೇಳೆ ವಿಪತ್ತು ಬಂದರೆ ಅದನ್ನು ತಕ್ಷಣವೇ ಪರಿಹರಿಸಲಾಗುತ್ತದೆ.

ನಾಲ್ಕು ದಿಕ್ಕಿಗಿ ಸೋಸಿ ನೋಡೂದರಾಗ
ಮೂರು ಮೂಲ್ಯಾಗ ಬಸವ ಖುಷಿ ಅದಾನ
ಒಂದು ಮೂಲ್ಯಾಗ ಕಸರ ಕುಂತ್ಯು
ಇದಿಯಾಯಿ ರಂಡಿ ಇದಿರಿಗಿ ಬಂದಳ
ಭೂತ್ಯಾನ ಹಚ್ಚಿ ಬಯಲ ಮಾಡಿ
ಬಸವನ ಚಿಕ್ಕ ದಸರೀಗಿ ಹರೀದ್ರಾಗ
ಒಳಗಡೆ ಹರದೀನಿ[೪೮]

ಹಿಂಗಾರಿ ಬೆಳೆಗಳಾಗಲಿ, ಮುಂಗಾರಿ ಬೆಳೆಗಳಾಗಲಿ ರೈತನಿಗೆ ಹೆಚ್ಚು ಕಡಿಮೆ ಪ್ರಮಾಣದಲ್ಲಿ ದೊರೆಯಬಹುದು. ಆದರೆ ಬಸವನ ಅನ್ನಕ್ಕೆ ಮಾತ್ರ ಎಂದೂ ತೊಂದರೆಯಿಲ್ಲ ಎಂದು ಒಂದು ಹೇಳಿಕೆ ಹೀಗೆ ನುಡಿಯುತ್ತದೆ :

ಎಲೆ ಕರಿತಲಿ ಮಾನವನ ಸೊಕ್ಕ ಮುರಿಬೇಕಾದ್ರ
ಹನ್ನೊಂದ ದಿವಸ ಹಿಂದಕ್ಕ ಬಿತ್ತು

ಹವಳ ಅರಳಿ ಮೇಲೆ
ಹಿಂಗಾರಿ ನಂದೀ ಮೇಲೆ
ಬಸವನ ಚಿಕ್ಕಾ ದಸರೀಗಿ ಹರದೀನಿ[೪೯]

೫.೩.೪ ಮಳೆ ಕುರಿತು ಹೇಳಿಕೆಗಳು

ಮಳೆ ರೈತರ ಬದುಕಿನ ಜೀವಜಲ. ಮಳೆ ಇದ್ದರೆ ಬೆಳೆ, ಬೆಳೆಯಿದ್ದರೆ ರೈತನಿಗೆ ಬದುಕು. ರೈತರ ಬದುಕಿಗೆ ಮಳೆ ಮೂಲಾಧಾರ. ಅಂಥ ಮಳೆಯ ಕುರಿತು ರೈತರಿಗೆ ಸದಾ ಕುತೂಹಲ ಹಾಗೂ ಕಾತರ. ಮಳೆರಾಯನ ಆಗಮನದ ಕುರಿತು ಅವನು ಹಲವಾರು ನಂಬಿಕೆಗಳನ್ನು ಇಟ್ಟುಕೊಂಡಿದ್ದಾನೆ. ಆಚರಣೆಗಳನ್ನು ಆಚರಿಸುತ್ತಾನೆ. ಅಂಥ ಆಚರಣೆಗಳಲ್ಲಿ ಹೇಳಿಕೆ ಪ್ರಮುಖವಾದದ್ದು. ಹೇಳಿಕೆಗಳು ಪ್ರಾಸಂಗಿಕವಾಗಿ ಜನಜಾನುವಾರು, ರಾಜಕೀಯದ ಬಗೆಗೆ ಇರುತ್ತವೆಯಾದರೂ ಅವುಗಳ ಮೂಲ ಆಸಕ್ತಿ ಇರುವುದು ಮಳೆ ಹಾಗೂ ಬೆಳೆಯ ಕುರಿತಾಗಿಯೇ.

ಒಡೆಯರಲ್ಲಿ/ಮಾರಾಯರಲ್ಲಿ ಮಳೆಯ ಕುರಿತು ತಾವು ಹೇಳುವ ಹೇಳಿಕೆಯೇ ಅಂತಿಮ ಎನ್ನುವ ಭಾವನೆ ಇದೆ. ತಮ್ಮನ್ನು ಬಿಟ್ಟು ಯಾರಾದರೂ ಅದರ ಕುರಿತು ಹೇಳಿದರೆ ಅದನ್ನು ಖಂಡಿಸುತ್ತಾರೆ. ಅಂಥದ್ದೊಂದು ಹೇಳಿಕೆ ಹೀಗಿದೆ :

ಮಳೆ ಬರತದ ಅಂದವಂಗ ಬಾಯಿಮ್ಯಾಲ ಹೊಡೆದೇನು
ಮಳೆ ಬರೋದಿಲ್ಲ ಅಂದವಂಗ ಕುಂಡಿಮ್ಯಾಗ ಒದ್ದೇನು
ಮೂರು ಗಣಕೀಯ ಮ್ಯಾಲ ಕಾಳ ಮಾಡಿ
ಒಕ್ಕಲಿಗನ ಬಾಯಿಗೆ ಹಾಕೇನೆಲೇ[೫೦]

ಮಳೆಯನ್ನು ಮಾರಾಯರು ಗುಡ್ಡದಾಗಿನ ಹುಲಿಗೆ ಹೋಲಿಸಿ, ಅದನ್ನು ನಿಯಂತ್ರಿಸುವ ಶಕ್ತಿ ತನ್ನಲ್ಲಿದೆ ಎಂದು ಭಾವಿಸಿದ್ದಾರೆ. ಹಾಗಂತಲೇ ತನ್ನನ್ನು ನಂಬಿ ನಡೆದರೆ ಅವರಿಗೆ ಸಂಪೂರ್ಣ ಮಳೆ ಬರಿಸುವುದಾಗಿ ಹೇಳಿಕೆಯ ಮೂಲಕ "ಗುಡ್ಡದಾನ ಹುಲಿ ಗಡಬಡಿಸಿ ಹೊರಗೆ ಬರುವುದರಾಗ ನನ್ನಂಥ ನಡದ್ರ ಐದು ದಿಂದಾಂಗ ಹೊರಗೆ ತರ್ತಿನಿ. ಇಲ್ಲಂದ್ರ ಚಿತ್ತಿದ್ದಿದ್ದು ಟಪ್ ಹೊಡ್ತೀನಿ"[೫೧]

ಮಳೆ ಸರಿಯಾಗಿ ಬರಲಿಲ್ಲವೆಂದು ದೇವರು ಧರ್ಮದಲ್ಲಿ ನಂಬಿಕೆ ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಅಂಥವರಿಗೆ ಮಾರಾಯರು ಮುನ್ನಚ್ಚರಿಕೆ ಕೊಡುತ್ತಾರೆ. ಧರ್ಮದ ದಾರಿಯಲ್ಲಿ ನಡೆದರೆ ಅಮೋಘಸಿದ್ಧ ಎಂಥ ಪ್ರಸಂಗದಲ್ಲಿ ಕೈಬಿಡಲಾರನೆಂದು ಭರವಸೆ ಕೊಡುತ್ತಾರೆ.

ಎಲೇ ಮಳೆ ಹೋಗ್ಯಾದಂತ ಧರ್ಮ ಬಿಡಬ್ಯಾಡ್ರಿ
ಸಮುದ್ರ ಉಕ್ಕಿಸಿ ಮಳಿ ಕೊಡ್ತಿನಿ
ಆನಂದ ಇರ್ರಿ[೫೨] ಎಂದು ಭರವಸೆ ನೀಡುವುದಿದೆ.

[illegible]

[illegible]

[illegible]

[illegible]

[illegible]

[illegible]

ಹೇಳಿಕೆ ಮಾಡುವ ಮಾರಾಯರಿಗೆ ಮೊಡಗಳ ದರ್ಶನ ಆಗುತ್ತದೆ. ಅನಿಸುವಂತೆ ಅವರ ಹೇಳಿಕೆಗಳ ರಚನೆ ಇರುತ್ತದೆ. ತನಗೆ ದೊರೆತ ದರ್ಶನದ ಸಹಾಯದಿಂದಲೇ ಅವರು ಹೇಳಿಕೆ ಮಾಡುವರು. ಇಲ್ಲೊಂದು ಹೇಳಿಕೆ ಇದೆ ನೋಡಿ

ಎಲೇ ಆಗಸದಡವ್ಯಾಗ ನೀರಿನ ಕೊಡ ಕಾಣಸ್ತಾವ
ಇಂದಿಲ್ಲ ನಾಳೆ
ನಾಳೆಲ್ಲ ನಾಡ್ದ
ಸರ್ವ ಮಳಿ ಕೊಡತೀನಿ ಅಂತಾನ[೫೩]

ಮಳೆ ಬರುವುದು ಸ್ವಲ್ಪ ತಡವಾದರೂ ಆಗಬಹುದು. ಆದರೆ ಅದು ಖಂಡಿತವಾಗಿ ಬರುತ್ತದೆ ಎನ್ನುವ ಮಾತು ರೈತರು ನಿರಾಶರಾಗದ ಹಾಗೆ ನೋಡಿಕೊಳ್ಳುತ್ತದೆ. ಕೊನೆಯ ಸಾಲಿನಲ್ಲಿ ಬರುವ 'ಸರ್ವ' ಮಳೆ ಶಬ್ದದಲ್ಲಿರುವ ಶ್ಲೇಷೆ ತುಂಬಾ ಚಮತ್ಕಾರಿಕವಾಗಿದೆ. ಸರ್ವ>ಸರ್ವ ಮಳೆ ಎಂದು ತಿಳಿದುಕೊಂಡ ಜನ ಸಂತೋಷ ಪಡಬಹುದು. ಅದೇ ಕಾಲಕ್ಕೆ ಸರ್ವ>ಸರುವ ಒಂದು ಧಮ್ಮು ಒಂದು ಸಲ ಮಳೆಯೆಂದು ತಿಳಿದುಕೊಂಡ ಜನ ಸಮಾಧಾನ ಪಟ್ಟುಕೊಳ್ಳಬಹುದು.

ಕಂಬಳಿ ಬೀಸಿ ಮೂರು ಗಳಿಗೆಯಲ್ಲಿ ಮಳೆ ತರಿಸಿದವರು ಇವರು ಎಂಬ ನಂಬಿಕೆ ರೈತಾಪಿ ಜನರಲ್ಲಿ ಮಾರಾಯರ ಬಗ್ಗೆ ಆಳವಾಗಿ ಬೇರೂರಿದೆ. ಅಮೋಘಸಿದ್ಧ, ಒಗೆಣ್ಣಮಾತ್ಯಾ ಮುಂತಾದವರು ಬಯಲು ಮುಗಿಲಿನಲ್ಲಿಯೂ ಮಾಡಗಟ್ಟುವಂತೆ ಮಾಡಿ ಮಳೆ ಬರೆಸಿದರೆಂಬ ಅನೇಕ ಕಥೆಗಳಿವೆ. ಮಳೆಗಾಲಸಿದ್ಧರು ಎಂಬ ಹೆಸರಿನ ಅನೇಕ ಸಿದ್ಧರಿದ್ದಾರೆ ಈ ಪರಂಪರೆಯಲ್ಲಿ. ಮಳೆಗಳ ಕುರಿತು ಹೇಳುವಾಗ ಇಂಥಿಂಥಾ ಮಳೆ ಇಷ್ಟಿಷ್ಟು ಪ್ರಮಾಣ ಈ ಈ ಭಾಗಕ್ಕೆ ಎಂದು ಹೇಳುವ ವಾಡಿಕೆ ಇದೆ. ಅಂಥ ಕೆಲ ಹೇಳಿಕೆಯ ಭಾಗಗಳನ್ನ ಗಮನಿಸಬಹುದು.

ಮಿರಗ ಗಿರ್ದ ಅರಿದ್ರ ಅರ್ಧ
ಪುಶ್ಯಪುನರಪುಕ ಕೂರಗಿ ಸಾಗಮಾಡಬೇಕ ಅನ್ನುದ್ರಾಗ
ಇದಿಮಾಯಿ ರಂಡಿ ಇದ್ರಿಗಿ ಬಂದು
ಭೂತ್ಯಾನ ಹಚ್ಚಿ ಮೂರ ತುಕಡಿ ಮಾಡುದ್ರಾಗ
ಚಾರಣಿ ಕೆಸರ ಕುಂತಾವ ಅಂದ[೫೪]

ಹಾರಲಾಕ ರಾಮನ ಬಾಣಲ್ಲ
ತಿರಗಲಾಕ ಕಾಮನ ಬೂದಿ ಅಲ್ಲಲೇ ಗಾಣಮಿಣಿ
ಮಿರಗ ಎಂಟಾಣೆ

ಆರಿದ್ರ ಚಾರಣೆ

ಪುಷ್ಯ ಪುನರ್ವಸು ಬೆಳಗೂರ್ಗಿ ಮಾಡಬೇಕೆನ್ನುದ್ರಾಗ

ಚಾರಣೆ ಕಸರ ಕುಂತು[೪೪]

ಮಿರಗ ಮಿಂಚಿತು

ಆರಿದ್ರಾ ಅರ್ಧಾ

ಪುಷ್ಯ ಪುನರ್ವಸು ಪೂರ್ಣ[೪೫]

ಬರಬೇಕಾದ ಮಳೆಯ ಪ್ರಮಾಣಕ್ಕೆ ಅಂದಾಜು ಮಾಡಿ ಅದನ್ನು ಅರ್ಧ ಗಿರ್ಧ, ಪೂರ್ಣ ಎಂದು ವಿವರಿಸಿ ಹೇಳುವುದಲ್ಲದೆ, ಒಂದೊಂದು ಸಲ ಕಸರು (ತೊಡಕು) ಉಳಿಯುವುದುಂಟು. ಆಗ ಕಸರಿನ ಪ್ರಮಾಣವನ್ನು ವಿವರಿಸಿ ಹೇಳುವ ಮೂಲಕ ಕೇಡುಗಾಲದಲ್ಲಿ ಎಲ್ಲವೂ ಕೆಟ್ಟಿಲ್ಲ ಎಂದು ತಿಳಿಸಿ ರೈತರ ಆತ್ಮವಿಶ್ವಾಸ ಬೆಳೆಯಿಸುತ್ತಾರೆ.

ಒಂದೊಂದು ಸಲ ರೈತರಿಗೆ ಒಂದಿಷ್ಟು ಚೆನ್ನಾಗಿ ಮಳೆ ಕೊಡಬೇಕೆಂದು ಹಂಬಲಿಸುತ್ತಿದ್ದಂತೆ, ಅನೀರಿಕ್ಷಿತ ಧಾರಾಕಾರ ಮಳೆ ಬಿದ್ದು ಅತಿವೃಷ್ಟಿ, ನೆರೆಹಾವಳಿ ಸೃಷ್ಟಿಯಾಗುವುದು ಉಂಟು. ಅದನ್ನೂ ಕೂಡಾ ಹೇಳಿಕೆಯ ರೂಪದಲ್ಲಿ ರೈತರಿಗೆ ಪ್ರಸ್ತುತಪಡಿಸುತ್ತಾರೆ:

ಹುಬ್ಬಿ ಮಳಿ ಝುಲ್ಲಿ ಕೆಡುವದರಾಗ

ಉತ್ತರಿ ಮಳಿಗೆ ಬೋಕ ಬಿತ್ತು[೪೬]

ಮತ್ತೊಂದು ಸಲ ಕೊಡಬೇಕೆಂದರೆ ಮಳೆ ಬರಲಾರದಂತೆ ಇದಿಮಾಯಿ ರಂಡಿ ಅಡ್ಡಿಪಡಿಸುವುದುಂಟು. ಅಂಥ ಸಂದರ್ಭದಲ್ಲಿ ಇದಿಮಾಯಿ ರಂಡಿಯನ್ನು ಭೂತ್ಯಾನ ಹಚ್ಚಿ ಕಡದ ಮೂರು ತುಂಡ ಮಾಡಿಸಿ ರೈತರಿಗೆ ನಿಗದಿತ ಮಳೆಗಳನ್ನು ಕೊಡುತ್ತೇನೆ ಎಂದು ಹೇಳಿಕೆಗಳಾಗುತ್ತವೆ. ಅಂಥದೊಂದು ಹೇಳಿಕೆಯ ಮಾದರಿ ಇಲ್ಲಿದೆ-

ಎಲೆ ಯಾವ ಕೇಳಾವ ತುದಿಗೈ ಹಿಡಿದ ಕೇಳಬ್ಯಾಡ

ಮುಂಗೈ ಹಿಡಿದ ಕೇಳು

ಕಲ್ಲೂರ ಸಿದ್ದ ಹೇಳಿದ ಮಾತು

ಕಲ್ಲರಿ ಮ್ಯಾಲ ಮ್ಯಾಣದ ಗೂಟ ಜಡದಂಗ

ತುರ್ತ ಮಿರಗ ಮಿಂಚಿತು

ಆರಿದ್ರ ಕೊರಗೀ ಸಾಗ ಮಾಡೊದ್ರಾಗ

ಇದಿಮಾಯಿ ರಂಡಿ ಇದರೀಗಿ ಬಂದಳು
ಭೂತ್ಯಾನ ಹಚ್ಚಿ ಮೂರು ತುಕಡಿ ಮಾಡಿನಲೇ ಗಾಣಮಿಣಿ[೫೮]

ಮುಗಿಲ ದೈವದೊಂದಿಗೆ ತಮ್ಮ ಉತ್ಪಾದನಾ ಚಟುವಟಿಕೆಯನ್ನು ಥಳುಕು ಹಾಕಿಕೊಂಡು ಸದಾ ಮುಗಿಲ ಕಡೆಗೆ ಮುಖಮಾಡಿ ಕುಳಿತುಕೊಂಡಿರುವ ರೈತಾಪಿ ಜನರಿಗೆ ಈ ಹೇಳಿಕೆಗಳು ಅಪಾರ ಪ್ರಮಾಣದ ಆತ್ಮ ವಿಶ್ವಾಸವನ್ನ, ಎಂಥದೇ ಕಠಿಣ ಸಂದರ್ಭ ಒದಗಿ ಬಂದರೂ ಎದುರಿಸುವ ಆತ್ಮಸ್ಥೈರ್ಯವನ್ನು ಮಳೆ ಕುರಿತ ಹೇಳಿಕೆಗಳು ತುಂಬುತ್ತವೆ.

೫.೩.೫ ಬೆಳೆ ಕುರಿತ ಹೇಳಿಕೆಗಳು

ರೈತನ ಒಟ್ಟು ಚಟುವಟಿಕೆಯ ಫಲ, ಆತ ಪಡೆಯುವ ಫಸಲಿನಲ್ಲಿ ಗೋಚರಿಸುವಂಥದ್ದು. ಶ್ರಮಕ್ಕೆ ತಕ್ಕುದಾದ ಫಲ ದೊರೆಯುತ್ತದೆಯೋ ಇಲ್ಲವೋ ಎಂಬ ಆತಂಕ ಸದಾ ರೈತರನ್ನು ಕಾಡುತ್ತಿರುತ್ತದೆ. ಆತನ ನೆಮ್ಮದಿಯ ನಿಟ್ಟುಸಿರು ಇದಿಮಾಯಿ ರಂಡಿಯ ಆಟದೊಂದಿಗೆ ಬೆಸೆದುಕೊಂಡಿರುತ್ತದೆ. ಇದಿಮಾಯಿ ರಂಡಿಯ ಆಟವನ್ನು ನಿಯಂತ್ರಿಸಲು 'ಸಿದ್ಧ'ರಿದ್ದಾರೆ. ಅವರ ಬಲಗೈ ಬಂಟನಾಗಿ ಭೂತಾಳಸಿದ್ಧನಿದ್ದಾನೆ. ಮಳೆ ಕುರಿತು ಹೇಳುವಾಗ, ಮಿರಗ, ಆರಿದ್ರ, ಪುಷ್ಯ, ಪುನರ್ವಸು ಇತ್ಯಾದಿ ಹೆಸರುಗೊಂಡು ಹೇಳಿದಂತೆ ಬೆಳೆ ಕುರಿತು ಹೇಳುವಾಗ ಮುಂಗಾರಿ, ಹಿಂಗಾರಿ ಎಂದು ವಿಂಗಡಿಸಿ ಹೇಳುವ ವಾಡಿಕೆ ಇದೆ. ಮುಂಗಾರಿಯನ್ನು ಹವಳಕ್ಕೆ (ಕೆಂಪು ವರ್ಣ) ಹಾಗೂ ಹಿಂಗಾರಿಯನ್ನು ಮುತ್ತಿಗೆ (ಬಿಳಿ ವರ್ಣ) ಹೋಲಿಸಿ, ಹೇಳಿಕೆ ಮಾಡಲಾಗುತ್ತದೆ. ಮತ್ತೊಂದು ಸಂದರ್ಭದಲ್ಲಿ ಮುಂಗಾರಿಯನ್ನು ಹಂಡೆತ್ತಿಗೆ ಹಾಗೂ ಹಿಂಗಾರಿಯನ್ನು ಬಿಳಿ ಎತ್ತಿಗೆ ಹೋಲಿಸಿ ಸಾಂಕೇತಿಕವಾಗಿ ಹೇಳಿಕೆಗಳನ್ನು ಮಾಡಲಾಗುತ್ತದೆ.

ಒಂದೊಂದು ವರ್ಷ ಒಂದೊಂದು ಬೆಳೆ (ಮುಂಗಾರಿ/ಹಿಂಗಾರಿ) ಒಳ್ಳೆಯ ಫಸಲು ಪಡೆಯಲಿರುವುದನ್ನು ಸ್ಪಷ್ಟವಾಗಿ ಹೇಳುತ್ತಾರೆ. ಮುಂಗಾರಿನ ಫಸಲು ಚೆನ್ನಾಗಿ ಬರುವುದಿದೆ ಎಂದು ಹೇಳಬೇಕಾದರೆ ಈ ಕೆಳಗಿನ ಮಾದರಿಯಲ್ಲಿ ಹೇಳುತ್ತಾರೆ

ಎಲೇ ಇಜೇರಿ ನಿಂಗಣ್ಣ
ಹವಳ ಬಣ್ಣದ ಎತ್ತು ಕೂರಗಿ ಹೂಡಿ
ಒಕ್ಕಲಿಗ ಮಗನೀಗಿ ಐದು ದಿನಸಿನ ಬೀಜಾಕೊಟ್ಟು
ಬಡದಾಡಿ ಬಿತ್ತುದರಾಗ
ಕೆಂದೆತ್ತಿನ ಕೋಡಿಗೆ ಕೋರಿ ನಿಶ್ಯಾನಿ ಹಚ್ಚೀನಲೇ ಗಾಣಮಿಣಿ[೫೯]

ಇಲ್ಲಿ ಹಿಂಗಾರಿ ಮುಂಗಾರಿಗಳ ಪ್ರಮಾಣದ ಚರ್ಚೆಯೇ ಇಲ್ಲ. ಇಲ್ಲಿ ಕೇವಲ ಒಂದೇ ಒಂದು ಫಸಲಿನ ಕುರಿತಾದ ಹೇಳಿಕೆಯಿದೆ. ಬಿತ್ತಲು ಬಳಸಿದ ಎತ್ತುಗಳಲ್ಲಿ ಒಂದು ಬಿಳಿ, ಇನ್ನೊಂದು ಹಂಡ/ಕೆಂದ ಬಣ್ಣದ್ದು

ಎಂದು ಹೇಳಿಕೊಳ್ಳುವುದು ವಾಡಿಕೆ. ಈ ಹೇಳಿಕೆ ಸಂಪೂರ್ಣವಾಗಿ ಮುಂಗಾರಿ ಫಸಲು ಕುರಿತಾಗಿಯೇ ಇರುವುದರಿಂದ ಇಲ್ಲಿ ಬಿಳಿ ಎತ್ತಿನ ಪ್ರಸ್ತಾಪವಿಲ್ಲ. ಇಲ್ಲಿ ಹೂಡಿದ್ದ ಎರಡೂ ಹವಳ ಬಣ್ಣದ ಎತ್ತುಗಳನ್ನು. ಅದೂ ಅಲ್ಲದೆ ಮುಂಗಾರಿ ಫಸಲು ಬಂಪರ್ ಆಗಿರುವುದು. ಹೀಗಾಗಿ 'ಕೆಂದೆತ್ತಿನ ಕೋಡಿಗೆ ಕೋರಿ ನಿಶಾನಿ' ಎಂದು ಹೇಳಲಾಗಿದೆ.

ಮತ್ತೊಂದು ಸಂದರ್ಭದಲ್ಲಿ ಮುಂಗಾರು ಹಾಗೂ ಹಿಂಗಾರು ಬೆಳೆಗಳ ಫಸಲಿನ ತೌಲನಿಕ ವ್ಯಾಖ್ಯಾನ ಮಾಡುವುದೂ ಉಂಟು. ಅವುಗಳಲ್ಲಿ ಒಂದರ ಪ್ರಮಾಣ ಇನ್ನೊಂದಕ್ಕಿಂತ ಹೆಚ್ಚು ಇಲ್ಲವೆ ಕಡಿಮೆ ಎಂದು ವಿಶ್ಲೇಷಿಸಿ ಹೇಳುತ್ತಾರೆ.

ಎಲೇ ಯಾವ ಕೇಳಾವ
ತುದಿಗ್ಯೆ ಹಿಡದ ಕೇಳಬ್ಯಾಡ
ಮುಂಗ್ಯೆ ಹಿಡದ ಕೇಳಲೇ
ಹವಳ ಮುತ್ತಾ ಚಿಂತಾಕ ಹಚ್ಚಿ
ಕಾಟಾ ಮಾಡೂದರಾಗ
ಹವಳ ಮೂರು ಗುಂಜಿ ಹೆಚ್ಚಾಯಿತು[೬೦]

ಅಂಥದೇ ಇನ್ನೊಂದು ಹೇಳಿಕೆ
ಕತ್ತಿಯಂಗ ಮಾಡಿ ಲತ್ತಿ ಪೆಟ್ಟ
ತಿಂದಿಯಲೇ ಎಚ್ಚರ
ಮುಂಗಾರಿ ಮೂವತ್ತೈದು ಪೈಸಾ
ಹಿಂಗಾರಿ ಸಾಕಷ್ಟ ಕೊಟ್ಟಿನಲೇ[೬೧]

ಹಿಂಗಾರಿಯ ಪ್ರಮಾಣ ಕಡಿಮೆ ಮುಂಗಾರಿಯ ಪ್ರಮಾಣ ಹೆಚ್ಚು ಎಂದು ಹೇಳುವ ತಿಳಿಸುವ ಹೇಳಿಕೆಗಳು 'ಎತ್ತು ಎಳೆಯುವಷ್ಟು' ಹಾಗೂ 'ಆನೆ ಎಳೆಯುವಷ್ಟು' ಎಂದು ವ್ಯತ್ಯಾಸದಲ್ಲಿ ವಿವರಿಸುತ್ತದೆ.

ಕರಿತಲಿ ಮಾನವನ ಎಷ್ಟು ಹೇಳಿದರೂ
ಸಮಜ ಆಗಲಿಲ್ಲ
ಮುಂಗಾರಿ ಮಳಿ ನಂದಿ ಮ್ಯಾಲ
ಹಿಂಗಾರಿ ಮಳಿ ಆನಿ ಮ್ಯಾಲ
ಬಸವನ ಚಿಕ್ಕ ದಸರೀಗಿ ಹೆರಿದೀನಲೇ ಗಾಣಮಣಿ[೬೨]

ಎರಡೂ ಬೆಳೆಗಳೂ ಸಮೃದ್ಧವಾಗಿ ಬೆಳೆಯುವುದಿದ್ದರೆ ಅದನ್ನು ಹೇಳಿಕೆಯ ಮೂಲಕ ಪ್ರಸ್ತಾಪಿಸುವ ರೀತಿ ಭಿನ್ನವಾಗಿರುತ್ತದೆ. 'ಉಡುತುಂಬಿ ಚೆಲ್ಲಾಡು' 'ಒಣೆ ಒಣೆ ಚೆಲ್ಲಾಡು' ಎನ್ನುವಂಥ ವೃದ್ಧಿ ಸಂಬಂಧಿ ಶಬ್ದಗಳ ಮೂಲಕ ಹೇಳಿಕೆ ಮಾಡಲಾಗುತ್ತದೆ.

ನನ್ನ ನಂಬಿ ನಡೆದವನ
ಬೆನ್ನ ಹಿಂದೆ ಅದೋನಲೇ
ಮುಂಗಾರಿ ಉಡಿ ತುಂಬಿ
ಚೆಲ್ಲಾಡಿನಲೇ
ಹಿಂಗಾರಿ ಜೋಳ
ಒಣೆ ಒಣೆ ಚೆಲ್ಲಾಡಿನಲೇ[೬೩]

ಮತ್ತೆ ಕೆಲವೊಂದು ಸಲ ಮುಂಗಾರಿ ಬೆಳೆ ಒಂದು ಭಾಗದಲ್ಲಿ ಹಿಂಗಾರಿ ಬೆಳೆ ಮತ್ತೊಂದು ಭಾಗದಲ್ಲಿ ಒಳ್ಳೆಯ ರೀತಿಯಿಂದ ಬರಲಿದೆ ಎಂದು ಹೇಳಿಕೆ ಮಾಡುತ್ತಾರೆ.

ಎಲೇ! ಎಷ್ಟೆ ಹೇಳಿದರೂ ಕರಿತಲಿ ಮಾನವನೀಗಿ
ಸಮಜ ಆಗಲಿಲ್ಲ.
ಹಿಂಗಾರಿ ದೇಶಕ್ಕೆ ಹಿಂಗಾರಿ
ಮುಂಗಾರಿ ದೇಶಕ್ಕೆ ಮುಂಗಾರಿ
ಬಸವನ ಚಿಕ್ಕ ದಸರೀಗಿ ಹರಿದಿನಲೇ[೬೪]

ಒಂದೊಂದು ಸಲ ಹಿಂದಿನ ವರ್ಷ ಹಾಗೂ ಈ ವರ್ಷದ ಮಧ್ಯದಲ್ಲಿ ತುಲನೆ ಮಾಡಿ ಹೇಳಿಕೆಗಳನ್ನು ಮಾಡಲಾಗುತ್ತದೆ. ಹೋದ ವರ್ಷದಷ್ಟು ಕಷ್ಟದ ಕಾಲ ಈ ವರ್ಷ ಇಲ್ಲ ಎಂದು ಹೇಳಿ ರೈತರು ನೆಮ್ಮದಿಯ ಭವಿಷ್ಯವನ್ನು ಕಲ್ಪಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತಾರೆ.

ಎಲೇ! ಹಿಂದಿನ ಸಾಲಿನ್ಯಾಗ
ಒಕ್ಕಲಿಗ್ಯಾನ ಮಗನಿಗಿ ಚಿಂತಿ ಇತ್ತು
ಈ ಸಾಲಿನ್ಯಾಗ ಒಕ್ಕಲಿಗ್ಯಾನ ಮಗನೀಗಿ
ಹಿಂಗಾರಿ ಮುಂಗಾರಿ ಪೀಕ
ಝುಲ್ ಬಿಡಸೀನಿ[೬೫]

ತಾವು ಹೇಳುವ ಜಾಗೆಯನ್ನು ಕೇಂದ್ರವೆಂದು ಕಲ್ಪಿಸಿಕೊಂಡು ನಾಲ್ಕೂ ದಿಕ್ಕಿನಲ್ಲಿನ ಮಳೆ ಬೆಳೆಯನ್ನು ಕುರಿತು ಬೀಸು ಭರವಸೆಯ ಹೇಳಿಕೆಗಳೂ ಇವೆ. ಅಂಥ ಹೇಳಿಕೆ ಕೇಳಿದ ಜನ ಸಂಪೂರ್ಣ ಸಮೃದ್ಧಿಯನ್ನು ಕಲ್ಪಿಸಿಕೊಳ್ಳುತ್ತಾರೆ ಎಲ್ಲಿಯೂ ಕಸರ ತೋರಿಸಿಲ್ಲವೆಂದು ಅಮೋಘಸಿದ್ಧನಲ್ಲಿ ಭಕ್ತಿಯಿಂದ ಕೈ ಮುಗಿಯುತ್ತಾರೆ.

ಎಲೇ ಹಿಂಡ ಸಿದ್ದರೊಳಗೆ ಬಂಡಸಿದ್ದಲೇ
ತುದಿಗೈ ಹಿಡದ ಕೇಳಬ್ಯಾಡ
ಮುಂಗೈ ಹಿಡದ ಕೇಳು
ನಾಲ್ಕೂ ಮೂಲಿ ಸೂಸಿ ನೋಡುದರಾಗ
ಭಾಗ್ಯಲಕ್ಷ್ಮಿ ಕುಲುಕುಲು ನಗಲಾಕ ಹತ್ಯಾಳು
ನಂಬಿಗಿಟ್ಟ ನಡದರ
ಅರಸನ ಅರಮನ್ಯಾಗ ಇಡತೀನಿ
ಅಪನಂಬಿಗಿ ಮಾಡಿದರ
ಪಾತಾಳಕ ತುಳೀತೀನಲೇ ಗಾಣಮಣಿ[೬೬]

ಹೀಗೆ ಬಂದಂಥ ಫಸಲನ್ನು ಯಾವ ರೀತಿ ಜೋಪಾನ ಮಾಡಬೇಕೆಂದು ರೈತಾಪಿ ಜನರಿಗೆ ತಿಳುವಳಿಕೆ ಹೇಳುವ ಕೆಲಸವನ್ನೂ ಹೇಳಿಕೆಗಳು ಮಾಡುತ್ತವೆ. ರೈತನ ಉಪಜೀವನಕ್ಕೆ ಬೇಕಾದ ಕಾಳಿನ ರಕ್ಷಣೆ ಮಾಡಿದಂತೆ ಬಸವನ ಆಹಾರವನ್ನು ರೂಪಿಸಿಕೊಳ್ಳಬೇಕಾದ ಜರೂರಿಯ ಬಗೆಗೆ ಕೆಲ ಹೇಳಿಕೆಗಳು ಒತ್ತು ಕೊಡುತ್ತವೆ. ಅಂಥ ಒಂದೆರಡು ಹೇಳಿಕೆ ಇಲ್ಲಿವೆ.

ಕಾಳ ಕಾಯ್ಕೊಳ್ರಿ ಇನ್ನು ಮ್ಯಾಲ ಕಷ್ಟ ಬರ್ತದ
ಕೆಟ್ಟ ದಿವಸ ಬರ್ತದ[೬೭]

ಅಪ್ಪ ಅಂದ
ಕಾಳ ಕಡ್ಯಾಕ ಮಾಡಿ
ಬಸವನ ಪತ್ರಿ ಜ್ವಾಕಲೆ ಇಡ್ರಿ[೬೮]

ಬಿಳಿ ಕಾಳ ಸ್ವಲ್ಪ ಸಫಲ ಆಯ್ತು
ಬಸವನ ಪತ್ರಿ ಜ್ವಾಕ ಮಾಡ್ರಿ
ಮುಂದಿನ ದಿನ ಮಾನಗಳು ಬಲು ಕಷ್ಟ
ನಾ ಸಂರಕ್ಷಣ ಮಾಡ್ತೀನಿ[೬೯]

ಬಿಳಿ ಕಾಳ ಕೆಂಪ ಕಾಳ ಮೂರ ಗಣಕ ಮ್ಯಾಲ
ಕಾಳ ಮಾಡಿ ತೋರಸ್ತೀನಿ
ತನ್ನ ಜ್ವಾಕಿಯಿಂದ ಪಕ್ಕಡಿಯೊಳಗ
ಹಿಡಕೊಂಡವರೀಗಿ
ಸಕ್ಕರಿ ತುಪ್ಪದೊಳಗ ಕೈ ತೊಳಸ್ತೀನಿ[೭೦]

ಎಲೋ! ಮೊಮ್ಮಕ್ಕಳ್ಯಾ
ಬಸವನ ಪತ್ರಿ ಶಿಶುವಿನ ಅನ್ನ
ಬಲುಜ್ಜಾಕಿ ಮಕ್ಕಳ್ಯಾ
ಬಸವನ ಪತ್ರಿ ಶಿಶುವಿನ ಅನ್ನ
ಜ್ಜಾಕಿ ಮಾಡಬೇಕೆನ್ನುದ್ರಾಗ
ಇದಿಮಾಯಿ ರಂಡಿ ಇದರಾದಳಲೇ
ಹಾಕ್ಕಲೋ ಡೊಳ್ಳ[೨೧]

ಹೇಳಿಕೆಗೆ ಮುನ್ನ ಡೊಳ್ಳಿನ ನಾದದಲ್ಲಿಯೇ ತಲ್ಲೀನನಾದ ಮಾರಾಯ ಮೈಯಲ್ಲಿ ಉಗ್ರ ತುಂಬಿಕೊಂಡು ಡೊಳ್ಳನ್ನು ಏರಿ ಎಲೋ ಎಂದು ಹೇಳಿಕೆ ಮಾಡುವ ಮಾರಾಯರು ಚೀರಿ ಬಿಟ್ಟರೆ ಅಲ್ಲಿ ನೆರೆದ ಜನರೆಲ್ಲ ಸ್ತಬ್ಧರಾಗುತ್ತಾರೆ.

ಹೇಳಿಕೆಯನ್ನು ಕೇಳಬೇಕೆಂದು ಸುತ್ತ ಹತ್ತು ಹರದಾರಿಯ ರೈತರೆಲ್ಲಾ ಅಲ್ಲಿ ನೆರೆದಿರುತ್ತಾರೆ. ಅವರೆಲ್ಲ ಏಕಕಾಲಕ್ಕೆ ಸ್ಥಬ್ಧರಾಗಿ ಕಿವಿಯೆಲ್ಲಾ ಮೈಯಾಗಿ ನಿಲ್ಲುತ್ತಾರೆ. ಡೊಳ್ಳಿನ ಬಡಿತ ಥಟ್ಟನೆ ನಿಂತಿರುತ್ತದೆ. ನಸುಕಿನ ನಾಲ್ಕು ಗಂಟೆಯ ಸಮಯದಲ್ಲಿ ಅಲ್ಲಿ ಸೂಜಿ ಬಿದ್ದರೂ ಅದರ ಸಪ್ಪಳ ಕೇಳಿಸುವ ಮೌನ ಆವರಿಸಿರುತ್ತದೆ. ಹೇಳಿಕೆಗಳು ಮುಗಿದವು ಎಂದು ಸೂಚನೆ ಕೊಡುವಂತೆ ಡೊಳ್ಳು ಏರಿದ ಮಾರುಯರು ಹಾಕ್ಕಲೇ ಡೊಳ್ಳು ಎಂದು ಹೇಳುತ್ತಾ ಡೊಳ್ಳಿನ ಮೇಲಿನಿಂದ ಇಳಿಯುತ್ತಾರೆ.

ಶಿಶುವಿನ ಅನ್ನವನ್ನು ಸಮೃದ್ಧವಾಗಿ ಕೊಟ್ಟು ಬಸವನಿಗೆ ಪತ್ರಿಯನ್ನು ಕೊಡುವವನಿದ್ದೇನೆ. ಆದ್ದರಿಂದ ಅವುಗಳನ್ನು ಹೇಗೆ ರಕ್ಷಣೆ ಮಾಡಿಕೊಳ್ಳಬೇಕು ಎಂದು ತಿಳುವಳಿಕೆ ನೀಡುವ ಕೆಲಸವನ್ನು ಹೇಳಿಕೆ ಮಾಡುತ್ತದೆ. ಶಿಶುವಿನ ಆಹಾರ ಹೆಚ್ಚಿನ ಪ್ರಮಾಣದಲ್ಲಿರಲಿ ಎಂದು ಮನೆಯ ಹಗೆಯಲ್ಲಿ ಬಳ್ಳ ತುಂಬಿದರೂ ಇನ್ನೂ ಉಳಿಯುವ ಸಾಧ್ಯತೆ ಇರುತ್ತದೆ. ಕಾಳಿನ ಚೀಲದ ನಿಟ್ಟಿಗಳನ್ನು ಹಚ್ಚಲು ಜಾಗೆ ಸಾಲದ್ದಕ್ಕೆ ಮನೆಯ ಹೊರಭಾಗದಲ್ಲಿ ಹಚ್ಚಿಕೊಳ್ಳುವ ಪ್ರಸಂಗ ಬರಬಹುದು. ಅದರೆ ಬಸವನ ಪತ್ರಿ ಅಂದರೆ ದನಗಳಿಗೆ ಬೇಕಾದ ಮೇವು ಕಣಕಿಯ ದೊರೆತ ದೊಡ್ಡ ಪ್ರಮಾಣದಲ್ಲಿ ಕಾಣಿಸಿಕೊಳ್ಳಲಿದೆ. ಆದ್ದರಿಂದ ಅದನ್ನು ಅತ್ಯಂತ ಜಾಗರೂಕತೆಯಿಂದ ಕಾಯ್ದುಕೊಳ್ಳಬೇಕಾದ ಅವಶ್ಯಕತೆಯಿದೆ ಎಂದು ಈ ಕೆಳಗಿನ ಹೇಳಿಕೆ ಅತ್ಯಂತ ಸುಂದರವಾಗಿ ವಿವರಿಸುತ್ತದೆ.

ತಿನ್ನೂ ಕಾಳ ಹೊರಗ ಹಚ್ಚು
ಬಸವನ ಪತ್ರಿ ಒಳಗ ಹಚ್ಚಿಗೊಂಡು
ಬದಕ ಮಾಡಬೇಕಲೇ ಗಾಣಮಣಿ[೨೨]

ತಾವು ಬೆಳೆದ ಬೆಳೆಗಳಿಗೆ ಯಾವ ರೀತಿಯ ಧಾರಣಿ ಬರಲಿವೆ ಎಂಬುದನ್ನು ತಿಳಿಸುವ ಹೇಳಿಕೆಗಳು ಇವೆ. ಒಂದೊಂದು ಸಲ ಒಳ್ಳೆಯ ಬೆಲೆ ಬರಬಹುದು. ಅವನ್ನೆಲ್ಲಾ ಬೆಡಗಿನ ರೂಪದಲ್ಲಿ ರೈತಾಪಿ ಜನರಿಗೆ ತಿಳಿಸಿ ಹೇಳುತ್ತಾರೆ. ಹತ್ತಿ ಬೆಳೆಗೆ ಒಳ್ಳೆಯ ಧಾರಣಿ ಬರಬಹುದು ಎಂಬುದನ್ನು 'ಎಲೇ! ಹತ್ತಿ ಸಾಲಾಗ ಬೆಳ್ಳಿ ಖಡೆ ಒಗದೀನಿ' ಎಂದೂ ಒಳ್ಳೆಯ ಬೆಲೆ ಬರಲಿಕ್ಕಿಲ್ಲ ಎಂಬುದನ್ನು 'ಎಲೇ! ಹತ್ತಿ ಬತ್ತಿ ಆಯ್ತು' ಎನ್ನುವಂಥ ಹೇಳಿಕೆ ಮೂಲಕ ತಿಳಿಸಲಾಗುತ್ತದೆ.

ರೈತರ ಬೆಳೆಗಳಿಗೆ ಧಾರಣಿ ಬರದಿದ್ದರೆ ರೈತರಿಗೆ ತೊಂದರೆ. ವ್ಯಾಪಾರಿಗಳಿಗೆ ಬಲು ಹಿಗ್ಗು. ಯಾಕೆಂದರೆ ಕಡಿಮೆ ಬೆಲೆಯಲ್ಲಿ ರೈತನ ಬೆಳೆಯನ್ನು ಖರೀದಿಸಿ ಸಂಗ್ರಹ ಮಾಡಿಟ್ಟುಕೊಂಡು ತೇಜಿ ಬರುವವರೆಗೆ ಕಾದು ಲಾಭ ಮಾಡಿಕೊಳ್ಳಬೇಕೆಂಬ ವ್ಯಾಪಾರಿ ಬುದ್ಧಿಯ ಜನರನ್ನು ಹೇಳಿಕೆಗಳು ಎಚ್ಚರಿಸದೇ ಬಿಡುವುದಿಲ್ಲ. ಸಂಗ್ರಹ ಮಾಡಿಟ್ಟುಕೊಂಡು ಒಳ್ಳೆಯ ಬೆಲೆಗಾಗಿ ದಾರಿ ಕಾಯುತ್ತಾ ವ್ಯಾಪಾರಸ್ಥನಿಗೂ ಕಷ್ಟ ಕಾಲ ಬರಬಹುದು. ಮುಂದಿನ ಬೆಳೆಯೂ ಚೆನ್ನಾಗಿ ಬೆಳೆದು ಒಳ್ಳೆಯ ಫಸಲು ರೈತನ ಕೈಗೆ ಬಂದಿತೆಂದರೆ ವ್ಯಾಪಾರಿಯ ಕನಸು ನುಚ್ಚು ನೂರಾಗುತ್ತವೆ. ಅಂಥದೊಂದು ಪ್ರಸಂಗವನ್ನು ನೆನಪಿಸುವ ಹೇಳಿಕೆ ಹೀಗಿದೆ:

ಅಗ್ಗ ಆಗ್ಯಾದಂತ
ಹಿಗ್ಗ ಬ್ಯಾಡ್ರಲೇ
ಮಗ್ಗಲ ಎಲವು ಮುರಿದಾವು
ಬಲು ಜ್ಯಾಕಿ[೭೩]

ತಾನು ಬೆಳೆದ ಬೆಳೆಗೆ ಒಳ್ಳೆಯ ಬೆಲೆ ಬರಲಿ ಎಂದು ರೈತರು, ತಾವು ಖರೀದಿಸಿ, ಸಂಗ್ರಹಿಸಿಕೊಂಡ ದವಸ-ಧಾನ್ಯಗಳಿಗೆ ಇನ್ನೂ ಒಳ್ಳೆಯ ಬೆಲೆ ಬರಲಿ ಎಂದು ವ್ಯಾಪಾರಸ್ಥರು ಹಂಬಲಿಸುವ; ಒಬ್ಬರ ಹಿಂದೆ ಒಬ್ಬರು ಬೆನ್ನು ಹತ್ತಿ ಎಂದೂ ಮುಗಿಯದ ಆಟವಾಗಿ ತೋರುವ ಪರಿಯನ್ನು ತೋರಿಸುವ ಹೇಳಿಕೆ ಹೀಗಿದೆ:

ಮೇಳಿಯವನ ಬೆನ್ನಿಂದ ಲಾಳಿಯವನು ಹತ್ಯಾನು
ಲಾಳಿಯವನ ಬೆನ್ನಿಂದ ಮೇಳಿಯವನು ಹತ್ಯಾನು[೭೪]

ಮೇಳಿ ಅಂದರೆ ನೇಗಿಲು ಅಥವಾ ನೇಗಿಲನ್ನು ಹಿಡಿಯುವ ಹಿಡಿ. ಮೇಳಿಯವನೆಂದರೆ, ರೈತ. ಲಾಳ (ನಾಳ) ಅಂದರೆ ಒಂದು ಅಳತೆಯ ಪ್ರಮಾಣ. ಲಾಳಿಯವನು ಎಂದರೆ ಅಳತೆಯ ಪ್ರಮಾಣವನ್ನು ಬಳಸುವ ವ್ಯಾಪಾರಸ್ಥ ಎಂದರ್ಥ.

ಇಂಥದ್ದೊಂದು ಬೆಳೆ ಬೆಳೆದರೆ ಒಳ್ಳೆಯ ಧಾರಣಿಯನ್ನು ವ್ಯಾಪಾರಸ್ಥನಿಂದ ಪಡೆಯಬಹುದೆಂದು ರೈತನು/ಮೇಳಿಯವನು ಲಾಳಿಯವನ ಬೆನ್ನು ಹತ್ತಿದರೆ ವ್ಯಾಪಾರಸ್ಥನು ಮೇಳಿಯವನಿಂದ ಕಡಿಮೆ ಬೆಲೆಯಲ್ಲಿ ದವಸ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಧಾನ್ಯ ಖರೀದಿಸುವ ತಂತ್ರ ರೂಪಿಸುತ್ತಿರುತ್ತಾರೆ. ಈ ತಂತ್ರ ಪ್ರತಿತಂತ್ರದ ಆಟವನ್ನು ಎರಡೇ ಎರಡು ಸಾಲಿನಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಮೇಲಿನ ಹೇಳಿಕೆ ವಿವರಿಸುತ್ತದೆ.

ಇವರಿಬ್ಬರಲ್ಲಿ ಸಿದ್ಧಿರು ರೈತರ ಪರವಾಗಿಯೇ ಅನ್ನುವುದು ನಿಸ್ಸಂಶಯದ ಮಾತು. ರೈತರನ್ನು ಸದಾ ಸಂರಕ್ಷಣೆ ಮಾಡುವುದೇ ತನ್ನ ಉದ್ದೇಶವೆಂದು ಸಾರುವ ಸಿದ್ಧರು ವ್ಯಾಪಾರಸ್ಥರ ವಿರೋಧಿ ನಿಲುವನ್ನು ತಳೆದಿರುವುದು ಅತ್ಯಂತ ಸಹಜ. ಆದರೆ ಮಾರುಕಟ್ಟೆಯ ಜಾಲ ಎಷ್ಟು ಕೆಟ್ಟದ್ದೆಂದರೆ ಸಿದ್ಧರ ಶಕ್ತಿಯನ್ನು ಮೀರಿ ಮಾರುಕಟ್ಟೆ ತನ್ನ ಪ್ರಾಬಲ್ಯವನ್ನು ತೋರಿಸುವುದಿದೆ. ಅಂಥದೊಂದು ವಿಷಾದದ ಸನ್ನಿವೇಶವನ್ನು ಒಗಟಿನ ರೂಪದಲ್ಲಿ ಈ ಕೆಳಗಿನ ಹೇಳಿಕೆ ನೀಡುತ್ತದೆ.

ಸೂರ್ಯ ಹೊಂಡಲ್ಲಿಗೆ
ಸೂರ್ಯ ಮುಳಗಲ್ಲಿಗೆ
ಬಿದನೂರ ಸಿದ್ಧ ಹೇಳಿದ ಮಾತು
ಕಲ್ಲ ಅರಿ ಮ್ಯಾಲ ಮ್ಯಾಣದ ಗೂಟ ಹೊಡದಂಗ
ಬಾಜಾರದಾಗಿನ ಸೊಲಗಿ
ಪಾತಾಳಕ ತುಳಿಬೇಕೆನ್ನುದರಾಗ
ಆಕಾಶಕ್ಕೆ ಹಾರಿತು[೨೫]

೫.೩.೬ ರಾಜಕೀಯ ಕುರಿತು ಹೇಳಿಕೆ

ರಾಜಕೀಯ ಅದು ರಾಜಮಹಾರಾಜರದೇ ಇರಲಿ, ಸುಲ್ತಾನ ಶಾಹಿಗಳದ್ದೇ ಇರಲಿ, ಆಂಗ್ಲರದ್ದೇ ಇರಲಿ, ಪ್ರಜಾಸತ್ತೆಯದ್ದೇ ಆಗಿರಲಿ ಅದು ನಮ್ಮ ಬದುಕನ್ನು ರೂಪಿಸುವ ಅತ್ಯಂತ ಅವಶ್ಯಕ ಅಂಗವೆಂದು ಸಿದ್ಧರು ಭಾವಿಸಿದ್ದಾರೆ. ಹೀಗಾಗಿ ರಾಜಕೀಯದ ಕುರಿತು ಅವರು ಆಗಾಗ ನಿಗೂಢ ರೀತಿಯ ಹೇಳಿಕೆಗಳನ್ನು ಮಾಡುತ್ತಾರೆ. ಕೆಲವೊಂದು ಸಾರಿ ನೇರವಾಗಿ ಪಕ್ಷದ ಹೆಸರನ್ನು ತೆಗೆದುಕೊಂಡು ಹೇಳಿಬಿಡುತ್ತಾರೆ. ಭಾರತ ಬ್ರಿಟೀಷರ ವಸಾಹತುಶಾಹಿ ಹಿಡಿತದಿಂದ ಪಾರಾಗುವ ಕೊನೆಯ ಗಳಿಗೆಯಲ್ಲಿ ಈ ಭಾಗದ ಸ್ಥಳೀಯ ರಾಜರುಗಳಾದ ಹೈದ್ರಾಬಾದಿನ ನಿಜಾಂಷಾಹಿಗಳು ನಡೆದುಕೊಂಡ ರೀತಿಯನ್ನು ಅದರಿಂದಾದ ಪರಿಣಾಮವನ್ನು ಮುಂಚೆಯೇ ವಿವರಿಸಿದ ಹೇಳಿಕೆಯೊಂದು ಅತ್ಯಂತ ಪ್ರಸಿದ್ಧವಾಗಿದೆ.

ಬಿಜಾಪುರ ಅಗಸಿ ಮ್ಯಾಲ ಹಂಗ ಕುಂತ್ಯ
ಕಲಬುರ್ಗಿ ಅಗಸಿಮ್ಯಾಲ ಕಾಗಿ ಕುಂತ್ಯ
ಹಂಗಿನ ಬಾಯಾಂದು ಹವಳಬಿತ್ತು
ಕಾಗಿ ಬಾಯಾಂದು ರಗುತ ಬಿತ್ತು[೨೬]

ಈ ಹೇಳಿಕೆಯನ್ನು ವಿಶ್ಲೇಷಿಸುತ್ತಾ ಡಾ. ಎಂ.ಎಂ.ಪಡಶೆಟ್ಟಿ ಅವರು ಹೇಳಕೀ ಮಾಡ್ಯಾರ ಒಡೆಯರು ಸಂಪಾದಿತ ಕೃತಿಯ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾರೆ :

ಈ ಹೇಳಿಕೆ ಅಂದಿನ ರಾಜಕೀಯ ಸ್ಥಿತ್ಯಂತರವನ್ನು ಬಿಂಬಿಸುತ್ತದೆ. ೧೯೪೭ರಲ್ಲಿ ನಮ್ಮ ಭಾರತ ದೇಶ ಸ್ವಾತಂತ್ರ್ಯ ಪಡೆಯುವುದರ ಜೊತೆಗೆ ಕೆಲವು ಸ್ಥಾನಿಕ ದೊರೆಗಳು ತಮ್ಮ ಅಧಿಕಾರ/ಸ್ವಾತಂತ್ರ್ಯ ಕಳೆದುಕೊಂಡರು. ಕಲಬುರ್ಗಿ ಅಗಸಿಮ್ಯಾಲ ಕಾಗಿ ಕುಂತು ಅದರ ಬಾಯಾಗ ರಗುತ ಬಿತ್ತು ಎಂಬ ಹೇಳಿಕೆಯಲ್ಲಿ ನಿಜಾಮನ ಆಡಳಿತಕ್ಕೆ ಒಳಪಟ್ಟ ಆ ಪ್ರದೇಶವು ಸ್ವಾತಂತ್ರ್ಯ ಪಡೆದುಕೊಂಡಿತು. ನಿಜಾಮನ ಆಡಳಿತ ಕೊನೆಗೊಂಡಿತೆಂಬುದೇ ಈ ಹೇಳಿಕೆಯ ಅರ್ಥ.[೨೨]

ಈ ಹೇಳಿಕೆಯನ್ನು ಡಾ. ಎಂ.ಎಂ.ಪಡಶೆಟ್ಟಿಯವರು ಸರಿಯಾಗಿಯೇ ಅರ್ಥೈಸಿದ್ದಾರೆ. ಬಿಜಾಪುರದ ಸಂಸ್ಥಾನವನ್ನು ಭಾರತದ ಒಕ್ಕೂಟದಲ್ಲಿ ಸೇರಿಸಲು ಯಾವುದೇ ಪ್ರತಿರೋಧವಿರಲಿಲ್ಲ. ಅವರು ಸ್ವಯಂ ಪ್ರೇರಣೆಯಿಂದ ಒಕ್ಕೂಟದಲ್ಲಿ ಸೇರ್ಪಡೆಯಾದರೆಂಬುದನ್ನು 'ಹಂಗ' ಪಕ್ಷಿಗೆ ಹೋಲಿಸಿದ್ದಾರೆ. ಒಕ್ಕೂಟದಲ್ಲಿ ಸೇರಲು ನಿರಾಕರಿಸಿದ, ಕಲಬುರ್ಗಿಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದ ನಿಜಾಂಷಾಹಿಗಳನ್ನು ಕಾಗಿಗೆ ಹೋಲಿಸಿದ್ದಾರೆ. ಸಮಯ ಪ್ರಜ್ಞೆ ಮೆರೆದ ಹಂಗದ ಬಾಯಿಂದ ಮೌಲಿಕ ಹವಳ ಬಿದ್ದರೆ, ಪ್ರತಿರೋಧ ಒಡ್ಡಿದ ನಿಜಾಂಷಾಯಿ ಸರ್ದಾರ ವಲ್ಲಬಾಯಿ ಪಟೇಲರ ನೇತೃತ್ವದ ಕಾರ್ಯಾಚರಣೆಯಲ್ಲಿ ಅನಾವಶ್ಯಕ ರಕ್ತಪಾತ ಹರಿಯುವಂತೆ ಮಾಡಿತು ಎನ್ನುವುದನ್ನು ಅತ್ಯಂತ ಸಶಕ್ತವಾದ ರೂಪಕದಲ್ಲಿ ಅಭಿವ್ಯಕ್ತಗೊಳಿಸಿ ರುವುದನ್ನು ನೋಡಿದರೆ ಸಿದ್ಧರ ದರ್ಶನಸಾಮರ್ಥ್ಯ ಹಾಗೂ ಅಭಿವ್ಯಕ್ತಿ ಕೌಶಲದ ಬಗೆಗೆ ಬೆರಗಾಗದೇ ಇರದು.

ಭಾರತ ಸ್ವಾತಂತ್ರ್ಯ ಪಡೆದು ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯನ್ನು ಅಳವಡಿಸಿಕೊಂಡ ನಂತರದ ದಿನಮಾನಗಳಲ್ಲಿ ಅನರ್ಹ ವ್ಯಕ್ತಿಗಳು ರಾಜಕೀಯ ಪ್ರವೇಶಿಸಿ, ರಾಜಕೀಯ ಪ್ರಾತಿನಿಧ್ಯದ ಗೌರವವನ್ನು ಹಾಳುಗೆಡುವುತ್ತಿರುವುದನ್ನು ಪೂರ್ವದಲ್ಲಿಯೇ ಗ್ರಹಿಸಿ ಈ ರೀತಿಯ ಹೇಳಿಕೆಯನ್ನು ಮಾಡಿದ್ದಾರೆ.

'ಹುಲಿ ಗದ್ದಿಗೆ ಮ್ಯಾಲ ನರಿ ಬಂದು ಕುಳಿತಾವು' ಎನ್ನುವಂಥ ಹೇಳಿಕೆಯಲ್ಲಿ ವರ್ತಮಾನದ ಪ್ರಜಾಪ್ರತಿನಿಧಿ ಗಳಿಗಿಂತ ಪೂರ್ವದ ರಾಜಕೀಯ ದೊರೆಗಳ ಬಗೆಗೆ ಒಂದಿಷ್ಟು ಪ್ರಮಾಣದ ಮೆಚ್ಚುಗೆ ಇರುವುದು ಗೋಚರಿಸುತ್ತದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಒಂದು ರೀತಿಯ ವಂಶಪಾರಂಪರ್ಯ ಪದ್ಧತಿ ಮುಂದುವರೆದುಕೊಂಡು ಬಂದಂತೆ ಗೋಚರಿಸಿದಾಗ ಜನರನ್ನು ಎಚ್ಚರಿಸುವ ಕೆಲಸವನ್ನು ಹೇಳಿಕೆಗಳು ಮಾಡುತ್ತವೆ. ಐದು ಬಾರಿ, ಆರು ಬಾರಿ ಜನಪ್ರತಿನಿಧಿಗಳಾಗಿ ಆಯ್ಕೆಯಾಗಿ ಜನಪರವಾದ ಕೆಲಸವನ್ನು ಮಾಡದೇ ರಾಜಕೀಯವನ್ನು ಸ್ವಹಿತಾಸಕ್ತಿಗಾಗಿ ಬಳಸಿಕೊಂಡ ರಾಜಕಾರಣಿಗಳ ಕುರಿತು ಸಹ ಒಂದು ಹೇಳಿಕೆ ಹೀಗಿದೆ:

ಹಳೀ ಕುದರಿ ದೊಡ್ಡಿಗೆ ಹೊಡೆದು

ಹೊಸ ಕುದರಿಗಾಗಿ ಜೀನ ಹಾಕರಿ[೨೮]

ಇಂಥದೊಂದು ಹೇಳಿಕೆಯ ಮೂಲಕ ಅಲ್ಲಿ ನೆರೆದ ಸಾವಿರಾರು ರೈತಾಪಿ ಜನರಿಗೆ ರಾಜಕೀಯ ಚಳುವಳಿಯನ್ನು ನೀಡುವ ಕೆಲಸವನ್ನು ಈ ಹೇಳಿಕೆಗಳು ಮಾಡುತ್ತವೆ.

"ಆಕಳ ಅಳದಾವು. ಗೂಳಿಗಳು ಹೆಚ್ಚಾದವು" ಎನ್ನುವಂತಹ ಹೇಳಿಕೆ ತನ್ನ ಅರ್ಥ ಸಂದಿಗ್ಧತೆಯ ಕಾರಣದಿಂದ ತುಂಬಾ ಪರಿಣಾಮಕಾರಿಯಾಗಿವೆ. ಇಲ್ಲಿ ಆಕಳ ಎನ್ನುವುದು ಒಂದು ಕಾಲಕ್ಕೆ ಕಾಂಗ್ರೆಸ್(ಐ) ಪಕ್ಷದ ಪ್ರಮುಖ ಚಿಹ್ನೆಯಾಗಿತ್ತು. ಇಂದಿರಾಗಾಂಧಿಯ ಸರ್ವಾಧಿಕಾರಿ ಮನೋಧರ್ಮದಿಂದ ಆ ಪಕ್ಷ ದೊಡ್ಡ ಅಘಾತವನ್ನು ಅನುಭವಿಸಿತು ಎನ್ನುವುದನ್ನು ಸೂಚಿಸಲು ಆಕಾಳ ಅಳದಾವು ಎಂಬ ಮಾತು ಬಂದರೆ ಕಾಂಗ್ರೆಸಿನ ಜಾಗೆಯಲ್ಲಿ ಬಂದ ಜನತಾ ಪಕ್ಷ ಆಂತರಿಕವಾದ, ವ್ಯಕ್ತಿಪ್ರತಿಷ್ಠೆಯ ತಿಕ್ಕಾಟದ ಕಾರಣದಿಂದಾಗಿ ಜನಪರ ಕೆಲಸ ಮಾಡದೇ ಹೋಯಿತು ಎನ್ನುವುದನ್ನು ಸೂಚಿಸಲು ಗೂಳಿಗಳು ಹೆಚ್ಚಾದವು ಎನ್ನುವ ಸಾಂಕೇತಿಕ ತಾರ್ಕಿಕತೆಯನ್ನು ಮನಗಾಣಬಹುದು.

ಇಂದಿರಾಗಾಂಧಿ ಅಧಿಕಾರಕ್ಕೆ ಬಂದದನ್ನು ಪ್ರಾಸಬದ್ಧವಾಗಿ ಹೇಳಲಾಗಿದೆ:

'ಅಕ್ಕ ಲೆಕ್ಕಕ ಬಂದಳಲೇ'[೨೯]

ದಿಲ್ಲಿ ರಾಜಕೀಯದ ಪಲ್ಲಟಗಳನ್ನು ಅತ್ಯಂತ ಸಶಕ್ತವಾಗಿ ಹೇಳಿಕೆಯೊಂದು ಬಿಂಬಿಸುತ್ತದೆ. ಅಧಿಕಾರದ ಬೆಂಬಲವಿರುವ ಆಡಳಿತಾರೂಢ ಪಕ್ಷವೊಂದು ಜನಪ್ರಿಯತೆಯನ್ನು ಕಳೆದುಕೊಂಡು ಜನರ ಹೊಸ ನಿರೀಕ್ಷೆಯೊಡನೆ, ಹೊಸ ರಾಜಕೀಯ ಪಕ್ಷವೊಂದು ಕೇಂದ್ರದ ಗದ್ದುಗೆ ಪಡೆದುಕೊಂಡು ಪಲ್ಲಟವಾದುದನ್ನು ಸೂಚಿಸುತ್ತಾ, ಪಲ್ಲಟದಿಂದ ಯಾವುದೇ ರೀತಿಯ ಲಾಭ ಪಡೆಯಲಾಗಲಿಲ್ಲ ಎಂಬುದನ್ನು ಒಂದು ಹೇಳಿಕೆ ಹೀಗೆ ಅಭಿವ್ಯಕ್ತಿಸುತ್ತದೆ:

ಪಕ್ಕ ಇಲ್ಲದ ಹಕ್ಕಿ ಲೆಕ್ಕವಿಲ್ಲದ ಬಿತ್ತು

ಪಕ್ಕ ಇದ್ದ ಹಕ್ಕಿ ಹಾರಿಹೋಯಿತು

ಪಕ್ಕ ಮುರದ ಹಕ್ಕಿಗೆ ವರ್ತಿಸಿಕ್ಕಿತಲೇ ಗಾಣಮಿಣಿ

ಎಲೋ ಎತ್ತ ನೋಡಿದತ್ತ ಕರಿ ರಂಡಿನೆ ಕಾಣ್ತಾಳ

ದಿಲ್ಲಿ ಸಿಂಹಾಸನಕ್ಕೆ ಕರಿ ಜೆಂಡೆ ಹಚ್ಚೀನಿ[೩೦]

ಈ ಹೇಳಿಕೆಯಲ್ಲಿ ಮೂರು ತೆರನಾದ ಹಕ್ಕಿಗಳ ಉಲ್ಲೇಖವಿದೆ. ಮೊದಲನೆಯದ್ದು ಪಕ್ಕ ಇಲ್ಲದ್ದು ಎಂದರೆ ಪಕ್ಷಗಳ ಬೆಂಬಲವಿಲ್ಲದೆ ಸ್ವತಂತ್ರ ಅಭ್ಯರ್ಥಿಗಳು. ಎರಡನೆಯದ್ದು ಪಕ್ಕ ಇದ್ದ ಹಕ್ಕಿ ಅಂದರೆ ಅಧಿಕಾರರೂಢ ಪಕ್ಷ. ಮೂರನೆಯದ್ದು ಅಧಿಕಾರ ಕಳೆದುಕೊಂಡ ಸದ್ಯ ಸ್ಪರ್ಧೆಗೆ ಇಳಿದಿರುವ ಪಕ್ಷ. ಈ

ಮೂರರಲ್ಲಿ ಮೊದಲನೆಯದಕ್ಕೆ ಯಾವುದೇ ಜನ ಮನ್ನಣೆಯನ್ನು ಪಡೆಯಲು ಆಗುವುದಿಲ್ಲ ಎನ್ನುವುದನ್ನು 'ಲೆಕ್ಕವಿಲ್ಲದ ಬಿತ್ತು' ಎನ್ನುವ ಮಾತಿನಲ್ಲಿ ನೋಡಬಹುದು. ಅದು ಇಡಗಂಟು ಕಳೆದುಕೊಂಡುದರ ಸಂಕೇತವೂ ಹೌದು. ಎರಡನೆಯದ್ದು ಆಡಳಿತಾರೂಢ ಪಕ್ಷ. ಅದಕ್ಕೆ ರೆಕ್ಕೆಗಳೇನೋ ಇವೆ. ಆದಾಗ್ಯೂ ಅದು ಚುನಾವಣೆಯಲ್ಲಿ ಸೋಲನ್ನು ಅನುಭವಿಸಿತು ಎನ್ನುವುದನ್ನು ಹಕ್ಕಿ ಹಾರಿಹೋಯಿತು ಎನ್ನುವ ಮಾತಿನಲ್ಲಿ ನೋಡಬಹುದು. ಆದರೆ ಒಂದು ಕಾಲಕ್ಕೆ ಅಧಿಕಾರದಲ್ಲಿ ಇದ್ದ ಅದು ಸದ್ಯ ವಿರೋಧ ಪಕ್ಷದ ಕೆಲಸ ನಿರ್ವಹಿಸುತ್ತಿರುವ ಪಕ್ಷ. 'ಪಕ್ಕ ಮುರಿದ ಹಕ್ಕಿ' ಇಂಥ ಪಕ್ಷ ಪ್ರಸಕ್ತ ಚುನಾವಣೆಯಲ್ಲಿ ಆಡಳಿತರೂಢ ಪಕ್ಷವನ್ನು ಸೋಲಿಸಿ ಗೆಲವು ಸಾಧಿಸಲಿರುವುದನ್ನು 'ಪಕ್ಕ ಮುರಿದ ಹಕ್ಕಿಗೆ ವರ್ತಿ ಸಿಕ್ಕಿತಲೇ' ಎನ್ನುವ ಮಾತಿನಲ್ಲಿ ಹೇಳುತ್ತದೆ. ಆದರೆ ಮುಂದುವರಿಸಿ ಹೊಸ ಪಕ್ಷವೊಂದು ಅಧಿಕಾರಕ್ಕೆ ಬಂತೇನೋ ನಿಜ. ಅದರಿಂದ ಯಾವುದೇ ಜನಪರ ಕೆಲಸಗಳು ಸಾಧ್ಯವಿಲ್ಲ ಎನ್ನುವುದನ್ನು 'ಸಿಂಹಾಸನಕ್ಕ ಕರಿ ಜೆಂಡೆ ಹಚ್ಚಿನಿ' ಎನ್ನುವುದನ್ನು ಸಶಕ್ತ ರೂಪದಲ್ಲಿ ನೋಡಲು ಸಾಧ್ಯ. ಹೇಳಿಕೆಗಳಲ್ಲಿ ಎರಡು ರೀತಿಯ ಜಂಡೆ/ನಿಶಾನೆ ಬಳಕೆಯಾಗುತ್ತದೆ. ಒಂದು ಹಸಿರು ನಿಶಾನಿ, ಇನ್ನೊಂದು ಕರಿ ಜಂಡೆ. ಹಸಿರು ನಿಶಾನೆ ಶುಭದ, ಸಮೃದ್ಧಿಯ ಸಂಕೇತ. ಕರಿಯ ಜಂಡೆ ಅಶುಭದ ವಿಪತ್ತಿನ ಸಂಕೇತ. ಇಂಥದೊಂದು ಅದ್ಭುತ ರಾಜಕೀಯ ವಿಶ್ಲೇಷಣೆಯನ್ನು ಜನಸಾಮಾನ್ಯನಂತೆ ಕಾಣುವ ಮಾರಾಯನಿಗೆ ಸಾಧ್ಯವೆ ಎಂದು ಯಾರಿಗಾದರೂ ಸಂಶಯ ಬರಬಹುದು. ನಿತ್ಯ ಮೂರು ಹೊತ್ತು ತನ್ನ ಆರಾಧ್ಯ ದೈವವನ್ನು ಆರಾಧನೆ ಮಾಡುತ್ತ ಭಕ್ತರನ್ನು ಹರನೊಂದಿಗೆ ಸಮೀಕರಿಸಿಕೊಂಡ ಈತನಿಗೆ ಇಂಥ ದರ್ಶನವಾಗಿದ್ದರೆ ಯಾರೂ ಸಂಶಯ ಪಡಬೇಕಾಗಿಲ್ಲ. ರಾಜಕೀಯ ಸಂಬಂಧಿ ಕೆಲ ಹೇಳಿಕೆಗಳಂತೂ ನೇರವಾಗಿ ರಾಜಕೀಯ ಪಕ್ಷದ ಹೆಸರನ್ನೇ ತೆಗೆದುಕೊಂಡು ಘೋಷಣೆ ಮಾಡಿಬಿಡುತ್ತವೆ. ಅಂಥದೊಂದು ಹೇಳಿಕೆ ಹೀಗಿದೆ:

ಎಲೇ ಗುಡ್ಡದನ ಹುಲಿ ಗಡಿಬಿಡಿಸಿತು
ಬಿ.ಜೆ.ಪಿ ಕಾಂಗ್ರೆಸ್ ರಾಜಕೀಯ ಇರುವುದರಾಗ
ಜನದನ ಅಲ್ಲೋಲ ಕಲ್ಲೋಲ ಆಯಿತಲೆ ಗಾಣಮಿಣಿ[೮೧]

ರಾಜಕೀಯ ಪಕ್ಷಗಳ ತಿಕ್ಕಾಟದಲ್ಲಿ ಜನಸಾಮಾನ್ಯರು ಹಣ್ಣುಗಾಯಿ ನೀರುಗಾಯಿ ಆಗುತ್ತಿರುವ ಸಂಗತಿಯನ್ನು ನಿಚ್ಚಳದ ನುಡಿಯಲ್ಲಿ ಹೇಳಲಾಗಿದೆ.

ಎಲೇ! ಗುಡ್ಡದನ ಹುಲಿ ಗಡಬಡಸಿಲಿಕ್ಕತ್ತು
ಬಿ.ಜೆ.ಪಿ ಕಾಂಗ್ರೆಸ್ ನಾ ಮುಂದು ನೀ ಮುಂದ ಅನ್ನುದ್ರಾಗ
ಜನ ಚಿತ್ತ ಟಪ್ಪ ಆಯಿತಲೇ ಗಾಣಮಿಣಿ[೮೨]

ಉಳುವವನಿಗೆ ಒಡೆಯ ಎನ್ನುವ ಕಾಯಿದೆಯನ್ನು ತರುವ ಮುನ್ನವೇ ಹೇಳಲಾಯಿತು ಎನ್ನಲಾದ ಹೇಳಿಕೆಯೊಂದು ಹೀಗಿದೆ:

ಹಿಂಡ ಹೊಲ ಹಿಡಿಯುವುದಕ್ಕಿಂತ ಒಂದು
ತುಂಡ ಹೊಲ ಹಿಡಿಯಿರಿ[೮೩]

ಭೂ ಹಿಡುವಳಿ ಕಾಯ್ದೆಯ ಅಡಿಯಲ್ಲಿ ಭೂ ಮಿತಿಯ ಆಧಾರದ ಮೇಲೆ ಎಷ್ಟೋ ಜನ ಜಮೀನ್ದಾರರು ತಮ್ಮ ಭೂಮಿಯನ್ನು ಉಳುವವನಿಗೆ ಕೊಡಬೇಕಾದ ಸುಧಾರಣ ಕ್ರಮವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಂಥದೊಂದು ಹೇಳಿಕೆ ಎಲ್ಲಾ ಕಾಲಕ್ಕೂ ಅನ್ವಯವಾಗುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಇಂದಿನ ಸರ್ಕಾರಗಳು ಚಿಕ್ಕ ಹಿಡುವಳಿದಾರರಿಗೆ ಕೊಡುತ್ತಿರುವ ಸೌಲಭ್ಯವನ್ನು ಕಲ್ಪಿಸಿಕೊಂಡರೆ ಈ ಮಾತಿನ ಅರ್ಥ-ವಿಸ್ತಾರ ಹೊಳೆದೀತು.

ಹೊಡ್ಡಿ ಹೊಲದ ರೈತ ನಳ್ಳಿನ ಹೊಲದ ರೈತನಿಗಿಂತ ಸುದೈವಿಯೆನ್ನುವುದು ಅನುಭವದ ಹಿನ್ನೆಲೆಯಲ್ಲಿ ರೂಪಗೊಂಡ ಸತ್ಯ. ಹೀಗಾಗಿ ಹೊಡ್ಡಿನ ಹೊಲಕ್ಕಿಂತಲೂ ನಳ್ಳಿನ ಹೊಲ ಹಿಡಿಯುವುದು ವಾಸಿ ಎಂಬ ತಿಳಿವಳಿಕೆಯನ್ನು ಮಾರಾಯರು ತಮ್ಮ ಹೇಳಿಕೆಗಳ ಮೂಲಕ ವರ್ಷ ವರ್ಷವೂ ನೀಡುತ್ತಲಿರುತ್ತಾರೆ. ಅಂಥ ಜ್ಞಾನವನ್ನು ತಿಳಿಸುವ ಹೇಳಿಕೆ ಹೀಗಿದೆ:

ನಳ್ಳಿನವನು ನಕ್ಕನು ಹೊಡ್ಡಿನವನು ಅತ್ತನು
ಒಕ್ಕಲಿಗ್ಯಾನ ಮಗನಿಗೆ ಜುಟ್ಟ ಹಿಡಿದ
ಎತ್ತೂದರಾಗ ಇನ್ನೂ ಹನ್ನೊಂದು ದಿವಸ
ಹಿಂದಕ್ಕ ಬಿತ್ತು[೮೪]

ಹೀಗೆ ಅಮೋಘಸಿದ್ಧನ ಪರಂಪರೆಯ ದೈವಗಳನ್ನು ಪೂಜಿಸಿಕೊಂಡು ಬರುವ ಮಾರಾಯರು, ತಮ್ಮ ದೈವವನ್ನು ನಂಬಿ ಬಂದ ಭಕ್ತರಿಗೆ ತಮ್ಮ ಹೇಳಿಕೆಗಳ ಮೂಲಕ ಜನ ಜಾನುವಾರು ಮಳೆ ಬೆಳೆ ರಾಜಕೀಯ ಕುರಿತು ತಮ್ಮಲ್ಲಿರುವ ಅನುಭವಜನ್ಯ ಹಾಗೂ ಪರಂಪರಾಗತ ಜ್ಞಾನದ ಮೂಲಕ ಸದಾ ಆಶಾವಾದಿಗಳನ್ನಾಗಿಸುವ ಕೆಲಸವನ್ನು ಮಾಡುತ್ತಾರೆ.

ಕೊನೆ ಟಿಪ್ಪಣಿಗಳು

೧. ಹಾಡಿದವರು: ಅಮಧು ಬನಸಿದ್ದ ಹಿರಕೂರ, ಸಾ. ಹತ್ತೂರ, ತಾ. ದ.ಸೋಲಾಪುರ

೨. ಹಾಡಿದವರು: ಅಮೋಗೆಪ್ಪ ಮಹಾದೇವಪ್ಪ ಒಡೆಯರ, ಸಾ. ಕುಂಚನೂರ, ತಾ. ಜಮಖಂಡಿ

೩. ಹಾಡಿದವರು: ಮಲಕಾರಿಸಿದ್ದ ಮುತ್ತಪ್ಪ ಒಡೆಯರ, ಸಾ. ಕುಂಚನೂರ, ತಾ. ಜಮಖಂಡಿ

೪. ಹಾಡಿದವರು: ಸೋಮನಿಂಗಪ್ಪ ಅಮೋಗೆಪ್ಪ ಒಡೆಯರ, ಸಾ. ಕುಂಚನೂರ, ತಾ. ಜಮಖಂಡಿ

೫. ಹಾಡಿದವರು: ಶ್ರೀಶೈಲಪ್ಪ ಚೆನಮಲ್ಲಪ್ಪ ಜಕನೂರ ಹಾಗೂ ತಂಡದವರು, ಸಾ. ಕುಂಚನೂರ, ತಾ. ಜಮಖಂಡಿ

೬. ಹಾಡಿದವರು: ಶಿವರಾಯಪ್ಪ ಬಳ್ಯಾನಿ ಬಿರಾದಾರ, ಸಾ. ಭೀವರಗಿ, ತಾ. ಜತ್ತ, ಜಿ. ಸಾಂಗಲಿ

[illegible]

[illegible]

[illegible]

[illegible]

[illegible]

[illegible]

೭. ಹಾಡಿದವರು: ಮುತ್ತಪ್ಪ ಸೋಮಣ್ಣ ಪೂಜಾರಿ, ಸಾ. ರೇವತಗಾವ, ತಾ. ಇಂಡಿ, ಜಿ. ವಿಜಾಪುರ

೮. ಹಾಡಿದವರು: ಅವಧು ಬನಸಿದ್ಧ ಹಿರಕೂರ, ಸಾ. ಹತ್ತೂರ, ತಾ ದ.ಸೋಲಾಪುರ

೯. ಹಾಡಿದವರು: ರಾಜುಗೌಡ ಬಿರಾದಾರ, ಸಾ. ಕೊಳೂರಗಿ, ತಾ. ಇಂಡಿ, ಜಿ. ಬಿಜಾಪುರ

೧೦. ಹಾಡಿದವರು: ಅದೇ

೧೧. ಹಾಡಿದವರು: ಅದೇ

೧೨. ಹಾಡಿದವರು: ಅದೇ

೧೩. ಹಾಡಿದವರು: ಲಕ್ಕಪ್ಪ ಮೀಸೆ ಸಾ. ಇಂಗಳೇಶ್ವರ, ತಾ. ಬಸವನಬಾಗೇವಾಡಿ, ಜಿ. ಬಿಜಾಪುರ

೧೪. ಹಾಡಿದವರು: ಅದೇ

೧೫. ಹಾಡಿದವರು ಅದೇ

೧೬. ಹಾಡಿದವರು: ಅದೇ

೧೭. ಹಾಡಿದವರು: ರಾಜುಗೌಡ ಬಿರಾದಾರ, ಸಾ. ಕೊಳೂರಗಿ, ತಾ. ಇಂಡಿ, ಜಿ. ಬಿಜಾಪುರ

೧೮. ಹಾಡಿದವರು: ಸೋಮಲಿಂಗ ಬಿಜ್ಜರಗಿ, ಸಾ. ಬಿಜ್ಜರಗಿ, ತಾ. ಮತ್ತು ಜಿ. ಬಿಜಾಪುರ

೧೯. ಹಾಡಿದವರು: ಶಾವರಸಿದ್ಧ ಧರ್ಮಣ್ಣ ಜಳಗೌಡರ ಹಾಗೂ ಸಂಗಡಿಗರು, ಸಾ. ಅಚೇಗಾವಿ, ತಾ. ದ.ಸೋಲಾಪುರ

೨೦. ಹಾಡಿದವರು: ಸೋಮಲಿಂಗ ಬಿಜ್ಜರಗಿ ಸಾ. ಬಿಜ್ಜರಗಿ, ಜಿ. ಬಿಜಾಪುರ

೨೧. ಹಾಡಿದವರು: ಅದೇ

೨೨. ಹಾಡಿದವರು: ರಾಜುಗೌಡ ಬಿರಾದಾರ, ಸಾ. ಕೊಳೂರಗಿ, ತಾ ಇಂಡಿ, ಜಿ ಬಿಜಾಪುರ

೨೩. ಹಾಡಿದವರು: ಅದೇ

೨೪. ಹಾಡಿದವರು: ಶಾವರಸಿದ್ಧ ಧರ್ಮಣ್ಣ ಜಳಗೌಡರ ಹಾಗೂ ಸಂಗಡಿಗರು, ಸಾ. ಅಚೇಗಾವಿ, ತಾ. ದ.ಸೋಲಾಪುರ

೨೫. ಹಾಡಿದವರು: ಅವಧು ಬನಸಿದ್ಧ ಹಿರಕೂರ, ಸಾ ಹತ್ತೂರ, ತಾ. ದ.ಸೋಲಾಪುರ

೨೬. ಹಾಡಿದವರು: ರಾಜುಗೌಡ ಬಿರಾದಾರ, ಸಾ ಕೊಳೂರಗಿ, ತಾ. ಇಂಡಿ, ಜಿ. ಬಿಜಾಪುರ

೨೭. ಹಾಡಿದವರು: ಅದೇ

೨೮. ಹಾಡಿದವರು: ಶಾವರಸಿದ್ಧ ಧರ್ಮಣ್ಣ ಜಳೇಗೌಡರ ಹಾಗೂ ಸಂಗಡಿಗರು ಸಾ. ಅಚೇಗಾವಿ, ತಾ. ದ.ಸೋಲಾಪುರ

೨೯. ಹಾಡಿದವರು: ಮಹಾದೇವ ಅಮ್ಮೋಗಿ ಒಡೆಯರ, ಸೋಮಣ್ಣ ಅಮಸಿದ್ಧ ಒಡೆಯರ, ಸೋಮಣ್ಣ ಸಿದ್ಧಪ್ಪ ಅಮೋಗಿ ಒಡೆಯರ, ರೇವಣ್ಣಪ್ಪ ಸೋಮಣ್ಣ ಒಡೆಯರ, ಸಾ. ಉಮದಿ, ತಾ. ಜತ್ತ

೩೦. ಹಾಡಿದವರು: ಜಕ್ಕಪ್ಪ ಮೀಸೆ, ಸಾ. ಇಂಗಳೇಶ್ವರ, ತಾ ಬ.ಬಾಗೇವಾಡಿ

೩೧. ಹೇಳಕಿ ಮಾಡ್ಯಾರ ಒಡೆಯರು, (ಸಂ) ಡಾ. ಎಂ.ಎಂ.ಪಡಶೆಟ್ಟಿ, ಪುಟ IX

೩೨. ಅದೇ, ಪುಟ XI

೩೩. ಅದೇ, ಪುಟ ೪

೩೪. ಹೇಳಿಕೆ ಮಾಡಿದವರು: ಓಗೆಪ್ಪ ಮುತ್ತ್ಯಾ ಢವಳಾರ, ಒದಗಿಸಿದವರು: ನಾಗಣ್ಣ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೩೫. ಢವಳಾರ ಸಿದ್ಧಯ್ಯ ಮುತ್ತ್ಯಾ ಮಾಡಿದ ಹೇಳಿಕೆ. ಒದಗಿಸಿದವರು: ನಾಗಣ್ಣ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೩೬. ಢವಳಾರದ ಬಿಳಿಯಾನಿಸಿದ್ಧ ೧೯೩೫ರಲ್ಲಿ ಮಾಡಿದ ಹೇಳಿಕೆ. ಒದಗಿಸಿದವರು: ನಾಗಣ್ಣ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೩೭. ಢವಳಾರದ ಮಳಿಮಲ್ಲಪ್ಪ ಮಾಡಿದ ಹೇಳಿಕೆ. ಒದಗಿಸಿದವರು: ನಾಗಣ್ಣ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೩೮. ಹೇಳಕಿ ಮಾಡ್ಯಾರ ಒಡೆಯರು, (ಸಂ) ಡಾ. ಎಂ.ಎಂ.ಪಡಶೆಟ್ಟಿ, ಪುಟ ೧

೩೯. ಢವಳಾರದ ಮಳಿಮಲ್ಲಪ್ಪ ಮಾಡಿದ ಹೇಳಿಕೆ. ಒದಗಿಸಿದವರು: ನಾಗಪ್ಪ ಪೂಜಾರಿ, ಸಾ ಢವಳಾರ, ತಾ ಸಿಂದಗಿ

೪೦. ಹೇಳಕಿ ಮಾಡ್ಯಾರ ಒಡೆಯರು, (ಸಂ) ಡಾ. ಎಂ.ಎಂ.ಪಡಶೆಟ್ಟಿ, ಪುಟ ೭

೪೧. ಅದೇ, ಪುಟ ೩

೪೨. ಅದೇ ಪುಟ ೪

೪೩. ಢವಳಾರದ ಓಗೆಪ್ಪ ಮುತ್ತ್ಯಾ ಮಾಡಿದ ಹೇಳಿಕೆ. ಒದಗಿಸಿದವರು: ನಾಗಪ್ಪ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೪೪. ಢವಳಾರದ ಧರ್ಮರಾಯ ಮುತ್ತ್ಯಾ ಮಾಡಿದ ಹೇಳಿಕೆ. ಒದಗಿಸಿದವರು. ನಾಗಪ್ಪ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೪೫. ಅದೇ

೪೬. ಅದೇ

೪೭. ಢವಳಾರದ ಮಳಿ ಮಲ್ಲಪ್ಪ ಮಾಡಿದೆ ಹೇಳಿಕೆ. ಒದಗಿಸಿದವರು: ನಾಗಪ್ಪ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೪೮. ಹೇಳಕಿ ಮಾಡ್ಯಾರ ಒಡೆಯರು, (ಸಂ) ಡಾ. ಎಂ.ಎಂ.ಪಡಶೆಟ್ಟಿ, ಪುಟ ೨

೪೯. ಅದೇ, ಪುಟ ೬

೫೦. ಢವಳಾರದ ಗೂಳಪ್ಪ ಮಂಡಲ ಮಾಡಿದ ಹೇಳಿಕೆ. ಒದಗಿಸಿದವರು: ನಾಗಪ್ಪ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೫೧. ಹೇಳಕಿ ಮಾಡ್ಯಾರ ಒಡೆಯರು, (ಸಂ) ಡಾ. ಎಂ.ಎಂ.ಪಡಶೆಟ್ಟಿ, ಪುಟ ೩

೫೨. ಅದೇ, ಪುಟ ೧೫

೫೩. ಅದೇ, ಪುಟ ೨೦

೫೪. ಅದೇ, ಪುಟ ೧

೫೫. ಅದೇ, ಪುಟ ೨

೫೬. ಅದೇ, ಪುಟ ೯

೫೭. ಅದೇ, ಪುಟ ೯

೫೮. ಕಲ್ಲೂರಿನ ಮೇಲಿನ ಮಠದ ಹೇಳಿಕೆ. ಒದಗಿಸಿದವರು: ಭಗವಂತರಾಯ ಬಿರಾದಾರ, ಸಾ. ಕಲ್ಲೂರ, ತಾ. ಜೇವರಗಿ

೫೯. ಢವಳಾರ ಮುತ್ತ್ಯಾ ಭೀಮಣ್ಣ ಒಡೆಯರ ಮಾಡಿದ ಹೇಳಿಕೆ. ಒದಗಿಸಿದವರು: ನಾಗಪ್ಪ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೬೦. ಅದೇ

೬೧. ಚಬನೂರಿನ ಮುದಕಪ್ಪ ಮುತ್ತ್ಯಾ ಸಿದ್ದಪ್ಪ ಒಡೆಯರ ಮಾಡಿದ ಹೇಳಿಕೆ. ಒದಗಿಸಿದವರು. ವಾಯ್.ಸಿ. ಹಿರೇಕುರುಬರ, ಸಾ. ಚಬನೂರ, ತಾ. ಬ.ಬಾಗೇವಾಡಿ

೬೨. ಕಲ್ಲೂರಿನ ಕೆಳಗಿನಮಠದವರು ಮಾಡಿದ ಹೇಳಿಕೆ. ಒದಗಿಸಿದವರು. ಭಗವಂತರಾಯ ಬಿರಾದಾರ ಸಾ. ಕಲ್ಲೂರ, ತಾ. ಜೇವರಗಿ

೬೩. ಅದೇ

೬೪. ಅದೇ

೬೫. ಹೇಳಕಿ ಮಾಡ್ಯಾರ ಒಡೆಯರು, (ಸಂ) ಡಾ. ಎಂ.ಎಂ.ಪಡಶೆಟ್ಟಿ ಪುಟ ೮

೬೬. ಢವಳಾರದ ಮಳಿಮಲ್ಲಪ್ಪ ಮುತ್ತ್ಯಾ ಮಾಡಿದ ಹೇಳಿಕೆ. ಒದಗಿಸಿದವರು: ನಾಗಪ್ಪ ಪೂಜಾರಿ, ಸಾ. ಢವಳಾರ, ತಾ. ಸಿಂದಗಿ

೬೭. ಹೇಳಕಿ ಮಾಡ್ಯಾರ ಒಡೆಯರು, (ಸಂ) ಡಾ. ಎಂ.ಎಂ.ಪಡಶೆಟ್ಟಿ, ಪುಟ ೧೪

೬೮. ಅದೇ, ಪುಟ ೧೫

೬೯. ಅದೇ, ಪುಟ ೧೮

೭೦. ಅದೇ, ಪುಟ ೧೮

೭೧. ಅದೇ, ಪುಟ ೨೦

೭೨. ಅದೇ, ಪುಟ ೧೮

೭೩. ಅದೇ, ಪುಟ ೨೨

೭೪. ಅದೇ, ಪುಟ ೧೦

೭೫. ಅದೇ, ಪುಟ ೧೦

೭೬. ಅದೇ, ಪುಟ XVII

೭೭. ಅದೇ, ಪುಟ XVII

೭೮. ಅದೇ, ಪುಟ ೧೨

೭೯. ಚಬನೂರಿನ ಅಮೋಗೆಪ್ಪ ಸಿದ್ಧರಾಮಪ್ಪ ಒಡೆಯರ ಮಾಡಿದ ಹೇಳಿಕೆ. ಒದಗಿಸಿದವರು: ವಾಯ್.ಸಿ. ಹಿರೇಕುರುಬರ, ಸಾ. ಚಬನೂರ

೮೦. ಢವಳಾರದ ಜಗೆಪ್ಪ ಮುತ್ತ್ಯಾ ಮಾಡಿದ ಹೇಳಿಕೆ. ಒದಗಿಸಿದವರು: ನಾಗಣ್ಣ ಪೂಜಾ, ಸಾ. ಢವಳಾರ, ತಾ. ಸಿಂದಗಿ

೮೧. ಢವಳಾರದ ಧರ್ಮರಾಯ ಮುತ್ತ್ಯಾ ಮಳಿಮಲ್ಲಪ್ಪ ಮಾಡಿದ ಹೇಳಿಕೆ. ಒದಗಿಸಿದವರು: ನಾಗಣ್ಣ ಪೂಜಾ, ಸಾ. ಢವಳಾರ, ತಾ. ಸಿಂದಗಿ

೮೨. ಕಲ್ಲೂರಿನ ಮೇಲಿನಮಠದ ಮಾರಾಯರು ಮಾಡಿದ ಹೇಳಿಕೆ. ಒದಗಿಸಿದವರು: ಭಗವಂತರಾಯ ಬಿರಾದಾರ, ಸಾ. ಕಲ್ಲೂರ, ತಾ. ಜೇವರಗಿ

೮೩. ಹೇಳಕೀ ಮಾಡ್ಯಾರ ಒಡೆಯರು. (ಸಂ) ಡಾ. ಎಂ.ಎಂ.ಪಡಶೆಟ್ಟಿ, ಪುಟ XIV

೮೪. ಅದೇ ಪುಟ ೬

ಅಧ್ಯಾಯ : ಆರು

ಫಲಿತಗಳು-ಸಾಧ್ಯತೆಗಳು

ಅಧ್ಯಾಯ : ಆರು

ಫಲಿತಗಳು-ಸಾಧ್ಯತೆಗಳು

ಈ ಹಿಂದಿನ ಐದು ಅಧ್ಯಾಯಗಳ ಈ ಮಹಾಪ್ರಬಂಧದ ಬರವಣಿಗೆಯ ಮೂಲಕ ಈ ಅಧ್ಯಯನಕಾರ ನೀಡುವ ಫಲಿತಗಳು ಇವು:

ಚರಿತ್ರೆಯ ಹಂಗು ಹರಿದುಕೊಂಡು ಪುರಾಣೀಕೃತ ಲೋಕದಲ್ಲಿ ಬದುಕುತ್ತಿದ್ದ ಅಮೋಘಸಿದ್ಧನನ್ನು ಚರಿತ್ರೆಯ ಚೌಕಟ್ಟಿನಲ್ಲಿ ನಿಲ್ಲಿಸಲಾಗಿದೆ. ಕೈಲಾಸದಲ್ಲಿ ಏಳು ಯುಗಗಳವರೆಗೆ ತಪಸ್ಸು ಮಾಡಿದವನಾದ ಅಮೋಘಸಿದ್ಧ ನಿಜವಾಗಿಯೂ ಜನಿಸಿದ್ದು ಹದಿನೈದನೆಯ ಶತಮಾನದ ಕೊನೆಯಲ್ಲಿ (೧೪೯೦ರ ಸುಮಾರಿಗೆ) ಎಂದು ಅವನ ವಂಶಸ್ಥರಾದ ಭೀವರಗಿ ಒಡೆಯರಲ್ಲಿ ದೊರೆತ ಮೋಡಿಲಿಪಿಯಲ್ಲಿನ ದಾಖಲೆಗಳ ಆಧಾರದಿಂದ ಈ ನಿರ್ಣಯಕ್ಕೆ ಬರಲಾಗಿದೆ.

ಅಮೋಘಸಿದ್ಧ ಹಾಗೂ ಅವನ ಹೆಂಡತಿ ಪದ್ಮಾವತಿಯ ತಂದೆ ನಗರಾಯನ ನಡುವಿನ ಸಂಘರ್ಷವನ್ನು ವರ್ಗಸಂಘರ್ಷದ ಹಿನ್ನೆಲೆಯಲ್ಲಿ ವಿಶ್ಲೇಷಿಸಿಕೊಳ್ಳಲಾಗಿದೆ.

ಅಮೋಘಸಿದ್ಧನ ಗುರು ಗೌರಿ ಸೋಮಲಿಂಗನನ್ನು ಕೈಲಾಸದಿಂದ ಶಿಷ್ಯನೊಂದಿಗೆ ಭೂಮಿಗೆ ಬಂದ ಪರಶಿವ ಎಂದು ಪುರಾಣೀಕರಿಸಲಾಗಿದೆ. ಆದರೆ ಈ ಅಧ್ಯಯನ ಅದನ್ನು ಅಲ್ಲಗಳೆದು ಅವನು ಕಾಪಾಲಿಕ ಪಂಥದವನು ಎಂಬುದನ್ನು ಇಲ್ಲಿ ಸ್ಥಾಪಿಸಲಾಗಿದೆ. ಕಾಪಾಲಿಕ ಪಂಥದ ಈ ಸೋಮಲಿಂಗ ತನ್ನ ಸಮಕಾಲೀನ ಸಂದರ್ಭಕ್ಕೆ ಸ್ಪಂದಿಸಿ ಇಸ್ಲಾಂ ಸಂಸ್ಕೃತಿಯಿಂದ (ಸೂಫಿ ಪಂಥದಿಂದ) ಪ್ರಭಾವಿತನಾದವನಾಗಿದ್ದಾನೆ ಎಂದೂ ನಿರ್ಣಯಿಸಲಾಗಿದೆ.

ಅಮ್ಮೋಗಿ ಒಡೆಯರ ಪರಂಪರೆಯ ಅಮೋಘಸಿದ್ಧ ಹಾಗೂ ವಚನಕಾರ ಅಮುಗಿದೇವ ಇಬ್ಬರೂ ಒಬ್ಬರೇ ಎನ್ನುವ ಈವರೆಗಿನ ಸಂಶೋಧನಾಕಾರರ ನಿಲುವನ್ನು ಅಲ್ಲಗಳೆದು ಅವರಿಬ್ಬರು ಬೇರೆ ಬೇರೆಯೇ ಎಂದು ಸ್ಥಾಪಿಸಲಾಗಿದೆ.

ವಿಜಾಪುರ ಪರಿಸರದ ಒಡೆಯರ ಬಗೆಗೆ ಬರೆಯುತ್ತ ಶರಣರ ಲಿಂಗ ಹಾಗೂ ಕುರುಬರ ಕಂಬಳಿ ಸೇರಿಕೊಂಡು 'ಒಡೆಯರು' ಎಂಬ ಪುರೋಹಿತವರ್ಗ ರೂಪಗೊಂಡ ಬಗೆಯನ್ನು ಪ್ರಥಮ ಬಾರಿಗೆ ವಿವರಿಸಲಾಗಿದೆ. ಈ

[illegible]

[illegible]

[illegible]

[illegible]

[illegible]

[illegible]

[illegible]

ಮೂರು ಪಂಗಡಗಳಲ್ಲಿ ಶಾಂತ ಒಡೆಯರ ಪಂಗಡ ಹಾಗೂ ಮಂಕ ಒಡೆಯರ ಪಂಗಡಗಳು ಶರಣ ಚಳವಳಿಯ ಕಾವಿನಲ್ಲಿ ವಿಕಸನಗೊಂಡರೆ, ಅಮ್ಮೋಗಿ ಒಡೆಯರ ಪಂಗಡ ಲಿಂಗಾಯತವು ಹದಿನಾರನೆಯ ಶತಮಾನದಲ್ಲಿ ಸಾಂಸ್ಥೀಕರಣಗೊಳ್ಳುತ್ತಿದ್ದ ಸಂದರ್ಭದಲ್ಲಿ ವಿಕಸನಗೊಂಡಿದೆ ಎಂದು ಸಾಧಿಸಲಾಗಿದೆ.

ಅಮೋಘಸಿದ್ದನಿಂದ ಪ್ರಾರಂಭವಾದ ಈ ಪರಂಪರೆ ಒಂದು ಸಿದ್ಧಾಂತ(doctrine)ವಾಗಿ ಜಡವಾದುದಲ್ಲ, ಒಂದು ಪರಂಪರೆಯಾಗಿ ಸದಾ ಪ್ರವಹಿಸುವಂಥದು ಎಂಬುದನ್ನು ತೋರಿಸುತ್ತ ಅದೊಂದು ಸಂಕರ ಪರಂಪರೆ ಎಂಬ ನಿರ್ಣಯಕ್ಕೆ ಬರಲಾಗಿದೆ. ಅದರ ಈ ಸಂಕರ ಗುಣಕ್ಕೆ ಅದು ಮುಖಾಮುಖಿ ಮಾಡಿಕೊಂಡ ಕಾಪಾಲಿಕ, ನಾಥ, ಸಿದ್ದ, ಲಿಂಗಾಯತ, ಜೋಗಿ, ಸೂಫಿ ಪಂಥಗಳು ಕಾರಣವೆಂಬುದನ್ನು ಗುರುತಿಸಲಾಗಿದೆ.

ಅಮೋಘಸಿದ್ಧನ ಪರಂಪರೆ ಎರಡು ಕವಲಾಗಿ ಬೆಳೆದುದನ್ನು ಅವಲೋಕಿಸುತ್ತ ಪುಣ್ಯದ ಮಕ್ಕಳ ಶಾಖೆಯನ್ನು ಶಿಷ್ಯ ವರ್ಗದ್ವೆಂತಲೂ , ವರವಿನ ಮಕ್ಕಳ ಶಾಖೆಯನ್ನು ಪುತ್ರವರ್ಗದ್ವೆಂತಲೂ ಗುರುತಿಸಲಾಗಿದೆ.

ಅಮೋಘಸಿದ್ಧ ಪರಂಪರೆಯವರು ವೃತ್ತಿಯಿಂದ ಪಶುಪಾಲನೆ ಮಾಡುವವರಾದ್ದರಿಂದ ಅವರಲ್ಲಿ ಸಹಜವಾಗಿಯೇ ಮಹಿಳಾ ವಿರೋಧಿ ನಿಯಮ (Anti female attitude) ಬೆಳೆದು ಬಂದಿರುತ್ತದೆ ಎಂದು ಹೇಳುತ್ತ ಅದಕ್ಕೆ ಪೂರಕವೆನ್ನುವ ಹಲವಾರು ಕಥನಗಳನ್ನು ಚರ್ಚಿಸಲಾಗಿದೆ.

ಕುರುಬರು ಲಿಂಗಾಯಿತಕ್ಕೆ ಮುಖಾಮುಖಿ ಮಾಡಿಕೊಂಡಾಗ ಎರಡು ಪರಿಯಲ್ಲಿ ಪ್ರತಿಕ್ರಿಯಿಸಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಒಂದು, ಮೂಲ ದೇವರುಗಳಿಗೆ ಲಿಂಗವೆಂಬ ಉಪಾದಿಯನ್ನು ಆರೋಪಿಸಿ ಕೊಳ್ಳುವುದು. ಇನ್ನೊಂದು ಹೊಸ ಪಂಥವನ್ನು ಒಡೆಯರು ಎಂಬ ಕುರುಬ ಪುರೋಹಿತವರ್ಗದ ಹೆಸರಿನಲ್ಲಿಆವಿಷ್ಕಾರಗೊಳಿಸಿಕೊಳ್ಳುವುದು. ಅಮೋಗಿ ಒಡೆಯರ ಪಂಗಡ ಲಿಂಗಾಯತಕ್ಕೆ ಮುಖಾಮುಖಿ ಮಾಡಿಕೊಂಡಾಗ ಉಳಿದೆರಡು ಪಂಗಡಗಳಾದ ಶಾಂತ ಒಡೆಯ ಹಾಗೂ ಮಂಕ ಒಡೆಯ ಪಂಗಡಗಳಿಗಿಂತ ಹೇಗೆ ಭಿನ್ನವಾಗಿ ಪ್ರತಿಕ್ರಿಯಿಸಿತು ಎನ್ನುವುದು ಗುರುತಿಸಲಾಗಿದೆ. ಅಮೋಗಿ ಒಡೆಯರ ಪಂಗಡ ಕುರುಬರ ಮೂಲ ಲಾಂಛನಗಳಾದ ಭಂಡಾರ ಹಾಗೂ ಕರಿಕಂಬಳಿಯನ್ನು ಉಳಿಸಿಕೊಳ್ಳುವ ಮೂಲಕ ಪ್ರಾಚೀನ ಅರ್ವಾಚೀನಗಳನ್ನು ಏಕಕಾಲಕ್ಕೆ ಹೇಗೆ ಬದುಕಬಹುದು ಎಂಬುದನ್ನು ದಾಖಲಿಸಲಾಗಿದೆ.

ಅಮ್ಮೋಗಿ ಒಡೆಯರ ಪಂಗಡದ ಕಥಾನಕಗಳು ಕುರುಬರ ಮತಸಾಹಿತ್ಯದಲ್ಲಿ ಹಾಸುಹೊಕ್ಕಾಗಿ ಸೇರಿಕೊಳ್ಳದೇ ಇರುವುದಕ್ಕೆ ಕಾರಣವನ್ನು ಶೋಧಿಸಿಕೊಳ್ಳಲಾಗಿದೆ. ಅತೀ ಪ್ರಾಚೀನರೆನ್ನಿಸಿದ ಬೀರಪ್ಪ, ಮಾಯವ್ವ, ಮುದ್ದುಗೊಂಡ, ಮುದ್ದಾಯಿ, ಪದ್ಮಗೊಂಡ, ನಂತರದ ರೇವಣಸಿದ್ಧ, ಸಿದ್ಧರಾಮ, ತದನಂತರದ ಮಾಳಿಂಗರಾಯ, ಜಕ್ಕಪ್ಪ, ತುಕ್ಕಪ್ಪ -ಇವರೆಲ್ಲ ಕುರುಬ ಮತಸಾಹಿತ್ಯದ ಮೂಲ ಪಠ್ಯ(texture)ದಲ್ಲಿ ಲೀನವಾಗಿದ್ದಾರೆ. ಆದರೆ ಅಮೋಘ ಸಿದ್ಧನ ಕಥನ ಈ ಎಲ್ಲಾ ಸಾಹಿತ್ಯದಲ್ಲಿ ಒಂದು ಥರ appendageನ ಹಾಗೆ ಕಾಣುತ್ತದೆ. ಹೀಗಾಗುವುದಕ್ಕೆ ಅವನು ಕುರುಬರ ಸಾಂಸ್ಕೃತಿಕ ನಾಯಕರಲ್ಲಿ ತೀರ ಹೊಸಬನೆನ್ನುವುದು (ಹದಿನಾರನೆಯ ಶತಮಾನ) ಕಾರಣವೆಂದು ಗುರುತಿಸಲಾಗಿದೆ.

ಈ ಪರಂಪರೆಯ ಜನ ತಮ್ಮ 'ಸಿದ್ಧಿ'ಯನ್ನು ಜನರ ಶೋಷಣೆಗೆ ಬಳಸಿಕೊಳ್ಳದೆ ಜನಪರವಾಗಿ ಬಳಸಿಕೊಂಡರು ಎಂಬುದನ್ನು ಇಲ್ಲಿ ಪ್ರತಿಪಾದಿಸಲಾಗಿದೆ. ಕಂಬಳಿ ಬೀಸಿ ಆಕಾಶದಿಂದ ಮಳೆ ಬರಿಸುವಂತೆ, ನಾಣ್ಯಗಳನ್ನೂ ಉದುರಿಸಬಲ್ಲ ಶಕ್ತಿಯ ಇವರು ಭೂ ಸಂಪತ್ತು ಹಾಗು ಪಶುಸಂಪತ್ತನ್ನೇ ನಿಜವಾದ ಸಂಪತ್ತು ಎಂದು ಭಾವಿಸಿದವರು. ಭೂಮಿ ಹಾಗೂ ಹೆಣ್ಣು ಇವರೆಡೂ ಉತ್ಪಾದಕ ಶಕ್ತಿಗಳು. ಈ ಉತ್ಪಾದಕ ಶಕ್ತಿಗಳ ಮೇಲೆ ಜಗತ್ತಿನ ಸರ್ವಚಟುವಟಿಕೆಗಳು ನಿಂತಿವೆ. ಅವೆರಡೂ ಯಾವ ಸಂದರ್ಭದಲ್ಲಿ ಬಂಜೆಯಾಗಬಾರದು ಎಂಬುದು ಈ ಸಿದ್ಧರ ಅಚಲ ನಿಲುವು. ಅವರಲ್ಲಿರುವ ಮಳೆಕೀಲು ಬೆಳೆಕೀಲು ಹಾಗೂ ಹುಟ್ಟುಬಂಜೆಯರಿಗೆ ತೊಟ್ಟಿಲು ಎಂಬ ಕಲ್ಪನೆಗಳು ಇದಕ್ಕೆ ಸಾಕ್ಷಿ.

ಈ ಪರಂಪರೆಯ ಜಾತ್ರೆ-ಉತ್ಸವ, ನಂಬಿಕೆ-ಆಚರಣೆಗಳ ಅಧ್ಯಯನದ ಹಿನ್ನೆಲೆಯಲ್ಲಿ ಇವರು ಸದಾ ರೈತಾಪಿವರ್ಗದವರ ಪರ ಹಾಗೂ ದಲಿತಪರವೆನ್ನುವುದನ್ನು ತೋರಿಸಲಾಗಿದೆ. ನಿವಾಳಿಕೆ ಚಮ್ಮಾಳಿಗೆ ಆಚರಣೆಯ ಮೂಲಕ ದಲಿತರು ತಯಾರಿಸಿದ ಚಮ್ಮಾಳಿಗೆಯ ಮೆರವಣಿಗೆ ಅರ್‍ಯಾಣಸಿದ್ಧನ ಉತ್ಸವದಲ್ಲಿ ಜರುಗಿದರೆ, ಕುಂಚನೂರು ಹಾಗೂ ಭಂಡಾರಕವಟೆಯ ಉತ್ಸವ ರೈತರ ಕಲ್ಯಾಣವನ್ನೇ ಗಮನದಲ್ಲಿಟ್ಟುಕೊಂಡು ಜರಗುತ್ತವೆ. ಇವರ ಹರಕೆಯ ಹಾಡು ಹಾಗೂ ಹೇಳಿಕೆಗಳಂತೂ ರೈತರ ಬದುಕು ಸಮೃದ್ಧವಾಗಿರಲೆಂದೇ ಬಯಸುವಂಥವು ಗಳಾಗಿವೆ.

ಕೊಂತವ್ವನಿಗೆ ಪಲ್ಲಕ್ಕಿ ಪದವಿ ಹಾಗೂ ಜಕ್ಕೇರಿ ಹಂಗೋಡಾ ಆಚರಣೆ ನೋಡಿದರೆ ಈ ಪರಂಪರೆಯವರಿಗೆ ಮಹಿಳೆಯರ ಬಗೆಗೆ ಗೌರವವಿದೆ ಎನ್ನಿಸುತ್ತಾದಾದರೂ ಪದ್ಮಾವತಿಯ ಮದುವೆ, ಮದುವೆ ಮಂಟಪದಲ್ಲಿ ಕುಳಿತಿರುವಂತೆಯೇ ಮಲಕಾರಿಸಿದ್ಧನಿಂದ ತಿರಸ್ಕೃತಳಾಗುವ ಸಂಗಾದೇವಿ, ಸಣ್ಣ ಕಾರಣಕ್ಕಾಗಿ ಗಂಡನನ್ನು ಕಳೆದುಕೊಳ್ಳುವ ಗುಬ್ಬೆವ್ವ, ತವರು ಮನೆಯವರು ಕೊಟ್ಟ ಆಸ್ತಿಯನ್ನು ತವರು ಮನೆಯವರಿಗೇ ಬಿಟ್ಟು ಕೊಡಬೇಕಾದ ಒತ್ತಡದಲ್ಲಿ ಸಿಲುಕಿದ ರೆಬಕವ್ವ -ಇವರೆಲ್ಲ ಈ ಪರಂಪರೆಯ ಪುರುಷ ದೌರ್ಜನ್ಯವನ್ನು ಮೌನವಾಗಿ ಸಹಿಸಿಕೊಂಡಿದ್ದಾರೆ. ಹೀಗಾಗಿ ಪರಂಪರೆಯಲ್ಲಿ ಮಹಿಳಾ ವಿರೋಧಿ ನಿಯಮ (Anti female attitude) ಎದ್ದು ಕಾಣುವಂಥದ್ದು ಎಂದು ಗುರುತಿಸಲಾಗಿದೆ.

ಭೀವರಗಿಯನ್ನು ಗುರುಮನೆಯನ್ನಾಗಿಸಿಕೊಂಡು ತಮಗೆ ದೊರೆತ ಶಕ್ತಿಗಳನ್ನು -ಭೂಸಂಪತ್ತು ಕಿಲಾರಿಸಂಪತ್ತು, ನಾಡಗೌಡಕಿ, ಸಿದ್ಧಾಟಿಕೆಗಳನ್ನು -ಅವರು ಹೇಗೆ ತುಂಬಾ ವ್ಯವಸ್ಥಿತವಾದ network ಮೂಲಕ ಬಳಸಿಕೊಂಡರು ಎನ್ನುವುದನ್ನು ಪರಿಚಯಿಸಲಾಗಿದೆ. ವಿಕೇಂದ್ರೀಕರಣಗೊಳಿಸಿದಂತೆ ಕಂಡರೂ ಅದರ ಕೇಂದ್ರ ಗುರುತ್ವ ಭೀವರಗಿಯಲ್ಲಿಯೇ ಉಳಿಯುವಂತೆ ನೋಡಿಕೊಂಡ ಅವರ ಚಾಣಾಕ್ಷತನ ದಂಗುಬಡಿಸುವಂಥದ್ದು ಎಂದು ಹೇಳಲಾಗಿದೆ.

'ಒಡೆಯರ ಸಾಹಿತ್ಯ'ವೆಂಬ ಹೊಸ ಸೇರ್ಪಡೆಯನ್ನು ಇಲ್ಲಿ ಮಾಡಲಾಗಿದೆ. ಇದೊಂದು ಹೊಸ ಕಾಣ್ಕೆ. ಜಾತ್ರೆ-ಉತ್ಸವ-ನಂಬಿಕೆ-ಆಚರಣೆಗಳ ಸಂದರ್ಭದಲ್ಲಿ ಅವರು ಬಳಸುವ ಉಗಾಳಿಕೆ, ಹರಕೆ ಹಾಗೂ ಹೇಳಿಕೆ

[illegible]

ಎನ್ನುವ ಮೌಖಿಕ ಸಾಹಿತ್ಯ ಒಂದು ಹೊಸ ಅಧ್ಯಯನಕ್ಕೆ ಪಂಥಾಹ್ವಾನ ನೀಡುವಂಥದ್ದಾಗಿದೆ. ಇಲ್ಲಿ ಆ ಸಾಹಿತ್ಯವನ್ನು ಕೇವಲ ಅದರ ರಸಾಸ್ವಾದನೆಗಾಗಿ ಬಳಸಿಕೊಳ್ಳದೇ ಅದನ್ನು ರಚಿಸಿದವರ ಹೃದಯದಲ್ಲಿ ನಿತಾಂತ ಹರಿಯುವ ಜನ-ಜಾನುವಾರುಗಳ ಕುರಿತಾದ ಅಂತಃಕರಣದ ಪರಿಚಯನ್ನು ಮಾಡಿಸಲಾಗಿದೆ.

ಈ ಅಧ್ಯಯನ ಒಂದು ನಿರ್ಧಿಷ್ಟ ಕಾಲಮಿತಿಯಲ್ಲಿ ಪೂರ್ತಿಗೊಳ್ಳಬೇಕಾದುದರಿಂದ ಹಲವಾರು ಅಂಶಗಳು ಬೇಡುವ ವಿಸ್ತಾರದ ಚರ್ಚೆಯನ್ನು ಮಾಡಲಾಗಿಲ್ಲ. ನಂತರ ಚರ್ಚೆಗೆ ಒಳಪಡಿಸಲು ಸಾಧ್ಯವಿರುವ ಹಲವನ್ನು ಇಲ್ಲಿ ಕೊಡಲಾಗಿದೆ.

ಅಮೋಘಸಿದ್ಧನ ಪುಣ್ಯದ ಮಕ್ಕಳು ಇಲ್ಲವೆ ವರವಿನ ಮಕ್ಕಳ ಬಗೆಗೆ ಸ್ವತಂತ್ರ ಅಧ್ಯಯನ ಕೈಕೊಳ್ಳಬಹುದು. ಇಲ್ಲಿ ಕಾಣಿಸಿಕೊಳ್ಳುವ ಉಮದಿ ಮಲಕಾರಿಸಿದ್ಧನ ಕುರಿತೂ ಸಂಶೋಧನೆ ನಡೆಯಿಸಬಹುದು. ಈ ಪರಂಪರೆಯ ಮಹಿಳೆಯರ ಕುರಿತೂ ಒಂದು ಅಧ್ಯಯನ ಮಾಡಬಹುದು. ಭೂತಾಳಸಿದ್ಧನ ಕುರಿತಾಗಿಯೂ ವಿಶೇಷ ಅಧ್ಯಯನ ಮಾಡಬಹುದು. ಶಾವರಸಿದ್ಧನೂ ಕೂಡಾ ಅಂಥದೇ ಒಬ್ಬ ಸಿದ್ಧನಾಗಿದ್ದಾನೆ. ಒಡೆಯರ ಸಾಹಿತ್ಯವನ್ನು ಇನ್ನೂ ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಸ್ವತಂತ್ರ ಸಂಶೋಧನಾ ಕಾರ್ಯ ಕೈಗೆತ್ತಿಕೊಳ್ಳಬಹುದು.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

೧. ಅಮೋಘಸಿದ್ದೇಶ್ವರ ಚರಿತ್ರೆ: ಚಂದ್ರಕಾಂತ ಪ್ರಭುರಾವ ಬಿರಾದಾರ, ಹಾಲುಮತ ಸಂಘ, ಮಡಿಹಾಳ, ಜಿ. ಗುಲಬರ್ಗಾ, ೧೯೮೨

೨. ಅಲ್ಲಮಪ್ರಭುದೇವರ ವಚನ ಸಂಪುಟ (ಸಂ) ಡಾ. ಬಿ.ವ್ಹಿ.ಮಲ್ಲಾಪುರ, ಸಮಗ್ರ ವಚನ ಸಂಪುಟ ಜನಪ್ರಿಯ ಆವೃತ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩

೩. ಕರ್ನಾಟಕ ಧರ್ಮಗಳು: ಎಸ್.ಸಿ.ನಂದಿಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪ್ರಥಮ ವಿಶ್ವ ಕನ್ನಡ ಸಮ್ಮೇಳನ ನೃಪತುಂಗ ರಸ್ತೆ, ಬೆಂಗಳೂರು, ೧೯೮೩

೪. ಇತಿಹಾಸ ದರ್ಶನ, (ಸಂ) ೨೦. ೨೦೦೭

೫. ಕರ್ನಾಟಕದ ನಾಥ ಪಂಥ: ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೯

೬. ಕರ್ನಾಟಕದ ಸೂಫಿಗಳು: ರಹಮತ್ ತರೀಕೆರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧

೭. ಕಾಡುಹೂಗಳು: (ಸಂ) ಜಿ.ಬಿ.ಖಾಡೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, ೧೯೭೩

೮. ಕರ್ನಾಟಕ ಸಂಸ್ಕೃತಿಯ ಸಂಶೋಧನೆ: ಕಪಟರಾಳ ಕೃಷ್ಣರಾವ, ಸಾಹಿತ್ಯ ಮಾಲೆ, ಮೈಸೂರು, ೧೯೭೦

೯. ಕಾಡು ಕುರುಬರ ಮತ್ತು ಜೇನು ಕುರುಬ ಸಂಸ್ಕೃತಿ: ಎ.ಸಿ.ಲಲಿತ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು, ೧೯೯೩

೧೦. ಕಾಪಾಲಿಕರು ಮತ್ತು ಕಾಳಾಮುಖರು-ಕಣ್ಮರೆಯಾದ ಎರಡು ಶೈವ ಸಂಪ್ರದಾಯಗಳು: ಇಂಗ್ಲಿಷ್ ಮೂಲ: ಡೆವಿಡ್ ಎನ್.ಲಾರೆಂಜನ್, ಕನ್ನಡಕ್ಕೆ ಅನುವಾದ: ವಿರೂಪಾಕ್ಷ ಕುಲಕರ್ಣಿ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಬೆಂಗಳೂರು, ೨೦೦೫

೧೧. ಕುರುಬರ ಗುರು ಒಡೆಯರು: (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ವಿಕಾಸ ಪ್ರಕಾಶನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ.ಪ್ರಕಾಶನಗರ, ಹೊಸಪೇಟೆ, ೨೦೦೭

೧೨. ಕುರುಬರ ಗುರು ಒಡೆಯರು: ಸಾಂಸ್ಕೃತಿಕ ಅಧ್ಯಯನ: ಡಾ. ಬಿ.ಜಿ.ಬಿರಾದಾರ, ಹಸ್ತಪ್ರತಿ ವಿಭಾಗ, ಭಾಷಾ ನಿಕಾಯ, ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ, ೨೦೦೭

೧೩. ಕುರುಬರ ಗುರು ರೇವಣಸಿದ್ಧ: ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ದರ್ಗಾ, ಸೆಂಟ್ರಲ್ ಜೈಲ ಸಮೀಪ, ವಿಜಾಪುರ, ೨೦೦೯

೧೪. ಕುರುಬರ ಚರಿತ್ರೆ: ವಿ.ಆರ್.ಹನುಮಂತಯ್ಯ, (ಸಂ) ಸುಧಾಕರ ಪ್ರತಿಭಾ ಪ್ರಕಾಶನ, ಎಚ್.ಐ.ಜಿ. ೨೨, ಎ ಅಂಡ್ ಬಿ ಬ್ಲಾಕ್, ಆಂದೋಲನ ವೃತ್ತ, ರಾಮಕೃಷ್ಣನಗರ, ಮೈಸೂರು, ೧೯೯೬

೧೫. ಕುರುಬ ಜನಪದ (ಸಂ) ಚನ್ನಪ್ಪ ಕಟ್ಟಿ, ಆರ್.ಎಸ್.ವಾಡೇದ ಕನಕ ಜಯಂತ್ಯುತ್ಸವ ಸಮಿತಿ, ಸಿಂದಗಿ, ಜಿ. ವಿಜಾಪುರ, ೧೯೯೭

೧೬. ಕುರುಬರ ಹೆಜ್ಜೆಗಳು: ಒಂದು ಅಧ್ಯಯನ, ಚಂದ್ರಕಾಂತ ಬಿಜ್ಜರಗಿ, ಶೈಲಚಂದ್ರ ಪ್ರಕಾಶನ, ದರ್ಗಾ, ಸೆಂಟ್ರಲ್ ಜೈಲ ಸಮೀಪ, ವಿಜಾಪುರ, ೨೦೦೬

೧೭. ಕೊಣ್ಣೂರ ಶ್ರೀ ಕರಿಸಿದ್ದೇಶ್ವರ: ಶ್ರೀರಾಮ ಇಟ್ಟಣ್ಣವರ, ಪ್ರ. ನಾಗಪ್ಪ ಪೂಜೇರಿ, ಬೀಳಗಿ, ಜಿ. ವಿಜಾಪುರ ೧೯೯೫

೧೮. ಕಂಠಪತ್ರ: ಡಾ.ಎಫ್.ಟಿ.ಹಳ್ಳಿಕೇರಿ, ವಿಕಾಸ ಪ್ರಕಾಶನ, ಶೋಧನ, ಶಿಕ್ಷಕರ ಬಡಾವಣೆ, ಎಂ.ಪಿ.ಪ್ರಕಾಶನಗರ, ಹೊಸಪೇಟೆ

೧೯. ಜನಪದ ಮಹಾಕಾವ್ಯಗಳು: ಡಾ. ಅಂಬಳಿಕೆ ಹಿರಿಯಣ್ಣ, ಪ್ರಸಾರಾಂಗ, ಕನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೮

೨೦. ಜನಪದ ಹಾಲುಮತ ಮಹಾಕಾವ್ಯ: (ಸಂ) ವೀರಣ್ಣ ದಂಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ೨೦೦೦

೨೧. ಜಾನಪದ: ಸ್ವರೂಪ ಮತ್ತು ಸಾಹಿತ್ಯ: ಪ್ರೊ. ಡಿ.ಲಿಂಗಯ್ಯ, ಡಾ. ಕೆ.ಆರ್.ಸಂಧ್ಯಾರೆಡ್ಡಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೧೯೯೭

೨೨. ತಗರ ಪವಾಡ: (ಸಂ) ಎಂ.ಎಂ.ಕಲಬುರ್ಗಿ, ಸಿ.ಕೆ.ಪರಶುರಾಮಯ್ಯ, ಎಫ್.ಟಿ.ಹಳ್ಳಿಕೇರಿ, ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಮಹೇಂದ್ರಕರ ವೃತ್ತ, ಗದಗ, ೨೦೦೪

೨೩. ತೇಜೋಮಯ ಹಾಲುಮತ ಪುರಾಣ: (ಸಂ) ಎನ್.ಬಿ.ತೋಂಟಾಪುರ, ಶಿವಪದ್ಮ ಪ್ರಕಾಶನ, ಗಾಂಧಿನಗರ, ಬೆಂಗಳೂರು ೫೬೦೦೦೯, ೧೯೯೦

೨೪. ನಾಥ ಸಂಪ್ರದಾಯದ ಇತಿಹಾಸ: ಮರಾಠಿ ಮೂಲ: ಡಾ. ರಾಮಚಂದ್ರ ಚಿಂತಾಮಣಿ ಢೇರೆ, ಕನ್ನಡ ಅನುವಾದ: ಚಂದ್ರಕಾಂತ ಪೋಕಳೆ, ಕನ್ನಡ ಜಾಗೃತಿ ಪುಸ್ತಕ ಮಾಲೆ, ಅಲ್ಲಮ ಪ್ರಭು ಜನಕಲ್ಯಾಣ ಸಂಸ್ಥೆ, ಸಿದ್ಧ ಸಂಸ್ಥಾನ ಮಠ. ಚಿಂಚಣಿ, ತಾ. ಚಿಕ್ಕೋಡಿ, ಜಿ. ಬೆಳಗಾವಿ, ೨೦೦೪

೨೫. ಭಾರತದ ಕುರುಬರು-: ರಾಜಪರಂಪರೆಯ ಬುಡಕಟ್ಟು: ಡಾ. ಶ್ಯಾಮಸಿಂಗ್ ಶಶಿ, ಕನ್ನಡಕ್ಕೆ: ಡಾ. ಬಿ.ಕೆ.ರವಿ, ಅಂಕಿತ ಪುಸ್ತಕ, ೫೩, ಶ್ಯಾಮಸಿಂಗ್ ಕಾಂಪ್ಲೆಕ್ಸ್, ಗಾಂಧಿ ಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು, ೨೦೦೫

೨೬. ಭಾರತೀಯ ದರ್ಶನಗಳು: ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯ, ಕನ್ನಡಕ್ಕೆ: ಬಿ.ವಿ.ಕಿಕ್ಕಿಲ್ಲಾಯ, ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರಿಸೆಂಟ್ ರಸ್ತೆ, ಬೆಂಗಳೂರು, ೧೯೯೬

೨೭. ರಾಘವಾಂಕ ವಿರಚಿತ ಸಿದ್ಧರಾಮ ಚಾರಿತ್ರ: ಗದ್ಯಾನುವಾದ: ಆರ್.ಎಸ್.ರಾಮರಾವ್, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು, ೧೯೯೯

೨೮. ರೇವಣಸಿದ್ಧ- ಒಂದು ಅಧ್ಯಯನ: ಡಾ. ಶಕುಂತಲಾ ಗೋಪಶೆಟ್ಟಿ, ಅಪೂರ್ವ ಪ್ರಕಾಶನ, ಜವಾಹರ ನಗರ ರಾಯಚೂರು, ೨೦೦೬

೨೯. ರೇವಣಾರಾಧ್ಯ ಲೀಲಾ ಸಂಯುಕ್ತ ಹಾಲ್ಮತೋತ್ತೇಜಕ ಪುರಾಣವು: ರಸ್ತಾಪುರ ಭೀಮಕವಿ, ಶಶಿಕಲಾ ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೨

೩೦. ಲಿಂಗಾಯತ ಒಳಪಂಡಗಳ ದಾಖಲೀಕರಣ: (ಸಂ) ಡಾ. ಎಂ.ಎಂ.ಕಲಬುರ್ಗಿ, ಚಿತ್ತರಗಿ ಶ್ರೀವಿಜಯ ಮಹಾಂತೇಶ ಎಜುಕೇಶನ್ ಸೊಸಾಯಿಟಿ, ಇಲಕಲ್ಲ, ತಾ. ಹುನಗುಂದ ಜಿ.ಬಾಗಿಲಕೋಟೆ, ೨೦೦೯

೩೧. ಶಿವಲಿಂಗ ಕವಿಯ ಅಮುಗಿದೇವಯ್ಯಗಳ ಸಾಂಗತ್ಯ: (ಸಂ) ಡಾ. ಎಚ್.ತಿಪ್ಪೇರುದ್ರ ಸ್ವಾಮಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲಾ, ರಾಮಾನುಜ ರಸ್ತೆ, ಮೈಸೂರು, ೧೯೬೫

೩೨. ಸಿದ್ಧಮಂಕ ಚರಿತೆ: (ಸಂ) ಡಾ. ಎಂ.ಎಂ.ಕಲಬುರ್ಗಿ ಡಾ. ವೈ.ಸಿ.ಭಾನುಮತಿ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು, ತೋಂಟದಾರ್ಯ ಸಂಸ್ಥಾನ ಮಠ, ಗದಗ, ೨೦೦೪

೩೩. ಸಿದ್ಧರ ನಾಮಾವಳಿ ಮತ್ತು ೧೧ ಮಂಗಳಾರತಿ: ಶ್ರೀ ರೇವಣಸಿದ್ದ ಬ.ದೊಡ್ಡಮನಿ, ನಾಗಣಸೂರ, ತಾ. ಅಕ್ಕಲಕೋಟ, ಜಿ. ಸೋಲಾಪುರ

೩೪. ಸಿದ್ಧ ಸಾಹಿತ್ಯ: ಮ.ಸು.ಕೃಷ್ಣಮೂರ್ತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨

೩೫. ಸಿದ್ಧಸಿರಿ, (ಶ್ರೀ ಅಮೋಘಸಿದ್ಧೇಶ್ವರ ಚರಿತಾಮೃತ, ಸಂಪುಟ ೧): ಶ್ರೀ ಮದಗೊಂಡ ಧೋಂಡಪ್ಪ ಒಡೆಯರ, ಶ್ರೀ ಅಮೋಘಸಿದ್ಧೇಶ್ವರ ಪ್ರಕಾಶನ, ಶಿರವಳ, ತಾ. ದಕ್ಷಿಣ ಸೋಲಾಪುರ , ೧೯೯೭

೩೬. ಸುಕ್ಷೇತ್ರ ಹುಲಜಂತಿ ಮಹಿಮಾಂತಕ ಮಹಾಲಿಂಗರಾಯರ ಹಾಲುಮತ ಪುರಾಣ: ಅಡಿವೆಪ್ಪ ಮಾಳಪ್ಪ ಸೋಮತ್ತೆ

೩೭. ಸಂಪೂರ್ಣ ಹಾಲುಮತ ಪುರಾಣ ಭಾಗ-೧, ಲಕ್ಷ್ಮಣ ಪಟಾತ, ಪಂಚಾಕ್ಷರಿ ಪ್ರಕಾಶನ, ಮಮದಾಪುರ, ತಾ. ಗೋಕಾಕ, ೨೦೦೧

೩೮. ಹರಿಹರನ ರಗಳೆಗಳು: (ಸಂ) ಎಂ.ಎಂ.ಕಲಬುರ್ಗಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೩೯. ಹಾಲಕೆನೆ (ಕುರುಬ ಜನಾಂಗದ ಸಾಂಸ್ಕೃತಿಕ ಅಧ್ಯಯನಗಳು) (ಸಂ) ಡಾ. ಶ್ರೀರಾಮ ಇಟ್ಟಣ್ಣವರ, ಪ್ಪಿ.ಡಿ.ವಸ್ತ್ರದ, ಚನ್ನಪ್ಪ ಕಟ್ಟಿ, ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆ, ವಿಜಾಪುರ, ೨೦೦೨

೪೦. ಹಾಲುಮತ ಕುರುಬ ಜನಾಂಗದ ಇತಿಹಾಸ: ಪ್ರೊ. ಒಡೆಯೆರ ಡಿ. ಹೆಗ್ಗಡೆ, ಅಖಿಲಾ ಏಜೆನ್ಸೀಸ್,ಅಂಜನಾದ್ರಿ, ರೇಣುಕಾಚಾರ್ಯ ದೇವಸ್ಥಾನ ರಸ್ತೆ, ಮೈಸೂರು, ೨೦೦೫

೪೧. ಹಾಲುಮತದ ಚರಿತ್ರೆ: ಯಲ್ಲನಗೌಡ ಎಫ್.ಅತ್ತಿಕೊಳ್ಳ (ಸಂ) ಡಾ. ವಾಯ್.ಕೆ.ಗುಂಡಕರ್ಜಗಿ, ವಿಜೇತ ಪ್ರಕಾಶನ, ಸ್ಟೇಶನ್ ರೋಡ್, ಮಹೇಂದ್ರಕರ ವೃತ್ತ, ಗದಗ, ೨೦೦೫

೪೨. ಹಾಲುಮತದ ಪುರಾಣವು: ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಮಹೇಂದ್ರಕರ ವೃತ್ತ, ಗದಗ, ೧೯೯೯

೪೩. ಹಾಲಮತದ ಮೂಲಗುರು ರೇವಣಸಿದ್ಧರು: ಶಂಕರ ಶಿ.ಕುಂಬಾರ, ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಮಹೇಂದ್ರಕರ ವೃತ್ತ, ಗದಗ, ೨೦೦೬-೦೭

೪೪. ಹಾಲುಮತ ದರ್ಶನ: ಶಂ.ಬಾ.ಜೋಶಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೫. ಹಾಲುಮತದ ಹುಟ್ಟು: ಬೋನಾ ಬಸವರಾಜ, ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಮಹೇಂದ್ರಕರ ವೃತ್ತ, ಗದಗ, ೨೦೦೦

೪೬. ಹಾಲುಮತಸ್ತರು: ಬ.ಪ.ನಾಯ್ಕರ, ವಿದ್ಯಾನಿಧಿ ಪ್ರಕಾಶನ, ಸ್ಟೇಶನ್ ರೋಡ್, ಮಹೇಂದ್ರಕರ ವೃತ್ತ, ಗದಗ ೨೦೦೩

೪೭. ಹೇಳಕೀ ಮಾಡ್ಯಾರ ಒಡೆಯರು, (ಸಂ) ಡಾ. ಎಂ.ಎಂ.ಪಡಶೆಟ್ಟಿ, ನೆಲೆ ಪ್ರಕಾಶನ, ಸಿಂದಗಿ, ೧೯೯೩

English

1. google search wikipedia@legend
2. Safis of Bijapur: Richard Manwel Eaton
3. shivabhakti.com
4. wiki/bijapur-district # sufism-in-bijapur
5. Kapalika wikipedia- the free encyclopedia page
6. History and Philosaphy of Lingayat Religion: M.R.Sakhare
7. Mahasiddha wikipedia
8. http://www.himalayanmart.com/masks
9. http:// in.wikipedia.org/wiki/masks

ವಕ್ತೃಗಳ ವಿವರ

ಕ್ರ.ಸಂ.	ಹೆಸರು	ವಯಸ್ಸು	ವೃತ್ತಿ	ಗ್ರಾಮ	ತಾಲೂಕ	ಜಿಲ್ಲೆ
೦೧.	ಅವಧೂ ಬನಸಿದ್ಧ ಹಿರಕೂರ	೭೨	ಹಿರಕೂರ/ಕೃಷಿ	ಹತ್ತೂರ	ದಕ್ಷಿಣ ಸೋಲಾಪುರ	ಸೋಲಾಪುರ
೦೨.	ಅಮೋಗೆಪ್ಪ ಮಾದಪ್ಪ ಒಡೆಯರ	೬೮	ಒಡೆಯರ/ಕೃಷಿ	ಕುಂಚನೂರ	ಜಮಖಂಡಿ	ಬಾಗಲಕೋಟೆ
೦೩.	ಶೀಲಿಸಿದ್ಧ ಮಾರಾಯರು ಒಡೆಯರ	೪೦	ಒಡೆಯರ/ಕೃಷಿ	ಹತ್ತೂರು	ದಕ್ಷಿಣ ಸೋಲಾಪುರ	ಸೋಲಾಪುರ
೦೪.	ಶಾವರಸಿದ್ಧ ಧರ್ಮಣ್ಣ ಜಳಗೌಡರ	೬೫	ಒಡೆಯರ/ಕೃಷಿ	ಅಚೇಗಾವಿ	ದಕ್ಷಿಣ ಸೋಲಾಪುರ	ಸೋಲಾಪುರ
೦೫.	ಮುತ್ತಪ್ಪ ಸೋಮಣ್ಣ ಪೂಜಾರಿ	೫೦	ಕೃಷಿ	ರೇವತಗಾವ	ಇಂಡಿ	ವಿಜಾಪುರ
೦೬.	ಸಂಗಯ್ಯ ಗುರುವಿನ	೪೫	ಒಡೆಯರ/ಕೃಷಿ	ಸರೂರ	ಮುದ್ದೇಬಿಹಾಳ	ವಿಜಾಪುರ
೦೭.	ಕಾಡಯ್ಯ ಗುರುವಿನ	೪೮	ಒಡೆಯರ/ಕೃಷಿ	ಸರೂರ	ಮುದ್ದೇಬಿಹಾಳ	ವಿಜಾಪುರ
೦೮.	ಸಿದ್ಧಯ್ಯ ಗುರುಮಠ	೭೨	ಒಡೆಯರು/ವ್ಯಾಪಾರ	ಕಲಘಟಗಿ	ಕಲಘಟಗಿ	ಧಾರವಾಡ
೦೯.	ಲಕ್ಷ್ಮಣ ಐದೊಡ್ಡಿ	೭೮	ಒಡೆಯರ/ಕೃಷಿ	ಬೆಳಗಲಿ	ಮುಧೋಳ	ಬಾಗಲಕೋಟೆ
೧೦.	ಸಿದ್ಧಗೊಂಡ ಹಕ್ಕೆ	೫೫	ಡೊಳ್ಳಿನ ಹಾಡಿಕೆ/ಕೃಷಿ	ಮಂದ್ರೂಪ	ದಕ್ಷಿಣ ಸೋಲಾಪುರ	ಸೋಲಾಪುರ
೧೧.	ಮಹಾದೇವ ವಿಠಲ ಬಡಚಿ	೭೫	ಒಡೆಯರ/ಕೃಷಿ	ಬೆಳಗಲಿ	ಮುಧೋಳ	ಬಾಗಲಕೋಟೆ

೧೨.	ಚಿದಾನಂದ ಸಿದ್ದಪ್ಪ ಒಡೆಯರ	೬೨	ಒಡೆಯರ/ಕೃಷಿ	ಕೆರೂರು	ಚಿಕ್ಕೋಡಿ	ಬೆಳಗಾವಿ
೧೩.	ಬಸವಣ್ಣೆಪ್ಪ ಚಿ. ಒಡೆಯರ	೩೦	ಒಡೆಯರ/ಕೃಷಿ	ಕೆರೂರು	ಚಿಕ್ಕೋಡಿ	ಬೆಳಗಾವ
೧೪.	ಕಲ್ಲಪ್ಪ ಭೂತಾಳ ಪೂಜಾರಿ	೫೦	ಕೃಷಿ	ಕಲ್ಲೂರು	ಜೇವರಗಿ	ಗುಲಬರ್ಗಾ
೧೫.	ಶಿವಶರಣಪ್ಪ ಶಿ. ಒಡೆಯರ	೪೫	ಒಡೆಯರ/ಕೃಷಿ	ಕಲ್ಲೂರು	ಜೇವರಗಿ	ಗುಲಬರ್ಗಾ
೧೬.	ಧರ್ಮರಾಜ ಓಗೆಪ್ಪ ಒಡೆಯರ	೫೦	ಒಡೆಯರ/ಕೃಷಿ	ಕಲ್ಲೂರು	ಜೇವರಗಿ	ಗುಲಬರ್ಗಾ
೧೭.	ಭೀಮಣ್ಣ ಅಮೋಗೆಪ್ಪ ತಂಬದ	೮೬	ನಿವೃತ್ತ ಶಿಕ್ಷಕರು	ಲಕ್ಷ್ಮೀನಗರ	ಹತ್ತೂರೇ ವಸ್ತಿ	ಸೋಲಾಪುರ
೧೮.	ಶಿವಲಿಂಗ ಅಮೋಗೆಪ್ಪ ತಂಬದ	೮೬,	ನಿವೃತ್ತ ಪಿ.ಎಸ್.ಆಯ್.	ಲಕ್ಷ್ಮೀನಗರ	ಹತ್ತೂರೇ ವಸ್ತಿ	ಸೋಲಾಪುರ
೧೯.	ಸಿದ್ದಪ್ಪ ಸಿದ್ರಾಮಪ್ಪ ಒಡೆಯರ	೭೫	ಒಡೆಯರ/ಕೃಷಿ	ಚಬನೂರ	ಬಸವನಬಾಗೇವಾಡಿ	ವಿಜಾಪುರ
೨೦.	ಸೋಮಪ್ಪ ಸಿದ್ರಾಮಪ್ಪ ಒಡೆಯರ	೫೦	ಒಡೆಯರ/ನೌಕರಿ	ಚಬನೂರು	ಬಸವನಬಾಗೇವಾಡಿ	ವಿಜಾಪುರ
೨೧.	ಬೀರಪ್ಪ ಮಾಳಪ್ಪ ಹಿರೇಕುರುಬರ	೬೫	ಈರಗಾರಕಿ/ಕೃಷಿ	ಚಬನೂರು	ಬಸವನಬಾಗೇವಾಡಿ	ವಿಜಾಪುರ
೨೨.	ವೈ.ಸಿ.ಹಿರೇಕುರುಬರ	೩೫	ಪ್ರೌಢ ಶಾಲಾ ಶಿಕ್ಷಕ	ಚಬನೂರು	ಬಸವನಬಾಗೇವಾಡಿ	ವಿಜಾಪುರ
೨೩.	ಅಣ್ಣಾರಾವ ವಿಠಲ ಅಜಾಒಡೆಯರ	೬೦	ಒಡೆಯರ/ಕೃಷಿ	ಭಂಡಾರಕವಟೆ	ದಕ್ಷಿಣ ಸೋಲಾಪುರ	ಸೋಲಾಪುರ
೨೪.	ಸುಲ್ತಾನ ಸೋಮಣ್ಣ ಪೂಜಾರಿ	೫೫	ಒಡೆಯರ/ಕೃಷಿ	ಭಂಡಾರಕವಟೆ	ದಕ್ಷಿಣ ಸೋಲಾಪುರ	ಸೋಲಾಪುರ
೨೫.	ಅಮಸಿದ್ಧ ಶಿವಯೋಗಿ ಪೂಜಾರಿ	೫೦	ಪೂಜಾರಿ	ಭಂಡಾರಕವಟೆ	ದಕ್ಷಿಣ ಸೋಲಾಪುರ	ಸೋಲಾಪುರ

೨೬.	ಶಿವಗೊಂಡ ಬಾಬಾಗೌಡ ಪಾಟೀಲ	೬೦	ಪೂಜಾರಿಕೆ/ಕೃಷಿ	ತೆರವಾಡ	ಶಿರೋಳ	ಕೋಲಾಪುರ
೨೭.	ತುಕಾರಾಮ ಹೊನ್ನಸಿದ್ಧ ಪೂಜಾರಿ	೫೦	ಪೂಜಾರಿಕೆ/ಕೃಷಿ	ತೆರೆವಾಡ	ಶಿರೋಳ	ಕೋಲಾಪುರ
೨೮.	ಜಗನ್ನಾಥ ರಾ. ಪೂಜಾರಿ	೪೦	ಪೂಜಾರಿಕೆ/ಕೃಷಿ	ತೆರೆವಾಡ	ಶಿರೋಳ	ಕೋಲಾಪುರ
೨೯.	ಬಿ.ಎಂ.ಬಿರಾದಾರ	೨೪	ಹಂಚಿನಾಳ	ಸಿಂದಗಿ	ಸಿಂದಗಿ	ವಿಜಾಪುರ
೩೦.	ಅವತಾರಿಬಿಳಿಯಾನಿ ಒಡೆಯರ	೫೦	ಒಡೆಯರ/ಕೃಷಿ	ಮೊರಬ	ರಾಯಬಾಗ	ಬೆಳಗಾವಿ
೩೧.	ಅಮೋಘಸಿದ್ಧ ಬಿಳಿಯಾನಿ ಒಡೆಯರ	೬೦	ನ್ಯಾಯಾಧೀಶರು, ಬೆಂಗಳೂರು	ಮೊರಬ	ರಾಯಬಾಗ	ಬೆಳಗಾವಿ
೩೨.	ಸಿದ್ಧಗೌಡ ಮಲ್ಲಪ್ಪ ಒಡೆಯರ	೫೦	ಒಡೆಯರ/ಕೃಷಿ	ಐನಾಪುರ	ಅಥಣಿ	ಬೆಳಗಾವಿ
೩೩.	ಮದಗೊಂಡ ಬಿಳಿಯಾನಿ ಒಡೆಯರ	೫೫	ಒಡೆಯರ/ಕೃಷಿ	ಉಮದಿ	ಜತ್ತ	ಸಾಂಗಲಿ
೩೪.	ಅಮಸಿದ್ಧ ಮುತ್ತಪ್ಪ ಕೊನೇಗೋಳ	೪೦	ಡ್ರೈವರ್/ಹಾಡಿಕೆ	ಕುಂಚನೂರ	ಜಮಖಂಡಿ	ಬಾಗಲಕೋಟೆ
೩೫.	ಮಾದೇವ ಅಮೋಗೆಪ್ಪ ಒಡೆಯರ	೪೦	ಒಡೆಯರ/ಕೃಷಿ	ಕುಂಚನೂರ	ಜಮಖಂಡಿ	ಬಾಗಲಕೋಟೆ
೩೬.	ಸೋಮಲಿಂಗ ಅಮೋಗೆಪ್ಪ ಒಡೆಯರ	೩೦	ಒಡೆಯರ/ಕೃಷಿ	ಕುಂಚನೂರು	ಜಮಖಂಡಿ	ಬಾಗಲಕೋಟೆ
೩೭.	ಬಾಳಪ್ಪ ಮಾದೇವಪ್ಪ ಒಡೆಯರ	೫೦	ಒಡೆಯರ/ಕೃಷಿ	ಕುಂಚನೂರು	ಜಮಖಂಡಿ	ಬಾಗಲಕೋಟೆ
೩೮.	ಅಮ್ಮಣ್ಣ ಶಿವಪ್ಪ ಒಡೆಯರ	೨೮	ಒಡೆಯರ/ಕೃಷಿ	ಕುಂಚನೂರು	ಜಮಖಂಡಿ	ಬಾಗಲಕೋಟೆ
೩೯.	ವಿಠಲ ಅಮಸಿದ್ಧ ಬಿರಾದಾರ	೨೫	ಒಡೆಯರ/ಕೃಷಿ	ಭೀವರಗಿ	ಜತ್ತ	ಸಾಂಗಲಿ

೪೦.	ಶಾಮರಸಿದ್ಧ ಧರ್ಮಣ್ಣ ಜಳಗೌಡರ	೪೫	ಒಡೆಯರ/ಕೃಷಿ	ಅಚೇಗಾವಿ	ದಕ್ಷಿಣ ಸೋಲಾಪುರ	ಸೋಲಾಪುರ
೪೧.	ಅರವಿಂದ ನಾಡಗೌಡ	೩೫	ಒಡೆಯರ/ಕೃಷಿ	ಅಚೇಗಾವಿ	ದಕ್ಷಿಣ ಸೋಲಾಪುರ	ಸೋಲಾಪುರ
೪೨.	ಸೋಮಲಿಂಗ ತಿಪ್ಪಣ್ಣ ಬಿರಾದಾರ	೫೦	ಒಡೆಯರ/ಕೃಷಿ	ಭೀವರಗಿ	ಜತ್ತ	ಸಾಂಗಲಿ
೪೩.	ಸಂಕಯ್ಯ ಗುರಯ್ಯ ಒಡೆಯರ	೪೦	ಒಡೆಯರ/ಕೃಷಿ	ಸಿದ್ದಾಪುರ	ಬೀಳಗಿ	ಬಾಗಲಕೋಟೆ
೪೪.	ಭೂತಪ್ಪ ಒಡೆಯರ	೫೦	ಒಡೆಯರ/ಕೃಷಿ	ಉದಗಟ್ಟಿ	ಗೋಕಾಕ	ಬೆಳಗಾವಿ
೪೫.	ಮದಗೊಂಡ ಮಲ್ಲಪ್ಪ ಬಾಳಗೆ	೫೦	ಒಡೆಯರ/ಕೃಷಿ	ಉಮದಿ	ಜತ್ತ	ಸಾಂಗಲಿ
೪೬.	ಸಿದ್ಧಣ್ಣ ಮುತ್ತಗಿ	೪೦	ಕೃಷಿ	ಕಲ್ಲೂರ	ಜೇವರಗಿ	ಗುಲಬರ್ಗಾ
೪೭.	ಯಶವಂತ ಶಿವ ಮಲ್ಲೇದ	೪೦	ಕೃಷಿ	ಕಲ್ಲೂರ	ಜೇವರಗಿ	ಗುಲಬರ್ಗಾ
೪೮.	ಸಿದ್ಧಲಿಂಗಪ್ಪ ಒಡೆಯರ	೪೦	ಒಡೆಯರ/ಕೃಷಿ	ಕೆಮ್ಮನಕೋಲ	ಗೋಕಾಕ	ಬೆಳಗಾವಿ
೪೯.	ಧನಪಾಲ ಜಿತ್ತು ಒಡೆಯರ	೬೦	ಒಡೆಯರ/ಕೃಷಿ	ಬ್ರಹ್ಮನಾಳ	ಸಾಂಗಲಿ	ಸಾಂಗಲಿ
೫೦.	ಶ್ರೀಪಾಲ ಬಾಬುರಾವ ಒಡೆಯರ	೫೫	ಒಡೆಯರ	ಬ್ರಹ್ಮನಾಳ	ಸಾಂಗಲಿ	ಸಾಂಗಲಿ
೫೧.	ಮಾನಸಿದ್ಧ ಚಂದ್ರಾಮ ಶಿರಗಟ್ಟಿ	೫೦	ಒಡೆಯರ/ಕೃಷಿ	ಉಮದಿ	ಜತ್ತಿ	ಸಾಂಗಲಿ
೫೨.	ಮಲಕಾರಿಸಿದ್ಧ ಮುತ್ತಪ್ಪ ಒಡೆಯರ	೪೦	ಒಡೆಯರ/ಕೃಷಿ	ಕುಂಚನೂರ	ಜಮಖಂಡಿ	ಬಾಗಲಕೋಟೆ
೫೩.	ಶ್ರೀಶೈಲ ಚೆನಮಲ್ಲಪ್ಪ ಜಕನೂರು	೫೫	ಹಾಡುಗಾರಿಕೆ/ಕೃಷಿ	ಕುಂಚನೂರ	ಜಮಖಂಡಿ	ಬಾಗಲಕೋಟೆ

೫೪.	ಶಿವರಾಯಪ್ಪ ಬಿಳ್ಯಾನಿ ಬಿರಾದಾರ	೫೫	ಒಡೆಯರಕೃಷಿ	ಭೀವರಗಿ	ಜತ್ತ	ಸಾಂಗಲಿ
೫೫.	ರಾಜುಗೌಡ ಬಿರಾದಾರ	೩೫	ಹಾಡುಗಾರಿಕೆ/ಕೃಷಿ	ಕೊಳೂರಗಿ	ಇಂಡಿ	ವಿಜಾಪುರ
೫೬.	ಲಕ್ಕಪ್ಪ ಮೀಸೆ	೫೦	ಹಾಡುಗಾರಿಕೆ/ನೌಕರಿ	ಇಂಗಳೇಶ್ವರ	ಬಸವನಬಾಗೇವಾಡಿ	ವಿಜಾಪುರ
೫೭.	ಸೋಮಲಿಂಗ ಬಿಜ್ಜರಗಿ	೪೫	ಹಾಡುಗಾರಿಕೆ/ಕೃಷಿ	ಬಿಜ್ಜರಗಿ	ವಿಜಾಪುರ	ವಿಜಾಪುರ
೫೮.	ಮಹಾದೇವ ಅಮ್ಮೋಗಿ ಒಡೆಯರ	೫೫	ಒಡೆಯರ/ಹಾಡುಗಾರಿಕೆ	ಉಮದಿ	ಜತ್ತ	ಸಾಂಗಲಿ
೫೯.	ಸೋಮಣ್ಣ ಅಮಸಿದ್ಧ ಒಡೆಯರ	೫೦	ಒಡೆಯರ/ಕೃಷಿ	ಉಮದಿ	ಜತ್ತ	ಸಾಂಗಲಿ
೬೦.	ಸೋಮಣ್ಣ ಸಿದ್ಧಪ್ಪ ಅಮೋಗಿ ಒಡೆಯರ	೪೫	ಒಡೆಯರ/ಕೃಷಿ	ಉಮದಿ	ಜತ್ತ	ಸಾಂಗಲಿ
೬೧.	ರೇವಣಪ್ಪ ಸೋಮಣ್ಣ ಒಡೆಯರ	೪೫	ಒಡೆಯರ/ಕೃಷಿ	ಉಮದಿ	ಜತ್ತ	ಸಾಂಗಲಿ
೬೨.	ನಾಗಣ್ಣ ಪೂಜಾರಿ	೪೦	ಹಾಡುಗಾರಿಕೆ/ಕೃಷಿ	ಧವಳಾರ	ಸಿಂದಗಿ	ವಿಜಾಪುರ
೬೩.	ಮುದಕಪ್ಪ ಮುತ್ತ್ಯಾ ಒಡೆಯರ	೩೫	ಒಡೆಯರ/ಕೃಷಿ	ಚಬನೂರ	ಬಸವನ ಬಾಗೇವಾಡಿ	ವಿಜಾಪುರ

ಹರಕೆಯ ಹಾಡು : ಒಂದು

ಹಾಡಿದವರು: ರಾಜುಗೌಡ ಬಿರಾದಾರ, ಕೊಳೂರಗಿ

ದೇವರು ಉಂಡೇನಂದ ಕಾಲಕ
ಭಗತಗನುವಾನಿಲ್ಲೇನೋ
ಭಗತಾ ಉಣಿಸೇನಂದಕಾಲಕ
ದೇವರಿಗನುವಾನಿಲ್ಲೇನೋ
ದೇವರ ಮನವೋ ಭಗತರ ಮನವೋ
ಇಂದಿಗರ ಕೂಡಿ ಬಂದಾವೋ

ಭಾವುಳ್ಳ ಭಗತೋ ನಮ್ಮಯ್ಯಾ
ಅಲ್ಲಿ ತಾವೊಂದ ತಯ್ಯರಾದಾನೋ
ಜಾಮ ಜಳಕ ಮಾಡ್ಯಾನ ಭಗತ
ನೇಮ ನಿಷ್ಠಿ ಮಾಡ್ಯಾನೋ
ಭಾವುಳ್ಳ ಭಗತೋ ನಮ್ಮಯ್ಯ
ಅವ ಏತದ ಮನಿಗಳ ಬಿಟ್ಟಾನೋ

ರಾಜಬೀದಿಲಿ ಹಾಯ್ದಾನ ಭಗತ
ಧರ್ಮರ ಓಣೇಲೈದಾನೋ
ಧರ್ಮರ ಓಣೇಲಿ ಹಾಯ್ದಾನ ಭಗತ
ಗುರುವಿನ ಗುಡಿಗೆ ಬಂದಾನೋ

ಯೋಗಿ ನನ್ನಮ್ಮೊಗಿ ಸಿದ್ಧಗ
ಅವ ಕರಿಯಪಾಲಿ ಬಂದಾನೋ

ಯೋಗಿ ಅಮ್ಮೋಗಿ ಸಿದ್ದನೋ
ಆಶೀರ್ವಾದನ ಕೊಟ್ಟಾನೊ

ಭಾವುಳ್ಳ ಭಗತೋ ನಮ್ಮಯ್ಯಾ
ಅವ ಹಿಡಿದಿರ ಪಾದ ಬಿಟ್ಟಾನೋ
ಪೂಜೆ ಮಾಡೂ ಪುಣ್ಣ್ಯಾಳ್ಳ ಗೌಡಗ
ಕರೆದೇನ ಹೇಳೂತಾನೇನೋ
ಗುರುವಿನ ಭಂಡಾರ ಕೊಟ್ಟಾನ ಭಗತ
ಗೂಳಿಯ ಭಂಡಾರ ಕೊಟ್ಟಾನೋ
ಅವ ಹೊಳ್ಳೆರ ಮನೀಗೆ ಬಂದಾನೋ

ಭಾವುಳ್ಳ ಭಗತೋ ನಮ್ಮಯ್ಯ
ಅವ ನೆರಮನಿ ಹೊರಮನಿ ಕರದಾನೋ
ನೆರಮನಿ ಹೊರಮನಿ ಕರದಾನೋ
ಅವ ಗಳಗಿಯ ಗಾಲಿ ಒಡದಾನೋ
ನುಚ್ಚಕ್ಕಿ ತಯ್ಯಾರನಾದಾವೋ
ಹಿಟ್ಟೆಲ್ಲ ಕಡಿಗ್ಯಾದಾವೋ
ಅಲ್ಲಿ ಅಕ್ಕೆಲ್ಲ ಕಡಿಗ್ಯಾದಾವೋ

ಭಾವುಳ್ಳ ಭಗತೋ ನಮ್ಮಯ್ಯ
ಅಲ್ಲಿ ಹೆಣ್ಣಮಗಳಿಗೆ ಕರದಾನೋ
ಬಾರಾ ಬಾರಾ ಏ ನನ್ನ ಮಗಳ
ಗುರುವಿನ ಕರಿಯಲಿ ಹೋಗೂನೋ

ಹೆಣ್ಣಮಗಳ ಹ್ಯಾಮದ ಗೊಂಬಿ
ಜಾಮ ಜಳಕಾ ಮಾಡ್ಯಾಳೋ
ಜಾಮ ಜಳಕಾ ಮಾಡ್ಯಾಳ ಬಾಲಿ
ನೇಮ ನಿಷ್ಠಿ ಮಾಡ್ಯಾಳೋ

ಸಣ್ಣಗ ಸೀರಿ ಉಟ್ಟಾಳೋ ಬಾಲಿ
ಬಣ್ಣದ ನೇಯ್ಗೆ ಉಟ್ಟಾಳೋ
ವಾರಿಯ ಬೈತಲ ತಗದಾಳೋ
ಸೀರಿಗೆ ಕುಂಕುಮ ತುಂಬ್ಯಾಳೋ
ದೇವರ ಕ್ವಾಣೀ ಒಳಗ್ಯಾನೋ
ಆಕಿ ಕಂಚಾ ಕಳಸಾ ಹೂಡ್ಯಾಳೋ

ಭಾವುಳ್ಳ ಭಗತೋ ನಮ್ಮಯ್ಯಾ
ಅವ ಜಾಮಜಳಕಾ ಮಾಡ್ಯಾನೋ
ಅಡಕೀಯ ಬಣ್ಣದ ದಟ್ಟೇನೋ
ಅವ ತೊಡಿ ತುಂಬ ತಗದುಟ್ಟಾನೋ
ಮುರಗಿ ಹೊಡದಾಗ ಮುಂಡಾಸ ಸುತ್ತ್ಯಾನ
ಗರಿಗರಿ ಶಮನ ಬಿಟ್ಟಾನೋ
ದೇವರ ಮನಿಯ ಒಳಗ್ಯಾನೋ
ಅವ ಕೈಪದ ದೀವಟಗಿ ಹಿಡಿದಾನೋ

ಭಾವುಳ್ಳ ಭಗತೋ ನಮ್ಮಯ್ಯ
ಅವ ನೆರಮನನಿ ಹೊರಮನಿ ತಂದಾನೋ
ಭಾವುಳ್ಳ ಭಗತೋ ನಮ್ಮಯ್ಯ
ಅವ ಏತದ ಮನೆಗೊಳ ಬಿಟ್ಟಾನೋ
ರಾಜ ಬೀದೀಲಿ ಹಾಯ್ದಾನ ಭಗತ
ಧರ್ಮದ ಓಣೇಲೈದಾನೋ

ಪೂಜೆ ಮಾಡುವ ಪುಣ್ಯುಳ್ಳ ಗೌಡ
ತಾವೊಂದು ತಯ್ಯಾರಾದಾನೋ
ತಾವೊಂದ ತಯ್ಯಾರಾದಾನೋ

ಏನ ದಂಡೊಂದ ತಯ್ಯಾರ ಮಾಡ್ಯಾನೋ
ದಂಡೊಂದ ತಯ್ಯಾರ ಮಾಡ್ಯಾನೋ
ತನ ದರಬಾರ ತಯ್ಯಾರ ಮಾಡ್ಯಾನೋ

ಯೋಗಿ ನನ್ನಮ್ಮಗಿಸಿದ್ವಾನೋ
ಅವ ಹಸರ ಬಣ್ಣದ ಗೊಂಡೆನೋ
ಹಸಿರ ಬಣ್ಣದ ಗೊಂಡೇ ಹಿಡದಾನ
ಹಸಿಮಗ ಪಲ್ಲಕ್ಕಿ ಏರ್ಯಾನೋ
ರಾಮರತನದ ಗೊಂಡೆ ಹಿಡದಾನ
ರಾಜಪಲ್ಲಕ್ಕೇರ್ಯಾನೋ
ಹಿಂದೊಂದು ಮುಂದೊಂದ ದಂಡೇನೋ
ಅಲ್ಲಿ ನಡದಂಥ ಪಲ್ಲಕ್ಕೇನೋ
ಊರ ಮೆರವುತ ಹೊಂಟಾನ ಗುರುವ
ದೇಶ ನಡೆಯುತ ಹೊಂಟಾನ

ಯೋಗಿ ನನ್ನಮ್ಮೊಗಿ ಸಿದ್ಧಾನೊ
ಅಲ್ಲಿ ಭಾವುಳ್ಳ ಭಗತನ ಮುನಿಮುಂದೋ
ಒಂದೊಂದ ಹೆಜ್ಜೆ ಒಗದಾರ
ಅಲ್ಲಿ ಒಂದೊಂದ ಮುತ್ತ ಉದರ್ಯಾವೋ
ಬಲಗಾಲ ಮುಂದಿಟ್ಟಾನ ದೇವರ
ಭಾಗ್ಯಕ್ಕೆ ಬಲನಾದಾಮೋ
ಎಡಗಾಲ ಹಿಂದಿಟ್ಟಾನೋ
ಅಲ್ಲಿ ಕೆಡಗಾಲ ಹಿಂದ ಮಾಡ್ಯಾನೋ

ಹಸಿಯ ಜಗಲಿಯ ಮ್ಯಾಲಮದೇವರೋ
ಕರದ ಮೂರತನಾದಾವೋ
ಬನ್ನಿಯೆಲಿಯ ಮ್ಯಾಲಮದೇವರೋ

ಭಾಗ್ಯದ ಗಾಲಿ ಉಂಡಾನೋ
ಲೆಕ್ಕಿಯ ಎಲಿಯ ಮ್ಯಾಲಮದೇವರೋ
ಅಕ್ಕಿಯ ಪಾಯಸುಂಡಾನೋ

ನೆರೆದ ಬಂದ ಹಕ್ಕೇನೋ ಅಲ್ಲಿ
ಹಾಲಹಣ್ಣ ಉಂಡಾವೋ
ಹಾಲಹಣ್ಣ ಉಂಡಾವ ಗಿಳಿಗೋಳ
ಮ್ಯಾಲಗಿಣ್ಣಾ ಉಂಡಾವೋ
ಹಾಲೀಲ ಕೈ ತೋಳದಾವ ಗಿಳಿಗೋಳ
ತುಪ್ಪದಲೆ ಬಾಯಿ ತೊಳದಾವೋ
ತಪ್ಪದಲೆ ಬಾಯಿ ತೊಳದಾವೋ ಅಲ್ಲಿ
ಮ್ಯಾಲ ಕೈತಾಳ ಮುಗದಾಮೋ
ಅಲ್ಲಿ ಮ್ಯಾಗೊಂದ ಹಕ್ಕಿ ಕೂಡ್ಯಾವೋ
ಹಾಲಹಣ್ಣ ಉಂಡೀರ ಗಿಳಿಗೋಳ
ಹೋಳ ಮಗ್ಗಿಲೆ ಮಲಗ್ಯಾವೋ
ಹೋಳ ಮಗ್ಗಿಲೆ ಮಲಗಿದ ಗಿಳಿಗೋಳ
ಪಂಕ ಜ್ಯಾಡಸೆದ್ದಾಮೋ

ನೆರೆದ ಬಂದ ಹಕ್ಕೇನೋ ಅಲ್ಲಿ
ಹರದ ಹೋಗೂ ವ್ಯಾಳ್ಯಾಗೋ
ಹರದ ಹೋಗೂ ವ್ಯಾಳ್ಯಾಗೋ
ಅಲ್ಲಿ ಭಗತಗ ಹರಕೆ ಕೊಟ್ಟಾವೋ

ಆಗಲೆಪ್ಪ ಆಗಲಿ ನಿನ ಮನಿ
ಗಂಧಲೇ ಘನವಾಗಲೋ
ಗಂಧಲೆ ಘನವಾಗಲಿ ನಿನ ಮನಿ
ಗಂಧ ಕಸ್ತೂರ್ಯಾಗಲೋ

ಹೀರಿಯ ಬೆಳ್ಳ್ಯಾಗ ಹಬ್ಬಲಿ ನಿನ ಮನಿ
ಹಿರಿತನಕ ಮೊದಲಾಗಲೋ
ಕಾವಡಿ ಬೆಳ್ಳ್ಯಾಗಿ ಹಬ್ಬಲಿ ನಿನ ಮನಿ
ಗೌಡಕಿ ಪಟ್ಟಗಟ್ಟಲೋ

ಕಟ್ಟಿದ ಕಪ್ಪಲಿ ಕರಿಯಲಿ ನಿನ ಮನಿ
ಮೆಟ್ಟಿದ ಭೂಮಿ ಬೆಳಿಯ್ಯಾಲೋ
ಕಲ್ಲದಾವಣಿ ಹೊಡಿಯಲಿ ನಿನಮನಿ
ಹಬ್ಬಕ್ಕಿ ಎತ್ತಾ ಕಟ್ಟಾಲೋ

ಕಾಮಣ್ಣ ಭೀಮಣ್ಣನಂಥಾ
ಜೋಡೆರಡ ಬಣವಿ ಒಟ್ಟಾಲೋ
ಗಂಗವ್ವ ಗೌರವ್ವನಂಗ
ಜೋಡೆರಡ ಹಗೆಗಳಾಗಲೋ

ಅತ್ತಿ ಸೊಸ್ತೆರಾಗಲಿ ನಿನಮನಿ
ಅತ್ತಿಗೆ ನಾದುನಿ ನಡೆಯಲೋ
ಹೇಮರೆಡ್ಡಿ ಮಲ್ಲಮ್ಮನಂಗ
ಅತ್ತಿಸೊಸ್ತೆರಾಗಲೋ

ನೆರೆದ ಬಂದ ಹಕ್ಕೇನೋ ಅಲ್ಲಿ
ಹರಿದ ಹೋಗೋ ವ್ಯಾಳ್ಯಾಗೋ
ಹರದ ಹೋಗೋ ವ್ಯಾಳ್ಯಾಗೋ ಅಲ್ಲಿ
ಭಗತಗ ಹರಕಿ ಕೊಟ್ಟಾವೋ

ಹರಕೀ ಹಾಡ ಹಾಡಿದವಗ
ಹಂದರದೊಳಗಿನ ಹಗಲೂಟೋ
ಯೋಗಿ ನನ್ನಮ್ಮೋಗಿ ಸಿದ್ಧಾನೋ ಅಲ್ಲಿ

ಭಾವುಳ್ಳ ಭಗತನ ಮನಿಮುಂದೋ

ಭಾವುಳ್ಳ ಭಗತನ ಮನಿಮುಂದೋ ಅಲ್ಲಿ

ಹೋಗಂಬರ್ತಿನಂದಾನೋ

ಭಾವುಳ್ಳ ಭಗತೋ ನಮ್ಮಯ್ಯ

ಅವ ಕಾಲಿಗಿ ಪನ್ನೀರ ಹಾಕ್ಯಾನೋ

ಹರಕೀ ಹಾಡ ಹಾಡಿದವಗ ಹಂದರದೊಳಗಿನ ಹಗಲೂಟೋ

ಹಂದರದೊಳಗಿನ ಹಗಲೂಟೋ ಅಲ್ಲಿ

ಹಾಲತುಪ್ಪೊಂದ ಬಾಯೊಳಗೊ

ಹೊಡಿಯೋ ಡೊಳ್ಳ ಹಿಡಿಯೋ ತಾಳ

ಹೋಗೂಣ ಮುಂದಿನ ರಂಗಕೋ

ದೇವರ ಬಂದಾನ ಘೇ

ಹರಕೆಯ ಹಾಡು : ಎರಡು

ಹಾಡಿದವರು: ಜಕ್ಕಪ್ಪ ಮೀಸೆ, ಇಂಗಳೇಶ್ವರ

ಭಾವುಳ್ಳ ಭಕ್ತನ ಮನಿಮುಂದಯ್ಯ ರಾಯ ಸಕ್ಕರಿಯ ಮರಹುಟ್ಟಿ
ರಾಯ ಸಕ್ಕರಿಯ ಮರಕಯ್ಯ ರಾಜದ್ಹಕ್ಕಿಗಳು ಮೆರೆದಾವೋ
ಪಕ್ಕವಿಲ್ಲದ ಪಾರಿವಾಳ ಲೆಕ್ಕವಿಲ್ಲದ ಗಿಳಿಹಿಂಡೋ
ಲೆಕ್ಕವಿಲ್ಲದ ಗಿಳಿಹಿಂಡ ಕೂಡಿ ಏನೇನ ಊಟಾ ಮಾಡ್ಯಾವೋ
ಸಂಜಿಕ ಚಿಂವ್ ಚಿಂವ್ ಮಾಡ್ಯಾವೋ ಸೂಗರನಿದ್ದಿ ಮಾಡ್ಯಾವೋ
ಸೂಗರನಿದ್ದಿ ಮಾಡೂದರಾಗ ಮೂಡಲ ಮಗ್ಗಲ ಹರದಾವೋ
ಪಕ್ಕಜ್ಯಾಡಿಸಿ ಎದ್ದ್ಯಾವೋ ಗುರುವಿನ ಇದಿರ ನಿಂತಾವೋ
ಗುರುವಿನ ಇದಿರ ನಿಂತಾವ ಹಕ್ಕಿ ಏನೇನ ಹರಕಿಕೊಟ್ಟ್ಯಾವೋ

ಹೀರೀಯ ಬೆಳ್ಳ್ಯಾಗಿ ಹಬ್ಬಲೋ ಹಿರಿತನಕ ಮೇಲ್ಯಾಗಲೋ
ಹಿರಿತನಕ ಮೇಲಾಗಲಿ ಭಗತಗ ಒಂದಕ್ಕೊಂಬತ್ತಾಗಲೋ
ಅಂಗೈಯಷ್ಟು ಹೊಲದಾಗ ಬಂಗಾರ ಬಿತ್ತಿ ಬೆಳಿಯಾಲೋ
ಬಂಗಾರ ಬಿತ್ತಿ ಬಿಳಿಯಾಲೋ ತುಪ್ಪದ ಕಾವಲಿ ಹರಿಯ್ಯಾಲೋ

ಹೆಣ್ಣಮಗಳು ಹೇಮದ ಗೊಂಬಿ ಸೋಳಸಿಂಗಾರಾಗ್ಯಾಳೋ
ಸೋಳಸಿಂಗಾರೋಗ್ಯಾಳೋ ಪಂಚಕಳಸಾ ಹಿಡಿದಾಳೋ
ಪಂಚಕಳಸಾ ಹಿಡಿಯುತ ಗುರುವಿನ ಇದರಿಗೆ ಬೆಳಗ್ಯಾಳೋ
ಹೆಣ್ಣುಮಗಳು ಹೇಮದ ಗೊಂಬಿ ಗುರುವಿಗೆ ಅಪ್ಪಣಿ ಕೊಟ್ಟ್ಯಾಳೋ
ಹೊಡಿಯಪ್ಪ ಡೊಳ್ಳ ಹಿಡಿಯಪ್ಪ ಸತ್ತಗಿ ನಡಿಯಪ್ಪ ನಿಮ್ಮ ನಾಡೀಗೆ
ದೇವರ ಬಂದಾವ ಘೇ

ಹರಕೆಯ ಹಾಡು : ಮೂರು

ಹಾಡಿದವರು: ಶಾವರಸಿದ್ಧ ಜಳಗೌಡರ, ಅಚೇಗಾವಿ

ಸ್ವಾಮಿ ನಮ್ಮಯ ದೇವರ ಬಂದಾರ ಘೇ

ಶಿವನೇ ನಮ್ಮಯ ದೇವರ ಬಂದಾರ ಘೇ

ಹಾಡೆವಪ್ಪ ನಾವು ಹಾಡೇವೋ ಹಾಲಿನಂಥ ದೇವರಿಗೆ

ಹಾಲಿನಂಥ ದೇವರಿಗೊಬ್ಬ ಸೀತಾಳದಂಥ ಪೂಜಾರಿ

ಸೀತಾಳದಂಥ ಪೂಜಾರಿಗೊಬ್ಬ ಸಮುದರದಂಥ ಭಕ್ತಾನೋ

ಹಾಲಿನಂಥ ದೇವರನಂದರ ಗುರುಗೌರಿ ಸೋಮಲಿಂಗಾನೋ

ಸೀತಾಳದಂಥ ಪೂಜಾರಿನಂದರ ತಂದಿ ನನ್ನಮ್ಮೋಗಿಸಿದ್ಧಾನೋ

ಸಮುದರದಂಥ ಭಕ್ತಾನಂದರ ಕುಂಬಾರ ರಾಮಯ್ಯನೋ

ಸಮುದರದಂಥ ಭಕ್ತನ ಮನಿಗ್ಹೋದ ತಂದಿ ನನ್ನಮ್ಮೋಗಿ ಸಿದ್ಧಾನೋ

ಸತ್ಯಧರ್ಮರ ಮಾರಗೋ ಈಗ ಯಾವ ಜಾಗದ ಮ್ಯಾಲ್ಯಾನೋ

ಯಾವ ಜಾಗದ ಮ್ಯಾಲ್ಯಾನೋ ಯಾವ ಠಾಣ್ಯಾದ ಮ್ಯಾಲ್ಯಾನೋ

ಹರಹರೋ ನನ ಕೈಲಾಸೋ ಕೈಲಾಸದಮ್ಮೋಗಿ ಸಿದ್ಧನೋ

ಕೈಲಾಸದಮ್ಮೋಗಿ ಸಿದ್ಧಾನೋ ಅವ ತಿರುಗಿ ನೋಡುವ ಹೊತ್ತಿಗೋ

ತಿರುಗಿ ನೋಡುವ ಹೊತ್ತಿಗೋ ತಿರುಮೂಲಿ ಗಿರಿಯ ಮ್ಯಾಲ್ಯಾನೋ

ತಿರಮೂಲಿ ಗಿರಿಯ ಮ್ಯಾಲ್ಯಾನೋ ಅಂತರ ಡೇರೆಜ ಒಳಗ್ಯಾನೋ

ಅಂತರ ಡೇರೆಜ ಒಳಗ್ಯಾನೋ ಮುಳ್ಳಹಾಸಗಿ ಮಾಡ್ಯಾನೋ

ಕಲ್ಲತಲದಿಂಬ ಮಾಡ್ಯಾನೋ ಶಿವತಾ ಮೂರತಗೊಂಡಾನೋ

ಶಿವತಾ ಮೂರತಗೊಂಡಾನೋ ಜಪಮಣಿ ಎಣಿಸೂತಾರಲ್ಲೋ
ಜಪಮಣಿ ಎಣಿಸೂತಾರೇನೋ ತಪಮಣಿ ಓದೂತಾರಲ್ಲೋ
ಹರಹರೋ ನನ ಕೈಲಾಸೋ ಅಂಥಾ ವ್ಯಾಳ್ಯಾದ ಒಳಗ್ಯಾನೋ
ಅಂಥಾ ವ್ಯಾಳ್ಯಾದ ಒಳಗ್ಯಾನೋ ಅಲ್ಲಿ ಕುಂತಿರ ಜಾಗವ ಬಿಟ್ಟಾನೋ

ಅಂಥಾವ್ಯಾಳ್ಯಾರ ಒಳಗ್ಯಾನೋ ಅರವುಳ್ಳ ಅಮ್ಮೋಗಿ ಸಿದ್ಧರೋ
ಅರವುಳ್ಳ ಅಮ್ಮೋಗಿ ಸಿದ್ಧನೋ ಮನದಲಿ ಅರವುಂಟಾಗ್ಯರೋ
ಮನದಲಿ ಅರಿವುಂಟಾಗ್ಯಾರೋ ಕುಂತಿರ ಜಾಗವರುಬಿಟ್ಟಾರೋ
ಕುಂತಿರ ಜಾಗವರಬಿಟ್ಟಾರೋ ಕ್ಯಾವಿಯ ಡಗಳಿಯ ಹಾಕ್ಯಾರೋ
ಕ್ಯಾವಿಯ ಡಗಳಿಯ ಹಾಕ್ಯಾರೋ ಮುರಗಿಯ ಮಂಡಾಸ ಸುತ್ತಾರೋ
ಮುರಗಿಯ ಮುಂಡಾಸ ಸುತ್ತ್ಯಾರೋ ನೇಮದ ಬೆತ್ತೊಂದು ಹಿಡಿದಾರೋ
ಹೋಮದ ಕಂಬಳಿ ಹೊದ್ದಾರೋ ಭಂಡಾರ ಚೀಲ ನೋಡಪ್ಪ
ಭಂಡಾರ ಚೀಲ ನೋಡಪ್ಪ ಬಗಲಿಗೆ ಹಾಕ್ಯಾರೇನಯ್ಯ
ಕಾಲಕಡದವರು ಮಾಡ್ಯಾರೋ ತಾವೊಂದ ತಯ್ಯಾರಾಗ್ಯಾರೋ
ಹರಹರೋ ನನ ಕೈಲಾಸೋ ಕೈಲಾಸದಮ್ಮೋಗಿಸಿದ್ದಾನೋ

ಕೈಲಾಸದಮ್ಮೋಗಿಸಿದ್ದಾರೋ ಮುಮ್ಮೆಟಗುಡ್ಡವರು ಬಿಟ್ಟಾರೋ
ಅಲ್ಲಿ ನೋಡಿದರಲ್ಲ್ಯಾರೋ ಇಲ್ಲಿ ನೋಡಿದರಿಲ್ಲ್ಯಾರೋ
ಹಂಥಾ ವ್ಯಾಳ್ಯಾದ ಒಳಗ್ಯಾನೋ ಭಾವುಳ್ಳ ಭಕ್ತನ ಮನಿಯೊಳಗೋ
ಭಾವುಳ್ಳ ಭಕ್ತನ ಮನಿಯೊಳಗೋ ಬಲಗಾಲ ಮುಂದಿಟ್ಟಾರೋ
ಬಲಗಾಲ ಮುಂದಿಟ್ಟಾರೋ ಬಾಲನ ಪೀಡಾ ಹೋಗ್ಯಾವೋ
ಎಡಗಾಲ ಹಿಂದಿಟ್ಟಾರೋ ಕೆಡಗಾಲ ದೂರಾಗ್ಯಾವೋ

ಭಾವುಳ್ಳ ಭಕ್ತನ ಮಾನಿಯೊಳಗೋ ಕಂಚಿನ ಜಗಲಿಯ ಮ್ಯಾಲ್ಯಾನೋ
ಕಂಚಿನ ಜಗಲಿಯ ಮ್ಯಾಲ್ಯಾನೋ ಕಂಬಳಿ ಗದ್ದಗಿ ಮಾಡ್ಯಾರೋ
ಕಂಬಳಿ ಗದ್ಗಿಗಿ ಮಾಡ್ಯಾರೋ ಭಂಡಾರ ಬರ್ಫೂರ ಮಾಡ್ಯಾರೋ
ಹರಹರೋ ನನ ಕೈಲಾಸೋ ಶಿವ ತಾ ಮೂರತಗೊಂಡಾನೋ

ಹಂಥಾ ವ್ಯಾಳ್ಯಾದ ಒಳಗ್ಯಾನೋ ಭಾವುಳ್ಳ ಭಕ್ತ ನೋಡಪ್ಪ
ಭಾವುಳ್ಳ ಭಕ್ತ ನೋಡಪ್ಪ ಮನೆಯಲಿ ಕಾರಣ ಮಾಡ್ಯಾನೋ
ಹಂಥಾ ವ್ಯಾಳ್ಯಾದ ಒಳಗ್ಯಾನೋ ಇಪ್ಪತ್ತೊಂದ ಮಂದಿ ಧರ್ಮರೋ
ಇಪ್ಪತ್ತೊಂದ ಮಂದಿ ಧರ್ಮಾರೋ ಊಟಕ ಮೊದಲಾಗ್ಯಾರೋ
ಸಣ್ಣಕ್ಕಿ ಸವಿಬಾನಾನೋ ರಾಯ ಪುಡಿಯ ಸಕ್ಕರಿ
ಹಂಥಾವ್ಯಾಳ್ಯಾದ ಒಳಗ್ಯಾನೋ ಧರ್ಮರ ಊಟಾ ಮುಗದಾವೋ
ಧರ್ಮರ ಊಟಾ ಮುಗದಾವೋ ಸೀತಳಲಿ ಕೈ ತೊಳದಾರೋ
ಸೀತಾಳ ಕೈತೊಳದಾರೋ ಎಲಗೋಳ ಮೇಲದಾರೇನಯ್ಯ
ಹರಹರೋ ನನ ಕೈಲಾಸೋ ಕೈಲಾಸದಮ್ಮೋಗಿಸಿದ್ಧಾನೋ
ಕೈಲಾಸದಮ್ಮೋಗಿಸಿದ್ಧಾನೋ ಭಾವುಳ್ಳ ಭಕ್ತಗೆ ನೋಡಲ್ಲ
ಭಾವುಳ್ಳ ಭಕ್ತನ ನೋಡಲ್ಲ ತಾವೇನ ಹರಿಕೆಯ ಕೊಡತಾರ
ಭಾವುಳ್ಳ ಭಕ್ತನ ಮನಿಯೊಳಗೋ ಕಾಮಭೀಮನಂಥವರೋ
ಕಾಮಭೀಮನಂಥವರೋ ಜೋಡೆರಡ ಬಣಿವಿ ಒಟ್ಟಲಿ

ಭಾವುಳ್ಳ ಭಕ್ತನ ಮನಿಯೊಳಗೋ ರಾಮಲಕ್ಷ್ಮಣನಂಥವರು
ರಾಮಲಕ್ಷ್ಮಣನಂಥವರೋ ಜೋಡೆರಡ ಗಂಡಸ ಮಕ್ಕಳೋ
ನಿಂಬೆವ್ವ ನೀಲವ್ವನಂಥವರೋ ಜೋಡೆರಡ ಹೆಣ್ಣಮಕ್ಕಳೋ
ಭಾವುಳ್ಳ ಭಕ್ತನ ಮನಿಯೊಳಗೋ ತೂಗುತೊಟ್ಟಿಲ ತೂಗಲ್ಯೋ
ತೂಗು ತೊಟ್ಟಿಲ ತೂಗಾಲೋ ಜೋಗುಳ ಹಾಡಲೆಂದಾನೋ
ಭಾವುಳ್ಳ ಭಕ್ತನ ಮನಿಯೊಳಗೋ ಹೀರಿಯ ಬೆಳ್ಳ್ಯಾಗಿ ಹಬ್ಬಲೋ
ಹೀರಿಯ ಬೆಳ್ಳ್ಯಾಗಿ ಹಬ್ಬಲ್ಯೋ ಮಾರಯ್ಯ ಕುಂಬಳ ಬಳ್ಳ್ಯಾಗಿ ನೋಡಲ್ಲ
ಕುಂಬಳ ಬಳ್ಳ್ಯಾಗಿ ನೋಡಪ್ಪ ಕುಡಿಗಳ ಬಿಡುವಂತೆಂದಾರ
ಭಾವುಳ್ಳ ಭಕ್ತನ ಮನಿಯೊಳಗೋ ಗಂಗಿಗೌರೆಂಬ ಹಗಿಗೊಳ
ಗಂಗಿಗೌರೆಂಬ ಹಗೆಗೋಳೋ ತುಂಬಿ ತುಳಕಲೆಂದಾನ
ಹರಹರೋ ನನ ಕೈಲಾಸೋ ಕೈಲಾಸದಮ್ಮೋಗಿಸಿದ್ಧಾನೋ

ಕೈಲಾಸದಮ್ಯೋಗಿಸಿದ್ದಾನೋ ಭಾವುಳ್ಳ ಭಕ್ತಗ ನೋಡಲ್ಲ

ಯ್ಯಾಳಾ ಬಂದಾಗ ನೋಡಪ್ಪ ಯೋಗಿನ ನೆನೆಯಲಿ ಬೇಕಲ್ಲ

ಯೋಗಿನ ನೆನೆದರ ನೋಡಪ್ಪ ಮತ್ತೇನ ಹೇಳೂತಾರಲ್ಲ

ಭಾವುಳ್ಳ ಭಕ್ತನ ಮನಿಯೊಳಗೋ ಭಾಗ್ಯಾ ಹೆಚ್ಚಾಗಲೆಂದಾರ

ಭಾವುಳ್ಳ ಭಕ್ತಗ ನೋಡಪ್ಪ ಅವರು ಕಾಡಬಾರದು ಕಾಡ್ಯಾರ

ಕಾಡಬಾರದು ಕಾಡ್ಯಾರೋ ಬೇಡಬಾರದು ಬೇಡ್ಯಾರೋ

ಭಾವುಳ್ಳ ಭಕ್ತನ ನೋಡಪ್ಪ ಆಕಳ ಜಿನಗಿ ಹೇಳ್ಯಾರ

ಆಕಳ ಜಿನಗಿ ಹೇಳ್ಯಾರ ಬಸವನ ಕಂಟಲಿ ಹೇಳ್ಯಾರ

ಭಾವುಳ್ಳ ಭಕ್ತನ ನೋಡಪ್ಪ ಹೀಗೊಂದ ಹರಕಿಯ ಕೊಟ್ಟಾರ

ಹಾಡಿದರ ಹಾಡಾದವು ಮಾರಾಯ ಬೇಡಿದರ ವರವಾದಾವೋ

ಇಲ್ಲಿಗೆ ಒಂದು ಸಂದೇನೋ ಪದಗೋಳ ಮುಂದೇನೋ

ದೇವರ ಬಂದಾವ ಘೇ

ಹರಕೆಯ ಹಾಡು : ನಾಲ್ಕು

ಹಾಡಿದವರು: ಅವಧು ಬನಸಿದ್ಧ ಹಿರಕೂರ, ಹತ್ತೂರ

ಅಮ್ಮೋಗಿಸಿದ್ಧನ ಮಕ್ಕಾಳು ಏಸೊಂದು ಮಂದಿನಿದ್ದಾರೆ
ಶಂಭೋ ಸುಲ್ತಾನಿ ಮಾದಣ್ಣ ತೆರೆವ್ಹಾಡದ ಮಂಗರಾಯಾನೋ
ತೆರೆವ್ಹಾಡದ ಮಂಗರಾಯಾನೋ ಕರಣಿ ಮಲಕಾರಿ ಸಿದ್ದಾನೇ
ಇವರೊಂದ್ಮೂರ ಮಂದಿ ಪುಣ್ಯೇದ ಮಕ್ಕಳಿದ್ದಾರೆ
ಅವತಾರಿ ಅವಧೂಸಿದ್ಧಾನೆ ದೇವೀಂದ್ರ ಬಿಳಿಯಾನಿಸಿದ್ಧಾನೆ
ಆಚಾರಗೌಡ ಸೋಮಣ್ಣ ಕಡಹುಟ್ಟ ಕನ್ನಮುತ್ತ್ಯಾನೆ
ಇವರೊಂದ ನಾಲ್ಕು ಮಂದಿ ಧರ್ಮಾರು ವರವಿನ ಮಕ್ಕಳಿದ್ದಾರೆ
ನಾಲ್ವರ ಧರ್ಮರ ಹೊಟ್ಟೀಲಿ ಇಪ್ಪತ್ತೊಂದ್ಮಂದಿ ಧರ್ಮಾರೆ
ಇಪ್ಪತ್ತೊಂದ್ಮಂದಿ ಧರ್ಮರ ಹೋಟ್ಟೀಲಿ ನೂರ ಒಂದ ಮಂದಿ ಧರ್ಮರೆ
ನೂರಾಒಂದು ಮಂದಿ ಧರ್ಮರದೊಳಗ ಭಂಡಾರದೊಳಗಿನ ಬನದಣ್ಣ

ಒಂದಾನೆ ಒಂದು ದಿನದಲ್ಲಿ ಒಂದಾನೆ ಒಂದು ಕಾಲೀಲಿ
ತಮ್ಮ ಗುಡಿಯ ಒಳಗರಿ ಗುರುವಿನ ಧ್ಯಾನದ ಒಳಗರಿ
ಇಂದಿನ ಕಾಲದಲ್ಯಾನು ಭಾವುಳ್ಳ ಭಕ್ತನಂಬವ
ಭಾವುಳ್ಳ ಭಕ್ತ ನಂಬವರು ಭಕ್ತನ ಮಡದಿನಂಬವರ
ಮಾತಿಗೆ ಮಾತವರ ಆಡ್ಯಾರ ಸರಸಿಗೆ ಸರಸವರು ನುಡಿದಾರೆ
ಓಗೆಣ್ಣಮುತ್ತ್ಯಾನ ಹಬ್ಬಾರಿ ನವ್ವೇ ಮಾಡೋಣಂದಾರೆ
ಬನಸಿದ್ಧ ಮುತ್ತ್ಯಾನ ಹಬ್ಬಾರಿ ನವ್ವೇ ಮಾಡೋಣಂದಾರೆ
ಹರಹರೋ ನನ ಕೈಲಾಸೋ ಲಾಗ ಬೇಗವರು ಮಾಡ್ಯಾರ

ಜಾಮಜಳಕವರು ಮಾಡ್ಯಾರೆ ನೇಮಿ ನಿಷ್ಠಿಯ ಮಾಡ್ಯಾರೆ
ನೇಮನಿಷ್ಠಿಯ ಮಾಡ್ಯಾರೆ ದೇವರ ಮನಿಯ ಒಳಗ್ಯಾನೆ
ದೇವರ ಮನಿಯ ಒಳಗ್ಯಾನೆ ಬಲಗಾಲ ಪಾದವರು ಒಗದಾರೆ
ಬಲಗಾಲ ಪಾದವರ ಒಗದಾರೆ ಜಗಲಿಯ ದಂಡಿವರ ಬಂದಾರೆ
ಜಗಲಿಯ ದಂಡಿಲೆ ಬಂದಾರೆ ಅವರು ಶಿವಶಿವ ಅನುವೂತಾರೆ
ಶಿವಶಿವ ಅನುವೂತಾರಲ್ಲೋ ಹರಹರ ಅನುವೂತಾರಲ್ಲೋ
ಭಾವುಳ್ಳ ಭಕ್ತನಂಬವನು ಬಲಕಿನ ಹಸ್ತದ ಒಳಗ್ಯಾನೆ
ಬಲಕಿನ ಹಸ್ತದ ಒಳಗಾರಿ ಕೊಬ್ಬರಿ ಭಂಡಾರ ಹಡಿದಾರೆ
ಕೊಬ್ಬರಿ ಭಂಡರ ಹಿಡಿದಾರೆ ದೇವರ ಮನಿ ಅವರು ಬಿಟ್ಟಾರೆ
ದೇವರ ಮನಿ ಅವರು ಬಿಟ್ಟಾರೆ ಓಗೆಣ್ಣ ದಂಡೀಲೆ ಬಂದಾರೆ
ಓಗೆಣ್ಣ ದಂಡೀಲೆ ಬಂದಾರೆ ಬನದಣ್ಣ ದಂಡೀಲೆ ಬಂದಾರೆ
ಹರಹರ ಅನುವೂತಾರಲ್ಲೋ ಪಾದಕ ಎರಗೂತಾರಲ್ಲೋ

ಶಿವನಮನಿ ನನಸಿದ್ಧನು ಬಲಗೈ ಹಸ್ತ ಇಟ್ಟಾನೆ
ಬಲಗೈ ಹಸ್ತ ಇಟ್ಟಾನೆ ಆಶೀರ್ವಾದ ಕೊಟ್ಟಾನೆ
ಬಾರೋ ಬಾರೋ ಏ ಭಗತಾ ಬಂದಿದ ಕಾರಣ ಹೇಳಲ್ಲ
ಭಾವುಳ್ಳ ಭಕ್ತನಂಬವನು ಗುರುವಾಗೆ ತಾ ಏನ ನುಡಿದಾನೋ
ಬರ್ರಿ ಬರ್ರಿ ಗುರುಗೋಳ್ಯಾ ನಿಮ್ಮ ಹಬ್ಬ ನೋಡರಿ
ನಿಮ್ಮ ಹಬ್ಬ ನೋಡರಿ ನಾವ್ವೇ ಮಾಡೇವಂದಾರ
ನಾವ್ವೇ ಮಾಡೇವಂದಾರ ನಿಮ ಹರಕೀ ಮುಟಸೇವಂದಾರೆ

ಶಿವನಮನಿ ನನಸಿದ್ಧಾನೋ ಒಳ್ಳೇದ ಒಳ್ಳೇದ ಅಂದಾನೆ
ಒಳ್ಳೇದ ಒಳ್ಳೇದ ಅಂದಾನೆ ಭಕ್ತನ ಭಂಡಾರ ಹಿಡಿದಾನೆ
ಬರ್ರಿ ಬರ್ರಿ ಗುರುಗೋಳ್ಯಾ ಹೋಗಿ ಬರತೇವಿ ಅಂದಾರೆ
ಬರ್ರಿ ಬರ್ರಿ ಗುರುಗೋಳ್ಯಾ ಹೋಗಿ ಬರತೀವಿ ಅಂದಾರೆ
ಭಾವುಳ್ಳ ಭಕ್ತನೆಂಬುವನು ಓಗೆಣ್ಣ ದಂಡೆವರು ಬಿಟ್ಟಾರೆ
ಓಗೆಣ್ಣ ದಂಡೆವರು ಬಿಟ್ಟಾರ ತಮ್ಮ ವಾಡೆಕ ಬಂದಾರೆ

[illegible]

ತಮ್ಮ ವಾಡೇದ ಒಳಗಾರಿ ಲಾಯದ ಪಡಸಾಲಿ ಏರ್‍ಯಾರ
ದೇವರ ಮನಿಯ ಒಳಗಾರಿ ಬಲಗಾಲ ಪಾದವರು ಒಗದಾರ
ಲಾಗ ಬೇಗವರು ಮಾಡ್ಯಾರೆ ಸಣ್ಣಸಾರುಣಗಿ ಮಾಡ್ಯಾರೆ
ಸಣ್ಣಸಾರುಣಗಿ ಮಾಡ್ಯಾರೆ ನುಣ್ಣಗ ಬಣ್ಣವರು ಕೊಟ್ಟಾರೆ
ಅನ್ನ ಅನಛತ್ರ ನೋಡಾರಿ ತಯ್ಯಾರಿ ಮಾಡೂತಾರಲ್ಲೋ
ಅನ್ನ ಅನಛತ್ರ ನೋಡಾರಿ ತಯ್ಯಾರಿ ಮಾಡ್ಯಾರೇನಯ್ಯ
ಸರ್ವಸಾಯಿಸ ನೋಡಾರಿ ತಯ್ಯಾರ ಮಾಡ್ಯಾರೇನಯ್ಯ

ಇಂದಿನ ಕಾಲದಲ್ಲ್ಯಾನು ಓಗೆಣ್ಣ ಮುತ್ತ್ಯಾನಂಬವನು
ಓಗೆಣ್ಣ ಮುತ್ತ್ಯಾನಂಬವನೋ ಗುರುಗೌರಿ ಸೋಮಲಿಂಗಾನೋ
ಮುತ್ತಿನ ಪಲ್ಲಕ್ಕಿದೊಳಗ್ಯಾನೋ ನಿಜವೊಂದ ಮೂರತಗೊಂಡಾರೆ
ತಮ್ಮ ಗುಡಿಯವರು ಬಿಟ್ಟಾರೆ ಭಕ್ತನ ವಾಡೇಕಬಂದಾರೆ
ಭಕ್ತನ ವಾಡೇದ ಒಳಗಾರಿ ಬಲಗಾಲ ಪಾದವರು ಒಗದಾರೆ
ಲಾಯದ ಪಡಸಾಲಿ ಒಳಗ್ಯಾನು ನಿಜವೊಂದ ಮೂರತಗೊಂಡಾರೆ

ಭಕ್ತನ ಮಡದಿನಂಬವಳು ಪಂಚದಮೃತದಡಿಗ್ಯಾನು
ಪಂಚದಮೃತದಡಿಗ್ಯಾನೇ ಊಟಾಕಿ ತಯ್ಯಾರಿ ಮಾಡ್ಯಾರೆ
ಬೆಳ್ಳಿಯ ಮಣೆಯವರು ಹಾಕ್ಯಾರೆ ಬಂಗಾರ ಅಡ್ಡಣಗಿ ಇಟ್ಟಾರೆ
ಬಂಗಾರದ ಅಡ್ಡಣಗಿ ಇಟ್ಟಾರೆ ಕಂಚಿನ ತಾಟವರು ಹಚ್ಚ್ಯಾರೆ
ಹರಹರೋ ನನ ಕೈಲಾಸೋ ಬೆಳ್ಳಿಯ ಮಣೆಯ ಮ್ಯಾಲ್ಯಾನ
ಗುರುವ ಶಿಷ್ಯರೆಂಬರು ನಿಜವೊಂದ ಮೂರತಗೊಂಡಾರೆ
ಭಕ್ತರ ಮದಡಿನಂಬವಳು ಪಂಚದಮೃತದಡಿಗ್ಯಾನೋ
ಪಂಚದಮೃತದಡಿಗ್ಯಾನು ಊಟಕ ನೀಡೂತಾಳಲ್ಲೋ
ಶಿವನಮನಿ ನನಸಿದ್ಧರೋ ಊಟಕೆ ಮುಗುಸೂತಾರಲ್ಲೋ
ಊಟಕೆ ಮುಗುಸೂತಾರಲ್ಲೋ ಸೀತಾಳಲಿ ಕೈ ಮುಗದಾರೋ
ಸೀತಾಳಲಿ ಕೈ ಮುಗದಾರೆ ಶಿವಶಿವಂದದ ಎದ್ದಾರೆ

ಭಾವುಳ್ಳ ಭಕ್ತನಂಬವನು ಭಕ್ತನ ಮಡದಿನಂಬವಳೊ

ಭಕ್ತನ ಮಡದಿನಂಬವಳೋ ಉಡಿಯ ಒಡ್ಡಿ ನಿಂತಾರೆ

ನನ್ನಪ್ಪೋ ನನಮಾರಾಯೋ ಏನೊಂದ ಹರಕಿ ಕೊಟ್ಟಾರೆ

ಬಾರೋ ಬಾರೋ ಏ ಭಕ್ತ ನಿನ್ನ ಭೂಮಿಯ ಒಳಗ್ಯಾನು

ನಿನ್ನ ಭೂಮಿಯ ಒಳಗ್ಯಾನು ಕಾಮಣ್ಣ ಭೀಮಣ್ಣನಂಥಾವು

ಕಾಮಣ್ಣ ಭೀಮಣ್ಣನಂಥಾವು ಜೋಡೆರಡ ಬಣವಿ ಒಟ್ಟಾಲೆ

ಗೌರಿಗಂಗೆ ಅಂಥಾವು ಜೋಡಿರಡ ಹಗೆಗಳು ತುಂಬಾಲಿ

ರಾಮಲಕ್ಷ್ಮಣನಂಥವರು ಜೋಡಿರಡ ಗಂಡಸ ಮಕ್ಕಳ

ಜೋಡೆರಡ ಗಂಡಸ ಮಕ್ಕಳು ನಿನಗ ಹುಟ್ಟಲೆಂದಾರೋ

ನೀಲವ್ವ ನಿಂಬೆವ್ವನಂಥವರು ಜೋಡೆರಡ ಹೆಣ್ಣು ಮಕ್ಕಳು

ಜೋಡೆರಡ ಹೆಣ್ಣು ಮಕ್ಕಳ ನಿನಗ ಹುಟ್ಟಲೆಂದಾರೋ

ನಿನ್ನ ಭೂಮಿಯ ಒಳಗ್ಯಾನ ಹಾಗಲ ಬೆಳ್ಳ್ಯಾಗಿ ಹಬ್ಬಲಿ

ಹಾಗಲ ಬಳ್ಳ್ಯಾಗಿ ಹಬ್ಬಲಿ ಕುಂಬಳ ಕುಡಿಯಾಗಿ ಚಿಗಿಯಲಿ

ಕುಂಬಳ ಕುಡಿಯಾಗಿ ಚಿಗಿಯಲಿ ಕುಡಿಗೊಂದ ಮಿಡಿಗಳಾಗಲಿ

ನಿಮ್ಮ ಮನಿಯ ಒಳಗ್ಯಾನು ತುಂಬಿದ ಬೆಳದಿಂಗಳ ತೋರಲಿ

ಶಿವನಮನಿ ನನಸಿದ್ಧಾನೆ ಆನಂದ ಹರಕೆಯ ಕೊಟ್ಟಾನೆ

ಹರಹರೋ ನನ ಕೈಲಾಸೋ ಅಂಥಾ ವ್ಯಾಳ್ಯಾದೊಳಗ್ಯಾನು

ಇಂದಿನ ಕಾಲದಲ್ಲ್ಯಾನು ಭಕ್ತನ ವಾಡೆವರು ಬಿಟ್ಟಾರೆ

ರಾಜಂಗಳದೊಳಗ್ಯಾನು ಮಾಯನಾಗೂತಾರಲ್ಲೋ

ಗಾಳಿರೂಪೀಲಿ ನೋಡರಿ ಹೊನ್ನ ಹತ್ತೂರದೊಳಗ್ಯಾನು

ಹೊನ್ನ ಹತ್ತೂಂದೊಳಗ್ಯಾನು ಗುರುವಿನ ಧ್ಯಾನದ ಒಳಗ್ಯಾನು

ಗುರುವಿನ ಧ್ಯಾನದ ಒಳಗ್ಯಾನು ನಿಜವೊಂದ ಮೂರತಗೊಂಡಾರೆ

ಹರಹರ ಗುರುಗೌರಿ ಮಾಯ ಮಕಣಾಪೂರ ಸೋಮಲಿಂಗ ಶರೀಪೋ

ಬಯಲ ಭೂತಾಳಸಿದ್ಧ ಶರೀಪೋ

ಶಂಭು ಸುಲ್ತಾನ ಮಾಸಿದ್ಧಣ್ಣ ಶರೀಪೋ

ಹರಹರೋ ಭಕ್ತ ಹರಹರೋ

ಹರಕೆಯ ಹಾಡು : ಐದು

ಹಾಡಿದವರು : ಶಿವಮ್ಮ ಸೋಮಲಿಂಗಪ್ಪ ಗುರುಮಠ, ಕಲಘಟಗಿ

ಮೂಡಲನಾಡದ ಒಳಗೇನೋ ಮುಕ್ಕಣ್ಣಧರನು ಹಾನೇನೋ

ಪಡವಲನಾಡದ ಒಳಗೇನೋ ಹಡದತಂದಿ ಹಾನೇನೋ

ತಂದಿ ನನ್ನಮೋಗಿಸಿದ್ಧಾನೋಭಗತಗ ಹರಕೀಯ ಕೊಟ್ಟಾನೋ

ಭಾವುಳ್ಳ ಭಗತನ ಮನಿಯಾಗೋ ಲೆಕ್ಕನಿಲ್ಲದಗಿಳಿಹಿಂಡೋ

ಲೆಕ್ಕನಿಲ್ಲದಗಿಳಿಹಿಂಡೋ ಹಣ್ಣಹಂಪಲ ಮೇದಾವೋ

ಹಣ್ಣಹಂಪಲ ಮೇದಾವೋ ಗಂಗಿ ಸೀತಾಳ ಕುಡದಾವೋ

ಗಂಗಿ ಸೀತಾಳ ಕುಡದಾವೋ ಮಗ್ಗಲ ಹಚ್ಚಿ ಮಲಗ್ಯಾವೋ

ಭಾವುಳ್ಳ ಭಗತನ ಮನಿಯಾಗ ಉಂಡೇವಪ್ಪ ನಾವು ಉಂಡೇವೋ

ಅಮ್ಮೋಗಿಸಿದ್ಧನ ಪುಣ್ಯದ ಮಕ್ಕಳು ಅವರ ಮೂರ್ಮಂದಿ ಧರ್ಮಾರೋ

ಗಂಗಿನಾಡದ ಗೌಡಾನೋ ಅವ ಏಳುಮಠದ ಧಣಿಯಾನೋ

ಏಳುಮಠದ ಧಣಯಾನೋ ಶಂಭುಸುಲ್ತಾನ ಮಾಸಿದ್ಧಾನೋ

ಮೇಲನಾಡದ ಒಳಗೇನೋ ಮೂರು ಮಠದ ಧಣಿಯಾನೋ

ಮೂರು ಮಠದ ಧಣಿಯಾನೋ ತೆರೆವಾಡದ ಮಂಗರಾಯನೋ

ಪಡವಲ ಒಳಗೇನೋ ಎರಡುಮಠದ ಧಣಿಯಾನೋ

ಎರಡುಮಠದ ಧಣಿಯಾನೋ ಕರಣಿಮಲಕಾರಿಸಿದ್ಧಾನೋ

ಭಾವುಳ್ಳ ಭಗತನ ಮನಿಯಾಗ ಉಂಡೇವಪ್ಪ ನಾವು ಉಂಡೇವೋ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಎಡಗಾಲ ಹಿಂದಿಟ್ಟರ ನಿನಮನಿ ಕೆಡಗಾಲ ದೂರನಾದಾವೋ

ಬಲಗಾಲ ಮುಂದಿಟ್ಟರ ನಿನಮನಿ ಭಾಗ್ಯಕ್ಕ ಮುಂದಾದಾವೋ

ಹಾಗಲ ಬೆಳ್ಳ್ಯಾಗಿ ಹಬ್ಬಲಿ ನಿನಮನಿ ಹೀರಿಯಬೆಳ್ಳ್ಯಾಗಿ ಚಿಗಿಯಾಲೋ

ಹೀರಿಯಬೆಳ್ಳ್ಯಾಗಿ ಚಿಗಿಯಾಲೋ ನಿನಮನಿ ಹಿರಿತನಕ ಮುಂದಾಗಲ್ಯೋ

ಗಂಗವ್ವ ಗೌರವ್ವನಂಬುವ ಜೋಡೆರಡ ಹಗೆಗಳಾಗಲ್ಯೋ

ನಿಂಬೆವ್ವ ನೀಲವ್ವನಂಬುವ ಜೋಡೆರಡ ಹೆಣ್ಣಮಕ್ಕಾಳೋ

ರಾಮಣ್ಣಲಕ್ಷ್ಮಣನಂಬುವ ಜೋಡೆರಡ ಗಂಡಸ ಮಕ್ಕಾಳೋ

ಕಾಮಣ್ಣ ಭೀಮಣ್ಣನಂಬುವ ಜೋಡೆರಡ ಬಣವಿ ಒಟ್ಟ್ಯಾಲ್ಯೋ

ತಂದಿನನ್ನಮ್ಮ್ಯೋಗಿಸಿದ್ಧಾನೋ ಭಕ್ತಗ ಹರಕಿಯ ಕೊಟ್ಟ್ಯಾನೋ

ಕುಂಬಳಕುಡಿಯಾಗಿ ಚಿಗಿಯಲಿ ನಿನಮನಿ ರಂಭೇರ ಜೋಗುಳ ಹಾಡ್ಯಲೋ

ಆರತಿ ಪದ : ಒಂದು

ಹಾಡಿದವರು : ಶಿವಮ್ಮ ಸೋಮಲಿಂಗಪ್ಪ ಗುರುಮಠ, ಕಲಘಟಗಿ

ಆರುತಿ ಬೆಳಗಿರಿ ಮೂರುತ್ಯಳ್ಳಯ್ಯಗೆ
ತಾಯಿ ಕೊಂತೆವ್ವನ ಅರಸನಿಗೆ |
ಅವಧೂತ ಬಿಳಿಯಾನಿಸಿದ್ಧ ಸೇವಕ ಸೋಮಣ್ಣಮುತ್ತ್ಯಾ
ಅವಧೂತ ಬಿಳಿಯಾನಿಸಿದ್ಧ ಸೇವಕ ಸೋಮಣ್ಣಮುತ್ತ್ಯಾ
ಕವತಕದಗೌಡ ಕನಮುತ್ತ್ಯಾಗೆ
ಆರುತಿ ಬೆಳಗಿರಿ ಮೂರುತ್ಯಳ್ಳಯ್ಯಗೆ
ತಾಯಿ ಕೊಂತೆವ್ವನ ಅರಸನಿಗೆ |
ಕಾರುಣ್ಣ್ವ ಕರಿಹರಿದು ಹುಲಿಬ್ಯಾಟಿ ಆಡ್ಯಾನೆ
ಹುಲಿ ಹೊಟ್ಟ್ಯಾಗ ಹ್ವಾದಂತ ಸಿದ್ಧನಿಗೆ
ಕೊಳ್ಳಂತ ಕೂಗ್ಯಾನ ಹುಲಿಬಾಯೆಂದ್ಹಾರ್‍ಯಾನ
ಕೊಳ್ಳಂತ ಕೂಗ್ಯಾನ ಹುಲಿಬಾಯೆಂದ್ಹಾರ್‍ಯಾನ
ಸತೆವಂತ ಧರ್ಮರು ಅವರೇನೋ
ಆರುತಿ ಬೆಳಗಿರಿ ಮೂರುತ್ಯಳ್ಳಯ್ಯಗೆ
ತಾಯಿ ಕೊಂತೆವ್ವನ ಅರಸನಿಗೆ |
ಮುತ್ತಿನ ಆರುತಿ ಮತ್ತೊಮ್ಮಿ ಬೆಳಗೀರಿ
ತಾಯಿ ಕೊಂತೆವ್ವನ ಅರಸನಿಗೆ |
ಕರಜಗಿ ಭೋರಗಿ ನೆರೆಹಳ್ಳಿ ಬೆಳ್ಳುಂಡಗಿ
ಕರಜಗಿ ಭೋರಗಿ ನೆರೆಹಳ್ಳಿ ಬೆಳ್ಳುಂಡಗಿ
ಹೊಳಿದಂಡೀಲಿರುವ ಸನ್ನೇಸಿಗೆ
ಆರುತಿ ಬೆಳಗೀರಿ ಬುದ್ದ್ಯಾಳ್ಳಯ್ಯನಿಗೆ

ತಾಯಿ ಕೊಂತೆವ್ವನ ಅರಸನಿಗೆ |
ನಮಗುರು ಹಾನಪ್ಪ ನಾಡಿಗೆ ದೊಡ್ಡಾವ
ನಾಗಭೂಷಣ ನಾಮದ ಸ್ವಾಮಲಿಂಗಗೆ
ಅರಕೇರಿ ಅರಮನಿ ಭೀವರಗಿ ಗುರುಮನಿ
ಅರಕೇರಿ ಅರಮನಿ ಭೀವರಗಿ ಗುರುಮನಿ
ಮಾಯಿಮಕಣಾಪುರದ ಗುರುವೀಗೆ
ಆರುತಿ ಬೆಳಗೀರಿ ಬುದ್ನುಳ್ಳಯ್ಯನಿಗೆ
ತಾಯಿ ಕೊಂತೆವ್ವನ ಅರಸನಿಗೆ |


ಆರತಿ ಪದ : ಎರಡು

ಹಾಡಿದವರು : ಶಿವಮ್ಮ ಸೋಮಲಿಂಗಪ್ಪ ಗುರುಮಠ, ಕಲಘಟಗಿ

ಆರುತಿ ಬೆಳಗುನು ಬಾ ಪದಮಾದೇವಿಗೆ
ಆರುತಿ ಬೆಳಗುನು ಬಾ |
ಆರುತಿ ಬೆಳಗುವೆ ಪಾದಕೆ ಎರಗುವೆ
ಆರುತಿ ಬೆಳಗುವೆ ಪಾದಕೆ ಎರಗುವೆ

ಬಂದಕಂಟಕನೆಲ್ಲಾ ಬಯಲ ಮಾಡುವ ತಾಯಿಗೆ ||ಪ||
ಮಲ್ಲಿಗಿ ಹೂವಿನ ದಂಡಿ ಅಲ್ಲಿಟ್ಟ್ಯಾ ಇಲ್ಲಿಟ್ಟ್ಯಾ
ಮಲ್ಲಿಗಿ ಹೂವಿನ ದಂಡಿ ಅಲ್ಲಿಟ್ಟ್ಯಾ ಇಲ್ಲಿಟ್ಟ್ಯಾ
ಪದಮವ್ವಗ ಕಟ್ಟಿ ಕೈ ಮುಗದ ಬೇಡಿಕೊಂಡೆ ಪ
ಉಡಿಯಕ್ಕಿ ಸ್ವಾಮಾನ ಭಕ್ತೀಲಿ ನೆಲ್ಲಕ್ಕಿ
ಉಡಿಯಕ್ಕಿ ಸ್ವಾಮಾನ ಭಕ್ತೀಲಿ ನೆಲ್ಲಕ್ಕಿ
ವಾಲಿದೌಡ ಒಳಗಿಟ್ಟು ಉಡಿಯ ತುಂಬುತ ತಾಯಿಗೆ ||ಪ||

ಗಂಧಭಸ್ಮವ ಧರಿಸಿ ಹಣೆಗೆ ಕುಂಕುಮನಿಟ್ಟು
ಗಂಧಭಸ್ಮವ ಧರಿಸಿ ಹಣೆಗೆ ಕುಂಕುಮನಿಟ್ಟು
ಎಲ್ಲ ಚಾಜ ಗುರುವಿಗೆ ಕೊಟ್ಟು ಉದಕ ಕಪ್ಪರ ಕೊಟ್ಟು
ಪದಮಾದೇವಿಗೆ ಆರುತಿ ಬೆಳಗುನು ಬಾ |
ದೇಶಕಧಿಕವಾದ ವಾಸುಳ್ಳ ಮುಮ್ಮೆಟ
ದೇಶಕಧಿಕವಾದ ವಾಸುಳ್ಳ ಮುಮ್ಮೆಟ
ಯೋಗಿ ಅಮ್ಮೋಗಿಸಿದ್ಧನ ಪತ್ನಿ ಪದಮಾದೇವಿಗೆ ||ಪ||





نقل بموجب اصل

عالمگیر
شفقتاله
فیروز جنگ مرید
بهادر
غازی الدین خان
دردی ۱۱۰۳

دہنگر صوبہ دار ظفر بدانند در حوالہ سندیا وغیرہ
وارث ایک [illegible] بانی بہر کہبر عرف فرمان باوی ار بہوت
سرو بیر خاص شد مزکور دعوا کہ دو بیر
وارث منم سندیا وغیرا دو قطعہ محضر بمہر سلطانی کہ دربیہ
پاسر بیہ و مہر حوالہ دار وغیرا دو شبحط گذاشتہ بارد
بیسار وغیرا و یکقطعہ محضر بجانب کابر لیہ آب سنگم
سوا تانہ رولی بمہر حوالہ دار دو ستخط اہلکاران تہانہ
منظور رشد ابوہ نمودہ - بمضمونیکہ دو بیر وارث سندیا
وغیرا اندر بہوت سرو خاص شدہ مرقوم است
و محمد میران گماشتہ خواضمان و مہانیا گماشتہ
تا کوندہ و بالا گماشتہ قانون گو و ملہار مقصود پیسانند
[illegible] گواہی دادند چنانچہ بعد تحقیق دعوا سرو بالا
باسکہ باید کہ سندیا وغیرا سالو دیر ایل سند
[illegible] گماشتہ نسخہ بدارند و سر واج سوار بیار
[illegible]



ಅಮೋಘಸಿದ್ಧನ ಗುಡಿ, ಮುಮ್ಮೆಟಗುಡ್ಡ, ಅರಕೇರಿ



ಅಮೋಘಸಿದ್ಧನ ಜಿಚಮೂರ್ತಿ, ಮುಮ್ಮೆಟಗುಡ್ಡ



ಗುರುಗೌರಿ ಸೋಮಲಿಂಗನ ಗದ್ದುಗೆ, ಮಕಣಾಪುರ



ಪದ್ಮಾವತಿಯ ಗುಡಿ, ಅರಕೇರಿ



ಭೂತಾಳಸಿದ್ಧ, ಮುಮ್ಮೆಟಗುಡ್ಡ



ಭೂತಾಳಸಿದ್ಧ, ಅಥಣಿ



ಗುರುಮನೆ, ಘೀವರಗಿ



ಬಿಳಿಯಾನಿಸಿದ್ಧ, ಘೀವರಗಿ



ಮಾಸಿದ್ಧಪ್ಪನ ಗುಡಿ, ಭಂಡಾರಕವಟೆ



ಪೀರಸಾಬ್ ದರ್ಗಾ, ಭಂಡಾರಕವಟೆ



ಮಂಗರಾಯ, ತೆರೆವಾಡ



ಕರಣಿ ಮಲಕಾರಿಸಿದ್ಧ, ಕೆಮ್ಮನಕೋಲ



ಕೆಂಚಮಾದಣ್ಣನ ಗುಡಿ, ಕುಂಚನೂರು



ಒಗೆಣ್ಣಮುತ್ಯಾನ ಗುಡಿ, ಪತ್ತೂರು



ಓಗಸಿದ್ಧ, ಹೊನ್ನಮೋಳೆ





ಕೊಂತೆವ್ವ, ಬಬಲಾದಿ



ಶಾವರಸಿದ್ಧ, ಬಬಲಾದಿ



ಮಲಕಾರಿಸಿದ್ಧ, ಉಮದಿ





ಜಿನ್ನೇಸಾಬನ ದರ್ಗಾ, ಕರಜಗಿ



ಮಾಸಿದ್ದಪ್ಪನ ಗುಡಿ, ಡೋಣಜ



ದೇವರ ಮುಖಗಳೊಂದಿಗೆ ಹೇಳಿಕೆ ಮಾಡುವ ಒಡೆಯರು, ಚಬನೂರು



ಪಟ್ಟದ ಹೂವು ತರುತ್ತಿರುವ ಹೂಗಾರರು, ಚಬನೂರು



ತಸ್ತಮಗಿಯಲ್ಲಿ ನೀರು ತರುತ್ತಿರುವ ಹೂಗಾರ, ಭಂಡಾರಕವಟೆ



ಹೊಯ್ಕ ಮಾಡುತ್ತಿರುವ ಒಡೆಯರು, ಕುಂಚನೂರು



ಈರಕಾರರು, ಚಬನೂರು



ಬಿಳಗಿ ತಾಲೂಕಿ ಸಿದ್ದಾಪುರದಲ್ಲಿ ದೊರೆತ ತಾಮ್ರಪಟ



ಆರ್ಯಾನಸಿದ್ಧನ ಗುಡಿ, ಕೆರಪನಹಟ್ಟಿ (ಕೆರೂರು)



ಪಾಲಕಿಗಳ ಮಹಾಮಿಲನ, ಮುಮ್ಮೆಟಗುಡ್ಡ